ಶ್ರೀರಸ್ತು.

—:o:—

ವೈದ್ಯಕಶಾಸ್ತ್ರ

ವೈದ್ಯಸಾರಗ್ರಹಂ

ಮೊದಲನೇ ಪುಸ್ತಕವು.

ಶ್ರೀಮದ್ರಾಜಾಧಿರಾಜ ಶ್ರೀಕೃಷ್ಣರಾಜ ಸಾರ್ವಭೌಮ ತನುಜ
ಶ್ರೀಮಚ್ಚಾಮರಾಜ ಭೂಪಾಲರವರಿಂ
ಪೋಷಿಸಲ್ಪಡುತ್ತಲಿರುವ
ಶ್ರೀಮಹೀಶೂರು ಮಹಾರಾಜಧಾನೀ ವಿರಾಜಮಾನವೈದ್ಯಸಮಾ
ಜಾರೋಗ್ಯಶಾಲಾಭಿಷಙ್ಮಂಡಲ ಮಧ್ಯಗರಾದ

ಹೊಸಪಂಡಿತ ಭೀಮರಾಯರು

ಲೋಕೋಪಕಾರಾರ್ಥವಾಗಿ ರಚಿಸಿದ ಈ ಗ್ರಂಥವು

ಬೆಂಗಳೂರು
ಮೈಸೂರ ಗವರ್ನಮೆಂಟ್ ಮುದ್ರಾಕ್ಷರ ಶಾಲೆಯೊಳ್
ಪಾರ್ಥಿವಸಂವತ್ಸರದ ಚೈತ್ರ ಮಾಸದಲ್ಲಿ ಮುದ್ರಿಸಲ್ಪಟ್ಟಿತು.

BANGALORE
PRINTED AT THE
MYSORE GOVERNMENT PRESS.
1885.

ಕ್ರಯ ೩ ರೂಪಾಯಿ.

OSS

ಶ್ರೀರಸ್ತು.

—:o:—

ವೈದ್ಯಸಂಗ್ರಹ

ವೈದ್ಯಸಂಗ್ರಹ

ಮೊದಲನೇ ಪುಸ್ತಕವು.

ಶ್ರೀಮದ್ರಾಜಾಧಿರಾಜ ಶ್ರೀಕೃಷ್ಣರಾಜ ಸಾರ್ವಭೌಮ ತನುಜ
ಶ್ರೀಮಚ್ಚಾಮರಾಜ ಭೂಪಾಲರವರಿಂ
ಪೋಷಿಸಲ್ಪಡುತ್ತಲಿರುವ
ಶ್ರೀಮಹೀಶೂರು ಮಹಾರಾಜಧಾನೀ ವಿರಾಜಮಾನವೈದ್ಯಸಮಾ
ಜಾರೋಗ್ಯಶಾಲಾಭಿಷಣ್ಮಂಡಲ ಮಧ್ಯಗರಾದ

ಪೊಸಪಂಡಿತ ಭೀಮರಾಯರು

ಲೋಕೋಪಕಾರಾರ್ಥವಾಗಿ ರಚಿಸಿದ ಈ ಗ್ರಂಥವು

ಬೆಂಗಳೂರು
ಮೈಸೂರ ಗವರ್ನಮೆಂಟ್ ಮುದ್ರಾಕ್ಷರ ಶಾಲೆಯೊಳ್
ಪಾರ್ಥಿವಸಂವತ್ಸರದ ಚೈತ್ರ ಮಾಸದಲ್ಲಿ ಮುದ್ರಿಸಲ್ಪಟ್ಟಿತು.

BANGALORE
PRINTED AT THE
MYSORE GOVERNMENT PRESS.
1885.

ಕ್ರಯ ೩ ರೂಪಾಯಿ.

ನೋಟಿಸ.

ಈ ಪುಸ್ತಕವನ್ನು ಕೊಳ್ಳುವವರಿಗೆ.

ಅಯ್ಯಾ

ಈ ಪುಸ್ತಕದ ಆದಿಭಾಗದಲ್ಲಿ ಹೊಸ ಪಂಡಿತ ಭೀಮರಾಯರ ಶಾಯಿ ಮೊಹರು ಇಲ್ಲದೆ ಯಾರು ಪಡಕೊಂಡಾಗ್ಯು, ಈ ಪುಸ್ತಕದ ಕಳವಿನ ಛಾರ್ಜಿಗೆ ಗುರಿಯಾಗತಕ್ಕದ್ದು.

ತಾ|| 5/10/1913 ಹೊಸಪಂಡಿತ ಭೀಮರಾಯರು.

ಶ್ರೀಶ್ರೀನಿವಾಸಪ್ರಸನ್ನ.

ಶ್ರೀಗುರುಭ್ಯೋನಮಃ.

ಹೊಸ ಪಂಡಿತ ಭೀಮರಾಯನಾದ ನಾನು ಸಕಲ ವಿದ್ವಜ್ಜನಕ್ಕೆ
ವಿಜ್ಞಾಪನೆ ಮಾಡಿಕೊಳ್ಳುವದೇನಂದರೆ—

ವೈದ್ಯಸಂಗ್ರಹವೆಂಬ ಗ್ರಂಥವನ್ನು ಮುಂದೆ ವಿವರಿಸುತ್ತೇನೆ. ನನ್ನಲ್ಲಿ ವೈದ್ಯವಿದ್ಯಾಭ್ಯಾಸ ಮಾಡಿ ಶಿಷ್ಯನಾದ ಶ್ಯಾಮಶಾಸ್ತ್ರಿಯು ನನ್ನ ವಿಷಯವಾಗಿ ಬರದು ಇರುವ ಪುಸ್ತಕವನ್ನೂ, ಅನಂತರ ನಾನು ಉತ್ತರದೇಶಕ್ಕೆ ಸಂಚಾರ ಹೋಗಿರುವಾಗ ಅನೇಕ ಸಂಸ್ಥಾನಗಳಲ್ಲಿ ಸಭೆಯಂಮಾಡಿ ನನ್ನ ವಿದ್ವತ್ಪರೀಕ್ಷೆಯಂಮಾಡಿ ಕೊಟ್ಟ ಮರ್ಯಾದೆಗಳನ್ನೂ ಇದರ ಕೆಳಗೆ ಸೇರಿಸಿ ಲೋಕೋಪಕಾರಾರ್ಥವಾಗಿ ವೈದ್ಯಸಂಗ್ರಹವೆಂಬ ಗ್ರಂಥದಲ್ಲಿ ಶಾರೀರಲಕ್ಷಣ, ದಿನಚರ್ಯ, ಋತುಚರ್ಯ, ನಾಡೀಯಿಂದ ಭೂತ ಭವಿಷ್ಯದ್ವರ್ತಮಾನ, ರೋಗಪರೀಕ್ಷೆ, ಔಷಧಮಾಡುವ ಲಕ್ಷಣ, ಸ್ವಸ್ಥಾರಿಷ್ಟ, ರೋಗಾರಿಷ್ಟ, ನಾಡೀಯಿಂದ ಅರಿಷ್ಟಸೂಚಕ ಇವುಗಳನ್ನು ತಿಳಿದು ಔಷಧೀ ಕೊಡುವ ಲಕ್ಷಣವೇ ಮೊದಲಾದ ಅನೇಕ ವಿಷಯಗಳನ್ನು ವಿವರಿಸಿ ಇದ್ದೇನೆ. ಆದರೆ ಈ ಗ್ರಂಥವನ್ನು ಲೋಕದಲ್ಲಿ ರೂಢವಾಗಿ ಜನರು ಮಾತನಾಡುವರೀತಿ ಕನ್ನಡದಲ್ಲಿ ಮಾಡಿ ಇರುವದ್ದರಿಂದ ಇದರ ಯತಿ, ಗಣ, ಪ್ರಾಸು, ಮುಂತಾದವುಗಳಲ್ಲಿ ದೋಷವನ್ನು ಯೋಚಿಸಕೂಡದು.

ಶ್ರೀಲಕ್ಷ್ಮೀ ವೆಂಕಟೇಶಾಯನಮಃ.

॥ ಶ್ಲೋ ೧ ಕ ॥

ಕ್ಷೀರಾಂಭೋನಿಧಿಮಧ್ಯಸುಸ್ಥಸುಮಹಚ್ಛೇಷಾಹಿಶಯ್ಯಾಂತರೇ । ನಿದ್ರಾಂಯೋಗಸಮುದ್ಧಿತಾಂತ್ರಿಭುವನಕ್ಷೇಮಂಕರೀಂಸಂಶ್ರಿತಃ ॥ ಕಾಂತಾಂತಾಂಪ್ರಥಿತಾಂರಮಾಂವಹತಿಯೋವಕ್ಷಃಸ್ಥಲೇಪ್ರೇಮತ । ಸ್ತಂಲೋಕೇಶ್ವರಮಂಬುಜೇಕ್ಷಣಮಹಂಧ್ಯಾಯಾಮಿಹೃತ್ಪಂಕಜೇ ॥೧॥ ಶ್ರೀಮತ್ಕೃಷ್ಣಧರಾಮರೇಂದ್ರತನಯಶ್ಶ್ರೀಚಾಮಭೂಮೀಪತೇ । ಸ್ಸಂಸದ್ಭೂಷಣಸದ್ಗುಣೋಜ್ಜ್ವಲಭಿಷಕ್ಸಂದೋಹಚೂಡಾಮಣಿಃ ॥ ಭಾಸ್ವದ್ವಾಗ್ಭಟಸುಶ್ರುತಾಮಿತಭಿಷಕ್ಛಾಸ್ತ್ರಾರ್ಥಪಾರಂಗತೋ । ನಾಡೀಶಾಸ್ತ್ರನಿಧಿರ್ಗದಾದ್ರಿಕುಲಿಶೋಭಾಭಾತಿಭೀಮಾಹ್ವಯಃ ॥೨॥ ಅಜ್ಞಾನಾಂಭಿಷಜಾಂಸುಖೇನಪರಗಾನೇಕಾಮಯಾನಾಂಪರಿಜ್ಞಾನಾಯಾಪಿಚನಾಡಿಕಾಗತಗತಿಜ್ಞಾನಾಯಯಸ್ಸಾದರಂ ॥ ಸರ್ವಶ್ರೇಷ್ಠತರಪ್ರಬಂಧಮತುಲಂನಾಡೀಗತಿವ್ಯಾಧಿತಚ್ಛಾಂತಿಜ್ಞಾನದಕ್ಷಮಾಶ್ವರಚಯಜ್ಜೀಯಾತ್ಸಭೀಮಾಹ್ವಯಃ ॥ ೩ ॥ ಜಾಯಂತೇಭಿನವಾಮಯಾಃಪ್ರತಿದಿನಂಕಾಲೇದ್ಯಶಕ್ತ್ಯಾಕಲೇರ್ನಜ್ಞಾತಾಶ್ಚಭವಂತಿಶಾಸ್ತ್ರಶರಸ್ಯೈರ್ಧೀರೈಶ್ಚಿಕಿತ್ಸಾಪರೈಃ ॥ ಯೋಸಾಭೀಮಭಿಷಕ್ಕರೋತ್ಯಭಿನವೈಸ್ತಾನುತ್ತಮೈರೌಷಧೈಶ್ಶಾಂತಿಂತೇನನವೀನಪಂಡಿತಇತಿಖ್ಯಾತಿಂಗತೋರಾಜತೇ ॥ ೪ ॥ ಶ್ರೀಮತ್ಕೃಷ್ಣಮಹೀಮಹೇಂದ್ರತನುಜಶ್ರೀಚಾಮಭೂಮೀಪತೇಸ್ಸಂಸದ್ಭೂಷಣಹೃದ್ಯವೈದ್ಯಪಟಲೀಮೂರ್ಧಾವತಂಸಃಕಲೌ ॥ ಕಾಲೇದೇಶವಿಪರ್ಯಯಾನ್ನವನವೋದ್ಭೂತಾದ್ಭುತಾನಾಮಯಾನ್ ನಿಘ್ನನ್ಸ್ವಾತ್ಮನವೌಷಧೈರ್ನವಭಿಷಗ್ಭೀಮಾಹ್ವಯೋರಾಜತೇ ॥೫॥ ಪಿತ್ತಾದಿಪ್ರಬಲಕ್ಷಯಂಕ್ಷಯಮಯನ್ಕೋಪಂಶಮಯನ್ಶೋಷಯನ್ವಾತಾದಿಪ್ರಬಲಾನಿಲಾಮಯತತೇರ್ಮೂಲಂಸಮುನ್ಮೂಲಯನ್ ॥ ಮೂರ್ಧನ್ಯಭೂಷಣಮಾತ್ರವೈದ್ಯಕಪಟೂನ್ಮೋದಾಂಸಮುತ್ಪಾದಯನ್ಶ್ರೀಮದ್ಭೀಮಭಿಷಗ್ವರೋವಿಜಯತೇವಿದ್ಯಾವರ್ಯಾವಿದ್ಯಾಧಿಃ ॥ ೬ ॥ ಅನನ್ಯಸಾಧಾರಣಸರ್ವನಾಡೀಶಾಸ್ತ್ರಾರ್ಥವೇತ್ತಾನುಭವಪ್ರವಕ್ತಾ ॥ ಮಹಾಧನುರ್ವಾತಗದಾದ್ರಿವಜ್ರೋಜಯತ್ಯಸಾಭೀಮಭಿಷಗ್ವರೇಣ್ಯಃ ॥ ೭ ॥ ಕ್ಷಿಪ್ತಾಂಶ್ಚಾಪಿರಸಾನಭಿಜ್ಞಕಭಿಷಗ್ಭಿರ್ಮಾಂಕಿತೈರ್ದಾಂಭಿಕೈಃಸ್ವಸ್ಥಾಸ್ವಸ್ಥವಿವೇಕಮುಖ್ಯಜನನೀಂನಾಡೀಕಲಾಮಾನಿನೀಂ ॥ ಆಕ್ರಮ್ಯಸ್ವಮತೇರ್ಬಲೇನಸತತಾಯತ್ತೀಕೃತಾಂತಾಂಸತೀಂಭುಙ್ಕ್ತೇಚಾಪ್ರತಿವೈದ್ಯಮನ್ಮಥಮಸೌಶ್ರೀಭೀಮವೈದ್ಯಾಗ್ರಣೀಃ ॥ ೮ ॥ ಯೋದೃಷ್ಟ್ವೈವಸಹಸಾನವಗ್ರಹಗತೀಂನಾಡೀಗತಿಂಪ್ರಾಣಿನಾಂಚಂದ್ರಾರ್ಕಗ್ರಹಣಾದಿಮಧ್ಯಚರಮಾವರ್ಣಸ್ಥಘಟೀಯೋರ್ಪಿತಾಂ ॥ ಗರ್ಭಂತಾಸುಚಗರ್ಭಿಣೀಯುವತಿಷುಸ್ತ್ರೀಪುಂಸರೂಪಪ್ರಜಾಸೂತಿಂವಕ್ಷ್ಯತಿಸೋದ್ಯಭಾತ್ಯನುಪಮಶ್ಶ್ರೀಭೀಮವೈದ್ಯೋತ್ತಮಃ ॥ ೯ ॥ ಶ್ರೀಮನ್ಮಧ್ವಮುನೀಂದ್ರಸನ್ಮತಭವಶ್ಶ್ರೀಕೃಷ್ಣಪಾದಾರ್ಚಕಃ । ಶ್ರೀಮದ್ವೇಂಕಟರಾಯಧರ್ಮಗೃಹಿಣೀಗರ್ಭಾಬ್ಧಿರಾಕಾವಿಧುಃ ॥ ವಿಶ್ವಾಮಿತ್ರಮುನೀಂದ್ರಗೋತ್ರಸರಸೀಹಂಸಶ್ಶುಚಿರ್ಭಾಸತೇ । ನಾಡೀಮುಖ್ಯಭಿಷಕ್ಕಲಾದಿಕೌಶಲಶ್ಶ್ರೀಭೀಮವೈದ್ಯೋತ್ತಮಃ ॥ ೧೦ ॥ ತಸ್ಯೈವಾಂತೇವಾಸೀವಿದಿತಭಿಷಕ್ಛಾಸ್ತ್ರತತ್ತ್ವಾರ್ಥಃ ॥ ಶ್ಯಾಮಶಾಸ್ತ್ರೀವರೋಽಹಂವಿದಿತಂಪ್ರಕಟೀಕರೋಮಿತಚ್ಚರಿತಂ ॥ ೧೧ ॥

ಶ್ರೀ ರಾ ಮ ಜ ಯಂ.

ಶ್ರೀಮನ್ಮಹೀಶೂರು ಮಹಾರಾಜಧಾನೀ ವಿದ್ವಾಂಸರಾದ ಬ್ರಹ್ಮಶ್ರೀ ಮಹಾರಾಜಶ್ರೀ ಹೊಸಪಂಡಿತ ಭೀಮರಾಯರೆಂಬುವರು ಕಂಡು ಹಿಡಿದಿರುವ ಅತ್ಯಾಶ್ಚರ್ಯಕರವಾದ ಭಿಷಗ್ವಿದ್ಯಾ ವಿಷಯಗಳು, ಈ ನಮ್ಮ ಹಿಂದೂಪಂಡಿತ ಮಂಡಲಿಯಲ್ಲಿ ಪೂರ್ವಿಕರಿಂದಲೇ ಆಗಲೀ ಅಥವಾ ಈಗಿನವರಿಂದಲೇ ಆಗಲೀ, ಸಂಪಾದಿಸಲ್ಪಟ್ಟಂತೆ ಕಾಣಬರುವದಿಲ್ಲವು. ನಾಡೀಪರೀಕ್ಷಾದಕ್ಷರಾದ ಇವರಿಂದ ಸಂಗ್ರಹಿಸಲ್ಪಟ್ಟಿರುವ ವೈದ್ಯ ವಿಚಾರ ಪ್ರಸಂಗವನ್ನು ದೇಶಾಭಿಮಾನಿಗಳಾದ ನಮ್ಮ ಸನ್ಮಿತ್ರರುಗಳ ಸುಮುಖಾವಲೋಕನೆಗೋಸ್ಕರ ಸಂಕ್ಷೇಪವಾಗಿ ವಿವರಿಸುತ್ತೇನೆ.

ಮುಖ್ಯ ಯಾವ ವಿಷಯವೇ ಆಗಲೀ ನಿದರ್ಶನವಾದಲ್ಲದೆ ಅದರಲ್ಲಿ ಅಭಿಮತ ಹುಟ್ಟುವದಿಲ್ಲವೆಂಬುವದು ಮನುಷ್ಯ ವರ್ಗಕ್ಕೆ ನೈಜಗುಣವಲ್ಲವೆ; ಹೀಗಿರುವಲ್ಲಿ ಪೂರ್ವದ ಮಹಾರಾಜರವರ ಕಾಲದಲ್ಲಿ, ಈ ಪಟ್ಟಣದಲ್ಲಿರುವ ಅನೇಕ ಪಂಡಿತರುಗಳು, ವೈದ್ಯರುಗಳು, ಮತ್ತು ದೊಡ್ಡ ಮನುಷ್ಯರುಗಳು ಸಹ ಈ ಹೊಸಪಂಡಿತ ಭೀಮರಾಯರು ನಾಡಿಯನ್ನು ಪರೀಕ್ಷಿಸಿ ಹೇಳುವ ಭೂತ ಭವಿಷ್ಯದ್ವರ್ತಮಾನ ಕಾಲಗಳಲ್ಲಿಯೂ ಒಬ್ಬ ಮನುಷ್ಯನಿಗೆ ಸಂಭವಿಸತಕ್ಕ ಉಪದ್ರವಾದಿ ಅನೇಕ ಅಂಶಗಳು ನಿದರ್ಶನಕ್ಕೆ ಬಂದದ್ದರಿಂದ ಒಂದು ಯೋಗ್ಯತಾ ಪತ್ರಿಕೆಯನ್ನು ಕೊಟ್ಟರು.

ಆ ಕಾಲದಲ್ಲಿ ವಿದ್ವತ್ಪಕ್ಷಪಾತಿಗಳಲ್ಲದೇಯೂ ಯೋಗ್ಯತಾ ಪರೀಕ್ಷೆಯನ್ನರಿತವರಲ್ಲದೇಯೂ ಇರುವ ಕೆಲವರು, ಈ ಭೀಮರಾಯರು ಕಪಟಭಿಷಕ್ ಎಂಬುವದೇ ಮೊದಲಾದ ವಾಚಕಗಳಿಂದ ಪೂರಿತವಾದ ಒಂದು ಕಾಗದವನ್ನು ಬರೆದು ಆಗ್ಯೆ ಬೆಂಗಳೂರಿನಲ್ಲಿ ಪ್ರಕಟಿಸುತ್ತಿದ್ದ ವೃತ್ತಾಂತಬೋಧಿನೀ ಎಂಬ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಲು ಕಳುಹಿಸಿದ್ದು ಸನ್ ೧೮೭೩ನೇ ಇಸವಿ ಸೆಪ್ಟಂಬರು ೨೭ನೇ ಶನಿವಾರದ ಸದರೀ ಪತ್ರಿಕೆಯಿಂದ ತಿಳಿಯಬರಲು, ಅವಿಚಾರಪರವಾದ ಸದರೀ ಪತ್ರಿಕೆಗೆ ಕೊಟ್ಟ ಪ್ರತ್ಯುತ್ತರವನ್ನು ಈಕೆಳಗೆ ವಿವರಿಸುತ್ತೇನೆ.

ಏನಂದರೆ— ಎಲೈ ವೃತ್ತಾಂತಬೋಧಿನಿಯೆ, ನೀನು ಈ ರುಧಿರೋದ್ಗಾರಿ ಸಂವತ್ಸರದ ಭಾದ್ರಪದ ಶುದ್ಧ ೧೪ ಶನಿವಾರದ ಪತ್ರಿಕೆಯಲ್ಲಿ ನನ್ನ ವಿಚಾರವಾಗಿ ಕೆಲವು ಸಂಗತಿಯನ್ನು ವಿವರಿಸಿದ್ದು ನೋಡಿದೆನು. ವಿದ್ವತ್ಪರೀಕ್ಷಾ ಯೋಗ್ಯತಾ ಶಕ್ತ್ಯಭಾವಾಪನ್ನಳಾದ ನಿನ್ನ ವಾಗ್ವಿಜೃಂಭಣೆಗೆ ಹರ್ಷಿತನಾದೆನು. ಪರಂತು ತನ್ನ ಯೋಗ್ಯತಾ ಶಕ್ತಿ ನಡವಳಿಕೆ ಮೊದಲಾದವುಗಳನ್ನು ಪರ್ಯಾಲೋಚಿಸಿ ಎರಡನೇಯವರ ವಿಚಾರವಾಗಿ ತನ್ನ ವಾಕ್ಪ್ರಸರಣೆಯಂ ಮಾಡತಕ್ಕದ್ದು ಯುಕ್ತವಾದ ಕಾರ್ಯವೆಂಬುವ ಅಂಶವನ್ನು ನೀನರಿತವಳಾಗಿ ಪ್ರಕಟಿಸಿ ಅಂಥಾ ಮಾರ್ಗಾವಲಂಬನೆಯನ್ನು ಮಾಡದೆ ಇರುವ ನಿನ್ನ ಅವಿಜ್ಞತೆಗೆ ವಿಷಾದಪಡುತ್ತೇನೆ.

ಸ್ತ್ರೀರು ತಮ್ಮ ಯೋಗ್ಯತೆಯುನ್ನತಿಕ್ರಮಿಸಿದ ನಡವಳಿಕೆ ಯುಳ್ಳವರಾದ ಪಕ್ಷದಲ್ಲಿ ತಜ್ಜನಕರಿಗೆ ದೂಷಣೆಯುಂಟಾಗುವದು ಲೋಕವಾಡಿಕೆಯಾದ್ದರಿಂದ, ತತ್ಪರ್ಯಾಲೋಚನೆಯಾ ಇನ್ನಾದರೂ ನೀನು ಸನ್ಮಾರ್ಗ ಪ್ರವಿಷ್ಟಳಾಗತಕ್ಕದ್ದಕ್ಕಾಗಿಯೇ ನನ್ನ ಪ್ರತ್ಯುತ್ತರವು ಪ್ರಸಂಗಿತಲ್ಲದೆ, ಇತರವೇನೂ ಇಲ್ಲ.

ಏನೆಂದರೆ – ಒಬ್ಬ ಮನುಷ್ಯನಲ್ಲಿದ್ದ ದುರ್ಗುಣವನ್ನು ಗುಣವತ್ತಾಗಿ ಪ್ರಕಟಿಸೋಣ ಉತ್ತಮರ ಲಕ್ಷಣವೆಂದೂ, ಅವಗುಣಗಳನ್ನು ತ್ಯಾಗಮಾಡಿ ಗುಣಮಾತ್ರ ಪ್ರಕಟಿಸೋಣ ಮಧ್ಯಮರ ಲಕ್ಷಣವೆಂದೂ, ಗುಣವನ್ನು ಗುಣವಾಗಿ ಅವಗುಣವನ್ನು ಅವಗುಣವಾಗಿ ಪ್ರಕಟಿಸೋಣ ಸಾಮಾನ್ಯರ ಲಕ್ಷಣವೆಂದೂ, ಗುಣವನ್ನು ಅವಗುಣವಾಗಿ ಪ್ರಕಟಿಸೋಣ ಅಧಮರ ಲಕ್ಷಣವೆಂದೂ ಶಾಸ್ತ್ರೋಕ್ತಿಯಲ್ಲವೆ.

(ಉದರನಿಮಿತ್ತಂಬಹುಕೃತವೇಷಃ) ಎಂಬದಾಗಿ ಲೋಕದಲ್ಲಿ ಮನುಷ್ಯನಾದವನು ಜೀವನಾರ್ಥವಾಗಿ ಯಾವದಾದರೂ ಒಂದು ವಿದ್ಯಾವಲಂಬನೆಯಂ ಮಾಡತಕ್ಕದ್ದು ಸಹಜವಲ್ಲದೆ ಅನುಚಿತವಲ್ಲವು.

ಅದರಲ್ಲಿಯೂ ಅನಾದಿ ಸಿದ್ಧವಾಗಿಯೂ, ಶಾಸ್ತ್ರೀಯವಾಗಿಯೂ ಇರುವ ವಿದ್ಯಾವಲಂಬನೆಯು ಉತ್ತಮವು. ತಥಾಪಿ (ಪ್ರತ್ಯಕ್ಷಂಜ್ಯೋತಿಷಂವೈದ್ಯಂ) ಎಂಬದಾಗಿ ಸಕಲ ವಿದ್ಯೆಗಳಲ್ಲಿಯೂ ಶ್ರೈಷ್ಠ್ಯವನ್ನು ಹೊಂದಿ ಇರುವ ಈ ಎರಡು ವಿದ್ಯೆಗಳಲ್ಲಿ ಒಂದಾಗಿಯೂ ಪರಬ್ರಹ್ಮೋಪಲಬ್ಧಿ ಸಾಧಕವಾಗಿಯೂ, ಸಕಲ ಸಮ್ಮತವಾಗಿಯೂ, ಪ್ರತ್ಯಕ್ಷಾನುಭವವನ್ನುಂಟುಮಾಡುವದಾಗಿಯೂ, ಪರೋಪಕೃತಿಗೆ ಸಾಧನವಾಗಿಯೂ, ಇರುವ ಈ ವೈದ್ಯ ವಿದ್ಯಾವಲಂಬನನಿಂದ ಜೀವನವನ್ನು ಮಾಡುವದು ನಿಕೃಷ್ಟವನ್ನಾಗಿ ದೂಷಿಸುವ ವಿಷಯದಲ್ಲಿ ನೀನು ಪ್ರವರ್ತಿಸಬಹುದೆ.

ಆದರೆ ನೀನು ಜೀವನಾರ್ಥವಾಗಿ ಅವಲಂಬಿಸಿ ಯಿರುವದು ಯಾವ ಉತ್ತಮ ವೃತ್ತಿಯೊ, ಯಾವ ವಿದ್ಯೆಯೊ, ಯಾವ ಶಾಸ್ತ್ರ ಚೋದಿತವಾದದ್ದೊ, ಯಾವ ಕಾಲಾರಭ್ಯದಿಂದ ಅನುಸೃತಿ ಉಂಟಾದದ್ದೊ, ಏನು ಪ್ರತ್ಯಕ್ಷಾನುಭವಗಳನ್ನು ತೋರಿಸತಕದ್ದೋ, ಪರೋಪಕೃತಿಗೆ ಯಾವ ಸಾಧನವೋ, ಇದರ ವಿಚಾರವನ್ನು ಪರ್ಯಾಲೋಚಿಸು. ಇದಲ್ಲದೆ ನೀನು ಇಟ್ಟುಕೊಂಡು ಇರುವ ನಾಮಾಂಕಿತಕ್ಕೂ, ನಡವಳಿಕೆಗೂ ಇರುವ ಧರ್ಮಾಧರ್ಮ ಭಾವವನ್ನು ವಿಚಾರಮಾಡು. ಏನಂದರೆ—

ವೃತ್ತಾಂತಬೋಧಿನೀ ಯಲ್ಲವೇ ನೀನು ಇದರಲ್ಲಿ ಭೂತ ವೃತ್ತಾಂತವಾದರೆ ಅನೇಕ ಗ್ರಂಥಗಳಿಂದಲೂ, ವೃದ್ಧರಾದವರಿಂದಲೂ ಉಕ್ತವಾಗಿಯೇ ಇದೆ. ಭವಿಷ್ಯದ್ವೃತ್ತಾಂತವಾದರೊ ಜ್ಞಾನಿಗಳಿಗೆ ಸಾಧ್ಯವಲ್ಲದೆ ನಿನ್ನ ಶಕ್ತಿಗೆ ಒಳಪಟ್ಟದ್ದಲ್ಲ. ಈ ಎರಡು ವೃತ್ತಾಂತಗಳಲ್ಲಿಯೂ ನಿನ್ನ ಪ್ರತಿಜ್ಞೆಯು ನಿಷ್ಪ್ರಯೋಜನವಾಗುತ್ತಿರಲಾಗಿ, ವರ್ತ

ಮೊನ ವೃತ್ತಾಂತಬೋಧನಾ ವಿಷಯದಲ್ಲಿ ನಿನ್ನ ಪ್ರತಿಜ್ಞೆಯಂದೂಹಿಸಬೇಕಾಯಿತಲ್ಲವೆ. ಅದರಲ್ಲಿಯಾದರೂ ನಿಂನ ವಾಸಸ್ಥಾನೇತರ ಗ್ರಾಮ ವೃತ್ತಾಂತಗಳನ್ನು ಪರಬೋಧನಾ ಶಕ್ತಿಯಿಂದ ನೀನು ಬೋಧಿಸಬೇಕಲ್ಲದೆ ಸ್ವಶಕ್ತಿಯು ಏನಾದರೂ ಇಧೆಯೋ? ವಾಸ್ತು: ನಿರ್ವಂಚನೆಯಾಗಿ ಅಂಥಾವರ ಬೋಧನಾ ವೃತ್ತಾಂತಗಳಿಂದಲಾದರೂ ನಿನ್ನ ಬೋಧನಾ ಪತ್ರಿಕೆಯನ್ನು ಸಂಪೂರ್ಣವನ್ನಾಗುಮಾಡುತ್ತಿದ್ದೀಯಾ? ಹಾಗೂಯಿಲ್ಲ. ಈವೇಳೆಗೆ ವೃತ್ತಾಂತಬೋಧಿನೀ ಎಂಬ ಹೆಸರಿಟ್ಟುಕೊಂಡು ಜನಗಳನ್ನು ಮೋಸ ಪಡಿಸಿ, ಕಾಗೆ, ಗುಬ್ಬಿ, ಕತ್ತೆ, ನಾಯಿ ಇವುಗಳ ಕಥೆಗಳಿಂದಲೂ, ಸ್ವಕಪೋಲ ಕಲ್ಪಿತಗಳಾದ ಕಥೆಗಳಿಂದಲೂ ಪತ್ರಿಕೆಯನ್ನು ತುಂಬಿ, ಪತ್ರಿಕೆ ಒಂದಕ್ಕೆ ಮೂರು ರೂಪಾಯಿನಂತೆ ಮಸೂಲ್ಮಾಡಿಕೊಂಡು ಜೀವನವನ್ನು ಮಾಡುವ ನೀನು ಭಿಷಗ್ವಿದ್ಯವೇ ಆಗಲಿ, ಮತ್ತು ನನ್ನಲ್ಲಿ ಇಲ್ಲದೆ ಇದ್ದಾಗ್ಯೂ ನಾನು ಉಪಷ್ಟಂಭಕವಾಗಿ ಏರ್ಪಡಿಸಿಕೊಂಡು ಇಧೇನೆಂದು ನಿನ್ನಿಂದ ಆಪಾದಿಸಲ್ಪಟ್ಟ ಜ್ಯೋತಿಶ್ಶಾಸ್ತ್ರವೇ ಆಗಲೀ ಇವುಗಳಾದರೂ, ಪ್ರತ್ಯಕ್ಷ ಶಾಸ್ತ್ರಗಳೆನಿಸಿಕೊಳ್ಳುವದಿಲ್ಲವೆ, ಮತ್ತು ಪ್ರಜೆಗಳು ಇವುಗಳನ್ನು ಸ್ವಾನುಭವ ಹೊರ್ತು ಅಂಗೀಕರಿಸುವದಿಲ್ಲವಲ್ಲ, ಇಂಥಾ ಶಾಸ್ತ್ರಗಳಲ್ಲಿ ಕಾಪಟ್ಯಹ್ಯಾಗೆ ಪ್ರವೇಶಿಸಿತು. ಮತ್ತು ಇಂಥಾ ನಿಷ್ಕಪಟ ವಿದ್ಯಾವಲಂಬನೆಯುಳ್ಳವನಿಗೆ ಕಪಟ ಭಿಷಕ್ಕೆಂಬ ನಿನ್ನ ಶಬ್ದ ಪ್ರಯೋಗ ಹ್ಯಾಗೆ ಸಾಧುವಾದೀತು. ಹಾಗೆ ಅಸಾಧುವಾದ ಪ್ರಯೋಗದಿಂದ ಅವನಿಗೆ ಹಾನಿಯೇನು. ಹೇ ಅವಿಚಾರಪರಳೆ ಪರ್ಯಾಲೋಚಿಸು.

ಪರದೇಶಾಗತ ನಾನಾವಿಧ ವಿದ್ವಾಂಸರುಗಳಿಗೆ ಅವರವರ ಯೋಗ್ಯತಾನುಗುಣ್ಯವಾಗಿ ಕಟಕ ಕುಂಡಲ ಕಂಠಾಭರಣ ಛತ್ರ ಚಾಮರಾಂದೋಳಿಕಾದಿಗಳನ್ನಿತ್ತು ಬಹುಮಾನಗಳಂ ಮಾಡಿ ಕಳುಹಿಸುವದಲ್ಲದೆ ಅಗ್ರಹಾರಂಗಳಂ ಕಟ್ಟಿಸಿ ಕೊಟ್ಟು ಭೂದಾನಂಗಳಂ ಮಾಡಿ, ಮಾಸಾಶನ ವರ್ಷಾಶನಂಗಳಿಂದಲೂ ಕೂಡಾ ನಾನಾವಿಧ ವಿದ್ವಾಂಸರನ್ನು ಪುತ್ರ ಪೌತ್ರ ಪಾರಂಪರ್ಯವಾಗಿ ಸಾನ್ನಿಧ್ಯದಲ್ಲಿಟ್ಟುಕೊಂಡು ನಮ್ಮ ಆಳಿದ ಮಹಾಸ್ವಾಮಿಗಳವರು ಪೋಷಣೆಯಂ ಮಾಡುವದಂ ನೀನರಿತವಳಲ್ಲವೆ, ಇಷ್ಟೆಲ್ಲಾ ಹೇಳಲ್ಯಾಕೆ.

ನೀನು ಯಾವ ವಿದ್ವಾಂಸಳು, ನಿನ್ನ ಪೋಷಣಾ ವಿಷಯದಲ್ಲಿ ನಮ್ಮ ಆಳಿದ ಮಹಾಸ್ವಾಮಿಗಳವರಿಗೆ ಇರುವ ಕಟಾಕ್ಷವೆಷ್ಟು, ಇದನ್ನು ಸ್ಮರಿಸು. ನಿನ್ನಂಥಾವರ ಪೋಷಣಾ ವಿಷಯದಲ್ಲಿಯು ಹೀಗಿರುವ ಅಂಶದಲ್ಲಿ, ಮಹಾ ಸನ್ನಿಧಾನಕ್ಕೆ ವಿದ್ವತ್ಪಕ್ಷಪಾತ ವೆಷ್ಟಿರಬಹುದೋ? ಪರ್ಯಾಲೋಚಿಸು.

ಇಂಥಾ ಪೋಷಣೆಗೆ ಒಳಪಟ್ಟ ವಿದ್ವಾಂಸರುಗಳೊಳೊಬ್ಬನಾದ ನನ್ನಲ್ಲಿ ಮೋಸಗಾರಿಕೆಯೂ, ಇತರರಲ್ಲಿ ಅವಿವೇಕವೂ ಕಲ್ಪಿಸಿ ಆಳಿದ ಮಹಾಸ್ವಾಮಿಯವರ ಸರ್ವೋತ್ತಮವಾದ ಗುಣಗಳನ್ನು ದಿಗಂತ ವಿಶ್ರಾಂತವನ್ನಾಗಿ ಮಾಡುವ ಕೀರ್ತಿ ಕಾಂತೆಯಲ್ಲಿ ಒಂದು ಕುಂದಕವು ಮೂರ್ಖಾಳಿಗಳಿಗೆ ತೋರ್ಪಡುವಂತೆ ನನ್ನ ಬಂದೋಬಸ್ತು ಮಾಡಲ್ಲ

ಟ್ಟಿತೆಂತಲೂ, ಇತರ ವಿದ್ವಾಂಸರಿಗೆ ವಿವೇಕವನ್ನು ಕಲ್ಪಿಸಲ್ಪಟ್ಟಿತೆಂತಲೂ ಅವಿಚಾರಪರಳಾಗಿ ಪ್ರಕಟಿಸಿದೆಯಲ್ಲಾ, ಉಚಿತವೇ ?

ಪರಂತು, "ಲಾಲನಂತಾಡನಂವಾತುಸ್ಸಕಾರುಣ್ಯಾಂ ಯಥಾರ್ಥಕೇ" ಎಂಬ ರೀತ್ಯಾ ಮಹಾಸನ್ನಿಧಾನಾನ್ನ ಪ್ರಭಾವದಿಂ ಲಬ್ಧವಾದ ನನ್ನ ವೈದ್ಯ ವಿದ್ಯಾ ವೈಶದ್ಯಕ್ಕೆ ಸಕಲಾಭೀಷ್ಟ ಪ್ರದ ಕರಕಮಲ ಸಂಜಾತಾಕ್ಷರಾಂಕಿತ ರಹಿತವಾದ ಪತ್ರಿಕೆ ನನಿಗೆ ಪ್ರಯೋಜನಕಾರಿ ಯಾಗಲಾರದೆಂತಲೂ, ಅಜ್ಞಾನ್ಯತಿರಿಕ್ತ ಪಂಡಿತರುಗಳಿಂದ ಕೊಡಲ್ಪಟ್ಟದ್ದರಿಂದಲೂ, ಮಹಾಸನ್ನಿಧಾನದಲ್ಲಿ ಪತ್ರಿಕೆ ಅನಂಗೀಕೃತವಾಯಿತೆಂದು ಜನಜನಿತವಾಗಿರುವದನ್ನ ನೀನು ಅಪಾರ್ಥಕಲ್ಪನೆಮಾಡಿದ ಮಾತ್ರದಿಂದ ವಿವೇಕಿಗಳು ನಿನ್ನ ವಾಕ್ಕು ಸತ್ಯವಾದ್ದೆಂದು ಎಂದಿಗೂ ಪರಿಗ್ರಹಿಸಲಾರರು.

ಆದರೆ ಪ್ರಜೆಗಳಿಗೆ ಆಕ್ಷೇಪಣಾವಕಾಶವಿಲ್ಲದರೀತ್ಯಾ ದೇಶಕಾಲಾಗೋಚರವಾದ, "ಒಬ್ಬಳು ಏಕಕಾಲದಲ್ಲಿ ನಾಲ್ಕು ಶಿಶುಗಳನ್ನು ಪ್ರಸುವಿಸಿದಳು, ಒಬ್ಬನಿಗೆ ಇನ್ನೂರೈವತ್ತುಜನ ಪುತ್ರ ಪೌತ್ರರಿದ್ದರು, ಮತ್ತು ಭೂಕಂಪವಾಯಿತು" ಇತ್ಯಾದಿ ವೃತ್ತಾಂತಂಗಳಿಂದಲೂ, ಇದಲ್ಲದೆ ಸ್ವಕಪೋಲಕಲ್ಪಿತಗಳಾದ ಮಾತುಗಳಿಂದಲೂ ಪತ್ರಿಕೆಯಂ ಪೂರೈಸಿ ನಿನ್ನ ಕಾಲಹರಣವಂ ಮಾಡಿಕೊಂಡಿರದೆ, ವಿದ್ವಾಂಸರುಗಳ ವಿಷಯಕವಾಗಿಯೂ ಜನಜನಿತವಾದ ವರ್ತಮಾನಗಳಲ್ಲಿಯೂ ಅಪಾರ್ಥಕಲ್ಪನೆಗಳಂ ಮಾಡಲಾರಂಭಿಸಿದರೆ ಅವಿಲಂಬವಾಗಿ ನೀನು ಅನೃತ ವೃತ್ತಾಂತಬೋಧಿನೀ ಎಂಬದಾಗಿ ನೂತನ ನಾಮಾಂಕಿತವನ್ನ ವಹಿಸುವದರಲ್ಲಿ ಸಂದೇಹವಿಲ್ಲ.

ಆದ್ದರಿಂದ, ಸ್ತ್ರೀಷುದುಷ್ಟಾಸುವಾರ್ಷ್ಣೇಯ ಜಾಯತೇವರ್ಣಸಂಕರಃ ಇತ್ಯಾದಿ ವಚನರೀತ್ಯಾ ಸ್ತ್ರೀಯರು ಪ್ರಬಲಿಸಿದ್ದರಿಂದಲೇ, "ನಿಸ್ಸಾರಾಪೃಥಿವೀನಿರೌಷಧಿರಸಾನೀಚಾಮಹತ್ವಂಗತಾಃ" ಎಂಬ ನ್ಯಾಯರೀತ್ಯಾ ಸಕಲವಸ್ತುಗಳೂ ಸ್ವಗುಣ ರಹಿತಗಳಾಗಿ ದೇಶಕ್ಷೋಭೆ ಉಂಟಾಯಿತು.

ಮುಖ್ಯ ನೀನೂ ನಾನೂ ನಮ್ಮ ಆಳಿದ ಮಹಾಸ್ವಾಮಿಯವರ ಪೋಷಣೆಯಿಂದ ಅಭಿವೃದ್ಧಿಯನ್ನೈದುವವರಾದ ಪ್ರಯುಕ್ತ ನೀನು ಪರಬೋಧನೆಯಿಂದ ಇಂಥಾ ದುರ್ವಿನೀತತ್ವವನ್ನೈದದೆ ಸಕಲ ವಿಷಯದಲ್ಲಿಯೂ ನಿಷ್ಕಪಟಿಯಾಗಿ ಸತ್ಯವಾಕ್ಪ್ರಸರಣೆಯಿಂದ ಸುಖಿಯಾಗಿ ಚಿರಜೀವಿಯಾಗಿರಬೇಕೆಂದು ಕೋರುವ ನನ್ನ ಅಪೇಕ್ಷೆಯನ್ನು ಪರಮೇಶ್ವರನು ಸಾಫಲ್ಯವನ್ನಾಗಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ನಿನಿಗೆ ಈ ವೈದ್ಯವಿದ್ಯಾಪರಿಚಯವಿದ್ದಪಕ್ಷದಲ್ಲಿ ಏನುಅಭಿಮತವೋ ಆ ವಿಷಯಗಳನ್ನೆಲ್ಲಾ ಪ್ರಶ್ನೋತ್ತರಗಳಿಂದ ಪರೀಕ್ಷಿಸಬಹುದು. ಇಲ್ಲವೆ ನಿನಿಗೆ ಆಪ್ತನಾದ ಒಬ್ಬ ರೋಗಿಯನ್ನ ನನ್ನ ಬಳಿಗೆ ಕಳುಹಿಸಿಕೊಟ್ಟಲ್ಲಿ ನಾಡೀಪರೀಕ್ಷೆಯಿಂದಲೇ ನಾನುಹೇಳುವ ಅವನ ಜನ್ಮಾದಿ ಪರ್ಯವಸಾನದವರಿಗೆ ಉತ್ಪತ್ತಿಯಾಗುವ ರೋಗಗಳು, ಅವುಗಳ ಆದ್ಯಂತಕಾಲ

ನಿರ್ಣಯವು, ಈ ಮುಂತಾದ ಅನುಭವಗಳನ್ನು ಲಿಖಿತಮೂಲಕವಾಗಿ ಇಟ್ಟು ಪರಿಕ್ಷಿಸಿ ತೃಪ್ತರಾಗಿ ಆಬಳಿಕ ಗುರುಕಟಾಕ್ಷದಿಂದ ಲಬ್ಧವಾದ ನನ್ನ ವಿದ್ವಚ್ಛಕ್ತಿಯನ್ನು ನೀನೇ ಪ್ರಕಟನೆ ಮಾಡಬಹುದು ಎಂದು ಅಪೇಕ್ಷಿಸುತ್ತೇನೆ.

ಈಪ್ರಕಾರ ಬಂದ ಪ್ರತ್ಯುತ್ತರವನ್ನು ನೋಡಿ ನಾಚಿಕೆಪಟ್ಟು ತದಾರಭ್ಯ ವೃತ್ತಾಂತಬೋಧಿನೀ ಎಂಬ ಹೆಸರಿಗೆ ಬದಲಾಗಿ (ಕರ್ನಾಟಕಪ್ರಕಾಶಿಕಾ) ಎಂಬ ಹೆಸರು ಏರ್ಪಡಿಸಲ್ಪಟ್ಟಿತು.

ಈರೀತಿಯಾಗಿ ತಮ್ಮ ವಿದ್ವತ್ಪ್ರಕಾಶ್ಯಾಭಿಲಾಷಿಗಳಾದ ಸದರೀ ಭೀಮರಾಯರು ತಮ್ಮ ಶಕ್ತಿಯನ್ನು ಗೌರ್ನಮೆಂಟಿನವರ ತಿಳುವಳಿಕೆಗೆ ತರದೆ ಇರಬಾರದೆಂದು ಯೋಚಿಸಿ ವೈದ್ಯಶಾಸ್ತ್ರರೀತ್ಯಾ ಕೆಲವು ವಿಷಯಗಳನ್ನು ಸೂಚಿಸಿ ಪಂಡಿತರಾಗಿಯೂ, ಅನೇಕಪರೀಕ್ಷೆಗಳನ್ನು ಕೊಟ್ಟು ವಿದ್ಯಾಪಾರಂಗತರಾಗಿಯೂ ಇರುವ ಯೂರೋಪಿಯನ್ ಡಾಕ್ಟರುಗಳೊಡನೆ ಪರೀಕ್ಷಿಸಬೇಕೆಂದು ಈ ಸಂಸ್ಥಾನದಲ್ಲಿ ಅತ್ಯಂತ ಶ್ರೇಷ್ಠವಾದ ಅಧಿಕಾರಿಗಳಾದ ಚೀಫ್ ಕಮಿಷನರ್ ಮೆ॥ ಬವರಿಂಗ್ ಸಾಹೇಬರವರಲ್ಲಿ ಅರ್ಜಿಮೂಲಕ ಜಾಹಿರ್‍ಮಾಡಿಕೊಂಡದ್ದಕ್ಕೆ ಅಷ್ಟಗ್ರಾಮದ ಡಿವಿಜನ್ ಕಮಿಷನರಾದ ಕರ್ನಲ್ ಎಲಿಯಟ್ ಸಾಹೇಬರವರಲ್ಲಿ ಹೇಳಿಕೊಳ್ಳಬೇಕೆಂಬದಾಗಿ ೧೮೬೮ನೇ ಇಸವಿ ಮೆ ೧೫ನೇ ತಾರೀಖಿನಲ್ಲಿ ಇಂಡಾರ್ಸ್ ಕೊಟ್ಟರು.

ಅದರಂತೆ ಡಿವಿಜನ್ ಅಧಿಕಾರಿಗಳಲ್ಲಿ ತಿಳಿಸಲು, ಸಮಯ ನಿರೀಕ್ಷಿಸುತ್ತಿರಲಾಗಿ, ವಿದ್ವತ್ಪರೀಕ್ಷೆಗೆ ಸುಸಮಯವೆಂದರೆ, ಕೆಲವು ದಿವಸಗಳಿಗೆ ಮುಂಚೆ ಈ ಮೈಸೂರು ಪ್ರಾಂತ "ವಿಷೂಚಿಕಾ" ಅಂದರೆ ವಾಂತಿಭ್ರಾಂತಿ ಯಾ ಕಲರಾ ಉಪದ್ರವವು ಪ್ರಾಪ್ತವಾಗಿತ್ತಾದ ಕಾರಣ, ಈ ಉಪದ್ರವ ಸಂಭವಿಸಿದ ಜನಗಳಿಗೆ ಚಿಕಿತ್ಸೆಮಾಡತಕ್ಕ ವಿಷಯದಲ್ಲಿಯೂ, ವೈದ್ಯಶಾಸ್ತ್ರ ವಿಷಯದಲ್ಲಿಯೂ ಸಹ ಕೆಲವು ಅಂಶಗಳನ್ನು ನಮೂದಿಸಿ ಡಿವಿಜನ್ ಅಧಿಕಾರಿಗಳಾದ ಕರ್ನಲ್ ಹೇಸ್ಸಾಹೇಬರವರಲ್ಲಿ—

ಹೇಸ್ಸಾಹೇಬರವರಿಗೆ ಬರದ ಅರ್ಜಿ ಹ್ಯಾಗಂದರೆ.

ಹಜರತ್ ಅಷ್ಟಗ್ರಾಮ ಡಿವಿಜನ್ ಕಮಿಷ್ನರ್ ಹೇ ಸ್ಸಾಹೇಬರವರ ಜನಾಬಿಗೆ.

ಸನ್ ೧೮೬೫ನೇ ಇಸವಿ ಅಗಸ್ಟು ತಾರೀಖು ೩೧ರಲ್ಲು ಮೈಸೂರು ಕಿಲ್ಲೇದಲ್ಲಿ ಇರುವ ಮಹಾರಾಜರಾಜಾಸಾಹೇಬ್ಬಹದ್ದೂರ್ರವರ ಅಲಾಹಿದಾ ಹೊಸಪಂಡಿತ ಭೀಮರಾವ್ ಎಂಬ ನಾನು ಈ ಕೆಳಗೆ ಬರೆಯುವ ಕೆಲವು ಪತ್ರಿಗಳನ್ನು ತಮ್ಮ ಘನವಾದ ಆಲೋಚನೆಗೆ ತರಲಿಕ್ಕೆ ಬೇಡಿಕೊಳ್ಳುತ್ತೇನೆ.

ಈಗ ಗುಂಡ್ಲು ತಾಲ್ಲೂಕಿನಲ್ಲಿಯೂ ಮೈಸೂರು ಟವರ್ನ್ ಮತ್ತೂ ಕೆಲವು ಗ್ರಾಮಗಳಲ್ಲಿಯೂ ಸಹ ಸಂಭವಿಸಿರುವ ಕಲರಾಯೆಂಬ ವಾಂತಿಭ್ರಾಂತಿ ರೋಗವು ಏನು ? ಯಾತರಿಂದ ಉಂಟಾಯಿತು ? ಅದಕ್ಕೆ ಔಷಧವು ಯಾವದೋ ತಿಳಿಯದೆ ಜನರುಅತ್ಯಂತವಾಗಿ

ಯೋಚಿಸಿ ಚೈಸಲಾರದೆ ಸುಮ್ಮಗಿರುತ್ತಾರೆ. ಪ್ರಕೃತದಲ್ಲಿ ಅಂಟುರೋಗವೆಂತಲೂ ಕಶ್ಮಲದಿಂದುಂಟಾಗಿರುವದು ಯೆಂತಲೂ ಪ್ರಸಿದ್ಧವಾಗಿರುತ್ತೆ.

ಹಾಗಾದರೆ ಅನೇಕರು ಯಾವಾಗಲೂ ಕಶ್ಮಲದಲ್ಲಿಯೇ ಇರುತ್ತಾರೆ, ಅಲ್ಲದೆ ಈಗ ೮೦ - ೯೦ ವರ್ಷ ವಯಸ್ಸುಳ್ಳ ವೃದ್ಧರು ಅನೇಕರೋಗಿಷ್ಟರಿಗೆ ಉಪಚರಿಸಿ ಅವರು ಸುಖವಾಗಿರುತ್ತಾರೆ, ಮೇಲ್ಕಂಡ ಸೂತ್ರವು ನಿಜವಾಗಿದ್ದರೆ ಅವರು ಸಾಯಬೇಕಾಗಿತ್ತು.

೨. ಈ ರೋಗವು ಅಗ್ನಿಮಾಂದ್ಯದಿಂದಮಾತ್ರವೇ ವುಂಟಾಗತಕ್ಕದ್ದಾಗಿರುತ್ತೆ. ಇದಕ್ಕೆ ಕಾರಣಗಳು ಯಾವವಂದರೆ:—ಯೋಗ್ಯತೆಮೀರಿ ಆಹಾರ ತೆಗದುಕೊಳ್ಳುವದರಿಂದಲೂ, ಯೋಗ್ಯತೆಗೆ ಕಡಮೆಯಾಗಿ ಆಹಾರ ತೆಗದುಕೊಳ್ಳುವದರಿಂದಲೂ, ನೀರಿನಗುಣಗಳಿಂದಲೂ, ಅತಿನಿದ್ರೆಯಿಂದಲೂ, ನಿದ್ರೆಕಟ್ಟುವದರಿಂದಲೂ, ವ್ಯಸನದಿಂದಲೂ, ದುಃಖದಿಂದಲೂ, ಭಯದಿಂದಲೂ ಸಹಾ ಅಗ್ನಿಮಾಂದವು ಉಂಟಾಗುತ್ತದೆ. ಇದನ್ನು ನನಗೆ ಇರತಕ್ಕ ಶಾಸ್ತ್ರ ಪರಿಚಯದಿಂದಲೂ, ಅನೇಕದೃಷ್ಟಾಂತರಗಳಿಂದಲೂ ಈ ರೋಗದಕಾರಣವನ್ನೂ, ಸ್ಥಿತಿಯನ್ನೂ, ಪರಿಣಾಮವನ್ನೂ ಸಹ ನಿಶ್ಚಯಿಸಿರುತ್ತೇನೆ, ಅಲ್ಲದೆ ತಕ್ಕಔಷಧಗಳನ್ನು ಕೊಡಬಲ್ಲೆನು.

೩. ಈಗಲೀರೋಗವು ಪ್ರಬಲಿಸಿರುವ ಸಮಯವಾದ್ದರಿಂದ ಯಾವಂದರವರು ಚಿತ್ತದಲ್ಲಿತಂದು ನನ್ನನ್ನು ಪರೀಕ್ಷಿಸಬಹುದು. ಹ್ಯಾಗಂದರೆ—ಸುಖವಾಗಿರುವ ಜನರ ಒಂದು ಸಮೂಹವನ್ನು ಕೇರಿಸಿ ಅವರುಗಳ ನಾಡಿಯನ್ನು ನನಗೆ ನೋಡಗೊಡಿಸಿದರೆ, ಅವರಗಳಪೈಕಿ ಇಂಥವರಿಗೆ ರೋಗಪ್ರಾಪ್ತವಾಗುತ್ತೆಂತಲೂ, ಇಂಥವರಿಗೆ ಆಗುವದಿಲ್ಲವೆಂತಲೂ, ಇಂಥವರಿಗೆ ಬರುವರೋಗ ಪರಿಹಾರವಾಗುತ್ತೆಂತಲೂ, ಇಂಥವರು ಮೃತಪಡುವರೆಂತಲೂ ಸಹ ಸಾಧ್ಯವಾದವಟ್ಟಿಗೆ ತಿಳಿಸಬಲ್ಲೆನು. ರೋಗಿಷ್ಟನ ದೇಹಸ್ಥಿತಿಯನ್ನು ತಿಳಿಯುವದು ಶ್ರಮಸಾಧ್ಯವಾಗಿರುತ್ತದೆಯೇ ಹೊರ್ತು, ರೋಗರಹಿತನಾದವನ ದೇಹಸ್ಥಿತಿಯನ್ನು ವಿವರಿಸಲು, ಅತಿಸುಲಭವಾಗಿರುತ್ತೆ.

೪. ಅಗ್ನಿಮಾಂದ್ಯವು ವಾತ ಪಿತ್ತ ಶ್ಲೇಷ್ಮ ಸಂಕಲಿತವಾದ ವಿಷಮದಿಂದಮಾತ್ರವಲ್ಲದೆ ತ್ರಿದೋಷದಿಂದಲೂ ಹುಟ್ಟುತ್ತದೆ. ಇದಕ್ಕೆ ದೇಹಾನುಗುಣ್ಯವಾಗಿ ಕೆಲವರಿಗೆ ಮೆಣಸು, ಇಂಗು, ಆರ್ತಿಕರ್ಪೂರ ಮೊದಲಾದ ತೀಕ್ಷ್ಣ ಪದಾರ್ಥಗಳಿಂದಲೂ, ಕೆಲವರಿಗೆ, ಅಫಿಮ್ ಕ್ಲಾರ್ಡಿ ಮುಂತಾದ ಉಷ್ಣಪದಾರ್ಥಗಳಿಂದಲೂ, ಇನ್ನೂಕೆಲವರಿಗೆ ತಣ್ಣೀರುಮೊದಲಾದ ಸೀತ ಪದಾರ್ಥಗಳಿಂದಲೂ ಗುಣವಾಗತಕ್ಕದ್ದಾಗಿರುತ್ತೆ. ಮತ್ತು ಕೆಲವರಿಗೆ ಇವೆಲ್ಲವು ನಿಷ್ಪ್ರಯೋಜನವಾಗಿರುತ್ತೆ.

೫. ಇದುಮಾತ್ರವಲ್ಲದೆ ಮತ್ಯಾವ ಹೊಸರೋಗವಾದಾಗ್ಯೂ ನಾಡಿಯನ್ನು ಪರೀಕ್ಷಿಸಿ ಮೇಲ್ಕಂಡಮೇರೆಯ ವಿವರಿಸಲು ಶಕ್ತನಾಗಿರುತ್ತೇನೆ. ಮತ್ತೂ ಕೆಳದತಿಂಗಳು ೫ನೇ ತಾರೀಖಿನಲ್ಲಿ ಮದ್ರಾಸ ಹಿಂದೂ ಶ್ರೇಯೋಭಿವರ್ಧಿನೀ ಸಭೆಯಲ್ಲಿ ಕೇರಿ

ಕೊಟ್ಟ ಲೆಕ್ಚರ್‌ವಿಷಯವನ್ನ ಕಳೆದತಿಂಗಳು ೬ನೇ ತಾರೀಖಿನಲ್ಲಿ ನೇಟೀವ್ ಪಬ್ಲಿಕ್ ಒಪೀನಿಯನ್ ಎಂಬ ಇಂಗ್ಲಿಷ್ ಪೇಪರಿನಲ್ಲಿ ನಮೂದಿಸಿರುತ್ತೆ. ಅಲ್ಲದೆ ಅದೇ ತಿಂಗಳು ೧ನೇ ತಾರೀಖಿನಲ್ಲಿ ಜನರಿಗೆಕೊಟ್ಟ ನೋಟೀಸಿನ ಪ್ರತಿ ೧, ಆಷಾಢಶುದ್ಧ ೧೫ ಭಾನುವಾರದ ದಿವಸ ಛಾಪಿಸಿರುವ ತೆನುಗು ಪೇಪರ್ ೧ ಸಹಾ ತಮ್ಮ ಘನವಾದ ಆಲೋಚನೆಬಗ್ಯೋ ಪ್ರೋದಿ ಪಾಪಸುಮಾಡತಕ್ಕ ಬಗ್ಯೆ ಸಹ ಇದರೊಡನೆ ಕಳುಹಿಸಿರುತ್ತೇನೆ.

ಮೇಲ್ಕಂಡ ಸಂಗತಿಗಳನ್ನು ಖಾವಂದರವರು ಪರಾಂಬರಿಸಿ, ಈ ಸಮಯದಲ್ಲಿ ಪರೀಕ್ಷಿಸಿದ್ದೇಆದರೆ, ಜನರಿಗೆ ಅತ್ಯಂತ ಉಪಯೋಗವಾಗಬಹುದೆಂತ ನಂಬಿ ಬೇಡಿಕೊಳ್ಳುತ್ತೇನೆ.

ತಾವು ತೋರಿಸುವ ಈ ದೊಡ್ಡ ದಯಕ್ಕಾಗಿ ಅರ್ಜಿದಾರನು ಕೃತಜ್ಞನಾಗಿರುವದಲ್ಲದೆ, ಯಾವಾಗಲೂ ತಮ್ಮ ಶ್ರೇಯಃ ಪ್ರಾರ್ಥನೆಗಾಗಿ ದೇವರಿಗೆ ಬೇಡುತ್ತಾನೆ. ಭೀಮರಾವ್ ಹೊಸಪಂಡಿತ್? ಅರ್ಜಿಕೊಟ್ಟದ್ದಕ್ಕೆ ಇವರೂಕೂಡ ಮೇಸ್ಟರ್ ಬೌರಿಂಗ್ ಸಾಹೇಬರವರ ಮಾರ್ಗವನ್ನೇ ಅವಲಂಬಿಸಿ, ನಿಮ್ಮ ಅಭಿಪ್ರಾಯವನ್ನ ಸಿವಲ್ ಸರ್ಜನ್ ಸಾಹೇಬರಲ್ಲಿ ತಿಳಿಸಿಕೊಳ್ಳಬಹುದೆಂಬ ಪ್ರತ್ಯುತ್ತರ ಕೊಟ್ಟರಲ್ಲದೆ, ವಿದ್ವಾಂಸರುಗಳನ್ನು ಪರೀಕ್ಷಿಸಿ ಸನ್ಮಾನಿಸತಕ್ಕದ್ದು ಪ್ರಭುತ್ವಮಾಡತಕ್ಕ ವರಿಗೆ ಸಹಜವಾದ ಕೆಲಸವಾಗಿದ್ದಾಗ್ಯೂ ಉಭಯತ್ರರಲ್ಲಿ ಯಾರೂ ವಿಚಾರ ಮಾಡಿದವರಾಗಲಿಲ್ಲ. ಆದ್ದರಿಂದ ಪರಸಂಸ್ಥಾನಕ್ಕೆ ಹೋಗಿ ತಮ್ಮ ವಿದ್ವತ್ಪ್ರಾಚುರ್ಯದಿಂದ ಖ್ಯಾತಿಯನ್ನು ಹೊಂದಿ ಸನ್ಮಾನವಂ ಪಡೆಯಲುದ್ದೇಶವುಳ್ಳವರಾಗಿ ದೇಶಾಟನವಂಮಾಡಲು ಹೊರಟು, ತಿರುಚನಾಪಳ್ಳಿ, ಮಧುರೆ, ತಿರುನವೆಳ್ಳಿ, ಅನಂತಶಯನ, ಕೊಚ್ಚಿ, ತಂಜಾವೂರು, ನಾಗೂರು, ನಾಗಪಟ್ಣ, ಪುದುಕೋಟೆ ಮೊದಲಾದ ಅನೇಕ ಸ್ಥಳಗಳಲ್ಲಿ ಸಂಚರಿಸುತ್ತಾ, ಅಲ್ಲಲ್ಲಿ ಬಹುಮಾನವನ್ನು ಪಡೆದುಕೊಂಡು ತಿರುಪತಿಗೆಹೋಗಿ, ಅಲ್ಲಿಂದ ವಿದ್ವತ್ಪಕ್ಷಪಾತಿಗಳಾದ ಪಂಡಿತರುಗಳಿಂದ ಶೋಭಿಸುತ್ತಿರುವ ಮದ್ರಾಸ್ ರಾಜಧಾನಿಯಾದ ಚನ್ನಪಟ್ಟಣವನ್ನು ಯುವಸಂವತ್ಸರದ ಜೇಷ್ಠಮಾಸದಲ್ಲಿ ಪ್ರವೇಶಿಸಿದರು.

ಅನಂತರ ಆ ಪಟ್ಟಣದಲ್ಲಿರತಕ್ಕ ದೊಡ್ಡಮನುಷ್ಯರುಗಳಲ್ಲಿ ತಮ್ಮ ಶಕ್ತಿಯನ್ನು ತೋರಿಸುತ್ತಾ, ರೋಗಿಗಳಿಗೆ ಅನುಭವಹೇಳಿ ಔಷಧ ಮುಂತಾದ್ದು ಕೊಡುತ್ತಾ, ಕೆಲವುದಿವಸ ಕಳೆದಮೇಲೆ ಅಂದರೆ ೧೮೬೫ನೇ ಇಸವಿ ಜುಲೈ ೧ನೇ ತಾರೀಖಿನಲ್ಲಿ ಹಿಂದೂಶ್ರೇಯೋಭಿವರ್ಧನೀ ಸಭಾಯೆಂಬ ಸಂಘದವರಿಂದ ಒಂದು ನೋಟೀಸ್ ಕೊಡಲ್ಪಟ್ಟಿತು.

ಆದರಲ್ಲಿ ಮುಖ್ಯವಾಗಿ ಮೇಲ್ಕಂಡ ಸಂಘದ ೫ನೇ ಮೀಟಿಂಗ್ ೧೮೬೫ನೇ ಇಸವಿ ಜುಲೈ ೫ನೇ ತಾರೀಖಿನಲ್ಲಿ ಸಾಯಂಕಾಲ ೫॥ ಘಂಟೆಗೆ ಮದ್ರಾಸಿನಲ್ಲಿರುವ ಬ್ಲ್ಯಾಕಟವನ್ ಛೈನಾ ಬಾಜಾರ್ ಎಂಬ ಪ್ಯಾಟೆಯಲ್ಲಿ ಕವಾಟ ಸಂಖೆ ೧೮೬ನೇ ಪುರುಷೋತ್ತಮ ದೇವೇಶ ಯೆಂಬವರ ಮನೆಯ ಮಹಡಿಯಮೇಲೆ ಸಭೆಯಾಗುತ್ತದೆ, ಆ ಕಾಲದಲ್ಲಿ ವೈ

ಸೂರ್ ಮಹಾರಾಜ ರಾಜಾಸಾಹೇಬ್ ಬಹದ್ದೂರ್ರವರ ಸಂಸ್ಥಾನಕ್ಕೆ ಸೇರಿದ, ಪಂಡಿತರುಗಳಪೈಕಿ ಒಬ್ಬರಾದ ಬ್ರಹ್ಮಶ್ರೀ, ಮಹಾ ರಾಜಶ್ರೀ ಜೋಸಪಂಡಿತ ಭೀಮರಾವ್ ಎಂಬವರೂ, ಮತ್ತು ಕೆ. ವೆಂಕಟ ರತ್ನಂಪಂತಲು, ಎಂಬವರೂಸಹ ಕನ್ನಡದಿಂದಲೂ ತೆನುಗಿನಿಂದಲೂ "ನಾಡೀತತ್ವೋಪನ್ಯಾಸವಂ" ಮಾಡುತ್ತಾರಾಗಿ, ಇಂಡಿಯಾ ಕ್ಷೇಮಚಿಂತಕರಾದ ಎಲ್ಲರನ್ನೂ ದಯಮಾಡಿಸಬೇಕೆಂದು ಕೇಳಿಕೊಳ್ಳಲ್ಪಟ್ಟಿಧೆ. ಮೇಲೆ ಹೇಳಲ್ಪಟ್ಟಮೇರಿಗೆ ಆ ದಿವಸ ಸಾಯಂಕಾಲ ೫॥ ಘಂಟೆಗೆ ಸಭೆ ಸೇರಿತು. ಪ್ರಸಿದ್ಧರಾದ ಅನೇಕ ನೇಟೀವ್ ದೊಡ್ಡಮನುಷ್ಯರು, ಸಾಹುಕಾರು ಸಹ ಸೇರಿಯಿದ್ದರು. ಸಭೆಯ ಮುಖ್ಯವಾದ ಹಾನರೇರಿ ಸೆಕ್ರಟೇರಿಯವರು ಈ ಸಭೆ ಸೇರುವದಕ್ಕುಂಟಾದ ಮುಖ್ಯೋದ್ದೇಶ್ಯವನ್ನು ಸಭಿಕರಿಗೆ ಇಂಗ್ಲಿಷ್‌ನಿಂದಲೂ, ತೆನುಗಿನಿಂದಲೂ ತಿಳಿಯಪಡಿಸಿದರು.

ಅನಂತರ ಮೈಸೂರು ಮಹಾರಾಜರವರ ಸಂಸ್ಥಾನಕ್ಕೆ ಸೇರಿದ ಬ್ರಹ್ಮಶ್ರೀ ಮಹಾರಾಜಶ್ರೀ ಜೋಸಪಂಡಿತ ಭೀಮರಾಯರವರಿಂದ ಬರೆಯಲ್ಪಟ್ಟ ನಾಡೀಶಾಸ್ತ್ರ ಸಂಗ್ರಹವನ್ನ, ಆದಿವಸ, ಅವರು ಸ್ವಲ್ಪ ಅಶಕ್ತರಾಗಿದ್ದದ್ದರಿಂದ ಆ ಸಭೆಯವರ ಅನುಮತಿ ಮೇಲೆ ತಮ್ಮಕಡೆ ಬ್ರಹ್ಮಶ್ರೀ ಕೆಲ್ಲಪ್ಪ ಶಾಮಾಚಾರ್ಯರಿಂದ ಓದಿಸಿ ಮಧ್ಯೆ ಮಧ್ಯೆ ತಮ್ಮ ಅತ್ಯುನ್ನತವಾದ ಶಕ್ತಿಯಿಂದ ಸಂಗತ್ಯಾನುಸಾರ ಅರ್ಥವಿವರಣವಂಮಾಡಿ ಸರ್ವರಿಗೂ ವಿಶದವಾಗಿ ತಿಳಿಯುವಂತೆ ಹೇಳಿದರು. ಸದರಿ ಸಂಗತಿಯು ಬಹಳ ಶ್ರೇಷ್ಠವಾಗಿ ಒರದಿತ್ತು. ಮತ್ತು ಅದು ಶಾಸ್ತ್ರಸಂಬಂಧವಾದ ಸಂಗತಿಗಳುಮಾತ್ರವೇ ಅಲ್ಲದೆ ಔಷಧವಿಷಯದಲ್ಲಿ ಅತ್ಯಂತ ಶಕ್ತರಾದ ಇವರ ಅನುಭವದಿಂದಲೂ ಕೂಡಿ ಬಂದದ್ದಾಗಿತ್ತು.

ಈ ಸಂಗತಿಯನ್ನ ಕೇಳಿದ ಸಭಿಕರೆಲ್ಲರಿಗೂ ನಿಜವಾದ ಸಂತೋಷಹುಟ್ಟಿದ್ದರಿಂದ, ಶಕ್ತರಾದ ಈ ದೊಡ್ಡಮನುಷ್ಯರ ಯೋಗ್ಯತೆಯನ್ನು ಕುರಿತು ಸಂತೋಷಿಸಿ ಸ್ತೋತ್ರ ಮಾಡಿದರು.

ಅನಂತರ ಶ್ರೇಷ್ಠರಾದ ಈಪಂಡಿತರಿಂದ ಹೇಳಲ್ಪಟ್ಟ ವಿಷಯಗಳಲ್ಲಿ ಮುಖ್ಯವಾದ ಸಂಗತಿಗಳನ್ನ ಆಸಭೆಯ ನಿಯತೋಪನ್ಯಾಸಕರಾದ ಬ್ರ. ಮ. ಕೊಕ್ಕೊಂಡ ವೆಂಕಟರತ್ನಪಂತರವರು ಆಂಧ್ರಭಾಷೆಯಿಂದ ವಿವರಿಸಿದತರುವಾಯ, ಆ ಸಭೆಯ ಗೌರವ ಪ್ರಧಾನಕಾರ್ಯದರ್ಶಿಯರಾದ ಬ್ರ. ಮ. ಶ್ರೀ. ಬಿ. ಎ. ಶಿವಶಂಕರ ಪಾಂಡ್ಯಾಯವರು ಮಲ್ಲಿಕಾಮಾಲಿಕೆಗಳಿಂದ ಆ ಉಭಯತ್ರರ ಕಂಠಪ್ರದೇಶವನ್ನಲಂಕರಿಸಿದರು. ಇಂಥಾ ವಿಶೇಷವಾದ ಸಂಗತಿಯನ್ನ ಉಪನ್ಯಾಸ ಮಾಡಿದ ಇವರ ಶಕ್ತಿಯನ್ನು ಕುರಿತು ತುಂಬಾ ಸ್ತೋತ್ರಮಾಡಿದರು.

ಮತ್ತು ಈ ವಿಷಯವನ್ನ ೧೯೦೫ನೇ ಇಸವಿ ಜುಲೈ ೩ನೇ ತಾರೀಖಿನ ನೇಟಿವ್ ಪಬ್ಲಿಕ್ ಒಪೀನಿಯನ್ ಎಂಬ ಇಂಗ್ಲೀಷ್ ಪತ್ರಿಕೆಯಲ್ಲಿಯೂ, ಶ್ರೀ ಆಂಧ್ರಭಾಷಾ ಸಂಜೀ

ವಿನೀ ಎಂಬ ಯುವನಾಮಸಂವತ್ಸರದ ಆಷಾಢ ಶುದ್ಧ ೧೪ ಭಾನುವಾರದ ಪತ್ರಿಕೆಯಲ್ಲಿಯೂ ಸಹ ಛಾಪಿಸಿ ಇದೆ. ನೋಡಬಹುದು.

ಇನ್ನು ಆ ಸ್ಥಳದಲ್ಲಿ ಮಾಡಿದ ನಾಡೀತತ್ವೋಪನ್ಯಾಸ ಸಂಗತಿಯು ಈ ಕೆಳಗೆ ವಿವರಿಸಲ್ಪಡುತ್ತದೆ, ಹ್ಯಾಗಂದರೆ.

(ನಾಡೀತತ್ವೋಪನ್ಯಾಸವು.)

ಮಹಾರಾಜಶ್ರೀ ಹೊಸಪಂಡಿತ ಭೀಮರಾಯರವರು ಹೇಳುತ್ತಾರೆ—

ಸಭ್ಯರುಗಳಿರಾ, ಸಮಸ್ತವಿದ್ಯೆಗಳಿಗೂ ಪುನರುಜ್ಜೀವನ ಸಾಧಕವಾದ ಸಕಲ ಪಂಡಿತ ಮಂಡಲಿಗೆ ಮಣಿಮಂಡನವಾದ ಸಾರ್ಥಕಾಭಿಧಾನವುಳ್ಳ ಸನಾಥವಾದ ಈ ಹಿಂದೂ ಶ್ರೇಯೋಭಿವರ್ಧಿನೀ ಸಭೆಯು ಸರ್ವೋತ್ಕೃಷ್ಟವಾಗಿ ಜೈಸಲಿ.

ನಾಡೀತತ್ವವೆಂಬ ವಿದ್ಯೆಯಿಂದ ಜ್ಞಾನವಂತರ ಮನಸ್ಸಿಗೆ ಆನಂದವನ್ನುಂಟುಮಾಡಿ ಬಹುಮಾನರೂಪವಾದ ಕೀರ್ತಿಯೆಂಬ ದ್ರವ್ಯಾರ್ಜನೆ ಮಾಡಲಿಚ್ಛೈಸಿ ನಾನು ಈ ಚನ್ನಪಟ್ಟಣಕ್ಕೆ ಬಂದೆನು.

ಇಲ್ಲಿ ಹಿಂದೂ ಶ್ರೇಯೋಭಿವರ್ಧಿನೀ ಸಭೆಯವರಿಂದ ಪ್ರೇರಿಸಲ್ಪಟ್ಟು ನನ್ನಿಂದ ರಚಿಸಿ ಬರಿಸೋಣಾದ ನಾಡೀ ತತ್ವೋಪನ್ಯಾಸವನ್ನು ನನ್ನ ಅನುಗತರಾದ ಬ್ರಹ್ಮಶ್ರೀ ಕಲ್ಲಪ್ಪೀ ಶಾಮಾಚಾರ್ಯರು ಈಗ ಕರ್ನಾಟಕ ಭಾಷೆಯಲ್ಲಿ ಓದಬಲ್ಲರು, ಮತ್ತು ತತ್ಸಂಧರ್ಭಾನುಸಾರವಾಗಿ ಅಗಾಗ್ಯೆ ಕೆಲವು ವಿಷಯಗಳನ್ನು ವಿಶದವಾಗಿ ನಾನೂ ಕರ್ನಾಟಕ ಭಾಷೆಯಿಂದ ಉಪನ್ಯಾಸಮಾಡುತ್ತೇನೆ. ಅದ್ದರಿಂದ ಈಗಲೀಸಭೆಯನ್ನು ಅಲಂಕರಿಸುತ್ತಿರುವ ಸಭ್ಯರುಗಳೆಲ್ಲಾ ಸಾದರವಾಗಿ ಅವಧರಿಸಬೇಕೆಂದು ಕೋರುತ್ತೇನೆ ಎಂಬದಾಗಿ ಹೊಸಪಂಡಿತ ಭೀಮರಾಯರವರು ಹೇಳಿದರು. ತರುವಾಯ ಕಲ್ಲಪ್ಪೀ ಶ್ಯಾಮಾಚಾರ್ಯರು ಓದಲಿಕ್ಕಾರಂಭಿಸಿದರು.

ಸಭಾಜನಗಳಿರಾ

(ಶರೀರಮಾದ್ಯಂಖಲುಧರ್ಮಸಾಧನಂ) ಎಂಬ ವಚನವನ್ನು ಎಲ್ಲರೂ ಅಂಗೀಕರಿಸಿದ್ದಾರಲ್ಲವೆ, ಮತ್ತೂ ಅನುಭವದಿಂದ ಸಹಿತವಾಗಿ ಅದರ ಅರ್ಥವನ್ನು ಸಮಗ್ರವಾಗಿ ತಿಳಿದುಕೊಂಡಿದ್ದಾರಲ್ಲವೆ, ಹಾಗೆ ಆಗಿರುವದ್ದರಿಂದ ಶರೀರೋತ್ಪತ್ತಿ ಸ್ಥಿತಿ ವಿನಾಶಗಳನ್ನು ತಿಳಿದು ವಿಶೇಷವಾಗಿ ಶಾಸ್ತ್ರಾನುಭವಜ್ಞಾನವುಳ್ಳವರಾಗಿ ಬಹುಕಾಲ ಜೀವಿಸುವರು. ಆ ಜೀವಿತಕಾಲದಲ್ಲಿ ಸದಾರೋಗ್ಯವುಳ್ಳವರಾಗಿ ಪ್ರಕಾಶಿಸಬೇಕಾದ್ದು ಎಲ್ಲರಿಗೂ ಮುಖ್ಯಕಾರ್ಯವು. ಆದರೂ ಕೆಲವರು ಶಾಸ್ತ್ರಜ್ಞಾನವಿಲ್ಲದೆ ಕೇವಲ ಅನುಭವ ಜ್ಞಾನದಿಂದಲೇ ಈ ಮಹಾಕಾರ್ಯವನ್ನು ಸಾಧಿಸಿಕೊಳ್ಳುತ್ತೇವೆಂದು ಭಾವಿಸುತ್ತಾರೆಯಾಗಿ ಅವರ ಅಭಿಪ್ರಾಯವು ಗಣನೆಗ ಯೋಗ್ಯವಾದ್ದಲ್ಲವು, ಯಾತಕ್ಕಂದರೆ—ಅನುಭವಜ್ಞಾನದಿಂದಲೇ ಯಾವ ಮಹಾಕಾರ್ಯವನ್ನೂ ಸಾಧಿಸಿಕೊಳ್ಳಬಹುದೆಂತ ತಿಳಿಯುವದು ಶಾಸ್ತ್ರಜ್ಞಾನಾಭಾವದಿಂದಲೇ,

ಹೊರ್ತು ಬೇರೆ ಕಾರಣದಿಂದ ಅಲ್ಲ. ತಿರ್ಯಗ್ಜಂತುಗಳು ಶಾಸ್ತ್ರಜ್ಞಾನ ಸಂಪಾದನಕ್ಕೆ ಶಕ್ತಗಳಲ್ಲವಾಗಿ ಅನುಭವಜ್ಞಾನದಿಂದಲೇ ಯಾವಕಾರ್ಯವನ್ನಾದರೂ ನೆರವೇರಿಸಿಕೊಳ್ಳುವವು. ಅದು ಯುಕ್ತವು. ಮನುಷ್ಯರುಗಳು ಶಾಸ್ತ್ರಜ್ಞಾನ ಸಂಪಾದನಕ್ಕೆ ಕಾರಣವಾದ ಬುದ್ಧಿವೈಶದ್ಯವುಳ್ಳವರಾದಾಗ್ಯೂ ಶಾಸ್ತ್ರಜ್ಞಾನವನ್ನ ಪಡಿಯದೆ ಕೇವಲ ಅನುಭವಜ್ಞಾನವೇ ಗತಿಯೆಂದು ನಂಬಿಯಿರುವದರ ದೆಶೆಯಿಂದ ಅವರುಗಳು ಎಂಥಾವರೆಂದು ಅನ್ನಿಸಿಕೊಳ್ಳುವರೋ ಬುದ್ಧಿವಂತರು ಬಹಳ ಸುಲಭವಾಗಿ ತಿಳಿಯಬಹುದು. ನಾನ್ಯಾತಕ್ಕೆ ಹೇಳಬೇಕು.

ಮತ್ತು ನಿಸರ್ಗಜವಾದಂಥಾ ಜ್ಞಾನವು ಬೇರೆ ಒಂದು ಉಂಟು. ಇದರ ದೆಶೆಯಿಂದಲೇ ಜಲಪಕ್ಷಿಗಳು ಅಂಡದಲ್ಲಿದ್ದು ಹೊರಕ್ಕೆ ಬಂದಕೂಡ್ಲೆ ಈಜುತ್ತವೆ. ಮಿಕ್ಕ ಪಕ್ಷಿಗಳೆಲ್ಲಾ ಹಾರುತ್ತವೆ. ಮಕ್ಕಳು ಹುಟ್ಟಿದಕೂಡ್ಲೆ ಅಳುತ್ತವೆ. ಆದ್ದರಿಂದ ಈ ನಿಸರ್ಗಜಜ್ಞಾನವೂ, ಅನುಭವಜ್ಞಾನವೂ ಸಹ ಶಾಸ್ತ್ರಜ್ಞಾನದೊಡನೆ ಸಮವಾದ್ದಲ್ಲ. ಸಹಸ್ರಮಾತುಗಳ್ಯಾಕೆ.

ಸ್ವಾಭಾವಿಕಜ್ಞಾನವು ವಿಜ್ಞಾನಜನ್ಯವಾದ್ದಲ್ಲ. ಅನುಭವಜ್ಞಾನವಾದರೋ ಅದು ಹಾನಿಹೊಂದಿದರೆ ತನ್ನಿವಾರಕವಾದ ಶಾಸ್ತ್ರಜ್ಞಾನವು ಆ ಅನುಭವಜ್ಞಾನದಿಂದ ಬಂದ ಹಾನಿಯನ್ನ ಹೋಗಲಾಡಿಸುವದು.

ಆದ್ದರಿಂದ ಶಾಸ್ತ್ರಜ್ಞಾನವೇ ಸರ್ವೋತ್ಕೃಷ್ಟವೆಂದು ಪ್ರಸಿದ್ಧವಾಗಿಧೆ. ಆದಕಾರಣವೇ ಅಖಿಲಕಲ್ಯಾಣಗುಣಾಕರನಾದ ಭಗವಂತನು ಜೀವಕೋಟಿಗಳಲ್ಲಿ ಮನುಷ್ಯರುಗಳನ್ನು ವಿವೇಕಿಗಳನ್ನಾಗಿ ಸೃಷ್ಟಿಸಿ ಸಮಸ್ತಪ್ರಾಣಿಗಳಿಗೂ ದೀರ್ಘಾಯುರಾರೋಗ್ಯಸಾಧನವಾದ ಆಯುರ್ವೇದವನ್ನ ಅನುಗ್ರಹಮಾಡಿದನು. ಅದು ಅನಾದಿಯಾಗಿಯೂ ಋಗ್ವೇದಕ್ಕೆ ಉಪವೇದವಾಗಿಯೂ ಪ್ರಕಾಶವಾಯಿತು. ಮತ್ತು ವೈದ್ಯಶಾಸ್ತ್ರವೆಂದು ಪ್ರಸಿದ್ಧಿಯನ್ನು ಹೊಂದಿತು.

ಇಂಥಾ ವೈದ್ಯಶಾಸ್ತ್ರವು ಅನುಭವಕ್ಕೆ ಅನುಸಾರವಾಗಿ ಕೆಲವು ಬುದ್ಧಿವಂತರುಗಳಿಂದಲೇ ಕಲ್ಪಿಸಲ್ಪಟ್ಟಿಧಯೋ ಹೊರ್ತು ದೈವಕೃತವಾದ್ದಲ್ಲವೆಂದು ಕೆಲವರು ವಾಗ್ವಾದಮಾಡುತ್ತಾರೆ. ಪರಿಶೀಲನೆಮಾಡಲಾಗಿ ವೈದ್ಯಶಾಸ್ತ್ರವು ಮನುಷ್ಯಕಲ್ಪಿತವೆಂಬ ಹೇಳಿಕೆಯು ಕಾಲಕ್ರಮವಾಗಿ ರಚಿಸಲ್ಪಟ್ಟಿರುವ ಗ್ರಂಥ ಸಮುಚ್ಚಯಕ್ಕೆ ಹೇಳಲೊಪ್ಪುವದೇ ಹೊರ್ತು ಅನಾದಿಸಿದ್ಧವಾದ ಆಯುರ್ವೇದಕ್ಕೆ ಒಪ್ಪಲಾರದು. ಯಾತಕ್ಕೆಂದರೆ—ಭಗವಂತನು ಸರ್ವಜ್ಞನಾಗಿಯೂ ಸರ್ವಶಕ್ತಿಯುಕ್ತನಾಗಿಯೂ ಯಿರುವದರಿಂದ ಶರೀರಸೃಷ್ಟಿ ಮಾಡಿದಂತೆ ತದ್ರಕ್ಷಣಸಮರ್ಥವಾದ ಆಯುರ್ವೇದವನ್ನು ಶರೀರಿಗಳಿಗೆ ಅನುಗ್ರಹಿಸಿದನೆಂದು ಬುದ್ಧಿವಂತರೆಲ್ಲರೂ ಪರಮಸುಲಭವಾಗಿ ಗ್ರಹಿಸಬಹುದು. ಅದಕ್ಕೆ ದೃಷ್ಟಾಂತ

ವನ್ನು ಕುರಿತು ದೂರವಾಗಿ ಆಲೋಚಿಸಿಕ್ಕೊಂಡು ಹೋಗಕೆಲಸವಿಲ್ಲ. ಈ ಸಮಸ್ತ ಭೂಮಂಡಲದಲ್ಲಿ ಸರ್ವಜಂತುಗಳಿಗೂ ಭಕ್ಷ್ಯಗಳೂ, ಔಷಧಿಗಳೂ ಅನಂತವಾಗಿ ಹುಟ್ಟಿರುವದೇ ಸಾಕಾಗಿರುತ್ತೆ. ಹಾಗಿರುವಲ್ಲಿ ತದುಪಯೋಗಸಾಧನವಾದ ಆಯುರ್ವೇದ ಒಂದು ಭಗವಂತನಿಂದ ನಿರ್ಮಾಣಮಾಡಲ್ಪಟ್ಟಂಥಾದ್ದಾಗಿ ಯಾಕೆ ಇರಕೂಡದು. ಇಲ್ಲವೆಂಬದಾಗಿ ಸಾಧಿಸೋಣದರಿಂದ ವಾದಿಸುವವನಿಗೆ ಪ್ರಯೋಜನವೇನು. ಅದು ಎಂಥಾದ್ದಾಗಿಯೇ ಇರಲಿ, ಈವಸ್ತು ಇಂಥಿಂಥಾ ಪ್ರಯೋಜನಗ ಗೆ ಬರುವದು ಎಂಬ ಜ್ಞಾನ ಅನುಭವದಿಂದಲೇ ಉಂಟಾಗುವದು ಎಂಬದಾಗಿ ಹೇಳತಕ್ಕವರು ಎಲ್ಲಾವಸ್ತುಗಳನ್ನೂ ತಿಳಿಯಬಲ್ಲರೆ, ಎಲ್ಲಾ ಪದಾರ್ಥಗಳ ಗುಣಗಳನ್ನೂ ತಿಳಿದುಕೊಳ್ಳುವದಕ್ಕೆ ಮನುಷ್ಯನ ಆಯುಷ್ಕಾಲ ಸಾಕೇ ಆದರೆ ಬಹುಕಾಲಜೀವಿಸಿದ ಮಹರ್ಷಿಗಳು ಆಯುರ್ವೇದಕ್ಕೆ ವ್ಯಾಖ್ಯಾನ ಮಾಡಿದರೇ ಹೊರ್ತು ನೂತನವಾಗಿ ಮೂಲಗ್ರಂಥ ಬೇರೆ ಮಾಡಲಿಲ್ಲ. ಆದ್ದರಿಂದ ದಿಕ್ಕಾಲಾದ್ಯನವಚ್ಛಿನ್ನನಾದ ಸರ್ವಜ್ಞನಾದ ಸರ್ವಶಕ್ತಿಸಂಯುಕ್ತನಾದ ಪರಮೇಶ್ವರನೇ ಆಯುರ್ವೇದವನ್ನು ಮಾಡಿದ್ದಾನೆಂಬುವದಕ್ಕೆ ಸಂದೇಹಪಡಕೆಲಸವಿಲ್ಲ.

ಮತ್ತು ಈ ಆಯುರ್ವೇದವು ಅನಾದಿಸಿದ್ಧವಾದ್ದೆಂಬುವದಕ್ಕೆ ಕೆಲವು ಪ್ರಮಾಣಗಳು ಉದಹರಿಸಲ್ಪಡುತ್ತವೆ, ಏನಂದರೆ—

॥ ಶ್ಲೋ ೧ ॥ ಏವಂಚತುರ್ಣಾಂವೇದಾನಾಮುಪವೇದಚತುಷ್ಟಯಂ ॥ ಋಗ್ವೇದಸ್ಯಾಯುಷೋವೇದೋಯಜುಷೋಧನುರಾಹ್ವಯಃ ॥ ಸಾಮ್ನೋಗಾಂಧರ್ವವೇದಸ್ಯಾದರ್ಥಶಾಸ್ತ್ರಮಥರ್ವಣಃ ॥ ಇದರಿಂದ ಆಯುರ್ವೇದವು ಋಗ್ವೇದಕ್ಕೆ ಉಪವೇದವೆಂದುನಿರ್ಧರವಾಗುವದು.

“ಮತ್ತೂ, ಪರಮಕಾರಣೀಭೂತಂ ಪರಬ್ರಹ್ಮ ಸಕಲಜೀವನೋಪಕಾರಕಮಾಯುರ್ವೇದಂ ಪ್ರಜಾಪತಿಂಬ್ರಹ್ಮಾಣಂಪ್ರತಿ ಅಜಿಗ್ರಹತ” ಎಂಬ ಆಯುರ್ವೇದ ಭಾಷ್ಯವಚನವೂ ತದನಾದಿಸಿದ್ಧಿಯನ್ನು ತಿಳಿಸುತ್ತದೆ.

ಮತ್ತೂ, ಆಯುರ್ವೇದೋಪದೇಶೇಷು ವಿಧೇಯಃಪರಮಾದರಃ ॥ ಬ್ರಹ್ಮಾಸ್ಮೃತ್ವಾಯುಷೋವೇದಂ ಪ್ರಜಾಪತಿಮಜಿಗ್ರಹತ ॥ ಸೋಶ್ವಿನೌತೌಸಹಸ್ರಾಕ್ಷಂ ಸೋತ್ರಿಪುತ್ರಾದಿಕಾನ್ಮುನೀನ್ ॥ ತೇಗ್ನಿವೇಶ್ಯಾದಿಕಾಂಸ್ತೇತುಪೃಥಕ್‌ತಂತ್ರಾಣಿತೇನಿರೆ ॥ ಎಂದು ಬಾಹಟಗ್ರಂಥವು ಪ್ರಕಟಿಸುತ್ತದೆ. ಇದರಿಂದ ಆಯುರ್ವೇದಕ್ಕೆ ಅನಾದಿತ್ವ ಸಿದ್ಧವಾದ್ದಲ್ಲದೆ ತತ್ಪ್ರವರ್ತಕ ಪರಂಪರೆಯನ್ನೂ ತಿಳಿಸುತ್ತಲಿದೆ.

ಮತ್ತೂ, ನಮ್ಮ ವೈದ್ಯಶಾಸ್ತ್ರದಲ್ಲಿ ಅನೇಕವಾದಗ್ರಂಥಗಳು ಹುಟ್ಟಿ ಇರುತ್ತವೆ. ಆ ಗ್ರಂಥಗಳನ್ನೆಲ್ಲಾ ತಿಳಿಯುವದಕ್ಕೆ ಶಕ್ಯವೆ, ಅಲ್ಲ. ಆದರೂ ಕೆಲವು ವಿವರಿಸಲ್ಪಡುತ್ತದೆ, ಏನಂದರೆ—

॥ ಶ್ಲೋ ॥ ಹ್ಯಾಸಾರ್ಣವಂಚಾಹಟಂಚಪಾರಿಜಾತಂಚಕೌಮುದೀ । ನಾಗಾರ್ಜುನಂಚಕಾಪಾಲಂದಾಮೋದರಮತಂತಥಾ ॥ ರಸಪ್ರೈಕ್ಟಂಚಂದ್ರಸಾರಂಸೂತರಾಜಂಚಟಿಂಕಣಂ । ಕಲ್ಯಾಣೀಭೇಷಜಂಕಲ್ಪಂಸೂತ್ರಸ್ಥಾನಂಚಸಂಗ್ರಹಂ ॥ ಶಾರೀರಂವೀರಭಟ್ಟೀಯಂ ವೈದ್ಯಾಧಿಕ್ಯಂತಥೈವಚ । ಸೋಮನಾಥಂಮಹಾಶಾಸ್ತ್ರಂನಂದಿನಾಥಂಚಿಕಿತ್ಸಕಂ ॥ ಆಶ್ವಿನೇಯಂತಾರಸೇಂದ್ರಂಚೂಡಾಮಣಿಮತಂತಥಾ । ಚಂದ್ರಜ್ಞಾನಂಚಕೃಷ್ಣೀಯಂವಾಸಿಷ್ಠಂಚಪುರಾತನಂ ॥ ಈರೀತಿಯಾಗಿ ಇನ್ನೂ ಕೆಲವು ವೈದ್ಯಗ್ರಂಥಗಳು ಇದ್ದಂತೆ ಸ್ಪಷ್ಟವಾಗುತ್ತಲಿಧೆ. ಮತ್ತೂ ಹಾರೀತರು, ದತ್ತಾತ್ರೇಯರು ಮೊದಲಾದವರು ನಾಡೀ ಶಾಸ್ತ್ರಗ್ರಂಥಗಳನ್ನ ಲೋಕೋಪಕಾರಾರ್ಥವಾಗಿ ರಚಿಸಿ ಇರುತ್ತಾರೆ.

ಆದರೆ ಮುಂಚೆ ನಮ್ಮದೇಶದಲ್ಲಿ ಈವಾಗ ಇರುವಂತೆ ಮುದ್ರಾಕ್ಷರಶಾಲೆಗಳು ಇರಲಿಲ್ಲವಾಗಿ ಇಂಥಾ ಗ್ರಂಥರತ್ನಗಳು ಪ್ರಕಾಶಕ್ಕೆ ಬರಲಿಲ್ಲ ಅವು ಎಲ್ಲ್ಯಾದರೂ ಬಂದು ಕಡೆಯಲ್ಲಿ ಇದ್ದಾಗ್ಯೂ ಅದರಲ್ಲಿ ಅಗತ್ಯವುಂಟಾಗಿ ಓದುವವರೂ ಕಾಣಬರಲಿಲ್ಲ. ಯಾರಾದರೂ ಓದಲಿಚ್ಛೆಯುಳ್ಳವರಾದಾಗ್ಯೂ ಪಂಡಿತರುಗಳು ಅಸೂಯಾಪರರಾದಕಾರಣ ಕಪಟವುಳ್ಳವರಾದರು. ಸುಖಪ್ರಮತ್ತರಾದ ಪ್ರಭುಗಳು ಇಂಥಾ ಗ್ರಂಥಗಳನ್ನೂ ಪಂಡಿತರುಗಳನ್ನೂ ಸನ್ಮಾನಿಸಿದವರಾಗಲಿಲ್ಲ. ಆದ್ದರಿಂದ ನಮ್ಮ ಸೀಮೆಯಲ್ಲಿ ವೈದ್ಯಶಾಸ್ತ್ರವು ಪ್ರಕಾಶಕ್ಕೆ ಬರಲಿಲ್ಲ.

ಅದು ಹೀಗೆ ಆಗುವದಕ್ಕೆ ಮತ್ತೊಂದು ಕಾರಣವುಂಟು. ಅದನ್ನ ಹೇಳಿದರೆ ಕೆಲವರಿಗೆ ಕೋಪಬಂದೀತೆಂದು ಊಹಿಸುತ್ತೇನೆ. ಆದಾಗ್ಯೂ ವಿಚಾರಮಾಡಿದಲ್ಲಿ ಸರ್ವಜನಾಂಗೀಕಾರವೇ ಆದೀತೆಂದು ತಿಳಿದು ಹೇಳುತ್ತೇನೆ. ನಮ್ಮವರಲ್ಲಿ ಒಬ್ಬರೂ ಕ್ರಮವಾಗಿ ಶಾಸ್ತ್ರಾಭ್ಯಾಸಮಾಡದೆ ಕೇವಲ ಅನುಭವವನ್ನ ಅವಲಂಬಿಸಿ, ವೈದ್ಯರೆಂಬ ಹೆಸರಿಟ್ಟುಕೊಂಡು, ರೋಗಿಗಳ ಕೈನೋಡಿ, ತೋಚಿದ್ದನ್ನ ಹೇಳಿ, ಇದ್ದದ್ದನ್ನ ಕೊಟ್ಟು, ಅದರಿಂದ ಗುಣವಾದರೆ ತಮ್ಮಿಂದಲೂ, ತಮ್ಮ ಔಷಧದಿಂದಲೂ ಗುಣವಾಯಿತೆಂದು ಅಂದುಕೊಳ್ಳುತ್ತಾರೆ. ಅಷ್ಟುಮಾತ್ರವೇಅಲ್ಲದೆ, ಇನ್ನೂ ಕೆಲವರು ಅನ್ಯರೆಷ್ಟರವರು ನಾನೆಷ್ಟರವ ಎಂದು ಆತ್ಮಸ್ತುತಿಯನ್ನೂ, ಪರನಿಂದೆಯನ್ನೂ ಸಹ ಮಾಡುವರು. ತಮ್ಮ ಊಹೆಯೂ ಮತ್ತು ಔಷಧವೂ ನಿರರ್ಥಕವಾದರೂ, ಅನರ್ಥಾವಹವಾದರೂ, ರೋಗಿಗಳ ದುರದೃಷ್ಟವೆಂಬುವರು, ಮತ್ತೂ ಶಾಸ್ತ್ರವನ್ನೂ ದೂಷಿಸುವರು. ಈ ಪ್ರಕಾರ ಶಾಸ್ತ್ರಬಲಹೀನರಾದ ನಮ್ಮ ವೈದ್ಯವೇಷಧಾರಿಗಳು ಬಹಳವರು. ಇದರದೆಶೆಯಿಂದ ವೈದ್ಯನಾಮಧಾರಿಗಳು ಅಯೋಗ್ಯರೆಂದೆನಿಸಿಕೊಳ್ಳುವದಲ್ಲದೆ, ಮಹಾಮಹನೀಯವಾದ ನಮ್ಮ ವೈದ್ಯಶಾಸ್ತ್ರವನ್ನೂ ಕೂಡಾ ದೂಷ್ಯವಾಗುವಹಾಗೆ ಮಾಡುತ್ತಾರೆ. ಅಯ್ಯೋ—ನಮ್ಮ ವೈದ್ಯಶಾಸ್ತ್ರವು ಈಗ ಇಂಥಾ ಅವಸ್ಥೆಯನ್ನು ಹೊಂದಿತೆ !

ಸಭ್ಯರುಗಳಿರಾ, ಈ ಪ್ರಕಾರ ಇಂಥಾ ದೆಶೆಯನ್ನು ಹೊಂದಿರುವ ನಮ್ಮ ವೈದ್ಯಶಾಸ್ತ್ರವನ್ನ ನಾವು ಪುನರುಜ್ಜೀವನವುಳ್ಳದ್ದನ್ನಾಗಿಮಾಡಿ ವೃದ್ಧಿಹೊಂದಿಸಬಾರದೆ. ನಮ್ಮವರಿಗೆ ಇದಕ್ಕಿಂತ ಮಿಂಚಿದಕಾರ್ಯ ಯಾವದುಂಟು. ಮತ್ತೂ ಈ ಶಾಸ್ತ್ರವು ಯಾವ ಕಾಲದಲ್ಲೋ ವೃದ್ಧಿಹೊಂದಿದ್ದು, ಕಾಲಕ್ರಮವಾಗಿ ಜೀರ್ಣಿಸಿ ಜೀರ್ಣಿಸಿ, ಕೊನೆಗೆ ಅಂದರೆ ನಮ್ಮ ಕಾಲದಲ್ಲಿ ನಾಮಮಾತ್ರಾವಶೇಷವಾಗಿ ಇರೋಣ ನಮಗೆ ಕೀರ್ತಿಕರವೆ ಅಲ್ಲ. ಆದಾಗ್ಯೂ ಕಾರ್ಯವಲ್ಲವೆ ಪ್ರಧಾನವಾದದ್ದು. ಪ್ರಕೃತದಲ್ಲಿ ಎಲ್ಲಾದಕ್ಕಿಂತಲೂ ಹೆಚ್ಚಾದ ಇಂಗ್ಲೀಷ್ ವೈದ್ಯಶಾಸ್ತ್ರವೇ ಸಾಕೆಂದು ನಮ್ಮವರು ಕೆಲವರು ತಿಳಿದುಕೊಂಡು ಇದ್ದಾರೆ. ಇದೂಅಲ್ಲದೆ ಇಂಗ್ಲೀಷ ಔಷಧಶಾಲೆಗಳನ್ನು ನಮ್ಮವರಲ್ಲಿ ಕೆಲವರು ದೊಡ್ಡಮನುಷ್ಯರುಗಳು ಅಲ್ಲಲ್ಲಿ ಸ್ಥಾಪಿಸಿ ಅಭಿವೃದ್ಧಿಗೆ ತಂದಿರುತ್ತಾರೆ. ಅದು ಯುಕ್ತವೇಸರಿ, ಆದಾಗ್ಯೂ ತಮ್ಮ ಪ್ರಾಚೀನ ವೈದ್ಯಶಾಸ್ತ್ರವನ್ನೂ ಮತ್ತು ಅದನ್ನು ತಿಳಿದಿರುವ ಪಂಡಿತರುಗಳ ಯೋಗ್ಯತೆಯನ್ನೂ ಅರಿಯದೆ ಇದ್ದಾರೆ. ವಿಚಾರಮಾಡಿದರೆ ತಿಳಿಯಬಹುದು.

ಹೀಗೆ ನಿಶ್ಶೇಷವಾಗಿ ವಿಚಾರಿಸದೆ ಇರೋಣದರದೆಶೆಯಿಂದ ಅನ್ಯಾಸಕ್ತರಾದಂಥಾ ನಮ್ಮ ಜನಗಳು ಅವರಲ್ಲಿ ಎಷ್ಟು ಪ್ರೀತಿವುಳ್ಳಂಥವರಾದಾಗ್ಯೂ ಸ್ವಶಾಸ್ತ್ರಜ್ಞಾನ ಸ್ವಲ್ಪವೂ ಇಲ್ಲದವರೆಂದು ಆ ಇಂಗ್ಲೀಷ್ ಜನಗಳಿಂದ ತಾವೇನೆ ದೂಷಿತರಾದರು. ಇನ್ನು ನಮ್ಮವರ ಮಾತು ಯಾತಕ್ಕೆ.

ಆದ್ದರಿಂದ ನಮ್ಮವರು ಸ್ವವೈದ್ಯಶಾಸ್ತ್ರವನ್ನೂ ತದಭಿಜ್ಞರನ್ನೂ ತಮ್ಮ ಶಕ್ತಿ ಇದ್ದಷ್ಟು ಆದರಿಸಿ, ಸ್ವದೇಶ ಶಾಸ್ತ್ರಾಭಿಮಾನಮಾನಿನೀಯರೆಂದು ಎಲ್ಲಾ ಜನಗಳಿಂದಲೂ ಪದೆಪದೆ ಪ್ರಶಂಸಿಸಲ್ಪಡುವದು ಯುಕ್ತವು. ಆದರೆ ನಮ್ಮ ವೈದ್ಯಶಾಸ್ತ್ರವನ್ನು ಕುರಿತ್ತು ಇಷ್ಟು ಹೇಳಬೇಕು, ಏನಂದರೆ—ಆ ಗ್ರಂಥಗಳು ಪೂರ್ವಿಕರ ಜ್ಞಾನಕ್ಕೆ ತಕ್ಕಹಾಗೆ ಸಂಸ್ಕೃತ ಭಾಷೆಯಿಂದ ಪದ್ಯಾತ್ಮಕವಾಗಿ ಮಾಡಲ್ಪಟ್ಟಿರುವದ್ದರಿಂದ, ಅದರಲ್ಲಿ ಎಷ್ಟು ಗುಣಾಧಿಕ್ಯವಿದ್ದಾಗ್ಯೂ, ಅದನ್ನು ತಿಳಿಯುವದಕ್ಕೆ ಈಗಿನವರಿಗೆ ಸಾಮರ್ಥ್ಯವಿಲ್ಲವಾಗಿ ಅವುಗಳು ಪ್ರಕಾಶಕ್ಕೆ ಬರಲಿಲ್ಲಾ. ಇನ್ನುಮೇಲೆ ತಚ್ಛಾಸ್ತ್ರಾರ್ಥವನ್ನು ದೇಶ ಭಾಷೆಯಿಂದ ತಕ್ಕಷ್ಟು ವ್ಯಕ್ತಪಡಿಸುತ್ತೇನೆ.

ಏನಂದರೆ—ಈ ಲೋಕದಲ್ಲಿ ದೇಹಸೃಷ್ಟಿ ಆರು ವಿಧವಾಗಿ ಇದೆ. ಅವು ಯಾವವಂದರೆ—ಜರಾಯುಜಗಳು, ಅಂಡಜಗಳು, ಸ್ವೇದಜಗಳು, ಉದ್ಭಿಜಗಳು, ಸಾಂಸಿದ್ಧಿಕಗಳು, ಸಾಂಕಲ್ಪಿಕಗಳು, ಇವುಗಳು. ಮನುಷ್ಯರು ಜರಾಯುಜರು, ಪಕ್ಷಿ ಸರ್ಪಾದಿಗಳು ಅಂಡಜಗಳು, ಸೊಳ್ಳೆ, ಮೊದಲಾದದ್ದು ಸ್ವೇದಜಗಳು, ವೃಕ್ಷಾದಿಗಳು ಉದ್ಭಿಜಗಳು, ರಕ್ತ ಬೀಜಾದಿಗಳು ಸಾಂಸಿದ್ಧಿಕ ಶರೀರಗಳು, ಸನಕಾದಿಗಳು ಸಾಂಕಲ್ಪಿಕ ಶರೀರಗಳು. ಇನ್ನು ಸರ್ವ ಜಂತುಗಳಿಗೂ ನಾಡೀಸ್ಥಿತಿ ಹೇಳಲ್ಪಡುವದು. ಹ್ಯಾಗಂದರೆ—ಎಪ್ಪತ್ತುಸಾವಿರ ನಾಡಿಗಳು ಕುದುರೆಗೆ, ಎಂಭತ್ತು ಸಾವಿರ ನಾಡಿಗಳು, ಆನೆ ಒಂಟೆ, ಎ

ಎತ್ತು; ಎಮ್ಮೆ, ಹುಲಿ, ಕರಡಿ, ಕಾಡಹಂದಿ ಇವುಗಳಲ್ಲಿ ನಲವತ್ತು ಸಾವಿರ ನಾಡಿಗಳು, ಕುರಿ, ಆಡು, ಹಂದಿ, ಬೆಕ್ಕು, ನರಿ, ನಾಯಿ, ಕತ್ತೆ, ಮೊಲ ಇವುಗಳಲ್ಲಿ, ಸಾವಿರದ ನೂರು ನಾಡಿಗಳು ಇವೆ. ಜಲಪ್ರಾಣಿಗಳಲ್ಲಿ ಅರವತ್ತುನಾಲ್ಕು ಸಾವಿರ ನಾಡಿಗಳುಂಟು. ವೃಕ್ಷಾದಿಸ್ಥಾವರಗಳಲ್ಲಿ ಐದು ಸಾವಿರ ನಾಡಿಗಳುಂಟು. ಎರಡು ಸಾವಿರ ನಾಡಿಗಳು ಬೇರದುಂಬೆಗಳಲ್ಲಿ, ನೋಣಗಳಲ್ಲಿ, ಸೊಳ್ಳೆಗಳಲ್ಲಿ ಉಂಟು ಅಣುತರಕ್ಕಿಂತ ಸೂಕ್ಷ್ಮವಾಗಿರುವ ಶರೀರಗಳಲ್ಲಿ ನೂರು ನಾಡಿಗಳು ಇವೆ. ಇರುವೆ ಮೊದಲಾದವುಗಳ ಶರೀರದಲ್ಲಿ ನೂರಏಳು ನಾಡಿಗಳು. ೭೨,೦೦೦ ನಾಡಿಗಳು ಮನುಷ್ಯ ಶರೀರಗಳಲ್ಲಿ ಕಾಣಲ್ಪಡುತ್ತವೆ. ಈ ಮನುಷ್ಯ ಶರೀರದಲ್ಲಿ ಎಪ್ಪತ್ತೆರಡು ಸಾವಿರ ನಾಡಿಗಳ ಪೈಕಿ ಹನ್ನೆರಡು ಸಾವಿರ ನಾಡಿ ತಲೆಯಲ್ಲಿಯೂ, ಎಂಟು ಸಾವಿರ ಭುಜದ್ವಯದಲ್ಲಿಯೂ, ಇಪ್ಪತ್ತೆಂಟು ಸಾವಿರ ಹೃದಯದಲ್ಲಿಯೂ, ಇಪ್ಪತ್ತು ನಾಲ್ಕು ಸಾವಿರ ನಡುವಿನ ಕೆಳಗಿನ ಭಾಗದಲ್ಲಿಯೂ ಇರುವವು. ಈ ಪ್ರಕಾರ ನಾಡಿಗಳು ಹಗ್ಗದಹಾಗೆ ಸರ್ವ ಜಂತುಗಳಿಗೂ, ರಸ, ರಕ್ತ, ಮಾಂಸ, ಮಜ್ಜಾ, ಮೂಳೆ, ಕೊಬ್ಬು, ರೇತಸ್ಸು ಎಂಬ ಸಪ್ತ ಧಾತ್ವಾದಿಗಳಲ್ಲಿ ಎಲ್ಲಾ ಕಾಲದಲ್ಲೂ ಇರುವವು. ಆದ್ದರಿಂದ ವಕ್ಷ್ಯಮಾಣಪ್ರಕಾರವಾಗಿ ವೈದ್ಯರು ನಾಡಿಯನ್ನ ನೋಡಬೇಕು. ಹ್ಯಾಗಂದರೆ, ಹಸುಗಳಿಗೆ ನಾಸಾಪುಟದಲ್ಲಿಯೂ, ಕುದುರೆಗಳಿಗೆ ಕಿವಿಯಲ್ಲಿಯೂ, ಮತ್ತು ಮುಖ, ಮೂಗಿನಕೊನೆ, ಪೃಷ್ಠ ಇವುಗಳಲ್ಲಿಯೂ, ಆನೆಗೆ ಕೆನ್ನೆಗಳಲ್ಲಿಯೂ, ಮನುಷ್ಯರಿಗೆ ಕೈಯಲ್ಲಿಯೂ, ಮತ್ತು ಅನ್ಯ ಜಂತುಗಳಿಗೆ ಆಯಾಯ ದೇಹಸ್ಥಿತಿಯನ್ನನುಸರಿಸಿ ಆಯಾಯ ಸ್ಥಾನದಲ್ಲಿ ನಾಡಿಯನ್ನು ನೋಡತಕ್ಕದ್ದು. ಪೂರ್ವೋಕ್ತವಾದ ೭೨೦೦೦ ನಾಡಿಗಳಲ್ಲಿ ೨೪ ಪ್ರಧಾನ ನಾಡಿಗಳೆಂದು ಹೇಳಲ್ಪಟ್ಟಿವೆ. ಯಾತಕ್ಕೆ ಅಂದರೆ, ದೇಹಕ್ಕೆಲ್ಲಾ ಪ್ರಧಾನವಾದ ದೊಡ್ಡ ನರ ಒಂದು ಹಾವಿನಹಾಗೆ ನಾಭೀಸ್ಥಾನದಲ್ಲಿ ಇರುವದ್ದರಿಂದ ಅದು ಕುಂಡಲೀಸ್ಥಾನನಾಡೀ ಎಂದು ಹೇಳಲ್ಪಡುತ್ತದೆ. ಅದಕ್ಕೆ ಮೇಲೆ ಹತ್ತು ಎಂತಲೂ, ಕೆಳಗೆ ಹತ್ತು ಎಂತಲೂ, ಪಾರ್ಶ್ವದಲ್ಲಿ ಎರಡೆರಡಾಗಿ ನಾಲ್ಕು ಎಂತಲೂ ವಿಭಾಗಿಸಲ್ಪಟ್ಟಿವೆ. ಆದ್ದರಿಂದ ಮುಖ್ಯ ನಾಡಿಗಳು ಇಪ್ಪತ್ತನಾಲ್ಕು ಎಂದು ಎಣಿಸತಕ್ಕದ್ದು. ಅದರಲ್ಲಿ ದಶ ವಾಯುಪ್ರವಾಹಕವಾದ ಕಾರಣ ಹತ್ತು ನಾಡಿಗಳು ಪ್ರಧಾನವಾಗಿ ಗ್ರಹಿಸಲ್ಪಟ್ಟು ಇವೆ. ಅದು ಇಳಾ, ಪಿಂಗಳಾ ಸುಷುಮ್ನಾ, ಗಾಂಧಾರೀ, ಹಸ್ತಿಜಿಹ್ವಾ, ಪೂಷಾ, ಯಶಸ್ವಿನೀ, ಅಲಂಬುಸಾ, ಕುಹೂ, ಶಂಕಿನೀ ಎಂದು ಹೇಳಲ್ಪಟ್ಟವು. ಇಡಾ ಎಡಭಾಗದಲ್ಲಿರುತ್ತೆ. ಪಿಂಗಳಾ ಬಲ ಭಾಗದಲ್ಲಿಧೆ. ಸುಷುಮ್ನಾ ಮಧ್ಯ ಭಾಗದಲ್ಲಿಧೆ. ಗಾಂಧಾರೀ ಎಡ ಕಂಣಿನಲ್ಲಿ, ಹಸ್ತಿಜಿಹ್ವಾ ಬಲ ಕಂಣಿನಲ್ಲಿ, ಪೂಷಾ ಬಲ ಕಿವಿಯಲ್ಲಿ, ಯಶಸ್ವಿನೀ ಎಡಗಿವಿಯಲ್ಲಿ, ಅಲಂಬುಸಾ ಮುಖದಲ್ಲಿ, ಕುಹು ಲಿಂಗದೇಶದಲ್ಲಿ, ಶಂಕಿನೀ ಗುದಸ್ಥಾನದಲ್ಲಿಯೂ ಸಹ ಇರುವವು.

ಮುಖ್ಯವಾಗಿ ಕಂಠವು, ಹೃದಯವು, ಲಲಾಟವು, ಶಿರಸ್ಸು, ಗುಹ್ಯವು, ಪಾದವು, ಮಧ್ಯಮಾಂಗುಳಿ ಇವುಗಳಲ್ಲಿ ಜೀವನಾಡಿ ನೆಲೆಗೊಂಡು ಇರುವದು. ಆದರೆ ಒಂದೇ ನಾಡಿಯು ಐದು ಪ್ರಕಾರ ವಿಭಾಗವಾಗಿ, ಐದು ಕೈ ಬೆರಳುಗಳಲ್ಲಿಯೂ ಇರುವದು. ಇದರಲ್ಲಿ ವಾತ ಪಿತ್ತ ಶ್ಲೇಷ್ಮವೆಂದು ಮೂರು ನಾಡಿಗಳು ಪ್ರಧಾನವಾಗಿ ಗ್ರಹಿಸಲ್ಪಟ್ಟಿವೆ. ವಾತನಾಡಿ, ವಕ್ರಗತಿವುಳ್ಳದ್ದು, ಪಿತ್ತನಾಡಿ ಚಪಲಗತಿವುಳ್ಳದ್ದು, ಶ್ಲೇಷ್ಮನಾಡಿ ಮಂದಗತಿವುಳ್ಳದ್ದು ; ಇದು ಮಣಿ ಕಟ್ಟು ಮೊದಲ್ಗೊಂಡು ಕ್ರಮವಾಗಿರುತ್ತೆ. ಮೇಲೆ ಹೇಳಲ್ಪಟ್ಟ ನಾಡಿಗಳಲ್ಲಿ ಆಯಾಯ ಗತಿಗಳು ತಪ್ಪದೇ ಇದ್ದರೆ, ಆ ಮನುಷ್ಯ ಆರೋಗ್ಯ ದೆಶೆಯನ್ನು ಹೊಂದಿರುವನು. ಆ ಮೂರು ನಾಡಿಗಳಲ್ಲಿ ಸಾಂಕರ್ಯಗತಿ ಹುಟ್ಟಿದರೆ ರೋಗಿಯಾಗಿರುವನು ಆದಾಗ್ಯೂ ಇದಕ್ಕೆ ವಿಶೇಷ ಲಕ್ಷಣಗಳುಂಟು. ಅದೇನಂದರೆ—ದೇಶ, ಕಾಲ, ವಯಸ್ಸು, ಸ್ವಭಾವ, ಔಷಧ, ದೇಹಶಕ್ತಿ, ದಾರ್ಢ್ಯ, ವ್ಯಾಧಿಗಳು ಇಂಥಾವುಗಳಂ ನೋಡಿ ಚಿಕಿತ್ಸಿಸಬೇಕು. ಆದ್ದರಿಂದಲೇ ದೇಶದಲ್ಲಿಯೂ, ದೇಹದಲ್ಲಿಯೂ, ದಿವಾರಾತ್ರಿಗಳಲ್ಲಿಯೂ ಆರು ಋತುಗಳು ಉಂಟಾಗಿ ಇವೆ ಎಂದು ಹೇಳಲ್ಪಟ್ಟಿತು. ಹ್ಯಾಗಂದರೆ—ವಸಂತ ಋತುವಿನಲ್ಲಿ ನಾಡಿ ರಾಜಹಂಸಗತಿವುಳ್ಳದ್ದಾಗಿ ಇರುತ್ತೆ. ಗ್ರೀಷ್ಮ ಋತುವಿನಲ್ಲಿ ಹಂಸಪಾದಗತಿ ಉಳ್ಳದ್ದಾಗಿರುವದು. ವರ್ಷ ಋತುವಿನಲ್ಲಿ ಶತಮೂಲ ದೋಷಾದಿಯಲ್ಲಿಯೂ, ವ್ಯಾಕುಲದಿಂದ ಇರುವ ಇಲಿಯೋಪಾದಿಯಲ್ಲಿಯೂ ಇರುವದು. ಶರತ್ಕಾಲದಲ್ಲಿ ಹಂಸಪಾದಗತಿಯೇ ಉಳ್ಳದ್ದಾಗಿರುವದು. ಹೇಮಂತ ಶೀರಕಾಲದಲ್ಲೀ ಕಪ್ಪೇ ಮತ್ತು ನೀರುಕಾಗೆಗಳ ಗತಿ ಉಳ್ಳದ್ದಾಗಿರುತ್ತದೆ. ಮತ್ತು ವಿಶೇಷವಿಧಿ ಒಂದುಂಟು, ಅದೇನಂದರೆ—ಆವಾಗಲೆ ಸ್ನಾನ ಮಾಡಿದವರು, ಊಟ ಮಾಡಿದವರು ಇವರಿಗೆ ಹಸಿವು ಬಾಯಾರಿಕೆಯಿಂದ, ಬಳಲಿದವರಿಗೆ, ನಡಿಯುವವರಿಗೆ, ಸಾಧನೆ ಮೊದಲಾದ್ದರಿಂದ ಆಯಾಸ ಪಟ್ಟವರಿಗೆ, ಭೂತಾವಿಷ್ಟರಿಗೆ, ಅಳುತ್ತಿದ್ದವರಿಗೆ, ಸ್ತ್ರೀ ಸಂಭೋಗಮಾಡಿದವರಿಗೆ, ಮದ್ಯ ಕುಡಿದವರಿಗೆ, ತಪಸ್ಸು ಮಾಡುತ್ತಿದ್ದವರಿಗೆ, ಭಂಗಿ ತಿನ್ನುವವರಿಗೆ, ಕುಕ್ಕುಟ ಮಂಡೂಕ ಶಶ ಮೊದಲಾದ ಮಾಂಸ ತಿನ್ನತಕ್ಕಂಥವರಿಗೆ ಸಹ ನಾಡಿ ಬಹಳ ವ್ಯತ್ಯಸ್ತವಾಗಿರೋಣದರ ದೆಶೆಯಿಂದ ವೈದ್ಯರು ಹೆಚ್ಚಾದ ಪ್ರಯತ್ನದಿಂದ ನೋಡಬೇಕು. ಸ್ತ್ರೀರುಗಳಿಗೆ ಕುಕ್ಷಿಯ ದಕ್ಷಿಣ ಭಾಗದಲ್ಲೂ ಪುರುಷರಿಗೆ ವಾಮ ಭಾಗದಲ್ಲೂ ಸಹ ಅಗ್ನಿ ಇರುವದು. ದೇಹವು ಶಿವಶಕ್ತ್ಯಾತ್ಮಕವಾದ್ದರಿಂದ ಶಿವಾಂಶ ದಕ್ಷಿಣ ಭಾಗವೆಂದು ಶಕ್ತ್ಯಂಶ ವಾಮ ಭಾಗವೆಂದು ಹೇಳಲ್ಪಡುತ್ತದೆ. ಆದಕಾರಣ ಪುರುಷರಿಗೆ ಬಲಗೈಯಲ್ಲೂ ಸ್ತ್ರೀಗಳಿಗೆ ಎಡಗೈಯಿನಲ್ಲೂ ಸಹ ನಾಡಿ ನೋಡತಕ್ಕದ್ದು.

ವೈದ್ಯನು ರೋಗಿಯ ಕೈಯನ್ನು ಅಂಕುಶಾಕಾರವಾಗಿ ಕೂಡಿಸಿ ಬಲಗೈಯಿನಿಂದ ಹಿಡಿದುಕೊಂಡು ಎಡಕೈ ಬೆರಳುಗಳಿಂದ ಮುಟ್ಟಿ ಅದರ ತತ್ವವನ್ನು ಗ್ರಹಿಸಬೇಕು. ಪಿತ್ತ ಸ್ಥಾನದಲ್ಲಿ ಪಿತ್ತಗತಿ ೧½, ಶ್ಲೇಷ್ಮಗತಿ ೧½, ವಾತಗತಿ ೩ ತೋರಲ್ಪಟ್ಟರೆ ಆರೋ

ಗ್ಯದಶೆ ಎಂದು ಹೇಳಬೇಕು. ಅವುಗಳಲ್ಲಿ ಗತಿ ವ್ಯತ್ಯಾಸವು ತೋರಿದರೆ ತಕ್ಕ ರೋಗ ಗಳನ್ನು ಊಹಿಸಿ ನಿಶ್ಚೈಸಿ ತಿಳಿಯಬೇಕು.

ಮತ್ತು ನಾಡೀ ದೆಶೆಯಿಂದಲೇ ಆಯುಸ್ಸು, ಗಂಡಗಳು, ಗ್ರಹಣಗಳು ಸಹ ತಿಳಿ ದುಕೊಳ್ಳಬಹುದು. ಮತ್ತು ಸ್ತ್ರೀಯರುಗಳಿಗೆ ಪ್ರಥಮಾರ್ತವ ಕಾಲವನ್ನೂ ಸ್ತ್ರೀಪುಂ ಪ್ರಜಾಪ್ರಸವಕಾಲವನ್ನೂ ಸಹ ತಿಳಿಯಬಹುದು. ಕೆಲವರು ನಾಡಿಯಿಂದಲೇ ಶುಭಾ ಶುಭ ಫಲಗಳನ್ನು ಕೂಡಾ ಹೇಳುವರು. ಏತದ್ವಿಷಯದಲ್ಲಿ ಆಯುರ್ವೇದ ಮೊದಲಾದ ಗ್ರಂಥಗಳ ಸಾರವನ್ನು ಸಂಗ್ರಹಿಸಿ ವೈದ್ಯಭೂಷಣವೆಂಬ ಸಂಸ್ಕೃತಭಾಷಾ ಗ್ರಂಥವ ನ್ನು ನಾನು ಮಾಡಿ ಇಧೇನೆ. ಅದರನ್ನ ಶೀಘ್ರಕಾಲದಲ್ಲಿ ಛಾಪಿಸಬೇಕೆಂದು ಯೋಚಿಸಿ ಇಧೇನೆ.

ನಾಡಿಯಿಂದ ತಿಳಿಯತಕ್ಕ ಎಲ್ಲಾ ವಿಷಯವನ್ನೂ ಆ ಗ್ರಂಥದ ದೆಶೆಯಿಂದ ಸರ್ವ ರೂ ವಿಶದವಾಗಿ ತಿಳಿದುಕೊಳ್ಳಬಹುದು. ಈ ಶಾಸ್ತ್ರವನ್ನು ಅಭ್ಯಾಸ ಮಾಡುವದು ಬಹಳ ಕಷ್ಟವೆಂದು ಉದಾಸೀನ ಮಾಡಕೂಡದು. ಯಾವದರಲ್ಲಾಗಲೀ ಶ್ರದ್ಧೆಯುಳ್ಳವ ರಾಗಿ ಶ್ರಮಪಟ್ಟರೆ ಅದು ಸಾಧ್ಯವೇ ಆಗುತ್ತದೆ. ಸಮಸ್ತ ಜನರಿಗೂ ಸುಲಭವಾಗಿ ಒಂದು ಪದ್ಧತಿಯನ್ನು ಹೇಳುತ್ತೇನೆ. ಅದರಿಂದ ಎಲ್ಲರೂ ತಮ್ಮ ಕೈಯನ್ನ ತಾವು ಹಿಡಿದುಕೊಂಡು ನೋಡಿಕೊಳ್ಳಬಹುದು. ಹಾಗೆ ಎರಡನೇಯವರ ತತ್ವವನ್ನೂ ತಿಳಿಯ ಬಹುದು. ಹ್ಯಾಗಂದರೆ—ತರ್ಜನೀಬೆರಳಿನಿಂದ ವಾತ ನಾಡಿಯನ್ನೂ, ಮಧ್ಯ ಬೆರಳಿನಿಂದ ಪಿತ್ತನಾಡಿಯನ್ನೂ, ಅನಾಮಿಕ ಬೆರಳಿನಿಂದ ಶ್ಲೇಷ್ಮನಾಡಿಯನ್ನೂ ತಿಳಿದು ಕೊಳ್ಳಬೇಕು.

ಅದರಲ್ಲಿ ಪಿತ್ತ ಶ್ಲೇಷ್ಮ ನಾಡಿಗಳನ್ನು ತಿಳಿದುಕೊಂಡು, ವಾತ ನಾಡಿಯನ್ನು ತರ್ಜನೀ ಬೆರಳಿನಿಂದ ನೋಡುವಾಗ ಅದು ವಕ್ರಗತಿಯಾಗಿ ಇರುವದು. ಹಾಗೆಯೇ ಒತ್ತಿ ನೋಡಲು, ಗೋಳಾಕೃತಿ ತೋರಿದರೆ ಅದು ಪೃಥ್ವೀಗತಿಯೆಂದೂನೂ, ಸರ್ಪದಹಾಗೆ ಸುತ್ತಿಕೊಳ್ಳುವದಾಗಿ ಯಾವಾಗ ಸ್ಫುರಿಸುತ್ತೋ ಅದು ಕುಂಡಲೀ ಗತಿ ಎಂದೂನೂ ತಿಳಿ ಯತಕ್ಕದ್ದು. ತರುವಾಯ ಅಲ್ಲೇ ಪಿತ್ತಗತಿ ಕಾಣಿಸುವದು. ಅಂಥಾ ಗತಿಗಳು ಎಷ್ಟು ಸಾರಿ ಬೆರಳಿಗೆ ತಗಲಿದ ಹಾಗೆ ತೋರುತ್ತೋ, ಅಷ್ಟು ಲೆಖ್ಖ ಮಾಡಿ ಅವುಗಳನ್ನು ಆಯುಃಪ್ರಮಾಣ, ಸೂಚಕವಾದ ಸಂವತ್ಸರಗಳೆಂದರಿಯಬೇಕು. ಅದು ವೇಗವಾಗಿ ನಡೆಯದೆ ಮಧ್ಯ ಯಾವಾಗ ನಿಂತಹಾಗೆ ತೋರುತ್ತೋ, ಆಯಾ ಸಂಖ್ಯಾಕವಾದ ಸಂವ ತ್ಸರಗಳಲ್ಲಿ ಗಂಡಕಾಲವೆಂದು ಊಹಿಸಬೇಕು. ಹಾಗೆ ನಡೆಯುತ್ತಾ ನಿಶ್ಶೇಷವಾಗಿ ನಿಂತು ಪೃಥ್ವೀಗತಿ ಕಂಡದ್ದಾದರೆ ಆ ಸಂವತ್ಸರದಲ್ಲಿ ಮರಣವಾಗುತ್ತೆಂದು ತಿಳಿಯತಕ್ಕದ್ದು. ಹಾಗೆಯೇ ಪೂರ್ವೋಕ್ತವಾದಂಥಾ ಅನ್ಯವಿಷಯಗಳನ್ನೆಲ್ಲಾ ಸೂಕ್ಷ್ಮಬುದ್ಧಿಯಿಂದ ತಿಳಿದು, ಕೊಳ್ಳಬಹುದು. ಮತ್ತು ರೋಗಿಯ ಶರೀರವನ್ನ ಎಂಟು ವಿಧವಾಗಿ ಪರೀಕ್ಷಿಸಬೇಕೆಂದು ಶಾಸ್ತ್ರವು ಹೇಳುತ್ತಲಿಧೆ. ಅವು ಯಾವವೆಂದರೆ—ನಾಡಿ, ಮೂತ್ರ ಮಲ, ನಾಲಿಗೆ,

ಸ್ವರ, ಸ್ಪರ್ಶ, ರೂಪ, ನೋಟ ಈ ಎಂಟರ ದೆಶೆಯಿಂದಲಾಗಲೀ ಅವುಗಳಲ್ಲಿ ಕೆಲವುಗಳಿಂದಾಗಲಿ ಆ ರೋಗಿಯ ರೋಗದ ನ್ಯೂನಾಧಿಕ್ಯಗಳ ರೀತಿಯನ್ನು ತಿಳಿಯಬಹುದು. ಆ ಎಂಟರಲ್ಲಿ ನಾಡೀ ಪರೀಕ್ಷೆಯು ಸರ್ವೋತ್ಕೃಷ್ಟವಾಗಿರುತ್ತಷ್ಟೆ. ಅದನ್ನು ಕುರಿತೇ ಇಷ್ಟು ಪ್ರಕಟನೆ ಮಾಡಲ್ಪಟ್ಟಿತು ಎಂಬದಾಗಿ ಕಲ್ಲಪ್ಪೀ ಶ್ಯಾಮಾಚಾರ್ಯರು ಓದಿದರು.

ಅಷ್ಟರಲ್ಲೇ ಆ ಹೊಸಪಂಡಿತ ಭೀಮರಾಯರವರು ತಮ್ಮ ಶಾಸ್ತ್ರಾನುಭವಜ್ಞಾನ ಸಾರಾಂಶವನ್ನ ಸಂಕ್ಷೇಪವಾಗಿ ಉಪನ್ಯಾಸಮಾಡಿದರು, ಹ್ಯಾಗಂದರೆ—

ಸಭಾಸದರ್ಗಳಿರಾ—ನಾಡೀ ತತ್ವಜ್ಞಾನದಿಂದ ಅಯಾಯ ಪುರುಷನ ಆಯುಷ್ಕಾಲವನ್ನು ನಿಶ್ಚಯವಾಗಿ ತಿಳಿಯಬಹುದು. ಇದಲ್ಲದೆ ಗಂಡವು ಯಾವಾಗ ಉಂಟಾಗುತ್ತೋ, ಉಂಟಾಗಿ ಇಧೆಯೊ, ಉಂಟಾದೀತೋ ಎಂಬುವದನ್ನ ಸ್ಪಷ್ಟವಾಗಿ ತಿಳಿಯಬಹುದು, ಮತ್ತು ಸ್ತ್ರೀಯರುಗಳಿಗೆ ಮೊದಲನೇ ಋತುಕಾಲವು, ಗರ್ಭಧಾರಣೆಯು, ಸ್ತ್ರೀಪುರುಷ ಪ್ರಜೋತ್ಪತ್ತಿ ಕಾಲವು ಇವುಗಳನ್ನ ವಿಶದವಾಗಿ ಹೇಳಬಹುದು. ಇನ್ನೂ ಸರ್ವಸಾಧಾರಣವಾಗಿ ಸೂರ್ಯ ಚಂದ್ರ ಗ್ರಹಣಗಳ ಸ್ಪರ್ಶಗ್ರಾಸ ಮೋಕ್ಷಕಾಲಗಳನ್ನು ಅಂತರಿಕ್ಷವನ್ನು ನೋಡದೇ ಹೇಳಬಹುದು.

ಮತ್ತು ಶರೀರಿಗಳ ಜನನ ಕಾಲಕ್ಕೆ ಸರಿಯಾಗಿ ಜಾತಕ ಬರೆಯಲ್ಪಟ್ಟು ಇದ್ದರೆ ನಾಡೀತತ್ವಜ್ಞನು ಹೇಳತಕ್ಕದ್ದು ಆ ಜಾತಕಕ್ಕೆ ಸರಿಯಾಗಿರುವದು. ಜಾತಕಫಲವು ಪರೋಕ್ಷ ವಿಷಯಿಕವಾದ್ದರಿಂದ ಒಂದುವೇಳೆ ಭ್ರಮೆಯಿಂದ ತಪ್ಪಿದರೂ ತಪ್ಪಬಹುದು. ನಾಡೀತತ್ವಜ್ಞನು ಹೇಳಿದ್ದು ಪ್ರತ್ಯಕ್ಷ ವಿಷಯಕವಾದ್ದರಿಂದ ಎಂದಿಗೂ ತಪ್ಪಲಾರದು. ಯಾಕೆಂದರೆ—ಜಾತಕವು ಶಿಶುವಿನ ಶಿರೋದಯಕಾಲವನ್ನು ನಿರ್ಣೈಸಿಬರೆಯಲ್ಪಡತಕ್ಕಂಥಾದ್ದಾದಕಾರಣ ಲಗ್ನಸಂಶಯವು ಪ್ರಾಯಶಃ ಪ್ರಾಪ್ತವಾಗುತ್ತೆ. ಇದು ಸರ್ವರಿಗೂ ವೇದ್ಯವೇ ಇಧೆಯಷ್ಟೆ. ಸ್ತ್ರೀಯರ ಪ್ರಥಮ ಋತುಕಾಲ ಜ್ಯೋತಿಷ್ಕರಿಗೆ ದುರ್ಜ್ಞೇಯವಾಗಿದೆ. ಆದ್ದರಿಂದ ಕೇವಲ ಊಹೆಯು ಯಾವ ಪ್ರಮಾಣವು. ಕೆಲವು ವೇಳೆಗಳಲ್ಲಿ ಅದನ್ನು ನಿಶ್ಚಯವಾಗಿ ತಿಳಿಯಬಹುದು. ಆದರೆ ನಾಡೀಪರಿಶೋಧನೆಯಿಂದ ಹೇಳಿದ ಹಾಗೆ ಆಗಲಾರದು. ಶರೀರೋತ್ಪತ್ತಿ ಮೊದಲ್ಗೊಂಡು ಎಲ್ಲಾ ಶರೀರ ಧರ್ಮಗಳೂ ಕಣ್ಣುಗಳನ್ನು ಕಟ್ಟಿದಹಾಗೆ ಇರುವವು. ಶಾರೀರತತ್ವ ಪರಿಜ್ಞಾನಕ್ಕೆ ನಾಡಿಯು ಪರಮಪ್ರಯೋಜನವಲ್ಲವೆ: ಇದಕ್ಕಿಂತ ಪ್ರಮಾಣವಾದದ್ದು ಇನ್ಯಾವದೂ ಇಲ್ಲ. ಮುಖ್ಯ ಪೂರ್ವೋಕ್ತ ನಾಡೀತತ್ವಗಳನ್ನು ನಾನು ತಿಳಿದಂಥವನಾಗಿಧೇನೆಯಾಗಿ ಪರೀಕ್ಷಿಸಲಿಚ್ಛೆಯುಳ್ಳವರು ತಿಳಿದುಕೊಳ್ಳಬಹುದು. ಪ್ರಸ್ತಾಪದ ದೆಶೆಯಿಂದ ನನ್ನನ್ನು ನಾನೇ ಇಂಥವನೆಂದು ಹೇಳಿಕೊಳ್ಳಬೇಕಾಯಿತು ಎಂದು ನಿಜೋಪನ್ಯಾಸವನ್ನುಪಸಂಹರಿಸಿದರು.

ಆ ತರುವಾಯ ಬಿ. ಏ. ಬಿ. ಎಲ್. ಶ್ರೀಪಾರ್ಥಸಾರಥಿ ಐಯ್ಯಂಗಾರು) (ತಾರಾ **ಹೊಸ ಪಂಡಿತ ಭೀಮರಾವ್**) ಎಂಬದಾಗಿ ಬಿರದು ಕೊಟ್ಟು ಇವರ ಅಸಾಧಾರಣ ನಾಡೀ

ತತ್ವ ಪರಿಜ್ಞಾನ ಪಟುತ್ವವನ್ನು ಪರೀಕ್ಷಿಸಿದೆವು ಎಂದು ದೃಷ್ಟಾಂತೋದಾಹರಣ ಪೂರ್ವಕ
ವಾಗಿ ಪ್ರಶಂಸೆ ಮಾಡಿದರು.

ಅಹಹಾ ಆ ಕಾಲದಲ್ಲಿದ್ದವರೆಲ್ಲರೂ ವಿಸ್ಮಯಾನಂದರಸ ಭರಿತರಾದರು. ಮತ್ತು
ಈ ಸ್ಥಳದಲ್ಲಿ ಅತ್ಯದ್ಭುತ ನಾಡೀ ತತ್ವ ಪರಿಜ್ಞಾನ ಮಾನಿನೀಯರನ್ನ ನೋಡಿದೆವು. ಇಂ
ಥಾ ಕಾಲದಲ್ಲೂ ಕೂಡಾ ನಮ್ಮವರಲ್ಲಿ ಇಷ್ಟು ಪರಿಜ್ಞಾತೃಗಳು ಇದ್ದಾರಲ್ಲಾ ಎಂದು
ಎಲ್ಲರೂ ಮನಸ್ಸಿನಲ್ಲಿ ಅತ್ಯಂತ ಸಂತೋಷ ಪಟ್ಟರು.

ಅನಂತರಮಲ್ಲಿರತಕ್ಕ ಸಕಲ ಜನಗಳಿಂದಲೂ ಸನ್ಮಾನಿಸಲ್ಪಟ್ಟವರಾಗಿ ಶ್ರೀಮನ್ಮ
ಹೀಶೂರ ರಾಜಧಾನಿಯನ್ನು ಕುರಿತು ಪ್ರವೇಶಿಸಿ ಸುಖದಿಂದಿರುತ್ತಿರಲು, ಪುನಹಾ ಸಂಸ್ಥಾ
ನದಲ್ಲಿ ಅಪ್ರತಿಮ ವೈದ್ಯಶಾಸ್ತ್ರವೇತ್ತೃತ್ವ ಜನಿತಯಶಸ್ಕರಾದ (ಬಾಪೂಮೋರ್ಘಲೆ)
ಎಂಬ ವೈದ್ಯಶಿರೋಮಣಿಗಳು ಇರುವದಾಗಿ ಬಹು ಜನಗಳಿಂದ ವರ್ತಮಾನವಂ ಕೇಳಿ
ನಿಜ ವೈದ್ಯ ಶಾಸ್ತ್ರ ವೈದಗ್ಧ್ಯವಂ ತೋರಿಸಬೇಕೆಂಬ ಇಚ್ಛೆ ಉಳ್ಳವರಾಗಿ ಪೂರ್ವೋಕ್ತ
ವೈದ್ಯ ಶಿರೋಮಣಿಗಳಿಗೆ ಇವರು ಬರೆದು ಕಳುಹಿಸಿರುವ ಕುಶಲ ಪತ್ರಿಕಾ ರೀತಿಯಂ ಇ
ದರಡಿ ವಿವರಿಸುತ್ತೇನೆ :—

ಶ್ರೀಮದಶೇಷ ಕಲ್ಯಾಣ ಗುಣ ಮಣಿಗಣ ಸಾಗರಾಯಮಾನರಾದ ಮಹಾರಾಜಶ್ರೀ
ವಿರಾಜಿತರಾದ ಪುನಹಾ ಸಂಸ್ಥಾನವಾಸ್ತವ್ಯರಾದ ಬಾಪೂಮೋರ್ಘಲೆ ವೈದ್ಯಶಿರೋಮಣಿ
ಗಳನ್ನು ಕುರಿತು —

ಶ್ರೀಮತ್ಸಮಸ್ತ ನಿಸ್ತುಲವೈಭವ ಪ್ರಶಸ್ತಾನಾಖಂಡ ಭೂಮಂಡಲ ಮಂಡನಾಯ
ಮಾನವಾದ ಕರ್ನಾಟಕ ದೇಶಾವತಂಸಾಯಮಾನವಾದ ಶ್ರೀಮನ್ಮಹೀಶೂರ ಪುರವರಕ್ಕ
ಧೀಶ್ವರರಾದ ಶ್ರೀಮದ್ರಾಜಾಧಿರಾಜ ಶ್ರೀಮತ್ಕೃಷ್ಣರಾಜ ಕಂಠೀರವ ಸಾರ್ವಭೌಮರ
ವರ ತನೂಜಾತರಾದ ಶ್ರೀಮಚ್ಚಾಮರಾಜೇಂದ್ರ ಒಡೆಯರವರಿಂದ ಸನ್ಮಾನಿತರಾದ ನಿರ್ದು
ಷ್ಟವೈದ್ಯ ವಿದ್ಯಾವಿಶಾರದರಾದ ಹೊಸ ಪಂಡಿತ ಭೀಮರಾಯರೆಂಬ ಹೆಸರುಳ್ಳ ಭಿಷಗ್ವರ
ರು ತಿಳಿಯಪಡಿಸುತ್ತಾರೆ, ಏನಂದರೆ—

ಇದುವರೆಗೆ ನಾವು ಕುಶಲಿಗಳಾಗಿದ್ದೇವೆ. ನಿಮ್ಮ ಕುಶಲಾತಿಶಯ ಸೂಚಕವಾದ
ಪತ್ರಿಕೆಯನ್ನು ಹಗಲು ರಾತ್ರಿಯಲ್ಲಿಯೂ ಅಪೇಕ್ಷಿಸುತ್ತೇನೆ.

ಸಂಪ್ರತಿ, ಅಂಭೋಜಸಂಭೂತವಾದ ಸೌರಭ್ಯವು ವಾಯುವಿನಿಂದ ಸಮಸ್ತ
ದೇಶಗಳಲ್ಲಿಯೂ ಯಾವ ರೀತಿಯಾಗಿ ಪ್ರಸರಿಸಲ್ಪಡುತಲಿದ್ದೆಯೋ ತದ್ವತ್ ಶ್ರೀ ಶ್ರೀ ಉ
ತ್ತರಾದಿ ಸ್ವಾಮಿಗಳವರ ಮಠೀಯ ದಫ್ತರದಾರರೆಂಬ ಅಧಿಕಾರದಲ್ಲಿರುವ ಮಾಧ್ವಶಾಸ್ತ್ರ
ಸಂಪನ್ನರಾದ ಶ್ಯಾಮಾಚಾರ್ಯರಿಂದ ಪ್ರಕಾಶವಾಗಿ ಮಾಡಲ್ಪಟ್ಟಂಥಾ ಮತ್ತಂ ನಾಡೀಗತಿ
ಯಿಂದ ತಿಳಿಯಲ್ಪಟ್ಟ ರೋಗಕ್ಕೆ ಯೋಗ್ಯವಾದ ಔಷಧಗಳನ್ನು ಕೊಡೋಣದರಿಂದ
ಹೋಗಲಾಡಿಸಲ್ಪಟ್ಟ ರೋಗ ಉಳ್ಳೋಣದರಿಂದ ಸಂತೋಷ ಪಡಿಸಲ್ಪಟ್ಟ ಜನಗಳಿಂದ

ಲೂ ಪ್ರಕಟಿಸಲ್ಪಟ್ಟ ನಿಮ್ಮ ವಿದ್ಯಾಕೌಶಲ್ಯವು ಇಲ್ಲಿರತಕ್ಕ ನನ್ನನ್ನು ಸಂತೋಷಪಡಿಸುತ್ತದೆ.

ಯದ್ಯಪಿ ಈ ವೈದ್ಯಕವಿದ್ಯವು ನಮ್ಮಿಂದಲೂ ಆಮೂಲಾಗ್ರವಾಗಿ ನೋಡಲ್ಪಟ್ಟಿಧೆ. ಆದಾಗ್ಯೂ ನಾವು ವೈದ್ಯಶಾಸ್ತ್ರ ಪಾರಂಗತರೆಂದು ನಿಶ್ಚೈಸಿ ಹೇಳಲು ಆಗುವದಿಲ್ಲವು. ಯಾತಕ್ಕೆಂದರೆ (ಶಾಸ್ತ್ರಸ್ಯದುರವಗಾಹತ್ವಾತ್).

ನಮ್ಮ ಚಾಮರಾಜೇಂದ್ರ ಒಡೆಯರವರಿಗೆ ಬಾಲ್ಯದಿಂದಲೂ ನಮ್ಮ ವೈದ್ಯ ವಿದ್ಯಾವಿಚಾರಣೆಯಲ್ಲಿ ನಿಪುಣರಾದ ಜನಗಳಿಗೆ ವಿರಳಪ್ರಚಾರ ಉಳ್ಳೋಣದರಿಂದಲೂ, ಬಹುಶ್ರಮದಿಂದ ಅಭ್ಯಾಸ ಮಾಡಲ್ಪಟ್ಟ ನಮ್ಮ ವೈದ್ಯ ವಿದ್ಯಾ ಪರಿಶ್ರಮಕ್ಕೆ ವೈಯರ್ಥ್ಯವನ್ನು ಅನುಸಂಧಾನವಂ ಮಾಡುತ್ತಿರುವ ನಮ್ಮಿಂದ ವಿದ್ಯಾಪರಿಶ್ರಮನೈಪುಣ್ಯವು ನಿಮ್ಮಲ್ಲಿ ಸ್ವಲ್ಪ ತಿಳಿಯಪಡಿಸಲ್ಪಡುತ್ತದೆ.

ಯಾವ ಪ್ರಾಣಿಗಳಿಗೋಸ್ಕರ ಈ ಶಾಸ್ತ್ರವು ಪ್ರವೃತ್ತವಾಗಿಧೆಯೋ ಅಂಥಾ ಪ್ರಾಣಿಗಳಿಗೆ ವರ್ತಮಾನಗಳಾದ ರೋಗಗಳನ್ನು ಮಾತ್ರವೇ ನಾಡೀ ತಂತ್ರದಿಂದ ಅನುಭವ ಮಾರ್ಗವನ್ನು ಹೊಂದಿಸಿಕೊಂಡು ಅದಕ್ಕೆ ಪ್ರತೀಕಾರ ಮಾಡುವದಿಲ್ಲಾ, ಮತ್ತು ಹುಟ್ಟಿದ ಯಾ ಹುಟ್ಟುವ ರೋಗಗಳನ್ನೂ ಅದರ ಉತ್ಪತ್ತಿಗೆ ಮುಖ್ಯ ಕಾರಣವನ್ನೂ ಸಹ ಹೇಳುತ್ತೇವೆ, ಮತ್ತು ಈ ರೋಗವು ಇಂಥಾ ವರ್ಷದ ಇಂಥಾ ಮಾಸಕ್ಕೆ ಸಂಬಂಧಪಟ್ಟ ಇಂಥಾ ದಿವಸದಲ್ಲಿ ಇಂಥಾ ಫಲವನ್ನು ಕೊಡುತ್ತದೆಯೆಂಬದಾಗಿಯೂ ಹೇಳುತ್ತೇವೆ. ಮತ್ತು ಈ ಮನುಷ್ಯನಿಗೆ ಇಷ್ಟು ವರ್ಷ ಆಯುಸ್ಸು ಎಂಬದಾಗಿಯೂ ಹೇಳುತ್ತೇವೆ. ಸ್ತ್ರೀರುಗಳ ಋತುಕಾಲವನ್ನೂ ಋತುಮತೀರುಗಳಿಗೆ ಗರ್ಭಧಾರಣೆಯನ್ನೂ ಗರ್ಭಿಣೀರುಗಳಲ್ಲಿ ಸ್ತ್ರೀಪುಂಸ ರೂಪಪ್ರಜಾಪ್ರಜಾ ಪ್ರಸೂತಿಯನ್ನೂ ಕೂಡಾ ಹೇಳುತ್ತೇವೆ. ಮತ್ತು ಸೂರ್ಯಚಂದ್ರೋಪರಾಗಗಳಲ್ಲಿ ಸ್ಪರ್ಶಕಾಲವನ್ನೂ ಮಧ್ಯ ಕಾಲವನ್ನೂ ಮೋಕ್ಷಕಾಲವನ್ನೂ ಸಹಾ ನಾಡೀತಂತ್ರ ಪ್ರತಿಪಾದಿತವಾದ ಪೃಥಿವ್ಯಪ್ತೇಜೋವಾಯ್ವಾಕಾಶ ವಕ್ರಚಕ್ರ ಚಪಲ ಚಕ್ರ ಡೋಲಾ ಕುಂಡಲ್ಯಾಖ್ಯ ಗತಿಗಳಿಂದ ತಿಳಿಯುತ್ತೇವೆ. ಸರ್ವಮಿದಮಾಸ್ತಾಂತಾವತ್.

ಒಂದಾನೊಂದು ಕಾಲದಲ್ಲಿ ಚನ್ನಪುರೀ ಪಟ್ಟಣವನ್ನು ಪ್ರವೇಶಿಸಿರುವ ನಮ್ಮಿಂದ ನಾಡೀಗತಿಗಳಿಂದಲೇ ಭೂತಭವಿಷ್ಯದ್ವರ್ತಮಾನರೋಗಗಳೂನೂ ಜೀವಿತಕಾಲಗಳೂ ಸಹ ಪ್ರಖ್ಯಾಪನ ಮಾಡಲ್ಪಡುತ್ತಿರಲು, ಅಲ್ಲಿರತಕ್ಕ ವಿವೇಕಿಗಳಾದ ಜನಗಳು ನಮ್ಮನ್ನು ದೇವತೋಪಾಸನೆಯಿಂದ ಹೊಂದಲ್ಪಟ್ಟ ವೈದ್ಯಕವಿದ್ಯಾ ಕೌಶಲ್ಯ ಉಳ್ಳವರನ್ನಾಗಿ ತಿಳಿಯುವರಾಗಿ ಕರ್ನಾಟಕ ಶ್ರೇಯೋಭಿವರ್ಧಿನೀ ಸಭೆಯಲ್ಲಿ ತಮ್ಮ ತಮ್ಮ ಯೋಗ್ಯತಾನುಸಾರವಾಗಿ ನಮ್ಮ ನಾಡೀಶಾಸ್ತ್ರವೇತೃತ್ವವನ್ನೂ ನಾಡೀಗತಿಯಿಂದ ತಿಳಿಯಲ್ಪಟ್ಟ ರೋ

ಗಕ್ಕೆ ಯೋಗ್ಯವಾದ ಔಷಧ ಪ್ರಯೋಗ ಚಾತುರ್ಯವನ್ನೂ ಕೂಡಾ ಪರಿಶೋಧಿಸಿ ತಾವೂ ನೋಡಿ ಸಂತೋಷಪಟ್ಟು ಬಹುಮಾನ ಪುರಸ್ಸರವಾಗಿ ನಮ್ಮನ್ನು ಕಂಡು ತಮ್ಮಿಂದ ವಿಚಾರಣೆ ಮಾಡಲ್ಪಟ್ಟ ನಾಡೀಪರೀಕ್ಷೆಯೇ ಮೊದಲಾಗಿವುಳ್ಳ ನಮ್ಮ ಕೌಶಲ್ಯಾಂಶಗಳನ್ನು ಸನ್ ೧೮೩೫ನೇ ಇಸವಿ ಜುಲೈಮಾಹೆ ಆಂಧ್ರಸಂಜೀವಿನೀ ಎಂಬ ಪ್ರಕಟನ ಪತ್ರಿಕೆಯಲ್ಲೂ ಅದೇ ಮಾಹೆಯ ನೇಟಿವ್ ಪಬ್ಲಿಕ್ ಒಪೀನಿಯನ್ ಎಂಬ ಇಂಗ್ಲೀಷ್ ಪೇಪರಿನಲ್ಲೂ ಛಾಪಿಸಿರುತ್ತಾರೆಯಷ್ಟೆ. ಆ ಪತ್ರಿಕೆಯು ಮತ್ತೊಬ್ಬ ಪುರುಷನನ್ನು ಅಪೇಕ್ಷಿಸುವ ಕಾಮುಕಿಯೋಪಾದಿಯಲ್ಲಿ ಪುನಹಾ ಸಂಸ್ಥಾನ ವಾಸ್ತವ್ಯರಾದ ಜನಗಳನ್ನೂ ಹೊಂದಿರಬಹುದು.

ನಿಮ್ಮ ದೇಶಗಳಲ್ಲಿ ನೀವೇ ಮೊದಲಾಗಿವುಳ್ಳ ವೈದ್ಯವರರ ಸಂದರ್ಶನ ಪೂರ್ವಕವಾಗಿ ನಮ್ಮಿಂದ ಸಂಪಾದಿಸಲ್ಪಟ್ಟ ವೈದ್ಯ ವಿದ್ಯಾಕೌಶಲ್ಯವನ್ನ ಪ್ರಕಾಶ ಮಾಡಲಿಚ್ಛೆಯುಳ್ಳ ನಮ್ಮ ಗಮನವನ್ನು ನಿರೋಧಮಾಡುತಲಿರುವ ನಮ್ಮ ರಾಜಾಧಿರಾಜ ಶ್ರೀಮನ್ಮಹಾರಾಜ ಭೂಪಾಲರವರ ಆಜ್ಞೆಯನ್ನೇ ನಿರೀಕ್ಷಿಸುತ್ತಿಧೇನೆ.

ಈಗ ಇಂಗ್ಲೀಷ್ ಜನಗಳಾದರೊ ತಮ್ಮ ವೈದ್ಯಶಾಸ್ತ್ರವನ್ನ ಸರ್ವೋತ್ತಮವಾಗಿ ಪ್ರಕಟನೆ ಮಾಡುವದಲ್ಲದೆ, ನಮ್ಮ ಶಾಸ್ತ್ರಗಳನ್ನೂ ಜನಗಳನ್ನೂ ಸಹ ದೂಷಿಸುತ್ತಾರೆ. ಇದನ್ನ ಕೇಳಿ ಸಹಿಸದೆ ಇರತಕ್ಕ ಮನಸ್ಸುವುಳ್ಳ ಭಾವದಿಂದ ನಮ್ಮಿಂದ ಅಭ್ಯಾಸ ಮಾಡಲ್ಪಟ್ಟ ವಿದ್ಯವನ್ನ ಬುದ್ಧಿಶಾಲಿಗಳಾದ ಕೆಲವರಿಗೆ ಉಪದೇಶ ಮಾಡಬೇಕೆಂಬ ಮನಸ್ಸು ಉಂಟಾಗಿಧೆ.

ಆದ್ದರಿಂದ ನಿಮ್ಮ ಆಪ್ತಕೋಟಿಪ್ರವಿಷ್ಟನಾದ ಒಬ್ಬನನ್ನ ಕಳುಹಿಸಿ ಕೊಟ್ಟಲ್ಲಿ ಅವನಿಗೆ ನಾಡೀತಂತ್ರವನ್ನುಪದೇಶಮಾಡಿ ಜನನವನ್ನು ಮೊದಲು ಮಾಡಿಕೊಂಡು ಮರಣ ಪರ್ಯಂತವಾಗಿ ಜಾತ ಜಾಯಮಾನ ಜನಿಷ್ಯಮಾಣರೋಗಗಳನ್ನು ಹೇಳತಕ್ಕ ವಿಷಯದಲ್ಲಿಯೂ, ನಮ್ಮಿಂದ ಹೇಳಲ್ಪಟ್ಟ ಅನುಭವೈಕಾಯತ್ತವಾದ ಶಾಸ್ತ್ರಗಳಲ್ಲಿ ಬುದ್ಧಿಶಾಲಿಯನ್ನಾಗಿ ಮಾಡಿ ಕಳುಹಿಸಿ ಕೊಡಲ್ಪಟ್ಟ ಆ ಮನುಷ್ಯನನ್ನು ಪೂರ್ವೋಕ್ತರೀತ್ಯಾ ಹೇಳೋಣದರಲ್ಲಿ ಪರೀಕ್ಷಿಸಿ ನೀವುಗಳೂನೂ ಸಂತೋಷಪಟ್ಟು ನಮ್ಮನ್ನೂ ಸಂತೋಷಪಡಿಸಬೇಕು.

ಮತ್ತು ಇದರೊಡನೆ ಕಳುಹಿಸಿ ಕೊಟ್ಟಿರುವ ಜನನಾಡ್ಯಾದಿ ಪರೀಕ್ಷಾ ವಿಷಯಕವಾದ ಪಟ್ಟಿಯನ್ನು ನೋಡಿ ಇದರಲ್ಲಿ ಯಾವದಾದರೂ ಆಕ್ಷೇಪಿಸತಕ್ಕ ಭಾಗವಿದ್ದರೆ ಬರಸಿಕಳುಹಿಸಿದಲ್ಲಿ ನಮ್ಮ ಬುದ್ಧಿಗೆ ತೋರಿದ ಮಟ್ಟಿಗೆ ಪ್ರತ್ಯುತ್ತರವನ್ನು ಕೊಡಲು ಇಚ್ಛೈಸುತ್ತೇವೆ ಎಂಬದಾಗಿ ಸಂಸ್ಕೃತ ಭಾಷೆಯಿಂದ ಪತ್ರಿಕೆಯನ್ನು ಕಳುಹಿಸಿಕೊಟ್ಟರು.

ಈ ರೀತಿಯಾಗಿ ಅನಿತರಸಾಧಾರಣ ವೈದ್ಯಶಾಸ್ತ್ರಪ್ರಾವೀಣ್ಯತೆಯನ್ನು ಹೊಂದಿದ ಈ ಭೀಮರಾಯರವರು ಲೋಕೋಪಕಾರಾರ್ಥವಾಗಿ ನಿರ್ಮಾಣ ಮಾಡಿಸಲ್ಪಟ್ಟ

ವೈದ್ಯಶಾಲೆಯಲ್ಲಿ ನಿರುಪಮಾಪೂರ್ವಗಳಾದ ಅನೇಕ ಔಷಧಗಳನ್ನಿಟ್ಟು ಬಹು ಜನಗಳಿಗೆ ರೋಗನಿವಾರಣೆ ಮಾಡುತ್ತ ತಮ್ಮಿಂದ ನಿರ್ಮಾಣ ಮಾಡಲ್ಪಟ್ಟ ನಾಡ್ಯಾದಿ ಶಾಸ್ತ್ರಗಳನ್ನು ಶಿಷ್ಯರುಗಳಿಗೆ ಪಾಠ ಹೇಳುತ್ತಾ ಮೈಸೂರು ರಾಜಧಾನಿಯಲ್ಲಿ ಮಹಾರಾಜರವರಿಂದ ಸನ್ಮಾನಿತರಾಗಿ ಸುಖದಿಂ ವಾಸ ಮಾಡುತ್ತಾ ಸರ್ವೋತ್ಕೃಷ್ಟವಾಗಿ ಇಧಾರೆ.

ಇಂತಖಿಲಸದ್ಗುಣಪರಿಪೂರ್ಣರಾದ ಶ್ರೀ ಹೊಸಪಂಡಿತ ಭೀಮರಾಯರವರ ಚರಿತ್ರೆಯು ಅತ್ಯಾಶ್ಚರ್ಯಕರವಾದ್ದಾಗಿರುವದರಿಂದ ಇದನ್ನು ನೋಡಿ ಜನಗಳು ಸಂತೋಷ ಪಡುವದಕ್ಕೋಸ್ಕರ ನನ್ನ ಬುದ್ಧಿಗೆ ತಿಳಿದ ಮಟ್ಟಿಗೆ ವಿವರಿಸಿರುತ್ತೇನೆ.

ಜನಗಳ ರೋಗಪರೀಕ್ಷೆ ಮಾಡುವ ಕ್ರಮವನ್ನು ಒಂದು ಪಟ್ಟೀರೂಪವಾಗಿ ಇದರ ಕೆಳಗೆ ವಿವರಿಸಲ್ಪಟ್ಟಿದೆ.

ಈ ಪ್ರಕಾರ ಪರೀಕ್ಷಿಸಿನೋಡೋಣದ್ದರಿಂದ ಮನುಷ್ಯನ ಆಯುಷ್ಯ ಅವ್ಯವಗಳಲ್ಲಿ ಉತ್ಪತ್ತಿ, ಜನ್ಮಾರಭ್ಯ ಮರಣಪರಿಯಂತ ಬಂದಿರತಕ್ಕ ಯಾ ಬರುವ ಗಂಡಗಳ ದಿವಸ ಘಳಿಗೆ ಮುಂತಾದವುಗಳು, ಅದಕ್ಕೆ ತಕ್ಕ ಕಾರಣಗಳು, ಮರಣಪ್ರಾಪ್ತಿಯ ವರುಷ ಸಂಖ್ಯೆಯು, ಸ್ತ್ರೀಯ ಋತು ಮತ್ತು ಗರ್ಭಧಾರಣೆ ಕಾಲಗಳು, ಆ ಗರ್ಭದಲ್ಲಿ ಇರತಕ್ಕ ಶಿಶುವು ಸ್ತ್ರೀ ಅಥವಾ ಪುರುಷ ಪ್ರಜೆಯೆಂಬುವದು, ಯಾ ಗರ್ಭವೇ ಧಾರಣೆಯಾಗುವದಿಲ್ಲವೆಂಬುವದು ಮತ್ತು ಮಾರಿಶೋಕೋಪದ್ರವಪ್ರಾಪ್ತವಾಗಿರುವಾಗ ದೃಢವಾದ ಜನಗಳಲ್ಲಿ ಕೆಲವರಿಗೆ ಪ್ರಾಪ್ತವಾಗತಕ್ಕದ್ದು, ಮರಣಸಂಭವಿಸತಕ್ಕದ್ದು, ಪ್ರಾಪ್ತರೋಗ ಪರಿಹಾರವಾಗತಕ್ಕದ್ದು, ಯಾ ರೋಗವು ಪ್ರಾಪ್ತವೇ ಆಗದೇ ಇರುವದು, ಮತ್ತು ಸೂರ್ಯಚಂದ್ರೋಪರಾಗಕಾಲಗಳಲ್ಲಿ ಸ್ಪರ್ಶ, ಗ್ರಾಸ, ಮೋಕ್ಷಗಳ ಕಾಲಗಳು ಇವುಗಳನ್ನೆಲ್ಲಾ ವ್ಯಕ್ತವಾಗಿ ಹೇಳಲು ತಿಳಿಯುತ್ತೆ.

				ಅಷ್ಟಸ್ಥಾನದಿಂದ ರೋಗಪರೀಕ್ಷೆ.										ಯಾವವಿಧವಾದ ರೋಗ.				ಯಾವಾಗ್ನಿಯಿಂದ ಈ ರೋಗ.			ಪ್ರಕೃತಿಗಳು.													
				ನಾಡಿ.																														
ನಂಬರು.	ರೋಗೀ ಹೆಸರು.	ರೋಗದ ಹೆಸರು.	ಧಾತುವೈಷಮ್ಯ.	ವಾತ.	ಪಿತ್ತ.	ಶ್ಲೇಷ್ಮ.	ಮೂತ್ರದಿಂದ.	ಮಲದಿಂದ.	ನಾಲಿಗೆಯಿಂದ.	ಧ್ವನಿಯಿಂದ.	ಮುಟ್ಟುವದ್ದರಿಂದ.	ರೂಪಿನಿಂದ.	ಕಣ್ಣು ರಂಗಿನಿಂದ.	ಕಾಲದಿಂದ ಉತ್ಪತ್ತಿ.	ಜನ್ಮಾಂತರ ಕರ್ಮದಿಂದ.	ಅಷ್ಟಗ್ರಹಚಾರದಿಂದ	ಆಹಾರದೋಷದಿಂದ.	ಶೀತದಿಂದ ಮಂದಾಗ್ನಿ.	ಉಷ್ಣದಿಂದ ಮಂದಾಗ್ನಿ.	ವಾತದಿಂದ ಮಂದಾಗ್ನಿ.	ದೇಶದಲ್ಲಿ.	ಶರೀರದಲ್ಲಿ.	ದಿವಸದಲ್ಲಿ.	ರಾತ್ರಿಯಲ್ಲಿ.	ಯಾವ ಅನ್ನದಿಂದ ಬೆಳದವನು.	ಬಲ ಅಥವಾ ಅರ್ಧಬಲ ಶರೀರ.	ಈ ರೋಗಕ್ಕೆ ೬ ರಸಗಳಲ್ಲಿ ಯಾವದು ಔಷಧ.	ಇದಕ್ಕೆ ಪಥ್ಯ.	ಇದು ಗುಣವಾಗುತ್ತೆ.	ಇದು ಗುಣವಾಗುವದಿಲ್ಲ.	ಎಷ್ಟುದಿವಸದಿಂದ ಈ ರೋಗ ಹಿಡಿಸುತ್ತೆ.	ಎಷ್ಟುದಿವಸಕ್ಕೆ ಗುಣಬರುತ್ತೆ.	ಔಷಧ ತೆಗದುಕೊಳ್ಳುವದಕ್ಕೆ ಶುರುಮಾಡಿದ ದಿವಸ.	ಗುಣವಾದ ದಿವಸ.
೧	೨	೩	೪	೫	೬	೭	೮	೯	೧೦	೧೧	೧೨	೧೩	೧೪	೧೫	೧೬	೧೭	೧೮	೧೯	೨೦	೨೧	೨೨	೨೩	೨೪	೨೫	೨೬	೨೭	೨೮	೨೯	೩೦	೩೧	೩೨	೩೩	೩೪	೩೫

Extract from the Madras "Native Public Opinion" of 7th July 1875.

TO THE EDITOR OF NATIVE PUBLIC OPINION.

DEAR SIR,—As notified in your issue of the 3rd instant, the fifth Meeting of "Hindu Sréyobhi Vardhani Sabha," or "The Hindu Welfare Advancement Association," was held at 5½ P. M. on Monday, the 5th July 1875, in the upstair hall of Purushottam Devaiya's house of No. 186, China Bazar Street, Black-Town, Madras. Many distinguished native gentlemen and Saukars were present on the occasion. The proceedings were commenced by the Honorary Principal Secretary who addressed the audience regarding the objects and constitution of this Association, and called upon all the well-wishers of India to co-operate in this work of national utility and political importance. Then B. Sy. and M. R. Ry. Hosa Pandita Bhima Rao Garu, one of the State Physicians of H. H. the Maharaja of Mysore, caused a paper in Canarese written by him on "The Philosophy of the pulse," to be read by B. Sy. M. R. Ry. Syamacharyala Varu, as he was himself unwell. But he brought the dignity of the subject into full relief by his apt oral remarks at intervals. The paper was ably written, and it displayed no small amount of scientific accuracy and practical judgment on the part of this great Master of Medicine. The august audience exhibited their full appreciation and high veneration for the able gentleman by deafening the hall with their hearty cheers. After which B. Sy. and M. R. Ry. K. Venkataratnam Pantulu Garu, one of the fixed lecturers of the Association, regaled the audience with his eloquent lecture on the same subject, explaining in Telugu the principal points dwelt upon by the excellent Pandit. The Honorary Principal Secretary then placed two garlands of flowers around the necks of the two lecturers, and thanked them on behalf of the Association for their having patriotically favored the Association with their valuable and pithy lectures for the sake of mere honor. After the usual thanks to the house-owner, the meeting was dissolved.

Yours, &c.,
LOVER OF LEARNING.

Medical Examination.

No. 1053.

GENERAL DEPARTMENT,

Bombay Castle, 13*th April* 1880.

Petition from Pandit Bhima Rao, Physician to His Highness the Maharaja of Mysore, dated 26th March 1880, requesting, in view to check the decay of the old Hindu Science of Medicine and the evil consequences arising from quack practices, that Government may be pleased to take the matter under their consideration, and to discourage quackery as far as possible; and praying that a Resolution be passed by Government directing that none should be allowed to practise until he has passed a certain examination in native medicine.

RESOLUTION.—Petitioner may be informed that Government are unable at present to take the steps he proposes.

T. A. HAINES,
for *Acting Secretary to Government.*

To—PANDIT BHIMA RAO.

CERTIFICATES.

Presented by the distinguished individuals of Benares.

Benares, Luttugalli, 18*th April* 1880.

WE the undersigned feel most genuine pleasure in recording at the request of Hosa Pandit Mr. Bhima Rao Sastri, the high opinion which his startling and unsurpassable skill in the healing art has inspired us with. To a high proficiency in the occult sciences (so much ridiculed by the moderns and of the wondrous applications whereof we have now been eye-witnesses) he adds a most remarkable knowledge of the human pulse. His recounting our past and predicting our future illness by merely feeling the pulse seem to emanate from Spirits all knowing, so true they are to actual facts.

He reads the throbs and beats of human pulsation in a manner somewhat similar to that of deciphering telegraphic messages conveyed by the strokes of dot and dash of Morse's Tele-

graph. He enumerates all the past and future ailments that one has been and would be subject to throughout his lifetime in due succession of dates and even fixes the year in which he is to breathe his last (provided he is not carried off by some accident or injury in the interim). All he foretells agrees to a nicety with the calculations of our most eminent Astrologers and Horologists. To what length (and still short enough for his deserts) may we not run on. But enough ; the facts will speak for themselves. The cures he effects in some of the most intricate diseases, given up as hopeless by the best of Doctors and Hakims, are at once simple and effective. The diseases seem to go at his nod. He takes only weeks to cure a man ailing for years. In his other qualities must not be forgotten his devotion to his noble art, and that when he engages in anything it is with his whole heart. Thus has it been that he has obtained a complete mastery over the mysterious hidden secrets of his professional lore.

In conclusion, after thanking him for the deal of trouble he has put himself to on our account, we wish him success in the really praiseworthy cause of his introducing this new system of Ayurveda (of which he has the honor of being a Regenerator) among the students of Hindu Medicine in his country.

Signed by nearly a hundred learned gentlemen of Benares.
Headed by Babu Balakrishna Achari, M. A., 2nd Master, Govt. College, Benares.

(Signed) Railasnathgokal, Physician to H. H. the Hon. the Maharaja Bahadur of Balrampur, G. C. S. I., Oudh.
" Gadadhernath Sukal, B. A., Benares College.
" Munohor Das Sitha.
" Shamshirbahadur B. A, Benares College.
" Vaikamnathasukal W. M. Benares.
" P. G. Baba Sastri, Allopathic and Homopathic Practitioner.
" Kashi Nath Dube.
" Prindaban.
" Govind Shankar.
" Hari Das

(Signed) Ramchand.
" Lakshman Singh.
" Ramakrishna Shetti, Entrance Class, Benares College.
" Gangadher Sastri.
" Deva Vyasa.
" J. Siddeswar Shurma.
" Kadareswar Vidysiromoni.
" Mahrpano Loyana Lal.
" Gnanund Sastri.
" Balakrishna Achari, M. A., late Duff; Scholar, 2nd Master, Benares College.
" A. C. Chutterjy, B. M., Medical College, Calcutta.
" Umrao Chund.
and several others.

BRAHMAGHAT, BENARES, 19*th April* 1880.

I have much pleasure in bearing testimony to the unexceptionable merits of Hosa Pandit Bhima Rao of Mysore who on a pilgrimage to this holy shrine performed his feats of learning before an assembly formed of physicians and a few citizens. With the utter surprise of the Pandits and visitors around him he frankly prophesied as it were, the present, past, and future health of patients merely feeling the strikes of pulsation and how coolly and calmly proved the superiority and genuineness of Ayurveda over other systems of medicines. I heartily await such a day when through the integrity and perseverance of the learned Pandit, whole India at least will appreciate the merits of its Native sciences.

With these few lines I congratulate him at his success and cannot but acknowledge my heart felt thanks praying him a long life.

P. G. BABU SASTRI,
An Indian, Homeopathic and
Allopathic Medical Practitioner.

POONA, 26*th April* 1880.

I have had the rare fortune of conversing with Hosa Pandit Bhima Rao, the Physician to H. H. the Raja of Mysore while he had been here on his way to Benares. From the conversation it seems to me that he is deeply read in the ancient medical literature of the Aryas. He has specially studied the philosophy of pulsation. I have learnt from him a good many rare facts about our old medicines and the science of pulsation. As there are few persons possessing such an amazing stock of information, I strongly recommend him to such members of my profession, both Native and European, as desire to rescue the old medical literature from obscurity and to utilize the labors and experience of our ancestors.

G. A. GRADE, L. M. S.,
Medical Practitioner, Poona.

श्री

योग्यता पत्रिका

श्रीमद्राजाधिराज श्रीकृष्णराजसार्वभौमतनुज श्रीमच्चामराजेंद्र भूपालपरिपोषक महीशूर महाराजधानिविराजमान वैद्यसमाजारोग्यशालाभिषङ्मंडलमध्यगहोस पंडित भीमरावहे काशीयाचे सजाणेजे निमित्याने बेलगांवास आगमनकेलेहे ग्रहस्थ नाडीपरीचेंतव औषधयोजना वगैरेत उत्तमअसल्याबद्दल मद्रासवर्तमान पत्रांतप्रसिधकेलेले आम्हीखालिसहिकरणारवाचूनयेहीं अनुभवघेतां सदर्हूप्रमाणेत्यांचे अंगीगुणअसलेले अढललेव बेलगांवसुकामीकित्यकरोग्या सगुणमुखचिन्हेदिसून आलींहे आम्हीअत्यानंदानें हादाखलादिल्हाआहे ॥

मुकाम बेलगांव तारीख २८ माहे फेब्रुवारी सन् १८८० इसवी ॥

बेलगावचे महराष्ट्रव बालबंदव इङ्ग्लीजि इत्यादिसहि महराष्ट्रसही करणारे

१ पटयोनराय वकील ओकोर्ट बेलगाव

१ हुच्चराव वकील दिस्त्रिकट्ट कोर्ट बेलगाव

१ येकाजीबलवंत बेलगाव

१ बालाजीवेंकट रोकार्डर बेलगाव

१ फडनीससपर्जकोर्ट

१ स्वामीराव रामचंद्रदेशपांडेकरटेंजरीशिरस्तेदा
रज श्रोकोर्ट बेलगाव

१ बालकृष्णगोविंदकारकून मुनसब कोर्ट

१ सहीकाशीनाथलक्ष्मणलेले

१ रंगोश्रंणाजीपोदार

हे सही सर्व मराठींतकेले आहेत ॥

१ नरसिंहाचार्यत्यंवकी वेलगाव

१ गोविंदबालाजीपोदार

१ नारायणशिद्दोबदलीकारकून सबरजिष्टर

१ विठाबंदअपाजीं सबरजिष्टरबेलगाव

१ कृष्णरावकारकूनटीबलगाव

१ रामाचार्यबिन्नरंगाचार्यकोदगी बलगाव

हें सर्व सही बेलगावातमिलाले ॥

श्रीः

श्रीमद्राजाधिराज श्रीकृष्णराज सार्वभौम तनुज श्रीम
च्चामराजेन्द्रभूपाल परिपोषित महीशूर महाराजधानीवि
राजमानवैद्य समाजारोग्यशालाभिषङ्मण्डलमध्यगा होस

पदालंकृत पण्डितभीमरावाख्याभिषग्वरा वाराणसीमागत्या द्भुततमां निजां नाडीपरीक्षां विख्याप्य नानादेशवास्तव्यम हाजनवितीर्णस्वप्रशंसापन्नद्वारा॒ऽत्रत्यानपि बहून् जनान् वर्त मान नाडीपरीक्षाऽऽवेदितस्वस्वातीतोत्पत्स्य मानरोगतन्नि दानादिविषयान् निश्चितमतीनकुर्वन् स्वालौकिकायुर्वेदवि ज्ञताविषये । समतोषयंश्च विपश्चितः स्वकीयेन वैद्यकपाण्डि त्येन विनयातिशयेन स्वनिर्मापितप्रबन्धप्रदर्शयेन चेत्येतद र्थबोधकमिदंपत्रमेभ्यो महाकुलेभ्यो विचित्रवैद्यकविज्ञानशा लिभ्यः सहर्षं वितरति ॥

संवत् १८३७ चैत्रसुदि ७ शनिवासरे ॥

श्रीकाशीक्षेत्रातीलसही

॥ बालबोध ॥

१ बालशास्त्री	१ रामनाथरायणभू
१ राजेश्वरशास्त्री	१ आत्मराम खंडेवाल
१ काशीनाथशर्मा	१ कन्हैयालालमिश्र
१ रामकृष्णाचार्य	१ रामकृष्णशास्त्री
१ कृष्णदत्तशर्मा	१ मथुरानाथव्यास
१ भवानीदत्तमिश्री	१ रामशास्त्रीस्येलघु
१ उमापतिपांडेय	१ राजारामशास्त्री

ವೈದ್ಯಸಂಗ್ರಹ ಗ್ರಂಥದ ಸೂಚೀಪತ್ರ.

ನಂಬರು.		ಪ್ರಕರಣಗಳು.	ಪುಟ ಸಂಖ್ಯೆ.
,,	,,	೩೫ನೇ ತಂದ್ರಕ್ಕೆ. ..	,,
,,	,,	೩೬ನೇ ಶ್ವಾಸಕ್ಕೆ. ..	೧೫೩
,,	,,	೩೭ನೇ ಪೀನಸಕ್ಕೆ. ..	,,
,,	,,	೩೮ನೇ ವಿಸರ್ಪಕ್ಕೆ. ..	,,
,,	,,	೩೯ನೇ ಕುಷ್ಠಕ್ಕೆ. ..	,,
,,	,,	೪೦ನೇ ಕೋಷ್ಟಕ್ಕೆ. ..	,,
,,	,,	೪೧ನೇ ಕಂಡೂಗೆ. ..	,,
,,	,,	೪೨ನೇ ಪಾಂಡೂಗೆ. ..	,,
,,	,,	೪೩ನೇ ಜ್ವರಕ್ಕೆ. ..	,,
,,	,,	೪೪ನೇ ಹೃಲ್ಲಾಸಕ್ಕೆ. ..	,,
,,	,,	೪೫ನೇ ಬಿಂಗಿಗೆ. ..	,,
,,	,,	೪೬ನೇ ಶೋಭೆಗೆ. ..	,,
,,	,,	೪೭ನೇ ಶುಕ್ಲಸ್ರಾವಕ್ಕೆ. ..	,,
,,	,,	೪೮ನೇ ಗುಹ್ಯ ವೇದನೆಗೆ. ..	,,
,,	,,	೪೯ನೇ ಷಂಡತ್ವಕ್ಕೆ. ..	,,
,,	೩	ರೋಗಾರಿಷ್ಟಸೂಚಕಗಳು. ..	,,
,,	,,	೧ನೇ ಜ್ವರದಲ್ಲಿ ಅಸಾಧ್ಯಲಕ್ಷಣ. ..	,,
,,	,,	೨ನೇ ಸನ್ನಿಯಲ್ಲಿ ಅಸಾಧ್ಯಲಕ್ಷಣ. ..	೧೫೪
,,	,,	೩ನೇ ಅತಿಸಾರದಲ್ಲಿ ಅಸಾಧ್ಯಲಕ್ಷಣ. ..	೧೫೫
,,	,,	೪ನೇ ರಕ್ತಾತಿಸಾರದಲ್ಲಿ ಅಸಾಧ್ಯಲಕ್ಷಣ. ..	,,
,,	,,	೫ನೇ ರಕ್ತಪ್ರವರ್ತಿಯಲ್ಲಿ ಅಸಾಧ್ಯಲಕ್ಷಣ. ..	೧೫೬
,,	,,	೬ನೇ ಸಂಗ್ರಹಣೀಯಲ್ಲಿ ಅಸಾಧ್ಯಲಕ್ಷಣ. ..	,,
,,	,,	೭ನೇ ಹೃದಯರೋಗದಲ್ಲಿ ಅಸಾಧ್ಯಲಕ್ಷಣ. ..	೧೫೭
,,	,,	೮ನೇ ರಕ್ತಪಿತ್ತದಲ್ಲಿ ಅಸಾಧ್ಯಲಕ್ಷಣ. ..	,,
,,	,,	೯ನೇ ಬಿಕರಿಕೆಯಲ್ಲಿ ಅಸಾಧ್ಯಲಕ್ಷಣ. ..	,,
,,	,,	೧೦ನೇ ಮೂಲರೋಗದಲ್ಲಿ ಅಸಾಧ್ಯಲಕ್ಷಣ. ..	೧೫೮
,,	,,	೧೧ನೇ ದೇವೀರೋಗದಲ್ಲಿ ಅಸಾಧ್ಯಲಕ್ಷಣ. ..	,,

———

ವೈದ್ಯ ಸಂಗ್ರಹ.

—:o:—

ಶ್ರೀರಸ್ತು.

ನಿರ್ವಿಘ್ನಮಸ್ತು.

॥ ಶ್ರೀಧನ್ವಂತರಯೇನಮಃ ॥

ಮಂಗಳಾಚರಣೆ.

॥ ಶ್ಲೋ ॥ ಶ್ರೀಮತ್ಕರ್ಣಾಟನೀವೃತ್ಪತಿರತಿಲಲಿತೋ ರತ್ನಸಿಂಹಾಸನಸ್ಥಃ ।
ಚಾಮುಂಡಾಂಬಾಪದಾಬ್ಜಾರ್ಚನಪರಸುಮತಿಸ್ಸುಪ್ರಸನ್ನಾಂತರಾತ್ಮಾ ॥
ಕೃಷ್ಣಕ್ಷೋಣೀಂದ್ರಪುತ್ರಃ ಸಕಲವಿಭವಯುಕ್ಛ್ರೀಮಹೀಶೂರಪುರ್ಯಾಂ ।
ಕುರ್ವನ್ರಾಜ್ಯಾಧಿಕಾರಂ ಜಗತಿ ವಿಜಯತೇ ಚಾಮಭೂಮೀಮಹೇಂದ್ರಃ ॥ ೧ ॥
ಅಸ್ಯ ಭೂಪಸ್ಯ ಮಂತ್ರೀಂದ್ರಃ ಸರಸಃ ಕರುಣಾನಿಧಿಃ ।
ಶ್ರೀಮಾನ್ ಜಯತಿ ನೀತಿಜ್ಞಃ ಶೇಷಾದ್ರಿಸ್ಸನ್ಮತಿಪ್ರಭುಃ ॥ ೨ ॥

ಶ್ರೀಮದ್ರಾಜಾಧಿರಾಜ ಚಾಮರಾಜೇಂದ್ರರವರ ದಿವಾನರಾದ ಶ್ರೀಮಾನ್ ಶೇಷಾದ್ರಯ್ಯರವರು ಲೋಕೋಪಕಾರಾರ್ಥವಾಗಿ ವೈದ್ಯ ಶಾಸ್ತ್ರಗಳ ಮುಖ್ಯಾರ್ಥಗಳಂ ಸಂಗ್ರಹಿಸಿ ಸುಲಭವಾಗಿ ಸರ್ವರಿಗೂ ತಿಳಿಯುವಂತೆ ಕರ್ಣಾಟಕ ಭಾಷೆಯಲ್ಲಿ ಮಾಡಿ ಅಚ್ಚು ಹಾಕಿಸಬೇಕೆಂದು ಅಪ್ಪಣೆ ಕೊಡಿಸಿದ್ದರಿಂದ ಶ್ರೀಮಚ್ಚಾಮರಾಜ ಭೂಪಾಲರವರಿಂದ ಪೋಷಿತನಾಗುತ್ತಿರುವ ಹೊಸ ಪಂಡಿತ ಭೀಮರಾಯನಾದ ನಾನು ಈ ವೈದ್ಯಸಂಗ್ರಹವೆಂಬ ಗ್ರಂಥವನ್ನು ಮಾಡಿದೆನು.

ವೈದ್ಯಶಾಸ್ತ್ರೋತ್ಪತ್ತಿ ಕ್ರಮ.

ಪೂರ್ವದಲ್ಲಿ ಪಾರ್ವತೀ ದೇವಿಗೆ ಈಶ್ವರನಿಂದ ಉಪದಿಷ್ಟವಾದ ಕಾಲದಲ್ಲಿ, ಕಶ್ಯಪ, ಭರದ್ವಾಜ, ವಸಿಷ್ಠ, ಗೌತಮ, ಸುಶ್ರುತ, ಆತ್ರೇಯ, ಚರಕ, ಪರಾಶರರೆಂಬ ಯೆಂಟುಜನ ಮಹರ್ಷಿಷಿಗಳು ಆಯುರ್ವೇದವನ್ನು ಕೇಳಿ ಲೋಕೋಪಕಾರಾರ್ಥವಾಗಿ ಒಬ್ಬರೊ

ಬ್ಬರು ಹೊಂದೊಂದು ಲಕ್ಷ ಗ್ರಂಥಗಳನ್ನು ಮಾಡಿದರು. ಆ ಯೆಂಟುಲಕ್ಷ ಗ್ರಂಥಗಳನ್ನು ಓದಿ ತಿಳಿದು ಅಗ್ನಿವಿಟ, ಶಾಸ್ತ್ರದಕ್ಷ, ಕ್ಷೀರಪಾಣಿ, ಪರಾಶರ, ಅತೀತ, ಭೇಳಕರ್ಣರೆಂಬ ಆರುಜನ ಬ್ರಹ್ಮಚಾರಿಗಳು ಪೂರ್ವೋಕ್ತ ಶಾಸ್ತ್ರ ಸಾರಗಳನ್ನೇ ಸಂಗ್ರಹಿಸಿ ಅಗ್ನಿವಿಟ ಯೆಂಬವನು ನಾಡೀಶಾಸ್ತ್ರವನ್ನೂ, ಶಾಸ್ತ್ರದಕ್ಷನೆಂಬವನು ಚಿಕಿತ್ಸಾಶಾಸ್ತ್ರವನ್ನೂ, ಕ್ಷೀರಪಾಣಿಯು ನೇತ್ರಶಾಸ್ತ್ರವನ್ನೂ, ಪರಾಶರನು ಯೋಗಶಾಸ್ತ್ರವನ್ನೂ, ಅತೀತನು ಷಡ್ರಸ ಶಾಸ್ತ್ರವನ್ನೂ, ಭೇಳಕರ್ಣನು ಜ್ಯೋತಿಷ ಶಾಸ್ತ್ರವನ್ನೂ ಮಾಡಿದರು. ಆ ಸಕಲ ಶಾಸ್ತ್ರಗಳನ್ನೂ ಹೋದಿ ಅವುಗಳ ಸಾರಗಳನ್ನೆಲ್ಲಾ ಸಂಗ್ರಹಿಸಿ ಹಾರೀತನೆಂಬ ಮಹರ್ಷಿಯು ನಾಡೀಶಾಸ್ತ್ರವೇ ಮೊದಲಾದ ಸಕಲ ಚಿಕಿತ್ಸಾ ಶಾಸ್ತ್ರಗಳನ್ನೂ ಮಾಡಿದನು. ಆ ಹಾರೀತ ಮತವನ್ನು ಅನುಸರಿಸಿ ಈಚಿಗೆ ದೊಡ್ಡ ದೊಡ್ಡ ಪಂಡಿತರು ಲೋಕೋಪಕಾರಾರ್ಥವಾಗಿ ವೈದ್ಯ ಗ್ರಂಥಗಳನ್ನು ಮಾಡಿ ಇರುತ್ತಾರೆ. ಅದೇ ಹಾರೀತನ ಶಾಸ್ತ್ರಾರ್ಥಗಳನ್ನು ನನ್ನ ಯೋಗ್ಯತಾನುಸಾರವಾಗಿ ಸಂಗ್ರಹಿಸಿ ವೈದ್ಯ ಭೂಷಣವೆಂಬ ಗ್ರಂಥವನ್ನು ಮಾಡಿ ಇಧೇನೆ. ಆ ಗ್ರಂಥದ ಕೆಲವು ಅಭಿಪ್ರಾಯಗಳನ್ನೂ ಇನ್ನೂ ಕೆಲವು ಗ್ರಂಥಗಳ ಸಾರವನ್ನೂ ಸಹ ಸುಲಭವಾದ ಕರ್ನಾಟಕ ಭಾಷೆಯಲ್ಲಿ ಟೀಕಿಸಿ ಈ ಗ್ರಂಥಕ್ಕೆ ಶೇರಿಸಿ ಶಾರೀರ ಮುಂತಾದ ವಿಷಯಗಳನ್ನು ವಿಸ್ತಾರವಾಗಿ ಮುಂದೆ ವಿವರಿಸುತ್ತೇನೆ; ಬ್ರಹ್ಮಾಂಡಗತವಾದ ಯಲ್ಲಾ ಪದಾರ್ಥಗಳೂ ಪಿಂಡಾಂಡದಲ್ಲಿ ಇರುವದಾಗಿ ಯೋಗ ಶಾಸ್ತ್ರದಲ್ಲಿ ಹೇಳಿರುತ್ತೆ. ಇದು ಸಂಕ್ಷೇಪವಾಗಿಯೂ ಶಲ್ಯತಂತ್ರ ಪ್ರಕಾರ ಶಾರೀರವು ವಿಸ್ತಾರವಾಗಿಯೂ ಸಹ ಮುಂದೆ ವಿವರಿಸಲ್ಪಡುತ್ತೆ.

ಶರೀರದಲ್ಲಿರತಕ್ಕ ವಿಷಯು.—ಮನುಷ್ಯನ ದೇಹದಲ್ಲಿ ಭೂಮಿಯೇ ಮೊದಲಾದ ಚತುರ್ದಶಲೋಕಗಳು, ಜಂಬೂದ್ವೀಪವೇ ಮೊದಲಾದ ಸಪ್ತದ್ವೀಪಗಳು, ಪೃಥಿವ್ಯಾದಿ ಪಂಚ ವಿಂಶತಿತತ್ವಗಳು, ಲವಣಾದಿ ಸಪ್ತಸಮುದ್ರಗಳು, ಪೃಥಿವ್ಯಾದಿ ಪಂಚ ಭೂತಗಳು, ಸತ್ವಾದಿ ಗುಣಗಳು, ಷಟ್ಚಕ್ರಗಳು, ಸೂರ್ಯ ಚಂದ್ರ ಮಂಡಲಗಳು, ಇಪ್ಪತ್ತೇಳು ನಕ್ಷತ್ರಗಳು ಇರುತ್ತವೆಯೆಂದು ಹೇಳಿರುವ ಯೋಗಶಾಸ್ತ್ರವನ್ನು, ಆದಿನಾಥ, ಮತ್ಸ್ಯೇಂದ್ರ, ಶಂಬರ, ಆನಂದಭೈರವ, ಚೌರಂಗಿ, ಮೇಘ, ಗೋರಕ್ಷ, ವಿರೂಪಾಕ್ಷ, ಬಿಲೇಶಯ, ಮಂಥಾನಭೈರವ, ಬುದ್ಧ, ಸಿದ್ಧ, ಕಂದಳ, ಘೋರಂಟಕ, ಸದಾನಂದ, ಸಿದ್ಧಪಾದ, ಪರ್ಪಟಿ, ಕರ್ಣಿಕ, ಪೂಜ್ಯಪಾದ, ನಿತ್ಯನಾಥ, ನಿರಂಜನ, ಕಪಾಲಿ, ಬಿಂದುನಾಥ, ಕಾಕ, ಚಂಡೀಶ್ವರ, ಗಯಾ, ಅಲ್ಲಮಪ್ರಭುದೇವ, ಘೋಡ, ಚೋಲಿ, ಹಿಟಂಬಿಲ, ವಾಲುಕಿ, ನಾಗಬಂಧ, ಖಂಡಕಾಪಾಲಿಕ, ಇವರುಗಳು, ಯೋಗಶಾಸ್ತ್ರಮರ್ಯಾದಾನುಸಾರವಾಗಿ ಅಭ್ಯಾಸಕ್ಕೆ ಉಕ್ತರೀತ್ಯಾ, ಶ್ವಾಸನಿರೋಧ, ಯೆಂಭತ್ತುನಾಲ್ಕು ಆಸನ, ಇವುಗಳನ್ನು ಹಾಕಿ ಅಣಿಮಾದ್ಯಷ್ಟಸಿದ್ಧಿಗಳನ್ನು ಪಡೆದು, ಕಾಲನದಂಡವನ್ನು ಜಯಿಸಿ, ಸ್ವೇಛ್ಛಾ ವಿಹಾರಿಗಳಾಗಿ ಬ್ರಹ್ಮಕಲ್ಪದವರಿಗೂ ಆಯುರಭಿವೃದ್ಧಿಯನ್ನು ಮಾಡಿಕೊಂಡಿರುತ್ತಾರಷ್ಟೆ; ಇವ

ರುಗಳು ಲೋಕೋಪಕಾರಾರ್ಥವಾಗಿ ಮನುಷ್ಯರ ದೇಹಗಳಿಗೆ ಬರುವ ಆಯುರ್ವೇದೋಕ್ತಗಳಾದ ಮತ್ತು ಚತುರ್ದಶವೇಗ ನಿರೋಧದಿಂದುಂಟಾಗುವ ರೋಗಗಳನ್ನು ಉಕ್ತಯೋಗಾಸನ ಕರಣಗಳಿಂದ ಪರಿಹಾರ ಮಾಡಿಕೊಳ್ಳುವಂತೆ ಶಿಷ್ಯರುಗಳಿಗೆ ಉಪದೇಶಿಸಿ, ಮತ್ತು ಸ್ವರ ಶಾಸ್ತ್ರರೀತ್ಯಾ ದಿನವೊಂದಕ್ಕೆ ಕ್ಲುಪ್ತವಾಗಿರುವ ಇಪ್ಪತ್ತೊಂದು ಸಾವಿರದ ಆರನೂರು ಶ್ವಾಸಗಳನ್ನು ರೇಚಕ, ಪೂರಕ, ಕುಂಭಕಗಳನ್ನು ಮಾಡುತ್ತಾ ಇರಬೇಕೆಂದು ಹೇಳಿ ಇದ್ದಾರೆ. ಅದನ್ನು ಅನುಸರಿಸಿ ಈ ಮೇಲೆ ಹೇಳಿರುವ ಬ್ರಹ್ಮಾಂಡಗತವಾದ ಸಕಲವೂ ಪಿಂಡಾಂಡದಲ್ಲಿ ಇರುವದೆಂದು ನಮ್ಮ ಶಾಸ್ತ್ರದಲ್ಲಿ ಹೇಳಿರುವದನ್ನು ಅನುಸರಿಸಿಯೇ ನಾನು ಇದನ್ನು ಬರೆದಿರುತ್ತೇನೆ. ಮನುಷ್ಯನ ಜೀವವಿರುವವರಿಗೂ ದೇಹದಲ್ಲಿ ಮೇಲೆ ಹೇಳಿರುವ ಸಕಲವೂ ಇರುವದೇ ಹೊರ್ತು ಪ್ರಾಣ ಹೋದ ಮೇಲೆ ಇರುವದಿಲ್ಲ. ಪ್ರಾಣ ವಿರುವಾಗ್ಯೆ ದೇಹಾಂತರ್ಗತಗಳಾದ ಮೇಲೆ ಹೇಳಿದ ರೀತಿಗಳನ್ನು ತಿಳಿಯಬೇಕಾದರೆ ಗುರೂಪದೇಶದಿಂದ ಯೋಗಸಿದ್ಧಿಯನ್ನು ಪಡೆದು ಅಂತರ್ಮುಖಿಯಾದವನಿಗೆ ಸಾಧ್ಯವೇ ಹೊರ್ತು ಇತರ ತಂತ್ರಗಳಿಂದ ತಿಳಿಯಲುಸಾಧ್ಯವಾಗುವದಿಲ್ಲ. ಹ್ಯಾಗಂದರೆ, ಆಲದಬೀಜದಲ್ಲಿ ಕಾಯಿ, ಹಣ್ಣು, ಯೆಲೆ, ಮರ, ಜಡೆ, ಇವುಗಳು ಹ್ಯಾಗೆ ಕಾಣದೆ ಇರುತ್ತವೋ ಹಾಗೆಯೇ ಈ ಶರೀರದಲ್ಲಿ ಇರುವ ವಿಷಯಗಳನ್ನು ಶಾಸ್ತ್ರಜ್ಞಾನದಿಂದ ತಿಳಿಯಬೇಕು.

ಶಾರೀರ ಪ್ರಕರಣ.

ಭೂತ ಭವಿಷ್ಯದ್ವರ್ತಮಾನ ಕಾಲಗಳಲ್ಲಿ ಉಂಟಾಗಿದ್ದ, ಉಂಟಾಗುವ, ಈಗ ಉಂಟಾದ ರೋಗಗಳನ್ನು ತಿಳಿಯುವದಕ್ಕೆ ನಾಡಿಯೇ ಮುಖ್ಯವಾದದ್ದು. ನಾಡಿಯನ್ನು ನೋಡುವದಕ್ಕೆ ದಿನಚರ್ಯ, ಋತುಚರ್ಯ, ದೇಶ, ಕಾಲ, ರೀತಿ, ಇವ್ಗಳ ಸಹಾಯದಿಂದ ನೋಡಿ ರೋಗವೇ ಆದಿಯಾಗಿ ಸಕಲವನ್ನು ನಿರ್ಣಯಿಸುವದಕ್ಕೆ ಶರೀರಮೂಲವಾದ್ದರಿಂದ ಶಾರೀರವನ್ನು ವಿವರಿಸುತ್ತೇನೆ.

ಶರೀರ ಅನ್ನಿಸಿಕೊಳ್ಳುವದಕ್ಕೆ ಕಾರಣವೇನಂದರೆ.—ರೋಮಕೂಪಗಳಲ್ಲಿ, ಕರ್ಣಗಳಲ್ಲಿ, ಬಾಯಿಯಲ್ಲಿ, ಮೂಗಿನಲ್ಲಿ, ಗುದಸ್ಥಾನದಲ್ಲಿ, ಪ್ರಧಾನದಲ್ಲಿ, ಕಣ್ಣುಗಳಲ್ಲಿ, ಯಾವಾಗ್ಯೂ ಮಲಸ್ರವಿಸುವದ್ದರಿಂದ ಶರೀರವೆನ್ನಿಸಿಕೊಳ್ಳುತ್ತೆ.

ಈ ಶರೀರ ಷಡಂಗವೆನ್ನಿಸಿಕೊಳ್ಳುತ್ತೆ.— ರಸ್ಸ ೧, ಕೈಗಳು ೨, ಕಾಲುಗಳು ೨, ಧಂಡಾ ೧, ಕೂಡಿ ಷಡಂಗಗಳು ಇರುತ್ತವೆ.

ಇನ್ನು ಈ ಶರೀರದಲ್ಲಿ ಅಸ್ಥಿಯೇ ಮೊದಲಾಗಿ ಸಂಖ್ಯೆಗಳು ಅನೇಕ ವಿಧವಾಗಿ ಹೇಳಿರುತ್ತೆ. ಹ್ಯಾಗಂದರೆ, ಆಯುರ್ವೇದ ಪ್ರಕಾರ ೩೬೦ ಅಸ್ಥಿಯೆಂತಲೂ, ಮತ್ತು ತನ್ನ

ಅಂಗುಲಿಗಳಿಂದ ೯೬ ಅಂಗುಲ ಪ್ರಮಾಣ ಉಳ್ಳ ದೇಹವು ಇಪ್ಪತ್ತೈಷ್ಟು ಅಂಗುಲಿಗಳಿಗೆ ಒಂದೊಂದು ಅವಯವವು, ಮತ್ತು ಷಡ್ರಸವೇ ಆದಿಯಾಗಿ ಇರುವ ಪ್ರಮಾಣವು, ಪಂಚ ವಿಂಶತಿ ತತ್ವದಿಂದ ಉಂಟಾದ ಅವಯವಗಳು ಇನ್ನು ಅನೇಕ ವಿಷಯಗಳನ್ನು ಹೇಳಿ ಇರುತ್ತದೆ. ಆದರೆ, ಅನೇಕ ಡಾಕ್ಟರಗಳು ಮತ್ತು ಶಲ್ಯತಂತ್ರ, ಭೋಜ, ಗಯದಾಸ್, ಇವರುಗಳು ಮಾಡಿರುವ ಗ್ರಂಥಗಳು ನೋಡುವಲ್ಲಿ, ಆಯುರ್ವೇದದಲ್ಲಿ ಹೇಳಿರುವದಕ್ಕೂ ಇವರುಗಳು ಹೇಳಿರುವದಕ್ಕೂ ಸರಿಯಾಗುವದಿಲ್ಲ. ಯಾತಕ್ಕೆಂದರೆ, ಲಕ್ಷಣ ಯುಕ್ತವಾದ ಶರೀರಕ್ಕೆ ಆಯುರ್ವೇದದಲ್ಲಿ ಹೇಳಿರುತ್ತಾರೆ ಹೊರ್ತು, ಇತರ ಶರೀರಕ್ಕೆ ಹೇಳಿ ಇಲ್ಲವಾದ್ದರಿಂದ, ಈಗ ನಾನು ಯಾವದಾದರು ಒಂದು ಮತವನ್ನು ಹಿಡದು ನಡಿಯುವ ಉದ್ದಿಶ್ಯ ಶರೀರ ವಿಷಯಕವಾಗಿ ಆಯುರ್ವೇದದಲ್ಲಿ ಚರಕಋಷಿಮಾಡಿರುವ ಗ್ರಂಥಗಳಿಂದ ಲಕ್ಷಣ ಯುಕ್ತ ಮನುಷ್ಯರುಗಳಂ ಬಿಟ್ಟು ಇತರರಿಗೆ ಸಂಕ್ಷೇಪವಾಗಿ ಶಲ್ಯತಂತ್ರ ಮುಂತಾದ್ದು ಉಂಟಾಯಿತು. ಆದ್ದರಿಂದ, ಶಲ್ಯತಂತ್ರವೇ ಆದಿಯಾಗಿ ಪಂಚಭೂತ ಮೊದಲು ಮಾಡಿಕೊಂಡು, ವಿಷಯಗಳನ್ನು ವಿವರಿಸುತ್ತೇನೆ.

ಯಾವ ಯಾವ ಭೂತ ಯೇನೇನು ಕಾರ್ಯ ಮಾಡುತ್ತದಂದರೆ.—ವಾಯುವು ಪ್ರಸವಕಾಲ ಪರಿಯಂತರ ದೋಷ, ಧಾತು, ಮಲ, ಅಂಗ, ಪ್ರತ್ಯಂಗಗಳನ್ನು ವಿಭಾಗಮಾಡುತ್ತೆ. ತೇಜಸ್ಸು, ಆ ಗರ್ಭಕ್ಕೆ ರೂಪಾಂತರವಂ ಉಂಟು ಮಾಡುತ್ತೆ, ಅಗ್ನಿ ವಾಯುಗಳಿಂದ ತೀಕ್ಷ್ಣವಾದರೆ ನೀರು ಶಾಂತಿಯನ್ನು ಮಾಡುತ್ತೆ. ನೀರಿನಿಂದ ಅವಯವಗಳಿಗೆ ಹಾನಿ ಉಂಟಾದರೆ ಪೃಥ್ವೀಯು ಆ ಅಂಗಗಳನ್ನು ಸಮಮಾಡುತ್ತೆ. ಆಕಾಶವು ಸಕಲ ಶರೀರವನ್ನೂ ವೃದ್ಧಿಪಡಿಸುತ್ತೆ.

ಪ್ರತ್ಯಂಗವೆಂದರೆ ಒಂದು ಅಂಗಕ್ಕೆ ಮತ್ತೊಂದು ಕೂಡಿದ್ದರಿಂದ ಪ್ರತ್ಯಂಗವೆನ್ನಿಸಿಕೊಳ್ಳುತ್ತೆ. ಇದಕ್ಕೆ ವಿವರ.—ಮಸ್ತಕ, ಹೊಟ್ಟೆ, ಬೆನ್ನು, ನಾಭಿ, ಲಲಾಟ, ಗ್ರೀವಾ, ನಾಸಿಕಾ, ಗಡ್ಡ, ಗುದ, ವಸ್ತಿ, ಕಂಠ, ಮನ್ಯಾ, ಈ ೧೦ ಪ್ರತ್ಯಂಗಗಳು ಒಂದೊಂದಾಗಿರುತ್ತವೆ. ಕರ್ಣಗಳು, ನೇತ್ರಗಳು, ಭ್ರುಕುಟಿಗಳು, ಸ್ಕಂಧಗಳು, ಗಲ್ಲಗಳು, ಕಂಕುಳುಗಳು, ಸ್ತನಗಳು, ವೃಷಣಗಳು, ತೊಡೆ ಮೇಲುಭಾಗದ ಕೀಲುಗಳು, ಕಣ್ಣಿನ ಕುಣಿಕೆಗಳು, ಪಾರ್ಶ್ವಗಳು, ಪಿರ್ರಗಳು, ಮೊಣಕಾಲುಗಳು, ಕೈಗಳು, ತೊಡೆಗಳು, ತುಟಿಗಳು, ಕಟವಾಯಿಗಳು, ಟೊಂಕದ ಹಿಂದುಗಡೆ ಇರುವ ಯೆರಡು ತಗ್ಗುಗಳು, ಇವು ೧೮ ಯೆರಡೆರಡಾಗಿವೆ. ಈ ಪ್ರಕಾರ ಒಟ್ಟು ೪೬ ಪ್ರತ್ಯಂಗಗಳು ಇರುತ್ತವೆ. ಅಂಗುಲಿಗಳಿಗೆ ಶಾಖೆಗಳೆಂದು ಹೆಸರು.

ಅಂಗ ಪ್ರತ್ಯಂಗಯುಕ್ತವಾದ ಶರೀರಕ್ಕೆ ಯಾವ ಯಾವ ಸ್ಥಾನಗಳಲ್ಲಿ ಸರಿಯಾಗಿ ಕೊಡುತ್ತದೋ ಆ ಅಂಗಗಳ ವಿವರ.—ಸಪ್ತತ್ವಚ, ಸಪ್ತಕಲೆ,

ಸಪ್ತಧಾತು, ಸಪ್ತಮಲ, ತ್ರಿದೋಷ, ಯಕೃತ್, ಪ್ಲೀಹ, ಪುಪ್ಫುಸ, ಹೃದಯ, ಉಂದುಕಾಶಯು, ಕರಳು, ವೃಕ್ಕ, ಸ್ರೋತಸ್, ಕಂಡರ, ಜರೆ, ಸುಳಿ, ಹಗ್ಗ, ಹೊಲಿಗೆ, ಸಂಘಾತ, ಸೀಮಂತ, ಅಸ್ಥಿ, ಸಂಧಿ, ಸ್ನಾಯು, ಪೇಶೀ, ಮರ್ಮ, ಶಿರೆ, ಧಮನಿ, ಈ ಪ್ರಕಾರ ೬೩ ಅಂಗಗಳು ಇರುತ್ತವೆ. ಇವುಗಳನ್ನು ಕುರಿತು ಮುಂದೆ ವಿಸ್ತಾರವಾಗಿ ಹೇಳುತ್ತೆ. ಯೋಗವಹ ಸ್ರೋತಸ ಅಂದರೆ, ಧಮನೀ, ಪ್ರಾಣ, ನೀರು, ಅನ್ನ, ಇವುಗಳನ್ನು ವಹಿಸತಕ್ಕದ್ದು.

ಸಪ್ತಾಶಯಗಳಿಗೆ ವಿವರ.—ರಕ್ತಾಶಯು, ಆಮಾಶಯು, ಪಿತ್ತಾಶಯು, ಪಕ್ವಾಶಯು, ವಾಯುವಾಶಯು, ಮೂತ್ರಾಶಯು, ಮಲಾಶಯು, ಈ ೭ ಆಶಯಗಳು ಬಂದರಕೆಳಗೆ ಬಂದು ಇರುತ್ತವೆ. ಆದರೆ ಪಿತ್ತಾಶಯು, ಪಕ್ವಾಶಯುಗಳಿಗೆ ಉತ್ತರೋತ್ತರವಾಗಿ ಗರ್ಭಾಶಯುವಿರುತ್ತೆ. ಸ್ತ್ರೀಯರುಗಳಿಗೆ ಸ್ತನ ಯೆರಡು, ಗರ್ಭಾಶಯು ಬಂದು ಸಹ ಅಧಿಕವಾಗಿರುತ್ತೆ.

೧. ಮೇಲೆ ಹೇಳಲ್ಪಟ್ಟ ಸಪ್ತಚರ್ಮವೆ ಮೊದಲಾದ ೬೩ ಅಂಗೆಗಳ ವಿವರಣೆ.—ಈ ಚರ್ಮಗಳು ಹಾಲು ಕಾಸಿದರೆ ಮೇಲೆ ಕೆನೆ ಹ್ಯಾಗೆ ಉಂಟಾಗುತ್ತೋ ಹಾಗೆ ರಕ್ತದ ಹೆಪ್ಪೇ ಚರ್ಮವೆಂದು ಕರಸಿಕೊಳ್ಳುತ್ತೆ. ಈ ಚರ್ಮಗಳಿಗೆ ಉಂಟಾಗುವ ಬೇರೆ ಬೇರೆ ರೋಗಗಳು, ಹೆಸರು ಮತ್ತು ಲಕ್ಷಣಗಳ ವಿವರ.

೧ನೇ ಅವಭಾಸಿನಿಯೆಂಬ ಚರ್ಮವು, ಯವ ಧಾನ್ಯದ ಹದಿನೆಂಟು ಭಾಗದಲ್ಲಿ ಬಂದು ಭಾಗ ಧಪ್ಪವಿರುತ್ತೆ. ಈ ಚರ್ಮದಿಂದ ಸಿಧ್ಮರೋಗ, ಮತ್ತು ಕಂಟಕರೋಗ, ಅಂದರೆ ಚರ್ಮರೋಗವು ಸಹ ಉಂಟಾಗುತ್ತೆ.

೨ನೇ ಲೋಹಿತ ಚರ್ಮವೆಂಬುವದು ಬಂದು ಯವ ಧಾನ್ಯದ ಹದಿನಾರು ಭಾಗದಲ್ಲಿ ಬಂದಂಶ ಧಪ್ಪವಿರುತ್ತೆ. ಇದರಲ್ಲಿ ತಿಲಕ ಮತ್ತು ಅಲಕಗಳೆಂಬ ರೋಗಗಳು ಉತ್ಪತ್ತಿಯಾಗುತ್ತೆ.

೩ನೇ ಶ್ವೇತ ಚರ್ಮವೆಂಬುವದು ಬಂದು ಯವೆಯ ಹನ್ನೆರಡು ಪಾಲಿನಲ್ಲಿ ಬಂದು ಪಾಲು ಧಪ್ಪವಿದೆ. ಇದರಲ್ಲಿ ಚರ್ಮದಲ, ಅಜಗಲ್ಲಿಕ, ಮಶಕಾಧಿಷ್ಠಾನ ರೋಗಗಳು ಉತ್ಪತ್ತಿಯಾಗುತ್ತವೆ.

೪ನೇ ತಾಮ್ರವೆಂಬ ಚರ್ಮವು ಯವೆಯು ಯೆಂಟು ಭಾಗದಲ್ಲಿ ಬಂದಂಶ ಧಪ್ಪವಿರುತ್ತೆ. ಅದರಲ್ಲಿ ಕಿಲಾಸ, ಮತ್ತು ಕುಷ್ಠರೋಗಗಳು ಉತ್ಪತ್ತಿಯಾಗುತ್ತೆ.

೫ನೇ ವೇದಿನೀಯೆಂಬ ಚರ್ಮವು ಯವೆಯು ಐದರಲ್ಲಿ ಬಂದಂಶ ಧಪ್ಪವಿರುತ್ತೆ. ಇದ್ದರಿಂದ ಕುಷ್ಠ, ಮತ್ತು ವಿಸರ್ಪಗಳೆಂಬ ರೋಗೋತ್ಪತ್ತಿಯಾಗುತ್ತೆ.

೬ನೇ ಇನ್ನೊಂದು ಲೋಹಿತ ಚರ್ಮವು, ಒಂದು ಯವೆಯ ಧಪ್ಪವು. ಇದರಿಂದ ಗ್ರಂಥಿ, ಅಪಚಿ, ಅರ್ಬುದ, ಸ್ಲೀಪದ, ಗಳಗಂಡ, ಗಂಡಮಾಲೆ, ರೋಗಗಳು ಉತ್ಪತ್ತಿಯಾಗುತ್ತವೆ.

೭ನೇ ಮಾಂಸಧರ ಚರ್ಮವು ಯೆರಡು ಯವೆಗಳ ಧಪ್ಪವಿರುತ್ತೆ. ಇದರಿಂದ ಭಗಂದರ, ವಿದ್ರುಧಿ, ಅರ್ಶ, ರೋಗಗಳು ಉತ್ಪತ್ತಿಯಾಗುತ್ತವೆ.

ಈ ಮೇಲೆ ಹೇಳಲ್ಪಟ್ಟ ಚರ್ಮಗಳು ಮಾಂಸಗಳ ಮೇಲೆ ಮಾತ್ರಧಪ್ಪವಾಗಿರುತ್ತವೆಯೇ ಹೊರ್ತು, ಲಲಾಟ, ಅಂಗುಲಿ ಇವುಗಳ ಮೇಲೆ ಸೂಕ್ಷ್ಮಗಳಾಗಿರುತ್ತವೆ.

೨. ಸಪ್ತಕಲೆಗಳ ವಿವರಣೆ.—ಈ ಕಲೆಯು ವೃಕ್ಷಗಳ ಮೇಲೆ ಆಚ್ಛಾದಿಸಿ ಕೊಂಡಿರುವ ತ್ವಕ್ಕನ್ನು ಛೇದಿಸಿದರೆ ಹ್ಯಾಗೆ ಕಾಣುತ್ತೋ ಅದೇ ಪ್ರಕಾರ ಶರೀರದಲ್ಲಿರುವ ಮಾಂಸ ಧಾತುಗಳನ್ನು ಛೇದಿಸಿದರೆ ತಿಳಿಯಬರುತ್ತೆ.

೧ನೇ ಮಾಂಸಧರ.—ಈಕಲಾಧಾರಮಾಡಿಕೊಂಡಿರುವ ಮಾಂಸದಲ್ಲಿ ಸಿರಾ, ಸ್ನಾಯು, ಧಮನಿ, ಸ್ರೋತಸ್ಸು ಮುಂತಾದವು ಹರಡಿಕೊಂಡಿರುತ್ತವೆ. ಇದಕ್ಕೆ ದೃಷ್ಟಾಂತ—ಭೂಮಿಯಲ್ಲಿರುವ ಕೆಸರೊಡನೆ ಕೂಡಿದ ನೀರಿನಲ್ಲಿ ದಂಟು, ತಂತು, ಯೆಲೆ, ಮುಂತಾದವು ಪ್ರಸರಿಸಿಕೊಂಡಿರುವ ಕಮಲದಂತೆ ಕಲಾಶ್ರಿತ ಮಾಂಸದಲ್ಲಿ ಸಿರಾದಿಗಳು ಹರಡಿಕೊಂಡಿರುತ್ತವೆ.

೨ನೇ ರಕ್ತಧರ.—ಈ ಕಲೆಯು ಮಾಂಸ ಮಧ್ಯದಲ್ಲಿರುತ್ತೆ. ಇದರಲ್ಲಿರುವ ರಕ್ತ ವಿಶೇಷದಿಂದ ಸಿರಾ, ಯಕೃತ್, ಪ್ಲೀಹಗಳು ಉಂಟಾಗುತ್ತವೆ. ಇದಕ್ಕೆ ದೃಷ್ಟಾಂತ—ಹಾಲಿನಂತೆ ಯಾವ ಗಿಡದಲ್ಲಿ ರಸವು ಅಂಟಾಗಿರುತ್ತದೋ ಅದನ್ನು ಕ್ಷತ ಮಾಡಿದರೆ ಹ್ಯಾಗೆ ಸಾರವು ವೊಳಗಿನಿಂದ ಸ್ರವಿಸುತ್ತದೋ ಅದೇ ಮೇರೆ ಮಾಂಸವನ್ನು ಕ್ಷತ ಮಾಡಿದರೆ ರಕ್ತವು ಸ್ರವಿಸುತ್ತೆ.

೩ನೇ ಮೇದೋಧರ.—ಈ ಕಲೆಯು ಸಮಸ್ತ ಪ್ರಾಣಿಗಳ ಸಣ್ಣವಾಗಿರುವ ಅಸ್ಥಿ ಮಧ್ಯದಲ್ಲಿ ರಕ್ತದಿಂದ ಕೂಡಿಯಿರುತ್ತೆ. ದೊಡ್ಡ ಅಸ್ಥಿ ಮಧ್ಯದಲ್ಲಿ ಮಜ್ಜ ವಿರುತ್ತೆ.

೪ನೇ ಶ್ಲೇಷ್ಮಧರ.—ಈ ಕಲೆಯು ಸರ್ವ ಪ್ರಾಣಿಗಳ ಸಂಧಿಗಳಲ್ಲಿ ಶ್ಲೇಷ್ಮವನ್ನು ಧರಿಸಿಕೊಂಡಿರುತ್ತದೆ. ಈ ಕಫವು ಸಂಧಿಗಳಿಗೆ ಚಲನ ವಲನಗಳು ತಡೆಯಿಲ್ಲದೆ ಆಗುತ್ತೆ. ಇದಕ್ಕೆ ದೃಷ್ಟಾಂತ—ರಥದ ಚಕ್ರಗಳಿಗೆ ಜಿಡ್ಡು ಹಾಕಿದ್ದರಿಂದ ಸರಿಯಾಗಿ ತಿರುಗುವ ಮೇರೆ ಸಂಧಿಗಳಲ್ಲೂ ಶ್ಲೇಷ್ಮ ಲೇಪವಾಗಿರುವದ್ದರಿಂದ ತಡೆಯಿಲ್ಲದೆ ಚಲಿಸುತ್ತವೆ.

೫ನೇ ಪುರೀಷಧರ.—ಈ ಕಲೆಯು ಪಕ್ವಾಶಯದಲ್ಲಿದ್ದು ಕೋಷ್ಠಗಳಲ್ಲಿರುವ ಮಲಮೂತ್ರಗಳಂ ವಿಭಾಗ ಮಾಡುತ್ತವೆ. ಆಮಾಶಯ, ಪಕ್ವಾಶಯ, ಅಗ್ನ್ಯಾಶಯ, ಮೂತ್ರಸ್ಥಾನ, ಯಕೃತ್, ಪ್ಲೀಹ, ಹೃದಯ, ಗುದದಿಂದ ಮಲವನ್ನು ವಿಸರ್ಜಿಸುವ ದೊಡ್ಡ ಕರಳು, ಮತ್ತು ಪುಪ್ಪುಸ, ಈ ಸ್ಥಾನಗಳು ಕೋಷ್ಠಗಳೆಂದು ಕರಿಸಿಕೊಳ್ಳುತ್ತವೆ. ಈ ಪುರೀಷಧರವೆಂಬ ಕಲೆಯು ಯಕೃತ್, ಪ್ಲೀಹ, ಹೃದಯ, ಪುಪ್ಪುಸ, ಮತ್ತು ಕರಳುಗಳಿಗೆ ವ್ಯಾಪಿಸಿಕೊಂಡು ಉಂಡುಕಸ್ಥ ಮಲವನ್ನು ವಿಭಾಗಿಸುತ್ತೆ. ಇದು ಊರ್ಧ್ವಭಾಗದಿಂದ ಹೃದಯದವರಿಗೂ ಮತ್ತು ಹೃದಯದಿಂದ ಗುದದವರಿಗೂ ಆಶ್ರಯಿಸಿ ಯಿರುತ್ತೆ.

೬ನೇ ಪಿತ್ತಧರ.—ಈ ಕಲೆಯು ಭಕ್ಷಿಸಿದ ಚತುರ್ವಿಧ ಅನ್ನ ಅಂದರೆ, ತಿನ್ನುವದು, ಕುಡಿಯುವದು, ನೆಕ್ಕುವದು, ಶೀಘ್ರವಾಗಿ ನುಂಗುವದು, ಇವುಗಳನ್ನು ಆಮಾಶಯ ಪಕ್ವಾಶಯಗಳಿಂದ ಪಿತ್ತಸ್ಥಾನಕ್ಕೆ ಯ್ಯೆದಿಸಿ ಪಕ್ವಮಾಡುತ್ತೆ. ಇದಕ್ಕೆ ಪ್ರಮಾಣ.—ಪಕ್ವಾಶಯ ಆಮಾಶಯಗಳ ಮಧ್ಯೆ ಇರುವ ಜಠರಾಗ್ನಿಯು ಅಧಿಷ್ಠಾನರೂಪವಾಗಿರುತ್ತೆ. ಪೂರ್ವೋಕ್ತ ಚತುರ್ವಿಧ ಅನ್ನವು ಪಿತ್ತದ ತೇಜಸ್ಸಿನಿಂದ ಪಕ್ವವಾಗುತ್ತೆ. ಈ ಸ್ಥಾನಕ್ಕೆ ಗ್ರಹಣೀಯೆಂದು ಹೇಳುತ್ತಾರೆ.

೭ನೇ ಶುಕ್ಲಧರ.—ಈ ಕಲೆಯು ಶರೀರದಲ್ಲಿರುವ ಶುಕ್ಲವನ್ನು ಧರಿಸುತ್ತೆ. ಇದಕ್ಕೆ ದೃಷ್ಟಾಂತ—ಹಾಲಿನಲ್ಲಿ ತುಪ್ಪವು, ಕಬ್ಬಿನಲ್ಲಿ ಮಧುರ ರಸವು ಗುಪ್ತವಾಗಿರುವ ರೀತಿ ಶರೀರದಲ್ಲಿ ಶುಕ್ಲಧಾತುವು ಗುಪ್ತವಾಗಿರುತ್ತೆ.

೩. ಸಪ್ತಧಾತುಗಳ ವಿವರಣೆ.—ಅಸ್ಥಿ, ಮಜ್ಜ, ಮೇದಸ್ಸು, ಮಾಂಸ, ರಕ್ತ, ತ್ವಚ, ಶುಕ್ಲ, ಇವುಗಳಲ್ಲಿ ಅಸ್ಥಿ, ಮಜ್ಜ ಮೇದಸ್ಸುಗಳು ವಾತಾಶ್ರಯಗಳಾಗಿವೆ. ಪಿತ್ತಕ್ಕೆ ಮಾಂಸ ರಕ್ತಗಳು ಆಶ್ರಯಗಳು, ತ್ವಕ್ಕು ಶುಕ್ಲಗಳನ್ನು ಶ್ಲೇಷ್ಮವು ಆಶ್ರಯಿಸಿಕೊಂಡಿದೆ. ಈ ಸಪ್ತ ಧಾತುಗಳು ಪಿತ್ತದ ತೇಜಸ್ಸಿನಿಂದ ಪಾಚಿತವಾಗಿವೆ. ಇವುಗಳು ರಸದಿಂದ ರಕ್ತವು, ರಕ್ತದಿಂದ ಮಾಂಸವು, ಮಾಂಸದಿಂದ ಮೇದಸ್ಸು, ಈ ಪ್ರಕಾರವಾಗಿ ವೊಂದರಿಂದ ಮತ್ತೊಂದು ಉತ್ಪತ್ತಿಯಾಗಿವೆ.

ಮೇಲೆ ಹೇಳಲ್ಪಟ್ಟ ಧಾತುಗಳಿಂದ ಸಪ್ತ ಉಪಧಾತುಗಳು ಉಂಟಾಗಿವೆ.—ಸ್ತನಸಂಬಂಧಿ ಹಾಲು ರಸಧಾತುಗೆ ಉಪಧಾತುವು, ಸ್ತ್ರೀಯರುಗಳು ಋತುವಾಗುವ ರಜೋಧಾತುವು ರಕ್ತದ ಉಪಧಾತುವು, ಇವು ಯೆರಡೂ ಸ್ತ್ರೀಯರುಗಳಿಗೆ ಕಾಲವಿಶೇಷದಿಂದ ಉಂಟಾಗುತ್ತೆ. ಸರ್ವದಾ ಯಿಲ್ಲದೇ ಯಿರುವಹಾಗೇನೆ ಇರುತ್ತವೆ. ವಸಾ

ಯೆಂಬ ಸ್ನೇಹವು ಮಾಂಸಕ್ಕೆ ಉಪಧಾತುವು, ಸ್ವೇದವು ಮೇದಸ್ಸಿನ ವುಪಧಾತುವು, ದಂತಗಳು ಅಸ್ಥಿಯು ಉಪಧಾತುವು, ಕೇಶಗಳು ಮಜ್ಜೆಯು ಉಪಧಾತುವು, ಓಜಸ್ಸು ಶುಕ್ಲ ದ ಉಪಧಾತುವು.

೪. ಸಪ್ತ ಧಾತುಗಳಿಂದ ಹುಟ್ಟಿದ ಸಪ್ತ ಮಲಗಳ ವಿವರಣೆ—೧ನೇ ರಸ ಧಾತುವಿನಿಂದ ಉಂಟಾದ ಮಲವು ನಾಲಿಗೆ, ಕಣ್ಣು, ಕೆನ್ನೆಗಳ ಸಮೀಪದಲ್ಲಿರುತ್ತೆ. ೨ನೇ ಈ ರಸ ಧಾತುವಿಗೆ ಕಾಂತಿ ಹೆಚ್ಚಿಸುವ ಪಿತ್ತವು, ರಕ್ತ ಧಾತುವಿನ ಮಲವಾಗಿರುತ್ತೆ. ೩ನೇ ನಾಲಿಗೆ, ದಂತ, ಬಗಲು, ಶಿಶ್ನ, ಇವುಗಳ ಮಲಗಳು ಮೇದೋ ಧಾತುವಿನಿಂದ ಉಂಟಾಗಿರುತ್ತವೆ. ೪ನೇ ನಖ, ಕೇಶ, ಲೋಮಗಳು, ಅಸ್ಥಿಧಾತು ಸಂಬಂಧಿ ಮಲಗಳೆಂದು ತಿಳಿಯತಕ್ಕದ್ದು. ೫ನೇ ಮೊಖದ ಸ್ನಿಗ್ಧತಾ, ಕಣ್ಣಿನ ಮಲ, ಇವುಗಳು ಮಜ್ಜಾ ಧಾತುವಿನಿಂದ ಉಂಟಾಗಿರುತ್ತವೆ. ೬ನೇ ಮೊಡವೆ, ಮೀಸೆ, ಇವು ಶುಕ್ಲ ಧಾತು ಮಲಗಳು. ೭ನೇ ಕಿವಿಗಳಲ್ಲಿರುವ ಮಲವು ಮಾಂಸಧಾತುವಿನ ಮಲವು.

೫. ತ್ರಿದೋಷಗಳಿಗೆ ವಿವರ.—ತ್ರಿದೋಷಗಳು ಅಂದರೇ, ವಾತ, ಪಿತ್ತ, ಶ್ಲೇಷ್ಮ, ಇವು ವಿಕಾರವಾದರೆ ರೋಗವೆಂದು ಕರೆದುಕೊಳ್ಳುತ್ತೆ.

೬—೭. ಯಕೃತ್ ಪ್ಲೀಹಗಳಿಗೆವಿವರ.—ಈ ಯೆರಡೂ ರಕ್ತಜನ್ಯವಾದವು. ಯಕೃತ್ ಎಂಬುವದು ಬಲದ ಕಡೆ ಸ್ತನದ ಕೆಳಗೆ ಆಛ್ಛಾದಿತವಾಗಿಧೆ. ಪ್ಲೀಹವು ಯಡದ ಸ್ತನದ ಕೆಳಗೆ ಆಛ್ಛಾದಿತವಾಗಿಧೆ.

೮. ಫುಪ್ಫುಸ ಲಕ್ಷಣ.—ಫುಪ್ಫುಸವು ರಕ್ತದ ನೊರೆಯಿಂದ ಉತ್ಪತ್ತಿಯಾಗಿಧೆ. ಇದು ಹೃದಯ ನಾಡಿಗೆ ತಗಲಿಕೊಂಡಿಧೆ.

೯. ಹೃದಯಲಕ್ಷಣ.—ಇದು ರಕ್ತಶ್ಲೇಷ್ಮಗಳಿಂದ ಉತ್ಪತ್ತಿಯಾಗಿಧೆ. ಇದನ್ನು ಅಸ್ಥಿಪಂಜರವುಮೇಲೆ ಮುಚ್ಚಿಇಧೆ. ಈ ಪಂಜರದಲ್ಲಿ ಹೃದಯದಂತೆ ರಕ್ತಗೋಳಕವು ನಾಡೀದ್ವಾರದಲ್ಲಿ ರಕ್ತ ತುಂಬಿ ಇರುತ್ತೆ. ಈ ಗೋಳಕ ಮಧ್ಯದಲ್ಲಿ ಕಮಲವು ಅಧೋಮುಖವಾಗಿಧೆ. ಅದನ್ನು ಸೀಳಿ ನೋಡಿದರೆ ದಳಗಳು ಕಾಣುತ್ತವೆ. ಇದೇ ಹೃದಯಕಮಲವೆಂದು ತಿಳಿಯತಕ್ಕದ್ದು. ಇದು ನಿದ್ರೆಯಲ್ಲಿ ಮುಚ್ಚಿಕೊಳ್ಳುತ್ತೆ, ಯೆಚ್ಚರದಲ್ಲಿ ಬಾಯಿ ತೆರದಿರುತ್ತೆ. ಇದರ ವಿಷಯವಾಗಿ ಗ್ರಂಥಾಂತರಗಳಲ್ಲಿ ವಿಸ್ತಾರವಾಗಿ ಹೇಳಿರುತ್ತೆ.

೧೦. ಉಂದುಕಾಶಯಲಕ್ಷಣ.—ಇದು ರಕ್ತದಮಲದಿಂದ ಉತ್ಪತ್ತಿಯಾಗಿಧೆ.

೧೧. ಕರುಳುಗಳಿಗೆವಿವರ.—ಇವು ರಕ್ತ ಕಫಗಳ ಉತ್ಕೃಷ್ಟಸಾರ ಪದಾರ್ಥಗಳು ಪಿತ್ತದ ಉಷ್ಣದಿಂದ ಪಚನವಾಗುತ್ತಿರುವಾಗ ಇವುಗಳಿಗೆ ವಾಯುವು ಬಂದು ಸೇರುತ್ತೆ ; ಇವುಗಳ ಮೇಳಣದಿಂದ ಕರಳು, ವಸ್ತಿ, ಗುದಸ್ಥಾನಗಳುಂಟಾಗುತ್ತವೆ.

೧೨. ವೃಕ್ಕಲಕ್ಷಣ.—ಇದ ಕುಕ್ಷಿಗೋಳಕವು, ಉದರದಲ್ಲಿರುವ ಮೇದಸ್ಸನ್ನು ಪುಷ್ಟಿಮಾಡುತ್ತೆ. ಮತ್ತು ರಕ್ತ, ಮೇದಸ್ಸು ಇವುಗಳ ಸಾರಾಂಶದಿಂದ ಉತ್ಪನ್ನವಾಗಿಧೆ.

೧೩. ಸ್ರೋತಸ್ಸುಗಳಿಗೆವಿವರ.—ಸ್ರೋತಸ್ಸು ಅಂದರೆ ರಕ್ತವು ಗಾಳಿಯು ನೀರು ಸಹ ಪ್ರೋಡ್ಯಾಡುವ ಮಾರ್ಗದಹೆಸರು ಇವು ಯಾವವೆಂದರೆ—ಶ್ರವಣ, ನಯನ, ಗುದ, ಘ್ರಾಣ, ಮೇಢ್ರ, ವದನ. ಇವು ಸ್ತ್ರೀರುಗಳಿಗೂ ಪುರುಷರಿಗೂ ಒಂದೇ ವಿಧವಾಗಿರುವದಲ್ಲದೆ, ಎರಡು ಸ್ತನಗಳು, ಯೋನಿ ಈ ಮೂರು ಸ್ತ್ರೀರುಗಳಿಗೆ ಅಧಿಕವಾಗಿರುತ್ತೆ.

೧೪. ಕಂಡರ—ಅಂದರೆ ದೊಡ್ಡ ಸ್ನಾಯುಗಳು. ಇವು ಹಸ್ತಪಾದಾದಿ ಅಂಗಗಳಲ್ಲಿ ಅಗಲಿಸುವದಕ್ಕೂ ಬಗ್ಗಿಸುವದಕ್ಕೂ ಸಹ ೧೬ ನರಗಳು ಸಮರ್ಥಗಳಾಗಿವೆ. ಇವುಗಳಲ್ಲಿ ಕಾಲುಸಂಬಂಧಿ ೪, ಕೈಗಳಲ್ಲಿ ೪, ಕುತ್ತಿಗೆಯಲ್ಲಿ ೪, ಬೆನ್ನಿನಲ್ಲಿ ೪ ಸಹ ಇರುತ್ತವೆ. ಮತ್ತು ಕಾಲುನಾಡಿ ೪, ಕೈನಾಡಿ ೪, ಇವುಗಳ ಕೊನೆ ಉಗರುಗಳು; ಕುತ್ತಿಗೆ, ಹೃದಯ ಇವುಗಳಿಗೆ ಬಂಧನ ಮಾಡಿಕೊಂಡು ಅಧೋಭಾಗದಲ್ಲಿ ಹೋದಂಥಾ ನಾಡಿಗಳ ಕೊನೆಗಳಿಗೆ ಬಿಂಬಮಂಡಲವೆಂದು ಹೆಸರು ಉಂಟಾಗಿಧೆ. ಶ್ರೋಣೀ ಅಂದರೆ ಕಟಿಯನ್ನು ಸುತ್ತಿಕೊಂಡು ಪೃಷ್ಠವನ್ನು ಬಂಧನಮಾಡಿ ಅಧೋ ಭಾಗಕ್ಕೆ ಹೋಗಿರುವ ನಾಡಿಗಳು. ಅದರ ಮುಂದು ಗಡೆಯಲ್ಲಿ ಉದಕವೂ ಕಟಿಯೂ ಇಧೆ. ಹಾಗೆಯೇ ಮಸ್ತಕ, ಹೃದಯ, ವಕ್ಷಸ್ಥಲ, ಅಕ್ಷಿಪಿಂಡಗಳು, ಸ್ತನಪಿಂಡಗಳು ಸಹ ನಾಡಿಗಳಿಗೆ ಅಗ್ರಭಾಗಗಳಾಗಿವೆ.

೧೫. ಜಾಲಕ—ಅಂದರೆ ಮಾಂಸ, ಸಿರ, ಸ್ನಾಯು, ಅಸ್ಥಿ ಇವುಗಳ ಗವಾಕ್ಷಾಕಾರಗಳಾದ ಛಿದ್ರಗಳು; ಇವು ಪ್ರೊಂದೊಂದರಲ್ಲಿ ನಾಲ್ಕು ನಾಲ್ಕು ಪ್ರಕಾರವಾಗಿವೆ. ಇವು ಮಣಿಕಟ್ಟಿನಲ್ಲೂ ಗುಲ್ಫಸ್ಥಾನದಲ್ಲೂ ಸಹ ಇರುತ್ತವೆ. ಇವುಪರಸ್ಪರ ಸಂಬಂಧಿಸಿಕೊಂಡಿವೆ.

೧೬. ಕೂರ್ಚ—ಅಂದರೆ ತಿರಪಾಗಿರುವ ಸುಳಿಗಳು. ಇವು ಆರು ಪ್ರಕಾರವಾಗಿವೆ. ಮಾಂಸದಿಂದಲೂ, ಸ್ನಾಯುಯಿಂದಲೂ ಕೂಡಿ ಕೆಂಪಾಗಿ ತೇಜಸ್ವಿಯಾಗಿ ಜಾಲಕವಿಸ್ತಾರದಿಂದ ಕೈಕಾಲುಗಳಲ್ಲಿ ೪, ಗ್ರೀವ ಮಧ್ಯದಲ್ಲಿ ೧, ಶಿಶ್ನದಲ್ಲಿ ೧ ಸಹ ಇರುತ್ತವೆ.

೧೭. ರಜ್ಜುಗಳ ವಿವರಣೆ.—ಇವು ಮಾಂಸಮಯವಾದ ಧಪ್ಪವಾದ ನಾಲ್ಕು ಹಗ್ಗಗಳು, ಬೆನ್ನಿನ ಎರಡು ಪಾರ್ಶ್ವಗಳಲ್ಲಿ ಇರುತ್ತವೆ. ಇವು ಮಾಂಸದ ಮುದ್ದೆಯನ್ನು ಬಂಧನ ಮಾಡಿಕೊಂಡು, ಎರಡು ಮಾಂಸದಮೇಲೂ ಎರಡು ಮಧ್ಯಪ್ರದೇಶದಲ್ಲೂ ಸಹ ಇರುತ್ತವೆ.

೧೮. ಹೊಲಿಗೆ ೭ ಪ್ರಕಾರಗಳಾಗಿವೆ.—ತಲೆಯಲ್ಲಿ ೫, ಶಿಶ್ನದಲ್ಲಿ ೧ ನಾಲಿಗೆಯಲ್ಲಿ ೧ ಸಹ ಇರುತ್ತವೆ.

೧೯. ಸಂಘಾತವೆಂದರೆ ಕೂಡುವದರ ವಿವರ.—ಮೂಳೆಗಳ ಕೂಡುವಿಕೆಗಳು ೧೪. ಇವುಗಳು ಕಾಲುಗಳ ಹರಡುಗಳಲ್ಲಿ ೨, ಮೊಣಕಾಲುಗಳಲ್ಲಿ ೨, ಅಂಡಸಂಧಿಯಲ್ಲಿ ೧, ಮುಂಡಿಚಿಪ್ಪುಗಳಲ್ಲಿ ೨, ಮಣಿಕಟ್ಟುಗಳಲ್ಲಿ ೨, ಮೊಳಕೈಗಳಲ್ಲಿ ೨, ಶಿರಸ್ಸಿನಲ್ಲಿ ೩ ಸಹ ಇರುತ್ತವೆ.

೨೦. ಸೀಮಂತ ಅಂದರೆ ತಲೆಯಲ್ಲಿರುವ ಐದು ಹೊಲಿಗೆಗಳ ಹೆಸರು.

೨೧. ಅಸ್ಥಿಸಂಖ್ಯೆಯು ಆಯುರ್ವೇದಪ್ರಕಾರ ೩೬೦; ಶಲ್ಯತಂತ್ರ ಪ್ರಕಾರ ೩೦೦, ಇವುಗಳ ವಿವರಣೆ.—ಶಾಖಾ ಮಧ್ಯದಲ್ಲಿ ೧೨೦, ಟೊಂಕದ ಪಾರ್ಶ್ವದಲ್ಲಿ ೧೧೭, ಮನ್ಯಾ ಮೇಲುಭಾಗದಲ್ಲಿ ೬೩ ಸಹ ಇರುತ್ತೆ.

೧. ಶಾಖಾಮಧ್ಯಲ್ಲಿರುವ ೧೨೦ ಮೂಳೆಗಳವಿವರ.—ಕಾಲಿನ ಬೆರಳು ಒಂದೊಂದರಲ್ಲಿ ಮೂರರ ಪ್ರಕಾರ ೧೫, ಅಂಗಾಲುಹರಡು, ಹಿಮ್ಮಡ ಇವುಗಳಲ್ಲಿ ೧೦, ಪೃಷ್ಠ ಭಾಗದಲ್ಲಿ ೧, ಜಂಘೆಯಲ್ಲಿ ೨, ಜಾನುವಿನಲ್ಲಿ ೧, ತೊಡೆಯಲ್ಲಿ ೧, ವೊಟ್ಟು ವೊಂದುಕಾಲಿಗೆ ೩೦ರ ಪ್ರಕಾರ ೨ ಕೈ ೨ ಕಾಲುಗಳಿಂದ ೧೨೦ ಇರುತ್ತವೆ.

೨. ಟೊಂಕದ ಪಾರ್ಶ್ವದ ೧೧೭ ಮೂಳೆಗಳ ವಿವರ.—ನಡುವಿನಲ್ಲಿ ೫ಕ್ಕೆ ಉಪಸ್ಥ, ಗುದ, ಕಟಿಪಶ್ಚಾದ್ಭಾಗಗಳಲ್ಲಿ ೪, ಟೊಂಕದ ಎರಡು ಪಾರ್ಶ್ವ ಮಧ್ಯದಲ್ಲಿ ೧ ಸಹ ಇರುತ್ತವೆ. ಪೃಷ್ಠದಲ್ಲಿ ೩೦, ಟೊಂಕದ ಎರಡು ಪಾರ್ಶ್ವಗಳಲ್ಲಿ ವೊಟ್ಟು ೭೨, ಹೊಟ್ಟೆಯಲ್ಲಿ ೮, ನೇತ್ರಗಳಲ್ಲಿ ೨ ಸಹ ಇರುತ್ತವೆ.

೩. ಮನ್ಯಾ ಮೇಲುಭಾಗದಲ್ಲಿರುವ ೬೩ ಮೂಳೆಗಳಿಗೆ ವಿವರ.—ಮನ್ಯಾದಲ್ಲಿ ೯, ಕಂಠದಲ್ಲಿ ೪, ಹನುಸ್ಥಾನದಲ್ಲಿ ೨, ದಂತಗಳಲ್ಲಿ ೩೨, ಮೂಗಿನಲ್ಲಿ ೩, ಕಿರನಾಲಿಗೆ ಹಿಂಭಾಗದ ತಾಲುಮಾರ್ಗದಲ್ಲಿ ೧, ಗಲ್ಲದಲ್ಲಿ ೨, ಶಂಖದಲ್ಲಿ ೨, ನೆತ್ತಿಯಲ್ಲಿ ೬, ಕರ್ಣದಲ್ಲಿ ೨ ಸಹ ಇರುತ್ತವೆ. ಆದರೆ ಲಕ್ಷಣ ಪುರುಷನಿಗೆ ಹೊರ್ತಾಗಿ ಇತರರಿಗೆ ೩೨ ಹಲ್ಲುಗಳೂ ಆಯುರ್ವೇದ ಪ್ರಕಾರ ೩೬೦ ಮೂಳೆಗಳೂ ಸಹ ಇರುವದಿಲ್ಲ.

೪. ಐದುಪ್ರಕಾರ ಎಲುವುಗಳ ವಿವರ.—ಕಪಾಲ, ತರುಣ, ರುಚಿಕ, ವಲಯ, ನಲಕಗಳೆಂಬವು. ಇವು ಇರುವ ಸ್ಥಾನಗಳು ಮೊಣಕಾಲುಗಳ

ಲ್ಲಿ, ಕಟಿಪಶ್ಚಾದ್ಭಾಗಗಳಲ್ಲಿ, ಸ್ಕಂಧಗಳಲ್ಲಿ, ಗಂಡಸ್ಥಳಗಳಲ್ಲಿ, ಶಂಖದಲ್ಲಿ, ಮಸ್ತಕದಲ್ಲಿ, ಕಾಲಿನಲ್ಲಿ ಕಪಾಲಸಂಜ್ಞೆಕ ಮೂಳೆಗಳೆಂದೂನೂ, ಹಲ್ಲುಗಳ ಮೂಳೆಗಳಿಗೆ ರುಚಕ ಸಂಜ್ಞೆಕ ಮೂಳೆಗಳೆಂದೂನೂ, ಮೂಗು, ಕಿವಿ, ಮನ್ಯಾ, ನೇತ್ರಕೋಶ ಇವುಗಳಲ್ಲಿರುವ ಮೂಳೆಗಳಿಗೆ ತರುಣ ಸಂಜ್ಞೆಕ ಮೂಳೆಗಳೆಂದೂನೂ, ಕೈಕಾಲು, ಪಾರ್ಶ್ವ, ಬೆನ್ನು, ಉದರ ಇವುಗಳಲ್ಲಿರುವ ಮೂಳೆಗಳಿಗೆ ವಲಯಮೂಳೆಗಳೆಂದೂನೂ, ಇತರ ಸ್ಥಳಗಳಲ್ಲಿರುವ ಮೂಳೆಗಳಿಗೆ ನಲಕಮೂಳೆಗಳೆಂದೂನೂ ಸಹ ಇರುತ್ತವೆ. ಇದಕ್ಕೆ ದೃಷ್ಟಾಂತ—ಹ್ಯಾಗೆ ವೃಕ್ಷವು ಮಧ್ಯದಲ್ಲಿ ಸಾರವಿದ್ದು ಜೀವಿಸಿಕೊಂಡಿರುತ್ತೋ ಹಾಗೆ ಅಸ್ಥಿವೊಳಗೆ ಸಾರವಿರುವದ್ದರಿಂದ ಮನುಷ್ಯನು ಬದುಕಿರುತ್ತಾನೆ. ಆದ್ದರಿಂದಲೇ ಅಸ್ಥಿಯು ಶರೀರಕ್ಕೆ ಸಾರಭೂತವಾದ್ದು. ತ್ವಕ್ಕು ಮತ್ತು ಮಾಂಸ ಸಹ ನಷ್ಟವಾದಾಗ್ಯೂ ಅಸ್ಥಿಯು ನಷ್ಟವಾಗುವದಿಲ್ಲ. ಈ ಅಸ್ಥಿಗಳು ದೊಡ್ಡ ನರಗಳಿಂದಲೂ, ಸಣ್ಣನರಗಳಿಂದಲೂ, ಮಾಂಸಗಳಿಂದಲೂ ಕಟ್ಟಲಟ್ಟಿರುತ್ತೆ. ಇವುಗಳಿಂದ ಅಸ್ಥಿಯು ಸೊಡಲಿ ಜಾರಿ ಬೀಳುವದಿಲ್ಲ.

೨೨. ಅಸ್ಥಿ ಸಂಧಿಗಳು ಚಲಿಸುವಂಥಾವು, ಚಲಿಸದೆ ಯಿರುವಂಥಾವು ಸಹ ಯಿರುತ್ತವೆ. ಈ ಸಂಧಿಗಳ ವಿವರ.—ಒಂದು ಪಾದದ ನಾಲ್ಕು ಬೆರಳುಗಳಲ್ಲಿ ಮೂರರಪ್ರಕಾರ ೧೨, ಅಂಗುಷ್ಠದಲ್ಲಿ ೨, ಮೊಣಕಾಲಿನಲ್ಲಿ ೧, ಗುಲ್ಫದಲ್ಲಿ ೧, ವಂಕ್ಷಣದಲ್ಲಿ ೧, ಈ ಪ್ರಕಾರ ೧೭ ಸಂಧಿಗಳು ಒಂದು ಕಾಲಿನಲ್ಲಿರುತ್ತವೆ. ಇದೇಮೇರೆ ೨ ಕೈ ೨ ಕಾಲುಗಳಿಂದ ೬೮ ಸಂಧಿಗಳಿರುತ್ತವೆ.

೧. ಕಟಿಯೇ ಆದಿಯಾಗಿ ಮನ್ಯಾ ಮೇಲುಭಾಗದಲ್ಲಿರುವ ಸಂಧಿಗಳಿಗೆ ವಿವರ.—ಕಟಿಸಂಬಂಧಿ ಕಪಾಲಾಸ್ಥಿಯಲ್ಲಿ ೩, ಪೃಷ್ಠದಲ್ಲಿ ೨೪, ಈ ಪೃಷ್ಠದ ಉಭಯ ಪಾರ್ಶ್ವದಿಂದಲೂ ೨೪, ಉರದಲ್ಲಿ ೮, ಈ ಪ್ರಕಾರ ವೊಟ್ಟು ೫೯ ಸಂಧಿಗಳಿರುತ್ತವೆ.

೨. ಮಧ್ಯ ಪ್ರದೇಶದಲ್ಲಿರುವ ಸಂಧಿಗಳಿಗೆ ವಿವರ.—ಗ್ರೀವ ಅಂದರೆ ಮನ್ಯಾ ಮುಂಭಾಗದಲ್ಲಿ ೮, ಕಂಠದಲ್ಲಿ ೩, ಅನ್ನಾ ನೀರು ವೊಳಗೆ ಇಳಿಯುವ ಕೊಳವೆಗಳು ಹೃದಯ ಮತ್ತು ಕ್ಲೋಮಗಳಿಗೆ ಬಂಧನ ಮಾಡಿಕೊಂಡು ಇರುವ ಕಂಠದಲ್ಲಿ ೧೦, ದಂತಮೂಲಗಳಲ್ಲಿ ೩೨, ಕಾಕಲೇಲಿ ೧, ನಾಸಿಕದಲ್ಲಿ ೧, ನೇತ್ರಕೋಶಸಂಬಂಧವಾದ ತರುಣಾಸ್ಥಿಯಲ್ಲಿ ೨, ಗಂಡ, ಕರ್ಣ, ಶಂಖ ಇವುಗಳಲ್ಲಿ ೬, ಹನುಗಳಲ್ಲಿ ೨, ಭ್ರು

ಕಟಿ ಮೇಲುಭಾಗ ಅಂಗದಲ್ಲಿ ೨, ಮಸ್ತಕ ಸಂಬಂಧಿ ಕಪಾಲಾಸ್ಥಿಯಲ್ಲಿ ೫, ಮಸ್ತಕದಲ್ಲಿ ೧, ಈ ಪ್ರಕಾರ ೮೩ ಸಂಧಿಗಳು ಇರುತ್ತವೆ. ಯೆಲ್ಲಾ ವೊಟ್ಟು ೨೧೦ ಸಂಧಿಗಳು ಇರುತ್ತವೆ.

೩. ಸಂಧಿಗಳ ಹೆಸರು, ಲಕ್ಷಣ ಮತ್ತು ಇರತಕ್ಕಸ್ಥಾನಗಳು.—ಕೋರಾ, ಉಲೂಖಲ, ಸಾಮುದ್ರ, ಪ್ರತರ, ನುನ್ನಸೇವನಿ, ವಾಯಸತುಂಡ, ಮಂಡಲ, ಶಂಖಾವರ್ತಗಳೆಂಬ ಹೆಸರುಳ್ಳ ಯೆಂಟುವಿಧ ಸಂಧಿಗಳು. ತುಟಿ, ಮಣಿಬಂಧ, ಗುಲ್ಫ, ಜಾನು, ಕೂರ್ಪರ ಇವುಗಳಲ್ಲಿ ಇರುವ ಸಂಧಿಗಳು ಮೊಗ್ಗಿನಹಾಗೆ ಇರುವದರಿಂದ ಕೋರಾಯೆಂದು ಕರೆಸಿಕೊಂಡವು. ಕಕ್ಷ, ವಂಕ್ಷಣ, ಹಲ್ಲುಗಳಲ್ಲಿ ವೊರಳು ಕಲ್ಲಿನಹಾಗೆ ಸಂಧಿಗಳು ಗುಂಡಿಯಹಾಗಿರುವದ್ದರಿಂದ ಉಲೂಖಲವೆಂದು ಕರೆಸಿಕೊಂಡವು. ಸ್ಕಂಧ, ಪೀಠ, ಗುದ, ಪಾದ, ನಿತಂಬ ಇವುಗಳಲ್ಲಿ ಸಂಪುಟಪ್ರಾಯವಾಗಿರುವದ್ದರಿಂದ ಸಾಮುದ್ರವೆಂದು ಕರೆಸಿಕೊಂಡವು. ಗ್ರೀವಾ, ಪೃಷ್ಠ ಇವುಗಳಲ್ಲಿ ಸರಪಣಿಯಹಾಗೆ ಇರುವದ್ದರಿಂದ ಪ್ರತರವೆಂದು ಕರೆಸಿಕೊಂಡವು. ಶಿರಸ್ಸು, ಕಟಿ, ಕಪಾಲಾಸ್ಥಿಗಳಲ್ಲಿ ಮಡಿಕೆ ಶಕಲದಹಾಗೂ ಹೊಲದಿರುವಹಾಗೂ ಇರುವದ್ದರಿಂದ ನುನ್ನಸೇವನಿಯೆಂದು ಕರೆಸಿಕೊಂಡವು. ಚುಬುಕದ ಯೆರಡು ಪಾರ್ಶ್ವಗಳಲ್ಲಿ ಕಾಗೇ ಕೊಕ್ಕಿನಹಾಗೆ ಇರುವದ್ದರಿಂದ ವಾಯಸತುಂಡವೆಂದು ಕರೆಸಿಕೊಂಡವು. ಕರ್ಣ, ಶೃಂಗಾಟಕಗಳಲ್ಲಿ ಶಂಖದ ಸುಳಿಹಾಗೆ ಇರುವದ್ದರಿಂದ ಶಂಖಸಂಧಿಯೆಂದು ಕರೆಸಿಕೊಂಡವು. ಮೇಲೆ ಹೇಳಲ್ಪಟ್ಟ ಸಂಧಿಗಳು ಮೂಳೆಗಳಲ್ಲಿಯೇ ಹೊರ್ತು, ಪೇಶೀ, ಸ್ನಾಯು, ಸಿರೆಗಳಲ್ಲಿ ಇಲ್ಲ.

೨೩. ಸ್ನಾಯು ಅಂದರೆ ಸಣ್ಣ ನರಗಳು.—ಇವುಗಳ ಸಂಖ್ಯೆ ೯೦೦. ಇವು ಹಸ್ತ ಪಾದಗಳಲ್ಲಿ ೬೦೦, ಮಧ್ಯಪ್ರದೇಶದಲ್ಲಿ ೨೩೦, ಗ್ರೀವೆ ಇಂದ ಊರ್ಧ್ವ ಭಾಗದಲ್ಲಿ ೭೦ ಸಹ ಯಿರುತ್ತವೆ.

೧. ಹಸ್ತ ಪಾದಗಳಲ್ಲಿ ಇರತಕ್ಕ ಸ್ನಾಯುಗಳು.—ಬೆರಳು ವೊಂದಕ್ಕೆ ೬ರ ಪ್ರಕಾರ ವೊಂದು ಪಾದದಲ್ಲಿ ೩೦, ನಾಳಾ, ಕೂರ್ಚ, ಗುಲ್ಫ ಇವುಗಳಲ್ಲಿ ೩೦, ಮಂಡಿಯಲ್ಲಿ ೩೦, ಜಾನುಮಧ್ಯದಲ್ಲಿ ೧೦, ತೊಡೆಯಲ್ಲಿ ೪೦, ವಂಕ್ಷಣದಲ್ಲಿ ೧೦, ಈ ಪ್ರಕಾರ ೧೫೦ ಇರುತ್ತವೆ. ಇದೇಮೇರೆ ಎರಡು ಕೈ ಎರಡು ಕಾಲುಗಳಿಂದ ೬೦೦ ಇರುತ್ತವೆ.

೨. ಮಧ್ಯ ಪ್ರದೇಶದಲ್ಲಿರುವ ಸ್ನಾಯುಗಳು.—ಟೊಂಕದಲ್ಲಿ ೬೦, ಬೆನ್ನಿನಲ್ಲಿ ೮೦, ಯೆರಡು ಪಾರ್ಶ್ವಗಳಲ್ಲಿ ೬೦, ವಕ್ಷಸ್ಥಳದಲ್ಲಿ ೩೦, ಈ ಪ್ರಕಾರ ೨೩೦ ಇರುತ್ತವೆ.

೩. ಮನ್ಯಾ ಮೇಲುಗಡೆ ಇರುವ ಸ್ನಾಯುಗಳು.–ಗ್ರೀವಾ ಮಧ್ಯದಲ್ಲಿ ೩೬, ಮಸ್ತಕದಲ್ಲಿ ೩೪, ಈ ಮೇರೆ ೭೦ ಇರುತ್ತವೆ.

ಈ ಮೇಲೆ ಹೇಳಲ್ಪಟ್ಟ ಪ್ರಕಾರ ೯೦೦ ಸ್ನಾಯುಗಳು ಶರೀರವನ್ನು ಬಂಧಿಸಿಕೊಂಡಿರುತ್ತವೆ. ಇವು ಕಂಡರ, ಸುಷಿರ, ಪೃಥುಲ, ವರ್ತುಲ ಯೆಂದು ನಾಲ್ಕು ಪ್ರಕಾರ ವಿರುತ್ತವೆ. ಹಸ್ತಪಾದಗ್ರೀವಾಗಳಲ್ಲಿ ಕಂಡರಸ್ನಾಯುಗಳು, ಆಮಾಶಯ ಪಕ್ವಾಶಯ ವಸ್ತಿಗಳಲ್ಲಿ ಬಿಲಯುಕ್ತಗಳಾಗಿರುವ ಸುಷಿರಸ್ನಾಯುಗಳು, ಪಾರ್ಶ್ವಗಳಲ್ಲಿ ಪೃಥುಲಸ್ನಾಯುಗಳು, ಮಸ್ತಕದಲ್ಲಿ ವರ್ತುಲ ಸ್ನಾಯುಗಳು ಸಹ ಇರುತ್ತವೆ. ಇದಕ್ಕೆ ದೃಷ್ಟಾಂತ—ಹಡಗು ಭಾರವನ್ನು ವಹಿಸಿ ಬಂಧನ ಯುಕ್ತವಾಗಿ ನೀರಿನಮೇಲೆ ತೇಲುವ ತೆರದಿ ಸ್ನಾಯುಗಳು ಶರೀರವನ್ನು ಬಂಧಿಸಿ ಆ ಶರೀರಕ್ಕೆ ತಿರಗಾಡುವದಕ್ಕೆ ಲಾಘವವನ್ನುಂಟು ಮಾಡುತ್ತೆ.

೪. ಸ್ನಾಯುಗಳಲ್ಲಿ ವಿಕಾರ ಉಂಟಾದರೆ ಪ್ರಾಣಕ್ಕೆ ಭಯ ಉಂಟಾಗುತ್ತೆ.—ಪೇಶಿ, ಅಸ್ಥಿ, ಸಂಧಿ, ಸಿರಾ ಇವುಗಳಲ್ಲಿ ವಿಕಾರ ಉಂಟಾದರೆ ಪ್ರಾಣಭಯ ಉಂಟಾಗುವದಿಲ್ಲ. ಆದ್ದರಿಂದ ಯಾವ ಮನುಷ್ಯನಾದಾಗ್ಯೂ ಬಾಹ್ಯಾಭ್ಯಂತರಗಳಲ್ಲಿ ಸ್ನಾಯು ಭೇದಗಳನ್ನು ತಿಳಿದರೆ ಶರೀರದಲ್ಲಿ ಗುಪ್ತಶಲ್ಯದಿಂದ ತೆಗೆಯುವದಕ್ಕೆ ಸಮರ್ಥನಾಗುತ್ತಾನೆ.

೨೪. ಪೇಶಿ ಅಂದರೆ ಮಾಂಸದ ಮುದ್ದೆಗಳು. ಇವುಗಳು ಶರೀರದಲ್ಲಿ ೫೦೦ ಇರುತ್ತವೆ.—ಹ್ಯಾಗಂದರೆ ಕೈಕಾಲುಗಳಲ್ಲಿ ೪೦೦, ಮಧ್ಯಪ್ರದೇಶದಲ್ಲಿ ೬೬, ಮನ್ಯಮೇಲುಭಾಗದಲ್ಲಿ ೩೪, ಈಪ್ರಕಾರಇರುತ್ತವೆ. ಆದರೆ ಗಯದಾಸನ ಗ್ರಂಥದಲ್ಲಿ ಮಧ್ಯಪ್ರದೇಶದಲ್ಲಿ ೬೦, ಊರ್ಧ್ವಪ್ರದೇಶದಲ್ಲಿ ೪೦ ಎಂಬದಾಗಿ ಬರದಿರುತ್ತಾನೆ.

೧. ಕೈ ಕಾಲುಗಳಲ್ಲಿ ಇರುವ ಪೇಶಿಗಳ ವಿವರ.—ಕಾಲು ಬೆರಳು ವೊಂದೊಂದರಲ್ಲಿ ೩ರ ಪ್ರಕಾರ ಐದು ಬೆರಳುಗಳಿಂದ ೧೫, ಪಾದಾಗ್ರದಲ್ಲಿ ೧೦, ಪಾದಪೃಷ್ಠದಲ್ಲಿ ೧೦, ಗುಲ್ಫದಲ್ಲಿ ೫, ಗುಲ್ಫದ ಕೆಳಗೆ ೧೦, ಗುಲ್ಫಮಧ್ಯದಲ್ಲಿ ೨೦, ತೊಡೆಯಲ್ಲಿ ೨೦, ವಂಕ್ಷಣದಲ್ಲಿ ೧೦, ಈಪ್ರಕಾರ ವೊಂದು ಕಾಲಿಗೆ ೧೦೦ ಪೇಶಿಗಳು ಇರುತ್ತೆ. ಇದೇಮೇರೆ ಎರಡು ಕೈಎರಡು ಕಾಲುಗಳಿಂದ ೪೦೦ ಇರುತ್ತವೆ.

೨. ಮಧ್ಯಪ್ರದೇಶದಲ್ಲಿರುವ ಪೇಶಿಗಳ ವಿವರ.—ಗುದದಲ್ಲಿ ೩, ವಲಿತ್ರಯ ಅಂದರೆ ಶಿಶ್ನದಲ್ಲಿ ೧, ಜೋಲಿಗೆಯಲ್ಲಿ ೧, ವೃಷಣದಲ್ಲಿ ೨, ಆಸನ ಸಮೀಪದ ಹಿಂಭಾಗದಲ್ಲಿ ೫, ಟೊಂಕದಲ್ಲಿ ೧೦, ವಸ್ತಿ ಮಸ್ತಕದಲ್ಲಿ ೨, ಉದರದಲ್ಲಿ ೫, ನಾಭಿಯಲ್ಲಿ ೧, ಪೃಷ್ಠದ ಮೇಲುಗಡೆ ಉದ್ದುದ್ದವಾಗಿ ೧೦, ಎರಡು ಪಾರ್ಶ್ವಗಳಲ್ಲಿ ೬, ವಕ್ಷಸ್ಥಳದಲ್ಲಿ ೧೦, ಸ್ಕಂಧ ಅಕ್ಷಕಗಳ ಸುತ್ತಲೂ ೫, ಹೃದಯ ಆಮಾಶಯಗಳಲ್ಲಿ ೨, ಯಕೃತ್ ಪ್ಲೀಹ ಉಂಡುಕಗಳಲ್ಲಿ ೩, ಈಪ್ರಕಾರ ೬೬ ಇರುತ್ತವೆ.

೩. ಮನ್ಯಾ ಮೇಲುಭಾಗದಲ್ಲಿರುವ ೩೪ ಪೇಶಿಗಳಿಗೆ ವಿವರ.—ಮನ್ಯೆವಿನಲ್ಲಿ ೪, ಹನುವಿನಲ್ಲಿ ೮, ಕಾಕಲ ಗಳಗಳಲ್ಲಿ ೨, ತಾಲುವಿನಲ್ಲಿ ೨, ನಾಲಿಗೆಯಲ್ಲಿ ೧, ಓಷ್ಠಗಳಲ್ಲಿ ೨, ಮೂಗಿನಲ್ಲಿ ೨, ಕಣ್ಣುಗಳಲ್ಲಿ ೨, ಗಂಡದಲ್ಲಿ ೪, ಕಿವಿಗಳಲ್ಲಿ ೧, ಲಲಾಟದಲ್ಲಿ ೪, ಮಸ್ತಕದಲ್ಲಿ ೧, ಈಪ್ರಕಾರ ಇರುತ್ತವೆ.

ಈ ಪ್ರಕಾರ ಪೊಟ್ಟು ೫೦೦ ಪೇಶಿಗಳು ಶರೀರದಲ್ಲಿ ಇರುತ್ತವೆ. ಇವುಗಳು ಸಿರಾ, ಸ್ನಾಯು, ಸಂಧಿ, ಅಸ್ಥಿ ಇವುಗಳನ್ನು ಧರಿಸಿಕೊಂಡು ಅವುಗಳಿಗೆ ಬಲವುಂಟು ಮಾಡಿ ಯೆಲ್ಲಾ ಶರೀರಕ್ಕೂ ಬಲಕೊಡುತ್ತೆ. ಆದರೆ ಸ್ತ್ರೀಯರುಗಳಿಗೆ ಎರಡು ಸ್ತನಗಳಲ್ಲೂ ಒಂದು ಕಾಲದಲ್ಲಿ ಧಪ್ಪನಾಗುವಂಥಾವು ೧೦, ಯೋನಿಯಲ್ಲಿ ೪, [ಇವುಗಳಲ್ಲಿ ಒಳಗೆ ೨, ಯೋನಿಕರ್ಣಿಕೆ ಬಾಜುವಿನಲ್ಲಿ ಸುಖಸ್ಪರ್ಶವಾಗುವಂಥಾ ವರ್ತುಲಾಕಾರವಾದವು ೨] ಗರ್ಭಾಶಯದಲ್ಲಿ ಸುಳಿಹಾಗೆ ೩, ಗರ್ಭಾಶಯಕ್ಕೆ ಶುಕ್ರಾರ್ತವ ಪ್ರವೇಶ ಮಾಡಿಸುವಂಥಾವು ೩, ಈಪ್ರಕಾರ ೨೦ ಪೇಶಿಗಳು ಅಧಿಕವಾಗಿರುತ್ತವೆ. ಗರ್ಭಾಶಯದ ಮೂರನೇ ಆವರ್ತ ಮಧ್ಯದಲ್ಲಿ ಕೆಂಪು ಮೀನಿನ ಮುಖದ ಹಾಗೆ ಇಧೆ.

೪. ಪೇಶಿಗಳು ಇರುವಸ್ಥಾನ ವಿಶೇಷದಿಂದ ಅವುಗಳ ಪ್ರಮಾಣಗಳ ವಿವರ.—ಧಪ್ಪ, ಸಣ್ಣ, ಸೂಕ್ಷ್ಮ, ದುಂಡು, ತುಂಡು, ಉದ್ದ, ಇನ್ನೂ ಅನೇಕ ಪ್ರಕಾರವಾಗಿ ಕೋಮಲವಾಗಿ ಕಠಿನವಾಗಿ ಸ್ಥಿರವಾಗಿವೆ. ಸ್ತ್ರೀಯರುಗಳಿಗೆ ಶಿಶ್ನ ಮತ್ತು ವೃಷಣಗಳು ಇಲ್ಲದಕಾರಣ ಪೇಶಿಗಳೇ ಬೇರೆ ಇರುತ್ತವೆ. ಅವು ಯಾವವೆಂದರೆ—ಸ್ತ್ರೀಯರುಗಳ ಗರ್ಭಾಶಯದಲ್ಲಿ ಮೂರು ಪೇಶಿಗಳು ಇರುತ್ತವೆ. ಆದರೆ ಗಯದಾಸ್ ತಂತ್ರದಲ್ಲೂ ಭೋಜವಚನದಲ್ಲೂ ಸಹ ಹೆಂಗಸರುಗಳಿಗೆ ಮೂರು ಪೇಶಿ ಕಡಮೆ ಯೆಂದು ಹೇಳಿ ಇಧೆ.

೫. ಗರ್ಭಾಶಯ.—ಶಂಖನಾಭಿಯ ಅಕೃತಿಯಹಾಗೆ ಇರುವ ಯೋನಿಯ ಮೂರನೇ ಸುಳಿಯಲ್ಲಿ ಗರ್ಭಾಶಯವು ಕೆಂಪು ಮೀನಿನ ತಲೆ ಆಕಾರವಾಗಿಧೆ.

೬. ಶಿಶು ಹೊರಗೆ ಬರುವ ಕ್ರಮ.—ಗರ್ಭಾಶಯದಲ್ಲಿ ಶಿಶುವು ಅಂಗಸಂಕೋಚ ಮಾಡಿಕೊಂಡು ಸನ್ಮುಖವಾಗಿರುತ್ತೆ. ಪ್ರಸವಕಾಲದಲ್ಲಿ ಪೂರ್ವದ ಕರ್ಮದೆಶೆಯಿಂದ ಪ್ರಸೂತವಾಯುವು ಮಸ್ತಕ ಮುಂದಾಗಿ ಹೊರಕ್ಕೆ ನೂಕುತ್ತೆ.

೭. ಶರೀರದಲ್ಲಿ ಅಸ್ಥಿಪರಿಯಂತ ತಿಳಿಯುವದಕ್ಕೆ ಶಲ್ಯತಂತ್ರದಿಂದ ಹೊರ್ತು ಮತ್ತೊಂದು ವಿಧದಿಂದ ಆಗುವದಿಲ್ಲ.—ಶರೀರದಲ್ಲಿ ಗುಪ್ತವಾಗಿರುವ ವ್ರಣವನ್ನು ತೆಗೆಯತಕ್ಕ ವೈದ್ಯನು ಸರ್ವಾಂಗದ ಜ್ಞಾನ ಚನ್ನಾಗಿ ತಿಳಿಯಬೇಕು. ಆದ್ದರಿಂದ ವೈದ್ಯನು ಮೃತಶರೀರವನ್ನು ಚನ್ನಾಗಿ ತೊಳದು ಸ್ವಚ್ಛಮಾಡಿ ಶಾಸ್ತ್ರಜ್ಞಾನದಿಂದ ಪ್ರತ್ಯಕ್ಷವಾಗಿ ಶೋಧಿಸಿ ತಿಳಿಯಬೇಕು. ಆದರೆ ಸಂಪೂರ್ಣ ಅವಯವ ಯುಕ್ತವಾದ, ರೋಗರಹಿತವಾದ, ವಿಷ ತಗಲದೆ ಇರುವ, ನೂರುವರುಷ ಬದುಕಿದಂಥಾ ಶವವನ್ನು ತೆಗದುಕೊಂಡು ಅದರ ಕರಳುಗಳನ್ನು ತೆಗದು ನೆಲ್ಲು ಹುಲ್ಲಿಂದಲಾಗಲೀ ದರ್ಭೆಯಿಂದಲಾಗಲೀ ಸುತ್ತಿ ಒಂದು ಪೆಟ್ಟಿಗೆಯಲ್ಲಿಟ್ಟು ಬಹಳ ಆಳವಾಗದೇಲೂ ಬಹಳ ಕಮ್ಮಿಯಾಗದೇಲೂ ಇರುವ ನೀರಿನಲ್ಲಿ ಯೇಳು ದಿವಸಗಳ ಪರಿಯಂತ ಇಟ್ಟು ಇದ್ದು ಅನಂತರ ತೆಗದು ಆದರ್ಭೆಯಿಂದ ಮೆಲ್ಲಮೆಲ್ಲಗೆ ತೊಳದುನೋಡಿದರೆ ಚರ್ಮವೇ ಆದಿಯಾಗಿ ಹೊರಗೆ ವೊಳಗೆ ಇರುವ ಅಂಗಪ್ರತ್ಯಂಗಗಳು ಪೂರ್ವದಲ್ಲಿ ಹೇಳಿದ ರೀತಿ ನೋಡಿದರೆ ತಿಳಿದೀತೆ ಹೊರ್ತು ರೋಗಾದಿಗಳಿಂದ ಕೃಶವಾದ ಶರೀರವನ್ನು ತಿಳಿಯುವದಕ್ಕೆ ಆಗುವದಿಲ್ಲ.

೮. ದೇಹದಲ್ಲಿ ಆತ್ಮವು ಅತಿ ಸೂಕ್ಷ್ಮವಾಗಿರುವದ್ದರಿಂದ ಚರ್ಮ ಚಕ್ಷುಗಳಿಂದ ಕಾಣದೆ ಯಿರುವದಕ್ಕೆ ಕಾರಣವು.—ಆ ಆತ್ಮವನ್ನು ಜ್ಞಾನಚಕ್ಷು ತಪಶ್ಚಕ್ಷುಗಳಿಂದ ನೋಡಬಹುದು. ಯಾವ ಮನುಷ್ಯನಾದರೂ ಶರೀರ ಶೋಧನೆಯಿಂದಲೂ ಶಾಸ್ತ್ರ ಶೋಧನೆಯಿಂದಲೂ ಜ್ಞಾನವನ್ನು ಹೊಂದಿ ಸಂದೇಹ ನಿವರ್ತಿಮಾಡಿಕೊಂಡು ಪ್ರತಿ ಕ್ರಿಯೆಗಳನ್ನು ಮಾಡಬೇಕು.

೨೫. ಮರ್ಮಗಳು ೧೦೭ಕ್ಕೆ ವಿವರ.—ಇವುಗಳಲ್ಲಿ ಮಾಂಸಮರ್ಮ ೧೧, ಸಿರಾಮರ್ಮ ೪೧, ಸ್ನಾಯುಮರ್ಮ ೨೭, ಅಸ್ಥಿಮರ್ಮ ೮, ಸಂಧಿಮರ್ಮ ೨೦, ಈ ಪ್ರಕಾರಗಳಾಗಿವೆ.

೧. ಮಾಂಸ ಮರ್ಮ ೧೧ಕ್ಕೆ ವಿವರ.—ಹೃದಯದಲ್ಲಿ ೪, ಇಂದ್ರವಸ್ತಿ ಸಂಜ್ಞಿಕದಲ್ಲಿ ೪, ಗುದದಲ್ಲಿ ೧, ಸ್ತನರೋಹಿತ ಸಂಜ್ಞಿಕದಲ್ಲಿ ೨, ಈ ಪ್ರಕಾರ ೧೧ ಇರುತ್ತವೆ.

೨. ಶಿರಾಮರ್ಮಗಳು ೪೧ಕ್ಕೆ ವಿವರ.—ಗ್ರೀವಾ ಸಂಬಂಧಿ ೪, ಮಾತೃಕಾ ೮, ಶೃಂಗಾಟಕ ೪, ಅಪಾಂಗ ೨, ಸ್ಥಪಣಿ ೧, ಫಣ ೨, ಸ್ತನಮೂಲದಲ್ಲಿ ೨, ಅಪಸ್ತವ ೨, ಅಪಲಾಪ ೨, ಹೃದಯ ೧, ನಾಭಿ ೧, ಪಾರ್ಶ್ವ ಸಂಬಂಧಿ ೨, ಬೃಹತಿ ೨. ಲೋಹಿತಾಕ್ಷ ೪, ಉರ್ವೀ ೪, ಈ ಪ್ರಕಾರ ಇರುತ್ತವೆ.

೩. ಸ್ನಾಯುಮರ್ಮ ೨೭ಕ್ಕೆ ವಿವರ.—ಅಣಿಸಂಜ್ಞಕ ೪, ವಿಟಪ ೨, ಕಕ್ಷಧರ ೨, ಕೂರ್ಚ ೪, ಕೂರ್ಚ ಸಿರೆ ೪, ವಸ್ತಿ ೧, ಕ್ಷಿಪ್ರಸಂಜ್ಞಕ ೪, ಅಂಸ ೨, ವಿಧುರೆ ೨, ಉತ್ಕ್ಷೇಪ ೨, ಈ ಪ್ರಕಾರ ಇರುತ್ತವೆ.

೪. ಅಸ್ಥಿ ಮರ್ಮ ೮ಕ್ಕೆ ವಿವರ.—ಕಟಿತರುಣ ಸಂಜ್ಞಕ ೨, ನಿತಂಬ ೨, ಅಂಸಫಲಕ ೨, ಶಂಖ ೨, ಈ ಪ್ರಕಾರ ಇರುತ್ತವೆ.

೫. ಸಂಧಿ ಮರ್ಮ ೨೦ಕ್ಕೆ ವಿವರ.—ಜಾನು ಸಂಬಂಧಿ ೨, ಕೂರ್ಪರ ಸಂಬಂಧಿ ೨, ಸೀಮಂತ ಸಂಜ್ಞಕ ೫, ಅಧಿಪತಿ ಸಂಜ್ಞಕ ೧, ಗುಲ್ಫ ೨, ಮಣಿಬಂಧ ಸಂಬಂಧಿ ೨, ಕಕುಂದರ ೨, ಆವರ್ತ ಸಂಜ್ಞಕ ೨, ಕೃಕಾಟಿಕ ಸಂಜ್ಞಕ ೨, ಹೀಗೆ ಇರುತ್ತವೆ.

೬. ಮರ್ಮಗಳ ವಿಶೇಷ ಜ್ಞಾನ ಆಗುವದಕ್ಕೆ ಪ್ರದೇಶಗಳವಿವರ.—೧೦೭, ಮರ್ಮಗಳಲ್ಲಿ ಕಾಲು ಎರಡು ಕೈ ಎರಡು ಈ ನಾಲ್ಕರಿಂದ ಪ್ರೊಂದೊಂದಕ್ಕೆ ೧೧ರ ಪ್ರಕಾರ ೪೪ಕ್ಕೆ ವಿವರ.—ಕ್ಷಿಪ್ರ ೧, ತಲಹೃದಯ ೧, ಕೂರ್ಚ ೧, ಕೂರ್ಚ ಶಿರಸ್ಸು ೧, ಗುಲ್ಫ ೧, ಇಂದ್ರವಸ್ತಿ ೧, ಜಾನು ೧, ಉರ್ವಿ ೧, ಲೋಹಿತಾಕ್ಷ ೧, ವಿಟಪ ೧, ಈ ರೀತಿ ಇರುತ್ತವೆ. ಉದರ ಮತ್ತು ಉರ ಸೇರಿ ೧೨ಕ್ಕೆ ವಿವರ.—ಗುದ ೧, ವಸ್ತಿ ೧, ನಾಭಿ ೧, ಹೃದಯ ೧, ಸ್ತನಮೂಲ ೨, ಸ್ತನರೋಹಿತ ೨, ಅಪಲಾಪ ೨, ಅಪಸ್ತವ ೨, ಈ ಪ್ರಕಾರ ಇರುತ್ತವೆ. ಪೃಷ್ಠಗತ ೧೪ ಮರ್ಮಗಳಿಗೆ ವಿವರ.—ಕಟಿತರುಣ ೨, ಕಕುಂದರ ೨, ನಿತಂಬ ೨, ಪಾರ್ಶ್ವಸಂಧಿ ೨, ಬೃಹತಿ ೨, ಅಂಸಫಲಕ ೨, ಅಂಸ ೨, ಈ ಪ್ರಕಾರ ಇರುತ್ತವೆ. ಗ್ರೀವಾ ಮೇಲು ಭಾಗದಲ್ಲಿರುವ ೩೭ ಮರ್ಮಗಳ ವಿವರ.—ಧಮನಿ ೪, ಮಾತೃಕೆ ೮, ಕೃಕಾಟಿಕಾ ೨, ವಿಧುರ ೨, ಫಣಾ ೨, ಅಪಾಂಗ ೨ ಆವರ್ತ ೨, ಉತ್ಕ್ಷೇಪ ೨, ಶಂಖ ೨ ಸ್ಥಪಣಿ ೧, ಸೀಮಂತ ೫, ಶೃಂಗಾಟಕ ೪, ಅಧಿಪತಿ ೧, ಈ ಪ್ರಕಾರ ಇರುತ್ತವೆ.

ಮರ್ಮಗಳಿಗೆ ಪೆಟ್ಟು ಮುಂತಾದ್ದು ತಗಲಿದರೆ ಐದುಪ್ರಕಾರ ತೊಂದ್ರೆ ಉಂಟಾಗುತ್ತದೆ. ಅವುಗಳ ವಿವರ.—ಸದ್ಯಃ ಪ್ರಾಣಹಾರಿಣಿ, ಕಾಲಾಂತರ ಪ್ರಾಣ

ಹಾರಿಣಿ, ಶಲ್ಯಘ್ನಿ, ವೈಕಲ್ಯಕಾರಿಣಿ, ರುಜಾಕಾರಿಣಿ ಎಂಬದಾಗಿ ಐದು ಪ್ರಕಾರ ವಿರುತ್ತವೆ.

೧. ಸದ್ಯಃ ಪ್ರಾಣಹಾರಿಣಿ ಅಂದರೆ ಮರ್ಮ ಘಾತವಾದ ತತ್ಕಾಲದಲ್ಲಿ ಅಥವಾ ಎಂಟು ದಿವಸಗಳಲ್ಲಿ ಪ್ರಾಣ ಹೋಗಲಾಡಿಸತಕ್ಕದ್ದು.

೨. ಕಾಲಾಂತರ ಪ್ರಾಣಹಾರಿಣಿ ಅಂದರೆ ಪಕ್ಷ ಮಾಸಗಳಲ್ಲಿ ಪ್ರಾಣವಿಯೋಗ ಮಾಡಿಸತಕ್ಕದ್ದು.

೩. ಶಲಘ್ನಿ ಅಂದರೆ ಮರ್ಮಘಾತದಿಂದ ಉಂಟಾದ ವ್ರಣವು ವೊಳಗಿನಿಂದ ಹೊರಗೆ ಬಂದು ವೊಡದು ಸಾವನ್ನುಂಟುಮಾಡತಕ್ಕದ್ದು

೪. ವೈಕಲ್ಯಕಾರಿಣಿ ಅಂದರೆ ಮರ್ಮಘಾತದಿಂದ ಉಂಟಾದ ವ್ರಣವುಮಾಸಿ ಆದರೂ ಮರ್ಮಘಾತವಾದ ಅವಯವಕ್ಕೆ ವಿರೂಪವನ್ನುಂಟುಮಾಡತಕ್ಕದ್ದು.

೫. ರುಜಾಕಾರಿಣಿ ಅಂದರೆ ಮರ್ಮಘಾತದಿಂದ ಬಹಳ ವೇದನೆಯುಂಟಾಗ ತಕ್ಕದ್ದು. ಈ ಮೇರೆ ಐದು ಪ್ರಕಾರ ವಿರುತ್ತವೆ.

೧. ಸದ್ಯಃ ಪ್ರಾಣಹಾರಿಣೀ ಮರ್ಮಗಳ ವಿವರ.—ಶೃಂಗಾಟಕ ೪, ಅಧಿಪತಿ ೧, ಶಂಖ ೧, ಮಾತೃಕೆಯಂಬ ಕಂಠ ಸಂಬಂಧಿ ಸಿರ ೮, ಗುದ ೧, ಹೃದಯ ೧, ವಸ್ತಿ ೨, ನಾಭಿ ೧, ಹೀಗೆ ೧೯ ಮರ್ಮಗಳು ಇರುತ್ತವೆ.

೨. ಕಾಲಾಂತರ ಪ್ರಾಣಹಾರಕ ಮರ್ಮಗಳ ವಿವರ.—ವಕ್ಷಸ್ಥಳ ಸಂಬಂಧಿ ೮, ಸ್ತನಮೂಲದಲ್ಲಿ ೨, ಸ್ತನರೋಹಿತ ೨, ಅಪಲಾಪ ೨, ಆಪಸ್ತವ ೨, ಸೀಮಂತ ೫, ತಲಹೃದಯ ೪, ಕ್ಷಿಪ್ರ ೪, ಇಂದ್ರವಸ್ತಿ ೪, ಕಟಿತರುಣ ೨, ಪಾರ್ಶ್ವ ಸಂಬಂಧಿ ೨, ಬೃಹತಿ ೨, ನಿತಂಬ ೨, ಈ ಪ್ರಕಾರ ೪೧ ಮರ್ಮಗಳಿರುತ್ತವೆ.

೩. ವೈಕಲ್ಯಕರ ಮರ್ಮಗಳ ವಿವರ.—ಲೋಹಿತಾಕ್ಷ ೪, ಜಾನು ೨, ಉರ್ವಿ ೪, ಕೂರ್ಚ ೪, ವಿಟಪ ೨, ಕೂರ್ಪರ ೨, ಕಕ್ಷಧರ ೨, ವಿಧುರ ೨, ಕೃಟಿಕಾ ೨, ಅಂಸ ೨, ಅಂಸಫಲಕ ೨, ಅಪಾಂಗ ೨, ನೀಲಧಮನಿ ೨, ಮನ್ಯಾ ೨, ಫಣಾ ೨, ಆವರ್ತ ೨, ಈ ಮೇರೆ ೩೮ ಮರ್ಮಗಳು ಇರುತ್ತವೆ.

೪. ವಿಶಲ್ಯ ಮರ್ಮಗಳ ವಿವರ.—ಉತ್ಕ್ಷೇಪ ೨, ಸ್ಥಪಣಿ ೧, ವೊಟ್ಟು ೩ ಇರುತ್ತವೆ.

೫. ರುಜಾಕರ ಮರ್ಮಗಳ ವಿವರ.—ಗುಲ್ಫ ೨, ಮಣಿಬಂಧ ೨, ಕೂರ್ಚಶಿರಸ ೪, ಈ ಪ್ರಕಾರ ೮ ಮರ್ಮಗಳಿರುತ್ತವೆ.

ಮಾಂಸ, ಸಿರ, ಸ್ನಾಯು, ಅಸ್ಥಿ, ಸಂಧಿ, ಇವು ವೊಂದಕ್ಕೊಂದು ಕೇವಲ ಮಿಶ್ರವಾಗಿರುವದಲ್ಲದೆ ಸ್ವಭಾವವಾಗಿ ಪ್ರಾಣವಾಯುವು ಅವುಗಳಲ್ಲಿರುವದ್ದರಿಂದ ಮರ್ಮವೆಂದು ಹೇಳಿರುತ್ತೆ. ಇವುಗಳಿಗೆ ಅಭಿಘಾತದಿಂದ ವಿಕಾರ ಉಂಟಾದರೆ ಭ್ರಮೆ, ಪ್ರಲಾಪ, ಪತನ, ಪ್ರಮೋಹ ಮುಂತಾದವು ಉಂಟಾಗುತ್ತವೆ.

ಮರ್ಮಗಳ ಭೇದಕ್ಕೆ ಕಾರಣವೇನಂದರೆ.—ಸದ್ಯಃ ಪ್ರಾಣಹಾರಕ ಮರ್ಮಗಳು ಅಗ್ನಿಸಂಬಂಧವಾದವು; ಕಾಲಾಂತರ ಪ್ರಾಣಹಾರಕ ಮರ್ಮಗಳು ಜಲಉಳ್ಳವು; ವಿಶಲ್ಯಮರ್ಮಗಳು ವಾಯು ಉಳ್ಳವು; ವೈಕಲ್ಯ ಮರ್ಮಗಳು ಅಗ್ನಿವಾಯು ಉಳ್ಳವು; ರುಜಾಕರ ಮರ್ಮಗಳು ಜಲವಾಯು ಉಳ್ಳವು ; ಅಗ್ನಿಯು ಅತಿ ತ್ವರೆಯಾದ್ದರಿಂದ ಶೀಘ್ರವಾಗಿ ಪ್ರಾಣವನ್ನು ಹೋಗಲಾಡಿಸುತ್ತೆ. ಜಲ ಅಥವಾ ಕಫವು ಸ್ಥಿರವಾದ್ದರಿಂದ ಕಾಲಾಂತರದಿಂದ ಪ್ರಾಣವನ್ನು ನೀಗುತ್ತೆ. ವಾಯುರೂಪ ಪ್ರಾಣವು ಯಾವ ಮರ್ಮದಲ್ಲಿರುತ್ತದೋ ಆ ಸ್ಥಳವನ್ನು ಕಿತ್ತು ತೆಗದರೆ, ಬಂಧನವಾದ ವಾಯುವು ಹೊರಗೆ ಬಂದು ಪ್ರಾಣವನ್ನು ಹೋಗಲಾಡಿಸುತ್ತದೆ. ಯಾವ ಮರ್ಮದಲ್ಲಿ ಅಗ್ನಿ ವಾಯುಗಳು ಇರುತ್ತವೋ ಅದು ವೈಕಲ್ಯ ಮರ್ಮವು; ಯಾವದರಲ್ಲಿ ಕಫವಾಯು ಇರುತ್ತದೋ ಅದು ರುಜಾಕರ ಮರ್ಮವು.

ಮರ್ಮಭೇದದ ಎರಡನೆ ಕಾರಣವೇನಂದರೆ.—ಶರೀರದಲ್ಲಿ ಮಾಂಸಾದಿಯಾಗಿ ಐದು ಪದಾರ್ಥಗಳು ವೊಟ್ಟಾಗಿ ಯಾವ ಮರ್ಮದಲ್ಲಿರುತ್ತೋ ಆ ಮರ್ಮವು ಸದ್ಯಃ ಪ್ರಾಣಹಾರಕವಾಗಿರುತ್ತೆ. ವೊಂದು ಕಡಮೆಯಾಗಿದರ್ದೆ ಕಾಲಾಂತರ ಪ್ರಾಣಹಾರಕವು. ಯೆರಡು ಪದಾರ್ಥ ಕಡಮೆಯಾಗಿದ್ದರೆ ವಿಶಲ್ಯಘ್ನ. ಮೂರು ಕಡಮೆಯಾಗಿದ್ದರೆ ವೈಕಲ್ಯಕಾರಕ. ನಾಲ್ಕು ಕಡಮೆಯಾಗಿದ್ದರೆ ರುಜಾಕರವು. ಗುದ, ವಸ್ತಿ, ನಾಭಿ, ಹೃದಯಗಳಲ್ಲಿರುವ ಮೂಳೆಗಳು ವ್ಯಕ್ತವಾಗಿ ಕಾಣದೇ ಇರುವದ್ದರಿಂದ ಅವುಗಳು ಸದ್ಯಃ ಪ್ರಾಣಹಾರಕ ಮರ್ಮಗಳೆಂದು ಹೇಳಿದೆ.

ಮರ್ಮದಲ್ಲಿ ಮಾಂಸಗಳು ಐದು ಇವೆ. ಈ ವಿಷಯದಲ್ಲಿ ಪ್ರಮಾಣವೇನಿದೆ ಅಂದರೆ.—ಅಸ್ತಿ ಮರ್ಮದಲ್ಲಿ ಶಸ್ತ್ರ ಹೊಡದರೆ ರಕ್ತ ಬರುತ್ತಾದ್ದರಿಂದ ಯೆಲ್ಲಾ ಮರ್ಮಗಳಲ್ಲೂ ಮಾಂಸವಾದಿಯಾಗಿ ಐದು ಪದಾರ್ಥಗಳೂ ಇರುತ್ತವೆ.

ಮರ್ಮಗಳ ಮಧ್ಯದಲ್ಲಿ ವಾತ, ಪಿತ್ತ, ಕಫ, ರಕ್ತ ಇವುಗಳನ್ನು ವಹಿಸಿ ಇರುವ ನಾಡಿಗಳು ಇದ್ದುಕೊಂಡು ಸ್ನಾಯು, ಅಸ್ಥಿ, ಮಾಂಸ ಸಂಧಿಗಳನ್ನು ಪುಷ್ಟೀಕರಿಸಿ ಶರೀರವನ್ನು ಪೋಷಿಸುತ್ತೆ.

ಒಂದು ಪ್ರದೇಶದಲ್ಲಿ ಬಾಧೆಯಾಗುವದ್ದರಿಂದ ಸರ್ವ ಶರೀರಕ್ಕೆ ಪೀಡೆಯು ಅಥವಾ ಪ್ರಾಣವಿಯೋಗವು ಆಗುವದಕ್ಕೆ ಕಾರಣವೇನಂದರೆ.—ಮರ್ಮಕ್ಕೆ ಘಾಯವಾದರೆ ವಾಯು ವೃದ್ಧಿಯಾಗುತ್ತೆ, ಮತ್ತು ಸಿರದೊಳಗೆ ಪ್ರವೇಶ ಮಾ

ಡಿ ಯೆಲ್ಲಾ ಶರೀರಕ್ಕೂ ವ್ಯಾಪಿಸುತ್ತೆ, ಮತ್ತು ಬಾಧೆಯುಂಟಾಗುತ್ತೆ. ಆದ್ದರಿಂದ ಶರೀರವು ಬಾಡಿ ಕೃಶವಾಗುತ್ತೆ. ಅಥವಾ ಮರಣವನ್ನೈದಿಸುತ್ತೆ. ಆದಕಾರಣ ಯೆಲ್ಲಾ ಮರ್ಮಗಳನ್ನು ಪರೀಕ್ಷಿಸಿ ವೈದ್ಯನು ಹೊಡದು ಶಲ್ಯವನ್ನು ತೆಗೆಯಬೇಕು.

ಮರ್ಮದಲ್ಲಿ ಶಲ್ಯವು ಸರಿಯಾಗಿ ತೆಗೆಲದೆ ಇದ್ದರೆ ಅದರಿಂದ ಉಂಟಾಗುವ ವಿಕಲ್ಪವು.—ಸದ್ಯಃ ಪ್ರಾಣಹಾರಕ ಮರ್ಮದ ಕೊನೆಗೆ ಶಲ್ಯ ತಗಲಿದರೆ ಪ್ರಾಣ ನಾಶವಾಗಲಿ ಅಥವಾ ವಿರೂಪವಾಗಲಿ ಉಂಟು ಮಾಡುತ್ತೆ. ವೈಕಲ್ಯ ಮರ್ಮದ ಕೊನೆಗೆ ತಗಲಿದರೆ ಮುಂದೆ ಕೆಲವು ದಿವಸಗಳ ಮೇಲೆ ರಕ್ತವು ಸುರಿಯುವದಕ್ಕೆ ಕಾರಣವಾಗುತ್ತೆ, ಮತ್ತು ವೇದನೆ ಉಂಟು ಮಾಡುತ್ತೆ. ಇದೇ ಪ್ರಕಾರ ರುಜಾಕರ ಮರ್ಮಕ್ಕೂ ತಗಲಿದರೆವೈಕಲ್ಯಗಳು ಮುಂತಾಗಿ ಉಂಟಾಗುತ್ತವೆ.

ಸದ್ಯಃ ಪ್ರಾಣಹಾರಿಣೀ ಮರ್ಮಗಳು ವಿಶಲ್ಯ ಮರ್ಮಗಳು ಅತಿವಿದ್ಧವಾದರೆ ತತ್ಕಾಲದಲ್ಲಿ ಮರಣವನ್ನುಂಟುಮಾಡುತ್ತೆ.

ಕ್ಷಿಪ್ರಮರ್ಮಗಳ ವಿವರ.

೧. ಸ್ನಾಯು ಮರ್ಮ.—ಪಾದಗಳ ಯೆರಡು ಅಂಗುಷ್ಠಗಳು ಕ್ಷಿಪ್ರಮರ್ಮಗಳೆಂದೂನೂ ಇವುಗಳ ಅರ್ಧಾಂಗುಲಿಗೆ ಸ್ನಾಯುಮರ್ಮವೆಂದೂನೂ ತಿಳಿಯಬೇಕು. ಇವುಗಳಿಗೆ ವೇಧೆಯುಂಟಾದರೆ ಕಾಲಾಂತರದಲ್ಲಿ ಆಕ್ಷೇಪಕವಾಯುವು ಪ್ರಾಣವನ್ನು ಹೋಗಲಾಡಿಸುತ್ತದೆ.

೨. ಮಾಂಸ ಮರ್ಮ.—ಪಾದ ಮಧ್ಯಮಾಂಗುಲಿ ಮೊದಲು ಮಾಡಿಕೊಂಡು ಪಾದದವರಿಗೂ ತಲಹೃದಯ ನಾಮಕ ಮರ್ಮವೆಂದೂನೂ ಮಾಂಸಮರ್ಮವೆಂದೂನೂ ತಿಳಿಯಬೇಕು, ಅದಕ್ಕೆ ವೇಧೆಯುಂಟಾದರೆ ಕಾಲಾಂತರದಲ್ಲಿ ಪ್ರಾಣವನ್ನು ಹೋಗಲಾಡಿಸುತ್ತೆ.

೩. ಸ್ನಾಯು ಮರ್ಮ.– ಕ್ಷಿಪ್ರಸಂಜ್ಞಕ ಮರ್ಮದ ಮೇಲು ಕಡೆ ಪಾದದ ಉಭಯ ಪಾರ್ಶ್ವದಲ್ಲೂ ನಾಲ್ಕು ಅಂಗುಲದವರಿಗೂ ಕೂರ್ಚವೆಂದೂನೂ ಸ್ನಾಯು ಮರ್ಮವೆಂದೂನೂ ತಿಳಿಯತಕ್ಕದ್ದು. ಅದಕ್ಕೆ ವೇಧೆಯಾದರೆ ಪಾದವು ನಡಗುತ್ತೆ ಅಥವಾ ತಿರಗುತ್ತೆ.

೪. ಸ್ನಾಯು ಮರ್ಮ.—ಗುಲ್ಫದ ಕೆಳಗಡೆ ಯೆರಡು ಭಾಗದಲ್ಲೂ ವೊಂದಂಗುಲ ಕೂರ್ಚಶಿರಾ ಯೆಂಬ ಸ್ನಾಯು ಮರ್ಮವಿರುತ್ತದೆ. ಇದಕ್ಕೆ ವೇಧೆಯಾದರೆ ಶೂಲೆ ಬಾವುಗಳು ಉಂಟಾಗುತ್ತವೆ.

೫. ಸಂಧಿಮರ್ಮ.—ಜಂಘಾ ಮತ್ತು ಪಾದದ ಸಂಘಾತದಲ್ಲಿ ಗುಲ್ಫವಿದೆ. ಇದು ಯೆರಡಂಗುಲ ಪ್ರಮಾಣ ಸಂಧಿಮರ್ಮವೆಂದೂನೂ ವೈಕಲ್ಯಕಾರಕ ಮರ್ಮವೆಂದೂನೂ ತಿಳಿಯತಕ್ಕದ್ದು. ಇದಕ್ಕೆ ವೇಧೆಯಾದರೆ ಬಹಳ ಪೀಡೆಯಾಗುತ್ತೆ ಮತ್ತು ಕಾಲು ಕುಂಟಾಗುತ್ತೆ.

೬. ಮಾಂಸ ಮರ್ಮ.—ಹಿಮ್ಮಡಿಯಿಂದ ೧೪ ಅಂಗುಲದವರಿಗೂ ಮೇಲು ಭಾಗಕ್ಕೆ ಅರ್ಧ ಅಂಗುಲ ಪ್ರಮಾಣ ಇಂದ್ರಬಸ್ತಿ ನಾಮಕ ಮರ್ಮವಿರುತ್ತೆ. ಇದಕ್ಕೆ ಪೆಟ್ಟು ಬಿದ್ದರೆ ರಕ್ತಸ್ರಾವವಾಗಿ ಕಾಲಾಂತರದಲ್ಲಿ ಮರಣ ಸಂಭವಿಸುತ್ತೆ. ಭೋಜ ಮತ್ತು ಗಯದಾಸ್, ಇವರ ಮತದಲ್ಲಿ ಈ ಮರ್ಮವು ಯೆರಡಂಗುಲ ಪ್ರಮಾಣವಿದೆಯೆಂದು ಹೇಳಲ್ಪಟ್ಟಿದೆ.

೭. ಸಂಧಿ ಮರ್ಮ.—ಜಂಘೆ, ಊರು, ಇವುಗಳಸಂಧಿಗೆ ಮೊಣಕಾಲೆಂದೂನೊ, ಸಂಧಿಮರ್ಮವೆಂದನೂ ತಿಳಿಯತಕ್ಕದ್ದು. ಇದು ಯೆರಡಂಗುಲ ಪ್ರಮಾಣವು, ವೈಕಲ್ಯಕರವು, ಅದಕ್ಕೆ ವೇಧೆಯಾದರೆ ಕುಂಟುವಾಹುತ್ತೆ.

೮. ಸ್ನಾಯು ಮರ್ಮ.—ಮೊಣಕಾಲಿನ ಮೇಲು ಭಾಗಕ್ಕೆ ಮೂರು ಅಂಗುಲದ ಮೇಲೆ ಎರಡು ಬಾಜುವಿನಲ್ಲೂ ಈ ಮರ್ಮ ಅರ್ಧಾಂಗುಲಪ್ರಮಾಣವಿರುತ್ತೆ. ಇದಕ್ಕೆ ವೇಧೆಯಾದರೆ ಶೋಥೆಯುಂಟಾಗುತ್ತೆ, ಅಥವಾ ಕಟ್ಟುತ್ತೆ.

೯. ಸಿರಾ ಮರ್ಮ.— ತೊಡೆ ಮಧ್ಯದಲ್ಲಿ ಊರ್ವಸಂಜ್ಞಕ ಮರ್ಮವು ಅರ್ಧಾಂಗುಲಪ್ರಮಾಣವಿರುತ್ತೆ. ಇದು ವೈಕಲ್ಯ ಕಾರಕಮರ್ಮವು, ಇದಕ್ಕೆ ವೇಧೆಯಾದರೆ ರಕ್ತಸ್ರಾವವಾಗುತ್ತೆ, ಮತ್ತು ತೊಡೆ ಬತ್ತುತ್ತೆ.

೧೦. ಸಿರಾಮರ್ಮ.— ವಂಕ್ಷಣ ಸಂಧಿಯ ಮೇಲೆ ಮತ್ತು ಕೆಳಗೆ ಸಹ ಊರು ಮೂಲದಲ್ಲಿ ಲೋಹಿತಾಕ್ಷ ಮರ್ಮವು ಅರ್ಧಾಂಗುಲದ ವರಿಗೂ ಇರುತ್ತೆ. ಈ ಸಿರಾ ಮರ್ಮವು ವಿಕಲ್ಪವಾದರೆ ಅಥವಾ ರಕ್ತಸ್ರಾವವಾದರೆ ಕಾಲು ಪ್ರೇಣಗುತ್ತೆ.

೧೧. ಸ್ನಾಯುಮರ್ಮ.—ವಂಕ್ಷಣ ಮತ್ತು ವೃಷಣಕ್ಕೆ ಸಂಬಂಧವಾದಂಥಾ ಮರ್ಮಕ್ಕೆ ಒಂದಂಗುಲ ಸ್ನಾಯುಮರ್ಮವಿರುತ್ತೆ. ಅದಕ್ಕೆ ವೈಕಲ್ಯಕರವೆಂದುನ್ನೂ ವಿಟಪವೆಂದುನ್ನೂ ಹೆಸರು. ಇದು ವಿಕಾರವಾದರೆ ಷಂಡತ್ವ ಅಥವಾ ಅಲ್ಪ ಶುಕ್ರತ್ವ ಉಂಟಾಗುತ್ತೆ.

ಮೇಲೆ ಹೇಳಲ್ಪಟ್ಟ ೧೧ ಮರ್ಮಗಳು ಒಂದು ಕಾಲಿನ ಸಂಬಂಧವಾದವು, ಇದೇ ಪ್ರಕಾರ ೨ ಕೈ ೨ ಕಾಲುಗಳು ಸೇರಿ ೪೪ ಮರ್ಮಗಳು ಇರುತ್ತವೆ.

ಹೊಟ್ಟೆ ಸಂಬಂಧವಾದ ಮರ್ಮಗಳು.

೧. ಗುದವೆಂಬ ಮರ್ಮ.—ಇದು ದೊಡ್ಡ ಕರಳುಗಳನ್ನು ಬಂಧನ ಮಾಡಿಕೊಂಡು ವಿಷ್ಠ ಮತ್ತು ಅಪಾನ ವಾಯುಗಳ ಪ್ರವರ್ತಿಯನ್ನು ಮಾಡಿಸುತ್ತೆ. ಇದಕ್ಕೆ ವೇಧೆಯಾದರೆ ತತ್ಕಾಲದಲ್ಲಿ ಮರಣ ಸಂಭವಿಸುತ್ತೆ. ಇದು ಮಾಂಸಮರ್ಮವು, ನಾಲ್ಕಂಗುಲ ಪ್ರಮಾಣವಿಧೆ.

೨. ಮೂತ್ರಾಶಯವಸ್ತಿಮರ್ಮ.—ಇದು ಸ್ವಲ್ಪ ಮಾಂಸವೂ ಸ್ವಲ್ಪ ರಕ್ತವೂ ಸೇರಿ ಆಗಿರತಕ್ಕದ್ದು. ಇದು ಟೊಂಕ, ನಾಭಿ, ಪೃಷ್ಠ, ಮುಷ್ಕ, ಗುದೆ, ವಂಕ್ಷಣ, ಶಿಶ್ನ ಇವುಗಳ ಮಧ್ಯದಲ್ಲಿ ಅಧೋಮುಖವಾಗಿ ಮೂತ್ರಾಶಯವೆಂದು ವಸ್ತಿ ಸಂಜ್ಞಿಕ ಮರ್ಮವೆಂದು ಸಹವೊಂದು ದ್ವಾರವುಳ್ಳದ್ದಾಗಿ ಇಧೆ. ಇದಕ್ಕೆ ಅಶ್ಮರೀಕೃತವ್ರಣಹೊರ್ತು ಅನ್ಯವಿಕಾರಗಳಾದರೆ ತತ್ಕಾಲದಲ್ಲಿ ಮರಣ ಸಂಭವಿಸುತ್ತದೆ. ಮತ್ತು ಇದಕ್ಕೆ ಎರಡು ಕಡೆಯಿಂದಲೂ ಛಿದ್ರವಾದರು ಸಹ ತತ್ಕಾಲದಲ್ಲಿ ಮರಣ ಸಂಭವಿಸುತ್ತೆ. ಮತ್ತು ವೊಂದಂಗುಲ ಛಿದ್ರವಾದರೆ ಅದರಿಂದ ಮೂತ್ರಸ್ರಾವವಾಗುತ್ತೆ. ಈ ಸ್ನಾಯು ಮರ್ಮವು ನಾಲ್ಕಂಗುಲ ಪ್ರಮಾಣವಿಧೆ.

೩. ನಾಭಿಮರ್ಮ.—ಪಕ್ವಾಶಯ ಆಮಾಶಯಗಳ ಮಧ್ಯದಲ್ಲಿ ಸಿರಾಸಮುದಾಯದಿಂದ ಉಂಟಾಗಿ ಈ ಮರ್ಮವಿರುತ್ತೆ. ಇದು ನಾಲ್ಕಂಗುಲವಿಧೆ. ಇದಕ್ಕೆ ವಿಕಾರವುಂಟಾದರೆ ತತ್ಕಾಲದಲ್ಲಿ ಮರಣ ಸಂಭವಿಸುತ್ತೆ. ಇದು ಸಿರಾ ಮರ್ಮವು.

೪. ಆಮಾಶಯ ಮರ್ಮ.—ಸ್ತನಗಳ ಮಧ್ಯದಲ್ಲಿ ಅಂದರೆ ಉರಸ್ಥಳದಲ್ಲಿ ಸತ್ವ ರಜಸ್ತಮೋಗುಣಗಳ ಅಧಿಷ್ಠಾನ ಭೂತವಾದ ಈ ಮರ್ಮದಲ್ಲಿ ಹೃದಯ ಸಂಜ್ಞಿಕ ಸಿರಾಮರ್ಮವಿರುತ್ತೆ. ಇದು ಕಮಲಮೊಗ್ಗಿನ ಹಾಗೆ ಅಧೋಮುಖವಾಗಿಧೆ. ಇದು ನಾಲ್ಕಂಗುಲ ಪ್ರಮಾಣವಿರುತ್ತೆ. ಇದಕ್ಕೆ ವೇಧೆಯಾದರೆ ಸದ್ಯೋ ಮರಣ ಸಂಭವಿಸುತ್ತೆ.

೫. ಸ್ತನಮೂಲ ಸಿರಾ ಮರ್ಮ.—ಸ್ತನಗಳ ಕೆಳಗೆ ಯೆರಡಂಗುಲದವರೆಗೂ ಈ ಮರ್ಮವು ಇರುತ್ತೆ. ಇದಕ್ಕೆ ವೇಧೆಯಾದರೆ ಕಫಕೋಷ್ಠವು ಪೂರ್ಣವಾಗಿ ಕಾಲಾಂತರದಲ್ಲಿ ಮರಣ ಸಂಭವಿಸುತ್ತೆ.

೬. ರೋಹಿತಸಂಜ್ಞಿಕಮಾಂಸ ಮರ್ಮ.—ಸ್ತನದ ತೊಟ್ಟಿನ ಮೇಲುಗಡೆ ಯೆರಡಂಗುಲದ ವರಿಗೂ ಅರ್ಧಂಗುಲ ಪ್ರಮಾಣ ಈ ಮರ್ಮವಿರು

ತ್ತೆ. ಇದಕ್ಕೆ ವೇಧೆಯುಂಟಾದರೆ ಕೋಷ್ಠವು ರಕ್ತದಿಂದ ಪೂರ್ಣವಾಗಿರುವದ್ದರಿಂದ ಕಾಸಶ್ವಾಸ ಹುಟ್ಟಿ ಕಾಲಾಂತರದಲ್ಲಿ ಮರಣ ಸಂಭವಿಸುತ್ತದೆ.

೭. ಅಪಲಾಪಸಿರಾ ಮರ್ಮ.—ಅಂಸಕೂಟಿಕೆಯ ಕೆಳಗಡೆ ಮತ್ತು ಪಾರ್ಶ್ವಗಳ ಮೇಲೆ ಫಲಕದ ಸಮೀಪದಲ್ಲಿ ಅರ್ಧಾಂಗುಲ ಪ್ರಮಾಣ ಈ ಮರ್ಮವಿರುತ್ತೆ. ಇದಕ್ಕೆ ಘಾತವಾದರೆ ಕಾಲಾಂತರದಲ್ಲಿ ಮರಣಸಂಭವಿಸುತ್ತೆ.

೮. ಅಪಸ್ತಂಭ ಸಿರಾ ಮರ್ಮ.—ಹೊಟ್ಟೆಯ ಯೆರಡು ಪಾರ್ಶ್ವಗಳಲ್ಲಿ ವಾತವಾಹಕನಾಡಿ ಇಧೆ. ಈ ಮರ್ಮವು ಅರ್ಧಾಂಗುಲಿ ಪ್ರಮಾಣವಾದ್ದು. ಇದಕ್ಕೆ ವಿಕಾರವಾದರೆ ಕಾಸಶ್ವಾಸ ಹುಟ್ಟಿ ಕಾಲಾಂತರದಲ್ಲಿ ಮರಣಪ್ರಾಪ್ತಿಯಾಗುತ್ತೆ.

ಈವೋರೆ ಹೊಟ್ಟೆ ಮತ್ತು ಉರದಲ್ಲಿ ೧೨ ಮರ್ಮಗಳು ಹೇಳಲ್ಪಟ್ಟವೆ.

ಬೆನ್ನಿನಲ್ಲಿರುವ ಮರ್ಮಗಳ ವಿವರ.

೧. ಪೃಷ್ಠವಂಶದ ಉಭಯ ಪಾರ್ಶ್ವದಲ್ಲೂ ಟೊಂಕದ ಅಸ್ಥಿ ಇರುತ್ತೆ.— ಇವುಗಳಿಗೆ ಕಟಿತರುಣ ಮರ್ಮವೆಂಬ ಸಂಜ್ಞೆಯು. ಇವುಗಳಿಗೆ ಬಾಧಕ ಉಂಟಾದರೆ ರಕ್ತಕ್ಷಯದಿಂದ ವಿವರ್ಣವಾಗಿ ಕಾಲಾಂತರದಲ್ಲಿ ಮರಣ ಸಂಭವಿಸುತ್ತದೆ.

೨. ಕಕುಂದರ ಸಂಧಿಮರ್ಮ.—ಬೆನ್ನಿನ ಯೆರಡುಕಡೆಗೆ ಟೊಂಕದ ಅಸ್ಥಿಯ ಸಂಧಿ ಮರ್ಮವಿರುತ್ತೆ. ಟೊಂಕದ ಕೆಳಗೆ ಇದರ ಗುರ್ತು ಇಧೆ. ಇದು ವಿಕಾರವಾದರೆ ಚಲನೆ ತಪ್ಪುತ್ತೆ. ಟೊಂಕದ ಕೆಳ ಅಂಗದಿಂದ ಪ್ರಾಣ ವಿಯೋಗವಾಗುತ್ತೆ.

೩. ನಿತಂಬಾಸ್ಥಿಮರ್ಮ.—ಪೂರ್ವದಲ್ಲಿ ಹೇಳಿರುವ ಕಟಿತರುಣಾಸ್ಥಿಮೇಲು ಕಡೇ ಆಮಾಶಯಕ್ಕೆ ಅಚ್ಛಾದಕವಾಗಿಯೂ ಪಾರ್ಶ್ವ ಸಂಧಿಯಲ್ಲಿ ಕಟ್ಟಿದ ಹಾಗೂ ಈ ಮರ್ಮವಿಧೆ. ಇದಕ್ಕೆ ಬಾಧೆಯಾದರೆ ಕೆಳಗಿನ ಅರ್ಧಾಂಗವು ಶೋಷಿಸಿ ನಿರ್ಬಲತ್ವವುಂಟಾಗಿ ಮರಣಪ್ರಾಪ್ತವಾಗುತ್ತೆ.

೪. ಪಾರ್ಶ್ವಸಂಧಿ ಸಿರಾಬಂಧನಮರ್ಮ.—ಜಘನ ಮಧ್ಯದಲ್ಲೂ ಪಾರ್ಶ್ವದಲ್ಲೂ ಇರುವ ಸೊಟ್ಟಾದ ಊರ್ಧ್ವ ಮುಖವುಳ್ಳ ಮರ್ಮವು ಜಘನ ಪಾರ್ಶ್ವ ಸಂಧಿಯಾಗಿರುತ್ತೆ. ಇದಕ್ಕೆ ಬಾಧೆಯಾದರೆ ರಕ್ತಪೂರ್ಣವಾದ ಕೋಷ್ಠವುಳ್ಳದ್ದರಿಂದ ಕೆಲವು ದಿವಸಗಳಲ್ಲಿ ಮರಣ ಸಂಭವಿಸುತ್ತೆ.

೫. ಬೃಹತೀ ಸಂಜ್ಞಿಕ ಸಿರಾಮರ್ಮ.—ಸ್ತನಮೂಲದ ಯೆರಡು ಕಡೆಯಿಂದ ಬಂಧಿರುವ ಪೃಷ್ಠವಂಶಕ್ಕೆ ಬೃಹತೀ ಯೆಂದು ಹೆಸರು. ಇದು

ಅರ್ಧಾಂಗುಲ ಪ್ರಮಾಣವಿಧೆ. ಇದಕ್ಕೆ ಬಾಧೆಯಾಗಿ ಅತಿರಕ್ತ ಸ್ರಾವ ವಾದರೆ ಮರಣ ಸಂಭವಿಸುತ್ತೆ.

೬. ಅಂಸ ಫಲಕ ಮರ್ಮ.—ಪೃಷ್ಠದ ಮೇಲುಕಡೆ ಪೃಷ್ಠವಂಶದ ಉಭಯ ಪಾರ್ಶ್ವಗಳಲ್ಲಿ ತ್ರಿಕಾಸಂಧಿ ಇಧೆ. ಇದರ ಸಮೀಪದಲ್ಲಿ ಅಂಸಫಲಕವು ಇರುತ್ತೆ. ಇದು ವೈಕಲ್ಯ ಕರವು.

೭. ಸ್ನಾಯು ಬಂಧನ ಅಂಸಮರ್ಮ.—ಭುಜಗಳು ಮತ್ತು ಮಸ್ತಕ, ಮನ್ಯಾ, ಈ ಸ್ಥಳಗಳಲ್ಲಿ ಅಂಸ ಫಲಕ ಸಹ ವರ್ತಮಾನ ಭುಜದ ಶಿರಕ್ಕೆ ಕಟ್ಟಿದಂಥಾ ಈ ಮರ್ಮಕ್ಕೆ ಅಂಸವೆಂದು ಹೆಸರು. ಇದು ಅರ್ಧಾಂಗುಲ ವಿಧೆ. ಇದು ವೈಕಲ್ಯಕರವು. ಯಾವ ಸ್ಥಳದಲ್ಲಿ ಪಾಲಕೀ ಕೊಂಬಿನ ಹಾಗೂ ಕಾಗದೀ 'ಕೊಂಬಿನಹಾಗೂ ಇರುತ್ತೋ ಅದೆಲ್ಲಾ ಸ್ನಾಯು ಮರ್ಮ ವೆಂದು ತಿಳಿಯಬೇಕು.

೮. ಜತ್ರುಮೂಲ.—ಕಂಠನಾಡಿಯ ಯೆರಡು ಕಡೆಯಲ್ಲೂ ನಾಲ್ಕು ಧಮನೀ ಇರುತ್ತೆ. ಅವುಗಳ ಹೆಸರು ಮನ್ಯಾ, ನೀಲ, ಯೆಂದು ಹೇಳಿ ಇಧೆ. ಇವುಗಳಲ್ಲಿ ಒಂದು ಮನ್ಯಾ, ಒಂದು ನೀಲ ಸಹ ವೊಂದೊಂದು ಕಡೆ ವೊಂದೊಂದು ಪ್ರಕಾರ ವಾಗಿಧೆ. ಇವು ನಾಲ್ಕು ಅಂಗುಲ ಪ್ರಮಾಣ ಸಿರಾಮರ್ಮಗಳು. ಇವುಗಳು ವಿಕಾರ ವಾದರೆ ಮೂಕತ್ವವು, ಸ್ವರ ಭೇದತ್ವವು, ಮತ್ತು ರಸ ಗ್ರಹಣ ಯಿಲ್ಲದೆ ಯಿರುವಿಕೆಯು ಆಗುತ್ತೆ.

೯. ಮಾತೃಕ ಸಿರಾ ಮರ್ಮ.—ಕತ್ತಿನ ಯೆರಡು ಕಡೆಗಳಲ್ಲೂ ನಾಲ್ಕು ನಾಲ್ಕು ಸಿರಾಗಳು ಇರುತ್ತವೆ. ಈ ಯೆಂಟಕ್ಕೂ ಮಾತೃಕಾ ಮರ್ಮವೆಂದು ಹೆಸರು, ಇವು ನಾಲ್ಕು ಅಂಗುಲ ಪ್ರಮಾಣ ವಿರುತ್ತವೆ. ಯಿವು ಸದ್ಯಃ ಪ್ರಾಣಹಾರಕ ಮರ್ಮಗಳು.

೧೦. ಕೃಕಾಟಿಕ ಸಂಧಿ ಮರ್ಮ.—ಶಿರಸ್ಸು ಮತ್ತು ಮನ್ಯಾಗಳ ಸಂಯೋಗದಲ್ಲಿ ಈ ಮರ್ಮವು ಅರ್ಧಾಂಗುಲ ಪ್ರಮಾಣವಿಧೆ. ಈ ಮರ್ಮವು ಬೆನ್ನಿನ ಪಕ್ಕೆಯ ಯೆದುರಿಗೆ ಹಿಂಭಾಗದಲ್ಲಿಧೆ. ಇದಕ್ಕೆ ಬಾಧೆಯುಂಟಾದರೆ ತಲೆ ನಡುಗುತ್ತೆ.

೧೧. ವಿಧುರ ಸಂಜ್ಞಿಕ ಸ್ನಾಯುಮರ್ಮ.—ಕರ್ಣ ಪೃಷ್ಠದ ಕೆಳಗಡೆ ಈ ಮರ್ಮವಿರುತ್ತೆ. ಇದು ಸ್ನಾಯುಮರ್ಮವು, ನಿಮ್ನಾಕಾರ ಅಂದರೆ ತಗ್ಗಾಗಿಧೆ, ಇದು ವೈಕಲ್ಯಕರ, ಬಾಧಿರ್ಯವನ್ನುಂಟುಮಾಡುತ್ತೆ.

೧೨. ಅಪಾಂಗ ಸಂಜ್ಞಿಕ ಸಿರಾಮರ್ಮ.—ಹುಬ್ಬಿನ ಕೊನೇಕೆಳಗೆ ಅರ್ಧಾಂಗುಲ ಪ್ರಮಾಣ ಈ ಮರ್ಮವಿರುತ್ತೆ. ಇದು ವೈಕಲ್ಯಕರವು, ಯಿದಕ್ಕೆ ಬಾಧೆಯಾದರೆ ಕುರುಡು ಅಥವಾ ನೇತ್ರಕ್ಕೆ ವಿಕಾರ ಉಂಟಾಗುತ್ತೆ.

೧೩. ಫಣ ಸಂಜ್ಞಿಕ ಸಿರಾಮರ್ಮ.—ಘ್ರಾಣ ಮಾರ್ಗದ ಯೆರಡು ಕಡೆಯಲ್ಲಿಯೂ ಸ್ರೋತೋ ಮಾರ್ಗವನ್ನು ಬಂಧನ ಮಾಡಿಕೊಂಡು, ಈ ಮರ್ಮವಿಧೆ. ಇದು ಅರ್ಧಾಂಗುಲ ಪ್ರಮಾಣವು, ಯಿದು ವೈಕಲ್ಯಕರವು, ಯಿದು ವಿಕಾರವಾದರೆ ಗಂಧ ತಿಳಿಯುವದಿಲ್ಲ.

೧೪. ಆವರ್ತ ಸಂಜ್ಞಿಕ ಸಂಧಿಮರ್ಮ.—ಹುಬ್ಬುಗಳ ಮೇಲು ಭಾಗದ ನಿಮ್ನಭಾಗದಲ್ಲಿ ಈ ಮರ್ಮವಿಧೆ· ಇದು ಅರ್ಧಾಂಗುಲ ಪ್ರಮಾಣವು, ವೈಕಲ್ಯಕರವು, ಯಿದಕ್ಕೆ ಬಾಧೆಯಾದರೆ ಆಂಧ್ಯ ಅಥವಾ ದೃಷ್ಟಿವಿಕಾರಗಳಾಗುತ್ತವೆ.

೧೫. ಶಂಖನಾಮಕ ಅಸ್ಥಿಮರ್ಮ.—ಹುಬ್ಬಿನ ಮೇಲುಕಡೆ ಯಿರುವ ಲಲಾಟಕ್ಕೂ ಕರ್ಣಕ್ಕೂ ಮಧ್ಯೆ ಈ ಮಮರ್ಮ ಅರ್ಧಾಂಗುಲ ಪ್ರಮಾಣವಿಧೆ. ಯಿದಕ್ಕೆ ಬಾಧೆಯಾದರೆ ತತ್ಕಾಲದಲ್ಲಿ ಮರಣ ಸಂಭವಿಸುತ್ತೆ.

೧೬. ಉತ್ಕ್ಷೇಪ ಸಂಜ್ಞಿಕ ಮರ್ಮ.—ಶಂಖದ ಮೇಲುಗಡೆ ಕೇಶಾಂತದಲ್ಲಿ ಈ ಮರ್ಮವಿರುತ್ತೆ. ಯಿದರಲ್ಲಿ ಶಸ್ತ್ರ ವೊಳಗಿರುವವರೆಗೂ ಜೀವಿಸಿಕೊಂಡಿರುತ್ತಾನೆ. ಹೊರಗೆ ತೆಗದರೆ ವೊಳಗಿನ ವಾಯುವು ಹೊರಗೆ ಬಂದು ಮರಣವನ್ನು ಹೊಂದುತ್ತಾನೆ.

೧೭. ಸ್ಥಪಣಿ ಸಿರಾಮರ್ಮ.—ಭ್ರೂಮಧ್ಯದಲ್ಲಿ ಈ ಮರ್ಮವಿಧೆ. ಇದು ಉತಕ್ಷೇಪ ಮರ್ಮದಂತೆಯೇ ಶಲ್ಯ ವಿರುವವರೆಗೂ ಜೀವಿಸುತ್ತಾನೆ.

೧೮. ಸೀಮಂತ ಸಂಧಿ ಮರ್ಮ.—ತಲೆಯಲ್ಲಿ ಐದು ಸಂಧಿಗಳು ವಿಭಾಗವಾಗಿವೆ, ಯಿವುಗಳಿಗೆ ಸೀಮಂತವೆಂದು ಹೆಸರು, ಇವು ನಾಲ್ಕಂಗುಲ ಪ್ರಮಾಣ ಉಳ್ಳವು, ಕಾಲಾಂತರದಲ್ಲಿ ಪ್ರಾಣವನ್ನು ಹೋಗಲಾಡಿಸತಕ್ಕವು.

೧೯. ಶೃಂಗಾಟಿಕ ನಾಮಕ ಸಿರಾಸಂಯೋಗ ಮರ್ಮ.—ಇದು ಘ್ರಾಣ, ಶ್ರೋತ್ರ, ಅಕ್ಷಿ, ಜಿಹ್ವೆಗಳಿಗೆ ತೃಪ್ತಿ ಮಾಡುವ ಸಿರೆಗಳ ಮಧ್ಯದ ಸಿರವು. ಮತ್ತು ಇದು ಸನ್ನಿಪಾತ ಸಿರವು. ಈ ೪ ಸಿರೆಗಳಿಗೆ ಶೃಂಗಾಟಕ ಯೆಂದು ಹೆಸರು, ಇವು ಸದ್ಯಃ ಪ್ರಾಣಹಾರಕಗಳು.

೨೦. ಅಧಿಪತಿ ಸಿರಾ ಮರ್ಮ.—ಮಸ್ತಕ ಮಧ್ಯದಲ್ಲಿ ಸುತ್ತಲೂ ನರಗಳ ಸಂಧಿಯುಳ್ಳ ಕೂದಲಿಂದ ಸುತ್ತುವರಿಯಲ್ಪಟ್ಟ ಈ ಮರ್ಮವು ಅರ್ಧಾಂಗುಲ ಪ್ರಮಾಣವಿಧೆ. ಇದು ಸದ್ಯೋ ಮರಣ ಪ್ರದವು.

೨೧. ಮರ್ಮಗಳ ಸೂತ್ರೋಕ್ತವಾದ ಅಳತೆ ವಿವರ.—ಊರುಗಳು, ಕೂರ್ಚ, (ರಸ್ಸು, ವಿಟಪ, ಕಕ್ಷಧರ ಈ ನಾಲ್ಕೂ ಒಂದೊಂದು ಅಂಗುಲ ಪರಿಮಾಣಉಳ್ಳವು. ಸ್ತನಮೂಲವು, ಮಣಿಬಂಧ, ಗುಲ್ಫ ಇವು ಎರಡಂಗುಲ ಪ್ರಮಾಣಗಳು. ಜಾನು, ಕೂರ್ಪರ ಇವು ಮೂರಂಗುಲ ಪ್ರಮಾಣಗಳು. ಹೃದಯ, ವಸ್ತಿ, ಕೂರ್ಚ, ಗುದ, ನಾಭಿ, ಸೀಮಂತ, ಶೃಂಗಾಟಕ, ಮಾತೃಕಾ, ಮನ್ಯಾ, ನೀಲಧಮನಿ ಇವು ನಾಲ್ಕಂಗುಲ ಪ್ರಮಾಣಗಳು. ಮಿಗಿಲಾದವುಗಳೆಲ್ಲಾ ಅರ್ಧಾಂಗುಲ ಪ್ರಮಾಣಉಳ್ಳವು.

೨೨. ಮರ್ಮದ ಪ್ರಯೋಜನವೇನಂದರೆ.—ಈ ಮರ್ಮಸ್ಥಳಗಳನ್ನು ತಿಳಿದು ವೈದ್ಯನಾದವನು ಮರ್ಮಸ್ಥಾನಗಳನ್ನು ಬಿಟ್ಟು ಶಸ್ತ್ರ ಕಾರ್ಯವನ್ನು ಮಾಡಬೇಕು. ಇಲ್ಲದೆ ಮರ್ಮಚ್ಛೇದನೆ ಮಾಡಿದರೆ ಮರಣ ಪ್ರಾಪ್ತವಾಗುತ್ತೆ. ಕೈಕಾಲುಗಳನ್ನು ಛೇದಿಸಿದರೆ ನರಗಳು ಸಂಕೋಚವಾಗಿ ಮನುಷ್ಯ ಬದುಕುತ್ತಾನೆ. ಆದರೆ ಭೂತಮರ್ಮಗಳಿಗೆ ಪೆಟ್ಟು ತಗಲಿದರೆ ರಕ್ತಸ್ರಾವವಾಗಿ ವಾಯುವೃದ್ಧಿಯಾಗಿ ಸರ್ವಾಂಗದಲ್ಲೂ ವ್ಯಾಪಿಸಿ ಮರಣ ಪ್ರಾಪ್ತವಾಗುತ್ತೆ. ಇದಕ್ಕೆ ದೃಷ್ಟಾಂತ—ಯಾವ ವೃಕ್ಷದಲ್ಲಿ ಶಾಖೆಗಳ ಸಂಧಿಗೆ ಖಂಡನೆಯಾದರೆ ವೃಕ್ಷ ಬದುಕಿ ಛೇದಿಸಿದ ಶಾಖೆಗಳು ಎಲೆಗಳು ಹೋಗುತ್ತವೋ, ಅದೇ ಪ್ರಕಾರ ಮನುಷ್ಯನ ಕಾಲುಕೈ ಮುರಿದರೆ ಕಾಲು ಕೈಗಳು ವಿಕಾರವಾಗುತ್ತವೆಯೇ ಹೊರತು ಮನುಷ್ಯ ಸಾಯುವದಿಲ್ಲ.

೨೩. ಮರ್ಮಗಳು ಯಾವ ಯಾವ ಕಾರ್ಯಕ್ಕೆ ಉಪಯೋಗಿಸುತ್ತವಂದರೆ.—ಶಸ್ತ್ರಾದಿಗಳನ್ನು ನೋಡಿ ಹೊಡೆಯುವದಕ್ಕೂ, ಈ ಶರೀರವನ್ನು ಓದಿ ಚೆನ್ನಾಗಿ ಪರೀಕ್ಷಿಸುವದಕ್ಕೂ ಸಹ ಉಪಯೋಗವಾಗುತ್ತೆ.

೨೪. ಮರ್ಮಹತದಿಂದ ಅನೇಕ ಉಪದ್ರವವಾಗಿ ಸಾಯುವದಕ್ಕೆ ಕಾರಣಗಳು.—ಶಸ್ತ್ರಪ್ರಹಾರವು ಶರೀರದಲ್ಲಿರುವ ಕೋಷ್ಠ, ಮಸ್ತಕ, ಕಪಾಲಗಳು, ಇವುಗಳಲ್ಲಿರುವ ಮರ್ಮಗಳು ಜರ್ಝರಿತವಾಗುವಹಾಗೆ

ಶಲ್ಯ ತಗಲಿದರೆ ಸಾಯುತ್ತಾನೆ. ಮರ್ಮ ಹೊರ್ತು ಇತರ ಸ್ಥಳಗಳಿಗೆ ತಗಲಿದರೆ ಸಾಯುವದಿಲ್ಲ.

೧೫. ಮರ್ಮಘಾತದಿಂದ ಮನುಷ್ಯ ಸಾಯುವದಕ್ಕೆ ಕಾರಣ.—ಮರ್ಮಸ್ಥಾನಗಳು ವಾತ, ಪಿತ್ತ, ಕಫ, ಮತ್ತು ಸತ್ವ ರಜಸ್ತಮೋಗುಣಾತ್ಮಕಗಳಾದ್ದರಿಂದ ಮರ್ಮವು ಛೇದಭೇದವಾದರೆ ಮರಣ ಪ್ರಾಪ್ತವಾಗುತ್ತೆ.

೧೬. ಸದ್ಯಃ ಪ್ರಾಣಹಾರಕ ಮರ್ಮಪಂಚಕ ಲಕ್ಷಣ.—ಈ ಸದ್ಯಃ ಪ್ರಾಣಹಾರಕ ಮರ್ಮಗಳಿಗೆ ಪೀಡೆಯುಂಟಾದರೆ ವಿಕಲತ್ವ ಹೊಂದಿ ಇಂದ್ರಿಯಗಳಿಗೆ ತಮ್ಮ ತಮ್ಮ ಗ್ರಾಹಕ ಶಕ್ತಿ ತಪ್ಪುತ್ತೆ. ಮನಸ್ಸು, ಬುದ್ಧಿ ಇವುಗಳಿಗೆ ವಿಪರ್ಯಯ ಉಂಟಾಗಿ ನಾನಾ ಪ್ರಕಾರ ಪೀಡೆಯುಂಟಾಗುತ್ತೆ. ಮತ್ತು ಕಾಲಾಂತರ ಪ್ರಾಣಹಾರಕ ಮರ್ಮಗಳಿಗೆ ಅಭಿಘಾತವಾದರೆ ಶರೀರದಲ್ಲಿರುವ ಧಾತು ನಷ್ಟವಾಗುತ್ತೆ. ಇದರಿಂದ ವೇದನೆಯುಂಟಾಗಿ ಮರಣ ಪ್ರಾಪ್ತವಾಗುತ್ತೆ. ಮತ್ತು ವೈಕಲ್ಯಕಾರಕ ಮರ್ಮಕ್ಕೆ ಪೀಡೆಯಾದರೆ ವೈದ್ಯನ ಕುಶಲತ್ವದಿಂದ ಶರೀರದಪೀಡೆಯು ಪರಿಹಾರವಾಗುತ್ತೆ. ಆದರೂ ಅಂಗ ವಿಕಾರವಾಗುತ್ತೆ. ವಿಶಲ್ಯ ಮರ್ಮದಲ್ಲಿ ಯಾವವರಿಗೂ ಶಲ್ಯವಿಧೆಯೋ ಅವರಿಗೂ ಬದುಕಿರುತ್ತಾನೆ. ಈ ವಿಷಯದಲ್ಲಿ ಮೇಲೆ ಹೇಳಿದ್ದೇ ಕಾರಣವಾಗಿಧೆ. ರುಜಾಕರ ಮರ್ಮಕ್ಕೆ ಕುವೈದ್ಯನು ವ್ಯತ್ಯಾಸ ಪಡಿಸುತ್ತಾನೆ. ಮತ್ತು ಇದಕ್ಕೆ ಪೀಡೆ ಯುಂಟಾದರೆ ನಾನಾ ವಿಧವಾದ ವೇದನೆಯುಂಟಾಗುತ್ತೆ. ಮತ್ತು ಒಳ್ಳೇ ವೈದ್ಯನು ಇದನ್ನು ಪರಿಹರಿಸುವದಕ್ಕೆ ಶಿಕ್ಕದೆ ಹೋದರೆ ಶರೀರದಲ್ಲಿ ಬಲ ಕಡಿಮೆಯಾಗುತ್ತೆ.

೧೭. ಮರ್ಮ ಸಮೀಪದಲ್ಲಿ ಛೇದ, ಭೇದ, ಅಘಾತ, ಅಗ್ನಿಸ್ಪರ್ಶ ಅಥವಾ ಶೀಳೋದು ಅಥವಾ ಮರ್ಮಕ್ಕೆ ಉಪಘಾತವಾದರೆ ಅದರ ಲಕ್ಷಣವನ್ನು ಪೂರ್ವೋಕ್ತವಾಗಿಯೇ ತಿಳಿಯಬೇಕು.

೧೮. ಮರ್ಮಾಭಿಘಾತದ ವಿಷಯದಲ್ಲಿ ವೈದ್ಯನು ಯತ್ನವನ್ನು ಮಾಡತಕ್ಕ ಕ್ರಮ.—ಮರ್ಮಘಾತದಿಂದ ವಿಕಾರ ಉಂಟಾದರೆ ಸಕಲ ಶರೀರಕ್ಕೂ ವ್ಯಾಪಿಸಿ ಬಹಳ ಕ್ಲೇಶವನ್ನುಂಟು ಮಾಡುತ್ತೆ. ಆದ್ದರಿಂದ ಇದಕ್ಕೆ ವೈದ್ಯನು ಒಳ್ಳೇ ಯತ್ನವನ್ನು ಮಾಡಿ ಸಾಧಿಸ ಬೇಕು.

೧೯. ಸಿರೆಗಳ ವರ್ಣಗಳನ್ನು ವಿಭಾಗಮಾಡತಕ್ಕ ವಿವರ.— ಒಟ್ಟು ಸಿರೆಗಳು ೨೦೦. ಇದಕ್ಕೆ ದೃಷ್ಟಾಂತ—ತೋಟಗಳಲ್ಲಿರುವ ನೀರು ಗಿಡಗಳಿಗೆವ್ಯಾಪಿಸಿ

ಕೊಂಡು ವೃಕ್ಷಾದಿಗಳು ಫಲಾದಿಗಳಿಗೆ ಹ್ಯಾಗೆ ಕಾರಣವನ್ನುಂಟುಮಾಡುತ್ತೋ, ಆದೇ ಮೇರೆ ಈ ನರಗಳೆಲ್ಲಾ ರಸಗಳನ್ನು ವಹಿಸಿ ಶರೀರದಲ್ಲಿ ಆಪಾದತಲಮಸ್ತಕದವರಿಗೂ ವ್ಯಾಪಿಸಿ ಮನೋಹರತ್ವವನ್ನು ಉಂಟುಮಾಡಿ ಕೈ ಕಾಲು ಮುಂತಾದವುಗಳನ್ನು ಬಗ್ಗಿಸುವದಕ್ಕೂ, ವಿಸ್ತರಿಸುವದಕ್ಕೂ, ನಿದ್ರೆ ಮಾಡುವದಕ್ಕೂ, ಮಾತನಾಡುವದಕ್ಕೂ, ಎಚ್ಚರವಾಗಿರುವದಕ್ಕೂ ಸಹ ಅನುಕೂಲಪಡಿಸುತ್ತೆ. ಈ ಸಿರೆಗಳಿಗೆ ಮೂಲಸ್ಥಾನವು ನಾಭಿಯಾಗಿರುತ್ತೆ. ಈ ನಾಭಿಯಲ್ಲಿ ಶರೀರಕ್ಕೆಲ್ಲಾ ಹರಡಿಕೊಂಡಿರುವ ಅನೇಕ ಸಂಖ್ಯೆಗಳ ಸಿರೆಗಳು ಕಟ್ಟಿದ ಹಾಗೆ ಇವೆ. ಇದರ ಕವಲು ಅನೇಕವಾಗಿ ವೃಕ್ಷದ ಕವಲುಗಳೋಪಾದಿಯಲ್ಲಿ ವ್ಯಾಪಿಸಿಕೊಂಡಿವೆ. ಈ ಸಿರೆಗಳು ಚಕ್ರನಾಭಿಯಂತೆ ನಾಭಿಯನ್ನು ಸುತ್ತಿಕೊಂಡಿವೆ.

೧. ಸಿರೆಗಳ ಭೇದಗಳು.—ನಾಭೀಚಕ್ರದ ಸಿರಾಸಮುದಾಯದಲ್ಲಿ ಮುಖ್ಯವಾದ ಸಿರೆಗಳು ೪೦ ಇರುತ್ತವೆ. ಇವುಗಳಲ್ಲಿ ೧೦ ವಾತವನ್ನು, ೧೦ ಪಿತ್ತವನ್ನು, ೧೦ ಶ್ಲೇಷ್ಮವನ್ನು, ೧೦ ರಕ್ತವನ್ನು ಸಹ ವಹಿಸಿ ನಾಭಿಯಿಂದ ಹೊರಟು ಶರೀರಕ್ಕೆಲ್ಲಾ ವ್ಯಾಪಿಸುವದರಲ್ಲಿ ವಾತದ್ದು ೧೭೫, ಪಿತ್ತದ್ದು ೧೭೫, ರಕ್ತದ್ದು ೧೭೫, ಶ್ಲೇಷ್ಮದ್ದು ೧೭೫, ಈ ಪ್ರಕಾರ ೭೦೦ ಸಿರೆಗಳಾಗಿವೆ.

೨. ಅಂಗ ವಿಭಾಗದ ಸಿರೆಗಳ ವಿವರ.—ವಾತ ವಾಹಿನೀ ಸಿರೆಗಳು, ಎರಡು ಕೈ ಎರಡು ಕಾಲುಗಳಲ್ಲಿ ೨೫ರ ಪ್ರಕಾರ ೧೦೦ ಸಿರೆಗಳು ಇವೆ.

೩. ಕೋಷ್ಠ ಸಿರೆಗಳ ವಿವರ.— ಗುದಲಿಂಗಗಳನ್ನು ಆಶ್ರಯಿಸಿ ಯಿರುವ ಶ್ರೋಣೀ ಮಧ್ಯದಲ್ಲಿರುವ ಸಿರೆಗಳು ೮, ಎರಡು ಪಾರ್ಶ್ವಗಳಿಂದ ೪, ಬೆನ್ನಿನಲ್ಲಿ ೬, ಹೊಟ್ಟೆಯಲ್ಲಿ ೬, ವಕ್ಷಸ್ಥಳದಲ್ಲಿ ೧೦, ಈ ಪ್ರಕಾರ ೩೪ ಸಿರೆಗಳು ಇರುತ್ತವೆ.

೪. ಮನುಷ್ಯ ಮೇಲುಭಾಗದಲ್ಲಿರುವ ಸಿರೆಗಳ ವಿವರ.—ಮೊನದಲ್ಲಿ ೧೪, ಕರ್ಣದಲ್ಲಿ ೪, ನಾಲಿಗೆಯಲ್ಲಿ ೯, ಮೂಗಿನಲ್ಲಿ ೬, ನೇತ್ರ ಮಧ್ಯದಲ್ಲಿ ೮, ಈ ಪ್ರಕಾರ ೪೧ ಸಿರೆಗಳು ಇರುತ್ತವೆ. ಎಲ್ಲಾ ಒಟ್ಟು ವಾತವಾಹಕ ಸಿರೆಗಳು ೧೭೫ ಇರುತ್ತವೆ. ಇದೇ ಪ್ರಕಾರ ಪಿತ್ತವಾಹಕ ಸಿರೆಗಳೇ ಆದಿಯಾಗಿ ವಿಭಾಗ ಮಾಡಬೇಕು. ಆದರೆ ಪಿತ್ತವಾಹಿನೀ ಸಿರೆಗಳಲ್ಲಿ ನೇತ್ರಸಂಬಂಧಿ ೧೦, ಕರ್ಣದಲ್ಲಿ ೨ ಮಾತ್ರ ಭೇದವಾಗಿ ಇರುತ್ತವೆಯೇ ಹೊರ್ತು ಮಿಕ್ಕ ಎಲ್ಲಾ ಸಿರೆಗಳು ಪೂರ್ವದಲ್ಲಿ ಹೇಳಿರುವಂತೆಯೇ ಇರುತ್ತವೆ.

೫. ಸಿರಾಶ್ರಿತ ವಾತಾದಿಗಳ ಪ್ರಾಕೃತ ಅಥವಾ ವೈಕೃತ ಕಾರ್ಯವೇನಂದರೆ.—ವಾತವು ತನ್ನ ಸಿರೆಗಳಲ್ಲಿ ಸರಿಯಾಗಿ ಚಲಿಸುವದರಿಂದ ಶರೀರವನ್ನು ಬಗ್ಗಿಸುವದಕ್ಕೂ ಮತ್ತು ವಿಸ್ತರಿಸುವದಕ್ಕೂ ಮತ್ತು ಮಾತು ಸರಿಯಾಗಿ ಆಡುವದಕ್ಕೂ ಸುಲಭವಾಗಿರುತ್ತೆ; ಮತ್ತು ಇಂದ್ರಿಯ, ಬುದ್ಧಿ, ಮನಸ್ಸುಗಳ ಶಕ್ತಿಯು ಚನ್ನಾಗಿರುತ್ತೆ; ಮತ್ತು ಪ್ರಸ್ಪಂದನ, ಉದ್ವಹನ, ಪೂರಣ ಮುಂತಾದವುಗಳನ್ನು ಮಾಡುತ್ತೆ.

೬. ವಾತವಾಹಕ ಸಿರಾಗತವಾದ ವಾಯುವು ಕುಪಿತವಾದರೆ ಉಂಟಾಗತಕ್ಕ ವಿಕಾರಗಳು.—ಯಾವಾಗ ವಾತವು ನಿಬಂಧನೆ ತಪ್ಪಿ ಚಲಿಸುತ್ತದೋ ಆಗ ಶರೀರಕ್ಕೆ ನಾನಾ ವಿಧವಾದ ರೋಗಗಳು ಹುಟ್ಟುತ್ತವೆ.

೭. ಪಿತ್ತವು ಕುಪಿತವಾದರೆ ಉಂಟಾಗತಕ್ಕ ವಿಕಾರಗಳು.—ಪಿತ್ತವು ಇದೇ ಪ್ರಕಾರ ತನ್ನ ಸಿರೆಗಳಲ್ಲಿ ಸರಿಯಾಗಿ ಚಲಿಸುತ್ತಿದ್ದರೆ ಕಾಂತಿಯನ್ನೂ, ಅನ್ನದ ಮೇಲೆ ಅಪೇಕ್ಷೆಯನ್ನೂ, ರುಚಿಯನ್ನೂ, ಜಠರಾಗ್ನಿ ದೀಪ್ತಿಯನ್ನೂ, ನಿರೋಗತ್ವವನ್ನೂ, ಮತ್ತು ರಾಗ ಪ್ರಫುಲ್ಲಿತವೇ ಮೊದಲಾಗಿ ಅನೇಕ ಗುಣಗಳನ್ನೂ ಉಂಟುಮಾಡುತ್ತವೆ. ಇದು ವ್ಯತ್ಯಾಸವಾಗಿ ನಡದರೆ ನಾನಾ ವಿಧವಾದ ಪಿತ್ತರೋಗವನ್ನುಂಟುಮಾಡುತ್ತೆ.

೮. ಕಫವು ಕುಪಿತವಾದರೆ ಉಂಟಾಗತಕ್ಕ ವಿಕಾರಗಳು.—ಈ ಮೇರಿಗೇನೆ ಕಫವು ತನ್ನ ಸಿರೆಗಳಲ್ಲಿ ಸಂಚರಿಸುತ್ತಿದ್ದರೆ, ಮೈನುಣುಪಾಗಿ ಸ್ಥೈರ್ಯ ಬಲ ಮುಂತಾದವುಗಳನ್ನುಂಟುಮಾಡುತ್ತೆ. ಇಲ್ಲವಾದರೆ ಕೆಮ್ಮು, ಸಿರೆಗಳಸ್ಫುರಣ, ಸ್ಪರ್ಶಜ್ಞಾನಾದಿಗಳ ವಿಕಾರ ಮುಂತಾದವು ಆಗುತ್ತೆ.

೯. ರಕ್ತ ಚಲನೆ ಗುಣ.—ರಕ್ತವು ಸಹ ತನ್ನ ಸಿರೆಗಳಲ್ಲಿ ಸ್ವಚ್ಛವಾಗಿ ಮತ್ತು ನಿರ್ದೋಷವಾಗಿ ಸಂಚರಿಸುತ್ತಿದ್ದರೆ ಪಿತ್ತದ ಗುಣದಂತೆ ಗುಣವನ್ನುಂಟುಮಾಡುತ್ತೆ. ಇಲ್ಲದೆ ವಿಕಾರವಾದರೆ ರಕ್ತ ಕೆಟ್ಟು ಯಾವ ರೋಗಗಳು ಉಂಟಾಗಬೇಕೋ ಆ ರೋಗಗಳನ್ನೆಲ್ಲಾ ಹುಟ್ಟಿಸುತ್ತೆ.

೧೦. ಅಂಶತ್ವೇನ ಪ್ರತಿ ನರಗಳ ಕಾರ್ಯ.—ವಾತ, ಪಿತ್ತ, ಕಫ, ರಕ್ತಗಳು ಪಾಂಚಭೌತಿಕವಾದ್ದರಿಂದ ಇವುಗಳ ಗುಣಗಳನ್ನೆಲ್ಲಾ ವಹಿಸಿ ಇರುತ್ತವೆ ಆದ್ದರಿಂದ ಸರ್ವವಾಹಕವೆಂದು ಹೆಸರನ್ನು ಹೊಂದಿದವು. ಇದೇ ಮೇರೆ ಎಲ್ಲಾ ಸಿರೆಗಳೂ ವಹಿಸುವದಿಲ್ಲ.

೧೧. ಸಿರೆಗಳ ವರ್ಣದ ವಿವರ.—ವಾತವಾಹಕವಾದ ನರಗಳು ಅರುಣ ವರ್ಣವಾಗಿವೆ. ವಾಯುವಿನಿಂದ ಸರ್ವದಾ ಪೂರ್ಣವಾಗಿವೆ. ಪಿತ್ತವಾಹಕ ನಾಡಿಗಳು ಉಷ್ಣವಾಗಿಯೂ, ನೀಲವಾಗಿಯೂ ಇರುತ್ತವೆ. ಕಫವಾಹಕ ನಾಡಿಗಳು ಶೀತಳವಾಗಿಯೂ, ಗೌರವರ್ಣವಾಗಿಯೂ, ಸ್ಥಿರವಾಗಿಯೂ ಇರುತ್ತವೆ. ರಕ್ತವಾಹಕ ನಾಡಿಗಳು ರಕ್ತವರ್ಣವಾಗಿಯೂ, ಅತಿಸೀತವು ಅಲ್ಲದೆ ಅತಿಬಿಸಿಯು ಅಲ್ಲದೆ ಸಮವಾಗಿಯೂ ಇರುತ್ತವೆ. ಮತ್ತು ಈ ನರಗಳನ್ನು ವೈದ್ಯನಾದವನು ಭೇದಿಸಕೂಡದು. ಭೇದಿಸಿದರೆ ವೈಕಲ್ಯವೂ ವ್ಯಥೆಯೂ ಮರಣವೂ ಸಹ ಉಂಟಾಗುತ್ತೆ.

೧೨. ಯಾವಾಗಲೂ ವೇಧಿಸಕೂಡದ ನರಗಳ ವಿವರ.—ಕೈಕಾಲುಗಳಲ್ಲಿರತಕ್ಕ ೪೦೦ ಸಿರೆಗಳಲ್ಲಿ ೧೬ನ್ನು, ಮಧ್ಯ ಪ್ರದೇಶದ ೧೩೬ರಲ್ಲಿ ೩೨ ಸಿರೆಗಳನ್ನು, ಮಸ್ತಕದಲ್ಲಿರುವ ೧೬೪ ಸಿರೆಗಳಲ್ಲಿ ೫೦ ಸಿರೆಗಳನ್ನು ಯಾವಾಗ್ಯೂ ಭೇದಿಸಕೂಡದು.

೧೩. ಶಾಖಾಗತ ಅವ್ಯಧ್ಯ ಸಿರಾಗಳ ವಿವರ.—ಜಾಲಕ ೧, ಅಭ್ಯಂತರಗತ ಅಂದರೆ ಮಧ್ಯ ಪ್ರದೇಶದಲ್ಲಿ ಹೋಗಿರತಕ್ಕ ೩ಕ್ಕೆ ಉರ್ವೀಸಂಜ್ಞಿಕ ೨, ಲೋಹಿತ ವೆನ್ನತಕ್ಕದ್ದು ೧, ವೊಟ್ಟು ಒಂದು ಕಾಲಿಗೆ ನಾಲ್ಕರ ಪ್ರಕಾರ ಎರಡು ಕೈ ಎರಡು ಕಾಲುಗಳಿಂದ ಲೆಖ್ಖವಾಗತಕ್ಕ ೧೬ ನರಗಳನ್ನು ಎಂದಿಗೂ ವೇಧಿಸಕೂಡದು.

೧೪. ಮಧ್ಯ ಪ್ರದೇಶದಲ್ಲಿ ಅವ್ಯಧ್ಯವಾದ ಸಿರೆಗಳ ವಿವರ.—ಶ್ರೋಣಿಯಲ್ಲಿ ೮, ಎರಡು ಪಾರ್ಶ್ವಗತ ೨, ಪೃಷ್ಠಗತ ೪, ಉದರಗತ ೧೮, ಈ ಪ್ರಕಾರ ೩೨ ನರಗಳು ಇರುತ್ತವೆ.

೧. ಶ್ರೋಣಿ ೮ಕ್ಕೆ ವಿವರ.—ವಿಟಪ ಸಂಜ್ಞಿಕ ೪, ಕಟಿತರುಣಾಸ್ಥಿ ಸಂಬಂಧ ೪ ಇರುತ್ತವೆ.

೨. ಪಾರ್ಶ್ವಗತ ೨ಕ್ಕೆ ವಿವರ.—ಪಾರ್ಶ್ವದಲ್ಲಿ ೮ ಸಿರೆಗಳ ಪ್ರಕಾರ ಎರಡು ಕಡೆಯಲ್ಲೂ ಇರುವವದರ ಪೈಕಿ ಮೇಲಕ್ಕೆ ಹೋಗಿರುವದು ೨.

೩. ಪೃಷ್ಠಗತ ೪ಕ್ಕೆ ವಿವರ.—ಪೃಷ್ಠ ಪ್ರದೇಶದಲ್ಲಿರುವ ೨೪ ಸಿರೆಗಳಲ್ಲಿ ಮೇಲಕ್ಕೆ ಹೋಗಿರುವ ಬೃಹತೀ ಸಂಜ್ಞಿಕ ೪ ಸಿರೆಗಳು.

೪. ಉದರದಲ್ಲಿರುವ ೧೮ ಸಿರೆಗಳಿಗೆ ವಿವರ.—ಹೃದಯಗತ ೨, ಸ್ತನಮೂಲ ೪, ಸ್ತನರೋಹಿತ ೪, ಅಪಲಾಪ ೨, ಅಪಸ್ತವ ೨, ಉದರೆಗತ ೨೪ ಸಿರೆಗಳ ಪೈಕಿ ಮುಖ್ಯ ೪ ಸಿರೆಗಳು.

೧೫. ಮಸ್ತಕದಲ್ಲಿರುವ ೫೦ ಸಿರೆಗಳಿಗೆ ವಿವರ.—ಮನ್ಯಾಗತ ೧೬, ಹನುವಿನಲ್ಲಿ ೪, ನಾಲಿಗೆಯಲ್ಲಿ ೪, ಮೂಗಿನಲ್ಲಿ ೫, ಅಪಾಂಗದಲ್ಲಿ ೨, ಲಲಾಟದಲ್ಲಿ ನಾಸಾನೇತ್ರಗತ ೭, ಶಂಖದಲ್ಲಿ ೨, ಮಸ್ತಕ ಮತ್ತು ಸೀಮಂತಗತ ೮. ವೊಟ್ಟು ೫೦ ಸಿರೆಗಳು ಇರುತ್ತವೆ.

೧. ಮನ್ಯಾವೊಳಗಿನ ೫— ಶಿರೆಗಳಲ್ಲಿ ಮುಖ್ಯವಾದ ೧೬ಕ್ಕೆ ವಿವರ.—ಮಾತೃಕಾ ೪, ಮನ್ಯಾ ೨, ನೀಲಾ ೨, ಕೃಕಾಟಿಕಗತ ೨, ವಿಧುರಗತ ೨, ಮುಖ್ಯವಾದವು.

೨. ಗದ್ದದಲ್ಲಿರುವ ೧೬ರಲ್ಲಿ ಮುಖ್ಯ ೪ಕ್ಕೆ ವಿವರ.—ದವಡೆಯ ಕೀಲುಗಳ ಸಂಧಿ ಭೂತವಾದ ಸಿರೆಗಳು ೪.

೩. ನಾಲಿಗೆಯಲ್ಲಿರುವ ೩೬ ಸಿರೆಗಳಿಗೆ ಮುಖ್ಯವಾದ ೪ಕ್ಕೆ ವಿವರ.—ರಸವಾಹಿನೀ ೨, ವಾಗ್ವಾಹಿನೀ ೨, ವೊಟ್ಟು ೪.

೪. ನಾಸಿಕೆಯಲ್ಲಿರುವ ೧೪ ಸಿರೆಗಳಲ್ಲಿ ೫ಕ್ಕೆ ವಿವರ.—ನಾಸಾ ಸಮೀಪದಲ್ಲಿ ೪, ತಾಲು ೧, ವೊಟ್ಟು ೫.

೫. ನೇತ್ರಗತ ೩೬ ನರಗಳಲ್ಲಿ ೨ ಅಪಾಂಗ ಗತವಾದವು.

೬. ಲಲಾಟಗತ ೬೦ರಲ್ಲಿ ನಾಸಾನೇತ್ರ ಮುಂತಾದ ೭ಕ್ಕೆ ವಿವರ.—ಆವರ್ತ ಮರ್ಮ ಸಮೀಪದಲ್ಲಿ ಹೊರಟವು ೪, ಸ್ಥಪಣಿಯಲ್ಲಿ ೧, ಆವರ್ತಗಳಲ್ಲಿ ೨, ಈ ಪ್ರಕಾರ ೭ ಸಿರಾಗಳು ಇರುತ್ತವೆ. ನಾಸಿಕಾ ಮತ್ತು ನೇತ್ರದಿಂದ ಕೋದಂಥಾ ಲಲಾಟಗತ ಸಿರೆಗಳು ೮ ಆದ್ದರಿಂದ ಸಂಖ್ಯೆ ಹೇಳಲಿಲ್ಲ.

೭. ಶಂಖಗತ ೧೦ ಸಿರೆಗಳಲ್ಲಿ ಉಭಯ ಪಾರ್ಶ್ವದ ೨ ಸಿರೆಗಳೇ ಮುಖ್ಯವಾದವು. ಇವು ನಾಸಾ ನೇತ್ರಗಳಿಂದಲೇ ಹೋಗಿರುತ್ತವೆ.

೮. ಮಸ್ತಕ ಮತ್ತು ಸೀಮಂತಗತ ೧೨ ಸಿರೆಗಳಲ್ಲಿ ಉತ್ಕ್ಷೇಪ ಮರ್ಮಗತ ೨, ಸೀಮಂತಗತ ೫, ಅಧಿಪತಿ ೧, ವೊಟ್ಟು ೮; ಇವು ನೇತ್ರಗಳಲ್ಲಿರುವದ್ದರಿಂದ ಬೇರೆ ಹೇಳಲಿಲ್ಲ.

೧೬. ಸಂಖ್ಯೆಯಲ್ಲಿ ಸಿರೆಗಳು ಹೆಚ್ಚು ಕಡಮೆಯಾಗುವದಕ್ಕೆ ಕಾರಣ ವೇನಂದರೆ.—ಕಮಲದ ಗಡ್ಡೆಗಳ ದೆಸೆಯಿಂದ ದಂಟುಗಳು ಅನೇಕವಾಗಿ ನೀರಿನಲ್ಲಿ ಪ್ರಸರಿಸುವ ಹಾಗೆ ಮನುಷ್ಯನ ನಾಭಿಯಿಂದ ಹೊರಟ ನರಗಳು ಶರೀರವನ್ನೆಲ್ಲಾ ವ್ಯಾಪಿಸಿಕೊಂಡು ಇರುವದ್ದರಿಂದ ಸಂಖ್ಯೆಗಳು ವ್ಯತ್ಯಾಸವಾಗಿ ತೋರುತ್ತೆ.

೧೭. **ಸಿರಾವೇಧೆ ಯಾರಿಗೆ ಮಾಡಕೂಡದೆಂದರೆ.**—ಬಾಲಕರು, ಘಾಯದಿಂ ಕ್ಷೀಣವಾದವರು, ವೇಧೆ ಪಡುವವರು, ಕಾಣಿ ಅಘಾತದಿಂದ ಸಪ್ತಧಾತುಗಳು ಶೋಷಿಸಿದವರು, ಭಯಸ್ತರು, ಬಾಣಂತಿ, ಪಾಂಡುರೋಗಿ, ಸ್ನೇಹಪಾನಮಾಡತಕ್ಕವನು, ಅರ್ಶರೋಗದವನು, ಶೋಭೆಯುಳ್ಳವನು, ಉದರ ರೋಗಿ, ಶ್ವಾಸಕಾಸರೋಗದವನು, ಅತಿಸಾರದವನು, ಶರೀರದಲ್ಲಿ ಅಧಿಕಬೆವರುಳ್ಳವನು, ೧೬ ವರುಷದವೊಳಗೆ ೭೦ ವರುಷದ ಮೇಲೆ ಇರತಕ್ಕವರು, ಮೂಗಿನಲ್ಲಿ ರಕ್ತಸ್ರಾವವಾದವರು, ಶ್ರಮಪಟ್ಟವರು, ಮದ್ಯಪಾನದಿಂದ ಶುಷ್ಕವಾದವರು, ಮಾರ್ಗಸಂಚಾರ ಅಥವಾ ಸ್ತ್ರೀಸಂಭೋಗದಿಂದ ಶ್ರಮಪಟ್ಟವರು, ಅಧಿಕ ವಾಂತಿಯುಳ್ಳವರು, ಬಹಳ ಪ್ರವರ್ತಿಯಾದವರು, ವಾತರೋಗಿಗಳು, ನಿರೂಹವಸ್ತಿಯುಳ್ಳವರು, ಅನುವಾಸನವಸ್ತಿಯುಳ್ಳವರು, ಅಕ್ಷೇಪಕವಾಯು ಉಪದ್ರವದರು, ಮೂರ್ಛೆಯುಳ್ಳವರು, ಪಕ್ಷಾಘಾತದವರು, ನೀರಡಿಕೆ ಉಪವಾಸಗಳಿಂದ ಪೀಡಿತರಾದವರು, ಇವರುಗಳಿಗೆ ಸಿರಾವೇಧೆ ಮಾಡಕೂಡದು. ಯಾಕಂದರೆ—ಕೆಮ್ಮು, ಶ್ವಾಸ, ಅಧಿಕ ಜ್ವರ, ಅಕ್ಷೇಪಕ ಪಕ್ಷಘಾತ, ಕ್ಷತಕ್ಷೀಣ ಇವುಗಳಲ್ಲಿ ರಕ್ತವು ಸ್ರಾವವಾದರೆ ವಾಯುವಿನಿಂದ ಭಯ ಉಂಟಾಗುತ್ತೆ, ಮತ್ತು ಭಯಸ್ತನಿಗೆ ತಮೋಗುಣ ಅಧಿಕವಾಗಿರುವದ್ದರಿಂದ ರಕ್ತದ ದರ್ಶನ ಮಾತ್ರದಲ್ಲಿ ಮೂರ್ಛೆಯು ಉಂಟಾಗುತ್ತೆ. ಶ್ರೀಮಂತನಿಗೆ ವಾಯು ಅಧಿಕವಾಗಿ ಇರುವದ್ದರಿಂದ ರಕ್ತ ತೆಗದರೆ ಅಧಿಕ ಕುಪಿತವಾಗಿ ಶರೀರವು ನೊಸುತ್ತೆ. ಮದ್ಯಪಾಯಿಗೆ ರಕ್ತ ತೆಗದರೆ ಮದದಿಂದ ಪಿತ್ತವು ವ್ಯಾಪಿಸಿ, ಅಧಿಕ ಮೂರ್ಛೆಯುಂಟಾಗುತ್ತೆ. ಮಾರ್ಗಸ್ಥ ಮತ್ತು ಸ್ತ್ರೀಸಂಭೋಗದಿಂದ ಕೃಶವಾದವನಿಗೆ ರಕ್ತ ತೆಗದರೆ ವಾಯು ವೃದ್ಧಿಯಾಗುತ್ತೆ. ಅನುವಾಸಿತನ ಜಠರಾಗ್ನಿಯು ಮಂದವಾಗಿರುತ್ತೆ. ರಕ್ತ ತೆಗದರೆ ಅಧಿಕ ಮಂದವಾಗುತ್ತೆ. ನಪುಂಸಕನ ರಕ್ತ ತೆಗದರೆ ಧಾತು ಕ್ಷಯವಾಗಿ ಮರಣ ಹೊಂದುತ್ತಾನೆ. ಕೃಶ ಯಾ ಗರ್ಭಿಣಿಯು ರಕ್ತ ತೆಗದರೆ ಧಾತು ಕ್ಷೀಣವಾಗಿ ದೇಹವು ನಾಶವಾಗುತ್ತೆ. ಶ್ವಾಸ ಕಾಸ ಶೋಷ ರೋಗಗಳುಳ್ಳವರ ರಕ್ತ ತೆಗದರೆ ಧಾತು ಕ್ಷೀಣವಾಗಿ ದೇಹ ನಾಶವಾಗುತ್ತೆ.

೧೮. ರಕ್ತ ತೆಗೆಯುವದಕ್ಕೆ ಸಾಧ್ಯವಾದವು ಯಾವವೆಂದರೆ.—ತ್ವಗ್ದೋಷ, ಗ್ರಂಥಿ, ಶೋಫೆ, ರಕ್ತವಿಕಾರ ಇವುಗಳಲ್ಲಿ ರಕ್ತ ತೆಗೆಯಬಹುದು, ಸಾಧ್ಯವಾಗುತ್ತದೆ. ಆದರೆ ಈ ವಿಕಾರಗಳು ಪಕ್ವವಾದ ಮೇಲೆ ತೆಗೆಯಬೇಕು.

೧೯. ರಕ್ತ ತೆಗೆಯಕೂಡದೆಂದು ನಿಷೇಧವಾಗಿರುವದರಲ್ಲಿ ತೆಗೆಯುವ ಕ್ರಮ.—ಬಾಲಕ ಕ್ಷೀಣವೇ ಆದಿಯಾಗಿ ಹೇಳಿರುವ ಉಪದ್ರವಗಳು ಅತಿಯಾಗಿ ಮೃತ್ಯುವನ್ನುಂಟುಮಾಡತಕ್ಕ ವಿದ್ರಧ್ಯಾದಿ ರಕ್ತಸ್ರಾವ ವ್ಯಾಧಿಗಳು ಸಾಧ್ಯ ವ್ಯಾಧಿಯಾಗಿ ತೋರಬಂದರೆ ಅಂತಾದ್ದರಲ್ಲಿ ರಕ್ತ ತೆಗದರೆ ನಿಷೇಧವಿಲ್ಲ.

೨೦. ಸಿರಾವೇಧೆಗೆ ಪೂರ್ವಕೃತ್ಯವೇನೆಂದರೆ.—ರೋಗಿಗೆ ತೈಲಾಭ್ಯಂಗನಾದಿ ಉಪಚಾರಗಳಂ ಮಾಡಿಸಿ ಬೆವರು ತೆಗೆಯ ಬೇಕು. ಸ್ವಸ್ಥವಾಗಿರುವವನಿಗೆ ರಕ್ತತೆಗೆಯಬೇಕು. ದೋಷಗಳು ವಿರುದ್ಧವಾಗದಹಾಗೆ ದ್ರವ ದ್ರವ್ಯಪ್ರಧಾನ ಅನ್ನ ಅಥವಾ ಗಂಜಿಯನ್ನು ಸ್ವಸ್ಥವಾಗಿರುವಾಗ್ಯೆ ಭೋಜನ ಮಾಡಿಸಿ ಮಳೆ, ಮೋಡ ಇದ್ದ ಕಾಲವನ್ನುಬಿಟ್ಟು ವೈದ್ಯನು ರೋಗಿಯನ್ನು ತನ್ನಸಮೀಪದಲ್ಲಿ ಕೂಡಿಸಿಕೊಂಡು ಅಥವಾ ನಿಲ್ಲಿಸಿಕೊಂಡು ಧೈರ್ಯಕೊಟ್ಟು, ವಸ್ತ್ರ, ಪಟ್ಟೆವಸ್ತ್ರ, ಚರ್ಮ ಅಥವಾ ವಲ್ಕಲ ಇವುಗಳ ಪೈಕಿ ಒಂದನ್ನು ಬಹಳ ಬಿಗಿಯಾಗದಂತೆಯೂ ಸಡ್ಲಯಿಲ್ಲದಂತೆಯೂ ಮಸ್ತಕಕ್ಕೆ ಸುತ್ತಿ ಮರ್ಮಗಳಲ್ಲಿ ಒಂದನ್ನೂ ಘಾಯಪಡಿಸದೆ ಇತರಪ್ರದೇಶದಲ್ಲಿ ತಕ್ಕ ಶಸ್ತ್ರವನ್ನು ಹಾಕಿ ರಕ್ತ ತೆಗೆಯಬೇಕು.

೨೧. ಶಸ್ತ್ರವೇಧೆಗೆ ಕಾಲಯಾವದೆಂದರೆ.—ಅತಿಶೀತ, ಅತಿಉಷ್ಣ, ಅತಿವಾಯು, ಮೋಡ ಇವುಗಳಿಲ್ಲದ ಕಾಲದಲ್ಲಿ ತೆಗೆಯಬೇಕು.

೨೨. ತಲೆಯ ಸಿರಾವೇಧೆಮಾಡತಕ್ಕ ಕ್ರಮ.—ಸಿರಾವೇಧಿಸುವ ಮನುಷ್ಯನನ್ನು ಸೂರ್ಯನ ಎದುರಿಗೆ ನಿಲ್ಲಿಸಿ ಕುರ್ಚೀಮೇಲೆ ಸ್ವಲ್ಪ ಅಟೋಪಿಸಿ ಬೆವರು ಹುಟ್ಟುವಂತೆ ಕೂರಿಸಿ ಹೆಬ್ಬೆಟ್ಟು ಒಳಗೆ ಸಿಕ್ಕುವಂತೆ ಮುಷ್ಟಿಯನ್ನು ಘಟ್ಟಿಯಾಗಿ ಕಟ್ಟಬೇಕು, ಅಥವಾ ವಸ್ತ್ರದ ಚೆಂಡು ಕೈಯಲ್ಲಿ ಹಿಡದುಕೊಳ್ಳುವಂತೆ ಮಾಡಬೇಕು. ಮತ್ತು ಮನ್ಯದ ಸುತ್ತಲೂ ವಸ್ತ್ರದ ಪಟ್ಟೀ ಸುತ್ತಿ ಎರಡುಬೆಟ್ಟಿನಗಲದ ಬಟ್ಟೆಯನ್ನು ಮೋಣಕೈ ಸಂಧಿಯ ಮೂರು ಅಂಗುಲದ ಮೇಲೆ ಕಟ್ಟಬೇಕು. ಮತ್ತು ಮತ್ತೊಬ್ಬ ಮನುಷ್ಯನು ಹಿಂಭಾಗದಲ್ಲಿ ಬಲವಾಗಿ ಹಿಡದುಕೊಂಡು ನಿಂತುಕೊಳ್ಳಬೇಕು. ಅನಂತರ ವೈದ್ಯನು ನರಗಳು ಉಬ್ಬದಹಾಗೆ ಘಟ್ಟಿಯಾಗಿ ಹಿಡಿಯಬೇಕೆಂದು ಹೇಳಬೇಕು. ಬಲದ ಕೈಯಿಂದ ಬಹಳ ಘಟ್ಟಿಯಾಗದ ಹಾಗೂ ಬಹಳ ಸಡ್ಲವಾಗದ ಹಾಗೂ ಯಂತ್ರವೇಷ್ಟನ ಮಾಡಬೇಕು. ಮತ್ತು ರಕ್ತವು ಚೆನ್ನಾಗಿ ಸ್ರವಿಸುವಹಾಗೆ ಪೃಷ್ಠಮಧ್ಯದ ಸಮೀಪದಲ್ಲಿ ಯಂತ್ರ

ವನ್ನು ಚೆನ್ನಾಗಿ ಸುತ್ತಿಸಬೇಕು. ಯಾವನಿಗೆ ಸಿರಾವೇಧೆ ಮಾಡಬೇಕೋ ಅವನ ಬಾಯಿ ಮುಚ್ಚಿಸಿ ಶ್ವಾಸ ಸಿರೋಧ ಮಾಡಿಸಬೇಕು. ಆದರೆ ಬಾಯಿಯಲ್ಲಿ ಯಿರುವ ನರಗಳು ಹೊರ್ತಾಗಿ ಇತರ ಸಿರೆಗಳೆಂದು ತಿ? ಯಬೇಕು.

೨೩. ಪಾದಾದಿಗತ ಸಿರಾವೇಧೆ ಕ್ರಮ.—ಯೆರಡು ಕಾಲುಗಳನ್ನು ಸರಿಯಾಗಿ ಇಡಿಸಿ ಸ್ವಲ್ಪ ಯೆತ್ತಿ ಹಿಡಿದು ಯಾವ ಕಾಲಿನ ಸಿರಾವೇಧೆ ಮಾಡಬೇಕೋ ಆ ಕಾಲಿನ ಮೊಣಕಾಲಿನ ಕೆಳಗೆ ಘಟ್ಟಿಯಾಗಿ ಅರುವೆಯಿಂದ ಪಟ್ಟೀ ಸುತ್ತಬೇಕು, ಅಥವಾ ಕೈಯಿಂದ ಘಟ್ಟಿಯಾಗಿ ಹಿಡಿಯಬೇಕು. ತೊಡೆಸಂಧಿ ಸ್ಥಾನ ಬಿಟ್ಟು ನಾಲ್ಕು ಅಂಗುಲದ ಮೇಲೆ ವಸ್ತ್ರ ಅಥವಾ ಚರ್ಮವನ್ನು ಸುತ್ತಿ ಸಿರಾವೇಧೆ ಮಾಡಬೇಕು.

೨೪. ಕೈಸಿರಾವೇಧೆ ಮಾಡತಕ್ಕ ಕ್ರಮ.—ಮೇಲೆ ಹೇಳಿದ ಪ್ರಕಾರ ಅಂಗುಷ್ಠವನ್ನು ಮುಷ್ಟಿಯಿಂದ ಒಳಗೆ ಹಿಡಿದು ವ್ಯಾಧಿಇರುವ ಸ್ಥಾನ ಬಿಟ್ಟು ನಾಲ್ಕು ಅಂಗುಲದ ಮೇಲೆ ಪಟ್ಟಿಯಿಂದ ಕಟ್ಟಿಸಿ ಸಿರಾವೇಧೆ ಮಾಡಬೇಕು. ಇದೇ ಪ್ರಕಾರ ಗೃಧ್ರಸಿ, ವಿಶ್ವ ಈ ವಾತರೋಗಗಳಿಂದ ಹಿಡಿದು ಕೊಂಡಿದ್ದರೆ ಮೊಣಕಾಲಿನ ಕೂರ್ಪರ ಸಿರಾವೇಧಿಸಬೇಕು.

೨೫. ಶ್ರೋಣಿ, ಪೃಷ್ಠ, ಬೆನ್ನು ಇವುಗಳ ಸಿರಾವೇಧೆ ಕ್ರಮ.—ಯಾವನ ಪೃಷ್ಠವು ಗಿಡ್ಡನಾಗಿ ಜಳಬಿದ್ದರೂ ಮತ್ತು ಯಾವನ ಮಾನ್ಯದ ಬೆನ್ನು, ಹಿಂದಿನಸಿರಾ, ಮಸ್ತಕ, ಮತ್ತು ಹೆಗಲು ಇವುಗಳಿಗೆ ವಿಕಾರವಾದರೆ ಶಠವಿದ್ದರೆ, ಪೃಷ್ಠವು ಶಠವಿದ್ದರೆ, ಶ್ರೋಣಿ, ಪೃಷ್ಠ, ಸ್ಕಂಧ ಇವುಗಳಲ್ಲಿ ಸಿರಾವೇಧೆಮಾಡಿ ರಕ್ತ ತೆಗೆಯಬೇಕು. ಮತ್ತು ಯಾವಾತನ ಮಧ್ಯ ಶರೀರ ಶಠವಿದ್ದರೆ ಸಿರಾವೇಧೆ ಮಾಡಬೇಕು.

೨೬. ಯಾವರೋಗಿಗೆ ಯೆಲ್ಲಿ ಸಿರಾವೇಧೆ ಮಾಡಬೇಕೆಂದರೆ.—ಯಾವ ಮನುಷ್ಯನಿಗೆ ಯೆರಡು ಕೈಗಳು ಶರೀರ ಶರಕೊಂಡು ಉದ್ದವಾಗಿ ಪಾರ್ಶ್ವದಲ್ಲಿ ಸೇರಿಕೊಂಡರೆ ಅದಕ್ಕೆ ಪಾರ್ಶ್ವಸಂಧಿ ಸಿರೆಯನ್ನೂ, ಶಿಶ್ನವು ಸ್ತಬ್ಧವಾಗಿದ್ದರೆ ಶಿಶ್ನ ಸಂಬಂಧವಾದ ಸಿರೆಯನ್ನೂ, ನಾಲಿಗೆ ಕೊನೆಯು ಯೆತ್ತಿದಹಾಗೆ ಯಿದ್ದು ಕಿವುಡನಾಗಿದ್ದರೆ ನಾಲಿಗೆ ಕೆಳಗಣ ಸಿರೆಯನ್ನೂ ಸಹ ವೇಧಿಸಬೇಕು. ಮತ್ತು ಬಾಯಿಯು ತೆರದಿದ್ದರೆ ಕಾಲು ಮತ್ತು ದಂತ ಸಂಬಂಧಿ ಸಿರೆಗಳನ್ನು ಸಹ ವೇಧಿಸಬೇಕು.

೨೭. ಅನುಕ್ತ ಯಂತ್ರ ಕ್ರಮವೇನಂದರೆ.—ಶಿರಸ್ಸಿನ ಸಿರೆಗಳ ಉತ್ಥಾಪನೆ ವಿಷಯದಲ್ಲಿ ವೈದ್ಯನು ಯಂತ್ರದ ವಿಷಯದಲ್ಲಿ ತನ್ನ ಸ್ವಬುದ್ಧಿಯನ್ನು

ಉಪಯೋಗಿಸಬೇಕು. ಮತ್ತು ಅವನ ಬಲವನ್ನೂ ವ್ಯಾಧಿಯನ್ನೂ ಆ ಶರೀರವನ್ನೂ ಸಹ ತಿಳಿದು ಮಾಡಬೇಕು.

೨೮. ಸಿರಾವೇಧೆ ಮಾಡತಕ್ಕ ವಿವರ.—ಮಾಂಸಲ ಶರೀರ ಪ್ರದೇಶ ಅಂದರೆ ಜಠರ ಇವುಗಳಲ್ಲಿ ಯವೆ ಮಾತ್ರ ಸಿರಾವೇಧೆ ಮಾಡಬೇಕು. ಇತರ ಸ್ಥಳಗಳಲ್ಲಿ ತೆಗೆಯಬೇಕಾದರೆ ಅರ್ಧಯವೆಯಷ್ಟು ವೇಧೆ ಮಾಡಬೇಕು. ಮತ್ತು ಬಹಳ ಯಲುಬು ಇರುವ ಸ್ಥಳದಲ್ಲಿ ಭತ್ತದ ಕೊನೆಯಷ್ಟು ಪ್ರಮಾಣವುಳ್ಳ ಶಸ್ತ್ರದಿಂದ ರಕ್ತ ತೆಗೆಯಬೇಕು.

೨೯. ಸಿರಾವೇಧೆಗೆ ಕಾಲಗಳು.—ವರ್ಷಾಕಾಲದಲ್ಲಿ ಮೋಡವಿಲ್ಲದ ದಿನದಲ್ಲೂ ಗ್ರೀಷ್ಮಋತುವಿನಲ್ಲಿ ಬಿಸಲು ಅಧಿಕವಿಲ್ಲದ ದಿನದಲ್ಲೂ ಅಥವಾ ಮೂರು ಝಾವ ಕಳೆದು ತಂಪುಹೊತ್ತಿನಲ್ಲೂ ವೇಧೆಮಾಡಬೇಕು. ಆದರೆ ಹೇಮಂತಋತುವಿನಲ್ಲಿ ರೋಗವು ಪ್ರಾಣಹಾರಕವಾಗಿದ್ದರೇನೆ ತೆಗೆಯಬೇಕೇ ಹೊರ್ತು ಇಲ್ಲವಾದರೆ ತೆಗೆಯಕೂಡದು. ಇತರಕಾಲದಲ್ಲಿ ರಕ್ತ ತೆಗೆಯಬಾರದು.

೩೦. ಸಿರಾ ಸುವಿದ್ಧ ಲಕ್ಷಣ.—ಚನ್ನಾಗಿ ವೇಧೆಯಾಗಿದ್ದರೆ ರಕ್ತವು ಕ್ಷಣಮಾತ್ರದಲ್ಲಿ ಧಾರಾರೂಪವಾಗಿ ಸ್ರವಿಸಿ ಪಟ್ಟೀ ಕಟ್ಟಿದಮೇಲೆ ನಿಲ್ಲುತ್ತೆ.

೩೧. ದುಷ್ಟ ಸಿರಾವೇಧೆಯಿಂದ ಮೊದಲು ಕೆಟ್ಟ ರಕ್ತ ಹೋಗುವದಕ್ಕೆ ದೃಷ್ಟಾಂತ.—ಮೊದಲು ಸಿರಾವೇಧೆಯಿಂದ ಕುಸುಬೆ ಪುಷ್ಪ ನೆನದಂತೆ ಕೆನ್ನೀರು ಹೊರಟು ಅನಂತರ ವೊಳ್ಳೇ ರಕ್ತ ಹೊರಡುತ್ತೆ.

೩೨. ಸಿರಾ ಚನ್ನಾಗಿ ವೇಧೆಯಾಗದೆ ಯಿದ್ದರೆ ರಕ್ತ ಹೊರಡದ ಕ್ರಮ.—ಸಿರಾವೇಧೆ ಕಾಲದಲ್ಲಿ ಯಾವನಿಗೆ ಮೂರ್ಛೆ, ಭಯ, ಅಧಿಕ ಶ್ರಮ, ನೀರಡಿಕೆ ಉಂಟಾಗುತ್ತೋ ಅಂಥಾವನ ಸಿರೆಗಳ ಬಾಯಿಯು ತಡೆಯಲ್ಪಡುತ್ತೆ. ಮತ್ತು ಸಿರಾ ಉಬ್ಬಿದ ಹೊರ್ತು ವೇಧಿಸಿದರೆ ರಕ್ತ ಬರುವದಿಲ್ಲ. ಯಾಕಂದರೆ ಅದು ಪ್ರವಾಹಾಭಿಮುಖವಾಗುವದಿಲ್ಲ.

೩೩. ಕ್ಷೀಣ ಮನುಷ್ಯನ ರಕ್ತವನ್ನು ಅಗತ್ಯ ತೆಗೆಯಬೇಕಾದರೆ ಮಾಡತಕ್ಕ ಕ್ರಮ.—ಕ್ಷೀಣ, ಮೂರ್ಛೆ, ಬಹುದೋಷವುಳ್ಳ ಮನುಷ್ಯನಿಗೆ ಒಂದೇಭಾರಿ ರಕ್ತ ತೆಗೆಯಕೂಡದು. ಅಗಾಗ್ಯೆ ಅಂದರೆ ಯೆರಡು ಮೂರು ದಿವಸಗಳ ಅಪರಾಹ್ಣದಲ್ಲಿ ತೆಗೆಯಬೇಕು.

೩೪. ಬಹಳವಾಗಿ ರಕ್ತ ತೆಗೆಯುವದರ ನಿಷೇಧ.—ವಿಚಕ್ಷಣ ವೈದ್ಯನು ಒಂದೇಸಲ ಬಹಳ ರಕ್ತ ತೆಗದು ದೋಷವನ್ನು ಪರಿಹರಿಸಬಾರದು. ಯೇನಾದರೂ ಶೇಷ ವಿದ್ದರೆ ಔಷಧಾದಿಗಳಿಂದ ಸರಿಮಾಡಬೇಕು.

೩೫. **ರಕ್ತ ತೆಗೆಯುವದಕ್ಕೆ ಪರಮಾವಧಿ.**—ಯಾವನು ಬಲಿಷ್ಠನಾಗಿ ವಾತಾದಿ ದೋಷಗಳು ಬಲಿಷ್ಠವಾಗಿದ್ದರೂ ಮತ್ತು ಪ್ರೌಢವಯಸ್ಕನಾಗಿಯೂ ಇದ್ದರೆ ಅವನ ಶರೀರದಲ್ಲಿ ಪರಮಾವಧಿ ಒಂದು ಪ್ರಸ್ಥ ಅಂದರೆ ೧೩॥ ಪಲ ತೆಗೆಯಬೇಕು.

೩೬. ವಮನ ವಿರೇಚನ ರಕ್ತಸ್ರಾವಗಳುಳ್ಳವರ ರಕ್ತವನ್ನು ೧೩॥ ಪಲ ಅಂದರೆ ಒಂದು ಪ್ರಸ್ಥ ತೆಗೆಯಬೇಕು.

೩೭. **ಯಾವ ರೋಗಿಗೆ ಯಾವ ಸಿರಾವೇಧೆ ಮಾಡಬೇಕೆಂದರೆ.**—ವಿಸರ್ಪವೇ ಮೊದಲಾಗಿ ರೋಗಗಳು ಶರೀರದಲ್ಲಿ ಹುಟ್ಟುತ್ತವೆ. ಅಂಥಾ ರೋಗಗಳು ಪಾದದಾಹ, ಪಾದಹರ್ಷ, ಅಪಬಾಹುಕ, ಚಿಮಚಿಮ, ವಿಸರ್ಪ, ವಾತಶೋಣಿತ, ವಾತಕಂಟಕ, ವಿಚರ್ಚಿಕ, ಪಾದದಾರಿ ಈ ಹೊಂಭತ್ತು ವಿಧ ರೋಗಗಳು ಮತ್ತು ತತ್ಸದೃಶರೋಗ ಅಥವಾ ಇದರ ಸಂಬಂಧಿ ಇತರ ರೋಗಗಳು ಒಂದು ಪಾದದಲ್ಲಿ ಕೀರಿದರೆ ಕ್ಷಿಪ್ರಸಂಜ್ಞಿಕದ ಮರ್ಮದ ಮೇಲುಕಡೆ ಯರಡು ಅಂಗುಳ ಸ್ಥಳವನ್ನು ಬಿಟ್ಟು ವ್ರೀಹ್ಯಗ್ರ ಪ್ರಮಾಣವಾಗಿ ಸಿರಾವೇಧೆ ಮಾಡಬೇಕು. ಶ್ಲೀಪದ ರೋಗದ ಸ್ಥಳದಲ್ಲಿ ಅದರ ಚಿಕಿತ್ಸೆಯಲ್ಲಿ ಯಾವ ರೀತಿ ಹೇಳಿಯಿದೆಯೋ ಆಪ್ರಕಾರ ಸಿರಾವೇಧನೆಯು ಕೋಷ್ಠ, ಶೀರ್ಷ, ಖಂಜ, ಪಂಗು ಇತ್ಯಾದಿ ವಾತ ರೋಗಗಳ ಜಾಗಗಳಲ್ಲಿಯೂ ಕಣಕಾಲಿನಲ್ಲೂ ಇಂದ್ರ ಮರ್ಮದ ಸಿರಾ ವೇಧಿಸಬೇಕು.

೩೮. **ಅಪಚಿಯಲ್ಲಿ ಸಿರಾವೇಧೆ ಕ್ರಮ.**—ಇಂದ್ರವಸ್ತಿ ಮರ್ಮದ ಅಧೋಭಾಗಕ್ಕೆ ಯರಡಂಗುಲ ಜಾಗವನ್ನು ಬಿಟ್ಟು ಸಿರಾವೇಧೆ ಮಾಡಬೇಕು. ಆದರೆ ಈರೋಗವು ಉತ್ಪನ್ನವಾದ ಕ್ಷಣವೇ ಮಾಡಬೇಕು.

೩೯. **ಗೃಧ್ರದ ಮೇಲುಕಡೆ ಸಿರಾವೇಧೆ ಮಾಡತಕ್ಕ ಕ್ರಮ.**—ಈ ವಾತರೋಗದಲ್ಲಿ ಮೊಣಕಾಲಿನ ಮೇಲಕ್ಕೆ ಅಥವಾ ಕೆಳಕ್ಕೆ ನಾಲ್ಕು ಅಂಗುಲ ಬಿಟ್ಟು ಜಾನು ಮೂಲಾಶ್ರಿತ ಶಿರಾಗಳ ಗಂಡದಲ್ಲಿ ಸಿರಾ ವೇಧಿಸಬೇಕು. ಇದೇ ಪ್ರಕಾರವಾಗಿ ಕೈಗಳಲ್ಲೂ ಸಿರೆಗಳು ಇರುವದ್ದರಿಂದ ಮೇಲೆ ಹೇಳಿದಂತೆಯೇ ನಡಿಸಬೇಕು.

೪೦. **ಕೈ ಕಾಲುಗಳಲ್ಲಿ ವಿಶೇಷ ಯೇನೆಂದರೆ.**—ಪ್ಲೀಹ ಸಂಬಂಧಿರೋಗ ನಾಶವಾಗುವದಕ್ಕೆ ಮೊಣಕೈ ಸಂಧಿಯ ಸಮೀಪ ಮತ್ತು ಬಾಹು ಮಧ್ಯದಲ್ಲಿರುವ ಸಿರಾ ಅಥವಾ ಕಿರಬೆಟ್ಟಿನ ಮತ್ತು ಅನಾಮಿಕ ಈ ಯೆರಡು

ಪಕ್ಕೆಗಳ ನಡುವಿನ ಸಿರಾವೇಧಿಸಬೇಕು. ಹಾಗೆಯೇ ಯಕೃದ್ದಾಲ್ಯುದರ, ಕಫೋದರ, ಕಫ ಜನ್ಯಕ, ಶ್ವಾಸ, ಕಫವೃತ್ತ ವಾಯುಜನ್ಯ ಕಾಸ, ಮತ್ತು ಶ್ವಾಸ ಇವುಗಳಲ್ಲಿ ಬಲಗೈ ಸಿರಾವೇಧಿಸಬೇಕು. ಈ ಪ್ರಕಾರ ಗಯದಾಸನ ಮತದಲ್ಲಿ ಇರುತ್ತೆ. ಆದರೆ ಕಾಸಶ್ವಾಸ ಸ್ವಲ್ಪವಿದ್ದರೆ ಅದರ ಮಾರ್ಗ ವಿಸ್ತಾರ ಮಾಡುವದಕ್ಕೆ ಸಿರಾವೇಧೆ ಮಾಡಬೇಕು. ಅತಿರಿಕ್ತವಾಗಿದ್ದರೆ ಮಾಡಬಾರದು. ಶ್ವಾಸಕಾಸವಿಷಯದಲ್ಲಿ ಸಿರಾವೇಧೆಯ ನಿಷೇಧ ಮೊದಲೇ ಮಾಡಿ ಇಧೆ. ಇದಕ್ಕಾಗಿ ಗೃಧ್ರಸಿಯ ಸ್ಥಾನದಲ್ಲಿ ಯಾವ ಸಿರಾವೇಧಿಸುವದಕ್ಕೆ ಹೇ? ಇಧೆಯೋ ಅದೇ ಸಿರಾ ಅಥವಾ ಶ್ವಾಸ ವಿಕಾರ ಯಾವ ಸ್ಥಳದಲ್ಲಿ ಹುಟ್ಟುತ್ತದೋ ಆ ಸ್ಥಳದಲ್ಲಿ ಪ್ರಯೋಗಿಸಬೇಕು.

೪೧. ಪ್ರವಾಹಿಕ ರೋಗದಲ್ಲಿ ಸಿರಾವೇಧಿಸುವ ಕ್ರಮ.—ರಕ್ತಕೃತವಾದ ಶೂಲೆಯಿಂದ ಯುಕ್ತವಾದ ಮತ್ತು ಬಹಳ ದಿವಸ ಪ್ರವಾಹಿಕೆ ಅದರ ಶಾಂತ್ಯರ್ಥವಾಗಿ ಶ್ರೋಣಿ ಪ್ರದೇಶದ ಸುತ್ತಲು ಯರಡಂಗುಲದಲ್ಲಿ ಸಿರಾವೇಧೆ ಮಾಡಬೇಕು. ಮತ್ತು ಪರಿಕಾರ್ತಿಕ, ಉಪದಂಶ, ಶುಕ್ರ ದೋಷ, ಶುಕ್ರವ್ಯಾಪಿತ, ಈ ರೋಗಗಳಿಗೆ ಶಿಶ್ನದಲ್ಲಿ ಸಿರಾವೇಧೆ ಮಾಡಬೇಕು.

೪೨. ಮೂತ್ರವೃದ್ಧಿಗೆ ಸಿರಾವೇಧಿಸುವ ಕ್ರಮ.—ಈ ರೋಗವು ಪೂರ್ಣವಾಗಿದ್ದರೆ ವೃಷಣದ ಯರಡು ಪಾರ್ಶ್ವಗಳ ಸಿರಾವೇಧಿಸಬೇಕು. ಮತ್ತು ನಾಭಿಯ ಅಧೋಭಾಗದ ಹೊಟ್ಟೆ ಯಡದ ಕಡೆ ಸಿರಾವೇಧಿಸಬೇಕು.

೪೩. ವಿದ್ರಧಿ ಮತ್ತು ಪಾರ್ಶ್ವ ಶೂಲೆಗೆ ಸಿರಾವೇಧಿಸುವ ಕ್ರಮ.—ವಾಮಪಾರ್ಶ್ವದಲ್ಲಿ ಹಿಡಿದುಕೊಂಡು ಯರಡು ಪಾರ್ಶ್ವಗಳಲ್ಲಿ ವಿದ್ರಧಿ ಅಥವಾ ಪಾರ್ಶ್ವಶೂಲೆ ಆಗಿದ್ದರೆ ಯರಡು ಕಡೆ ಕಕ್ಷ ಮತ್ತು ಸ್ತನ ಇವುಗಳ ಮಧ್ಯ ದೇಶದ ಸಿರೆಯನ್ನು ವೇಧಿಸಬೇಕು. ಇದಕ್ಕೆ ಉದಾಹರಣೆ.—ಯಡದಕಡೆ ಆಗಿದ್ದರೆ ಯಡದ ಸ್ತನ ಮತ್ತು ಯಡದ ಬಗಲು ಈ ಯರಡರ ಮಧ್ಯದ ಸಿರಾವೇಧೆ ಮಾಡಬೇಕು. ಈ ಪ್ರಮಾಣವಾಗಿಯೇ ಬಲದ ಕಡೆಯಲ್ಲೂ ಮಾಡ..ೇಕುಯೆಂದು ಕೆಲರು ಹೇಳಿ ಇಧಾರೆ. ಕಫೋದರದಲ್ಲಿ ಈ ಸಿರೆಯನ್ನೇ ವೇಧಿಸಬೇಕು. ಪರಂತು ಆ ಮತವು ಉತ್ತಮವಾದ್ದಲ್ಲ. ಯಾಕಂದರೆ ಪೂರ್ವದಲ್ಲಿ ಯಕೃದ್ದಾಲ್ಯುದರ ಮತ್ತು ಕಫೋದರದಲ್ಲಿ ದಕ್ಷಿಣ ಬಾಹು ಸಂಬಂಧಿ ಸಿರಾವೇಧಿಸುವದಕ್ಕೆ ಹೇಳಿಯಿಧೆ.

೪೪. ಬಾಹುಶೋಷೆ ಮತ್ತು ಅಪಬಾಹುಕಗಳ ರಕ್ತ ತೆಗೆಯುವ ಕ್ರಮ.—ಶೋಣಿತಾವೃತವಾತಜನ್ಯ ಬಾಹುಶೋಷೆ ಮತ್ತು ಅಪಬಾಹುಕ ಇವುಗಳಲ್ಲಿ ಅಂಸದ ಮಧ್ಯದೇಶದ ಸಿರೆಯನ್ನು ವೇಧಿಸಬೇಕು. ವೊಂದು ವಾಯು ಮಾತ್ರದಿಂದ ಆಗಿದ್ದರೆ ವೇಧೆ ಮಾಡಕೂಡದು ಯೆಂದು ಕೆಲವರು ಹೇಳಿ ಯಿದ್ಧಾರೆ. ಪರಂತು ಅಪಬಾಹುಕಕ್ಕೆ ಸ್ನೆಹನ ಸ್ವೇದನ ಯಿವುಗಳ ಉಪಚಾರ ನಿಷೇಧವಿರುತ್ತೆ. ಸಾಮಾನ್ಯ ಸಿರಾವೇಧೆಯ ನಿಷೇಧವಿಲ್ಲ. ಬಾಹುಶೋಷದ ಜಾಗಾದಲ್ಲಿ ವೊಂದೇವಾಯು ಇರುತ್ತೆ. ಪರಂತು ಅವಸ್ಥಾಭೇದದಿಂದ ಅಂದರೆ ಯಾವಕಾಲದಲ್ಲಿ ಉಷ್ಣ, ಹುಳಿ, ಲವಣಾದಿಗಳಿಂದ ಪಿತ್ತ ಅಧಿಕವಾಗಿ ವಾತಾವೃತವಾಗಿ ಪೀಡೆಯುಂಟಾಗುತ್ತೊ ಆ ಕಾಲದಲ್ಲಿ ಸಿರಾವೇಧೆ ಮಾಡಬೇಕು.

೪೫. ತ್ರಯಾಹಿಂಕ ಜ್ವರಕ್ಕೆ ಸಿರಾವೇಧೆ ಮಾಡತಕ್ಕ ಕ್ರಮ.—ಈ ಜ್ವರಕ್ಕೆ ಅಂಸ ಮಧ್ಯದಲ್ಲಿರುವ ತ್ರಿಕಾ ಸಂಧಿ ಅಂದರೆ ಮನ್ಯಾದ ತ್ರಿಕಾದಲ್ಲಿ ಸಿರಾವೇಧೆ ಮಾಡಬೇಕು.

೪೬. ಚಾತುರ್ಥಿಕ ಜ್ವರಕ್ಕೆ ಸಿರಾವೇಧೆ ಮಾಡತಕ್ಕ ಕ್ರಮ.—ಈ ಜ್ವರಕ್ಕೆ ಸ್ಕಂಧದ ಯಡಕ್ಕೆ ಅಥವಾ ಬಲಕ್ಕೆ ಸಿರಾ ವೇಧಿಸಬೇಕು.

೪೭. ಅಪಸ್ಮಾರಕ್ಕೆ ಸಿರಾ ವೇಧಿಸುವ ಕ್ರಮ.—ಅಪಸ್ಮಾರ ಅಂದರೆ ಮಲರೋಗ. ಈ ರೋಗದಲ್ಲಿ ಹನುಸಂಧಿ ಸಮೀಪದಲ್ಲಿರುವ ಸಿರೆಯನ್ನು ವೇಧಿಸ ಬೇಕು

೪೮. ಉನ್ಮಾದ ರೋಗಕ್ಕೆ ಸಿರಾ ವೇಧಿಸುವ ಕ್ರಮ.—ಶಂಖ, ಕೇಶ ಸಂಧಿ, ಉರೋಗ, ಅಪಾಂಗ, ಲಲಾಟ, ಯಿವುಗಳ ಮಧ್ಯದಲ್ಲಿ ಸಿರಾವೇಧೆ ಮಾಡಬೇಕು. ಮತ್ತು ಅಪಸ್ಮಾರಕ್ಕೂನು ಇದೇ ಸಿರಾಗಳು ವೇಧಿಸ ಬಹುದು. ಪರಂತು ವಾಗ್ಭಟಾದಿ ಗ್ರಂಥ ವಿರೋಧ ವಾದ್ದರಿಂದ ಈ ಪಾ: ಚೆನ್ನಾಗಿಲ್ಲ.

೪೯. ಜಿಹ್ವಾರೋಗ ಮತ್ತು ದಂತವ್ಯಾಧಿಗಳಗೆ ಸಿರಾವೇಧೆ ಕ್ರಮ.—ಕಂಟಕಾದಿ ಜಿಹ್ವಾರೋಗ, ಕ್ರಿಮಿದಂತಾದಿ ದಂತರೋಗ ಇವುಗಳಲ್ಲಿ ನಾಲಿಗೆ ಕೆಳಗೆ ಯಿರುವ ಸಿರೆಯನ್ನು ವೇಧಿಸ:ೇಕು.

೫೦. ತಾಲುರೋಗಕ್ಕೆ ಸಿರಾವೇಧೆ ಕ್ರಮ.—ತಾಲುಸಂಬಂಧಿ ಸಿರಾವೇಧಿಸಬೇಕು.

೫೧. ಕರ್ಣರೋಗಕ್ಕೆ ಸಿರಾವೇಧೆ ಕ್ರಮ.—ಕರ್ಣದ ಮೇಲಕ್ಕೆ ಇರುವ ಸಿರಾ ವೇಧಿಸ ಬೇಕು.

೫೨. ಗಂಧಪ್ರಹರಣಾದಿ ನಾಸಾರೋಗಕ್ಕೆ ಸಿರಾವೇಧೆ ಕ್ರಮ.—ನಾಸಾ ಗಂಧಗ್ರಹಣ ಹೋದರೂ, ಇತರ ನಾಸಾ ರೋಗಗಳು ಉಂಟಾದರೂ ಮೂಗಿನ ಸಂಬಂಧಿ ಸಿರಾ ವೇಧೆ ಮಾಡಬೇಕು. ಕರ್ಣಶೂಲೆ, ಮತ್ತು ಗಂಧಗ್ರಹಣ ಈ ಯೆರಡು ರೋಗಗಳಲ್ಲಿ ಕರ್ಣರೋಗ ಅಥವಾ ನಾಸಾರೋಗ ಇವುಗಳಿಂದ ಗ್ರಹಣವಾಗಿದ್ದರೆ ಅದು ಪೃಥಕ್ ಗ್ರಹಣವಾದದ್ದು ಯೆಂದು ವಿಶೇಷವಾಗಿ ತಿಳಿಯಬೇಕು.

೫೩. ತಿಮಿರ ಪಾಕಾದಿ ನೇತ್ರ ರೋಗಗಳ ಸಿರಾವೇಧೆ ಕ್ರಮ.—ತಿಮಿರ ಅಥವಾ ಅಕ್ಷಿಪಾಕ ಇತ್ಯಾದಿ ನೇತ್ರರೋಗಗಳಿಗೆ ಮೂಗಿನ ಸಮೀಪದ ಅಥವಾ ಲಲಾಟಸ್ಥ ಅಥವಾ ಅಪಾಂಗಸ್ಥ ಸಿರೆಯನ್ನು ವೇಧಿಸಬೇಕು. ಮತ್ತು ಅಧಿಮಂಥ ಪ್ರಭೃತಿ ಸಿರೋರೋಗಗಳ ಜಾಗದಲ್ಲಿ ಇದೇ ಸಿರೆಗಳನ್ನು ವೇಧಿಸಬೇಕು. ಇಲ್ಲಿ ಗ್ರಹಣವಿಧೆ. ಅದಕ್ಕೋಸ್ಕರ ಕ್ಷುದ್ರ ರೋಗದಲ್ಲಿ ಹೇಳಿದಂಥಾ ಅರೂಷಿಕಾದಿ ಸಿರೋ ರೋಗವನ್ನು ತೆಗದುಕೊಳ್ಳಬೇಕು.

೫೪. ದುಷ್ಟ ಸಿರೆಗಳನ್ನು ವೇಧಿಸುವ ಕ್ರಮ.—ದುರ್ವಿದ್ಧ, ಅತಿವಿದ್ಧ, ಸಂಕುಚಿತ, ಪಿಚ್ಚಿತ, ಕುಟ್ಟಿತ, ಅಪ್ರಸ್ತುತ, ಅತ್ಯುದೀರ್ಣ, ಅಂತೆವಿದ್ಧ, ಪರಿಶುಷ್ಕ, ಕೂಣಿತ, ವೇಪಿತ, ಅನುತ್ಥಿತ, ಅವಿದ್ಧ, ಶಸ್ತ್ರಹತ, ತಿರ್ಯಗ್ವಿದ್ಧ, ಅಪವಿದ್ಧ, ಅವ್ಯಧ್ಯ, ವಿದ್ರುತ, ಧೇನುಕ, ಪುನಃಪುನರ್ವಿದ್ಧ ಸಿರಾ ಸ್ನಾಯು ಅಸ್ಥಿ ಸಂಧಿ ಮರ್ಮ ಸುವಿದ್ಧಯೆಂಬ ದುರ್ವಿದ್ಧ ಸಿರೆಗಳು ೨೦ ಪ್ರಕಾರವಾಗಿರುತ್ತವೆ ಯೆಂದು ತಿಳಿಯಬೇಕು. ದುರ್ವಿದ್ಧ ಅಂದರೆ, ಯಾವ ಸಿರೆಯು ಬಹಳ ಸೂಕ್ಷ್ಮವಾಗಿ ಅತಿ ಕಮ್ಮಿಯಾಗಿ ರಕ್ತವು ಸ್ರವಿಸುತ್ತದೊ ಮತ್ತು ಶೂಲೆ, ಶೋಭೆ, ಸಹ ಯಾವದಕ್ಕೆ ಇರುತ್ತದೊ ಅದು ಯಾವದು ಪ್ರಮಾಣಕ್ಕಿಂತ ಅಧಿಕವೇಧೆಯಾಗಿದ್ದ ರಕ್ತವು ಒಳಗೆ ಸೇರಿ ಚನ್ನಾಗಿ ಸ್ರವಿಸುವದಿಲ್ಲವೋ ಅದು ಅತಿವಿದ್ಧವೆನ್ನಿಸಿಕೊಳ್ಳುತ್ತೆ, ಮತ್ತು ಸಂಕುಚಿತವೆಂಬುವದು ಇದೇ ಪ್ರಕಾರವೇ ಯೆಂದು ತಿಳಿಯಬೇಕು. ಮೊಂಡಶಸ್ತ್ರದಿಂದ ಚುಚ್ಚಿದ ಮೇಲೆ ಯಾವ ಸಿರೆಗಳು ಬಿಗಿಯಾಗಿ ಥಪ್ಪವಾಗುತ್ತವೆಯೋ ಅವು ಪಿಚಿತವೆನ್ನಿಸಿಕೊಳ್ಳುತ್ತೆ. ಯಾವ ಸಿರೆಯು ಯುಪ್ಪಟ್ಟುಭಾರಿ ಚುಚ್ಚಿದಾಗ್ಯೂ ಕ್ಕುವದಿಲ್ಲವೋ ಅದು ಕುಟಿತವೆನ್ನಿಸಿಕೊಳ್ಳುತ್ತೆ. ಯಾವ ನರವು ಸೀತ, ಭಯ, ಮೂರ್ಛೆಗಳಿಂದ ಸ್ರವಿಸುವದಿಲ್ಲವೋ ಅದು ಅಪ್ರಸ್ತುತವೆನ್ನಿಸಿಕೊಳ್ಳುತ್ತೆ. ಯಾವ ನರವು ತೀಕ್ಷ್ಣವಾಗಿದ್ದು ಮಹಾಮುಖಶಸ್ತ್ರದಿಂದ ವಿದ್ಧವಾದರೆ ಅತ್ಯುದೀರ್ಣವೆನ್ನಿಸಿಕೊಳ್ಳುತ್ತೆ. ಯಾವದು ಅಲ್ಪರಕ್ತ ಸ್ರವಿಸುತ್ತದೋ ಅದು ಅಂತೆವಿದ್ಧವೆನ್ನಿಸಿಕೊಳ್ಳುತ್ತೆ.

ಯಾವದು ರಕ್ತ ಸ್ರವಿಸಿದ ಮೇಲೆ ವಾಯುವಿನಿಂದ ಪೂರ್ಣವಾಗುತ್ತೋ ಅದು ಪರಿಶುಷ್ಕವೆನ್ನಿಸಿಕೊಳ್ಳುತ್ತೆ. ಯಾವ ನರವು ನಾಲ್ಕು ಕಡೆಯಲ್ಲೂ ಚುಚ್ಚಿದಾಗ್ಯೂ ಸ್ವಲ್ಪ ರಕ್ತ ಸ್ರವಿಸುತ್ತದೋ ಅದು ಕ್ಷಣಿತವೆಂದು ತಿಳಿಯಬೇಕು. ಯಾವಯಾವ ಸ್ಥಳದಲ್ಲಿ ಕಟ್ಟಿದಾಗ್ಯೂ ಕಂಪಿಸಿ ರಕ್ತ ಸ್ರವಿಸುವದಿಲ್ಲವೋ ಅದು ವೇಪಿತ. ಚನ್ನಾಗಿ ಉಬ್ಬದೇ ಇರುವ ನರವನ್ನು ವೇಧಿಸಿದರೆ ಚನ್ನಾಗಿ ರಕ್ತ ಸ್ರಾವವಾಗುವದಿಲ್ಲವೋ ಅದು ಅನುತ್ಥಿತ. ಯಾವ ಸಿರೆಯು ಶಸ್ತ್ರವೇಧೆಯಿಂದ ತುಂಡಾಗುತ್ತೋ ಮತ್ತು ಅತಿರಕ್ತ ಸ್ರವಿಸುತ್ತೋ ಅದರಿಂದ ಅವಯವಗಳು ಚಲನವಲನಗಳನ್ನು ಹೊಂದುವದಿಲ್ಲವೋ ಅಂದರೆ ಬಂಧಿಸಲ್ಪಡುತ್ತವೋ ಅದು ಅವಿದ್ಧಶಸ್ತ್ರಹತವೆಂದು ತಿಳಿಯಬೇಕು. ಯಾವ ಸಿರೆಯು ಸೊಟ್ಟು ಶಸ್ತ್ರದಿಂದ ವೇಧಿಸೋಣದರಿಂದ ಚನ್ನಾಗಿ ವೇಧೆಯಾಗದೆ ಶೇಷ ಉಳಿದರೆ ಅದು ತಿರ್ಯಕ್ವಿದ್ಧ. ಬಹಳವಾಗಿ ಶಸ್ತ್ರವೇಧೆ ಮಾಡಿದಾಗ್ಯೂ ಚನ್ನಾಗಿ ವೇಧೆಯಾಗದೆ ಇದ್ದರೆ ಅದು ಅಪವಿದ್ಧ. ಯಾವ ಸಿರೆಯು ಪೊಳ್ಳೇಸ್ಥಳದಲ್ಲಿ ವೇಧೆ ಪಡಿಸಿದಾಗ್ಯೂ ಸಿಕ್ಕುವದಿಲ್ಲವೋ ಅದು ಅವ್ಯಧ್ಯವು. ಯಾವ ಸಿರವು ಜಾಗಜಾಗದಲ್ಲೂ ಸಿಕ್ಕದೇ ಹೋಗುತ್ತೋ ಅದು ವಿದ್ರುತ. ಅಧಿಕವಾಗಿ ಚುಚ್ಚುವದ್ದರಿಂದ ಭಾರಿಭಾರಿಗೂ ರಕ್ತ ಸ್ರವಿಸುತ್ತಿದ್ದರೆ ಅದು ಧೇನುಕ. ಯಾವದು ಬಹಳ ಸೂಕ್ಷ್ಮನರದಿಂದ ಚುಚ್ಚಿದರೂ ರಕ್ತ ಸ್ರವಿಸುವದಿಲ್ಲವೋ ಮತ್ತು ಅದನ್ನು ಪುನಃ ಪುನಃ ಚುಚ್ಚಿದಾಗ್ಯೂ ಛಿದ್ರ ಬೀಳುತ್ತೋ ಅದು ಪುನಃಪುನರ್ವಿದ್ಧವು. ಯಾವದು ಸ್ನಾಯು, ಅಸ್ಥಿ, ಸಿರಾ, ಸಂಧಿ, ಮರ್ಮ ಇವುಗಳಲ್ಲಿ ವೇಧೆಯಾದರೆ ಆಯಾ ಅವಯವಗಳು ಯಳದುಕೊಳ್ಳುತ್ತವೋ ಅದು ಸಿರಾ ಸ್ನಾಯು ಅಸ್ಥಿ ಸಂಧಿ ಮರ್ಮಸುವಿದ್ಧವೆನ್ನಿಸಿಕೊಳ್ಳುತ್ತೆ.

೫೫. ಸಿರಾ ವೇಧಿಸುವದಕ್ಕೆ ಬಹಳಯತ್ನ ಕ್ರಮ.—ಸಿರೆಗಳನ್ನು ವೇಧಿಸುವ ವಿಷಯದಲ್ಲಿ ಅಭ್ಯಾಸ ಮಾಡಿ ಯಾವನೂ ನಿಪುಣನಾಗುವದಿಲ್ಲ. ಯಾಕಂದರೆ ಅದು ಮತ್ಸ್ಯದಹಾಗೆ ಅತಿ ಚಂಚಲವಾದ್ದರಿಂದ ಯತ್ನ ಮಾಡಿ ವೇಧೆಮಾಡಬೇಕು. ಯಂಥಾ ನಿಪುಣನಾದ ವೈದ್ಯನಿಂದಲೂ ವ್ಯತ್ಯಾಸವಾಗುತ್ತೆ.

೫೬. ಅಯೋಗ್ಯ ಶಸ್ತ್ರದಿಂದ ವೇಧಿಸಿದರೆ ವಿಪರೀತವಾಗುತ್ತೆ.—ವೈದ್ಯನು ಮನಸ್ಸುಬಂದಂತೆ ಮರ್ಮವನ್ನು ತಿಳಿಯದೆ ಶಸ್ತ್ರವೇಧೆ ಮಾಡಿದರೆ ಅನೇಕವಿಧ ರೋಗಗಳು ಉಂಟಾಗುತ್ತವೆ.

೫೭. ಸಿರಾವೇಧೆ ಗುಣ.—ಈ ಸಿರಾವೇಧೆಯಿಂದ ವ್ಯಾಧಿಯು ಜಾಗ್ರತೆಯಾಗಿ ವಾಸಿಯಾಗುವ ಹಾಗೆ ತೈಲಲೇಪಾದ್ಯುಪಚಾರಗಳಿಂದ ವಾಸಿಯಾಗುವದಿಲ್ಲ.

೫೮. ಸಿರಾವೇಧೆ ಮಾಡೋಣವು ವೈದ್ಯಕ್ಕೆ ಅರ್ಧಾಂಗವಾಗಿದೆ.— ಹ್ಯಾಗಂದರೆ ಚಿಕಿತ್ಸಾ ಅಂದರೆ ರೋಗಕ್ಕೆ ಪ್ರತಿಕ್ರಿಯೆಗಳು. ಅದರಲ್ಲಿ ಸಿರಾವೇಧೆಯು ಪ್ರಧಾನ ಅಂಗವಾಗಿದೆ. ಹ್ಯಾಗೆ ಕೋಷ್ಠಶೋಧನೆ ವಿಷಯದಲ್ಲಿ ವಸ್ತಿಪ್ರಯೋಗವು ಪ್ರಧಾನವಾಗಿದೆಯೊ ಹಾಗೆಯೇ ಶಲ್ಯತಂತ್ರದಲ್ಲೂ ಹೇಳಲ್ಪಟ್ಟಿದೆ. ಸ್ನಿಗ್ಧ, ಸ್ವಿನ್ನ, ವಾಂತ, ವಿರೀಕ್ತ, ಅಸ್ಥಾಪಿತ, ಅನುವಾಸಿತ ಈ ಸಿರೆಗಳಿಗೆ ವಿದ್ಧವಾದರೆ ಆ ಮನುಷ್ಯನು ಕ್ರೋಧ, ಉಪವಾಸ, ಮೈಥುನ, ದಿವಾನಿದ್ರಾ, ಅತಿಮಾತಾಡುವದು, ಅಧ್ಯಯನ ಇವುಗಳನ್ನು ಮಾಡಕೂಡದು, ಮತ್ತು ಸ್ಥಿರಸ್ಥಾನ ಜಿತಾಸನವುಳ್ಳವನಾಗಿರಬೇಕು. ಮತ್ತು ಸೀತ, ವಾತ, ಉಷ್ಣ, ವಿರುದ್ಧ, ಅಸಾತ್ಮ್ಯ, ಅಜೀರ್ಣ ಇತ್ಯಾದಿ ಅನ್ನಗಳನ್ನು ವರ್ಜಿಸಬೇಕು.

೫೯. ರಕ್ತಸ್ರಾವ ಮಾಡಿಸುವ ಉಪಾಯಗಳು.—ಕೊಂಬು, ತುಂಮಡಿ, ಜಿಗಣಿ, ಘಾಸಣಿ ಇತ್ಯಾದಿಗಳಿಂದ ಪೂರ್ವದಲ್ಲಿ ಹೇಳಿದ ರೀತಿ ತೆಗೆಯಬೇಕು. ಬಹಳ ಉದ್ದವಿಲ್ಲದಿದ್ದರೆ ನರಕ್ಕೆ ಧಾರದಿಂದ ಗಂಟುಹಾಕಿ ಬಿಗಿದು ರಕ್ತ ತೆಗೆಯಬೇಕು. ಮಧ್ಯಪ್ರದೇಶದಲ್ಲಿ ಇದ್ದರೆ ಜಿಗಣಿ ಹತ್ತಿಸಿ ತೆಗೆಯಬೇಕು. ಮತ್ತು ತುಂಮಡಿಯಿಂದ ತೆಗೆಯಬೇಕು. ಉದ್ದವಾಗಿದ್ದರೆ ಶೃಂಗದಿಂದ ತೆಗೆಯಬೇಕು. ಸರ್ವ ಶರೀರಗತವಾಗಿ ಅವಗಾಢವಾಗಿ ಬಹಳ ಉದ್ದವಾದ ಸಿರೆಯಾಗಿದ್ದರೆ ವೇಧಿಸಿಯೇ ರಕ್ತ ತೆಗೆಯಬೇಕು.

೬೦. ಸ್ಥಾನಭೇದದಿಂದ ಉಪಾಯ ಮಾಡತಕ್ಕ ಕ್ರಮ.—ಅಭ್ಯಂತರಾಶ್ರಿತಸಿರೆಯು ದುಷ್ಟವಾಗಿದ್ದರೆ ಜಲೂಕವನ್ನು ಹತ್ತಿಸಿ ತೆಗೆಯಬೇಕು. ರಕ್ತವು ಕೂಡಿ ಗಂಟಾಗಿದ್ದರೆ ಘಾಸಣಿಯಿಂದಲೂ, ಸರ್ವಾಂಗದಲ್ಲೂ ರಕ್ತ ದುಷ್ಟವಾಗಿದ್ದರೆ ಸಿರಾವೇಧೆಯಿಂದಲೂ ಸಹ ರಕ್ತವನ್ನು ತೆಗೆಯಬೇಕು. ಮತ್ತು ತ್ವಗ್ಗತವಾಗಿದ್ದರೆ ಶರತ್ಕಾಲದಲ್ಲೂ ತುಂಮಡಿಯಿಂದ ಆಗಲಿ ಅಥವಾ ಪಿತ್ತದಿಂದ ಮಾಡಿದ ಯಂತ್ರದಿಂದ ಆಗಲಿ ತೆಗೆಯಬೇಕು.

೬೧. ವಾತಾದಿಗಳಿಂದ ರಕ್ತದುಷ್ಟವಾಗಿದ್ದರೆ ತೆಗೆಯುವ ಕ್ರಮ.— ವಾತದಿಂದ ರಕ್ತ ಕೆಟ್ಟರೆ ಗೋಶೃಂಗದಿಂದ ತೆಗೆಯಬೇಕು. ಪಿತ್ತದಿಂದ ಕೆಟ್ಟರೆ ಜಲೂಕದಿಂದಲೂ, ಕಫದಿಂದ ಕೆಟ್ಟರೆ ತುಂಮಡಿಯಿಂದಲೂ, ದ್ವಿದೋಷ ಅಥವಾ ತ್ರಿದೋಷದಿಂದ ದೂಷಿತವಾಗಿದ್ದರೆ ಶಸ್ತ್ರ ಅಥವಾ ಘಾಸಣಿಯಿಂದಲೂ ತೆಗೆಯಬೇಕು.

೬೦. **ಶೃಂಗಾದಿಗಳಿಂದ ರಕ್ತ ತೆಗೆಯುವದಕ್ಕೆ ಪ್ರಮಾಣ.**—ಶೃಂಗದಿಂದ ರಕ್ತ ತೆಗದರೆ ೧೦ ಅಂಗುಲದವರಿಗೂ ಶೃಂಗದಲ್ಲಿ ರಕ್ತ ಯೇರುತ್ತೆ. ಜಲೂಕ ಹತ್ತಿಸಿ ತೆಗದರೆ ಒಂದು ಮೊಳದವುದ್ದ ಯೇರುತ್ತೆ. ತುಂಬುಡಿಯಿಂದ ತೆಗದರೆ ಒಂದು ಅಡಿ ಯೇರುತ್ತೆ. ಘಾಸಣಿಯಿಂದ ತೆಗದರೆ ಹೊಂದಂಗುಲ ಯೇರುತ್ತೆ. ಶಸ್ತ್ರದಿಂದ ತೆಗದರೆ ಸರ್ವಾಂಗವನ್ನೂ ಶೋಧಿಸುತ್ತೆಯಾಗಿ ವೈದ್ಯನು ಯೆಷ್ಟುಬೇಕೊ ಅಷ್ಟು ತೆಗೆಯತಕ್ಕದ್ದು.

೬೧. ರಕ್ತ ತೆಗೆಯುವದಕ್ಕೆ ಯೋಗ್ಯರು—ದಾಹ, ಶೋಭೆ, ಅಂಗಪಾಕ, ಶರೀರರಕ್ತವರ್ಣ, ನಾಸಾದಿಗಳಲ್ಲಿ ರಕ್ತಸ್ರಾವ, ವಾತರಕ್ತ, ಕುಷ್ಟ, ಪೀಡಾಯುಕ್ತವಾದ ದುರ್ಜಯವಾಯು, ಹಸ್ತರೋಗ, ಶ್ಲೀಪದರೋಗ, ಗ್ರಂಥಿ, ಅರ್ಬುದ, ಗಂಡಮಾಲೆ, ಛೇದವೃಕ್ಷ ರೋಗಗಳು, ಅಪಚಿರೋಗ, ಕ್ಷುದ್ರರೋಗ, ನೇತ್ರದಲ್ಲಿರುವ ರಕ್ತಾಧಿಮಂಥರೋಗ, ವಿದಾರಿ, ಸ್ತನರೋಗ, ಗಾತ್ರಶೈಥಿಲ್ಯ, ಶರೀರಜಡತ್ವ, ರಕ್ತಾಭಿಷ್ಯಂದ ನೇತ್ರರೋಗ, ತಂದ್ರ, ಮೂಗು ಮುಖ ದೇಹ ಇವುಗಳಲ್ಲಿ ದುರ್ಗಂಧರೋಗ, ಕಾಲಖಂಡರೋಗ, ಕಾಲೀಯರೋಗ, ಕವಲು, ವಿಸರ್ಪ, ವಿದ್ರಧಿ, ಅಂಗುಟಿಕಾ, ಕಿವಿ ಒಷ್ಟ ಮೂಗು ಬಾಯಿ ಇವುಗಳಲ್ಲಿ ಪಾಕರೋಗ, ದಾಹ, ಮಸ್ತಕಪೀಡೆ, ಉಪದಂಶ, ರಕ್ತ ಪಿತ್ತರೋಗ, ಈ ರೋಗಗಳಲ್ಲಿ ರಕ್ತವನ್ನು ತೆಗೆಯಬಹುದು.

೬೨. ಶಸ್ತ್ರದಿಂದ ಘಾಯಮಾಡಿದಾಗ ರಕ್ತಸ್ರಾವವಾಗದೆ ಇದ್ದರೆ ಹೊರಡಿಸುವದಕ್ಕೆ ಉಪಾಯ.—ಕೋಷ್ಠ, ಸೈಂಧವ, ಚಿತ್ರಕ ಇಮೂರು ಪದಾರ್ಥಗಳ ಚೂರ್ಣವನ್ನು ಆ ವ್ರಣಕ್ಕೆ ಹತ್ತಿಸಿದರೆ ರಕ್ತವು ಸ್ರವಿಸುತ್ತೆ.

೬೩. ಬಹಳ ರಕ್ತ ಸ್ರಾವವಾದರೆ ಪ್ರತಿಕ್ರಿಯೆ.—ಲೋಧ್ರ, ವಾಳ, ಮತ್ತು ರಸಾಂಜನ ಈ ಮೂರು ಪದಾರ್ಥಗಳು ಚೂರ್ಣಮಾಡಿಯೇ ಆಗಲಿ, ಯವೆ ಮತ್ತು ಗೋಧುಮೆಹಿಟ್ಟುಗಳನ್ನು ವ್ರಣಮುಖದಲ್ಲಿ ಹಾಕಿ ಕಟ್ಟಿ, ವ್ರಣಾದಿಗಳಿಗೆ ಚಂದನಮೇ ಮೊದಲಾದ ಶೀತಳಾದ್ಯುಪಚಾರಗಳನ್ನು ಮಾಡಬೇಕು. ಆ ಸಿರೆಯಲ್ಲಿ ರಕ್ತ ಕಟ್ಟದೆ ಹೋದರೆ ಅದೇ ಸಿರೆಯನ್ನು ಊರ್ಧ್ವಾಂಗದಲ್ಲಿ ವೇಧಿಸಬೇಕು, ಮತ್ತು ಯವಕ್ಷಾರಾದಿ ಟಾಕನ ಖಾರಗಳನ್ನು ಲೇಪಿಸಬೇಕು, ಅಥವಾ ಆ ಮುಖದಲ್ಲಿ ಡಂಭಕರ್ಮ ಮಾಡಿಸಬೇಕು. ಕಷಾಯ ಅಂದರೆ ಲೋಧ್ರಾದಿಕ ಚೂರ್ಣವನ್ನು ವ್ರಣಮುಖದಲ್ಲಿ ಹಾಕಬೇಕು. ಶೀತೋಪಚಾರದಿಂದ ರಕ್ತ ಕಟ್ಟಿ, ಕ್ಷಾರ

ದಿಂದ ವ್ರಣಪಾಚನವಾಗುತ್ತೆ. ಅಗ್ನ್ಯಾದಿಕ ದಾಹಗಳಿಂದ ಸಿರೆಗಳಿಗೆ ಸಂಕೋಚವುಂಟಾಗುತ್ತೆ.

೬೬. ಬರೆಹಾಕುವದರಿಂದ ಯಾವರೋಗ ಪರಿಹಾರವಾಗುತ್ತೆಂದರೆ.—ಎಡದಕಡೆ ವೃಷಣದಲ್ಲಿ ಶೋಭೆಯುಂಟಾಗಿದ್ದರೆ ದಕ್ಷಿಣ ಕರಾಂಗುಷ್ಠಮೂಲದಲ್ಲಿ ಬರೆಹಾಕಬೇಕು. ಬಲದಕಡೆ ವೃಷಣದಲ್ಲಿ ಶೋಭೆ ಬಂದಿದ್ದರೆ ವಾಮ ಕರಾಂಗುಷ್ಠಮೂಲದಲ್ಲಿ ಬರೆಹಾಕಬೇಕು. ಹೀಗೆ ಮಾಡುವದರಿಂದ ವೃಷಣದಶೋಭೆ ಪರಿಹರವಾಗುತ್ತೆ. ವಿಷೂಚಿ ಸಂಭವಿಸಿದ್ದರೆ ಅಂಗಾಲಿನ ಹಿಂಬಡಿಯಲ್ಲಿ ಬರೆ ಮುಂತಾದ್ದು ಹಾಕಿದರೆ ರಸವಾಹಿನೀ ಕಫವಾಹಿನೀ ಸಿರೆಗಳು ಸಂಕೋಚವಾಗಿ ಅಗ್ನಿದೀಪನೆಯಾಗುತ್ತೆ. ಮಕ್ಕಳಿಗೆ ಹೊಟ್ಟೆಯ ದಕ್ಷಿಣಭಾಗದಲ್ಲಿ ಯಕೃತ್ ಅಂದರೆ ಕಾಲಖಂಡ, ವಾಮಕಡೆ ಪ್ಲೀಹ ಇವುಗಳು ವೃದ್ಧಿಯಾದಕಾಲದಲ್ಲಿ ಆಯಾಸ್ಥಾನಗಳಲ್ಲಿ ಬರೆಹಾಕಬೇಕು, ಇದರಿಂದ ಅವು ನಿವಾರಣವಾಗುತ್ತವೆ. ಈ ದಂಭಕರ್ಮವನ್ನು ವಿಸ್ತಾರವಾಗಿ ಮುಂದೆ ವಿವರಿಸುತ್ತೆ.

೬೭. ರಕ್ತ ತೆಗೆಯುವದರಿಂದ ದೋಷಪ್ರಕೋಪವಾದರೆ ಉಪಾಯ.—ವ್ರಣಸ್ಥಾನದಲ್ಲಿ ಪಿತ್ತ ಪ್ರಕೋಪವಾದರೆ ಸೀತೋಪಚಾರವನ್ನೂ, ವಾಯುಪ್ರಕೋಪದಿಂದ ಪೀಡೆ ಶೋಭೆಗಳಾಗಿದ್ದರೆ ತುಪ್ಪವನ್ನು ಬೆಚ್ಚಗೆ ಮಾಡಿ ಅದರ ಲೇಪವನ್ನೂ ಸಹ ಮಾಡಬೇಕು.

೬೮. ರಕ್ತತೆಗೆದರೆ ಪಥ್ಯ.—ಹುಲ್ಲೆ, ಮೊಲ, ಕುರಿ, ಮೇಕೆ ಇವುಗಳ ಮಾಂಸದ ರಸ, ಅಥವಾ ಕ್ಷೀರ ಇವುಗಳನ್ನು ಕುಡಿಸಿ ೬೦ ದಿವಸಗಳ ಅಕ್ಕಿ ಅನ್ನವನ್ನು ತಿನ್ನಿಸಬೇಕು.

೬೯. ರಕ್ತದ ಗುಣ.--ರಕ್ತದಿಂದ ಶರೀರವು ಉತ್ಪತ್ತಿಯಾಗುತ್ತೆ, ಆ ರಕ್ತ ದೇಹವನ್ನು ಧರಿಸುತ್ತೆ, ರಕ್ತ ಹೋದರೆ ಪ್ರಾಣಹೋಗುತ್ತೆ, ಆದ್ದರಿಂದ ಸುಜ್ಞಾನಿಗಳು ರಕ್ತವನ್ನು ರಕ್ಷಿಸುತ್ತಾರೆ.

೭೦. ರಕ್ತದ ಸ್ವರೂಪ.—ರಕ್ತವು ರಸರೂಪವಾಗಿ ಸೀ ಮತ್ತು ಕೆಂಪುವರ್ಣ, ಗುಣದಲ್ಲಿ ಜಡ, ಉಷ್ಣ, ಜಿಡ್ಡು, ಆಮಗಂಧಿ ಈ ಪ್ರಕಾರವಾಗಿರುತ್ತೆ. ಮತ್ತು ಪಿತ್ತದಂತೆ ದಾಹಶಕ್ತಿಯನ್ನು ಹೊಂದಿರುತ್ತೆ. ಈ ಪ್ರಕಾರ ರಕ್ತದ ರಸಾದಿಕಸ್ವರೂಪವನ್ನು ತಿಳಿಯಬೇಕು.

೭೧. ರಕ್ತದಲ್ಲಿ ಪಂಚಭೂತಗುಣಗಳು.—ಆಮಗಂಧತ್ವ ಇರುವದರಿಂದ ಪೃಥ್ವೀಗುಣವುಂಟಾಗಿದೆ, ದ್ರವವಾಗಿರುವದರಿಂದ ಜಲಗುಣವುಂಟಾಗಿದೆ,

ಕೆಂಪುವರ್ಣವುಳ್ಳದ್ದರಿಂದ ಅಗ್ನಿಗುಣ ವುಂಟಾಗಿದೆ, ಚಲನವಿರುವದರಿಂದ ವಾಯು ಗುಣವನ್ನು ಹೊಂದಿದೆ, ಅಡಗಿಹೋಗುವದರಿಂದ ಆಕಾಶಗುಣವುಳ್ಳದ್ದಾಗಿದೆ.

೭೦. ವಿಕಾರರಹಿತ ರಕ್ತದ ಲಕ್ಷಣ.—ಒಂದೂ ವಿಕಾರವಿಲ್ಲದೆ ಇರುವ ರಕ್ತವು ಇಂದ್ರಗೋಪ ಹುಳುವಿನಂತೆ ರಂಗುವುಳ್ಳದ್ದಾಗಿರುತ್ತೆ.

೭೧. ರಕ್ತ ಕೆಟ್ಟು ವಾಯುವೃದ್ಧಿಯಾದರೆ—ರಕ್ತವು ಕೆಂಪು, ನೊರೆ, ಕಠಿಣ, ರೂಕ್ಷ, ಲಘು, ಶೀಘ್ರಗಾಮಿ, ಚಲನರಾಹಿತ್ಯ, ಸೂಜೀಯಿಂದ ಚುಚ್ಚಿದಂತೆ ನೋವು ಸಹ ವುಂಟಾಗುತ್ತೆ. ಇದರಿಂದ ಶರೀರ ಕೃಶತ್ವ, ಕಠಿಣತ್ವ, ಉಷ್ಣಾಪೇಕ್ಷೆ, ಮಲಕಟ್ಟುವಿಕೆ, ಅಶಕ್ತತ್ವ, ಸ್ಫುರಣ, ನಿದ್ರೆ ತಪ್ಪೋಣ ಸಹ ವುಂಟಾಗುತ್ತೆ. ಇದು ಕ್ಷಯವಾದರೆ ಅಲ್ಪಚೇಷ್ಟಾ, ಮೆಲ್ಲಗೆ ಮಾತನಾಡುವಿಕೆ, ಅಚೈತನ್ಯ ಇವುಗಳು ವುಂಟಾಗುತ್ತೆ. ಇದೇ ಕ್ಷೀಣವಾಯು ವೃದ್ಧಿಯಾದರೆ ವಗರು, ಕಹಿ, ಖಾರ, ರೂಕ್ಷ, ಸೀತ, ಲಘು, ಯವೆ, ಹೆಸರು ಈವುಗಳಲ್ಲಿ ಅಪೇಕ್ಷೆಯುಂಟಾಗುತ್ತೆ.

೭೨. ರಕ್ತ ಕೆಟ್ಟು ಪಿತ್ತ ವೃದ್ಧಿಯಾದರೆ—ರಕ್ತವು ಪೀತ, ಹರಿತ, ಶ್ಯಾಮವರ್ಣಗಳಾಗುತ್ತೆ; ಆಮಗಂಧಿ, ಅಚಾಂಚಲ್ಯ, ಉಷ್ಣ, ಮತ್ತು ಆ ರಕ್ತಕ್ಕೆ ನೊಣ ಇರುವೆಗಳು ಬೀಳುವದಿಲ್ಲ. ಈ ವೃದ್ಧಿಯಿಂದ ವಿಟ್, ಮೂತ್ರ, ನೇತ್ರ, ಗಾತ್ರ ಇವು ಪೀತವರ್ಣವು. ಇಂದ್ರಿಯಕ್ಷೀಣ, ಸೀತೇಚ್ಛಾ, ತಾಪ, ಮೂರ್ಛೆ, ಅಲ್ಪನಿದ್ರೆಗಳುಂಟಾಗುತ್ತವೆ. ಇದು ಕ್ಷಯವಾದರೆ ಶ್ಲೇಷ್ಮವೃದ್ಧಿ, ಅಗ್ನಿಮಾಂದ, ಕಾಂತಿಕ್ಷಯಗಳಾಗುತ್ತವೆ. ಈ ಕ್ಷೀಣಪಿತ್ತವು ವೃದ್ಧಿಯಾದರೆ ಎಳ್ಳು, ಉದ್ದು, ಹುರಳಿ, ಪಿಷ್ಟಾನ್ನ, ಹಸಿ ಹಿಟ್ಟಿನ ಪದಾರ್ಥ, ಕೆಟ್ಟ ಮೊಸರು, ಗಂಜೀ, ಹುಳಿ, ಮಜ್ಜಿಗೆ ಮೊಸರು, ಕಹಿ, ಉಪ್ಪು, ಉಷ್ಣ, ತೀಕ್ಷ್ಣ ಇವುಗಳಲ್ಲಿ ಅಪೇಕ್ಷೆ, ಸಿಟ್ಟು ಉಂಟಾಗುತ್ತೆ, ಮತ್ತು ದಾಹ ಸಮಯದಲ್ಲಿ ಶಾಂತೋದಕದಲ್ಲಿ ಅಥವಾ ಶಾಂತ ಪದಾರ್ಥಗಳಲ್ಲಿ ಇಚ್ಛೆಯುಂಟಾಗುತ್ತೆ.

೭೩. ರಕ್ತ ಕೆಟ್ಟು ಕಫ ವೃದ್ಧಿಯಾದರೆ—ರಕ್ತವು ಸ್ಪರ್ಶಕ್ಕೆ ಅಧಿಕವಾಗಿ ಕಾಣುತ್ತೆ; ಸ್ನಿಗ್ಧ, ಕಾವೀರಂಗು, ಮತ್ತು ಮಾಂಸದ ಸಣ್ಣ ಗ್ರಂಥಿಗಳಂತೆಯೂ ಸಹ ಆಗುತ್ತೆ; ಮತ್ತು ಭಾರವು, ಮಂದಗಮನವು ಉಂಟಾಗುತ್ತೆ; ಇದರಿಂದ ಮಲ, ಮೂತ್ರ,ತ್ವಚ, ನಖ, ನೇತ್ರ ಇವುಗಳು ಬಿಳಪು, ಶೈತ್ಯ, ಅತಿನಿದ್ರೆ, ಗ್ಲಾನಿ, ಸಂಧಿಶೈಥಿಲ್ಯ, ಬಾಯಿಯಲ್ಲಿ ನೀರು ಸುರಿಯುವಿಕೆ ಸಹ ಆಗುತ್ತೆ. ಇದು ಕ್ಷಯವಾದರೆ ಸಂಧಿಶೈಥಿಲ್ಯ,

ಮೂರ್ಛೆ, ರೂಕ್ಷತ್ವ, ದಾಹಗಳು ಉಂಟಾಗುತ್ತವೆ. ಈ ಕ್ಷೀಣ ಕಫವು ವೃದ್ಧಿಯಾದರೆ ಸೀ, ಜಿಡ್ಡು, ಸೀತಲ, ಉಪ್ಪು, ಹುಳಿ, ಜಡಪದಾರ್ಥಗಳ ಭೋಜನಾಪೇಕ್ಷೆ, ಮೊಸರು, ಹಾಲು, ದಿವಾ ನಿದ್ರೆಗಳಲ್ಲಿ ಆಸಕ್ತಿ ಸಹ ವುಂಟಾಗುತ್ತೆ.

೭೬. ರಕ್ತ ಕೆಟ್ಟು ದ್ವಿದೋಷ ಮತ್ತು ತ್ರಿದೋಷಗಳು ವೃದ್ಧಿಯಾದರೆ—೧. ದ್ವಿದೋಷದಿಂದ ರಕ್ತವು ಅದರ ಲಕ್ಷಣವನ್ನೇ ಹೊಂದಿರುತ್ತೆ. ೨. ತ್ರಿದೋಷದಿಂದ ರಕ್ತವು ಕೀವಿನಹಾಗೆ ಆಗಿ ದುರ್ಗಂಧ ಉಂಟಾಗುತ್ತೆ. ಸಮಸ್ತ ದೋಷಯುಕ್ತವಾಗಿದ್ದರೆ ಗಂಜೀಹಾಗೆ ಆಗುತ್ತೆ.

೭೭. ರಕ್ತ ಕೆಟ್ಟು ವಿಷವೃದ್ಧಿಯಾಗಿದ್ದರೆ—ಆ ರಕ್ತವು ಕಪ್ಪಾಗಿ ಊರ್ಧ್ವಭಾಗಕ್ಕೆ ಹೋಗಿ ಮೂಗಿನಿಂದ ಬೀಳುತ್ತೆ, ಮತ್ತು ಆಮಗಂಧಿಯಾಗಿ ಗಂಜೀಹಾಗೆ ಕಾಣುತ್ತೆ, ಮತ್ತು ಸರ್ವ ಕುಷ್ಠಗಳನ್ನು ಬಹಳವಾಗಿ ಹುಟ್ಟಿಸುತ್ತೆ.

೭೮. ರಸ ವೃದ್ಧಿಯಾದರೆ—ಅನ್ನದ್ವೇಷ, ಅಂಗಜಡತ್ವ, ಬಾಯಿಯಲ್ಲಿನೀರು, ವಮನ, ಮೂರ್ಛೆ, ಗ್ಲಾನಿ, ಭ್ರಮೆ ಮತ್ತು ಕಫ ಸಹ ವುಂಟಾಗುತ್ತೆ. ಇದೇ ಕ್ಷಯವಾದರೆ—ಕಂಠಶೋಷೆ, ಅರುಚಿ, ತೃಷೆ, ಚರ್ಮನಿಸ್ಸತ್ವ, ಹೃತ್ಪೀಡೆಗಳಾಗುತ್ತವೆ. ಈ ಕ್ಷೀಣರಸವು ವೃದ್ಧಿಯಾದರೆ—ರಾತ್ರಿಯಲ್ಲಿ ನಿದ್ರೆ, ಚಂದ್ರೋದಯ ಸೇವನೆ, ಅತಿಸೀತಳ ತಣ್ಣೀರನ್ನು ಪದೆ ಪದೇ ಕುಡಿಯೋಣ, ಮಧುರಪದಾರ್ಥಾಪೇಕ್ಷೆ, ಮೊಸರು ಕುಡಿಯುವ ಇಚ್ಛೆ ಸಹ ಉಂಟಾಗುತ್ತೆ.

೭೯. ರಕ್ತದುಷ್ಟವಾದರೆ—ವೇದನೆ ಅಂಗಪಕ್ಷ, ದಾಹಗಳಾಗುತ್ತವೆ. ರಕ್ತಮಂಡಲದಲ್ಲಿ ಕೆಂಡು, ಕೋಛೆ, ಪಿಟಿಕಾಗಳು ಉಂಟಾಗುತ್ತವೆ. ರಕ್ತವು ವೃದ್ಧಿಯಾದರೆ—ಆ ರಕ್ತಗಾತ್ರ ನೇತ್ರಗಳು, ಶಿರಾ ಪುಭ್ಬೋಣ, ವಿಸರ್ಗ, ಪ್ಲೀಹ, ವಿದ್ರಧಿ, ಕುಷ್ಠ, ವಾತರಕ್ತ, ಗುಲ್ಮ, ಕಾಮಿಲ, ಅಂಗಜಡತ್ವ, ನಿದ್ರೆ, ಮದ, ದಾಹ, ಮುಖದಲ್ಲಿ ಬಂಗು, ಅಗ್ನಿಮಾಂದ್ಯ, ಮೇಹ, ಮತ್ತು ತ್ವಚ, ನೇತ್ರ, ಮೂತ್ರ, ಮಲ ಇವುಗಳು ಕೆಂಪು, ಗುದ, ಶಿಶ್ನ, ಮುಖ ಇವುಗಳು ಪಾಕ, ಪಿಟಿಕಾ, ಮಸೆ, ಶರೀರ ಕಪ್ಪು, ಅಂಗ ಮುರಿಯೋಣ, ಪ್ರದರ, ಕೈಕಾಲುಗಳಲ್ಲಿ ಉರಿಗಳಾಗುತ್ತವೆ. ರಕ್ತವೃದ್ಧಿಯಾಗಿಸ್ರಾವವಾಗುತ್ತಿದ್ದರೆ ಶಾಂತವಾಗಿ ಪ್ರವರ್ತಿಯಾಗುವಂತೆ ಔಷಧಿ ಕೊಡಬೇಕು. ರಕ್ತವು ಕ್ಷೀಣವಾದರೆ—ಅಮ್ಲ ಮಧುರ ಪದಾರ್ಥಾಪೇಕ್ಷೆ, ಮೂರ್ಛೆ, ವಾತದಿಂದ ತ್ವಚಕ್ಕೆ ರೂಕ್ಷತ್ವ, ಸಿರೆಗಳಲ್ಲಿ ಸಿಥಿಲತ ಶೈತ್ಯ

ನಿಸ್ಸಾರ ಚರ್ಮ ಅಂಗಕಾರ್ಶ್ಯಗಳಾಗುತ್ತವೆ. ಈ ಕ್ಷೀಣ ರಕ್ತವು ವೃದ್ಧಿಯಾದರೆ—ಕಬ್ಬು, ಮಾಂಸರಸ, ಸಕ್ಕರೆ, ದ್ರಾಕ್ಷಿ, ಕಬ್ಬಿನಹಾಲು, ಜೇನುತುಪ್ಪ, ಬೆಲ್ಲದಪಾನಕ, ಈಚಲಹಣ್ಣು, ದಾಳಿಂಬ, ಗಂಜಿ, ಮದ್ಯ, ಕಂದ, ಮೂಲ, ಫಲ, ಸ್ನೇಹ, ಲವಣ, ರಕ್ತಸಿದ್ಧಪದಾರ್ಥ, ಮಾಂಸ ಇವುಗಳಲ್ಲಿ ಇಚ್ಛೆ ಉಂಟಾಗುತ್ತೆ.

೮೦. ಮಾಂಸವು ವೃದ್ಧಿಯಾದರೆ—ಕೆನ್ನೆ, ತುಟಿ, ಟೊಂಕದ ಹಿಂಭಾಗ, ಮತ್ತು ಯೋನಿ, ತೊಡೆ, ಬಾಹು, ಜಂಘಾ ಇವುಗಳು ಸ್ಥೂಲವಾಗುತ್ತೆ, ಮತ್ತು ಗಾತ್ರಜಡತ್ವ ಸಹ ಉಂಟಾಗುತ್ತೆ. ಇದು ಕ್ಷಯವಾದರೆ—ನಾಡಿ, ಕೆನ್ನೆ, ಓಷ್ಠ, ಸ್ಕಂಧ, ಮನ್ಯಾ ಇವುಗಳ ಶೈಥಿಲ್ಯ, ಯನೆ, ಯೋನಿ, ನಾಸಿಕ, ಹೊಟ್ಟೆ, ಸಂಧಿ ಇವುಗಳಲ್ಲಿ ಶುಷ್ಕತ್ವ, ಹೊಟ್ಟೆಗುಂಡು ಅಂದರೆ ಉದರಾವರ್ತ, ಗಾತ್ರರೂಕ್ಷತ್ವ ಮತ್ತು ನೋವುಗಳಾಗುತ್ತವೆ. ಈ ಕ್ಷೀಣಮಾಂಸವು ವೃದ್ಧಿಯಾದರೆ—ದಧಿ, ಸಿದ್ಧಾನ್ನ, ಶ್ರೀಖಂಡ, ಶಿಕರಣೆ ಇತ್ಯಾದಿ ಪದಾರ್ಥಗಳಲ್ಲಿ ಇಚ್ಛೆ, ಸ್ಥೂಲ ಜಡ ಇತ್ಯಾದಿಕ್ರವ್ಯಾದ ಮಾಂಸಾಪೇಕ್ಷೆ ಸಹ ಆಗುತ್ತೆ.

೮೧. ಮೇದೋವೃದ್ಧಿಯಾದರೆ—ಹೊಟ್ಟೆ ಪಾರ್ಶ್ವಗಳ ವೃದ್ಧಿ, ಮತ್ತು ಕೆಮ್ಮು, ಶ್ವಾಸ, ಅಂಗದುರ್ಗಂಧ, ಜಡ್ಡು, ಸ್ವಲ್ಪಕೆಲಸ ಮಾಡುವದ್ದರಿಂದ ಬಹಳ ಶ್ರಮವಾಗೋಣ, ತೃಷೆ, ಜವರು, ಗಳಗಂಡ, ಓಷ್ಠರೋಗ, ಮೇಹ ಇವುಗಳಾಗುತ್ತವೆ; ಮತ್ತು ಬೆನ್ನು, ಹೊಟ್ಟೆ, ಮನ್ಯಾ, ಸ್ತನ ಇವು ಹಾಯುತ್ತವೆ. ಇದು ಕ್ಷೀಣವಾದರೆ—ಪ್ಲೀಹವೃದ್ಧಿ, ಅಂಗಸಂಧಿಗಳ ಶೂನ್ಯತ್ವ, ಶರೀರರೂಕ್ಷತ್ವ, ಸ್ನಿಗ್ಧತ್ವ, ಮಾಂಸಾಪೇಕ್ಷೆಗಳಾಗುತ್ತವೆ. ಈ ಕ್ಷೀಣಮೇದಸ್ಸು ವೃದ್ಧಿಯಾದರೆ—ಶ್ರೀಖಂಡ, ಶಿಕರಣೆ ಇತ್ಯಾದಿ ಮಧುರ ಪದಾರ್ಥ, ಆಮ್ಲಾದಿಗಳ ಸಂಯೋಗದ ಪದಾರ್ಥ, ಮೇಧೋವೃದ್ಧಿಕರ ಗ್ರಾಮ್ಯಮಾಂಸ, ಜಲಮಾಂಸ, ಮತ್ತು ವಿಶೇಷವಾಗಿ ಕ್ಷಾರ ಮಾಂಸಗಳಲ್ಲಿಚ್ಛೆ ಸಹ ವುಂಟಾಗುತ್ತೆ.

೮೨. ಅಸ್ಥಿ ವೃದ್ಧಿಯಾದರೆ—ಅಸ್ಥಿ ಸಮೀಪದಲ್ಲಿ ಬೇರೆ ಅಸ್ಥಿಗಳು ಮತ್ತು ಕೋರೆ ಹಲ್ಲುಗಳು ಸಹ ಹುಟ್ಟುತ್ತವೆ. ಅಸ್ಥಿ ಕ್ಷಯವಾದರೆ—ಅಸ್ಥಿನೋವು, ಶರೀರರೂಕ್ಷತ್ವ, ಉಗುರು, ಹಲ್ಲುಗಳು ಸಹ ವಡಿಯೋಣವು ಸಹ ಆಗುತ್ತವೆ. ಇದೇ ಕ್ಷೀಣಅಸ್ಥಿಯು ವೃದ್ಧಿಯಾದರೆ—ಮಜ್ಜಾಸ್ಥಿ ಸ್ನೇಹಗಳಲ್ಲಿ ಕೂಡಿದ ಅನ್ನಾಪೇಕ್ಷೆಯಾಗುತ್ತೆ.

೮-೩. ಮಜ್ಜಾ ವೃದ್ಧಿಯಾದರೆ—ಸಂಪೂರ್ಣವಾಗಿ ಅಂಗದಲ್ಲೂ ನೇತ್ರದಲ್ಲೂ ಸಹ ಜಡತ್ವ ಉಂಟಾಗುತ್ತೆ. ಇದು ಕ್ಷೀಣವಾದರೆ—ಅಲ್ಪಶುಕ್ರತ್ವ, ಸಂಧಿಗಳು ಪಡಿಯೋಣ, ಅಸ್ಥಿಗಳಲ್ಲಿ ನೋವು ಸಹ ಉಂಟಾಗುತ್ತೆ. ಈ ಕ್ಷೀಣಮಜ್ಜೆಯು ವೃದ್ಧಿಯಾದರೆ—ಸೀ, ಒಗರು ಪದಾರ್ಥಗಳು ಕೂಡಿದ ಅಂನಾಪೇಕ್ಷೆಯಾಗುತ್ತೆ.

೮-೪. ಶುಕ್ರ ವೃದ್ಧಿಯಾದರೆ—ಶುಕ್ರಾಶ್ಮರಿಯು ಮತ್ತು ಶುಕ್ರಧಾತು ಸ್ರಾವವು ಸಹ ಆಗುತ್ತೆ. ಇದು ಕ್ಷೀಣವಾದರೆ—ರತಿ ವಿಷಯದಲ್ಲಿ ಅಶಕ್ತತ್ವ, ಶಿಶ್ನ ಮತ್ತು ವೃಷಣಗಳಲ್ಲಿ ಪೀಡೆ, ರತಿಕಾಲದಲ್ಲಿ ಬಹಳ ಹೊತ್ತಿನಮೇಲೆ ಅಲ್ಪಶುಕ್ರ ಮತ್ತು ರಕ್ತಬೀಳೋಣ ಸಹ ಉಂಟಾಗುತ್ತೆ. ಈ ಕ್ಷೀಣಶುಕ್ರ ವೃದ್ಧಿಯಾದರೆ—ನವಿಲು, ಕೋಳಿ, ಹಂಸ, ಸಾರಗ ಇವುಗಳ ಮೊಟ್ಟೆ ಮತ್ತು ಮಾಂಸಗಳಲ್ಲಿ ಇಚ್ಛೆ, ಗ್ರಾಮ್ಯ ಮಾಂಸ, ಜಲಸ್ಥ ಅಜಮಾಂಸ, ಮತ್ತು ಇತರ ಮಾಂಸಗಳಲ್ಲಿ ಅಪೇಕ್ಷೆಯುಂಟಾಗುತ್ತೆ.

೮-೫. ಮೂತ್ರ ವೃದ್ಧಿಯಾದರೆ—ಹೊಟ್ಟೆಯುಬ್ಬೋಣವು, ವಸ್ತಿವೇದನೆಯು ಆಗುತ್ತೆ. ಇದು ಕ್ಷೀಣವಾದರೆ—ಅಲ್ಪಮೂತ್ರ, ಶಿಕ್ತ ಮೂತ್ರ, ವಸ್ತಿವೇದನೆ ಸಹ ಆಗುತ್ತೆ. ಈ ಕ್ಷೀಣ ಮೂತ್ರ ವೃದ್ಧಿಯಾದರೆ—ಕಬ್ಬಿನ ರಸ, ಹಾಲು, ಮದ್ಯ, ಇವುಗಳ ಪಾನಾಪೇಕ್ಷೆ, ಬೆಲ್ಲ, ಬದರೀ ನೀರು, ಸೌತೆಕಾಯಿ, ಮುಳ್ಳುಸೌತೆ ಇವುಗಳಲ್ಲಿಚ್ಛೆ ಸಹ ಆಗುತ್ತೆ.

೮-೬. ಮಲ ವೃದ್ಧಿಯಾದರೆ—ಗುಲ್ಮ, ಉದಾವರ್ತ, ಕೋಷ್ಠಶೂಲೆ, ಬಳಲಿಕೆ, ವಾತಸಂಗ, ಮೂತ್ರಸಂಗ, ಶಕೃತ್ಸಂಗ, ದೃಷ್ಟಿನಾಶ, ಅಗ್ನಿಮಂದ, ಹೃದ್ರೋಗವೆ ಮೊದಲಾಗಿ ಆಗುತ್ತವೆ. ಇದು ಕ್ಷೀಣವಾದರೆ—ಪಾರ್ಶ್ವ ಹೃದಯಗಳಲ್ಲಿ ವ್ಯಥೆ, ಸಶಬ್ದವಾಯುವಿನ ಊರ್ಧ್ವಗತಿ, ಎರಡು ಪಾರ್ಶ್ವಗಳು ಉಬ್ಬೋಣ ಸಹ ಆಗುತ್ತೆ. ಈ ಕ್ಷೀಣಮಲವು ವೃದ್ಧಿಯಾದರೆ—ಯವೆ ಗೋಧುವೆಗಳ ಪಿಷ್ಟಾನ್ನ, ಅನೇಕ ವಿಧಶಾಕ, ಮೊಸರು, ಉದ್ದು ಇವುಗಳ ಯೂಷದಲ್ಲಿ ಅಪೇಕ್ಷೆ ಸಹ ಉಂಟಾಗುತ್ತೆ.

೮-೭. ಸ್ವೇದೋವೃದ್ಧಿಯಾದರೆ—ದೇಹದಲ್ಲಿ ದುರ್ಗಂಧವೂ ನವೆಯೂ ಸಹ ಉಂಟಾಗುತ್ತವೆ. ಇದು ಕ್ಷೀಣವಾದರೆ—ನೇತ್ರ, ತ್ವಚ ಇವುಗಳಲ್ಲಿ ರೂಕ್ಷತ್ವ, ಮತ್ತು ರೋಮ ಚುಂಗರಿಸುವದು ಸಹ ಆಗುತ್ತೆ. ಈ ಕ್ಷೀಣಸ್ವೇದ ವೃದ್ಧಿಯಾದರೆ—ಅಭ್ಯಂಗ, ತಿಕ್ಕೋದು, ಮದ್ಯಾಪೇಕ್ಷೆ, ಗಾಳಿ ಬೀಸಿದ ಸ್ಥಳದಲ್ಲಿ ಮಲಗುವದರಲ್ಲಿ ಇಚ್ಛೆ, ಉಷ್ಣಸ್ನಾನಾಪೇಕ್ಷೆ, ಮಂದವಾದ ಬಟ್ಟೆ, ಹೊದಿಯುವದರಲ್ಲಿ ಆಸಕ್ತಿ ಸಹ ಉಂಟಾಗುತ್ತೆ.

೪೮. ಆರ್ತವ ವೃದ್ಧಿಯಾದರೆ—ಸ್ತನದಲ್ಲಿ ನೋವು, ಅಧಿಕಾರ್ತವ ಸ್ರಾವ, ದುರ್ಗಂಧ ಆರ್ತವವಾಗುತ್ತೆ, ಮತ್ತು ಮೈನೋವಾಗುತ್ತೆ. ಇದು ಕ್ಷೀಣವಾದರೆ—ಯೋಗ್ಯ ಕಾಲದಲ್ಲಿ ಋತುವಾಗದೆ ಇರುವಿಕೆ, ಅಥವಾ ಸ್ವಲ್ಪ ರಜೊಸ್ರಾವ ವಾಗುವಿಕೆ, ಮತ್ತು ಯೋನಿಯಲ್ಲಿ ನೋವು ಸಹ ಆಗುತ್ತೆ. ಈ ಕ್ಷೀಣಾರ್ತವ ವೃದ್ಧಿಯಾದರೆ—ಖೈ, ಒಗರು, ಖಾರ, ಉಷ್ಣ, ದಾಹಕ, ಜಡ ಈಪ್ರಕಾರವಾದ ಅನ್ನ, ಮತ್ತು ಫಲ, ಶಾಕ, ನೀರು, ಇತ್ಯಾದಿ ಪದಾರ್ಥಗಳಲ್ಲಿ ಅಪೇಕ್ಷೆಯಾಗುತ್ತೆ.

೪೯. ಸ್ತನ್ಯ ವೃದ್ಧಿಯಾದರೆ—ಸ್ತನಪುಷ್ಟಿ, ಪದೇ ಪದೇ ದುಗ್ಧಸ್ರಾವ, ಸ್ತನದಲ್ಲಿ ನೋವು ಸಹ ಉಂಟಾಗುತ್ತೆ. ಇದು ಕ್ಷೀಣವಾದರೆ—ಸ್ತನ ಶುಷ್ಕತ್ವ, ಅಲ್ಪದುಗ್ಧ, ಅಥವಾ ದುಗ್ಧನಾಶಗಳಾಗುತ್ತವೆ. ಈ ಕ್ಷೀಣ ಸ್ತನ್ಯವೃದ್ಧಿಯಾದರೆ—ಮದ್ಯ, ಶಾಲ್ಯಾನ್ನ, ಮಾಂಸ, ಹಸುವಿನ ಹಾಲು, ಸಕ್ಕರೆ, ಮೊಸರು ಪ್ರಿಯವಾದ ಅನ್ನಗಳಲ್ಲ ಅಪೇಕ್ಷೆಯಾಗುತ್ತೆ.

೫೦. ಶುಕ್ರೋವೃದ್ಧಿಯಾದರೆ—ಮನೋಹರಗಳಾದಂಥ, ರುಚಿಕರಗಳಾದಂಥ, ವೃದ್ಧಿಕರವಾದಂಥ ಮಾಂಸರಸ, ಕ್ಷೀರ ಇತ್ಯಾದಿ ಪದಾರ್ಥಗಳಲ್ಲಿ ಅಪೇಕ್ಷೆ ಉಂಟಾಗುತ್ತೆ. ಇದು ಕ್ಷೀಣವಾದರೆ—ಕ್ರೋಧ, ಕ್ಷುತ್, ಚಿಂತೆ, ಶೋಕ, ಶ್ರಮ, ರೂಕ್ಷ, ತೀಕ್ಷ್ಣ, ಉಷ್ಣ, ಖೈ, ದೌರ್ಬಲ್ಯ, ಭಯ ಚಿತೆ, ಇಂದ್ರಿಯವ್ಯಥೆ, ಕಾಂತಿನಾಶ, ಶರೀರಮಾಲಿನ್ಯ, ಕೃಶತ್ವಗಳಾಗುತ್ತೆ.

೫೧. ಗರ್ಭವೃದ್ಧಿಯಾದರೆ—ಹೊಟ್ಟೆ ವೃದ್ಧಿಯಾಗುತ್ತೆ. ಸ್ವೇದ ಅಧಿಕವಾಗುತ್ತೆ. ಪ್ರಸವ ಕಾಲದಲ್ಲಿ ವೇದನೆ. ಇದು ಕ್ಷೀಣವಾದರೆ—ಹೊಟ್ಟೆ ತಗ್ಗೋಣ, ಮತ್ತು ಗರ್ಭಸಂಚಾರ ತಪ್ಪುತ್ತೆ. ಈ ಕ್ಷೀಣಗರ್ಭ ವೃದ್ಧಿಯಾದರೆ—ಹುಲ್ಲೆ, ಆಡು, ಕುರಿ, ಹಂದಿ ಇವುಗಳ ಪಕ್ವ ಮಾಂಸಾಪೇಕ್ಷೆ, ವಸಾಮಾಂಸಗಳಲ್ಲಿ ಇಚ್ಛೆ ಸಹ ಆಗುತ್ತೆ.

೫೨. ಬಲಲಕ್ಷಣ.—ರಸಧಾತು ಮೊದಲುಗೊಂಡು ಶುಕ್ಲಧಾತುವರಿಗೂ ಯಾವ ಯಾವ ಧಾತು ಪುಷ್ಟಿಯಾಗಿ ಅದರ ನಿಮಿತ್ತದಿಂದ ಕುಶಲತ್ವ ಉಂಟಾಗುತ್ತೊ ಅದರ ಹೆಸರು ಬಲವೆಂದು ತಿಳಿಯಬೇಕು. ಬಲವೃದ್ಧಿಯಾದರೆ—ದೋಷ, ಅಗ್ನಿ ಇವುಗಳು ಸಮನಾಗಿರುತ್ತೆ. ಮತ್ತು ಧಾತುವೃದ್ಧಿಕರವಾದ ಪುಷ್ಟಿಕರಗಳಾದ ಪದಾರ್ಥಾಪೇಕ್ಷೆಯಾಗುತ್ತೆ. ಇದು ಕ್ಷಯವಾದರೆ—ಅಭಿಘಾತ, ಭಯ, ಶೋಕ, ಕ್ರೋಧ, ಚಿಂತೆ, ಪರಿಶ್ರಮಗಳು, ಮತ್ತು ಧಾತುಕ್ಷಯವು, ಅಂಗದಲ್ಲಿ ಜಡತ್ವವು, ಸ್ತಬ್ಧತ್ವವು,

ಗಾತ್ರವಸ್ಲಾನತ್ವ, ಗ್ಲಾನಿ, ವಿವರ್ಣತಾ, ತಂದ್ರ, ನಿದ್ರೆ, ವಾತದಿಂದ ಶೋಥೆ, ಇವು ಉಂಟಾಗುತ್ತವೆ. ಈ ಕ್ಷೀಣಬಲವು ವೃದ್ಧಿಯಾದರೆ ಮೇಲೆ ಹೇಳಿದ ರೋಗಾದಿಗಳೆಲ್ಲಾ ತಪ್ಪುತ್ತೆ.

೨೩. ಸಿರಾ, ಧಮನಿ, ಸ್ರೋತಸ್ಸು ಇವುಗಳು ಬಂದೇ ಸಮವಾಗಿ ಕಾಣುವದರಿಂದಲೂ ಭೇದಿಸಿ ತಿಳಿಯಲು ಅಶಕ್ಯವಾಗಿರುವದರಿಂದಲೂ ಪ್ರಧಾನವಾದ ಧಮನಿಯನ್ನು ವಿವರಿಸುತ್ತೆ.

೧. ಧಮನಿಸ್ವರೂಪ.—ವಾಯುವಿನಿಂದ ಪೂರ್ಣವಾಗಿ ಯಾವದಕ್ಕೆ ಸ್ಫುರಣ ಹುಟ್ಟುತ್ತದೋ ಅದು ಧಮನೀಯೆಂದು ತಿಳಿಯಬೇಕು.

೨. ಧಮನಿಯ ಸಂಖ್ಯೆ.—ನಾಭಿಯಿಂದ ೨೪ ಧಮನಿಗಳು ಉತ್ಪನ್ನವಾಗಿವೆಯೆಂದು ಶೋಣಿತವರ್ಣ ಪ್ರಕಾರದಲ್ಲಿ ಹೇಳಿಇದೆ.

೩. ಸಿರಾದಿಭೇದಗಳು.—ಸಿರಾ ಅಂದರೆ ಸಕಲ ರಸಗಳನ್ನು ಆಯಾಸ್ಥಳಗಳಿಗೆ ತೆಗದುಕೊಂಡು ಹೋಗಿ ಪೋಷಿಸುತ್ತವೆ. ಧಮನಿಯು ವಾಯುವಿನಿಂದ ಪೂರ್ಣವಾಗಿ ಸ್ಫುರಣಯುಕ್ತವಾಗಿರುತ್ತವೆ. ಸ್ರೋತಸ್ಸುಯೆಂಬುವದು ಮಲಮೂತ್ರಾದಿಗಳನ್ನು ಸ್ರವಿಸುತ್ತವೆ. ಈ ವಿಷಯಕ್ಕೆ ಅನ್ಯಮತ—ದೇಹಧಾರಣ ಮಾಡುವಂಥಾದ್ದರ ಯಾವ ದೇಹದಲ್ಲಿ ಆಕಾಶ ಸಂಬಂಧಿಯಾದ ಅವಕಾಶಕ್ಕೆ ಸಿರಾ, ಧಮನಿ, ಸ್ರೋತಸ್ಸು ಇವು ಆಶಯಗಳೆಂದು ಹೆಸರು ಹೇಳಲ್ಪಡುತ್ತವೆ. ಈ ಮತಕ್ಕೆ ಖಂಡನ—ಸಿರವಲ್ಲದಧಮನಿ, ಸ್ರೋತಸ್ಸು ಇವು ಬೇರೆನೇ ಇರುತ್ತವೆ. ಇದಕ್ಕೆ ನಾಲ್ಕು ಕಾರಣಗಳಿರುತ್ತವೆ. ಇವುಗಳ ವರ್ಣಗಳು ನೀಲ, ಅರುಣ, ಶುಕ್ಲ, ಲೋಹಿತವಾಗಿರುತ್ತವೆ. ಮತ್ತು ಕಬ್ಜಾದಿ ಧಮನಿಗಳ ವರ್ಣ ಹೇಳಿಯಿಲ್ಲವಾಗಿ ಯಾವ ಯಾವ ಧಾತುಗಳನ್ನು ವಹಿಸುತ್ತವೋ ಆ ಧಾತುಗಳ ವರ್ಣದಂತೆ ಆಗುತ್ತವೆ. ಈ ಪ್ರಕಾರವಾಗಿ ಲಕ್ಷಣಭೇದಗಳನ್ನು ತಿಳಿಯಬೇಕು.

೪. ಸ್ವಧಾತು ಸಮವರ್ಣತ್ವಲಕ್ಷಣ.—ಸ್ರೋತಸ್ಸು ಯಾವಯಾವ ಧಾತುಗಳಿಗೆ ಹರಿಯುತ್ತದೆಯೋ ಆ ಧಾತುವಿನಂತೆ ಅದರ ವರ್ಣವನ್ನು ತಿಳಿಯಬೇಕು. ಇದರ ಆಕೃತಿಯು ದುಂಡಾಗಿಯೂ ಕೆಲವು ಸ್ಥಾನದಲ್ಲಿ ಗಟ್ಟಿಯಾಗಿಯೂ ಉದ್ದವಾಗಿಯೂ ಇರುತ್ತವೆ. ಇದೇ ವಿಧವಾಗಿ ಸಿರಾಧಮನಿಗಳ ಭೇದವನ್ನು ತಿಳಿಯಬೇಕು.

೫. ಮೂಲಸಿರಾಮ.—ಮೂಲ ಸಿರೆಗಳು ೪೪, ಇವುಗಳಿಂದ ೭೦೦ ಸಿರೆಗಳು ಹೊರಟು ಇರುತ್ತವೆ.ಮೂಲ ಭೂತ ಧಮನಿ ೨೪ ಮತ್ತು ಸ್ರೋತಸ್ಸು೨

ಈ ಪ್ರಕಾರವಾಗಿ ಮೂಲಭೂತಗಳಾದ ಸಿರೆಗಳು ಧಮನಿ ಸ್ರೋತಸ್ಸ ಗಳ ಭೇಧಗಳನ್ನು ತಿಳಿಯಬೇಕು.

೬. ಕರ್ಮಭೇದದ ವಿವರ.—ಸಿರೆಗಳ ಕರ್ಮ ಅತಿಘಾತಾದಿಕವು. ಧಮನಿಯ ಕರ್ಮ ಶಬ್ದಾದಿವಹತ್ವವು. ಸ್ರೋತಸ್ಸಿನ ಕರ್ಮವು ಪ್ರಾಣ, ಅನ್ನ, ರಸ, ಶೋಣಿತ, ಮಾಂಸ ಇವುಗಳನ್ನು ವಹಿಸುತ್ತೆ.

೭. ಆಯುರ್ವೇದದಲ್ಲಿ ಸಿರಾ, ಸ್ರೋತಸ್ಸು, ಧಮನೀ ಯೆಂದು ಪ್ರತ್ಯೇಕವಾಗಿ ನಿರ್ದೇಶ ಮಾಡಿಯಿಧೆ. ಹಾಗೆಯೇ ಮರ್ಮ, ಸಿರಾ, ಸ್ನಾಯು, ಸಂಧಿ, ಅಸ್ಥಿ, ಧಮನಿ ಇತ್ಯಾದಿ ವಾಕ್ಯಗಳಲ್ಲಿ ಸಿರೆಗಿಂತಲೂ ಪ್ರತ್ಯೇಕವಾಗಿ ಧಮನಿನಿರ್ದೇಶ ಮಾಡಿಯಿಧೆ. ಆದಕಾರಣ ಸಿರಾದಿಗಳು ಬೇರೆಬೇರೆ ಇರ ತಕ್ಕದ್ದು ವ್ಯಕ್ತಪಡುತ್ತೆ.

೮. ಸಿರಾ ಸ್ರೋತಸ್ಸುಗಳು ಪರಸ್ಪರ ಭೇದವಿದಾಗ್ಯೂ ಕರ್ಮದಿಂದ ಅವಿಭಕ್ತವಾಗಿರುವಂತೆ ಕಾಣುತ್ತವೆ, ಹ್ಯಾಗೆಂದರೆ.—ಸಿರಾ, ಧಮನಿ, ಸ್ರೋತಸ್ಸುಗಳು ಪರಸ್ಪರ ಅತಿಸಂಯುಕ್ತವಾಗಿವೆ, ಮತ್ತು ಎಲ್ಲವುಗಳ ಆಗಮ, ಕರ್ಮಗಳು ಸಮಾನವಾಗಿವೆ, ಅಲ್ಲದೆ ಅತಿಸೂಕ್ಷ್ಮ ವಾಗಿವೆ. ಆದ್ದರಿಂದ ಕರ್ಮಗಳಿಂದ ವಿಭಕ್ತಗಳಾಗಿದ್ದಾಗ್ಯೂ ಅವಿಭ ಕ್ತದಂತೆ ಆಗುತ್ತವೆ. ಇದಕ್ಕೆ ದೃಷ್ಟಾಂತ—೬-೭ ಪದಾರ್ಥಗಳನ್ನು ಕೂಡಿಸಿ ಬೆಂಕಿ ಹತ್ತಿಸಿದರೆ ಬೇರೆಬೇರೆ ಪದಾರ್ಥಗಳಾಗಿದ್ದಾಗ್ಯೂ ಜ್ವಲನ ಕ್ರಿಯೆಯು ವಸ್ತುತಃ ಒಂದಾಗಿಯೇ ಕಾಣುತ್ತೆ. ಅದರಂತೆ ತಿಳಿಯಬೇಕು.

೯. ಊರ್ಧ್ವಗತ ಧಮನಿಗಳ ಕಾರ್ಯ.—ಶಬ್ದಕೇಳೋಣ, ರೂಪ ತಿಳಿಯೋಣ, ರುಚಿತಿಳಿಯೋಣ, ಗಂಧಘ್ರಾಣಿಸೋಣ, ರೇಚಕಪೂರಕ ಮಾಡೋಣ, ಆಗುಳಿಕೆ ಬಿಡೋಣ, ಸೀನೋಣ, ನಗೋಣ, ಮಾತಾ ಡೋಣ, ಅಳೋಣ ಇವುಗಳೇ ಮೊದಲಾದವುಗಳನ್ನು ವಿಶೇಷವಾಗಿ ವಹಿಸಿವೆ; ಮತ್ತು ಶರೀರ ಪೋಷಣೆ ಧಾರಣೆಗಳನ್ನು ಹೊಂದಿವೆ.

೧೦. ಈ ಊರ್ಧ್ವಗತ ಧಮನಿಗಳು ಮೇಲೆ ಹೇಳಲ್ಪಟ್ಟ ಕಾರ್ಯಗ ಳನ್ನು ಮಾಡುವ ಕ್ರಮ.—ಇವು ನಾಭಿಯಿಂದ ಹೃದಯಕ್ಕೆ ಬಂದು ಒಂದೊಂದು ಮೂರುಮೂರು ಪ್ರಕಾರವಾಗಿ ಎರಡು ಧಮನಿಗಳಿಂದ ಭಾಷಣ, ಎರಡರಿಂದ ಘೋಷಣ, ಎರಡರಿಂದ ನಿದ್ರೆ, ಎರಡರಿಂದ ಜಾಗ್ರ ತೆ, ಎರಡರಿಂದ ಅಶ್ರುವಹಿಸೋಣ, ಎರಡರಿಂದ ಸ್ತ್ರೀಯರುಗಳಿಗೆ ಸ್ತನಾಶ್ರ ಯ ಮಾಡಿ ಸ್ತನ್ಯ ಉಂಟುಮಾಡೋಣ, ಮತ್ತು ಪುರುಷರಿಗೆ ಶುಕ್ಲವ ನ್ನುಂಟುಮಾಡೋಣ, ಈ ಪ್ರಕಾರ ಎರಡೆರಡಾಗಿ ಉದರ, ಪಾರ್ಶ್ವ, ಊರು, ಪೃಷ್ಠ, ಗ್ರೀವಾ, ಸ್ಕಂಧ, ಬಾಹು ಇವುಗಳನ್ನು ವಹಿಸುತ್ತವೆ.

೭

ಸತ್ವಯುಕ್ತವಾದ ಎರಡು ಧಮನಿಗಳು ಯೆಚ್ಚರಿಕೆಯನ್ನೂ, ತಮೋಯುಕ್ತವಾದ ಎರಡು ಧಮನಿಗಳು ನಿದ್ರೆಯನ್ನು ಸಹ ಉಂಟುಮಾಡುತ್ತವೆ. ಒಟ್ಟು ಮೂವತ್ತು ಧಮನಿಗಳಲ್ಲಿ ಎಂಟು ಧಮನಿಗಳು ಮನಸ್ಸು ಯುಕ್ತವಾದಾಗ ಶಬ್ದಾದಿಗುಣಗಳನ್ನು ವಹಿಸುತ್ತವೆ. ಈ ವಿಷಯವನ್ನು ಮುಂದೆ ವಿವರಿಸುತ್ತೆ.

೧೧. ಅಧೋಗತ ಧಮನಿಯ ಕಾರ್ಯಗಳು.—ವಾತ, ಮೂತ್ರ, ಮಲ, ಶುಕ್ಲ, ಆರ್ತವಗಳು ಅಧೋಭಾಗದಲ್ಲಿ ಹರಿಯುವಂತೆ ಮಾಡುತ್ತೆ. ಮತ್ತು ಇವುಗಳು ಪಿತ್ತಾಶಯವನ್ನು ಹೊಂದಿ ಅಲ್ಲಿಯೇ ಅನ್ನ ಪಾನ ಸಂಬಂಧ ಜಾಠರಾಗ್ನಿಯ ಉಷ್ಣದಿಂದ ಪಕ್ವವಾದ ರಸವನ್ನು ಅದರದರ ಸ್ಥಾನಗಳಿಗೆ ಯೋಜಿಸಿ ಅದರ ಮುಖ್ಯಾಂಶ ರಸವನ್ನು ರಸಸ್ಥಾನಕ್ಕೆ ಸೇರಿಸಿ ಸರ್ವಶರೀರವನ್ನೂ ಪೋಷಿಸುತ್ತೆ. ರಸಸ್ಥಾನದಿಂದ ಊರ್ಧ್ವಧಮನಿಗಳು ಯಲ್ಲಸ್ಥಾನಗಳಿಗೂ ರಸವನ್ನು ಸೇರಿಸಿ ಸರ್ವಶರೀರಕ್ಕೂ ತೃಪ್ತಿಪಡಿಸುತ್ತೆ. ಅದೇ ರಸವೇ ಪಾಕವಿಕಾರದಿಂದ ವಿರಸವಾಗಿ ಮಾಡಲ್ಪಟ್ಟರೆ ರೋಗೋತ್ಪತ್ತಿಯಾಗುತ್ತೆ; ಹ್ಯಾಗೆಂದರೆ—ಅಪಕ್ವವಾದ ಅನ್ನದಿಂದ ಉಂಟಾದ ಮೂತ್ರಪುರೀಷಾದಿಗಳು ನಾಳವನ್ನತಿಕ್ರಮಿಸಿ ಹೊರಡುವದರಿಂದ ರೋಗ ಉಂಟಾಗುವದರಲ್ಲಿ ಸಂದೇಹವಿಲ್ಲ.

೧೨. ಈ ಅಧೋಗತಧಮನಿಗಳು ನಾಭಿಗೆ ಅಧೋಭಾಗದಲ್ಲಿ ಬಂದೊಂದು ಮೂರು ಮೂರು ಪ್ರಕಾರವಾಗಿ ವಾತ, ಪಿತ್ತ, ಕಫ, ರಕ್ತ, ರಸ ಇವುಗಳನ್ನು ಎರಡೆರಡು ಧಮನಿಗಳು ವಹಿಸುತ್ತವೆ. ಈ ಪ್ರಕಾರ ಅನ್ನವನ್ನು ವಹಿಸತಕ್ಕವು ೨, ಉದಕವನ್ನು ವಹಿಸುವದು ೨, ವಸ್ತಿಸ್ಥಾನವನ್ನು ಹೊಂದಿರುವದು ೨, ಮೂತ್ರವಿಸರ್ಗ ಮಾಡುವದು ೨, ಶುಕ್ರವೃದ್ಧಿ ೨; ಶುಕ್ಲವಿಸರ್ಗ ೨, ಈ ನಾಲ್ಕೇ ಸ್ತ್ರೀರುಗಳಿಗೆ ಋತುಸಂಜ್ಞಿಕವಾದ ರಕ್ತವನ್ನೂ ಶೋಣಿತವನ್ನೂ ವಿಸರ್ಗಮಾಡೋಣವನ್ನೂ ಸಹ ವಹಿಸುತ್ತೆ. ಬಲವನ್ನು ಕ್ಷೀಣಮಾಡತಕ್ಕದ್ದು ೨, ಸ್ಥೂಲಾಂತ್ರಪ್ರತಿಬಂಧಕ ಮಾಡಿ ಮಲನಿರೋಧವೂ ಮಲವೃದ್ಧಿಯೂ ಮಾಡತಕ್ಕವು ೨, ಅಪಾನವಾಯುವನ್ನು ಬಂಧವಿಸರ್ಗಮಾಡತಕ್ಕವು ೨, ಅಂತು ೩೦. ಇವುಗಳಲ್ಲಿ ೮ ಧಮನಿಗಳು ತಿರ್ಯಕ್ಧಮನೀ ಮುಖಾರಿಯಂತರವೂ ಹೋಗಿ, ಶರೀರದಲ್ಲಿ ಸ್ವೇದ ಉಂಟುಮಾಡಿ ಶ್ರಮಪರಿಹಾರ ಮಾಡುತ್ತೆ. ಈ ಪ್ರಕಾರ ಅಧೋಗತಧಮನಿಗಳು ನಾಭಿಯ ಅಧೋಭಾಗದಲ್ಲಿದ್ದು ಪಕ್ವಾಶಯ, ಕಟಿ, ಮೂತ್ರ, ಪುರೀಷ, ಗುದ, ವಸ್ತಿ, ಶ್ನ, ಮಂಡಿ, ಇವುಗಳನ್ನು ವಾತಾದಿಕೃತ್ಯಗಳು ಮಾಡುವದರಲ್ಲಿ ಚೆನ್ನಾಗಿ ಸಾಮರ್ಥ್ಯವುಳ್ಳಂಥಾವನನ್ನಾಗಿ ಮಾಡುತ್ತೆ.

೧೩. ತಿರ್ಯಕ್‌ಧಮನಿಯ ಕಾರ್ಯವನ್ನು ಅಧೋಗತ ಧಮನಿ ಕಾರ್ಯದಂತೆ ತಿಳಿಯಬೇಕು, ಏನಂದರೆ.—ನಾಭಿ ಆರಂಭಿಸಿ ಕೊಂಡು ಶತಾವಧಿ ವಕ್ರವಕ್ರವಾಗಿ ಹೋಗುವಂಥಾ ೪ ಧಮನಿಗಳು ಇರುತ್ತವೆ. ಅವು ಉತ್ತರೋತ್ತರ ಶತಧಾ, ಸಹಸ್ರಧಾ, ಅಸಂಖ್ಯಾತವಾಗಿ ಜಾಲಾಕಾರವಾಗಿ ಸರ್ವಶರೀರವನ್ನೂ ವ್ಯಾಪಿಸಿ ಅವುಗಳ ಮುಖವು ರೋಮಕೂಪಗಳಲ್ಲಿ ವ್ಯಾಪಿಸಿಕೊಂಡು ಶರೀರಕ್ಕೆ ಸ್ವೇದಾದಿಗಳನ್ನು ಉಂಟುಮಾಡುತ್ತವೆ. ಮತ್ತು ಮುಖ ಮೊದಲು ಮಾಡಿಕೊಂಡು ಒಳಗೇ ಹೊರಗೆ ಸಹ ರಸಾದಿಗಳನ್ನು ವಹಿಸುತ್ತವೆ. ಇವುಗಳಿಂದ ಅಭ್ಯಂಗ, ಪರಿಷೇಕ, ಜಲಾದಿಗಳ ಮಜ್ಜನ, ಗಂಧಾದಿಲೇಪನಗಳ ವೀರ್ಯಗಳನ್ನು ಶರೀರಕ್ಕೆ ಸೇರಿಸುತ್ತೆ. ಮತ್ತು ಈ ಧಮನಿಗಳು ಮನೋನುಗತಗಳಾಗಿರುವದರಿಂದ ಚರ್ಮದಲ್ಲಿ ಸುಖ ದುಃಖ ಸ್ಪರ್ಶಗಳನ್ನ ಜೀವಾತ್ಮನು ಅನುಭವಿಸುತ್ತಾನೆ. ಈ ಪ್ರಕಾರವಾಗಿ ತಿರ್ಯಗ್ಗತ ೪ ಧಮನಿಗಳು ಸರ್ವಾಂಗಗತ ವಿಭಾಗಪೂರ್ವಕವಾಗಿ ಹೇಳಿಯಿಧೆ. ಪಂಚಭೂತಗಳಿಂದ ವ್ಯಾಪ್ತಿ, ಅಥವಾ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳಿಂದ ವ್ಯಾಪಿಸಿ ಈ ಧಮನಿಗಳು ಆಯಾ ಇಂದ್ರಿಯಕರ್ಮಗಳನ್ನು ನಡಿಸಿ ವಿನಾಶಕಾಲದಲ್ಲಿ ಈ ಪಂಚೇಂದ್ರಿಯಗಳನ್ನು ಪಂಚಭೂತಕ್ಕೆ ಸೇರಿಸಿ ಹೋಗುತ್ತೆ, ಅಥವಾ ನಾಶಹೊಂದುತ್ತೆ.

೧೪. ಸ್ರೋತೋಲಕ್ಷಣ.—ಹೃದಯಛಿದ್ರದಿಂದ ಒಳಗೆ ಯಾವ ಅಂತ್ರ ಛಿದ್ರವು ಪ್ರವಹನಶೀಲವಾಗಿಧೆಯೋ ಅದು ಸ್ರೋತಸ್ಸು ಅನ್ನಿಸಿಕ್ಕೊಳ್ಳುತ್ತೆ. ಆದರೆ ಧಮನಿ, ಸಿರಾ ಇವು ಇದಕ್ಕೆ ಸೇರಿಇಲ್ಲ.

೧೫. ಸ್ರೋತಸ್ಸುಗಳ ವಿವರ.—ಇವುಪ್ರಾಣ, ಅನ್ನ, ಉದಕ, ರಸ, ರಕ್ತ, ಮೇದಸ್ಸು, ಮೂತ್ರ, ಪುರೀಷ, ಶುಕ್ರ, ಅರ್ತವ ಇವುಗಳನ್ನು ವಹಿಸುವ ಅಧಿಕಾರವನ್ನು ಹೊಂದಿವೆ.

೧೬. ಸ್ರೋತಸ್ಸಿನ ರೂಪ.—ಸ್ರೋತಸ್ಸು ಯಾವಯಾವ ಧಾತುಗಳಿಗೆ ಸೇರಿ ಇರುತ್ತದೋ ಅದೇ ವರ್ಣವಾಗಿರುತ್ತದೆ; ಮತ್ತು ದುಂಡಗೆ, ಧಪ್ಪವಾಗಿ, ಉದ್ದವಾಗಿ, ಸಣ್ಣನಾಗಿ ಸಹ ಇದ್ದು ಸರ್ವಶರೀರದಲ್ಲೂ ಕಮಲತಂತುಮಂಡಲದಂತೆ ಹರವಿಕೊಂಡಿಧೆ. ಪ್ರಾಣಾದಿ ಆರ್ತವಾಂತ ೧೧ ಪದಾರ್ಥಗಳನ್ನು ವಹಿಸುವ ಸ್ರೋತಸ್ಸುಗಳು ಪ್ರತ್ಯೇಕಪ್ರತ್ಯೇಕವಾಗಿ ಎರಡೆರಡಿವೆ. ಮತ್ತು ಅಸ್ಥಿ, ಮಜ್ಜಾದಿ ಸ್ರೋತಸ್ಸು ಸ್ವಲ್ಪವಿಧೆ. ಹಾಗಾದಾಗ್ಯೂ ಆ ವಿಷಯದಲ್ಲಿ ಈ ವಹಿಸತಕ್ಕ ಅಧಿಕಾರವಿಲ್ಲ. ಕಾರಣವೇನಂದರೆ—ಅಸ್ಥಿವಹ ಸರ್ವಸ್ರೋತಸ್ಸಿಗೆ ಮೇದಸ್ಸು, ಮಜ್ಜಾವಹ

ಸ್ರೋತಸ್ಸಿಗೆ ಅಸ್ಥಿಯು ಸಹ ಮೂಲವಾಗಿ ಯಲ್ಲಾ ಶರೀರಗತವಾಗಿ ಇರುತ್ತವೆ. ಅದಕ್ಕೋಸ್ಕರ ಅವುಗಳ ವಿಧಿ, ಲಕ್ಷಣ, ಮತ್ತು ಸಾಧ್ಯಾಸಾಧ್ಯಾದಿ ಜ್ಞಾನವಿಷಯದಲ್ಲಿ ತಿಳಿಯುವದಕ್ಕಿಲ್ಲವಾಗಿ ಸ್ವೇದವಹ ಸ್ರೋತಸ್ಸಿಗೆ ಮೇದಸ್ಸುಮೂಲವು ಆದಕಾರಣ ಅದಕ್ಕಾಗಿ ಶಲ್ಯತಂತ್ರದಲ್ಲಿ ಅವುಗಳ ವಿಧಿ, ಲಕ್ಷಣ, ಅಧಿಕಾರವನ್ನು ಮಾಡಿಯಿಲ್ಲ. ಚಿಕಿತ್ಸಾ ವಿಷಯದಲ್ಲಿ ಸ್ರೋತಸ್ಸಿನ ದುಷ್ಟಲಕ್ಷಣಕ್ಕೆಂದು ತಿಳಿಯಬೇಕು. ತಾತ್ಪರ್ಯ— ಚಿಕಿತ್ಸಾವಿಷಯದಲ್ಲಿ ಸರ್ವಶರೀರಗತ ಸ್ರೋತಸ್ಸುಗಳ ಅಧಿಕಾರವು ಶಲ್ಯತಂತ್ರದಲ್ಲಿ ಸರ್ವಕಾಲದಲ್ಲೂ ದೇಹದಲ್ಲಿರುವ ಸ್ರೋತಸ್ಸು ವಿದ್ಧವಾಗಿದ್ದರೆ ವೇದನಾವಿಶೇಷ ಮತ್ತು ಸಾಧ್ಯಾಸಾಧ್ಯಜ್ಞಾನ ವಿಷಯಕ್ಕೆ ನಿಯಾಮಕ ಅಧಿಕಾರವಿರುತ್ತೆ. ಮತ್ತು ದೇಹಚಿಕಿತ್ಸೆಯು ಸರ್ವಶರೀರಗತವಾಗಿ ಸಾಧ್ಯಾದಿ ಜ್ಞಾನ ನಿಯಮವಾಗುತ್ತೆ. ಇದಕ್ಕಾಗಿ ಅಸ್ಥಿಮಜ್ಜಾದಿ ವಹ ಸ್ರೋತಸ್ಸಿನ ಅಧಿಕಾರವಿಲ್ಲ.


೧೭. ಸ್ರೋತಸ್ಸುಗಳ ಸಂಖ್ಯೆ.— ಸ್ವತಂತ್ರೋಕ್ತಗಳಾದ ಪ್ರಾಣಾದಿವಹ ಸ್ರೋತಸ್ಸುಗಳು ೨೨ ಇರುತ್ತವೆ; ಅಲ್ಲದೆ ಅವುಗಳ ಭೇದಗಳು ಅನೇಕವಿರುತ್ತವೆ.

೧೮. ಪ್ರಾಣವಹ ಸ್ರೋತಸ್ಸಿನ ಮೂಲ.—ಈ ೨ ಸ್ರೋತಸ್ಸುಗಳಿಗೆ ಮೂಲವು ಹೃದಯವು; ಅವುಗಳೇ ರಸವಾಹಿನೀ ಧಮನಿಗಳು. ಈ ಮೂಲಕ್ಕೆ ವೇಧೆಯಾದರೆ ಆರ್ತಸ್ವರಯುಕ್ತರೋದನವು, ವಕ್ರತೆ, ಭ್ರಮಣೆ, ಕಂಪವು ಸಹ ಆಗುತ್ತೆ.

೧೯. ಅನ್ನವಹ ಸ್ರೋತಸ್ಸಿನ ಮೂಲ.—ಈ ೨ಕ್ಕೆ ಮೂಲವು ಅನ್ನಾಶಯ ಮತ್ತು ಅನ್ನವಾಹಿನೀ ಧಮನಿಗಳು. ಅವುಗಳ ಮೂಲಕ್ಕೆ ವೇಧೆಯಾದರೆ ನೆಗಡಿ ಮತ್ತು ಶೂಲೆ, ಅನ್ನದ್ವೇಷಗಳುಂಟಾಗಿ ಮರಣ ಪ್ರಾಪ್ತವಾಗುತ್ತೆ.

೨೦. ಉದಕವಹ ಸ್ರೋತಸ್ಸಿನ ಮೂಲ.—ಈ ೨ಕ್ಕೆ ಮೂಲವು ತಾಲು, ಮತ್ತು ಪಿಪಾಸಾ ಅಂದರೆ ಬಾಯಾರಿಕೆ ಉಂಟಾಗುವ ಸ್ಥಾನ. ಇದಕ್ಕೆ ವೇಧೆಯಾದರೆ ಬಾಯಾರಿಕೆ, ಮುಖದಲ್ಲಿ ಕಪ್ಪುರಂಗು ಉಂಟಾಗಿ ಮರಣ ಸಂಭವಿಸುತ್ತೆ.

೨೧. ರಸವಹ ಸ್ರೋತಸ್ಸಿನ ಮೂಲ.—ಈ ೨ಕ್ಕೆ ಹೃದಯ ಮತ್ತು ರಸವಾಹಿನೀ ಧಮನಿಗಳು ಮೂಲವು. ಇದಕ್ಕೆ ವೇಧೆಯಾದರೆ ಶರೀರಶೋಷೆ ಉಂಟಾಗುತ್ತೆ. ಮತ್ತು ಪ್ರಾಣವಹ ಸ್ರೋತಸ್ಸಿಗೆ ವೇಧೆಯಾದರೆ ಯೇನು ಉಪದ್ರವವಾಗುತ್ತದೋ ಅದೆಲ್ಲಾ ಇದಕ್ಕೂ ಉಂಟಾಗುತ್ತೆ.



ಆಕಾಶ ಅರ್ಧಭಾಗ.
ಮನಸ್ಸು ಆಕಾಶ ವಾಯು.
ಬುದ್ಧಿ ಆಕಾಶ ಅಗ್ನಿ.
ಚಿತ್ತ ಆಕಾಶ ಜಲ.
ಅಹಂಕಾರ ಆಕಾಶ ಪೃಥಿವೀ
ಸಮಾನವಾಯು ಆಕಾಶ.
ವ್ಯಾನವಾಯು ಅರ್ಧಭಾಗ
ಉದಾನವಾಯು ಅಗ್ನಿ.
ಅಪಾನವಾಯು ಜಲ.
ಪ್ರಾಣವಾಯು ಪೃಥಿವೀ.
ಶ್ರೋತ್ರ ಅಗ್ನಿ ಆಕಾಶ.
ತ್ವಕ್ ತೇಜಸ್ಸು ವಾಯು.
ಚಕ್ಷುಸ್ಸು ಅಗ್ನಿ ಅರ್ಧಭಾಗ.
ಜಿಹ್ವಾ ಅಗ್ನಿ ಜಲ.
ಘ್ರಾಣ ಅಗ್ನಿ ಪೃಥಿವೀ.
ಶಬ್ದ ಜಲ ಆಕಾಶ.
ಸ್ಪರ್ಶ ವಾಯು ಜಲ.
ರೂಪ ಅಗ್ನಿ ಜಲ.
ರಸ ಜಲ ಅರ್ಧಭಾಗ
ಗಂಧ ಜಲ ಪೃಥಿವೀ.
ವಾಕ್ ಆಕಾಶ ಪೃಥಿವೀ.
ಪಾಣಿ ವಾಯು ಪೃಥಿವೀ.
ಪಾದ ಅಗ್ನಿ ಪೃಥಿವೀ.
ಉಪಸ್ಥ ಜಲ ಪೃಥಿವೀ.
ಪಾಯು ಪೃಥಿವೀ ಅರ್ಧ

೨೨. ರಕ್ತವಹ ಸ್ರೋತಸ್ಸಿನ ಮೂಲ.—ಈ ಎಕ್ಕೆ ಯಕೃತ್, ಪ್ಲೀಹ ಗಳು ಮೂಲವು. ಇದಕ್ಕೆ ವೇಧೆಯಾದರೆ ಶರೀರದಲ್ಲಿ ಕಪ್ಪುರಂಗು, ಜ್ವರ, ದಾಹ, ಪಾಂಡು, ಮತ್ತು ಊರ್ಧ್ವಾಧರ ಮಾರ್ಗದಲ್ಲಿ ಸ್ರಾವಕರ, ಮತ್ತು ನೇತ್ರದಲ್ಲಿ ರಕ್ತಕ್ಷೀಣತ್ವ ಸಹ ಉಂಟಾಗುತ್ತೆ.

೨೩. ಮಾಂಸವಹ ಸ್ರೋತಸ್ಸಿನ ಮೂಲ.—ಈ ಎರ ಮೂಲವು ಸ್ನಾಯು, ಮತ್ತು ತ್ವಗಾದಿ ರಸ ರಕ್ತವಾಹಕ ಧಮನಿಗಳು. ಇವುಗಳಿಗೆ ವೇಧೆಯಾದರೆ ಶೋಭೆಯುಂಟಾಗಿ ಮಾಂಸಕ್ಷೀಣವಾಗಿ ಮರಣಕ್ಕೆ ಕಾರಣವಾಗುತ್ತೆ. ಇಲ್ಲಿ ತ್ವಕ್‌ಶಬ್ದದಿಂದ ತ್ವಗಾಶ್ರಿತ ರಸವು ತೆಗದುಕೊಂಡುಹೋಗುತ್ತೆ.

೨೪. ಮೇದೋವಹ ಸ್ರೋತಸ್ಸಿನ ಮೂಲ.—ಈ ಎಕ್ಕೆ ಮೂಲವು ಕಟಿ, ವೃಕ್ಕ. ಇವುಗಳಿಗೆ ವೇಧೆಯಾದರೆ ಬಹಳ ಬೆವರು ಉಂಟಾಗುತ್ತೆ, ಮತ್ತು ಮೈಯಲ್ಲಿ ಜಿಡ್ಡು ಉಂಟಾಗುತ್ತೆ, ಮತ್ತು ತಾಲು ಶುಷ್ಕವಾಗುತ್ತೆ, ಮತ್ತು ಶೋಭೆ ನೀರಡಿಕೆಗಳು ಉಂಟಾಗುತ್ತವೆ.

೨೫. ಮೂತ್ರವಹ ಸ್ರೋತಸ್ಸಿನ ಮೂಲ.—ಈ ಎಕ್ಕೆ ಮೂಲವು ವಸ್ತಿ, ಶಿಶ್ನ. ಇವುಗಳಿಗೆ ವೇಧೆಯಾದರೆ ಮೂತ್ರಾಶಯು ಕಟ್ಟಿ ಮೂತ್ರನಿರೋಧವಾಗಿ ಶಿಶ್ನವು ಶಿಳದುಹೋಗುತ್ತೆ.

೨೬. ಪುರೀಷವಹ ಸ್ರೋತಸ್ಸಿನ ಮೂಲ.—ಈ ಎಕ್ಕೆ ಮೂಲವು ಪಕ್ವಾಶಯವು ಮತ್ತು ಗುದವು. ಇವುಗಳಿಗೆ ವೇಧೆಯಾದರೆ ವಾತರೋಗ ಉಂಟಾಗಿ ದುರ್ಗಂಧವಾಗಿ ಮಾಂಸಗ್ರಂಥಿಗಳು ಉಂಟಾಗುತ್ತವೆ.

೨೭. ಆರ್ತವವಹ ಸ್ರೋತಸ್ಸಿನ ಮೂಲ.—ಈ ಎಕ್ಕೆ ಗರ್ಭಾಶಯು, ಮತ್ತು ಆರ್ತವವಹ ಧಮನಿಗಳು ಮೂಲವು. ಇವುಗಳಿಗೆ ವೇಧೆಯಾದರೆ ವಂಧ್ಯತ್ವ ಉಂಟಾಗುತ್ತೆ, ಮತ್ತು ಮೈಥುನ ಸಹನವಾಗುವದಿಲ್ಲ, ಆರ್ತವನಾಶವು ಸಹ ಆಗುತ್ತೆ. ಮತ್ತು ಶುಕ್ರವಹ ಸ್ರೋತಸ್ಸಿನ ಸಮೀಪದಲ್ಲಿರುವ ಹೊಲಿಗೆಗೆ ವೇಧೆಯಾದರೂ ಮೇಲೆ ಹೇಳಿದ ಲಕ್ಷಣವೇ ಆಗುತ್ತೆ. ಇದಕ್ಕೆ ಚಿಕಿತ್ಸಾವಸ್ತಿ ಪ್ರಸಂಗದಲ್ಲಿ ಹೇಳಿದಂತೆ ಮಾಡಬೇಕು.

೨೮. ಶುಕ್ರವಹ ಸ್ರೋತಸ್ಸಿನ ಮೂಲ.—ಈ ಎಕ್ಕೆ ಮೂಲವು ಸ್ತನ ಮತ್ತು ವೃಷಣಗಳು. ಇವುಗಳಿಗೆ ವೇಧೆಯಾದರೆ ಷಂಡತ್ವ ಉಂಟಾಗುತ್ತೆ, ಅಥವಾ ಚಿರಕಾಲದ ವೀರ್ಯಸ್ರಾವವಾಗುತ್ತೆ, ಮತ್ತು ಶುಕ್ರವು ರಕ್ತವರ್ಣವಾಗುತ್ತೆ.

೨೯. ಚಿಕಿತ್ಸಾಸೂತ್ರ.—ಉಕ್ತಸ್ರೋತಸ್ಸಿನಲ್ಲಿ ವಿದ್ಧವಾದರೆ ಅಸಾಧ್ಯತ್ವ ಹೇಳಿ ಶಲ್ಯೋದ್ಧರಣಪ್ರಕಾರದಿಂದ ಚಿಕಿತ್ಸಿಸಬೇಕು. ಮತ್ತು ಶಲ್ಯವನ್ನು ತೆಗದು ಆ ಘಾಯಕ್ಕೆ ಕ್ಷತವಿಧಾನದಿಂದ ಚಿಕಿತ್ಸೆ ಮಾಡಬೇಕು.

ಶರೀರವನ್ನು ಆಶ್ರಯಿಸಿ ಇರುವ ಗುಣಗಳ ವಿವರ.—ಸುಶ್ರುತರ ಮತವಿಡಿದು ೨೦ ಗುಣಗಳು ಇರುತ್ತವೆ. ಯಾವವೆಂದರೆ–ಗುರು ೧, ಲಘು ೨, ಸ್ನಿಗ್ಧ ೩, ರೂಕ್ಷ ೪, ತೀಕ್ಷ್ಣ ೫, ಶ್ಲಕ್ಷ್ಣ ೬, ಸ್ಥಿರ ೭, ಸಾರಕ ೮, ಪಿಚ್ಛಿಲ ೯, ವಿಶದ ೧೦, ಸೀತ ೧೧, ಉಷ್ಣ ೧೨, ಮೃದು ೧೩, ಕರ್ಕಶ ೧೪, ಸ್ಥೂಲ ೧೫, ಸೂಕ್ಷ್ಮ ೧೬, ದ್ರವ ೧೭, ಶುಷ್ಕ ೧೮, (ಶೀಘ್ರ) ೧೯, ಮಂದ ೨೦, ಈ ಪ್ರಕಾರವಾಗಿರುತ್ತವೆ.

ಇವುಗಳ ಗುಣ.

ಗುರು, ಲಘು, ರೂಕ್ಷ, ಸ್ನಿಗ್ಧ—ಇವು ತೀಕ್ಷ್ಣವಾಗಿರುತ್ತವೆ.

ಶ್ಲಕ್ಷ್ಣವು—ಜಿಡ್ಡಿಲ್ಲದೆ ಕಠಿಣವಾಗಿ ನುಣುಪಾಗಿದೆ.

ಸ್ಥಿರವು—ವಾಯು, ಮಲ ಇವುಗಳ ಸ್ತಂಭವಮಾಡುತ್ತೆ.

ಸಾರಕವು—ವಾಯು, ಮಲ ಇವುಗಳ ಸಾರಣವಮಾಡುತ್ತೆ.

ಪಿಚ್ಛಿಲವು—ಬಲಕರ, ಭಗ್ನಸಾಧಕ, ಶ್ಲೇಷ್ಮಕಾರಿ, ಗುರುವಾಗಿರುತ್ತೆ.

ವಿಶದವು—ಕ್ಲೇದನಾಶಕ, ಸಾರಕ, ಮತ್ತು ವ್ರಣವನ್ನು ಆರಿಸುತ್ತೆ, ಅಥವಾ ತುಂಬುತ್ತೆ.

ಸೀತವು—ಆನಂದಕಾರಕ, ಸ್ತಂಭಕ, ಮೂರ್ಛೆ, ತೃಷೆ, ಬೆವರು, ದಾಹಗಳ ನಾಶಕವಾಗಿರುತ್ತೆ.

ಉಷ್ಣವು—ವಿಪರೀತ ಪಾಚಕವಾಗಿರುತ್ತೆ.

ಸ್ಥೂಲವು—ದೇಹಕ್ಕೆ ಸ್ಥೂಲವಮಾಡುತ್ತೆ, ಮತ್ತು ಸ್ರೋತಸ್ಸುಗಳಿಗೆ ಅವರೋಧ ಮಾಡುತ್ತೆ.

ಸೂಕ್ಷ್ಮವು—ದೇಹದ ಸೂಕ್ಷ್ಮ ಛಿದ್ರಗಳಲ್ಲಿ ಪ್ರವೇಶವಮಾಡುತ್ತೆ.

ದ್ರವವು—ಶರೀರಕ್ಕೆ ಕ್ಲೇದ ಉಂಟುಮಾಡುತ್ತೆ, ಮತ್ತು ಎಲ್ಲಾ ಶರೀರಕ್ಕೂ ವ್ಯಾಪಿಸುತ್ತೆ.

ಶುಷ್ಕವು—ದ್ರವಗುಣಕ್ಕೆ ವ್ಯತಿರಿಕ್ತವಾಗಿದೆ.

ಆಶುಗುಣವು—ದೇಹದಲ್ಲಿ ತ್ವರಿತಗುಣ ಮಾಡುತ್ತೆ.

ಮಂದವು—ನೀರಿನಲ್ಲಿ ತೈಲ ಹರವಿಕೊಳ್ಳುವಂತೆ ಸಂಪೂರ್ಣಕಾರ್ಯದಲ್ಲಿ ಶಿಥಿಲವಾಗಿದೆ.

ಮೃದುವು—ಮೆತ್ತಗೆ ಇರುತ್ತೆ.

ಕರ್ಕಶವು—ಮುಳ್ಳಾಗಿರುತ್ತೆ.

ಶೀಘ್ರವು—ವೇಗವಾಗಿರುತ್ತೆ.

ಮನುಷ್ಯನ ಶರೀರದಲ್ಲಿ ಪಂಚಭೂತಗಳು, ಪಂಚವಿಂಶತಿ ತತ್ವಗಳು ಸಹ ಇರುತ್ತವೆಯೆಂದು ಮೇಲೆ ಹೇಳಲ್ಪಟ್ಟಿದೆಯಷ್ಟೇ. ಆ ಪಂಚವಿಂಶತಿ ತತ್ವಗಳು ಪೃಥಿವ್ಯಾದಿ ಪಂಚಭೂತಗಳ ಪರಸ್ಪರ ಸಂಬಂಧಗಳಿಂದ ಉಂಟಾಗಿರುತ್ತವೆ. ಮತ್ತು ಪೃಥ್ವೀ ಸಂಬಂಧವಾದ ಹುಳಿ, ಉಪ್ಪು, ಜಲಸಂಬಂಧವಾದ ಸೀ, ಅಗ್ನಿಸಂಬಂಧವಾದ ಖಾರ, ವಾಯುಸಂಬಂಧವಾದ ಒಗರು, ಆಕಾಶಸಂಬಂಧವಾದ ಕೈ, ಈ ಆರು ರಸಗಳ ಪರಸ್ಪರ ಸಂಯೋಗಗಳಿಂದ ಸುಪಕ್ವವಾದ ಪದಾರ್ಥಗಳನ್ನು ಸೇವಿಸಿದರೆ ಆಯಾಭೂತಗಳ ಸಂಬಂಧವಾದ ಅವಯವಗಳು ವೃದ್ಧಿಯಾಗುತ್ತವೆ. ಇಲ್ಲದೆ ಕೆಟ್ಟಪಾಕಗಳುಳ್ಳ ಪದಾರ್ಥಗಳನ್ನು ತಿಂದರೆ ಯಾವ ರಸಗಳ ಪಾಕಗಳು ಕೆಟ್ಟವೋ ಆಭೂತಸಂಬಂಧವಾದ ಅವಯವಗಳಲ್ಲಿ ತತ್ತದ್ಭೂತಗಳ ಸಂಬಂಧಗಳಾದ ರೋಗಗಳನ್ನು ಉಂಟುಮಾಡುತ್ತವೆಯಾಗಿ ಈ ಪಂಚಭೂತಮಯವಾದ ಷಡ್ರಸಗಳಿಂದ ವೃದ್ಧಿಕ್ಷಯಾದಿಗಳನ್ನು ಹೊಂದುವ ಅವಯವಗಳನ್ನು ಚಿತ್ರದಮೂಲಕವಾಗಿಯೂ ಸಹ ಇದರಕೆಳಗೆ ವಿವರಿಸುತ್ತೆ:—

೧. ಶುದ್ಧ ಪೃಥ್ವೀ ಭೂತದಲ್ಲಿ ಉತ್ಪತ್ತಿಯಾದ ಮೂಲಸ್ಥಾನವು, ಈ ಭೂತ ಸಂಬಂಧವಾದ ಹುಳಿ, ಉಪ್ಪು ಈ ಯೆರಡು ರಸಗಳ ಪಕ್ವಭೇಧಗಳಿಂದ ವೃದ್ಧಿ ಕ್ಷಯಾದಿಗಳನ್ನು ಹೊಂದುತ್ತೆ.

೨. ಪೃಥ್ವೀ, ಜಲ ಈ ಯರಡು ಭೂತಗಳ ದೆಶೆಯಿಂದ ಹುಟ್ಟಿದ ಮೂತ್ರಸ್ಥಾನಕ್ಕೆ, ಈ ಭೂತಗಳ ಸಂಬಂಧಗಳಾದ ಉಪ್ಪು, ಹು', ಸೀ ಈ ಮೂರು ರಸಗಳ ಪಕ್ವಭೇಧಗಳಿಂದ ಆರೋಗ್ಯರೋಗಾದಿಗಳು ಉಂಟಾಗುತ್ತವೆ.

೩. ಪೃಥ್ವೀ, ಅಗ್ನಿ ಈ ಯೆರಡು ಭೂತಾತ್ಮಗಳಾದ ಪಾದದ್ವಯಕ್ಕೆ, ಈದೇ ಭೂತಗಳ ಸಂಬಂಧವಾದ ಹುಳಿ, ಉಪ್ಪು, ಖಾರ ಈ ಮೂರು ರಸಗಳ ಪಾಕವ್ಯತ್ಯಾಸಗಳಿಂದ ದೋಷಗಳು ಹೆಚ್ಚು ಕಡಮೆ ಯಾಗುತ್ತವೆ.

೪. ಪೃಥ್ವೀ, ವಾಯು ಭೂತಗಳು ಕೂಡಿದ ಹಸ್ತದ್ವಯಕ್ಕೆ, ಇದೇ ಭೂತಮಯ ಹುಳಿ, ಉಪ್ಪು, ಒಗರು ಈ ಮೂರು ರಸಗಳ ಪಕ್ವಭೇದಗಳಿಂದ ವೃದ್ಧಿಕ್ಷಯಾದಿಗಳನ್ನು ಉಂಟಾಗುತ್ತವೆ.

೫. ಪೃಥ್ವೀ, ಆಕಾಶ ಭೂತಗಳು ಸೇರಿದ ಬಾಯಿಯು, ಇದೇ ಭೂತ ಹುಳಿ, ಉಪ್ಪು, ಕೈ ರಸಗಳ ಪಕ್ವವ್ಯತ್ಯಾಸದಿಂದ ಸಮ ವ್ಯತ್ಯಾಸ ಭಾವವನ್ನು ಹೊಂದುತ್ತೆ.

ಈ ಮೇಲೆ ಹೇಳಲ್ಪಟ್ಟ ಐದು ಅವಯವಗಳು ಪೃಥ್ವೀಯೇ ಆದಿಯಾಗಿ ಹುಟ್ಟಿರುತ್ತವೆ.

೬. ಜಲ, ಪೃಥ್ವೀ ಈ ಯರಡು ಭೂತಗಳಿಂದ ಗಂಧ ಹುಟ್ಟಿತು. ಈ ಭೂತಮಯವಾದ ಸೀ, ಹುಳಿ, ಉಪ್ಪು ಇವುಗಳ ಪಾಕಭೇದಗಳಿಂದ ಗಂಧವು ತಿಳಿಯತಕ್ಕದ್ದು, ತಿಳಿಯದೇ ಯಿರತಕ್ಕದ್ದು ಸಹ ಉಂಟಾಗುತ್ತೆ.

೭. ಶುದ್ಧ ಜಲಭೂತದಿಂದ ನಾಲಿಗೆಯಲ್ಲಿ ರಸ ಉಂಟಾಯಿತು. ಈಭೂತಸಂಬಂಧ ವಾದ ಸೀರಸ ಪಾಕಭೇದಗಳಿಂದ ರುಚಿಯು ಅರುಚಿಯು ಉಂಟಾಗುತ್ತೆ.

೮. ಜಲ, ಅಗ್ನಿ ಈ ಯೆರಡು ಭೂತಗಳಿಂದ ರೂಪವು ಹುಟ್ಟಿತು. ಇದರ ಸಂಬಂಧಗಳಾದ ಸೀ, ಖಾರ ಇವುಗಳ ಪಾಕಭೇದಗಳಿಂದ ಕಾಂತಿಗೆ ವೃದ್ಧಿಕ್ಷಯಾದಿಗಳು ಉಂಟಾಗುತ್ತೆ.

೯. ಜಲ, ವಾಯು ಈ ಯರಡರಿಂದ ಸ್ಪರ್ಶ ಉಂಟಾಗಿ ಇದರ ಸಂಬಂಧವಾದ ಸೀ, ಒಗರು ಪದಾರ್ಥಗಳ ಪಕ್ವಭೇಧದಿಂದ ಸ್ಪರ್ಶವನ್ನು ತಿಳಿಯತಕ್ಕದ್ದು, ತಿಳಿಯದೇಯಿರತಕ್ಕದ್ದು ಸಹ ಆಗುತ್ತೆ.

೧೦. ಜಲ, ಆಕಾಶ ಈ ಎರಡರಿಂದ ಶಬ್ದವು ಉಂಟಾಯಿತು. ಇದರ ಸಂಬಂಧವಾದ ಸೀ, ಖೈ ಈ ಎರಡರ ಪಾಕಭೇಧಗಳಿಂದ ಸಮವ್ಯತ್ಯಾಸಗಳನ್ನು ಹೊಂದುತ್ತೆ.

ಈ ಮೇಲೆ ಹೇಳಲ್ಪಟ್ಟ ಐದು ಅವಯವಗಳು ಜಲಭೂತಆದಿಯಾಗಿ ಹುಟ್ಟಿರುತ್ತವೆ.

೧೧. ಅಗ್ನಿ,ಪೃಥ್ವೀ ಈ ಯೆರಡು ಭೂತಗಳ ಸಂಬಂಧದಿಂದ ಮೂಗು ಹುಟ್ಟಿತು. ಈ ಭೂತಸಂಬಂಧಗಳಾದ ಖಾರ, ಉಪ್ಪು, ಹುಳಿ ಇವುಗಳ ಪಾಕಭೇದದಿಂದ ಗುಣಾವಗುಣಗಳು ಹುಟ್ಟುತ್ತವೆ.

೧೨. ಅಗ್ನಿ, ಜಲ ಈ ಎರಡರಿಂದ ನಾಲಿಗೆಯು ಹುಟ್ಟಿ ಇದರ ಸಂಬಂಧಗಳಾದ ಖಾರ, ಸೀ ರಸಗಳ ಪಾಕಭೇದಗಳಿಂದ ವೃದ್ಧಿಕ್ಷಯಗಳನ್ನು ಹೊಂದುತ್ತವೆ.

೧೩. ಶುದ್ಧ ಅಗ್ನಿ ಭೂತದಿಂದ ನೇತ್ರಗಳು ವುಂಟಾಗಿವೆ. ಇದರ ಸಂಬಂಧವಾದ ಖಾರ ರಸದ ಪಕ್ವಭೇದದಿಂದ ದೃಷ್ಟಿಪ್ರಕಾಶವು, ಪ್ರಕಾಶವಾಗದೆಯಿರುವಿಕೆಯು ಸಹ ಉಂಟಾಗುತ್ತೆ.

೧೪. ಅಗ್ನಿ, ವಾಯು ಭೂತಗಳಿಂದ ಚರ್ಮವು ಹುಟ್ಟಿ ಇದರ ಸಂಬಂಧವಾದ ಖಾರ, ಒಗರು ಇವಗಳ ಪಾಕಭೇದಗಳಿಂದ ಚರ್ಮದಲ್ಲಿ ರೋಗವೂ, ರೋಗನಾಶವೂ ಉಂಟಾಗುತ್ತೆ.

೧೫. ಅಗ್ನಿ, ಆಕಾಶ ಈ ಎರಡು ಭೂತಗಳಿಂದ ಕರ್ಣಗಳು ಹುಟ್ಟಿದವು. ಇದರ ಸಂಬಂಧವಾದ ಖಾರ, ಖೈ ಇವುಗಳ ಪಾಕ ಭೇದಗಳಿಂದ ಆರೋಗ್ಯರೋಗಗಳನ್ನು ಉಂಟುಮಾಡುತ್ತವೆ.

ಈ ಐದು ಅವಯವಗಳು ಅಗ್ನಿ ಭೂತಆದಿಯಾಗಿ ಹುಟ್ಟುತ್ತವೆ.

೧೬. ವಾಯು, ಪೃಥಿವೀ ಈ ಯರಡರಿಂದ ಪ್ರಾಣವಾಯು ಉತ್ಪತ್ತಿಯಾಗಿ ಇದರ ಸಂಬಂಧವಾದ ಒಗರು, ಉಪ್ಪು, ಹುಳಿ ಇವುಗಳ ಪಾಕಭೇದದಿಂದ ಹೃದಯದಲ್ಲಿ ಬಾಧೆಯು, ಸಮಸ್ಥಿತಿಯು ಸಹ ಉಂಟಾಗುತ್ತೆ.

೧೭. ವಾಯು, ಜಲ ಇವುಗಳಿಂದ ಅಪಾನವಾಯುವು ಉಂಟಾಗಿ ಒಗರು, ಸೀ ಪದಾರ್ಥಗಳ ಪಾಕಭೇಧಗಳಿಂದ ಮಲಮೂತ್ರಗಳು ಸರಿಯಾಗಿಯು ಮತ್ತು ವ್ಯತ್ಯಾಸವಾಗಿಯು ಆಗುತ್ತೆ.

೧೮. ವಾಯು ಅಗ್ನಿಗಳಿಂದ ಉದಾನವಾಯುವು ಹುಟ್ಟಿ, ಒಗರು ಖಾರಗಳಿಂದ ಒಳ್ಳೇದು, ಕೆಟ್ಟದ್ದು ಸಹ ಉಂಟಾಗುತ್ತೆ.

೧೯. ಶುದ್ಧವಾಯುವಿನಿಂದ ವ್ಯಾನವಾಯುವು ಉಂಟಾಗಿ ಒಗರುರಸದಿಂದ ಶರೀರದಲ್ಲೆಲ್ಲಾ ಹೆಚ್ಚು ಕಮ್ಮಿಯನ್ನು ಹೊಂದುತ್ತೆ.

೨೦. ವಾಯು, ಆಕಾಶ ಭೂತಗಳಿಂದ ಸಮಾನವಾಯುವು ಹುಟ್ಟಿ ಒಗರು, ಕೈ ರಸಗಳಿಂದ ಆರೋಹಣಾವರೋಹಣಗಳು ಉಂಟಾಗುತ್ತೆ.

ಈ ಮೇಲೆ ಹೇಳಲ್ಪಟ್ಟ ಐದು ಅವಯವಗಳು ವಾಯುಭೂತ ಆದಿಯಾಗಿ ಹುಟ್ಟಿಯಿವೆ.

೨೧. ಆಕಾಶ, ಪೃಥ್ವೀ ಈ ಎರಡುಭೂತಗಳಿಂದ ಅಹಂಕಾರ ಉಂಟಾಗಿ ಕೈ, ಉಪ್ಪು, ಹುಳಿ ಈ ಮೂರು ರಸಗಳಿಂದ ಹೆಚ್ಚು ಕಡಮೆಯಾಗುತ್ತೆ.

೨೨. ಆಕಾಶ, ಜಲ ಭೂತಗಳಿಂದ ಚಿತ್ತವುಂಟಾಗಿ ಕೈ, ಸೀ ರಸಗಳಿಂದ ಸ್ಥಿರ ಚಾಂಚಲ್ಯಗಳನ್ನು ಹೊಂದುತ್ತೆ.

೨೩. ಆಕಾಶ, ಅಗ್ನಿ ಭೂತಗಳಿಂದ ಬುದ್ಧಿ ಹುಟ್ಟಿ ಕೈ, ಖಾರ ರಸಗಳಿಂದ ಸಮ ವ್ಯತ್ಯಾಸಗಳನ್ನು ಹೊಂದುತ್ತೆ.

೨೪. ಆಕಾಶ, ವಾಯು ಭೂತಗಳಿಂದ ಮನಸ್ಸು ಹುಟ್ಟಿ ಕೈ, ಒಗರು ರಸಗಳ ಪಕ್ವವ್ಯತ್ಯಾಸದಿಂದ ಚಲಿಸುವಿಕೆ, ಚಲಿಸದೇಯಿರುವಿಕೆಗಳನ್ನು ಹೊಂದುತ್ತೆ.

೨೫. ಶುದ್ಧಆಕಾಶಭೂತದಿಂದ ಕ್ಷೇತ್ರಜ್ಞ ಹುಟ್ಟಿ ಶುದ್ಧಕೈರಸ ಪಕ್ವಭೇದದಿಂದ ಸಮಸ್ಥಿತಿ ಮತ್ತು ಹಾನಿ ಸಹ ಉಂಟಾಗುತ್ತೆ.

ಈ ಐದು ಅವಯವಗಳು ಆಕಾಶಭೂತಆದಿಯಾಗಿ ಹುಟ್ಟಿವೆ.

ನಾಡೀಲಕ್ಷಣ ಹ್ಯಾಗೆಂದರೆ—

ಶರೀರದಲ್ಲಿ ಗಾಳಿಯೂ, ರಕ್ತವೂ ಒಂದಕ್ಕೊಂದು ಸಂಬಂಧವಿಲ್ಲದಹಾಗೆ ಸಂಚರಿಸುತ್ತಲಿರುವವು. ರಂಧ್ರಯುಕ್ತವಾದ ನರದ ಕೊಳವೆಯೇ ನಾಡೀಎಂದು ಹೇಳಿಸಿಕೊಳ್ಳುತ್ತೆ.

ಇದಕ್ಕೆ ದೃಷ್ಟಾಂತ.

ಕಮಲದ ಬಳ್ಳಿಯನ್ನು ಮುರಿದು ನೋಡಿದರೆ ಅಂತಸ್ತುಗಳುಳ್ಳ ರಂಧ್ರಗಳು ಇರುವವಲ್ಲದೆ ಆ ರಂಧ್ರಗಳು ಒಂದಕ್ಕೊಂದು ಸಂಬಂಧಿಸಿರುವದಿಲ್ಲ. ಇಂಥಾ ಕಮಲನಾಳದೋಪಾದಿಯಲ್ಲಿರುವ ನಾಡೀಕೊಳವೆಯಲ್ಲಿ ಗಾಳಿಯು, ರಕ್ತವು ಪ್ರತ್ಯೇಕ ಪ್ರತ್ಯೇಕ ರಂಧ್ರಗಳಲ್ಲಿ ಸೇರಿ, ಆ ಗಾಳಿಯು ಅತಿವೇಗದಿಂದ ತಿರಗುವ ಕಾಲದಲ್ಲಿ ನೀರಿನಂತಿರುವ ರಕ್ತವನ್ನು ತಿರಗಿಸುತ್ತೆ.

ಇದನ್ನು ಪರೀಕ್ಷಿಸುವ ಕ್ರಮ.

ನೀರಿನಮೇಲೆ ಕೈ ಅಲ್ಲಾಡಿಸುತ್ತಿರುವ ಕಪ್ಪೆಯನ್ನು ತಂದು ಒಂದು ದಬ್ಬೆಮೇಲೆ ಆ ಕಪ್ಪೆಯನ್ನು ಇಟ್ಟು ಧಾರದಿಂದ ಕಟ್ಟಿ ಅದರ ಕೈಗಳನ್ನ ಅಗಲಿಸಿ ಸೀಳಿದ ಹಂಚೀಕಡ್ಡಿಯಿಂದ ಸಣ್ಣಧಾರದಲ್ಲಿ ಕಟ್ಟಿ ದೀಪಕ್ಕೆ ಅಡ್ಡವಾಗಿ ಕಪ್ಪೆಯ ಕೈಗಳನ್ನು ನೋಡಿದರೆ ಅತ್ಯಂತವೇಗದಿಂದ ರಕ್ತವು ಸಂಚರಿಸುವರೀತಿ ಕಾಣಿಸುತ್ತೆ. ಇದರಂತೆ ಮನುಷ್ಯರ ದೇಹದಲ್ಲಿ ಗಾಳಿಯು ರಕ್ತವನ್ನು ತಿರಿಗಿಸುತ್ತೆ.


ವೀಣೆಯ ಮೆಟ್ಲಿನ ಭೇದದಿಂದ ಸ್ವರಗಳು ಹುಟ್ಟಿ ರಾಗಭೇದಗಳು ಹ್ಯಾಗೆ ತೋರುವವೋ ಹಾಗೆ ಮನುಷ್ಯನ ಹಸ್ತದ ಹೆಬ್ಬೆರಳಿನ ಬುಡದಲ್ಲಿ ಪಾಬ್ಬುವಾಗಿ ಮೂರು ಬೆರಳುಗಳನ್ನು ಇಟ್ಟು ಲಕ್ಷ್ಯಧಾರಣೆಯಿಂದ ವತ್ತಿನೋಡಿದರೆ ಯವಬೀಜದಂತೆ ಮೊದಲಿನ ಬೆರಳಿಗೆ ವಕ್ರವಾಗಿಯೂ, ಯರಡನೆ ಬೆರಳಿಗೆ ಚಪಲವಾಗಿಯೂ, ಮೂರನೆ ಬೆರಳಿಗೆ ಸ್ಥಿರವಾಗಿಯೂ, ಅಡ್ಡವಾಗಿಯೂ ಸಹ ತೋರುವ ಗತಿಗಳೇ ವಾತ, ಪಿತ್ತ, ಶ್ಲೇಷ್ಮವೆಂಬ ಹೆಸರುಳ್ಳ ಮೂರು ಗತಿಗಳೆನಿಸಿಕೊಳ್ಳುವವು.

ಈ ಮೂರುಗತಿಗಳಿಂದ ಪಂಚಭೂತಗಳೆಂಬ ಐದುಗತಿಗಳು, ಸಪ್ತಗತಿಗಳು, ಮತ್ತು ಒಂಭತ್ತು ಗತಿಗಳು ಸಹ ತೋರುತ್ತವೆ. ಆ ಒಂಭತ್ತು ಗತಿಗಳು, ಸಂವತ್ಸರ, ಆಯುಷ್ಯ, ಗಂಡಕಾಲ, ಋತುಕಾಲ, ಗರ್ಭಕಾಲ, ರೋಗ, ಮನೋಭಾವ, ಗ್ರಹಣಿ, ಸಾಧ್ಯಾಸಾಧ್ಯಲಕ್ಷಣ, ಭೂತಭವಿಷ್ಯದ್ವರ್ತಮಾನಗತಿ ಸ್ಥಿತಿಗಳನ್ನು ತಿಳಿಸುತ್ತವೆ.

ಇವು ಸಪ್ತಗ್ರಹ ನವಗ್ರಹರೂಪವಾಗಿರುತ್ತವೆ. ಈ ಮೂರು ಗತಿಗಳೇ ಆದಿಯಾದ ಒಂಭತ್ತು ಗತಿಗಳ ರೂಪಗಳನ್ನು ಇದರಕೆಳಗೆ ಬರಿಯುವ ಚಿತ್ರದಿಂದ ತಿಳಿಯತಕ್ಕದ್ದು.

ಸಂಖ್ಯೆ.	ಆಕಾರ.	ಗತಿಗಳು.	ಗ್ರಹಗಳು.
೧	●	ಪಿತ್ತಗತಿ.	ಸೂರ್ಯ.
೨	▬	ಶ್ಲೇಷ್ಮಗತಿ.	ಚಂದ್ರ.
೩	O	ಪೃಥ್ವೀಗತಿ.	ಮಂಗಳ.
೪		ವಾತಗತಿ.	ಬುಧ.
೫	o	ಆಕಾಶಗತಿ.	ಗುರು.
೬	▮	ಡೋಲಾಗತಿ.	ಶುಕ್ರ.
೭		ಕುಂಡಲಿನೀಗತಿ.	ಶನಿ.
೮		ವಕ್ರಚಕ್ರ.	ರಾಹು.
೯		ಚಪಲಚಕ್ರ.	ಕೇತು.
	ಇವು ಯೆರಡೂ ಕೂಡಿ	ನವಗ್ರಹವೆನ್ನಿ	ಸುತ್ತೆ.
೧	▮	ಡೋಲಾಗತಿ.	ಪಿತ್ತವಾತ.
೨		ಕುಂಡಲಿನೀ.	ಸೀತವಾತ.
೩		ವಕ್ರಚಕ್ರ.	ಸೀತವಾತ.
೪		ಚಪಲಚಕ್ರ.	ಪಿತ್ತವಾತ.

(ಸೂರ್ಯ … ಶನಿ:) ಇವು ಸಪ್ತಗ್ರಹಗಳು.


ಪೃಥ್ವಿ
ಅಪ್ಪು
ಅಗ್ನಿ
ವಾಯು
ಆಕಾಶ
ವಾಯು
ಅಗ್ನಿ
ಜಲ

ಮೊದಲು ನಾಡಿಯನ್ನು ನೋಡುವಕಾಲದಲ್ಲಿ ವೈದ್ಯನು ಅಪಯಶಸ್ಸಿಗೂ ಶ್ರಮಕ್ಕೂ ಗುರಿಯಾಗದೇ ಇರುವದಕ್ಕಾಗಿ ಮನುಷ್ಯನ ಆಯುಸ್ಸನ್ನು ತಿಳಿಯಲು ಇದರ ಕೆಳಗೆ ಒಂದು ಸಂವತ್ಸರದ ಒಳಗಣ ಗತಿಗಳು ತಿಳಿಸಲ್ಪಡುತ್ತವೆ.

ಕರಾಂಗುಷ್ಠಮೂಲದಲ್ಲಿ ಮೂರು ಸ್ಥಾನಗಳಲ್ಲಿಯು ಮೂರು ಬೆರಳುಗಳನ್ನಿಟ್ಟು ಆದಿಯಲ್ಲಿ ಪಿತ್ತವನ್ನು, ಆಮೇಲೆ ವಾತವನ್ನು, ಅನಂತರ ಶ್ಲೇಷ್ಮಸ್ಥಾನವನ್ನು ನೋಡಿದರೆ ಕ್ರಮವಾಗಿ ಹನ್ನೆರಡು ಗತಿಗಳ ಪ್ರಕಾರ ಮೂರಾವರ್ತಿಬಂದರೆ ಅಂಥಾ ಮನುಷ್ಯನು ಬಹು ಕಾಲ ಜೀವಿಸುತ್ತಾನೆ. ಈ ಪ್ರಕಾರ ಪಿತ್ತಸ್ಥಾನವೇ ಆದಿಯಾಗಿ ಎರಡನೇ ಭಾರಿ ನೋಡುವಲ್ಲಿ ಹನ್ನೆರಡಕ್ಕೆ ಕಡಮೆ ಯಾವಸ್ಥಾನದಲ್ಲಿ ಕಂಡಾಗ್ಯೂ ಅಸಾಧ್ಯವೆಂದು ತಿಳಿಯತಕ್ಕದ್ದು. ಮೂರನೇ ಭಾರಿ ಇದೇ ಪ್ರಕಾರ ನೋಡಲು ಗತಿಗಳು ಕಾಣದೆ ಅಡಗಿಹೋದರೆ ಅದು ಸಹ ಅಸಾಧ್ಯವೆಂದು ತಿಳಿಯತಕ್ಕದ್ದು. ಈ ಗತಿಗಳಲ್ಲಿ ವಾತಸ್ಥಾನದಲ್ಲಿ ವಾತಗತಿ ಹನ್ನೆರಡಕ್ಕೆ ಕಡಮೆಯಾದರೆ ಆರುತಿಂಗಳಿಗೆ ಗಂಡಕಾಲವೆಂದೂ, ಪಿತ್ತಸ್ಥಾನದಲ್ಲಿ ಪಿತ್ತಗತಿ ಹನ್ನೆರಡಕ್ಕೆ ಕಡಮೆಯಾದರೆ ಮೂರುತಿಂಗಳಿಗೆ ಗಂಡಕಾಲವೆಂತಲೂ, ಶ್ಲೇಷ್ಮಸ್ಥಾನದಲ್ಲಿ ಶ್ಲೇಷ್ಮಗತಿ ಹನ್ನೆರಡಕ್ಕೆ ಕಡಮೆಯಾದರೆ ಒಂದು ತಿಂಗಳಿಗೆ ಗಂಡಕಾಲವೆಂದೂ ತಿಳಿಯತಕ್ಕದ್ದು. ಈ ಮೂರು ಸ್ಥಾನಗಳಲ್ಲೈಕೀ ಪವಿತ್ರಾಂಗುಲಿಗೆ ತಗಲಿದ ಗತಿಯನ್ನು ಎಂಟು ಭಾಗ ಮಾಡಿದರೆ ಭಾಗ ಒಂದಕ್ಕೆ ನಾಲ್ಕು ದಿವಸಗಳಾಗುತ್ತವೆ. ಆ ನಾಲ್ಕು ದಿವಸಗಳನ್ನು ಎಂಟು ಭಾಗ ಮಾಡಿದರೆ ಭಾಗ ಒಂದಕ್ಕೆ ಮೂವತ್ತು ಘಳಿಗೆಗಳಾಗುತ್ತವೆ. ಆ ಮೂವತ್ತು ಘಳಿಗೆಗಳನ್ನು ಹತ್ತು ಭಾಗ ಮಾಡಿದರೆ ಭಾಗ ಒಂದಕ್ಕೆ ಮೂರುಘಳಿಗೆಯಾಗುತ್ತೆ. ಇದೇ ಗಂಡಕಾಲವೆಂದು ತಿಳಿಯತಕ್ಕದ್ದು. ಈ ಕಾಲದಲ್ಲಿ ಹೃದಯದಲ್ಲಿರುವ ಪ್ರಾಣವಾಯುವು ಊರ್ಧ್ವಮುಖವಾಗಿ ಅಧಿಕವಾಗುತ್ತೆ. ಬುದ್ಧಿಶಾಲಿಯಾದವನು ಇದನ್ನು ಗಂಡಕಾಲವೆಂದು ತಿಳಿಯಬಹುದು.

ಮತ್ತು ಶ್ವಾಸವು ಹದಿನಾರಂಗುಲದವರಿಗೂ ತಗಲುವದ್ದರಿಂದ ಈ ಶ್ವಾಸವನ್ನು ಮೇಲೆ ಹೇಳಿದ ರೀತಿಯಾಗಿ ಭಾಗಗಳನ್ನು ಮಾಡಿ ಗಂಡಕಾಲವೆಂದು ತಿಳಿಯಬಹುದು. ಇದು ಸ್ವರಶಾಸ್ತ್ರದಲ್ಲಿ ಹೇಳಿರುತ್ತೆ.

ಮತ್ತು ಈ ವಾತ ಪಿತ್ತ ಶ್ಲೇಷ್ಮಗತಿಗಳನ್ನು ಉಕ್ತಾಂಗುಲಿಗಳಿಂದ ನೋಡಿದ್ದೇ ಆದರೆ ಮೇಲೆ ಹೇಳಿದ ಗತಿಗಳು ರೋಗಿಯ ಕೈಗತಿಗಳೋ ಅಥವಾ ವೈದ್ಯನ ಕೈಗತಿಗಳೋ ಎಂಬ ಸಂಶಯ ಬರುವ ಕಾರಣ ಪಿತ್ತಾಂಗುಲಿಯಿಂದ ಶ್ಲೇಷ್ಮಸ್ಥಾನವನ್ನು, ವಾತಾಂಗುಲಿಯಿಂದ ಪಿತ್ತಸ್ಥಾನವನ್ನು, ಶ್ಲೇಷ್ಮಾಂಗುಲಿಯಿಂದ ವಾತಸ್ಥಾನವನ್ನು ಸಹ ಒತ್ತಿ ನೋಡಿದರೆ ವಾತ ಪಿತ್ತ ಶ್ಲೇಷ್ಮಗತಿಗಳ ಪ್ರಭೇದಗಳು ಸ್ಫುಟವಾಗಿ ತಿಳಿಯುತ್ತವೆ.

ಮನುಷ್ಯನ ಆಯುಸ್ಸನ್ನು ನೋಡಬೇಕಾದರೆ—ವಾತಸ್ಥಾನದಲ್ಲಿ ತರ್ಜನೀ ಬೆರಳನ್ನಿಟ್ಟು ಒತ್ತುತ್ತಾ ಎತ್ತುತ್ತಾ ಇರಲು ಭೋಗತಿ ಹನ್ನೆರಡು ಬರುವದು, ಅನಂತರ

ಕುಂಡಲಿನೀಗತಿ ಹನ್ನೆರಡು ಬರುವದು, ಅನಂತರ ಪಿತ್ತಗತಿಗಳು. ಅಪಿತ್ತಗತಿಗಳೇ ವರ್ಷ ಗತಿಗಳೆಂದು ತಿಳಿಯಬೇಕು. ಈ ಪಿತ್ತಗತಿಗಳಲ್ಲಿ ಎಷ್ಟುಎಷ್ಟನೇ ಸಂಖ್ಯೆಗಳಲ್ಲಿ ಗತಿ ನಿಲ್ಲುತ್ತದೆಯೋ ಅಯಾ ಉಕ್ತವರ್ಷ ಗಂಡಕಾಲವೆಂದು ತಿಳಿಯಬೇಕು. ಈಪ್ರಕಾರವಾಗಿ ವರ್ಷಗತಿಯನ್ನು ನೋಡುತ್ತಿರುವಲ್ಲಿ ಅಂತ್ಯಭಾಗಕ್ಕೆ ಪೃಥ್ವೀಗತಿ ಹನ್ನೆರಡು ಬಂದು ಸ್ವಲ್ಪಕಾಲ ನಿಂತು ಶ್ಲೇಷ್ಮಗತಿ ಅಗ್ನಿಗತಿಗಳೇ ಹನ್ನೆರಡು ಹನ್ನೆರಡು ಬರುವವು. ಎರಡನೇ ಭಾರಿ ಶ್ಲೇಷ್ಮಗತಿ ಹನ್ನೆರಡು, ಪಿತ್ತಗತಿ ಆರು, ಮೂರನೇಭಾರಿ ಶ್ಲೇಷ್ಮಗತಿ ಆರು, ಪಿತ್ತಗತಿ ಮೂರು, ನಾಲ್ಕನೇಭಾರಿ ಶ್ಲೇಷ್ಮಗತಿ ಮೂರು, ಪಿತ್ತಗತಿ ಎರಡು, ಐದನೇಭಾರಿ ಶ್ಲೇಷ್ಮಗತಿ ಎರಡು, ಪಿತ್ತಗತಿ ಒಂದು, ಆರನೇ ಭಾರಿ ಶ್ಲೇಷ್ಮಗತಿಮಾತ್ರ ಒಂದು ನೂರು, ಈ ಪ್ರಕಾರ ಬಂದು ಅನಂತರ ಗತಿಗೆ ಹ್ರಾಸವು,ರೋಧವು ಸಹ ಉಂಟಾಗಿ ಬಹಳ ಹೊತ್ತಿನಮೇಲೆ ಭೂಗತಿ ಬರುವದು. ಆ ಭೂಗತಿಯು ಗೋಳಾಕಾರವಾಗಿ ಕಾಣಿಸಿದನಂತರ ಅಷ್ಟದಳಗಳು ಕಾಣುತ್ತವೆ. ಆದಳಗಳಲ್ಲಿ ಗತಿಯು ಇಂದ್ರದಿಕ್ಕೆ ಮೊದಲಾಗಿ ಯಾವ ದಳದಲ್ಲಿ ನಿಂತು ಆಡುತ್ತದೋ ಅದೇಪ್ರಕಾರ ಉದರದಲ್ಲಿ ಗರ್ಭವು ತದ್ದಿಗೀಶ ಸಂಭವವಾಗಿ ಆ ದಿಕ್ಕಿನಲ್ಲಿ ಧಾರಣೆಯಾಗಿ ತತ್ಫಲಗಳನ್ನು ಅನುಭವಿಸುತ್ತದೆಯೆಂದು ತಿಳಿಯಬೇಕು.

ಇದರ ಫಲಗಳು.

೧. ಇಂದ್ರದಿಕ್ಕಿನಲ್ಲಿ ಗರ್ಭಧಾರಣೆಯಾಗಿ ಹುಟ್ಟಿದ ಪುರುಷನು— ರಾಜ್ಯಾಧಿಪಾಲಕನು, ಧರ್ಮಜ್ಞನು, ಸತ್ಯವಾದೀ, ಸರ್ವಜ್ಞ, ಜ್ಞಾನೀ, ಸರ್ವಶಾಸ್ತ್ರಜ್ಞನಾಗಿರುವನು.

೨. ಅಗ್ನಿದಿಕ್ಕಿನಲ್ಲಿ ಹುಟ್ಟಿದಾತನು—ಕೋಪೀ, ಬಹುನಿಷ್ಠುರಿ, ಸರ್ವಜ್ಞ, ಜ್ಞಾನೀ, ಸರ್ವಶಾಸ್ತ್ರಜ್ಞನು.

೩. ಯಮದಿಕ್ಕಿನಲ್ಲಿ ಜನಿಸಿದವನು—ಪ್ರೀತಿಯುಳ್ಳವನು, ದೇವತಾರಾಧಕ, ಬ್ರಹ್ಮಜ್ಞಾನಿಯಾಗಿಹನು.

೪. ನೈರುತ್ಯದಿಕ್ಕಿನಲ್ಲಿ ಜನಿಸಿದವನು—ಘೋರರೂಪೀ, ದುಃಖೀ, ಬ್ರಹ್ಮದ್ವೇಷೀ, ಹಗಲೂ ರಾತ್ರೀ ನಿದ್ರೆಮಾಡುವನು.


೫. ವರುಣದಿಕ್ಕಿನಲ್ಲಿ ಹುಟ್ಟಿದವನು—ದಿನೇ ದಿನೇ ಅಭಿವೃದ್ಧಿಯಾಗತಕ್ಕವನು, ನರಶ್ರೇಷ್ಠನು, ಧನಧಾನ್ಯ ಸಂಪನ್ನನು, ದಿವ್ಯ ರತ್ನಾಲಂಕೃತನು ಸಹ ಆಗಿರುವನು.

೬. ವಾಯುವ್ಯದಿಕ್ಕಿನಲ್ಲಿಹುಟ್ಟಿದವನು—ಭುಜಬಲಪರಾಕ್ರಮೀ, ತ್ಯಾಗೀ, ರತಿಸುಖಿಯಾಗಿರುವನು.

೭. ಕುಬೇರದಿಕ್ಕಿನಲ್ಲಿ ಜನಿಸಿದವನು —ಮಹದೈಶ್ವರ್ಯವುಳ್ಳವನು, ಯಶಸ್ವೀ, ಜ್ಞಾನೀ, ಆಯುಷ್ಯವಂತನು ಆಗಿರುವನು.

೮. ಈಶಾನ್ಯದಿಕ್ಕಿನಲ್ಲಿ ಹುಟ್ಟಿದವನು—ಅದೃಷ್ಟವಂತನು, ದೈವಜ್ಞನು, ಶಾಸ್ತ್ರತತ್ವಜ್ಞನು, ದೇವಬ್ರಾಹ್ಮಣಪೂಜಕನು ಆಗಿರುವನು.

ಇದರ ಆಕಾರವನ್ನು ನೋಡಿ ತಿಳಿಯತಕ್ಕದು.




ಮೇಲೆ ಹೇಳಿದ ಅಷ್ಟದಳಕಮಲವು ಜನಗಳಲ್ಲಿರುವ ದಿಕ್ಪಾಲಾಂಶಗಳನ್ನು ಮತ್ತು ಜನ್ಮಾಂತರದಲ್ಲಿ ಮಾಡಿದ ಸುಕೃತ ದುಷ್ಕೃತರೂಪವಾದ ಶುಭಾಶುಭ ಫಲಗಳನ್ನು ಸಹ ತಿಳಿಸುತ್ತದೆ.

ಮೇಲೆ ಅಷ್ಟದಳಕಮಲದ ಫಲವು ಹೇಳಲ್ಪಟ್ಟಿದೆಯಷ್ಟೆ. ಈಗ ಒಂದು ದಳದಲ್ಲಿ ಅಷ್ಟದಳಗಳು ತೋರಿಸಲ್ಪಡುತ್ತವೆ. ಹ್ಯಾಗೆಂದರೆ—ಒಂದು ದಳದಲ್ಲಿ ಬಿದ್ದ ರೇತಸ್ಸು ಮತ್ತೊಂದು ದಳಕ್ಕೆ ಹೋಗುವದಿಲ್ಲ. ಈ ರೇತಸ್ಸು ಯಾವದಳದಲ್ಲಿ ಬಿತ್ತೋ ಆದೇದಳದಲ್ಲಿ ಮತ್ತೊಂದುದಿಕ್ಕಿನಲ್ಲಿ ಸರಿಯುವದ್ದರಿಂದ ಆ ಬಿದ್ದಸ್ಥಳದಲ್ಲಿಯೂ ಮತ್ತು ಚಲಿಸಿ ಮತ್ತೊಂದು ದಿಕ್ಕಿನಲ್ಲಿಯೂ ಸಹ ಯೆಷ್ಟೆಷ್ಟು ಗತಿಗಳು ಕಾಣುತ್ತವೋ ಅದನ್ನು ನೋಡಿ ಮಿಶ್ರಫಲವನ್ನು ಹೇಳಬೇಕು.

ಇದಕ್ಕೆ ದೃಷ್ಟಾಂತ.

ಕಪ್ಪೆ ಚಿಪ್ಪಿನಲ್ಲಿ ಸ್ವಾತೀಮಳೆಯನೀರು ಬಿದ್ದಕೂಡ್ಲೇ ಆ ಚಿಪ್ಪು ಹ್ಯಾಗೆ ಮುಚ್ಚಿ ಒಳಗೆ ಮುತ್ತು ಬೆಳೆಯುತ್ತದೋ ಅದೇಮೇರೆ ದಳ ಮುಚ್ಚಿ ಗರ್ಭವು ಬೆಳೆಯುವದು.

ಇದರ ಆಕಾರವು ಇದರ ಲಕ್ಷಣಗ್ರಂಥವು ಸಹ ಇದರ ಕೆಳಗೆ ಬರಿಯಲ್ಪಡುತ್ತೆ.



೧. ಇಂದ್ರಾಂಶಃ ಪೂರ್ವಪತ್ರಸ್ಥೇ ಗರ್ಭೇ ರಾಜ್ಯಾಧಿಪಾಲಕಃ । ಧರ್ಮಜ್ಞ
ಸ್ಸತ್ಯವಾದೀಚ ದ್ರವ್ಯವಾಂಶ್ಚ ನರೋತ್ತಮಃ ॥

೨. ಆಗ್ನೇಯದಳಗೇ ಗರ್ಭೇ ಕೋಪವಾನತಿನಿಷ್ಠುರಃ । ಸರ್ವಜ್ಞೋ ಜ್ಞಾನ
ಯುಕ್ತಶ್ಚ ಸರ್ವಶಾಸ್ತ್ರಾರ್ಥಕೋವಿದಃ ॥

೩. ಸ್ವಾದ್ಯಾಮ್ಯದಳಗೇ ಗರ್ಭೇ ಯಮಾಂಶಃ ಪ್ರೀತಿಮಾನ್ನರಃ । ದೇವತಾ
ರಾಧಕಃ ಪ್ರೀತೋ ಬ್ರಹ್ಮಜ್ಞಾನೀ ನಿರಂತರಂ ॥

೪. ನೈಋತ್ಯದಳಗೇ ಗರ್ಭೇ ಘೋರರೂಪಸ್ಸದಾಖಿತಃ । ಬ್ರಹ್ಮದ್ವೇಷೀ ದಿವಾ
ರಾತ್ರಂ ಸುಪ್ತಿರ್ವಾಚಾಳೋ ಭವೇನ್ನರಃ ॥

೫. ವರುಣಚ್ಛದಗೇ ಗರ್ಭೇ ವೃದ್ಧಿದಸ್ಸ್ಯನ್ನರೋತ್ತಮಃ । ಧನಧಾನ್ಯಸಂಪನ್ನಃ ದಿವ್ಯರತ್ನಾದಿಧಾರಕಃ ॥

೬. ಗರ್ಭೇ ವಾಯವ್ಯದಳಗೇ ಬಾಹುವಿಕ್ರಮವಾನ್ ಬಹು । ತ್ಯಾಗವಾಂಶ್ಚ ತಥಾ ಭೋಗೀ ಸುವ್ರತೀಚ ಭವೇನ್ನರಃ ॥

೭. ಧನೇಶ್ವರಚ್ಛದಗತೇ ಗರ್ಭೇ ಭೂತಿವಿಭೂತಿವಾನ್ । ಜೈವಾತೃಕೋ ಭವೇನ್ಮರ್ತ್ಯ ಸ್ತಥೈವ ಸಮಹಾಯಶಾಃ ॥

೮. ಈಶಾನ್ಯದಳಸಂಸ್ಥೇತು ಗರ್ಭೇ ಮರ್ತ್ಯೋಭವೇತ್ಖಲು । ದೈವಜ್ಞಶ್ಶಾಸ್ತ್ರತತ್ವಜ್ಞಃ ದ್ವಿಜಾರ್ಚನರತೋ ವಿಭುಃ ॥

ಈ ಗ್ರಂಥಗಳ ಟೀಕೆ ಹಿಂದೆ ವಿಸ್ತಾರವಾಗಿ ಬರೆಯಲ್ಪಟ್ಟಿದೆ. ಮೇಲೆ ಹೇಳಿದ ಗತಿಗಳು ಬಂದನಂತರ ಒಂದೇಸ್ಥಾನದಲ್ಲಿ ಸಪ್ತಗತಿಗಳು ಕೂಡಿದರೆ, ಸಪ್ತಗ್ರಹಗಳು ಒಂದೇ ರಾಸಿಯಲ್ಲಿ ಸೇರಿದಾಗ ಬ್ರಹ್ಮಾಂಡಕ್ಕೆ ಹ್ಯಾಗೆ ಲಯಉಂಟಾಗುವದೋ ಹಾಗೆಯೇ ಶರೀರಕ್ಕೆ ಲಯಕಾಲವೆಂದು ತಿಳಿಯಬೇಕು. ಏಳಕ್ಕೆ ಕಮ್ಮಿಯಾಗಿ ಗತಿಗಳು ಬಂದರೆ ಗಂಡಕಾಲವೆಂದರಿಯಬೇಕು. ಇದು ದೃಷ್ಟಾಂತಸಹಿತವಾಗಿ ಮುಂದೆ ಬರೆಯಲ್ಪಡುತ್ತೆ.

ಸ್ತ್ರೀಯರ ಋತುಕಾಲ ಲಕ್ಷಣ.—ಕಫಸ್ಥಾನದಲ್ಲಿ ಭೂಗತಿ ಹನ್ನೆರಡು ಬಂದನಂತರ ಕುಂಡಲಿನೀಗತಿಗಳು ಹನ್ನೆರಡು ಬಂದು ಅನಂತರ ಪಿತ್ತಗತಿಗಳು ಬಂದು ಯೆಷ್ಟನೇ ಸಂಖ್ಯೆಗೆ ರೋಧವಾಗುತ್ತದೆಯೋ ಅದೇವರ್ಷದಲ್ಲಿ ಗಂಡಕಾಲವೆಂದು ತಿಳಿಯಬೇಕು. ಪುನಃ ಅದೇಸ್ಥಾನವನ್ನು ಅನಾಮಿಕಾಂಗುಲಿಯಿಂದ ಯೊತ್ತಿ ಪೊತ್ತಿ ನೋಡಲು ಕಫವು ಮಧ್ಯದಲ್ಲಿ ಪಿತ್ತವು ಹನ್ನೆರಡು ಹನ್ನೆರಡು ಗತಿಗಳ ಪ್ರಕಾರ ಮೂರಾವರ್ತಿ ಬಂದನಂತರ ಡೋಲಾಗತಿ ಹನ್ನೆರಡು ಬಂದು ಆ ಮೇಲೆ ಮೂರು ಬಿಂದುಗಳು ಸ್ಫುಟವಾಗಿಯೂ, ನಾಲ್ಕು ಬಿಂದುಗಳು ಅಸ್ಫುಟವಾಗಿಯೂ ಸಹ ಕಂಡರೆ ಅದೇ ಸಂವತ್ಸರ ಋತುಕಾಲವೆಂದು ತಿಳಿಯಬೇಕು. ಏಳು ಬಿಂದುಗಳಲ್ಲಿ ಮೂರು ಬಿಂದುಗಳು ಸ್ಫುಟವಾಗಿ ಕಾಣುವದ್ದರಿಂದ ಮೂರು ದಿನದ ವರಿಗೂ ರಕ್ತವು ಅಧಿಕವಾಗಿ ಸ್ರವಿಸುವದು. ನಾಲ್ಕು ಬಿಂದುಗಳು ಅಂದರೆ ನಾಲ್ಕು ಸುಳಿಗಳು ಅಸ್ಫುಟವಾಗಿ ಕಾಣುವದ್ದರಿಂದ ನಾಲ್ಕು ದಿವಸ ರಕ್ತವು ಸ್ವಲ್ಪ ಸ್ರವಿಸುತ್ತದೆಯೆಂದು ತಿಳಿಯಬೇಕು. ಏಳು ಬಿಂದುಗಳಿಗೆ ಹೆಚ್ಚಾಗಿ ಸುಳಿಗಳು ಬಂದರೆ ರೋಗವೆಂದು ತಿಳಿಯತಕ್ಕದ್ದು. ಇದರ ಸಂಖ್ಯೆ ಗಂಡಕಾಲದಲ್ಲಿ ಹೇಳಿರುವ ಹಾಗೆಯೇ ತಿಳಿಯಬೇಕು.

ಋತುಮತಿ ಆಗುವದಕ್ಕೆ ರೂಪದಿಂದ ತಿಳಿಯುವ ಲಕ್ಷಣ.—ನಿರ್ಮಲವಾಗಿ ಪೀತವರ್ಣವಿಶಿಷ್ಟವಾದ ಮುಖ, ಮುಖದಲ್ಲಿ ಬೆವರು, ಹಲ್ಲುಗಳಲ್ಲಿ ಕಾಂತಿ, ಪುರುಷ ಹುತ್ತು ಮನ್ಮಥ ಇವರ ವಿಷಯಕವಾದ ಮಾತಿನಲ್ಲಿ ಆಸ್ಥೆ; ಕುಕ್ಷಿ, ನೇತ್ರ

ಕೂದಲು ಇವು ಸಡಲವಾಗುತ್ತೆ; ಸ್ತನ, ಭುಜ, ಕಟಿಪಶ್ಚಾದ್ಭಾಗ, ನಾಭಿ, ಕಟಿಪುರೋಭಾಗ, ತೊಡೆ ಇವುಗಳಲ್ಲಿ ಕಾಂತಿ ಮತ್ತು ಅದರೊಳು, ಸಂಭೋಗದಲ್ಲೂ ಪದಾರ್ಥಗಳಲ್ಲೂ ಸಹ ಆಶೆ ಉಂಟಾಗುತ್ತೆ. ಇವೆಲ್ಲಾ ಋತುವಾಗುವದಕ್ಕೆ ಗುರ್ತು.

ಗರ್ಭಲಕ್ಷಣ.—ಕಫಸ್ಥಾನದಲ್ಲೇ ಗರ್ಭರೀತಿಯನ್ನು ನೋಡಬೇಕು. ಆಯುರವಲೋಕನ ಪ್ರಕಾರವಾಗಿ ಸ್ತ್ರೀಯರ ವರ್ಷಗತಿಯನ್ನು ನೋಡಿಕೊಂಡು ಕಫಗತಿ ಹನ್ನೆರಡು ಬಂದನಂತರ ಯಡಕ್ಕಾಗಲಿ ಬಲಕ್ಕಾಗಲಿ ಪಿತ್ತಗತಿ ಹನ್ನೆರಡು ಕಂಡರೆ ಗರ್ಭಧಾರಣೆಯಾಗಿರುವದೆಂದು ತಿಳಿಯಬೇಕು. ಈ ಗತಿಗಳು ನಾಲ್ಕೈದು ದಿವಸಗಳು ನೋಡಿದಾಗ್ಯೂ ಒಂದೇ ಪ್ರಕಾರವೇ ಬಂದರೆ ಗರ್ಭವೆಂದು ನಿಶ್ಚಯಿಸಬೇಕು. ಇದೇ ಶ್ಲೇಷ್ಮಸ್ಥಾನದಲ್ಲಿ ಕಫಗತಿ ಹನ್ನೆರಡು, ಪಿತ್ತಗತಿ ಹನ್ನೆರಡು, ಈ ಪ್ರಕಾರ ಯೆಷ್ಟುಭಾರಿ ಬರುವದೋ ಅದನ್ನು ಮಾಸಸಂಖ್ಯೆಯನ್ನಾಗಿ ತಿಳಿಯಬೇಕು. ಯೆಷ್ಟನೇ ಭಾರೀಗೆ ಪಿತ್ತಗತಿ ಹನ್ನೆರಡಕ್ಕೆ ಹೆಚ್ಚು ಕಡಮೆಯಾಗುತ್ತದೋ ಅಷ್ಟನೇ ತಿಂಗಳಲ್ಲಿ ಗರ್ಭಕ್ಕೆ ಬಾಧಕವೆಂದು ತಿಳಿಯಬೇಕು. ಈ ಗರ್ಭರೋಗಕ್ಕೆ ದಿನಸಂಖ್ಯೆಯನ್ನು ಗಂಡಕಾಲದಲ್ಲಿ ಹೇಳಿದಂತೆ ನೋಡಬೇಕು. ಮೇಲೆ ಹೇಳಿದ ಗತಿಗಳು ಪ್ರಸವಕಾಲದವರೆಗೂ ಸಮವಾಗಿ ಬಂದರೆ ಸೌಖ್ಯದಿಂದ ಜನನವಾಗುತ್ತೆಂತಲೂ ಮತ್ತು ಬಲಭಾಗದಲ್ಲಿ ಪಿತ್ತಗತಿ ಕಂಡರೆ ಗಂಡು ಶಿಶುವೆಂತಲೂ, ಯಡಭಾಗದಲ್ಲಿ ಪಿತ್ತಗತಿ ಕಂಡರೆ ಹೆಣ್ಣು ಶಿಶುವೆಂತಲೂ, ಮಧ್ಯಭಾಗದಲ್ಲಿ ಕಂಡರೆ ನಪುಂಸಕವೆಂತಲೂ ತಿಳಿಯಬೇಕು.

ಒಂಭತ್ತು ತಿಂಗಳು ಆದನಂತರ ಅಗ್ನಿಸ್ಥಾನದಲ್ಲಿ ಮುಟ್ಟಿದಮಾತ್ರಕ್ಕೆ ವಕ್ರಚಕ್ರಡೋಲಾಗತಿ ಕಂಡು ಸುಳಿಗಳು ಕಾಣುವದಕ್ಕೆ ಆರಂಭಿಸಿ ಅದೇಸ್ಥಾನದಲ್ಲಿ ಪೂರ್ವದಲ್ಲಿದ್ದ ವಾತಗತಿ ಕಡಮೆಯಾದರೆ ಆದಿನವೇ ಪ್ರಸವಕಾಲವೆಂತ ತಿಳಿಯಬೇಕು.

ಗರ್ಭಿಣೀಯರಿಗೆ ಪ್ರಸವಕಾಲದಲ್ಲಿ ಉಂಟಾಗುವ ಲಕ್ಷಣಗಳು.—ಟೊಂಕಾ, ಪೇರ್ಹೊಡೆ, ಹೊಟ್ಟೆ, ಪೃಷ್ಠ, ಹೃದಯವಸ್ತಿ, ತೊಡೇಸಂದು ಇವುಗಳಲ್ಲಿ ನೋವು; ಕಿವಿಮುಚ್ಚಿ ಹೋಗುವದು ಮತ್ತು ಮೈಭಾರ, ಯೋನಿಭೇದ, ಅದರುವದು ಸಹ ಉಂಟಾದರೆ ಪ್ರಸವಕಾಲವೆಂದು ತಿಳಿಯಬೇಕು. ಪ್ರಸವವಾದನಂತರ ಶ್ಲೇಷ್ಮಸ್ಥಾನದಲ್ಲಿ ಕಫಪಿತ್ತಗತಿಗಳು ಮೇಲೆ ಹೇಳಿದಮೇರೆಯೇ ಬಂದು ವಕ್ರಚಕ್ರ ಡೋಲಾಗತಿಗಳು ಕಂಡು ಅಲ್ಲಿಯೇ ದಿನಸುಳಿಗಳು ಕಾಣುತ್ತವೆ. ಈ ಸುಳಿಗಳು ಯಷ್ಟುಬರುತ್ತವೊ ಅಷ್ಟುದಿವಸದವರಿಗೂ ರಕ್ತವು ಸ್ವಲ್ಪಸ್ವಲ್ಪವೆ ಸ್ರವಿಸುತ್ತದೆ. ಕೆಲವು ಸ್ತ್ರೀಯರುಗಳಿಗೆ ಮೂವತ್ತು ದಿವಸಗಳಿಗೆ ನಿಂತುಹೋಗುತ್ತದೆ. ಕೆಲವು ಸ್ತ್ರೀಯರಿಗೆ ನಾಲ್ವತ್ತು ದಿವಸದವರಿಗೂ ಸ್ರವಿಸುತ್ತದೆ. ಇದಕ್ಕೆ ಜನರು ತಿಂಗಳುಸೂತಕವೆಂತ ಹೇಳುತ್ತಾರೆ. ಇನ್ನು ಕೆಲವರಿಗೆ ಮೇಲೆಹೇಳಿದ ಸು ಗಳು ನಾಲ್ವತ್ತಕ್ಕೆ ಹೆಚ್ಚಾಗಿ ಬಂದರೆ ಪ್ರದರರೋಗವೆಂದು ತಿಳಿಯಬೇಕು.

ಪ್ರಸವಕಾಲದಲ್ಲಿ ಮಾಡತಕ್ಕ ಚಿಕಿತ್ಸೆ.—ಅಧೋಮುಖವಾಗುವಹಾಗೆ ಯಣ್ಣೆ ಕುಡಿಸಬೇಕು, ವಾಂತಿಮಾಡಿಸಬೇಕು, ಮೈಚನ್ನಾಗಿ ತಿಕ್ಕಿಸಬೇಕು, ಶರೀರದಾರಢ್ಯ ಉಂಟಾಗುವದಕ್ಕೆ ಹಾಲು, ಸಕ್ಕರೆ, ತುಪ್ಪ, ಮತ್ತು ಅವರಿಗೆ ಇಚ್ಛೆಯುಳ್ಳ ಪದಾರ್ಥಗಳನ್ನು ತಿನ್ನಿಸಬೇಕು, ಶಾಂತವಾದ ನಸ್ಯಹಾಕಿಸಬೇಕು. ಇದು ಪಂಚಕರ್ಮವೆನ್ನಿಸಿಕೊಳ್ಳುತ್ತದೆ.

ಸ್ತ್ರೀಯು ಮಾಸಮಾಸದಲ್ಲಿಯೂ ರಜಸ್ವಲಿಯಾಗತಕ್ಕದ್ದನ್ನು ನಾಡೀಗತಿಯಿಂದ ತಿಳಿಯತಕ್ಕ ಕ್ರಮ.—ಯಾವ ಸ್ತ್ರೀಗೆ ರಜಸ್ವಲಾ ಆದನಂತರ ಕಫಸ್ಥಾನದಲ್ಲಿ ಪಿಳಾ ಸುಳಿಗಳು ಕಂಡಮೇಲೆ ಯತ್ತಿ ಮತ್ತೆ ನೋಡಿದರೆ ಡೋಲಾಗತಿ ಕಂಡು ಸುಳಿಗಳು ಬರುತ್ತವೆಯೋ ಆ ಸುಳಿಗಳು ಯಷ್ಟನೇ ಸಂಖ್ಯೆಯಲ್ಲಿ ನಿಂತು ಮೂರಾವರ್ತಿ ಶ್ಲೇಷ್ಮ ಪಿತ್ತಗತಿಗಳು ಕಂಡು ಪೂರ್ವದಂತೆ ಪಿಳಾ ಬಿಂದುಗಳು ಕಾಣುತ್ತವೋ ಅದೇ ರಜಸ್ವಲಾ ಕಾಲವೆಂದು ತಿಳಿಯಬೇಕು.

ಸ್ತ್ರೀಯು ರಜಸ್ವಲೆಯಾದ ನಂತರ ಕಲಾದಿಗಳನ್ನತಿಕ್ರಮಿಸಿ ಸಂಭೋಗವಂ ಮಾಡಿದರೆ ಆತ್ಮಸೌಖ್ಯವೇ ಹೊರ್ತು ಗರ್ಭೋತ್ಪತ್ತಿಯಾಗುವದಿಲ್ಲ. ಸ್ವಾತೀಮಳೆಯ ಬಿಂದುಗಳು ಕಪ್ಪೆಚಿಪ್ಪಿನಲ್ಲಿ ಬಿದ್ದಮಾತ್ರಕ್ಕೆ ಚಿಪ್ಪು ಅವುಗಳನ್ನು ಹ್ಯಾಗೆ ಮುಚ್ಚಿಕೊಳ್ಳುವದೋ ಹಾಗೆ ಸಂಭೋಗಕಾಲದಲ್ಲಿ ಪುರುಷನ ವೀರ್ಯವು ಸ್ತ್ರೀಯ ಶೋಣಿತವು ಸೇರಿ ಯಾವದಳದಲ್ಲಿ ಬೀಳುವದೋ ಆದಳವು ಆವೀರ್ಯವನ್ನು ಮುಚ್ಚಿಕೊಳ್ಳುವದು. ಅದೇ ಗರ್ಭವಾಗಿ ಬೆಳೆಯುವದು. ಆ ಕಾಲದಲ್ಲಿ ರೇತಸ್ಸು ಹೋಗಿ ಸೇರುವಾಗ ವಾಯುವಿನಿಂದ ಭಿನ್ನವಾಗಿ ಅನೇಕ ಗುಳ್ಳೆಗಳು ಆಗುತ್ತವೆ. ಆ ಗುಳ್ಳೆಗಳಷ್ಟುಗರ್ಭಗಳೆನಿಸಿಕೊಳ್ಳುತ್ತವೆ. ಸಂಯೋಗಕಾಲದಲ್ಲಿ ದಳದಲ್ಲಿ ಗುಳ್ಳೆನಿಂತು ಮಡದು ಮಾಸಮಾಸದಲ್ಲಿಯೂ ರಜೋದರ್ಶನವೂ ಗರ್ಭಾಭಿವೃದ್ಧಿಯೂ ಸಹ ಆಗುತ್ತಾಬಂದರೆ ಅದಕ್ಕೆ ಹೆಂಗಸರು ಶುದ್ಧಗರ್ಭವೆಂದು ಹೇಳುತ್ತಾರೆ. ಹೆಂಗಸರಿಗೆ ರೇತಸ್ಸುಬರುವ ದ್ವಾರದಲ್ಲಿ ಬರುವ ರೇತಸ್ಸಿಗೆ ಶೋಣಿತವೆಂತಲೂ, ಪುರುಷನದ್ವಾರದಲ್ಲಿ ಬರುವ ರೇತಸ್ಸಿಗೆ ಶುಕ್ಲವೆಂತಲೂ ಹೆಸರು. ಶುಕ್ಲ ಶೋಣಿತಗಳಲ್ಲಿ ಶುಕ್ಲಬಿಂದು ಅಧಿಕವಾದರೆ ಪುಂಪ್ರಜೆಯೂ, ಶೋಣಿತಬಿಂದು ಅಧಿಕವಾದರೆ ಸ್ತ್ರೀಪ್ರಜೆಯೂ ಉತ್ಪತ್ತಿಯಾಗುವದು. ಈ ಅಷ್ಟದಳದಲ್ಲಿ ಕ್ರಿಮಿಗಳು ವುಂಟಾಗಿರುವ ಕಾಲದಲ್ಲಿ ರೇತಸ್ಸು ಸೇರಿದರೆ ಆ ಕ್ರಿಮಿಗಳು ಆರೇತಸ್ಸನ್ನು ಭಕ್ಷಿಸುತ್ತವೆ. ಇದಕ್ಕೆ ವಂಧ್ಯಾರೋಗವೆಂದು ಹೆಸರು.

ಒಂದು ದಳದಲ್ಲಿ ಒಂದು ನಾಳದಲ್ಲಿ ಯರಡು ಪಿಂಡಗಳು ಹುಟ್ಟಿದರೆ ಆ ಶಿಶುಗಳಲ್ಲಿ ಒಂದಕ್ಕಾದ ಫಲವೇ ಮತ್ತೊಂದಕ್ಕೂ ಉಂಟಾಗುತ್ತೆ. ಅದೇ ದಳದಲ್ಲಿ ಯರಡು ನಾಳಗಳಲ್ಲಿ ಬೇರೆ ಬೇರೆ ಶಿಶುಗಳು ಹುಟ್ಟಿದರೆ ಬೇರೇ ಗುಣಗಳು ತೋರುತ್ತವೆ. ಆಕಾಲದಲ್ಲಿ ಪೂರ್ವಜನ್ಮದ ಕರ್ಮದಿಂದ ಆಗರ್ಭಸ್ಥಾನದಲ್ಲಿ ವಿಯೋನಿಗಳು ಹುಟ್ಟುತ್ತವೆ.

ಸಪ್ತವಿಧ ಗರ್ಭ ವಿಷಯವು ವಿವರಿಸಲ್ಪಡುತ್ತೆ.

೧. ಶುದ್ಧಗರ್ಭಲಕ್ಷಣ.—ವಾಂತಿ, ನಿದ್ರೆ, ಸಿಟ್ಟು, ಬಲಹಾನಿ, ಯಲ್ಲಾವಸ್ತುಗಳಲ್ಲೂ ಇಚ್ಛೆ, ಬಳಲಿಕೆ, ರುಚಿ ಉಂಟಾಗುವದು.

೨. ವಾತಗರ್ಭಲಕ್ಷಣ.—ವಾತಾಧಿಕ್ಯ, ಮುಖಕಾಂತ್ಯಾಧಿಕ್ಯ, ಕುಕ್ಷಿದೇಶದಲ್ಲಿ ವಿಭೂತಿವರ್ಣ, ಸರ್ವಾಂಗದಲ್ಲೂ ಗ್ಲಾನಿ, ಇವು ಇರುವವು.

೩. ಜಲಗರ್ಭಲಕ್ಷಣ.—ಕೈಕಾಲುಗಳು ಕುಣಿಸುವಿಕೆ, ಹೊಟ್ಟೇ ಕೂಗುವಾಗ ತೆಂಗಿನಕಾಯಿಯ ನೀರು ಅಲ್ಲಾಡಿಸಿದಂತೆ ತೋರುವದು.

೪. ಮಾಂಸಗರ್ಭಲಕ್ಷಣ.—ಶರೀರದಲ್ಲಿ ಯಷ್ಣೋಹುಟ್ಟಿದಂತೆ ಮಿಂಚುವದು, ಆಲಸ್ಯ, ಮುಖಕಾಂತಿವೃದ್ಧಿ, ಬಳಲಿಕೆ, ಇವುಗಳಾಗುವವು.

೫. ರಕ್ತಗರ್ಭಲಕ್ಷಣ.—ಚಿತ್ತಚಾಂಚಲ್ಯ, ಶರೀರದಲ್ಲಿ ಕಾರ್ಶ್ಯ, ಮುಖದಲ್ಲಿ ಕಡಮೆಯಾದ ಕಾಂತಿ, ವರ್ಣ ಕಡಮೆಯಾಗುವದು, ಮನಸ್ತಾಪ, ಬಳಲಿಕೆ, ಇವುಗಳುಂಟಾಗುವವು.

೬. ಆಮಗರ್ಭಲಕ್ಷಣ.—ಮುಖವೈವರ್ಣ್ಯ, ಕಣ್ಣುಗಳಲ್ಲಿ ಕೆಂಪು, ಆಲಸ್ಯ.

೭. ವಿಷಗರ್ಭಲಕ್ಷಣ.—ಮುಖದಲ್ಲಿ ಮಿಂಚು, ಕುಕ್ಷಿಯಲ್ಲಿ ಕ್ರಿಮಿ, ಮತ್ತು ವ್ರಣ, ರತಿಯಲ್ಲಿ ಪ್ರೀತಿ, ಇವುಗಳುಂಟಾಗುವವು.

ಗರ್ಭದಲ್ಲಿರುವ ಶಿಶುಗಳಿಗೆ ವರ್ಣ ಉಂಟಾಗುವದಕ್ಕೆ ಕಾರಣ.—ತಂದೆತಾಯಿಗಳ ಆಹಾರದಿಂದುಂಟಾದ ಪಿತ್ತಾಧಿಕ್ಯದಿಂದ ಕೆಂಪು, ಶ್ಲೇಷ್ಮಾಧಿಕ್ಯದಿಂದ ಬಿಳಪು, ವಾತಾಧಿಕ್ಯದಿಂದ ಕಪ್ಪು, ಈ ಪ್ರಕಾರ ವರ್ಣಗಳುಂಟಾಗುತ್ತವೆ.

ಮತ್ತು ತಂದೆತಾಯಿಗಳು ಸೌಮ್ಯ ರೂಪಾಗಿದ್ದು, ಶಿಶುಗಳು ವಿಕಾರವಾಗುವದಕ್ಕೆ ಕಾರಣ.—ಸಂಯೋಗ ಕಾಲದಲ್ಲಿ ತಾಯಿಗೆ ಯಾತರಮೇಲೆ ದೃಷ್ಟಿ ಇರುತ್ತೋ ಅದೇ ರೂಪು ಶಿಶುವಿಗೆ ಉಂಟಾಗುತ್ತದೆ.

ಶರೀರದಲ್ಲಿ ಸಪ್ತಧಾತುಗಳು ವೃದ್ಧಿಯಾಗುವದಕ್ಕೆ ಅಗ್ನಿಯೇ ಮುಖ್ಯಕಾರಣ.—ಷಡ್ರಸಪಾಕದಿಂದ ಸಪ್ತಧಾತುಗಳಿಗೆ ವೃದ್ಧಿಯುಂಟಾಗುತ್ತದೆ. ಇಂಥಾ ಅಗ್ನಿಮುಖದಲ್ಲಿ ಬಿದ್ದ ಮಾಂಸವು, ಶಾಕಪಾಕಾದಿಗಳು, ಫಲಾದಿಗಳು, ಅನೇಕವಿಧವಾದ ಪದಾರ್ಥಗಳು ಇವುಗಳೆಲ್ಲಾ ಜೀರ್ಣಿಸುತ್ತಲಿರುವಾಗ ಉದರದಲ್ಲಿರುವ ಗರ್ಭವು ಯಾವಕಾರಣದಿಂದ ಜೀರ್ಣಿಸುವದಿಲ್ಲವೆಂದರೆ—ಪ್ರಾಣಾಪಾನಸಂಧಿಗಳಲ್ಲಿರುವ ಜಠರಾಗ್ನಿಯು ಊರ್ಧ್ವಮುಖವಾಗಿರುತ್ತದೆ; ಕೆಳಭಾಗದಲ್ಲಿ ಗರ್ಭವಿದ್ದು ಮಧ್ಯಭಾಗದಲ್ಲಿ ಜಲವಿರುತ್ತದೆ; ವಾಯುವಿನಿಂದ ಜಲ ಅಭಿವೃದ್ಧಿಯಾಗುತ್ತಾ ಇರುವದ್ದರಿಂದ ಅಗ್ನಿಮುಖದಲ್ಲಿ ಗರ್ಭವು ಸಿಕ್ಕುವದಿಲ್ಲ.

ಗರ್ಭದಲ್ಲಿರುವ ಶಿಶುವು ಇಂಥಾದ್ದೆಂದು ತಾಯಿಯ ರೂಪಲಕ್ಷಣದಿಂದ ಹೇಳುವ ಕ್ರಮ.—ಗರ್ಭಿಣಿಯ ಕೈಕಾಲುಗಳು ಕೃಶವಾಗಿ ಯೆಲ್ಲಾ ಪದಾರ್ಥಗಳಲ್ಲಿಯೂ ಮತ್ತು ಸುವಾಸನೆ ಪದಾರ್ಥದಲ್ಲೂ ಇಚ್ಛೆ ಯುಂಟಾಗಿ ಸ್ವಲ್ಪ ಆಹಾರ ತೆಗದುಕೊಂಡು, ಪಿತ್ತಾಧಿಕವಾಗಿ ಮೂರ್ಛೆ, ವಾಂತಿ, ಜವರು, ಹೊಟ್ಟೆಯಲ್ಲಿ ಅದರುವದು ಈ ಲಕ್ಷಣಗಳು ಕಂಡರೆ ಬಲಭಾಗದಲ್ಲಿ ಗಂಡುಶಿಶು ಇದೆಯೆಂದು ತಿಳಿಯಬೇಕು. ತಾಂಬೂಲದಲ್ಲಿ ಇಚ್ಛೆ, ಮೆತ್ತಗೆ ಇರುವ ಹಾಸಿಗೆಯಲ್ಲೂ, ಅನೇಕ ರಂಗುಗಳಲ್ಲೂ, ರಸಗಳಲ್ಲೂ ಪುಷ್ಪಗಳಲ್ಲೂ ಸಹ ಅಪೇಕ್ಷೆ, ನಾಲ್ಕನೇ ತಿಂಗಳಿಂದ ದಿನವೊಂದಕ್ಕೆ ಯೆರಡು ಆಹಾರ ತೆಗದುಕೊಳ್ಳುವದು, ಸಂಭೋಗದಲ್ಲಿ ತೃಪ್ತಿ ಇಲ್ಲದಿರುವದು, ಬಹಳ ಮಾತು, ಈ ಲಕ್ಷಣಗಳಿದ್ದರೆ ಗರ್ಭದಲ್ಲಿ ಹೆಣ್ಣುಶಿಶು ಯೆಡಭಾಗದಲ್ಲಿ ಇರುತ್ತದೆಯೆಂದು ತಿಳಿಯಬೇಕು.

ಒಂಭತ್ತು ತಿಂಗಳವರಿಗೂ ಗರ್ಭ ಬೆಳೆಯುವದು ಸ್ವಾಭಾವಿಕವಾದದ್ದು. ಇದಕ್ಕೆ ಹೆಚ್ಚಾಗುವದು, ಬೆಳೆಯದೇ ನಿಲ್ಲುವದು, ಪುನಃ ಅಭಿವೃದ್ಧಿಗೆ ಬರುವದು ಇಂಥಾವುಗಳಲ್ಲಿ ಒಂಭತ್ತು ತಿಂಗಳಿಗೆ ಯೆಷ್ಟು ದಿವಸ ಹೆಚ್ಚಾಗುತ್ತದೋ ಅಷ್ಟು ಭಾಗ ಅವಯವಗಳು ಬೆಳೆಯತಕ್ಕ ದಿವಸಗಳೆಂದು ತಿಳಿಯಬೇಕು.

ಗರ್ಭಸ್ಥ ಶಿಶುವಿಗೆ ಮಲಮೂತ್ರವಾಗದೇ ಇರುವದಕ್ಕೆ ಕಾರಣ.—ಗರ್ಭ ಶರೀರಮಧ್ಯದಲ್ಲಿ ಮಲ, ಮೂತ್ರ ಮತ್ತು ಪಕ್ವಾಶಯ ಸಂಬಂಧಿವಾಯುವು ಸಹ ಸ್ವಲ್ಪವಾಗಿರುವದರಿಂದ ಶ್ವಾಸ ಮಲ ಮೂತ್ರಗಳ ವಿಸರ್ಜನೆ ಮಾಡುವದಿಲ್ಲ.

ಗರ್ಭಸ್ಥ ಶಿಶು ರೋದನ ಮಾಡದೆ ಇರುವದಕ್ಕೆ ಕಾರಣ.—ಜರಾಯುವಿನಿಂದ ಮುಖವು ಆಚ್ಛಾದಿತವಾಗಿದೆ, ಮತ್ತು ಕಂಠಕ್ಕೆ ಕಫ ತುಂಬಿಕೊಂಡಿದೆ, ವಾಯುವಿನ ಮಾರ್ಗವು ತಡೆಯಾಗಿರುವದ್ದರಿಂದ ಸಹ ರೋದನ ಮಾಡುವದಿಲ್ಲ. ತಾಯಿಯ ಶ್ವಾಸೋಚ್ಛ್ವಾಸಗಳ ಮಾರ್ಗದಿಂದಲೇ ಶ್ವಾಸೋಚ್ಛ್ವಾಸವೂ ಚಲನವಲನವೂ ನಿದ್ರೆಯಿಂದ ನಿದ್ರೆಯೂ ಸಹ ಉಂಟಾಗುತ್ತೆ. ಗರ್ಭಸ್ಥ ಶಿಶುವಿನ ಅವಯವಗಳ ರಚನಾವಿಶೇಷ ಮತ್ತು ದಂತೋದ್ಗಮ ಮತ್ತು ಪತನ ಮತ್ತು ಅಂಗೈ ಅಂಗಾಲುಗಳಲ್ಲಿ ರೋಮಗಳು ಹುಟ್ಟದಿರುವಿಕೆ ಸಹ ಸ್ವಭಾವವಾಗಿರುತ್ತವೆ.

ಸ್ವಪ್ನ ಮೈಥುನದಿಂದ ಗರ್ಭೋತ್ಪತ್ತಿ ಲಕ್ಷಣ.—ಸ್ತ್ರೀಯು ಋತುಸ್ನಾನ ಮಾಡಿದ ೧೦ ದಿವಸದಲ್ಲಿ ಸ್ವಪ್ನದಲ್ಲಿ ಮೈಥುನ ಮಾಡಿದರೆ ಆ ಕಾಲದಲ್ಲಿ ಅವಳ ಶೋಣಿತವು ವಾಯುವಿನಿಂದ ಒಳಹೊಕ್ಕು ಗರ್ಭಾಶಯದಲ್ಲಿ ಬೀಳುವದ್ದರಿಂದ ಗರ್ಭೋತ್ಪತ್ತಿಯಾಗುತ್ತೆ. ಆದರೆ ಇದು ಮಾಂಸಗರ್ಭವೆಂದು ತಿಳಿಯತಕ್ಕದ್ದು.

ಕುಬ್ಜಾದಿಗಳು ಗರ್ಭದಲ್ಲಿ ಉತ್ಪತ್ತಿಯಾಗುವದಕ್ಕೆ ಕಾರಣ.—ವಾಯು ಪ್ರಕೋಪವಾದಾಗ ಗರ್ಭೋತ್ಪತ್ತಿಯಾದರೆ ಆ ಗರ್ಭವು ಕುಬ್ಜ, ಪಂಗು ಇತ್ಯಾದಿಗಳಾಗುತ್ತವೆ.

ಆದರೆ ಪ್ರಥಮ ಮಾಸದಲ್ಲಿ ಪೂರ್ವದಲ್ಲಿ ಹೇಳಿದ ಪ್ರಕಾರ ಕಲಲವಾದ್ದು, ೨ನೇ
ತಿಂಗಳಲ್ಲಿ ಪಂಚಭೂತಗಳೊಡನೆ ಕೇರಿ ಬುದ್ಬುದವೇ ಘನವಾಗಿ, ೩ನೇ ತಿಂಗಳಲ್ಲಿ ಪಿಂಡಾಕಾ
ರವಾಗಿ ಅಂಗಸೂಚಕವಾಗುತ್ತೆ; ೪ನೇ ತಿಂಗಳಲ್ಲಿ ಅಂಗಪ್ರತ್ಯಂಗ ವ್ಯಕ್ತವಾಗಿ, ೫ನೇ
ತಿಂಗಳಲ್ಲಿ ಮನಸ್ಸು ಪ್ರಬುದ್ಧವಾಗಿ ಸಪ್ತಧಾತುಗಳೂ ವೃದ್ಧಿಯಾಗಿ, ೬ನೇ ತಿಂಗಳಲ್ಲಿ ಬು
ದ್ಧಿ ವುಂಟಾಗಿ ಅಸ್ಥಿ ವೃದ್ಧಿಯಾಗಿ, ೭ನೇ ತಿಂಗಳಲ್ಲಿ ಕೇಶ ಮತ್ತು ಸಮಸ್ತ ಅಂಗಗಳೂ
ವ್ಯಕ್ತಕರವಾಗಿ, ೮ನೇ ತಿಂಗಳಲ್ಲಿ ಸಂಪೂರ್ಣರೂಪ ಹೊಂದಿ ನೇತ್ರದೃಷ್ಟಿ, ಓಜಸ್ಸುಗಳು
ವುಂಟಾಗಿ, ೯ನೇ ತಿಂಗಳಲ್ಲಿ ನಾಡಿಪಾಟವ ಆಗಿ, ೧೦ನೇ ತಿಂಗಳಲ್ಲಿ ಅಧೋಮುಖವಾಗಿ
ಜನಿಸುವದಕ್ಕೆ ಕಾರಣವಾಗುತ್ತೆ.

ಗರ್ಭಿಣೀ ನಿಯಮ.—ಗರ್ಭವಾದಾರಭ್ಯ ಪ್ರತ್ಯಹದಲ್ಲೂ ಶಾಂತ ಮತ್ತು ಸಂ
ತೋಷ ಮನಸ್ಸು,-ಅಲಂಕೃತ, ಶುಚಿರ್ಭೂತ, ಶುಭವಸ್ತ್ರ, ಮಂಗಳಕರವಾದ ದೇವತಾ
ಬ್ರಾಹ್ಮಣ ಗುರುವಿಶ್ವಾಸ ಉಳ್ಳವಳಾಗಿರಬೇಕು; ಮಲಿನ, ಅಂಗವಿಹೀನ, ವಿಕಾರಾಂಗವುಳ್ಳವ
ರನ್ನಸ್ಪರ್ಶ ಮಾಡಕೂಡದು; ಕೋಪ ಬರತಕ್ಕಂಥಾಕಥೆ, ಮಾತು ಮುಂತಾದ್ದು ಆಡಬಾ
ರದು; ಶುಷ್ಕ, ಪರ್ಯುಷಿತ, ಉಷ್ಣಾಧಿಕ ಉಂಟಾಗುವ ಪದಾರ್ಥಗಳನ್ನು ಭುಂಜಿಸಬಾರ
ದು; ಜನರಿಗೆ ಗೋಚರವಾಗುವ ಹಾಗೆ ಬಹಿಸ್ಸಂಚಾರವು, ಶೂನ್ಯಾಗಾರ, ವೃಕ್ಷರಿಗೆ, ಸ್ಮಶಾ
ನ, ವೃಕ್ಷ, ಪರ್ವತ, ಇವುಗಳಿಗೆ ಹೋಗಬಾರದು; ಅತಿಕ್ರೋಧದಿಂದ ಕೆಲಸಗಳನ್ನೂ, ಸಂ
ಭಾಷಣಗಳನ್ನೂ ಮಾಡಬಾರದು; ಬಹಳ ಯತ್ತರವಲ್ಲದ ಮೃದುವಾದ ಶಯನಾಸನಗಳ
ನ್ನೂ ಮತ್ತು ಆಹಾರದಲ್ಲಿ ದ್ರವವಾಗಿಯೂ ಮಧುರವಾಗಿಯೂ ಸ್ನಿಗ್ಧವಾಗಿಯೂ ದೀಪನೆ
ಕರವಾಗಿಯೂ ಹೃದ್ಯವಾಗಿಯೂ ಇರತಕ್ಕ ಪದಾರ್ಥಗಳನ್ನು ಭುಂಜಿಸಬೇಕು.

ಮಾಸಭೇಧದಿಂದ ಆಹಾರ ತೆಗೆದುಕೊಳ್ಳತಕ್ಕ ಕ್ರಮ.—೧-೨-೩ನೇ
ತಿಂಗಳ ವರೆಗೂ ೬೦ ದಿವಸಗಳಲ್ಲಿ ಬೆಳೆಯತಕ್ಕ ಲಘುವಾದ ಧಾನ್ಯವನ್ನು ಪಾಯಸ ಮಾ
ಡಿಕೊಂಡು ಭುಂಜಿಸಬೇಕು; ೪ನೇ ತಿಂಗಳಲ್ಲಿ ಹಾಲು, ಬೆಣ್ಣೆ ಮಿಶ್ರಿತವಾದ ಪದಾರ್ಥಗಳು
೫ನೇ ತಿಂಗಳಲ್ಲಿ ಹಾಲು ತುಪ್ಪದಿಂದ ಮಾಡಿದ ಪದಾರ್ಥ; ೬ನೇ ತಿಂಗಳಲ್ಲಿ ತುಪ್ಪ ಮಿಶ್ರಿತ;
ವಾದ ಗಂಜಿ; ೭ನೇ ತಿಂಗಳಲ್ಲಿ ತುಪ್ಪದಿಂದ ಮಿಶ್ರಿತವಾದ ಪದಾರ್ಥ; ೮ನೇ ತಿಂಗಳಲ್ಲಿ ಹಾಲು
ತುಪ್ಪ, ಕೆನೆ, ಸಕ್ಕರೆ ಇವುಗಳಿಂದ ಮಾಡಿದ ಪದಾರ್ಥ; ೯ನೇ ತಿಂಗಳಲ್ಲಿ ಯವೆ, ಹಾಲು,
ಜಿಡ್ಡು, ಮಧುರ, ತುಪ್ಪ ಇವುಗಳಿಂದ ಮಾಡಿದ ಪದಾರ್ಥ, ಮತ್ತು ಅಧೋಮುಖ
ವಾಗುವಂತೆ ಪ್ರಸವವಾಗುವವರಿಗೂ ಮೇಲೆ ಹೇಳಿದ ಪ್ರಕಾರ ಆಯಾ ತಿಂಗಳಲ್ಲಿ ಸೇವಿ
ಸಬೇಕು.


ಪ್ರಸವ ಆದ ಮೇಲೆ ಶಿಶುವಿಗೆ ಮಾಡತಕ್ಕಕ್ರಮ.—ಪ್ರಸವವಾದ ಬಳಿ
ಕ ಶಿಶುವನ್ನ ಚಿನ್ನವನ್ನ ಕಾಸಿ ಅದ್ದಿದ ನೀರು ಅಥವಾ ಚಿನ್ನ ಹಾಕಿ ಕಾಸಿದ ನೀರಿನಿಂದ
ಚನ್ನಾಗಿ ತೊಳೆದು ತುಪ್ಪಕ್ಕೆ ಸೈಂಧವ ಹಾಕಿ ನೆಕ್ಕಿಸಬೇಕು. ಇದರಿಂದ ಕಫ ಪರಿಹಾರವಾ
ಗುತ್ತೆ. ತಲೆಗೆ ತುಪ್ಪವೇ ಆಗಲಿ ಅಥವಾ ಹರಳೆಣ್ಣೆ ಆಗಲಿ ಹತ್ತಿಬತ್ತಿಯನ್ನು ಅದ್ದಿ ನೆತ್ತಿ


ಬಾಯಿಯಲ್ಲಿ ಹಾಕಬೇಕು. ನಾಳವನ್ನ ೪ ಅಂಗುಲ ಪ್ರಮಾಣ ಬಿಟ್ಟು ಧಾರಾ ಕಟ್ಟಿ ಛೇದಿಸಿ ಅದು ಒಣಗಿ ಅದೇ ಬಿದ್ದಬಳಿಕ ಅದನ್ನ ರಕ್ಷಾರ್ಥವಾಗಿ ಶಿಶುವಿಗೆ ಕಟ್ಟಬೇಕು.

ಬಾಣಂತೀರಿಗೆ ಅವರವರ ಜಾತೀ ಪದ್ಧತೀಪ್ರಕಾರ ಆಹಾರವನ್ನು ಕೊಡಬೇಕು ಮತ್ತು ಗರ್ಭ ಇರುವ ಕಾಲದಲ್ಲಿ ಅಹಾರಗಳಲ್ಲಿ ಯಾವದು ಸಾಧನವಿರುತ್ತದೋ ಅದು ಅತಿ ಉಷ್ಣವಿಲ್ಲದಂತೆ ಸೇವಿಸಬೇಕು.


ದತ್ತಾತ್ರೇಯರು ಹೇಳಿರುವರೀತ್ಯಾ ಮನೋಭಾವವನ್ನು ಅಗ್ನಿಸ್ಥಾನದಲ್ಲಿ ತಿಳಿಯತಕ್ಕ ಲಕ್ಷಣ—.ಇದರ ಗ್ರಂಥವು ಈಕೆಳಗೆ ಬರಿಯಲ್ಪಡುತ್ತೆ.

ಮಧ್ಯದಲ್ಲಿ ನಾಡಿಗತಿಗಳು ಆಡಿದರೆ ವೈರಾಗ್ಯ.







ಇಂದ್ರದಿಕ್ಕೇ ಮೊದಲಾದ ದಿಕ್ಕುಗಳಲ್ಲಿ ಆಡುತ್ತಿದ್ದರೆ, ತತ್ತದ್ಗಳಗಳ ಫಲ ಲಕ್ಷಣ.—೧ ಪುಣ್ಯಚಿಂತೆ. ೨ ಪರಪೀಡೆ. ೩ ನಿದ್ರೆ, ಆಲಸ್ಯ, ಮದ, ಕ್ರೋಧ. ೪ ಪಾಪಚಿಂತೆ. ೫ ಕ್ರೀಡಾಚಿಂತೆ. ೬ ಗಮನಚಿಂತೆ. ೭ ಧನಚಿಂತೆ. ೮ ಧನಾಪೇಕ್ಷೆ, ಭೂಚಿಂತೆ.




ಕೇಸರದಲ್ಲಿ ಆಡಿದರೆ ಜಾಗರ.





ಎಂಟು ದಳಗಳಲ್ಲಿಯೂ ನಿಂತು ತಿರುಗುತ್ತಿದ್ದರೆ
ವಿದ್ಯೆ ಮತ್ತು ಮೋಕ್ಷಗಳ ಚಿಂತೆ.







ಕರ್ಣಿಕೆಯಲ್ಲಿ ಆಡಿದರೆ ಸ್ವಪ್ನ.







ಲಿಂಗದಲ್ಲಿ ಆಡಿದರೆ ಸುಷುಪ್ತಿ.




ಕಮಲದ ನಾಸಾಗ್ರದಲ್ಲಿ ಆಡಿದರೆ ಕ್ಷಯ ರೋಗ.
ವಾತ.
ಪಿತ್ತ.
ಶ್ಲೇಷ್ಮ.

ಕಮಲವನ್ನು ಬಿಟ್ಟು ಆಡಿದರೆ,
ಸುಖಿಯಾಗಿರುವವನಾದರೂ
ಮರಣವಂ ಪಡಿಯುತ್ತಾನೆ.







ಪ್ರಾಣಿನಾಂ ಮನೋಭಾವಪ್ರದರ್ಶಕ ನಾಡೀಗತಯಃ.–ಮನಸ್ಯಾಲೋಚಿತಂ ಯತ್ತು ಬ್ರೂಯಾದ್ವೈದ್ಯೋ ನೃಣಾಂ ಹಿ ತತ್ ॥ ಕರಸ್ಥಿತನಾಡ್ಯಾಂ ತು ಪದ್ಮಾಕಾರೇಣ ಭಾಸತೇ ॥ ದಳಾಷ್ಟಕ ಯುತೇ ಪದ್ಮೇ ಪ್ರಾಗಾದಿದಳಭೇದತಃ ॥ ಪೂರ್ವೇ ಮುಖೇ ಪುಣ್ಯಚಿಂತಾ ಆಗ್ನೇಯ್ಯಾಂ ಪರಪೀಡನಂ ॥ ನಿದ್ರಾಲಸ್ಯಮದಕ್ರೋಧಾ ನ್ವಿತೋಯಾ ಮ್ಯೇಕ್ಷದೇ ನೃಣಾಂ ॥ ನೈಋತ್ಯೇ ಪಾಪಚಿಂತಾಚ ಪಶ್ಚಿಮೇ ಕ್ರೀಡತೇ ಮನಃ ॥ ವಾಯವ್ಯೇ ಗಮನಸ್ನಾನಂ ಕೌಬೇರೇ ಧನಚಿಂತನಂ॥ ಈಶಾನ್ಯಾಂ ತು ಧನಾದೇಕ್ಷಾ ಧರಾಚಿಂತಾ ಚ ವರ್ತತೇ ॥ ಪದ್ಮಮಧ್ಯೇತು ವೈರಾಗ್ಯಂ ಕೇಸರೇಷ್ವಪಿ ಜಾಗರಂ ॥ ಕರ್ಣಿಕಾಯಾಂ ಸ್ವಪ್ನಚಿಂತಾ ಲಿಂಗೇ ಸುಪ್ತಿಸ್ತಥೈವಚ ॥ ದಳಾಷ್ಟಕೇ ಸ್ಥಿತಾ ಸಾಚೇದ್ವಿದ್ಯಾಮೋಕ್ಷಪ್ರಚಿಂತನಂ ॥ ತನ್ನಾಸಾಗ್ರೇ ಸ್ಥಿತಾ ಸಾ ಚೇನ್ಮಹಾರೋಗಂ ಪ್ರವಕ್ಷತೇ ॥ ತತ್ಪಂಕಜಂ ವಿಸೃಷ್ಟಂ ಚೇತ್ಸುಖೀ ಗಚ್ಛೇದ್ಯಮಾಲಯಂ ॥

ಸೂರ್ಯ ಚಂದ್ರ ಗ್ರಹಣಗಳನ್ನು ನಾಡೀಗತಿಗಳಿಂದ ತಿಳಿಯತಕ್ಕ ಲಕ್ಷಣ.–ನಿರೋಗಿಗಳಾದ ಸಕಲಜನರ ಕರಾಂಗುಷ್ಠಮೂಲವನ್ನು ಆಶ್ರಯಿಸಿಯಿರುವ ನಾಡಿಯು ಅಗ್ನಿಸ್ಥಾನದಲ್ಲಿ ವಕ್ರಚಕ್ರ ಚಪಲಚಕ್ರಗಳು ಆದಿಯಲ್ಲಿ ಇರದೇ ಗ್ರಹಣ ಸ್ಪರ್ಶಕಾಲ ಮೊದಲುಗೊಂಡು ಮೋಕ್ಷಕಾಲದವರಿಗೂ ಇರುತ್ತದೆ. ಯಾವದಿಕ್ಕಿನಲ್ಲಿ ಗ್ರಹಣವು ಸ್ಪರ್ಶವಾಗುತ್ತದೋ ಅದೇ ದಿಕ್ಕು ಮೊದಲುಮಾಡಿಕೊಂಡು ದಳಗಳು ಷುರುವಾಗಿ ಹ್ಯಾಗೆಹ್ಯಾಗೆ ಗ್ರಾಸಗಳು ಅಧಿಕವಾಗುತ್ತದೋ ಹಾಗೆಯೇ ದಳಗಳು ಅಧಿಕವಾಗುತ್ತಾ ಬರುತ್ತೆ. ಈದಳಗಳು ನೂರರವರಿಗೂ ಬಂದರೆ ಸಂಪೂರ್ಣಗ್ರಾಸವೆಂತಲೂ, ನೂರಕ್ಕಿಂತ ಹೆಚ್ಚುಕಡಮೆಯಾದರೆ ನ್ಯೂನಾಧಿಕಗ್ರಾಸವೆಂತಲೂ ಸಹ ತಿಳಿಯಬೇಕು. ಇದೇಮೇರೆ ಮೋಕ್ಷಕಾಲದಲ್ಲೂ ಯಾವದಿಕ್ಕಿನಿಂದ ಮೋಕ್ಷವಾಗುತ್ತದೋ ಆದಿಕ್ಕು ಮೊದಲುಮಾಡಿಕೊಂಡು ದಳಗಳು ಕಡಮೆಯಾಗುತ್ತಾ ಬಂದು ಕಾಣದೇಹೋಗಿ ಪೂರ್ವಪ್ರಕಾರ ಅಗ್ನಿಸ್ಥಾನದಲ್ಲಿ ಅಗ್ನಿಗತಿ ಬಂದರೆ ಶುದ್ಧಮಂಡಲವಾಯಿತೆಂದು ತಿಳಿಯತಕ್ಕದ್ದು.

ಇದೇ ವಕ್ರಚಕ್ರ ಚಪಲಚಕ್ರಗಳು ರಾಯಕೇತುಗಳೆಂದು ಮೊದಲೇ ಹೇಳಿದೆಯಷ್ಟೆ ಈ ಗ್ರಹಗಳು ಸೂರ್ಯ ಚಂದ್ರ ಗ್ರಹಗಳ ಕೆಳಗೆ ಅಡ್ಡವಾಗಿ ಬರುವದರಿಂದ ಸೂರ್ಯನ ಪ್ರಕಾಶವೂ ಚಂದ್ರನ ಪ್ರಕಾಶವೂ ಈ ಮಂಡಲಗಳ ಮೇಲೆ ಬಿದ್ದು ಅದರ ನೆಳಲು ಸಕಲಪ್ರಾಣಿಗಳ ಮೇಲೆ ಬೀಳುವದ್ದರಿಂದ ಸಕಲಜನಗಳಿಗೂ ಗ್ರಹಣಛಾಯೆಯು ಬಿದ್ದಿತುಯಂತ ತಿಳಿಯಬೇಕು. ಇದಕ್ಕೆ ದೃಷ್ಟಾಂತ—ದೀಪಕ್ಕೆ ಅಡ್ಡವಾಗಿ ಹಸರುಮುಂತಾದ ಬಣ್ಣಗಳುಳ್ಳ ಕನ್ನಡಿಯನ್ನು ಹಿಡಿದರೆ ಅದರ ನೆಳಲು ಹಿಡಿದವರ ಮೇಲೆ ಹ್ಯಾಗೆ ಬೀಳುತ್ತೆಯೋ ಅದೇಪ್ರಕಾರ ಗ್ರಹಗಳ ನೆಳಲು ಬೀಳುತ್ತೆ.

ಇದೇ ವಕ್ರ ಚಕ್ರ ಚಪಲಚಕ್ರಗಳ ಗತಿಗಳು ರೋಗಿಗಳ ನಾಡಿಯಲ್ಲಿ ಕಂಡದ್ದಾದರೆ ಅಗ್ನಿಮಾಂದ್ಯವೆಂತಲೂ, ಯಬ್ಬಾರೋಗಕ್ಕೂ ಇದೇಕಾರಣವೆಂತಲೂ ತಿಳಿಯುವದು. ಇದರಿಂದ ರೋಗದ ಘೋಗೆ ಮುಂಚಿತ್ತಾದ್ದನ್ನು ತೋರಿಸುತ್ತದೆ.





ಅಗ್ನಿವಿಕಾರ ಹುಟ್ಟಿ ಉಂಟಾಗುವ ಮಾರಿಕೋಪದ್ರವಕ್ಕೆ ವಿಷೂಚಿಕಾ, ವಾಂತಿಭೇದಿಯೆಂದು ಹಿಂದೂಜನಗಳು, ಕಾಲರಾಯೆಂದು ಇಂಗ್ಲಿಷ್‌ಜನಗಳು, ಹೈಜಾ ಲಾಬ್‌ಯೆಂದು ಮುಸಲ್ಮಾನರು ಸಹ ಹೇಳುತ್ತಾರೆ. ಇದು ವುಂಟಾಗುವದಕ್ಕೆ ಕಾರಣವೇನಂದರೆ—ಭಯದಿಂದಲೂ, ಶೋಕದಿಂದಲೂ, ಚಿಂತೆಯಿಂದಲೂ, ದುಃಖದಿಂದಲೂ, ಅತಿನಿದ್ರೆಯಿಂದಲೂ, ಜಾಗರಣೆಯಿಂದಲೂ, ಬಹಳ ಆಹಾರ ತಿನ್ನತಕ್ಕವನು ಸ್ವಲ್ಪತಿನ್ನುವದರಿಂದಲೂ, ಸ್ವಲ್ಪಆಹಾರ ತಿನ್ನತಕ್ಕವನು ಅತ್ಯಾಹಾರ ತಿನ್ನುವದರಿಂದಲೂ ಸಹ ಅಗ್ನಿವೈಷಮ್ಯ ಹುಟ್ಟಿ ಮೂರುವಿಧ ಗತಿಗಳಲ್ಲಿ ಚಕ್ರಾಕಾರವಾಗಿ ತಿರಗುತ್ತೆಯಾಗಿ ವಿಷೂಚಿಯೆಂದು ಹೆಸರು ಉಂಟಾಯಿತು. ಈ ರೋಗಪ್ರಾಪ್ತಿಯಾಗುವದಕ್ಕೂ, ಪ್ರಾಪ್ತಿಯಾಗದೇ ಇರುವದಕ್ಕೂ, ಪ್ರಾಪ್ತಿಯಾದ್ದು ಗುಣವಾಗುವದಕ್ಕೂ, ಗುಣವಾಗದೇ ಇರುವದಕ್ಕೂ ಸಹ ಮೇಲೆ ಹೇಳಿರುವ ರೀತಿ ಒಂದು ವೆರುಪದವ್ರೊಳಗಣ ಗತಿಯಿಂದ ತಿಳಿಯತಕ್ಕದ್ದು. ಇದರ ಅಸಾಧ್ಯವನ್ನು ರೂಪಲಕ್ಷಣದಿಂದ ತಿಳಿಯತಕ್ಕ ಕ್ರಮ.—ಈ ಉಪದ್ರವವು ತಗಲಿದ ಕಾಲದಲ್ಲಿ ಯಾವನಿಗೆ ಕಣ್ಣುಗಳು ವೊಳಸರಿಯುವವೋ, ಹೀನಸ್ವರ ಹುಟ್ಟುವದೋ, ವಾಂತಿ ಹೆಚ್ಚುತ್ತಾ ಬರುವದೋ, ಮುಖದಲ್ಲಿ ರಸವಿಲ್ಲದೆಯಿರುವದೋ, ಯೆಬ್ಬಿಸಿದಾಗ ಕುತ್ತಿಗೆ ಕಳಸ ಬೀಳುವದೋ, ಕೈಕಾಲುಗಳು ಜೋಲ್ಬಿಬೀಳುವದೋ, ಉಗುರುಗಳು ಕಪ್ಪಾಗುವದೋ, ಹಿಂಪೆರಳುಗಳಲ್ಲಿ ಅಡ್ಡವಾಗಿರುವ ರೇಖೆಗಳು ಉದ್ದವಾಗಿ ತೋರುವವೋ, ಕೈಕಾಲುಗಳ

ಲ್ಲಿ ತನು ಉಂಟಾಗುವದೋ, ಬೆರಳುಗಳನ್ನ ಘಟ್ಟಿಯಾಗಿ ಒತ್ತಿನೋಡಿದರೇ ನೋವು ಕಾಣದೆ ಇರುವದೋ, ರೋಮಗಳು ಕೀಳಲ್ಪಟ್ಟರೆ ವ್ಯಥೆಯಿಲ್ಲದೆ ಇರುವದೋ, ಅಂಥಾವನಿಗೆ ಗಂಡಕಾಲವೆಂದರಿಯುವದು.

ನಾಡಿಗೆ ಸಹಾಯಭೂತವಾದ ಸಪ್ತಸ್ಥಾನಪರೀಕ್ಷೆಯನ್ನು ಹೇಳಿ ಇದೆವಷ್ಟೆ. ಈಗ ಅಧಿಭೂತವಾದ ನಾಡೀಗತಿಗಳನ್ನು ತಿಳಿಯಪಡಿಸುತ್ತೆ.

ಪುರುಷನ ಪ್ರಕೃತಿ ಬೇರೆಯಾಗಿ ಅಗ್ನಿಸ್ಥಾನದಲ್ಲಿ ಮೊದಲು ಯಾವಗತಿ ಬರುತ್ತದೋ ಅದರ ವೈಷಮ್ಯದಿಂದುಂಟಾಗಿರುವ ರೋಗವೆಂದು ತಿಳಿಯಬೇಕು.

೧. ವಾತಪ್ರಕೃತಿಯಾಗಿ ಅಗ್ನಿಸ್ಥಾನದಲ್ಲಿ ಮೊದಲು ವಾತಗತಿ ಕಂಡರೆ ಅದು ಸ್ವಾಭಾವಿಕಗತಿಯೆಂದು ತಿಳಿಯಬೇಕು. ಇದಲ್ಲದೆ ದೇಶಕಾಲಾದಿಗಳಿಂದ ಉಂಟಾದ ವೈಷಮ್ಯವನ್ನು ಆಲೋಚನೆಯಿಂದ ಗೊತ್ತುಮಾಡಿಕೊಳ್ಳಬೇಕು.

ಅಗ್ನಿಸ್ಥಾನದಲ್ಲಿ ಪ್ರಕೃತಿ ಬೇರೆಯುಳ್ಳವನಿಗೆ ವಾತಗತಿ ಮೊದಲು ಕಂಡರೆ ವಾತರೋಗವೆಂದು ತಿಳಿಯಬೇಕು. ಈ ರೋಗಕ್ಕೆ ಆಗುವ ಲಕ್ಷಣ —ರೋಮಾಂಚವಾಗುವದು, ನಡುಗುವದು, ಭ್ರಮೆ, ಪ್ರಲಾಪ, ಆಕಳಿಕೆಗಳು ತೋರುವವು ; ತಲೆ, ನಡುವು, ಪೇರೊಡೆ, ಪಾರ್ಶ್ವ ಇವುಗಳಲ್ಲಿ ನೋವು ; ಕಿರಿದೊಡೆಯಲ್ಲಿ ಹಗ್ಗದಿಂದ ಬಿಗಿದಂತೆ ಇರುವದು; ನೀರಡಿಕೆಯಾಗುವದು; ಕಣ್ಣು, ಚರ್ಮ, ಮುಖ, ಮಲ, ಮೂತ್ರ ಇವುಗಳು ಕಪ್ಪಾಗಿರುವವು; ಬಾಯಿವಗರು, ಹಲ್ಲಿನಲ್ಲಿ ನೋವು, ಪುಡಿಕೆಮ್ಮು ಸಹ ಆಗುವದು.

೨. ಪಿತ್ತಪ್ರಕೃತಿಯಾಗಿ ಅಗ್ನಿಸ್ಥಾನದಲ್ಲಿ ಪಿತ್ತಗತಿ ಕಂಡರೆ ಅದು ಸ್ವಾಭಾವಿಕಗತಿ. ಇದಲ್ಲದೆ ದೇಶಕಾಲಾದಿಗಳಿಂದ ವೈಷಮ್ಯವನ್ನು ತಿಳಿಯಬೇಕು. ಪ್ರಕೃತಿಬೇರೆಯಾಗಿ ಅಗ್ನಿಸ್ಥಾನದಲ್ಲಿ ಪಿತ್ತಗತಿ ಮೊದಲು ಕಂಡರೆ ಪಿತ್ತರೋಗವೆಂದು ತಿಳಿಯಬೇಕು. ಅದಕ್ಕೆ ಉಂಟಾಗುವ ಲಕ್ಷಣಗಳು.—ಮೈಯಲ್ಲಿ ತಾಪ, ನೀರಡಿಕೆ, ಹಂಮ್ಮೈಸುವಿಕೆ, ಅರುಚಿ, ಭ್ರಮೆ, ಕಳವಳಗಳು ಹುಟ್ಟುವವು ; ಮೂಗು, ಕೊರಳು, ತುಟಿ, ಬಾಯಿ ಇವುಗಳಲ್ಲಿ ಹೊಪ್ಪಳೆಗಳು ಆಗುವವು; ತಂಪು ಪದಾರ್ಥಗಳಲ್ಲಿ ಇಚ್ಛೆ; ಮಲ, ಕಣ್ಣು, ಉಗರು, ಚರ್ಮ ಇವುಗಳಲ್ಲಿ ಹಳದೀಬಣ್ಣ ಉಂಟಾಗುವದು; ಹುಳಿತೇಗು, ಅತಿಸಾರ, ಇವೆಲ್ಲಾ ಇರುವವು.

೩. ಶ್ಲೇಷ್ಮಪ್ರಕೃತಿಯಾಗಿ ಮೊದಲು ಅಗ್ನಿಸ್ಥಾನದಲ್ಲಿ ಶ್ಲೇಷ್ಮಗತಿ ಕಂಡರೆ ಅದು ಸ್ವಾಭಾವಿಕಗತಿ. ಇದಲ್ಲದೆ ದೇಶಕಾಲಾದಿಗಳಿಂದ ವೈಷಮ್ಯವನ್ನು ಗೊತ್ತುಮಾಡಿಕೊಳ್ಳಬೇಕು. ಇದಕ್ಕೆ ಉಂಟಾಗುವ ಲಕ್ಷಣಗಳು.—

ಉಬ್ಬಸ, ಕೆಂಮು, ನೆಗಡಿ, ಬಾಯಿಯಲ್ಲಿ ನೀರುಬರುವದು, ಅರುಚಿ, ವಮನ, ನಿದ್ರೆ, ಮೈಭಾರ, ಎದೆಯಲ್ಲಿ ಚುಚ್ಚುವದು, ಮತ್ತು ಧಪ್ಪವಾಗುವದು; ಬಾಯಿಯಲ್ಲಿ ಸೀ, ಛಳಿ, ರೋಮಾಂಚ ಇವುಗಳು ತೋರುವವು; ಮಲ, ಕಣ್ಣು, ಚರ್ಮ, ಉಗುರು ಇವುಗಳು ಬಿಳುಪಾಗಿ ಇರುವವು; ಉಷ್ಣ ಪದಾರ್ಥದಲ್ಲಿ ಇಚ್ಛೆ.

ದ್ವಂದ್ವಜ, ಸಂಕಲಿತ, ತ್ರಿದೋಷ, ಇಂಥಾ ಪ್ರಕೃತಿಯಾಗಿ ಅಗ್ನಿಸ್ಥಾನದಲ್ಲಿ ಮೊದಲು ಆಯಾಗತಿಗಳು ಕಂಡರೆ ಅದು ಸ್ವಾಭಾವಿಕಗತಿಯೆಂದು ತಿಳಿಯಬೇಕು. ಇದಲ್ಲದೆ ವೈಷಮ್ಯಗತಿಗಳನ್ನು ವಿವರಿಸುತ್ತೆ.

೪. ಪ್ರಕೃತಿ ಬೇರೆಯಾಗಿ ಅಗ್ನಿಸ್ಥಾನದಲ್ಲಿ ಮೊದಲು ವಾತಪಿತ್ತಗತಿ ಕಂಡರೆ ಅದು ವಾತಪಿತ್ತರೋಗವೆಂದು ತಿಳಿಯಬೇಕು. ಇದಕ್ಕೆ ಉಂಟಾಗುವ ಲಕ್ಷಣಗಳು.—ನೀರಡಿಕೆ, ಮರುಗುವದು, ಕೊರಳು ಬಾಯಿ ಸಹ ಒಣಗುವದು, ರೋಮಾಂಚವಾಗುವದು, ಅನಿದ್ರೆ, ವಮನ; ಕೀಲು, ತಲೆ ಇವುಗಳಲ್ಲಿ ನೋವು, ಆಕಳಿಕೆ, ಹೊಟ್ಟೆಯುಬ್ಬರ ಸಹ ಆಗುವವು.

೫. ಪ್ರಕೃತಿ ಭೇಧವಾಗಿ ಅಗ್ನಿಸ್ಥಾನದಲ್ಲಿ ಮೊದಲು ಶ್ಲೇಷ್ಮವಾತಗತಿ ಕಂಡರೆ ಅದು ಶ್ಲೇಷ್ಮವಾತರೋಗವೆಂದು ತಿಳಿಯಬೇಕು. ಇದಕ್ಕೆ ಆಗುವ ಲಕ್ಷಣ.—ಮತ್ತಾಗಿ ಮಲಗುವದು, ಸಂತಾಪ, ನೆತ್ತಿ, ಸಂಧಿಗಳಲ್ಲಿ ನೋವು, ಭಾರ, ನೆಗಡಿ, ಕೆಂಮು, ಅರುಚಿ, ಶ್ವಾಸ, ನಿದ್ರೆ, ಬೆವರುಯಿಲ್ಲದಿರುವದು ಸಹ ಉಂಟಾಗುವವು.

೬. ಪ್ರಕೃತಿ ಬೇರೆಯಾಗಿ ಅಗ್ನಿಸ್ಥಾನದಲ್ಲಿ ಮೊದಲು ಪಿತ್ತಶ್ಲೇಷ್ಮಗತಿ ಕಂಡರೆ ಅದು ಪಿತ್ತಶ್ಲೇಷ್ಮರೋಗವೆಂದು ತಿಳಿಯಬೇಕು. ಈ ರೋಗಕ್ಕೆ ಆಗುವ ಲಕ್ಷಣ.—ದೇಹದಲ್ಲಿ ಶೈತ್ಯ, ಜ್ವಾಲೆ, ಬೆವರು, ಜಡತ್ವಗಳು ತೋರುವವು; ನಾಲಿಗೆಯಲ್ಲಿ ಅರುಚಿ, ಕೆಮ್ಮು, ಬಾಯಾರಿಕೆ, ತೂಕಡಿಕೆ ಸಹ ಆಗುವವು.

೭. ಪ್ರಕೃತಿ ಬೇರೆಯಾಗಿ ಅಗ್ನಿಸ್ಥಾನದಲ್ಲಿ ವಿಷಮಗತಿ ಕಂಡರೆ ವಿಷಮರೋಗವೆಂದು ತಿಳಿಯಬೇಕು. ಇದರ ಲಕ್ಷಣ.—ಸರ್ವಕಾಲದಲ್ಲೂ ಅಂತರ್ವೇಗ, ಅಸ್ಥಿಯೊಳಗೆ ನೋವು, ಹಗೆಯೊಳಗೆ ಮಾತಾಡಿದಂತೆ ಕೇಳುವದು, ಕಣ್ಣುಗಳು ಬಳಕ್ಕೆ ಯಳದುಕೊಳ್ಳುವದ್ದು, ನಾಲಿಗೆ ಬಳಕ್ಕೆ ಯಳಿಯುವದು; ಮತ್ತು ಬಹಿರ್ವೇಗಲಕ್ಷಣ.—ಸರ್ವಕಾಲದಲ್ಲೂ ಒಂದೇ ರೀತಿಯಾಗಿ ರೋಗವು ಕಾಣಿಸುವದು, ದಿನದಿನಕ್ಕೆ ರೋಗಾಧಿಕ್ಯವಾಗುವದು, ಕೆಲವುಕಾಲದಲ್ಲಿ ಪ್ರಕೃತಿ ಸರಿಯಾಗಿರುವದು, ಪುನಃ ಪೂರ್ವದಂತೆ ಕಾಣಿಸುವದು, ಈ ರೀತಿ ಆಗುತ್ತೆ.

೮. ಪ್ರಕೃತಿ ಭೇದವಾಗಿ ಅಗ್ನಿಸ್ಥಾನದಲ್ಲಿ ತ್ರಿದೋಷಗತಿ ಕಂಡರೆ ಅದು ತ್ರಿದೋಷ ರೋಗವೆಂದು ತಿಳಿಯಬೇಕು. ಇದರ ಲಕ್ಷಣ.—ಅಂಗ, ಸಂಧಿ, ಅಸ್ಥಿ, ನೆತ್ತಿಗಳಲ್ಲಿ ನೋವು, ನೀರಡಿಕೆ ಸಹ ಬಂದು ಕಾಲದಲ್ಲಿ ತೋರಿ ಮತ್ತೊಂದು ಕಾಲದಲ್ಲಿ ನೀರಡಿಕೆ ಇಲ್ಲದೆ ಇರೋದು; ತೂಗಡಿಕೆ, ಅರುಚಿ, ಪ್ರಲಾಪ, ಗಂಟಲೊಳಗೆ ಕೆರೆಯುವಿಕೆ, ಕಿವಿಯಲ್ಲಿ ನೋವು, ಕಣ್ಣುಗಳು ಕೆಂಪಾಗಿರುವದು ಮತ್ತು ಹಳದೀರಂಗು, ಗಂಟಲಲ್ಲಿ ರಕ್ತ ಮಿಶ್ರವಾಗಿ ಕಫ ಬೀಳುವರೀತಿ, ಕಫದಲ್ಲಿ ಹಳದೀವರ್ಣವು ಮತ್ತು ನಾನಾವರ್ಣವು, ಮೂರ್ಛೆ, ರಾತ್ರಿಯಲ್ಲಿ ನಿದ್ರಾಭಾವ, ನಾಲಿಗೆ ಬೆಂದಂತೆಯಿರುವಿಕೆ, ಬೆರಳಿನಿಂದ ಮುಟ್ಟಿ ನೋಡಲು ನಾಲಿಗೆಯಲ್ಲಿ ಕಠಿಣ ಭಾವ, ಮೈಯಲ್ಲಿ ಶಾಮವರ್ಣ, ಮೈವಶದಹಾಗೆ ಇರುವದು, ಬಾಯಿಯಲ್ಲಿ ಹುಗಳು, ಮುಖದಲ್ಲಿ ಕಾಂತಿ, ಕಪ್ಪು; ದೌರ್ಬಲ್ಯ, ಶ್ವಾಸಕಾಸ ಸಹ ತೋರುವವು.

ಈ ಎಂಟು ಬಗೆಯನ್ನು ತಿಳಿದು ರೋಗವನ್ನು ತಿಳಿಯುವ ಕ್ರಮ.—

ಮನುಷ್ಯನ ಹಸ್ತನಾಡಿಯು ಅಗ್ನಿಸ್ಥಾನದಲ್ಲಿ ಶ್ಲೇಷ್ಮಗತಿ ಹನ್ನೆರಡು, ಪಿತ್ತಗತಿ ಹನ್ನೆರಡು, ವಾತಗತಿ ಮೂರು ಬಂದರೆ ಸ್ವಾಭಾವಿಕಗತಿಯೆಂದು ತಿಳಿಯತಕ್ಕದ್ದು. ಹನ್ನೆರಡಕ್ಕೆ ಹೆಚ್ಚಾಗಿ ಗತಿ ಬಂದರೆ ಉಷ್ಣರೋಗವೆಂತಲೂ, ಹನ್ನೆರಡಕ್ಕೆ ಕಡಮೆಯಾಗಿ ಗತಿ ಬಂದರೆ ಶೀತರೋಗವೆಂತಲೂ ತಿಳಿಯಬೇಕು. ಮತ್ತು ಇನ್ನೊಂದು ವಿಧವೆಂತೆಂದರೆ— ಅಗ್ನಿ ಸ್ಥಾನದಲ್ಲಿ ಹನ್ನೆರಡಕ್ಕೆ ಕಡಮೆಯಾಗಿಯೂ, ಸೂಕ್ಷ್ಮವಾಗಿಯೂ, ಮಂದವಾಗಿಯೂ ಗತಿಗಳು ಕಂಡರೆ ಶೀತರೋಗವೆಂದು ತಿಳಿಯಬೇಕು. ಗತಿಗಳು ಹನ್ನೆರಡಕ್ಕೆ ಅಧಿಕವಾಗಿಯೂ, ವೇಗಯುಕ್ತವಾಗಿಯೂ, ಬಿಸಿಯಾಗಿಯೂ ಕಂಡರೆ ಉಷ್ಣರೋಗವೆಂದು ತಿಳಿಯಬೇಕು.

೯. ಈಮೇಲೆ ಹೇಳಿದ ರೋಗಗಳು ಅಲ್ಲದೇ ತೀಕ್ಷ್ಣಾಗ್ನಿಗೆ ಎಂಭತ್ತು ವಿಧ, ವಿಷಮಾಗ್ನಿಗೆ ನೂರಇಪ್ಪತ್ತು ವಿಧ, ಮಂದಾಗ್ನಿಗೆ ನೂರ ಅರವತ್ತು ವಿಧವಾದ ಮತ್ತು ಅನಂತರೋಗದ ಗತಿಗಳು ಕಾಣುತ್ತವೆಯಾಗಿ ಮೇಲೆ ಹೇಳಿದ ಎಂಟು ಪ್ರಕಾರವಾದ ವೈಷಮ್ಯದಿಂದುಂಟಾಗುವ ರೋಗಗಳ ಅಂತರ್ವೇಗ ಬಹಿರ್ವೇಗಗಳ ವಿಚಾರಗಳನ್ನು ಮಾಡುತ್ತಿರಬೇಕು. ಸಕಲರೋಗಗಳನ್ನೂ ರೂಪಲಕ್ಷಣದಿಂದ ತಿಳಿಯತಕ್ಕದ್ದಲ್ಲದೆ ಶರೀರವನ್ನು ಮುಟ್ಟಿನೋಡಿ ಯಾವಯಾವ ಸ್ಥಳಗಳಲ್ಲಿ ನೋವು ಇರುವದೋ, ಗ್ರಂಥಿನರಗಳ ಬಿಗಿತಯಿರುವ ಅವಯವಗಳನ್ನೂ, ನರ

ಗಳು ಸಡಲಿಯಿರುವದನ್ನೂ ಸಹ ನೋಡಿ ತಿಳಿದುಕೊಳ್ಳಬೇಕು. ಮತ್ತು ರೋಗಗಳ ಕಾರಣ, ದೋಷವೈಷಮ್ಯ, ಅದರ ಹೆಸರು ಇವುಗಳನ್ನು ರೋಗಿಯಿಂದಲೂ, ಆತನ ಕಡೆ ಜನರಗಳಿಂದಲೂ ಮತ್ತು ಐದುವಿಧವಾದ ಜ್ಞಾನದಿಂದಲೂ ತಿಳಿಯಬೇಕು. ಮತ್ತು ಯಾವರೋಗವನ್ನಾದರೂ ಒಂದೇವಿಧವಾಗಿ ನೋಡಿ ನಿರ್ಣಯವನ್ನು ಮಾಡಕೂಡದು. ಯಾತಕ್ಕಂದರೆ—ಒಬ್ಬ ಮನುಷ್ಯನಿಗೆ ಅನ್ನವು ಜೀರ್ಣಿಸದೇ ಇದ್ದರೆ ಅಗ್ನಿಮಾಂದ್ಯವೆಂತಲೂ, ಮೈ ಅಧಿಕವಾಗಿ ಬಿಸಿಯಾಗಿದ್ದರೆ ಜ್ವರವೆಂತಲೂ, ಪ್ರವರ್ತಿ ಅಧಿಕವಾಗಿ ನಾನಾರಂಗು ಕಂಡರೆ ಅತಿಸಾರವೆಂತಲೂ, ಇನ್ನು ಅನೇಕ ವಿಧವಾದ ಹೆಸರುಗಳನ್ನು ಹೇಳುತ್ತಾರೆಯಾಗಿ ಈ ರೋಗಗಳನ್ನು ನಾಡೀಪರೀಕ್ಷೆ ಬಿಟ್ಟು ಮೇಲೆ ಹೇಳಿದ ಪ್ರಕಾರವಾಗಿಯೇ ನಿರ್ಣೈಸಲು ಅಶಕ್ಯವಾಗಿರುವದು. ಅದ್ದರಿಂದ ನಾಡಿಯೇ ಮುಖ್ಯ ಕಾರಣವಾಗಿರುವದು. ಮೇಲೆ ಹೇಳಿದ ಎಂಟುವಿಧದ ಗತಿಗಳಲ್ಲಿ ಯಾತರಿಂದ ರೋಗ ಉಂಟಾಗಿರುತ್ತದೋ ಅದನ್ನು ತಿಳಿದು, ಅಷ್ಟಸ್ಥಾನಪರೀಕ್ಷೆ, ದೇಶಕಾಲಾದಿಲಕ್ಷಣ, ಸಾಧ್ಯಾಸಾಧ್ಯ ಲಕ್ಷಣಗಳನ್ನು ಸಹ ಚನ್ನಾಗಿ ವೈದ್ಯನೇ ವಿಚಾರ ಮಾಡಬೇಕು.

ಅಷ್ಟವಿಧ ಜ್ವರಲಕ್ಷಣ ಮತ್ತು ಹೆಸರು.

೧. ಭಯದಿಂದ ಉಂಟಾಗುವ ಜ್ವರಕ್ಕೆ—ಪ್ರಲಾಪ, ತಲೆನೋವು, ಭಯ, ಜ್ವರ ಸಹ ಉಂಟಾಗುತ್ತೆ.

೨. ಔಷಧಸೇವನೆಯಿಂದ ಉಂಟಾಗುವ ಜ್ವರಕ್ಕೆ—ಮೂರ್ಛೆ, ಕ್ಷಯ, ಶೋಭೆಗಳುಂಟಾಗುತ್ತವೆ.

೩. ಕಾಮಜ್ವರಕ್ಕೆ—ನಿದ್ರೆ, ಲಜ್ಜೆ, ಅರುಚಿ, ಮೋಹ, ನೀರಡಿಕೆ, ಧೈರ್ಯಹಾನಿ, ರತಿಯಲ್ಲಿ ಅಪೇಕ್ಷೆ ಸಹ ಉಂಟಾಗುತ್ತೆ.

೪. ಕೋಪಜ್ವರಕ್ಕೆ—ತಲೆ ಅಳ್ಳಾಡುತ್ತೆ.

೫. ಭೂತಜ್ವರಕ್ಕೆ—ನಿರ್ನಿಮಿತ್ತವಾಗಿ ಅಳೋದು ಅಥವಾ ನಗೋದು ಸಹ ಆಗುತ್ತೆ.

೬. ಅಭಿಷಂಗ ಜ್ವರಕ್ಕೆ—ಕಾಂತಿಹೆಚ್ಚುವಿಕೆ, ಉರಿ, ಮದ, ಭ್ರಮೆ, ಬೊಕ್ಕೆಗಳು ಯೇಳೋಣ, ಅರುಚಿ, ಮೂರ್ಛೆ, ನೀರಡಿಕೆ, ಮೋಹ ಸಹ ಉಂಟಾಗುತ್ತೆ.

೭. ಶೋಕಜ್ವರಕ್ಕೆ—ಪ್ರಲಾಪ, ತಲೆನೋವು ಸಹ ಉಂಟಾಗುತ್ತವೆ.

೮. ವಿಷಜ್ವರಕ್ಕೆ—ಅತಿಸಾರ ಉಂಟಾಗುತ್ತದೆ.

ಮುಂದೆ ಹೇಳಿರುವ ರೋಗಗಳ ಸಂಬಂಧವಾದ ಚತುರ್ದಶ ಸನ್ನಿಗಳ ಆಕಾರವು, ಗತಿಗಳು, ಲಕ್ಷಣಗಳು ಸಹ ಪ್ರತ್ಯೇಕ ಪ್ರತ್ಯೇಕವಾಗಿ ತಿಳಿಸುತ್ತದೆ.

ನಂ.	ವಾತ. ◆	ಪಿತ್ತ. ●	ಶ್ಲೇಷ್ಮ. ■	
೧	ಬಲ ◆ ೧೨	ಮಂದ ● ೧೨	ಬಲ ■ ೧೨	ಸಂಧಿಕಸನ್ನಿಗೆ ಏಳುದಿನಗಳು ಅವಧಿಯು, ಮತ್ತು ಇದಕ್ಕೆ ಉಂಟಾಗುವ ಲಕ್ಷಣಗಳು ಯೇನಂದರೆ:— ಇದರ ಪೂರ್ವರೂಪದಲ್ಲಿ ಶೂಲೆ, ಶೋಷೆ, ವಾತ ವಿಶೇಷದಿಂದ ಉಂಟಾದ ನೋವು, ಶ್ಲೇಷ್ಮವು ಹೆಚ್ಚುವದು, ಸಂತಾಪ, ಬಲಹೀನತ್ವ, ಜಾಗರಣ, ಇವುಗಳು ಆಗುತ್ತವೆ.
೨	ಮಂದ ◆ ೧೨	ಬಲ ● ೧೨	ಬಲ ■ ೧೨	ತಾಂದ್ರಿಕಸನ್ನಿಗೆ ಇಪ್ಪತ್ತೈದು ದಿನಗಳು ಅವಧಿಯು, ಇದಕ್ಕೆ ಉಂಟಾಗುವ ಲಕ್ಷಣಗಳೇನಂದರೆ:— ಶೂಲ, ಜ್ವರ, ಕಫ, ನೀರಡಿಕೆ, ನಾಲಿಗೆದಪ್ಪ, ಕಶಿಣ, ಅರುಚಿ, ಅತಿಸಾರ, ಶ್ವಾಸ, ಬಳಲಿಕೆ, ತಾಪ, ಕರ್ಣಶೂಲೆ, ಗಂಟಲುಭಾರ, ಹಗಲು ರಾತ್ರಿ ಸಹ ನಿದ್ರೆಯಲ್ಲಿರುವಿಕೆ, ಈ ಲಕ್ಷಣಗಳು ಉಂಟಾಗುತ್ತವೆ. ಇದು ಕಷ್ಟಸಾಧ್ಯವಾಗುವದು.
೩	ಬಲ ◆ ೧೨	ಮಧ್ಯ ● ೧೨	ಮಂದ ■ ೧೨	ಪ್ರಲಾಪಸನ್ನಿಗೆ ಹದಿನಾಲ್ಕು ದಿನಗಳು ಅವಧಿಯು. ಇದಕ್ಕೆ ಉಂಟಾಗುವ ಲಕ್ಷಣಗಳು:— ಕಂಪ, ಅತಿಮಾತು, ಸಂತಾಪ, ತಲೆನೋವು, ಪ್ರಥಮಾತು, ನಿರ್ಮಲತ್ವ, ಅನ್ಯರಚಿಂತೆ, ಬುದ್ಧಿಹೀನತ್ವ, ಕಳವಳ, ಪ್ರಲಾಪ, ಈ ಪ್ರಕಾರ ಲಕ್ಷಣಗಳಿರುವವು. ಇದು ಕಷ್ಟಸಾಧ್ಯವು.
೪	ಮಂದ ◆ ೧೨	ಬಲ ● ೧೨	ಮಂದ ■ ೧೨	ಚಿತ್ತಭ್ರಮಸನ್ನಿಗೆ ಇಪ್ಪತ್ತೊಂದು ದಿನ ಅವಧಿಯು. ಇದಕ್ಕೆ ಉಂಟಾಗುವ ಲಕ್ಷಣಗಳು:— ಶರೀರಪೀಡೆ, ಭ್ರಮೆ, ಸಂತಾಪ, ಮೋಹ, ಬುದ್ಧಿಚಂಚಲ, ಕಣ್ಣುಚಂಚಲ, ನಗುವದು, ಕುಣಿಯುವದು, ಗಾನಮಾಡುವದು, ಪ್ರಲಾಪ, ಈ ಲಕ್ಷಣಗಳು ಇರುವವು. ಇದು ಕಷ್ಟಸಾಧ್ಯವು.

ನಂ.	ವಾತ.	ಪಿತ್ತ.	ಶ್ಲೇಷ್ಮ.	
೫	ಮಂದ ◆ ೧॥	ಮಂದ ● ೧॥	ಬಲ ▬ ೧॥	ಜಿಹ್ವಿಕಸನ್ನಿಗೆ ಹದಿನಾರು ದಿನ ಅವಧಿಯು. ಇದಕ್ಕೆ ಉಂಟಾಗುವ ಲಕ್ಷಣಗಳು:— ಕೆಮ್ಮು, ಶ್ವಾಸ, ಸಂತಾಪ, ನಾಲಿಗೆ ಕಠಿಣತ್ವ, ಮುಳ್ಳು ಇರುವದು, ಕಿವಡು, ಮೂಕತ್ವ, ಬಲಹೀನತ್ವ, ಈ ಲಕ್ಷಣಗಳು ಉಂಟಾಗುವವು. ಇದು ಕಷ್ಟಸಾಧ್ಯವು.
೬	ಮಂದ ◆ ೧॥	ಮಂದ ● ೧॥	ಬಲ ▬ ೧॥	ಕರ್ಣಿಕಸನ್ನಿಗೆ ತೊಂಭತ್ತು ದಿನಗಳು ಅವಧಿಯು. ಇದಕ್ಕೆ ಉಂಟಾಗತಕ್ಕ ಲಕ್ಷಣಗಳು:— ಪ್ರಲಾಪ, ಕಿವುಡು, ಕಂಠಗ್ರಹ, ಮೈನೋವು, ಶ್ವಾಸ, ಕೆಮ್ಮು, ಲಾಲಾ, ಜ್ವರ; ಕಿವಿ, ಗಲ್ಲ ಇವುಗಳಲ್ಲಿ ನೋವು, ಕರ್ಣಮೂಲದಲ್ಲಿ ಬಾವು, ಈ ಲಕ್ಷಣಗಳು ಉಂಟಾಗುವವು. ಈ ಕರ್ಣಮೂಲದ ಬಾವು ಜ್ವರ ಆದಿಯಲ್ಲಿ ಬಂದರೆ ಕಷ್ಟಸಾಧ್ಯ, ಮಧ್ಯದಲ್ಲಿ ಬಂದರೆ ಸಾಧ್ಯ, ಅಂತ್ಯದಲ್ಲಿ ಬಂದರೆ ಸುಖಸಾಧ್ಯವು.
೭	ಮಂದ ◆ ೧॥	ಬಲ ● ೧॥	ಬಲ ▬ ೧॥	ರುಗ್ದಾಹಸನ್ನಿಗೆ ಇಪ್ಪತ್ತು ದಿನಗಳು ಅವಧಿಯು. ಇದಕ್ಕೆ ಉಂಟಾಗುವ ಲಕ್ಷಣಗಳು:— ಪ್ರಲಾಪ, ಸಂತಾಪ, ಮೋಹ, ಮಂದತ್ವ, ಅನಾಯಾಸಶ್ರಮ, ಭ್ರಮಣೆ; ಕಂಠ, ತಲೆ, ಚುಬುಕ ಇವುಗಳಲ್ಲಿ ನೋವು, ನಿರಂತರದಾಹ, ಶ್ವಾಸ, ಕಾಸ, ಬಿಕ್ಕ ಇವುಗಳುಂಟಾಗುವವು. ಇದು ಕಷ್ಟಸಾಧ್ಯವು.
೮	ಬಲ ◆ ೧॥	ಮಂದ ● ೧॥	ಮಂದ ▬ ೧॥	ಅಂತಕಸನ್ನಿಗೆ ನೂರು ದಿನಗಳು ಅವಧಿಯು. ಇದಕ್ಕೆ ಉಂಟಾಗುವ ಲಕ್ಷಣಗಳು:— ನೀರಡಿಕೆ, ಸಂತಾಪ, ಮೋಹ, ತಲೆನಡುಗು, ಬಿಕ್ಕ, ಕೆಮ್ಮು, ಈ ಲಕ್ಷಣ ಉಂಟಾಗುವದು. ಇದು ಕಷ್ಟಸಾಧ್ಯವು.
೯	ಮಂದ ◆	ಬಲ ●	ಮಂದ ▬	ಭಗ್ನನೇತ್ರಕ ಸನ್ನಿಗೆ ಹತ್ತುದಿನಗಳು ಅವಧಿಯು. ಇದಕ್ಕೆ ಉಂಟಾಗುವ ಲಕ್ಷಣಗಳು:—

ನಂ.	ವಾತ.	ಪಿತ್ತ.	ಶ್ಲೇಷ್ಮ.	
				ಜ್ವರದಿಂದ ಬಲಕ್ಷಯ, ಸ್ಮೃತಿನಾಶ, ಶ್ವಾಸ, ವಕ್ರ ದೃಷ್ಟಿ, ಪ್ರಲಾಪ, ಭ್ರಮೆ, ಕಂಪ, ಕ್ಷೋಭೆ, ಇವುಗಳು ಉಂಟಾಗುವವು. ಇದು ಸಾಧ್ಯವು.
೧೦	ಬಲ	ಬಲ	ಮಂದ	ಕಂಠಕೂಜತ್ಸನ್ನಿಗೆ ಹದಿಮೂರು ದಿವಸಗಳು ಅವಧಿಯು. ಇದಕ್ಕೆ ಉಂಟಾಗುವ ಲಕ್ಷಣಗಳು:—
	▰	●	▬	
	೧೨	೧೨	೧೨	ತಲೆನೋವು, ಗಂಟಲುನೋವು, ದಾಹ, ಎಚ್ಚರಿಕೆ ತಪ್ಪೋಣ, ಕಂಪ, ಜ್ವರ, ರಕ್ತವಾತದಿಂದ ಪೀಡೆ, ಚುಬುಕಸ್ತಂಭ, ಸಂತಾಪ, ಪ್ರಲಾಪ, ಮೂರ್ಛೆ, ಈ ಲಕ್ಷಣಗಳು ಉಂಟಾಗುವವು, ಇದು ಸಾಧ್ಯವು.
೧೧	ಮಂ	ಬಲ	ಮಂದ	ರಕ್ತಷ್ಠೀವಿ ಸನ್ನಿಗೆ ಹತ್ತು ದಿನಗಳು ಅವಧಿಯು, ಇದಕ್ಕೆ ಉಂಟಾಗುವ ಲಕ್ಷಣಗಳು:—
	▰	●	▬	
	೧೨	೧೨	೧೨	ರಕ್ತದಿಂದ ಬಾಯಿತುಂಬುವದು, ಜ್ವರ, ವಾಂತಿ, ತೃಷ್ಣೆ, ಮೂರ್ಛೆ, ಶೂಲೆ, ಅತಿಸಾರ, ಬಿಕ್ಕು, ಹೊಟ್ಟೆಯುಬ್ಬರ, ಶಿರೋಭ್ರಮಣೆ, ತಾಪ, ಶ್ವಾಸ, ಜ್ಞಾನ ತಪ್ಪುವದು, ನಾಲಿಗೆ ಕಪ್ಪು ಅಥವಾ ಕೆಂಪು, ನಾಲಿಗೆಯಲ್ಲಿ ಮಂಡಲಾಕಾರವಾಗುವಿಕೆ, ಈ ಲಕ್ಷಣಗಳು ಉಂಟಾಗುವವು. ಇದು ಕಷ್ಟಸಾಧ್ಯವು.
೧೨	ಮಂ	ಬಲ	ಮಂದ	ಶೀತಾಂಗ ಸನ್ನಿಗೆ ಹದಿನೈದು ದಿನಗಳು ಅವಧಿಯು, ಇದಕ್ಕೆ ಉಂಟಾಗುವ ಲಕ್ಷಣಗಳು:—
	▰	●	▬	
	೧೨	೧೨	೧೨	ಶರೀರವು ತಣ್ಣಗೆ ಇರುವದು, ಕಂಪ, ಶ್ವಾಸ, ಬಿಕ್ಕು, ಅಂಗಶೈಥಿಲ್ಯ, ಸ್ವರಹೀನತ್ವ, ಅಂತರ್ದಾಹ, ಅನಾಯಾಸ ಶ್ರಮ, ಮನೋವ್ಯಥೆ, ಕೆಮ್ಮು, ವಾಂತಿ, ಅತಿಸಾರ, ಈ ಲಕ್ಷಣಗಳು ಉಂಟಾಗುವವು. ಇದು ಕಷ್ಟಸಾಧ್ಯವು.

ನಂ.	ವಾತ.	ಪಿತ್ತ.	ಶ್ಲೇಷ್ಮ
೧೩	ಬಲ	ಬಲ	ಬಲ
			
	೧೦	೧೦	೧೦

ಅಭಿನ್ಯಾಸ ಸನ್ನಿಗೆ ಹದಿನೈದು ದಿನಗಳು ಅವಧಿಯು. ಇದಕ್ಕೆ ಉಂಟಾಗುವ ಲಕ್ಷಣಗಳು:—

ತ್ರಿದೋಷದಿಂದ ಮುಖದ ಮೇಲೆ ಎಣ್ಣೆಬಸಿಯೋಣ, ನಿದ್ರೆ, ಪ್ರಲಾಪ, ಕಳವಳ, ಮತ್ತಾಗಿ ಮಲಗಿರುವದು, ಬಹು ಶ್ರಮದಿಂದ ಯಾವಾಗ್ಯಾದರೂ ಮಾತನಾಡುವದು, ಬಲನಾಶ, ಶ್ವಾಸಾದಿಗಳ ಅವರೋಧವಿರುವದು, ಈ ಲಕ್ಷಣಗಳಾಗುವವು. ಇದು ಕಷ್ಟಸಾಧ್ಯವು.

ಹಾರಿದ್ರಕ ಸನ್ನಿಯು ಪ್ರಬಲ ರೋಗವಾದ್ದರಿಂದ ಇದು ಅಸಾಧ್ಯವೆಂದು ಶಾಸ್ತ್ರದಲ್ಲಿ ಬರದಿರುತ್ತೆ, ಇದರ ಅಸಾಧ್ಯ ಲಕ್ಷಣವನ್ನು ರೋಗವು ಪ್ರಾಪ್ತವಾದ ಕಾಲದಲ್ಲಿ ನಾಡಿಯಿಂದ ತಿಳದುಕೊಳ್ಳಬೇಕು. ಇದು ತ್ರಯೋದಶ ಸನ್ನಿಗಳಲ್ಲಿ ಸೇರುವದಿಲ್ಲವು. ಮತ್ತು ಇದಕ್ಕೆ ಆಗುವ ಲಕ್ಷಣಗಳು ಯಾವವೆಂದರೆ—

ದೇಹ, ಉಗರು, ಕಣ್ಣು, ಕೈಕಾಲು ಇವುಗಳು ಅರಿಶಿನದ ಹಾಗೆ ಪೀತವರ್ಣವಾಗಿರುವದು. ಉಗಳು, ಕೆಮ್ಮುಗಳಿಂದ ಯುಕ್ತವಾಗಿರುವದು. ಇದೇ ಹಾರಿದ್ರಕ ಸನ್ನಿಯೆನ್ನಿಸಿಕೊಳ್ಳುತ್ತದೆ.

ಸಪ್ತಗತಿಗಳು ಒಂದೇ ಸ್ಥಾನದಲ್ಲಿ ಕೂಡಿದರೆ ಶರೀರಕ್ಕೆ ಲಯಕಾಲವೆಂದು ಮೇಲೆ ಹೇಳಿದಿಯಷ್ಟೆ ,ಈಗ ಇಲ್ಲಿ ಆ ಗತಿಗಳಂ ತಿಳಿಸಲುದ್ದಿಶ್ಯ ಒಬ್ಬ ಮನುಷ್ಯನ ಆಯುಸ್ಸನ್ನು ಗತಿಗಳಿಂದ ತಿಳದು ಇವನ ಗಂಡಕಾಲಗಳನ್ನು ಲಯಕಾಲದಲ್ಲಿ ಬರುವ ಸಪ್ತಗತಿಗಳನ್ನು ಸಹ ದೃಷ್ಟಾಂತ ಮೂಲಕವಾಗಿ ಮುಂಧೆ ಬರೆದಿರುವ ತಖ್ತೆಯಿಂದ ತಿಳಿಸಲ್ಪಡುತ್ತೆ, ಅದು ಹ್ಯಾಗಂದರೆ:—ಮೈಸೂರು ವಾಸಸ್ಥರಾಗಿದ್ದ ಹಾನಗಲ್ ಶ್ರೀನಿವಾಸರಾಯರೆಂಬವರು ಒಂದು ದಿನ ಅವರ ಮನೇ ಮುಂದೆ ನಾನು ಹೋಗುವ ಕಾಲದಲ್ಲಿ ನನ್ನನ್ನು ಕರದು ಹೇಳಿದ್ದೇನಂದರೆ—ನನಿಗೆ ಐವತ್ತೆಂಟು ವರ್ಷಗಳ ವಯಸ್ಸು ಆಯಿತು, ಆಗಿಂದಾಗ್ಯೆ ರೋಗಗಳು ಬಾಧಿಸುತ್ತವೆ. ನನ್ನ ತಾಯಿಗೆ ನಾನು ಒಬ್ಬನೇ ಮಗ, ನನ್ನ ತಾಯಿಯು ಬಹಳ ವೃದ್ಧಳು, ಇವಳು ತನಗೆ ಯಾವಾಗ ಮರಣ ಪ್ರಾಪ್ತಿಯಾಗುತ್ತದೆ, ಇದನ್ನು ನೀವು ತಿಳದು ಹೇಳಬೇಕು. ಮತ್ತು ಅವರಿಗೆ ಮುಂಚಿತವಾಗಿ ಮರಣ ಪ್ರಾಪ್ತಿಯಾಗುತ್ತದೋ ಅಥವಾ ನಾನೇ ಮುಂಚಿತವಾಗಿ ಹೋಗುತ್ತೇನೋ ತಾವು ದಯವಿಟ್ಟು ನಾಡೀಗತಿಗಳನ್ನು ಪರೀಕ್ಷಿಸಿ ಹೇಳಬೇಕೆಂದು ಕೇಳಿದ್ದರಿಂದ ಇವರ ತಾಯಿಯು ನಾಡೀಗತಿಗಳನ್ನು ಪರೀಕ್ಷಿಸಿ ನೋಡಿ ಇನ್ನೂ ಮೂರು ವರ್ಷಕ್ಕೆ ಇವರು ಕಾಲನ ದಂಡಕ್ಕೆ ಗೊಳಪಡುತ್ತಾರೆಂದು ಹೇಳುವಲ್ಲಿ, ಪುನಃ ಇವರ ತಾಯಿಯು ನಾನು ಅನುಭವಿಸುವದು ಕಷ್ಟವಾಗಿ

ತೋರುತ್ತದೆಂದು ಹೇಳಿದ್ದಕ್ಕೆ ದೇವರ ನಿಯಮವನ್ನು ತಪ್ಪಿಸುವದಕ್ಕೆ ಯಾರಿಂದಲೂ ಆಗಲಾರದು, ಆದಕಾರಣ ಹಿಂದೆ ಅನುಭವಿಸಿದ್ದನ್ನು ನಾಡೀಗತಿಗಳಿಂದ ತಿಳಿಸುತ್ತೇನೆಂದು ಹೇಳಿ ಆಕೆಯ ಕೈನಾಡೀಗತಿಗಳನ್ನು ನೋಡಿ ನಿಮಗೆ ಇಪ್ಪತ್ತನೇ ವರ್ಷದಲ್ಲಿ ಗರ್ಭ ಉಂಟಾಗಿ ಆ ಗರ್ಭದ ಆರನೇ ತಿಂಗಳಲ್ಲಿ ಬಹಳ ಕಷ್ಟ ತೋರಿ ವೊಂದು ತಿಂಗಳಿಗೆ ಗುಣಬಂದು ಅದೇ ಗರ್ಭವು ಬೆಳದು ಗಂಡು ಶಿಶುವು ಹುಟ್ಟಿತೆಂದು ಹೇಳಿದ್ದಕ್ಕೆ ಅವಳು ತನ್ನ ಮಗನ ಮತ್ತು ಆ ಕಾಲದಲ್ಲಿದ್ದವರ ಮುಂದೆ ಹೇಳಿದ್ದೇನಂದರೆ,—ತಾವು ಹೇಳಿದ ಮಾತು ನಿಶ್ಚಯವು, ಹ್ಯಾಗಂದರೆ,—ನನಿಗೆ ಮೂರು ಹೆಣ್ಣು ಮಕ್ಕಳು ಹುಟ್ಟಿದರು. ಅನಂತರ ನಾನು ಪುನಃ ಗರ್ಭವನ್ನು ಧರಿಸಿದೆನು. ಆ ಕಾಲದಲ್ಲಿ ನನ್ನ ಯಜಮಾನರು ಈ ಭಾರಿಯೂ ನನ್ನ ಹೆಂಡತಿಯು ಹೆಣ್ಣು ಮಗುವನ್ನು ಹೆತ್ತಿದ್ದೇ ಆದರೆ ಪುತ್ರೋತ್ಪಾದನೆ ಉದ್ದಿಶ್ಯ ಇನ್ನೊಬ್ಬಳನ್ನು ಮದುವೆಯಾಗುತ್ತೇನೆಂದು ಹೇಳಲಾಗಿ ಆ ಕಾಲದಲ್ಲಿ ನಮ್ಮ ಮನೆಯಲ್ಲಿ ವಾಸವಾಗಿದ್ದ ಕಾಸಮ್ಮನೆಂಬವಳ ಸಂಗಡ ಈ ವೃತ್ತಾಂತವನ್ನು ನಾನು ಹೇಳಿ ವ್ಯಸನ ಪಡುತ್ತಿರುವಲ್ಲಿ, ನಾನು ಬೇರೇ ಮಾರ್ಗವನ್ನು ಮಾಡುತ್ತೇನೆಂದಾ ನನಿಗೆ ಸಮಾಧಾನವನ್ನು ಮಾಡಿ ಕಳ್ಳಿ, ಸಾಸುವೆ ಈ ಎರಡು ಪದಾರ್ಥಗಳನ್ನು ನೀರಿನಲ್ಲಿ ಅರದು ಅರ್ಧ ತಂಬಿಗೆ ರಾಡಿಯನ್ನು ಕುಡಿಸಿದಳು. ಅದರಿಂದ ಆ ಕಾಲದಲ್ಲಿ ನನಿಗೆ ಬಹಳ ತಾಪಹುಟ್ಟಿ ರಕ್ತ ಮಾಂಸವು ಕತ್ತರಿಸುತ್ತಾ ಅತ್ಯಂತ ಸಂಕಟ ಪಡಿಸುತ್ತಿತ್ತು. ಇದನ್ನು ಕಂಡು ನಮ್ಮ ಯಜಮಾನರು ಶ್ರೀನಿವಾಸ ದೇವರಿಗೆ ನನಿಗೆ ಸುಖವಾಗಲೆಂದು ಪ್ರಾರ್ಥನೆಯಂ ಮಾಡಿದರು. ಆನಂತರ ದಿನದಿನಕ್ಕೆ ಆ ಉಪದ್ರವವು ಪರಿಹಾರವಾಗಿ ಗರ್ಭವು ಬೆಳದು ನೀನೇ ಹುಟ್ಟಿದೆ. ಇದೇ ಕಾರಣದಿಂದ ನಿನಗೆ ಶ್ರೀನಿವಾಸನೆಂದು ನಾವು ಕರಣವನ್ನು ಮಾಡಿದರೆಂದು ಹೇಳಿ ಮೂರು ವರ್ಷದ ನಂತರ ಅವರು ಮರಣವನ್ನು ಪಡದರು. ಈ ಭಾಗವನ್ನು ಇದೇ ಮೈಸೂರಲ್ಲಿ ವಾಸವಾಗಿರುವ ಇವರ ಮೊಮ್ಮಕ್ಕಳು ರಾಮರಾಯರನ್ನೂ ಮತ್ತು ಇವರ ಸ್ವಂತ ಬಂಧುಗಳನ್ನೂ ಕೇಳಿದರೆ ತಿಳಿಯಬರುತ್ತೆ.

ಈಚೆಗೆ ಮೇಲೆ ಹೇಳಲ್ಪಟ್ಟ ಶ್ರೀನಿವಾಸರಾಯರಿಗೆ ಉಪದ್ರವವಾಗಿರುವಲ್ಲಿ ನನ್ನನ್ನು ಕರಿಸಿಕೊಂಡದ್ದರಿಂದ ಧಾತು ಪರೀಕ್ಷೆಯಂ ಮಾಡಿ ದೋಷವೈಷಮ್ಯವನ್ನು ತಿಳದು ಅವರಿಗೆ ಉಂಟಾದ ಗಂಡಕಾಲಗಳನ್ನೂ ಮರಣಕಾಲವನ್ನೂ ಸಪ್ತಗತಿಗಳಿಂದ ಬರುವ ವರ್ಷಗತಿಗಳನ್ನೂ ಯಾವ ಯಾವ ವರ್ಷ ಎಷ್ಟೆಷ್ಟು ಗತಿಗಳು ಒಂದೇ ಸ್ಥಾನದಲ್ಲಿ ಕೂಡುತ್ತದೋ ಮತ್ತು ಸಪ್ತಗತಿಗಳು ಯಾವ ಯಾವ ವರ್ಷದಲ್ಲಿ ಒಂದೇ ಸ್ಥಾನದಲ್ಲಿ ಕೂಡುವದೋ, ಅದನ್ನೂ ಮತ್ತು ಈ ಕೂಡುವಿಕೆಯಲ್ಲಿ ಅಪಮೃತ್ಯುವೆಂದುನ್ನೂ ಕಾಲಮೃತ್ಯುವೆಂದುನ್ನೂ ಇವುಗಳ ಭೇದವನ್ನು ಇದರ ಕೆಳಗೆ ಚಕ್ರಮೂಲಕವಾಗಿ ತಿಳಿಸುವದಲ್ಲದೆ ಸಪ್ತಗತಿಗಳಿಗೆ ಕಡಮೆಯಾಗಿಯೋಆಗಲಿ ಮತ್ತು ಸಪ್ತಗತಿಗಳೇಆಗಲಿ ಯಾವ ಯಾವ ವರ್ಷದಲ್ಲಿ ವೊಂದೇಸ್ಥಾನದಲ್ಲಿ ಕೂಡುವದರ ಫಲಗಳು ಸಹ ಬರೆಯಲ್ಪಡುತ್ತೆ.

ಸಂಖ್ಯೆ.	೧	೨	೩	೪	೫	೬	೭	೮	೯	೧೦	೧೧	೧೨	೧೩	೧೪	೧೫	೧೬	೧೭	೧೮
ವರ್ಷಗಳು.	೧೨	೨೦	೨೮	೩೦	೩೮	೪೦	೪೧	೪೩	೪೮	೪೯	೫೦	೫೩	೫೮	೫೯	೬೦	೬೩	೬೫	೬೭
ಪೃಥ್ವೀಗತಿ	೦	೧	೦	೧	೧	೦	೦	೦	೧	೦	೧	೦	೦	೦	೧	೦	೦	೧
ಜಲಗತಿ	೧	೧	೧	೦	೦	೧	೦	೦	೧	೦	೧	೧	೦	೧	೧	೦	೦	೧
ಅಗ್ನಿಗತಿ	೦	೧	೦	೦	೦	೧	೦	೧	೧	೦	೧	೦	೧	೦	೧	೧	೦	೧
ವಾಯುಗತಿ	೦	೧	೦	೦	೧	೧	೧	೦	೧	೦	೧	೦	೧	೧	೧	೦	೦	೧
ಆಕಾಶಗತಿ	೦	೧	೦	೦	೦	೦	೦	೦	೦	೧	೧	೧	೦	೦	೧	೦	೦	೧
ಡೋಲಾಗತಿ	೦	೧	೦	೧	೦	೧	೦	೦	೧	೧	೦	೦	೦	೧	೧	೦	೦	೧
ಕುಂಡಲಿನೀಗತಿ	೦	೦	೧	೦	೦	೧	೦	೦	೧	೧	೧	೦	೦	೦	೧	೦	೧	೧
ಒಟ್ಟು ಗತಿಗಳ ಸಂಖ್ಯೆ ..	೧	೬	೨	೨	೨	೫	೧	೧	೬	೩	೬	೨	೨	೩	೭	೧	೧	೭

ಮೇಲೆ ವಿವರಿಸಿ ಇರುವ ಚಕ್ರದಲ್ಲಿ ನಿರ್ದೇಶಮಾಡಿರುವ ಅಂಕಿ ಇಂದ ಆಯಾ ವರ್ಷಗಳಲ್ಲಿ ಆಯಾ ಉಕ್ತಗತಿಗಳಿಗೆ ವ್ಯತ್ಯಸ್ತ ಗತಿಗಳು ಬಂದಿರುವದಾಗಿಯೂ ಆ ಗತಿಗಳಿಂದ ತತ್ತತ್ಸಬಂಧವಾದ ರೋಗಗಳು ಉಂಟಾಗಿರುವದಾಗಿಯು ಸಹ ತಿಳಿಯತಕ್ಕದ್ದು.

ಆಯಾಯ ವರ್ಷಗಳಲ್ಲಿ ಈಗತಿಗಳಿಂದ ಉಂಟಾದಫಲಗಳು:—

೧. ಹನ್ನೆರಡನೇ ವರ್ಷದಲ್ಲಿ ಜಲಗತಿ ಅಧಿಕವಾದ್ದರಿಂದ ಶ್ಲೇಷ್ಮರೋಗವು ಉಂಟಾಯಿತು.

೨. ಇಪ್ಪತ್ತನೇ ವರ್ಷದಲ್ಲಿ ಪೃಥ್ವೀ, ಜಲ, ಅಗ್ನಿ, ವಾಯು, ಆಕಾಶ, ಡೋಲಾ, ಈ ಗತಿಗಳು ಅಧಿಕವಾದ್ದರಿಂದ ವ್ಯಾಭಾರವು, ಶ್ಲೇಷ್ಮರೋಗವು, ತಾಪವು, ಸರ್ವಾಂಗ ನೋವು, ಪಿತ್ತ ವಾತ ರೋಗವು, ಸಹ ಉಂಟಾದವು.

೩. ಇಪ್ಪತ್ತೆಂಟನೇ ವರ್ಷದಲ್ಲಿ ಜಲ, ಕುಂಡಲಿನೀಗತಿಗಳು ಅಧಿಕವಾದ್ದರಿಂದ ಶ್ಲೇಷ್ಮ ರೋಗವು ಮತ್ತು ನರದ ರೋಗವು ಸಹ ಉಂಟಾದವು.

೪. ಮುವತ್ತನೇ ವರ್ಷದಲ್ಲಿ ಪೃಥ್ವೀ, ಡೋಲಾ ಗತಿಗಳು ಅಧಿಕವಾದ್ದರಿಂದ ಜಡತ್ವ ವಾತ ಪಿತ್ತ ರೋಗವು ಸಹ ಉಂಟಾಯಿತು.

೫. ಮೂವತ್ತೆಂಟನೇ ವರ್ಷದಲ್ಲಿ ಪೃಥ್ವೀ ವಾಯುಗತಿಗಳು ಅಧಿಕವಾದ್ದರಿಂದ ಜಡತ್ವವೂ ವಾತರೋಗವು ಸಹ ಉಂಟಾದವು.

೬. ನಾಲ್ವತ್ತನೇ ವರ್ಷದಲ್ಲಿ ಜಲ, ಅಗ್ನಿ, ವಾಯು ಡೋಲಾ, ಕುಂಡಲಿನೀಗತಿಗಳು ಅಧಿಕವಾದ್ದರಿಂದ ೀತರೋಗ, ತಾಪ, ವಾತರೋಗ, ಪಿತ್ತ ವಾತ, ನರದರೋಗ ಸಹ ಉಂಟಾಯಿತು.

೭. ನಾಲ್ವತ್ತೊಂದನೇ ವರ್ಷದಲ್ಲಿ ವಾತಗತಿ ಅಧಿಕವಾದ್ದರಿಂದ ತದ್ರೋಗ ಪ್ರಾಪ್ತವಾಯಿತು.

೮. ನಾಲ್ವತ್ತುಮೂರನೇ ವರ್ಷದಲ್ಲಿ ಅಗ್ನಿಗತಿ ಅಧಿಕವಾಗಿ ಆರೋಗವು ಹುಟ್ಟಿತು.

೯. ನಾಲ್ವತ್ತೆಂಟನೇ ವರ್ಷದಲ್ಲಿ ಪೃಥ್ವೀ, ಜಲ, ಅಗ್ನಿ, ವಾಯು, ಡೋಲಾ ಕುಂಡಲಿನೀಗತಿಗಳು ಅಧಿಕವಾದ್ದರಿಂದ ಜಡತ್ವ, ಶ್ಲೇಷ್ಮರೋಗ, ತಾಪ, ವಾತ ರೋಗ, ವಾತಪಿತ್ತರೋಗ, ನರದರೋಗವು ಸಹ ಉಂಟಾದವು.

೧೦. ನಾಲ್ವತ್ತೊಂಭತ್ತನೇ ವರ್ಷದ ಆಕಾಶ, ಡೋಲಾ, ಕುಂಡಲಿನೀಗತಿಗಳು, ಅಧಿಕವಾದ್ದರಿಂದ ಆಕಸ್ಮಾತ್ಪ್ರಾಪ್ತವಾದ ರೋಗವು, ಪಿತ್ತವಾತ ರೋಗವು, ನರದ ರೋಗವು ಸಹ ಉಂಟಾದವು.

೧೧. ಐವತ್ತನೇ ವರ್ಷದಲ್ಲಿಪೃಥ್ವೀ, ಜಲ, ಅಗ್ನಿ, ವಾತ, ಆಕಾಶ, ಕುಂಡಲಿನೀ ಗತಿಗಳು ಅಧಿಕವಾದ್ದರಿಂದ ಜಡತ್ವ, ಶ್ಲೇಷ್ಮರೋಗ, ತಾಪ, ವಾತರೋಗ, ಆಗಂತುಕರೋಗ, ನರದರೋಗವು ಸಹ ಉಂಟಾಗಿದೆ.

೧೨. ಐವತ್ತಮೂರನೇ ವರ್ಷದಲ್ಲಿ ಜಲ, ಆಕಾಶಗತಿಗಳು ಅಧಿಕವಾದ್ದರಿಂದ ಶ್ಲೇಷ್ಮರೋಗವು ಅಕಸ್ಮಾತ್ಪ್ರಾಪ್ತವಾಯಿತೆಂದು ತಿಳಿಯಬೇಕು.

೧೩. ಐವತ್ತೆಂಟನೇ ವರ್ಷದಲ್ಲಿ ಅಗ್ನಿ, ವಾಯುಗತಿಗಳು ಅಧಿಕವಾದ್ದರಿಂದ ತಾಪವು, ವಾತರೋಗವು ಸಹ ಉಂಟಾಯಿತು.

೧೪. ಐವತ್ತೊಂಭತ್ತನೇ ವರ್ಷದಲ್ಲಿ ಜಲ, ವಾತ, ಡೋಲಾಗತಿಗಳುಅಧಿಕವಾದ್ದರಿಂದ, ಸೀತರೋಗವು, ವಾತರೋಗವು ಸಹ ಉಂಟಾದವು, ಮತ್ತು ಪಿತ್ತ ವಾತರೋಗವು ಉಂಟಾದವು.

೧೫. ಅರವತ್ತನೇ ವರ್ಷದಲ್ಲಿ ಸಪ್ತಗತಿಗಳು ಕಂಡಿರುತ್ತವೆ, ಆದರೆ ಅಗ್ನಿಗತಿಯೇ ಆದಿಯಾಗಿ ನೋಡುವಲ್ಲಿ, ಪಿತ್ತಶ್ಲೇಷ್ಮಗತಿ ೧೨, ಪಿತ್ತಗತಿ ೧೨, ವಾತಗತಿ ೧೨, ಈ ಮೇರೆ ಕಂಡು ಡೋಲಾಗತಿ ಬಂದು ಅನಂತರ ಹದಿನೇಳು ದಿವಸಗಳ ಗತಿಗಳು ತೋರಿ ಆಮೇಲೆ ಪೃಥ್ವೀ ಗತಿ ಕಂಡು ಬಹಳ ಹೊತ್ತು ನಿಂತು ಶ್ಲೇಷ್ಮಗತಿ ೧೨, ಪಿತ್ತಗತಿ ೧೨, ಯರಡನೇ ಭಾರಿ ಶ್ಲೇಷ್ಮ ೧೨, ಪಿತ್ತ ೬, ಮೂರನೇಭಾರಿ ಶ್ಲೇಷ್ಮ ೬, ಪಿತ್ತಗತಿ ೩, ನಾಲ್ಕನೇಭಾರಿ ಶ್ಲೇಷ್ಮ ೩, ಪಿತ್ತ ೨, ಐದನೇಭಾರಿ ಶ್ಲೇಷ್ಮ ೨, ಪಿತ್ತ ೧, ಈ ಮೇರೆ ಕಂಡು ಬಹಳಹೊತ್ತು ಯೇನೂ ಕಾಣದೆ ಅಡಗಿ ಅನಂತರ ಡೋಲಾಗತಿ ೧೨ ಬಂದು ಆ ಮೇಲೆ ವಕ್ರಚಕ್ರ ಕಂಡು ಪುನಃ ಡೋಲಾಗತಿ ಕಂಡು ೫೦ ಸುಳಿಗಳು ಬಂದದ್ದರಿಂದ ೫೦ ಘಳಿಗೆ ಆದನಂತರ ತ್ರಿದೋಷಗತಿ ತಪ್ಪಿ ಶ್ಲೇಷ್ಮಗತಿ ೧೨, ಪಿತ್ತ ೧೨, ವಾತ ೨೦ ಬಂದಿರುವದ್ದರಿಂದ ವಿಷಮರೋಗವೆಂದು ಕರಿಸಿಕ್ಕೊಂಡು ಕ್ರಮವಾಗಿ ಗುಣ ಬಂದಿರುತ್ತೆ.

೧೬. ಅರವತ್ತಮೂರನೇ ವರ್ಷದಲ್ಲಿ ಅಗ್ನಿಗತಿ ಅಧಿಕವಾಗಿ ಉಷ್ಣರೋಗವು ಉಂಟಾಯಿತು.

೧೭. ಅರವತ್ತೈದನೇ ವರ್ಷದಲ್ಲಿ ಕುಂಡಲಿನೀಗತಿ ಅಧಿಕವಾದ್ದರಿಂದ ನರದರೋಗವು ಉಂಟಾಯಿತು.

೧೮. ಅರವತ್ತೇಳನೇ ವರ್ಷದಲ್ಲಿ ಐವತ್ತುಮೂರು ದಿವಸಗಳಲ್ಲಿ ಸಪ್ತಗತಿಗಳು ಬಂದೇಸ್ಥಾನದಲ್ಲಿ ಕ್ರಮವಾಗಿ ಕಂಡದ್ದರಿಂದ ಮೇಲ್ಕಂಡ ಐವತ್ತು ಮೂರನೆ ದಿವಸದಲ್ಲಿ ಮೇಲೆ ಹೇಳಲ್ಪಟ್ಟ ಹಾನಗಲ್ ಶ್ರೀನಿವಾಸರಾಯರಿಗೆ ಮರಣವು ಪ್ರಾಪ್ತವಾಯಿತು. ಈ ಮೇಲೆ ಹೇಳಲ್ಪಟ್ಟ ವರ್ಷಗಳಲ್ಲದೆ ಮಿಕ್ಕ ವರ್ಷಗಳಲ್ಲಿ ರೋಗವಿಲ್ಲದೆ ಇದ್ದರೆಂದು ತಿಳಿಯತಕ್ಕದ್ದು.

ಇದೇ ಪ್ರಕಾರ ಸಪ್ತಗತಿಗಳು ಬಾರದೆ ವ್ಯತ್ಯಸ್ತವಾದರೆ ಗಂಡಕಾಲವೆಂದು ತಿಳಿಯತಕ್ಕದ್ದು.

ಮತ್ತು ಗತಿಸಿದ ಮಹಾಪ್ರಭುಗಳವರು ಯಾವ ವೈದ್ಯರಿಗಾದರೂ ಕೂತುಕೊಂಡು ಆ ಪ್ರಭುಗಳ ಕೈಯ್ಯನಾಡೀಗತಿಗಳನ್ನು ತಿಳದುಹೇಳಲಿಕ್ಕೆ ಆಸ್ಪದಕೊಡದೆ ಸ್ವಲ್ಪಸಾವಕಾಶವಾದರೆ ಕೈ ಕೊಡವುತ್ತಿದ್ದರು. ಹೀಗಿರುವಲ್ಲಿ ಬಹಳ ದಿವಸಗಳಿಂದ ನಾನು ಸನ್ನಿಧಾನಕ್ಕೆ ಪ್ರತಿದಿನ ಹೋದಕಾಲದಲ್ಲಿ ಯದುರಿಗೆ ಕೂತುಕೊಂಡು ಮಹಾಪ್ರಭುಗಳವರ ದೇಹಸ್ಥಿತಿಯನ್ನು ಹೇಳಲು ನಾಡೀಗತಿಗಳನ್ನು ನೋಡಿ ಚನ್ನಾಗಿ ಶೋಧಿಸುವರಿಗೂ ಸುಮ್ಮನೆ ಇದ್ದು ನಿಂತುಕೊಂಡಮೇಲೆ ಧಣೀರು ಕೇಳಿದ್ದಕ್ಕೆಲ್ಲಾ ಉತ್ತರ ಅರಿಕೆ ಮಾಡುತ್ತಿದ್ದೆನು; ಹೀಗಿರುವಲ್ಲಿ ಕಳದ ಪ್ರಭವ ಸಂವತ್ಸರದಲ್ಲಿ ಆ ಪ್ರಭುಗಳವರು ನಾನು ಸನ್ನಿಧಾನಕ್ಕೆ ಹೋಗಿರುವಕಾಲದಲ್ಲಿ ತಮ್ಮ ದೇಹಸ್ಥಿತಿ ಸರಿಯಾಗಿ ಇಲ್ಲ, ಅನೇಕ ವಿಧವಾಗಿ ನೋಡಿದಾಗ್ಯು ಮನಸ್ಸಿಗೆ ಸಮಾಧಾನ ತೋರುವದಿಲ್ಲ, ಸನ್ನಿಧಾನದಲ್ಲಿರುವ ಕೆಲರು ವೈದ್ಯರು ನಮಗೇನೂ ಭಾಧಕವಿಲ್ಲವೆಂದು ಪ್ರಮಾಣವಾಗಿ ಹೇಳಿ ಪ್ರತಿದಿನದಲ್ಲೂ ಔಷಧಿಯನ್ನು ಕೊಡುತ್ತಾರೆ, ಗುಣವಿಲ್ಲವಾಗಿ ನೀನು ಸತ್ಯಕ್ಕೆ ಒಳಪಟ್ಟು ನಿರ್ವಂಚನೆಯಾಗಿ ನಿಶ್ಚಯವನ್ನು ಅರಿಕೆ ಮಾಡಬೇಕೆಂದು ಅಪ್ಪಣೆಕೊಟ್ಟದ್ದಕ್ಕೆ—ಚೈತ್ರಮಾಸ ಕಳದಹೊರ್ತು ಗುಣವಾಗುವದಿಲ್ಲವೆಂದು ಅರಿಕೆ ಮಾಡಿ ದಿನಪ್ರತಿಯಲ್ಲೂ ಮಹಾಪ್ರಭುಗಳವರ ದೇಹಸ್ಥಿತಿಯನ್ನು ತಿಳಿದು ಅಪ್ಪಣೇ ಕೊಡಿಸಿದ್ದಕ್ಕೆಲ್ಲಾ ಉತ್ತರ ಅರಿಕೆಮಾಡುತ್ತಿರುವಲ್ಲಿ ಒಂದಾನೊಂದು ದಿವಸ ಮಹಾಪ್ರಭುಗಳವರಿಗೆ ನನ್ನಮೇಲೆ ದಯಹುಟ್ಟಿ ಐನೂರು ರೂಪಾಯಿಗಳು ಬಾಳುವ ವಜ್ರದ ಹತ್ತಕಡಕು ಜೋಡಿಯನ್ನು ನಾನುಮನೆಯಲ್ಲಿ ಇರುವ ಕಾಲದಲ್ಲಿ ತರಿಸಿ ಬಟ್ಟೆಯಿಂದ ಕಟ್ಟಿಸಿ ನಾಲ್ಕು ಕಡೆಗೂ ಮೊಹರ್ಮಾಡಿಸಿ ಕಟ್ಟಿಗೆ ದಫೇದಾರ ದಾಸೀ ಎಂಬವನಕೈಲಿ ಕೊಟ್ಟು ಇದರಲ್ಲಿ ಇರುವ ಹತ್ತಕಡಕುಜೋಡಿಯನ್ನು ಒಂದುಕಡೇ ಮೊಹರ್ ಒಡದು ತೆಗದು ಕಿವಿಗೆ ಇಟ್ಟುಕೊಂಡು ಆಮೊಹರು ಮಾಡಿದ ಬಟ್ಟೆನಿಸಿ ಸನ್ನಿಧಾನಕ್ಕೆ ಬರಬೇಕೆಂದು ಅಪ್ಪಣೆ ಆದಮೇಲೆ ಆ ಹತ್ತಕಡಕನ್ನು ಕಿವಿಯಲ್ಲಿ ಇಟ್ಟುಕೊಂಡು ಸದರೀ ಬಟ್ಟೆನಿಸೀ ಮಹಾಸನ್ನಿಧಾನಕ್ಕೆ ಹೋಗಿ ಮುಜರೆಯನ್ನು ಮಾಡಿ ಆ ಬಟ್ಟೆಯನ್ನು ತೋರಿಸಿದೆನು. ಅನಂತರ ಒಂದು ದಿವಸ ಅಗ್ಯೆ ಪ್ರಬಲವಾದ ಅಧಿಕಾರಿಗಳು ಬಕ್ಷೀ ನರಸಪ್ಪನವರು, ಮರಿಮಲ್ಲಪ್ಪನವರು ಇವರುಗಳ ಮುಂದೆ ಕೈನೋಡಿ ಮಹಾಪ್ರಭುಗಳವರಿಗೆ ಇನ್ನು ಯೆಂಟುದಿವಸಕ್ಕೆ ಬಹಳ ಉಪದ್ರವವಾಗುತ್ತೆಯಂತ ಹೇಳಿದೆನು. ಅದೇಕಾಲಕ್ಕೆ ಸರಿಯಾಗಿ ಉಪದ್ರವ ಹೆಚ್ಚಾಗಿ ಮಾತು ವಗೈರೆ ನಿಂತುಹೋದವು; ಮಹಡಿಯಿಂದ ಕೆಳಕ್ಕೆ ಇಳಿಸಿ ದಕ್ಷಿಣಬಾಗಲು ಸಮೀಪದಲ್ಲಿ ಘರದೇ ಕಟ್ಟಿಸಿ ಮಲಗಿಸಿ ಪ್ರಾಯಶ್ಚಿತ್ತಾದಿಗಳು ಮಾಡಿಸಬೇಕಾಗುತ್ತೆ ನಾಡೀನೋಡಿ ಹೇಳಬೇಕೆಂದು ರಮಾವಿಲಾಸ ಸನ್ನಿಧಾನ, ಸೀತಾವಿಲಾಸ ಸನ್ನಿಧಾನ, ಮದನವಿಲಾಸ ತೊಟ್ಟಿ ಪುಟ್ಟಸ್ವಾಮಿಗಳವರು, ದೇವಪಾರ್ಥಿವರವರು ಇವರುಗಳೆ ಮೊದಲಾದವರು ಅಪ್ಪಣೆ ಕೊಡಿಸಿದ ಪ್ರಕಾರ ನೋಡಿ ನಾಡಿಯು ಇನ್ನೂ ಸ್ಥಾನಗಳನ್ನು ಬಿಡಲಿಲ್ಲವೆಂದು ಅರಿಕೆಮಾಡಿದ್ದಕ್ಕೆ ಹಾಗಿದ್ದರೆ ಔಷಧ

ಪ್ರಯೋಗದಿಂದ ಮಾತನಾಡಿಸಬೇಕೆಂದು ಉತ್ತರವಾದ ಪ್ರಕಾರ ಜೇನುತುಪ್ಪದಲ್ಲಿ ಬ್ಯಾಲದವಾಟೆ ತಿಳಲು ಔಷಧಸಹ ಹಾಕಿ ಅಂಭೈ ಅಂಣ್ಣೈಯ್ಯ ಪಂಡಿತರ ಕೈಯಿಂದ ನಾಲಿಗೆಗೆ ಲೇಪನವಂ ಮಾಡಿಸಿದೆನು. ಅನಂತರ ಒಂದುಘಳಿಗೆ ವಳಗಾಗಿ ಮಹಾಪ್ರಭುಗಳವರು ಮಾತನಾಡುವದಕ್ಕೆ ಪ್ರಾರಂಭಿಸಿ ಜನಗಳಿಗೆ ಸರಿಯಾದ ಉತ್ತರಗಳನ್ನು ಕೊಟ್ಟು ಆ ಸಮಯದಲ್ಲಿ ಮೇಜರ್ ಯಲಿಯಟ್ ಸಾಹೇಬರವರು ಬಂದು ಮುಜರೆಮಾಡುತ್ತಿರಲಾಗಿ ಅವರಿಗೂ ಸಹ ಸರಿಯಾದ ಉತ್ತರಗಳನ್ನು ಅಪ್ಪಣೆ ಕೊಟ್ಟು ಹೂವಿನಹಾರವನ್ನು ಹಾಕಿಸಿದರು. ತರುವಾಯ ಮದನವಿಳಾಸತೊಟ್ಟಿಪುಟ್ಟಸ್ವಾಮಿಯವರು, ದೇವಪಾರ್ಥಿವರವರು ಸಹ ಗಡಿಯಾರ ಇಟ್ಟುಕೊಂಡು ಕಾಲವನ್ನು ನಿರೀಕ್ಷಿಸುತ್ತಾ ನನಿಗೆ ಪ್ರಶ್ನೆಯನ್ನು ಮಾಡಿ ನಾನು ಹೇಳುವಮಾತುಗಳನ್ನು ಅನುಭವವನ್ನು ಸಹ ದೃಷ್ಟಾಂತವಾಗಿ ನೋಡಿದರು. ಈ ಪ್ರಕಾರ ನೋಡುತ್ತಿರುವಲ್ಲಿ ಆ ದಿವಸ ಹತ್ತೂಕಾಲು ಘಂಟೆಗೆ ಸರ್ವರಿಗೂ ದುಃಖಪಡುವಕಾಲ ಪ್ರಾಪ್ತವಾಯಿತು. ಅನಂತರ ಕೆಲವು ದಿವಸಗಳಮೇಲೆ ನಾನು ಕಷ್ಟಪಟ್ಟು ಸಾಧಿಸಿರುವ ಈವಿದ್ಯವನ್ನು ಪರೀಕ್ಷಿಸಬೇಕೆಂದು ಚೀಫ್ ಕಮ್ಮಿಷನರ್ ಸಾಹೇಬರವರಿಗೆ ಅರ್ಜೀ ಬರದುಕೊಂಡದ್ದಕ್ಕೆ ಮೇಜರ್ ಯಲಿಯಾಟ್ಸಾಹೇಬರವರಲ್ಲಿ ತಿಳಿಸಬೇಕೆಂದು ಇಂಡಾರಸ್ ಕೊಟ್ಟರು; ಅದೇ ಇಂಡಾರಸನ್ನು ಅದೇ ಯಲಿಯಾಟ್ ಸಾಹೇಬರವರಲ್ಲಿ ತೋರಿಸುವಲ್ಲಿ ನನಿಗೆ ರೋಜೀಯಲ್ಲಿ ಕಾಯಂಮಾಡಿರುವದಾಗಿ ಮಾತ್ರಹೇಳಿದರು. ಅನಂತರ ಒಂದುದಿನ ನಮ್ಮ ಇಲಾಖಾ ಕಂಟ್ರೋಲರ್ ಕೆಲಸನೋಡುತ್ತಿದ್ದ ರಂಗಾಚಾರ್ಯರವರಲ್ಲಿ ನನ್ನ ಬಳೀಇರುವ ಸರಟಿಫಿಕೇಟ್ ಇಂಡಾರಸುಗಳೇ ಮುಂತಾದ ಕಾಗದಗಳನ್ನು ತೋರಿಸಿದೆನು. ವಿಜಯೀಂದ್ರರಾಯರೊಡನೆ ಇಂಗ್ಲೀಷಿನಲ್ಲಿ ಮಾತನಾಡಿಕೊಂಡು ಅವರು ಮಾಡಿದ ಪ್ರಶ್ನೆಗಳಿಗೆಲ್ಲಾ ಉತ್ತರವನ್ನು ಕೊಟ್ಟೆನು. ಈಚೆಗೆ ರಜಾವನ್ನು ತೆಗದುಕೊಂಡು ದೇಶಸಂಚಾರಾರ್ಥವಾಗಿಹೊರಟು ಹೋಗುವಾಗ ಪುದಕೋಟೆರಾಜರಲ್ಲಿ ನನ್ನ ವಿದ್ಯವನ್ನು ಪ್ರಕಟಿಸಿ ಐನೂರು ರೂಪಾಯಿಗಳ ಶಹಲನ್ನು, ೫೦೦ ರೂಪಾಯಿನ್ನು ಸಹ ಬಹುಮಾನವಾಗಿಯೂ, ಕುಂಭಕೋಣದಲ್ಲಿ ಸ್ವಾಮಿಗಳವರಿಂದ ಶಹಲ್ಜೋಡಿ ಬಹುಮಾನವನ್ನೂ ಪಡೆದು ಅಲ್ಲಿಂದ ನಾಗೂರು, ನಾಗಪಟ್ಣ, ತಂಜಾವೂರು, ಅನಂತಶಯನ, ಮಧುರೆ, ತಿರ್ಣವಲ್ಲಿ ಇನ್ನೂ ಅನೇಕ ಸ್ಥಳಗಳಲ್ಲಿ ವಿದ್ಯಾಪ್ರಕಟನೆಯಿಂದ ಬಹುಮಾನಗಳಂ ಪಡದು, ಕಂಚಿಯಲ್ಲಿ ಶೃಂಗೇರಿಸ್ವಾಮಿಗಳವರಿಂದಲೂ ಬಹುಮಾನಿತನಾಗಿ ಮದ್ರಾಸಿಗೆ ಹೋಗಿ ವಿದ್ಯಾಪ್ರಕಟನೆ ಉದ್ದಿಶ್ಯ ನೋಟೀಸ್ ಕೊಟ್ಟದ್ದಕ್ಕೆ ಅಲ್ಲಿನ ಅನೇಕ ಜನರು ತಿರವಲಕೇಣೀಯಲ್ಲಿ ನಾನು ಇಳದಿರುವ ಸ್ಥಳಕ್ಕೆ ಬಂದು ನನ್ನನ್ನು ಕಂಡು ಅನಂತರ ಗಾಡಿಯನ್ನು ಕಳುಹಿಸಿ ಚೀನಾಬಜಾರದಲ್ಲಿ ಸಭಾಸ್ಥಾನಕ್ಕೆ ಕರಸಿಕೊಂಡು ನನ್ನ ವಿದ್ಯವನ್ನು ಪರೀಕ್ಷಿಸಿ ಸನ್ಮಾನವನ್ನು ಮಾಡಿ ಯೋಗ್ಯತೆಪತ್ರಿಕೆಯನ್ನು ಕೊಟ್ಟು ವೃತ್ತಾಂತಪತ್ರಿಕೆಗಳಲ್ಲಿ ಸಹ ಪ್ರಸಿದ್ಧಪಡಿಸಿದರು. ಮತ್ತು ನಾನು ಉತ್ತರದೇಶಕ್ಕೆ ಹೋಗುವ ಕಾಲದಲ್ಲಿ ಧಾರವಾಡ,

ಬೆಳಗಾವಿ, ಪುನಹೆ, ಇವುಗಳೇ ಮುಂತಾದ ಅನೇಕಸ್ಥಳಗಳಲ್ಲಿ ವಿದ್ಯವನ್ನು ಪ್ರಕಟಿಸಿ ಬಿದಸ್ತೂರು ಬಹುಮಾನಗಳನ್ನು ಪಡೆದು, ಅಲ್ಲಿಂದ ಮುಂದೆ ಶ್ರೀಕಾಶೀಕ್ಷೇತ್ರಕ್ಕೆ ಹೋಗಿ ಅನೇಕ ದೊಡ್ಡಅಧಿಕಾರಿಗಳಿಗೆ ನೋಟೀಸುಗಳನ್ನು ಕಳುಹಿಸಿ, ಗಲ್ಲಿಗಲ್ಲಿಗಳಲ್ಲೆಲ್ಲಾ ನೋಟೀಸುಗಳನ್ನು ಹತ್ತಿಸಿ ಇರುವಲ್ಲಿ ನನ್ನ ವಿದ್ಯವನ್ನು ಪರೀಕ್ಷಿಸಿ ಸನ್ಮಾನವನ್ನು ಯೋಗ್ಯತೆ ಪತ್ರಿಕೆಯನ್ನು ಸಹ ಕೊಟ್ಟು ಬೆಂಗಳೂರಿಗೆ ನಮ್ಮ ಶ್ರೀಮೈ ರಾಜ್ಯಭಾರದ ಚೀಫ್ ಕಮ್ಮಿಷನರ್ ಸಾಹೇಬರವರಿಗೆ ಆಸಭಾಜನಗಳೆಲ್ಲಾ ಕೂಡಿ ನಾನು ಸಾಧಿಸಿರುವ ನಾಡೀತತ್ವವನ್ನು ಪರೀಕ್ಷಿಸಿ ಸಂತೋಷಪಟ್ಟೆವು, ಆವಿದ್ಯೆಯನ್ನು ನಾವು ಕಲಿಯಬೇಕೆಂಬ ಅಪೇಕ್ಷೆ ಬಹಳವಾಗಿ ಇರುವದ್ದರಿಂದ ಅವರಿಗೆ ಕೆಲವು ದಿವಸಗಳ ರಜಾವನ್ನು ನಿಯಮಿಸಿ ಇಲ್ಲೇ ಇರುವಂತೆ ಉತ್ತರ ಮಾಡಬೇಕೆಂದು ಅರ್ಜಿಯನ್ನು ಬರೆದುಕೊಂಡು ಆ ಅರ್ಜಿ ರವಾನಿಸಿದ ಅಂಚೆ ದಾಖಲೆ ರಶೀತಿಯನ್ನು ನನ್ನಲ್ಲಿ ತಂದುಕೊಟ್ಟರು. ಇನ್ನು ಕೆಲವು ಸ್ಥಳಗಳಿಂದ ನಾನು ಬರಬೇಕೆಂದು ಕಾಗದಗಳನ್ನು ಬರೆಸಿದ್ದರು. ನನಗೆ ವಾರ್ಧಿಕವಾದ್ದರಿಂದ ಮೇಲೆ ಹೇಳಲ್ಪಟ್ಟ ಸ್ಥಳಗಳಲ್ಲಿ ಯಲ್ಲಿಯೂ ಇರದೇ ಪುನಹ ಹಿಂತಿರುಗಿ ಮೈಸೂರಿಗೇನೇ ಹೊರಟು ಬಂದೆನು. ನಾನು ಸಾಧಿಸಿರುವ ವಿದ್ಯವು ಸಾರ್ಥಕವಾಗಬೇಕೆಂಬ ಕುತೂಹಲದಿಂದ ಸಂಸ್ಕೃತದಲ್ಲೂ, ಕನ್ನಡಪದ್ಯರೂಪವಾಗಿಯೂ ಸಹ ಕಲ್ಪಿಸಿ ಛಾಪಿಸಿ ಅನೇಕ ಜನಗಳಿಗೆ ಕೊಟ್ಟಾಗ್ಯು ಯಾರೂ ಸಾಧನೆಮಾಡದೇ ಇದ್ದಕಾರಣ ಶುದ್ಧಕನ್ನಡಮಾತಿನಿಂದ ಬರೆದರೆ ಅನುಕೂಲಿಸುತ್ತದೆಂದು ಸಚಿತ್ರವಾಗಿ ಈ ಗ್ರಂಥವನ್ನು ರಚಿಸಿರುತ್ತೇನೆ. ಇದನ್ನು ಮತ್ತು ನಾನು ಮೇಲೆ ಹೇಳಿದ ಪ್ರಕಾರ ಇನ್ನು ಅನೇಕ ಜನಗಳ ನಾಡೀಗತಿಗಳನ್ನು ನೋಡುವಾಗ ನನ್ನ ಬುದ್ಧಿವೈಕಲ್ಯದಿಂದ ಉಂಟಾದ ಅಲ್ಪಸ್ವಲ್ಪ ವ್ಯತ್ಯಾಸವನ್ನು ಶಾಸ್ತ್ರದಮೇಲೆ ಆರೋಪಣೆಮಾಡದೆ, ತಪ್ಪು ವಗೈರೆ ಪರಿಶೋಧಿಸಿ ವಿದ್ಯಾರ್ಥಿಗಳು ವೃದ್ಧಿಗೆ ತರಲೀಯೆಂದು ದೇವರನ್ನೂ ಆ ವಿದ್ಯಾರ್ಥಿಗಳನ್ನೂ ಸಹ ಪ್ರಾರ್ಥಿಸುತ್ತೇನೆ.

ವೈದ್ಯಭೂಷಣಾಂತರ್ಗತವಾದ ನಾಡೀಪ್ರಕರಣದಲ್ಲಿ ಹೇಳಿರುವನಾಡೀಗತಿಗಳಿಂದ ತಿಳಿದು ಹೇಳುವ ಅಸಾಧ್ಯಲಕ್ಷಣಗಳು:—

೧. ಕರಾಂಗುಷ್ಠ ಪಾದಾಂಗುಷ್ಠಗಳಲ್ಲಿ ಚಲಿಸುವ ನಾಡೀಗತಿಗಳು ಸ್ವಗತಿಗಳನ್ನುಬಿಟ್ಟು ವಿರೋಧಗತಿಗಳನ್ನವಲಂಬಿಸಿದರೆ ಆ ಮನುಷ್ಯನಿಗೆ ಒಂದು ವರ್ಷದಮೇಲೆ ಗಂಡಕಾಲವೆಂದು ತಿಳಿಯಬೇಕು.

೨. ಕಕ್ಷದಲ್ಲಿ ಮೇಹನ ಪಾರ್ಶ್ವಗಳಲ್ಲಿ ಸಹ ಸರ್ವದಾ ಚಲಿಸುವ ನಾಡಿಯು ಸ್ವಗತಿಯನ್ನು ಬಿಟ್ಟು ವ್ಯತ್ಯಾಸವಾಗಿ ಚಲಿಸಿದರೆ ಅಂತವನಿಗೆ ಒಂದು ತಿಂಗಳಿಗೆ ಗಂಡ, ಮತ್ತು ನೋಡಿದ ಒಡನೆಯೇ ಅದುಚಲಿಸದೆ ಇದ್ದರೆ ಅವನಿಗೆ ಆಗಲೇ ಗಂಡಕಾಲವೆಂದು ತಿಳಿಯಬೇಕು.

೩. ನಾಭೀಸ್ಥಾನದಲ್ಲಿ ಇರುವ ಆಧಾರನಾಡಿಯು ಚಿತ್ರಗತಿಯುಕ್ತವಾಗಿ ಮೇಲಕ್ಕೆ ಯಳಿಯುತ್ತಿದ್ದರೆ ಅವನಿಗೆ ಏಳುದಿವಸದಮೇಲೆ ಗಂಡಕಾಲವೆಂದು ತಿಳಿಯತಕ್ಕದ್ದು.

೪. ನಾಡಿಯು ದೀಪಾಕಾರವಾಗಿ ತೋರಿ ಮತ್ತು ದೀಪದಹುಳದಂತೆ ಹೊಳದರೆ ಅವನಿಗೆ ಐದುದಿವಸಕ್ಕೆ ಗಂಡಕಾಲವೆಂದು ತಿಳೀಬೇಕು.

೫. ನಾಡಿಯು ಕೊನೆಯು ಮುಮ್ಮುಖವಾಗಿ ಚಲಿಸದೆ ಹಿಮ್ಮುಖವಾಗಿ ಚಲಿಸಿದರೆ ಅವನಿಗೆ ಮೂರುದಿವಸಕ್ಕೆ ಗಂಡಕಾಲವೆಂದು ತಿಳಿಯಬೇಕು.

೬. ವಾತಶ್ಲೇಷ್ಮಾದಿ ಉಕ್ತಗತಿಗಳು ಯಾವದೂ ತೋರದೆ ಪಿತ್ತಗತಿ ಒಂದೇ ನರ್ತನವನ್ನು ಮಾಡುವಂತೆ ಕಾಣಿಸಿದರೆ ಅಂತವನಿಗೆ ಎರಡುದಿವಸದ ಮೇಲೆ ಗಂಡಕಾಲವೆಂದು ತಿಳಿಯಬೇಕು.

೭. ವಾತಗತಿ ಪಿತ್ತದಲ್ಲಿ ಸೇರುವದು, ಪಿತ್ತಗತಿ ಶ್ಲೇಷ್ಮದಲ್ಲಿ ಸೇರುವದು, ಆ ಶ್ಲೇಷ್ಮವು ಹಿಮ್ಮುಖವಾಗಿ ಚಲಿಸುತ್ತಾ ಕಂಠಸ್ಥಾನದಲ್ಲಿ ಶ್ಲೇಷ್ಮವು ವೃದ್ಧಿಯಾದರೆ ಅಂತವನಿಗೆ ಗಂಡಕಾಲವೆಂದು ತಿಳಿಯಬೇಕು.

೮. ನಾಡೀಗತಿಗಳು ತನ್ನತನ್ನ ಸ್ಥಾನವನ್ನು ಬಿಟ್ಟು ಬೇರೇ ಸ್ಥಳಗಳಲ್ಲಿ ಕಾಣುಸುತ್ತಾ ತಿರುಗುತ್ತಿದ್ದರೂ, ಬಳಿಕ ಸೂಕ್ಷ್ಮಗತಿಯನ್ನು ಹೊಂದಿ ಅಡಗಿಹೋದರೂ ಗಂಡಕಾಲವೆಂದು ತಿಳಿಯಬೇಕು.

೯. ನಾಡೀಗತಿಯು ಮೆಲ್ಲಮೆಲ್ಲನೆಯೂ, ವ್ಯಾಕುಲವಾಗಿಯೂ, ಶೀತಲವಾಗಿಯೂ, ಅಲ್ಲಲ್ಲಿಗೆ ನಿಂತು ನಿಂತು ಮತ್ತೆ ವೇಗಯುಕ್ತವಾಗಿ ಹಾಗೆಯೇ ಸೂಕ್ಷ್ಮಗತಿಗಳನ್ನು ಹೊಂದಿ ಚಲಿಸುತ್ತಲೂ ಜಾರುತ್ತಲೂ ಇರುವಂತೆ ಬೆರಳುಗಳಿಗೆ ತೋರಿದರೆಯೂ, ಓಡುತ್ತಿರುವಹಾಗೆಯೂ ಮತ್ತು ನಾನಾ ಪ್ರಕಾರಗಳಾಗಿ ತೋರಿದರೂ ಅಸಾಧ್ಯವೆಂದು ತಿಳಿಯಬೇಕು.

೧೦. ನಾಡೀಗತಿಗಳು ಸೂಕ್ಷ್ಮವಾಗಿ ನಾಡಿಗಳು ಮತ್ತು ಇತರಗಳಾದನರಗಳೂ ಕೂಡಾ ಶೈತ್ಯವನ್ನು ಹೊಂದಿದ್ದರೆ ಅಸಾಧ್ಯವೆಂದರಿಯುವದು.

೧೧. ಗತಿಗಳು ನಾಡೀಮುಖದಲ್ಲಿಯೇ ನಿಂತು ನಿಂತು ಮಿಂಚಿನಂತೆ ತೋರಿದರೆ ಮತ್ತು ಅಡಗಿಹೋದರೆ ಆಮನುಷ್ಯನಿಗೆ ಆದಿನವೇ ಅಥವಾ ಮರುದಿನವೇ ಆಗಲಿ ಗಂಡಕಾಲವೆಂದರಿಯುವದು.

೧೨. ನಾಡೀಗತಿ ವೇಗಯುಕ್ತವಾಗಿ ಸ್ವಲ್ಪ ಬಿಸಿಯಾಗಿ ಇದ್ದು ಮಲವು ಬದ್ಧಿಸಿ ಬಂದಜ್ವರವು ಯಾವಾಗಲೂ ಆರದೆ ಇರುವ ಮನುಷ್ಯನಿಗೆ ಎರಡುದಿನಕ್ಕೆ ಗಂಡಕಾಲವೆಂದು ತಿಳಿಯಬೇಕು.

೧೩. ಮಣಿಬಂಧದ ಕೆಳಗೆ ಇರುವ ಮರ್ಮನಾಡಿಯು ಸ್ವಲ್ಪವಾದರೂ ಯಾವನಿಗೆ ಚಲಿಸದೇ ಹೋಗುವದೋ ಅಂಥಾವನಿಗೆ ಹನ್ನೊಂದು ತಿಂಗಳಿಗೆ ಗಂಡಕಾಲವೆಂದರಿಯುವದು.

೧೪. ತಲೆಯಲ್ಲಿರುವ ನಾಡಿಯು ಸ್ವಲ್ಪವಾದರೂ ಯಾವ ಮನುಷ್ಯನಿಗೆ ಚಲಿಸದೇ ಇರುವದೋ ಅವನಿಗೆ ಶರೀರಕುಷ್ಕವಾಗಿ ಹತ್ತನೇ ತಿಂಗಳಿಗೆ ಗಂಡಕಾಲವೆಂದು ತಿಳಿಯತಕ್ಕದ್ದು.

೧೫. ಸರ್ವದಾ ಚಲಿಸದೆ ಇರುವ ಕಂಠದ ಮರ್ಮವು ಚಲಿಸದೇ ಇದ್ದರೆ ಅಂಥಾವನಿಗೆ ಹನ್ನೊಂದು ತಿಂಗಳಿಗೆ ಗಂಡಕಾಲವೆಂದರಿಯುವದು.

೧೬. ಅಕಸ್ಮಿಕವಾಗಿ ಕೊರಳಿನ ಮೂಲದ ಮರ್ಮದಲ್ಲಿ ಯಾವನಿಗೆ ಬೆವರು ಕಾಣುವದೋ ಅವನು ಬಹುರೋಗಪೀಡಿತನಾಗಿ ಯಮಮಂದಿರವನ್ನು ಪಡಿಯುತ್ತಾನೆಂದು ತಿಳಿಯತಕ್ಕದ್ದು.

೧೭. ಯಾವ ಮನುಷ್ಯನ ವೃಷಣಗಳು ಯಷ್ಟುಬಗೆಯಾಗಿ ತೀಡಿಸಿದಾಗ್ಯೂ ಚಲಿಸದೆ ಇರುವದೋ ಆ ಮಾನವನಿಗೆ ಮೂರುತಿಂಗಳಿಗೆ ಗಂಡಕಾಲವೆಂದರಿಯುವದು.

೧೮. ಯಾವ ಮನುಷ್ಯನ ಲಿಂಗವನ್ನು ತೀಡಿಸಿ ನೋಡಿದರೆ ಅಲ್ಲಿ ನಾಡೀಗತಿಯು ಸರ್ಪಾಕಾರವಾಗಿ ಬಂದರೆ ಅವನಿಗೆ ಎರಡುತಿಂಗಳಮೇಲೆ ಗಂಡಕಾಲವೆಂದರಿಯಬೇಕು.

೧೯. ಯಾವವನ ಮೊಣಕಾಲಿನ ಮರ್ಮದಲ್ಲಿರುವ ನಾಡಿಯ ಗತಿಯು ವ್ಯತ್ಯಾಸವಾದರೆ ಅವನಿಗೆ ಒಂದುತಿಂಗಳಿಗೆ ಗಂಡಕಾಲವು.

೨೦. ನಾಡಿಯು ತನ್ನ ಮೂಲಸ್ಥಾನವನ್ನಾರಂಭಿಸಿಕೊಂಡು ಶಿರಸ್ಸಿನವರಿಗೂ ಒಂದೇಕಾಲದಲ್ಲಿ ಕಂಪಿಸಿದರೆ ಅವನಿಗೆ ಒಂದುಪಕ್ಷಕ್ಕೆ ಗಂಡಕಾಲವೆಂದು ತಿಳಿಯತಕ್ಕದ್ದು.

೨೧. ಯಾವವನಿಗೆ ಕಣ್ಣು ರೆಪ್ಪೆಗಳು ಚಲಿಸದೆ ಕಿವಿಗಳು ಕೇಳಿಸದೆ ನಿದ್ರಾಕಾಲದಲ್ಲಿ ಬಿಕ್ಕು ಕಾಣುವದೋ ಅಂಥಾವನಿಗೆ ಹತ್ತುದಿವಸದಲ್ಲಿ ಗಂಡಕಾಲವೆಂದು ತಿಳಿಯಬೇಕು.

೨೨. ದೋಷವೈಷಮ್ಯವಿಲ್ಲದೆ ಯಾವ ಮನುಷ್ಯನಪಾದನಾಡಿಯು ಮೇಲಕ್ಕೆ ಯೇಳುವಂತೆ ಚಲಿಸಿದರೆ ಅವನಿಗೆ ಗಂಡವೆಂದು ತಿಳಿಯಬೇಕು.

೨೩. ಯಾವವನ ಹೃದಯವು ಅಕಾರಣವಾಗಿ ನಡುಗಿ ದೇಹದಲ್ಲಿ ಅಭಿಮಾನ ಇಲ್ಲದೆ ಇರೋಣ, ಬಾಯಾರಿಕೆಯು ಉಂಟಾದರೆ ಅವನಿಗೆ ಆದಿನವೇ ಸಾಯಂಕಾಲದ ವಳಗಾಗಿ ಗಂಡಕಾಲವೆಂದರಿವುದು.

೬೩. ಯಾವವನಿಗೆ ಅಕ್ಷರಗಳು ಕಾಣಿಸದೆ ಮುಂದಿರುವ ವಸ್ತುವಿನ ಜ್ಞಾನವು ಆಗುವದಿಲ್ಲವೋ ಅವನಿಗೆ ಒಂದೇದಿನದ ಒಳಗೆ ಆಯುಸ್ಸು ನಾಶವೆಂದು ತಿಳಿಯಬೇಕು.

೬೪. ಧಮನೀಯೆಂದು ಹೆಸರುಳ್ಳ ವಾತನಾಡೀಯಲ್ಲಿ ಗತಿಗಳು ಕಾಣಿಸದೇ ಗಮನೀಯೆಂಬ ಪಿತ್ತನಾಡಿಯ ಗತಿಗಳು ಬಹುವೇಗಯುಕ್ತವಾಗಿರುವ ಮಾನವನು ಆರುತಿಂಗಳೇ ಬದಕುವನು.

೬೫. ಗರ್ಭಿಣೀ ಸ್ತ್ರೀಯ ಪಿತ್ತನಾಡಿಯು ಸ್ವಲ್ಪ ಶ್ಲೇಷ್ಮಪ್ರಕೋಪಯುಕ್ತವಾಗಿ ಹಾಗೆಯೇ ಮಂಡೂಕಗತಿಯನ್ನು ವಹಿಸಿದರೆ ಅವಳಿಗೆ ಗಂಡಕಾಲವೆಂದರಿಯುವದು.

೬೬. ನಾಡೀ ಡಮರುಕದಂತೆ ಚಲಿಸಿದರೆ ಅವನಿಗೆ ಒಂದು ಪಕ್ಷಿಣೀವೆಳಗಾಗಿ ಗಂಡಕಾಲವೆಂದು ತಿಳಿಯಬೇಕು.

೬೭. ಮೈಯಲ್ಲಿ ನಡುಕವು, ನಾಡೀಗತಿಗಳು ತಪ್ಪಿತಪ್ಪಿ ಭಂಗವಾಗುವದು, ಕಿವಿಗಳು ಕೇಳಿಸದೆ ಇರುವದು, ವಳ್ಳೇದಾದ ವಾಸನೆಯು ತಿಳಿಯದೇ ಇರುವದು, ನಾಲಿಗೆಯಲ್ಲಿ ರುಚಿಯಿಲ್ಲದೆ ಇರೋದು, ಅವನು ಮೃತ್ಯುವಶವಾಗುವನು.

೬೮. ತಲೆನೋವು, ಆಸನವನ್ನು ಭೇದಿಸುವದು, ದೇಹದಲ್ಲಿ ಶೈತ್ಯವು ಮತ್ತು ಆರ್ದ್ರಭಾವವು, ಮೇಲ್ಶ್ವಾಸವು, ಹೃದಯದಲ್ಲಿ ಸಂತಾಪವು, ಇವುಗಳು ಇರುವ ಮನುಷ್ಯನಿಗೆ ಮೃತ್ಯುಬಂತೆಂದು ತಿಳಿಯಬೇಕು.

೭೦. ಮೈಯಲ್ಲಿ ಬಹುಶೈತ್ಯವು, ಕಣ್ಣುಗಳ ಸಮೀಪದಲ್ಲಿ ಬೆವರುನಾಡಿಗಳಿಗೆ ಸ್ಥಾನಭ್ರಷ್ಟತ್ವವೂ ಕೂಡಾ ಯಾರಿಗೆ ಆಗುವದೋ ಅವನಿಗೆ ಯಮಾಲಯ ಪ್ರಾಪ್ತಿ ಕಾಲವೆಂದರಿಯುವದು.

೭೧. ನಾಡಿಯು ತನ್ನ ಸ್ಥಾನದಲ್ಲಿ ಹಿಮ್ಮುಖವಾಗಿ ಅರ್ಧಭಾಗವಾದರೂ ಚಲಿಸುತ್ತಿದ್ದರೆ ಅವನಿಗೆ ಮೂರು ದಿನದಲ್ಲೇ ಗಂಡಕಾಲವು.

೭೨. ನಾಡಿಯು ಚಲಿಸದೆ ಹೀನವಾಗಿ ಬಾಳೆಯ ಸುಳಿಯಂತೆ ಶೈತ್ಯಯುಕ್ತವಾಗಿ ಇದ್ದರೆ ಅವನಿಗೆ ತತ್ಕಾಲದಲ್ಲೇ ಗಂಡಕಾಲವು.

೭೩. ನಾಡಿಯು ಗತಿಯು ಸ್ವಲ್ಪಕಾಲದವರೆಗೂ ಒಳಗೆ ಅಡಗಿ ಅಲ್ಲಿಯೇ ಸೂಕ್ಷ್ಮವಾಗಿ ಚಲಿಸಿ ವಕ್ರಗತಿಗಳಿಂದ ಕೂಡಿದ್ದರೆ ಅದು ಅಸಾಧ್ಯವೆಂದು ತಿಳಿಯತಕ್ಕದ್ದು.

೭೪. ಶರೀರದಲ್ಲಿ ಅತಿಶೈತವು ತೋರಿ ಅರ್ಧಭಾಗದಲ್ಲಿ ಉಷ್ಣತ್ವವು ಕಂಡು ಕೆಟ್ಟ ಬೆವರು ಹುಟ್ಟಿ ಶವಗಂಧಯುಕ್ತವಾಗಿದ್ದು ಮುಖದಲ್ಲಿ ಶೋಭೆ ಆಗಿಂದಾಗ್ಯೆ ಕಾಣೋದು, ಆ ಮನುಷ್ಯನಿಗೆ ಏಳು ಮೂರು ದಿನಗಳಲ್ಲಿ ಗಂಡಕಾಲವೆಂದರಿಯುವದು,

೩೧. ಅಗ್ನಿಸ್ಥಾನದಲ್ಲಿ ಪಿತ್ತಗತಿಗಳು ಏಳು, ವಾತಗತಿಗಳು ಎಂಟು, ಆಸನದ್ವಾರದಿಂದ ಶಿರಸ್ಸಿನವರೆಗೂ ನಾಡಿಯು ಭೇದಿಸೋದು, ದೇಹದಲ್ಲಿ ಶೈತ್ಯವು, ಚರ್ಮವು ದಪ್ಪವಾಗಿ ಮೃದುವಾಗಿ ತೋರಿ ಊರ್ಧ್ವದೃಷ್ಟಿಯು, ಹೃದಯದಲ್ಲಿ ಸಂತಾಪವು ಇರುವ ಮನುಷ್ಯನಿಗೆ ಗಂಡಕಾಲವೆಂದು ತಿಳಿಯತಕ್ಕದ್ದು.

೩೨. ಅಂಗುಷ್ಠಮೂಲವನ್ನು ಮೊದಲುಮಾಡಿಕೊಂಡು ಹನ್ನೆರಡು ಅಂಗುಲದ ಪ್ರಮಾಣದ ಹಿಂದಕ್ಕೆ ನಾಡೀಗತಿಗಳು ವೇಗಯುಕ್ತಗಳಾಗಿ ಹಿಮ್ಮುಖಕ್ಕೆ ಚಲಿಸುತ್ತಿದ್ದರೆ ಆ ಮನುಷ್ಯನಿಗೆ ಗಂಡಕಾಲವೆಂದು ತಿಳಿಯತಕ್ಕದ್ದು.

೩೩. ಅಗ್ನಿಸ್ಥಾನದಲ್ಲಿ ನಾಡೀಗತಿಗಳು ಮೂರು, ಆರು, ಒಂಭತ್ತು ಈ ಪ್ರಕಾರ ಮೊದಲಲ್ಲಿ ಒಂದು ಆಮೇಲೆ ಮೂರು, ಎರಡು ಗತಿಗಳು ಕಡಮೆಯಾದರೆ ಗಂಡಕಾಲವೆಂದು ತಿಳಿಯಬೇಕು.

ಡಂಭಕರ್ಮಲಕ್ಷಣ.—ಪೂರ್ವೋಕ್ತರೀತ್ಯಾ ಮನುಷ್ಯನ ದೇಹದಲ್ಲಿ ಇಪ್ಪತ್ತೇಳು ನಕ್ಷತ್ರಗಳು ಇರುವವಷ್ಟೆ. ಆಯಾ ನಕ್ಷತ್ರಸ್ಥಾನಗಳಲ್ಲಿ ರೋಗಗಳು ಹುಟ್ಟುವವೆಂದು ಆಯುರ್ವೇದದಲ್ಲಿ ಹೇಳಿರುತ್ತದೆ. ರೋಗಗಳಿಗೆ ಚಿಕಿತ್ಸೆಯನ್ನು ತೇಜಕಾರಶಾಸ್ತ್ರದಲ್ಲಿ ಡಂಭಕರ್ಮವೆಂದು ಹೆಸರನ್ನು ಇಟ್ಟು ಹೇಳಲ್ಪಟ್ಟಿರುವದು. ಅದರ ನಿದರ್ಶನಕ್ಕೋಸ್ಕರ ಮನುಷ್ಯನ ದೇಹಾಕೃತಿಯನ್ನು ಮತ್ತು ನಕ್ಷತ್ರ ರೋಗಸ್ಥಾನಗಳನ್ನು ಸಹ ತಿಳಿಯುವಂತೆ ಹೇಳಿರುತ್ತದೆ. ಡಂಭಕರ್ಮವೆಂದರೆ ಬರೆಗಳನ್ನು ಹಾಕತಕ್ಕ ವಿಧಾನವು. ಬರೆಗಳನ್ನು ಹಾಕುವದಕ್ಕೆ ಸಲಾಕೆಗಳು, ಅವುಗಳ ರೀತಿಗಳು ಸಹ ವಿವರಿಸಲ್ಪಡುತ್ತದೆ. ಚಿನ್ನ, ಬೆಳ್ಳಿ, ತಾಂಬ್ರ, ಕಂಚು, ಕಬ್ಬಿಣ, ಮಣ್ಣು ಇವುಗಳಿಂದ ಮಾಡಿದ ಶಲಾಕೆಗಳು ಇದಕ್ಕೆ ಉಪಯೋಗಗಳು. ಈ ಶಲಾಕೆಗಳನ್ನು ಒಂದಕ್ಕೊಂದು ಸೇರದಂತೆ ಶೋಧಿತ ಲೋಹಪದಾರ್ಥಗಳಿಂದ ಮಾಡಬೇಕು. ಮುಂದೆ ಹೇಳಿರುವ ರೀತಿಯಾಗಿ ಶಲಾಕೆಗಳನ್ನು ಅಗ್ನಿಯಲ್ಲಿ ಕಾಸಿ ಚಿಕಿತ್ಸೆಯನ್ನೂ ಮಾಡತಕ್ಕದ್ದು. ರೋಗಪ್ರಭೇದಗಳನ್ನೂ ಶಲಾಕಾಪ್ರಭೇದಗಳನ್ನೂ, ದೇಶಕಾಲಗಳನ್ನೂ, ಬಲಾಬಲಲಕ್ಷಣಗಳನ್ನೂ, ಶಾಸ್ತ್ರೋಕ್ತರೀತ್ಯಾ ವೈದ್ಯನು ತಿಳಿದು ಚರ್ಮ, ರಕ್ತ, ಮಾಂಸ, ಮೂಳೆ ಇವುಗಳವರೆಗೂ ಬರೆಗಳನ್ನು ಹಾಕತಕ್ಕದ್ದು. ರಕ್ತಪಿತ್ತರೋಗಿ, ಬಾಲರು, ಬಲಹೀನರು, ಗರ್ಭಿಣೀರು, ವೃದ್ಧರು ಇವರುಗಳಿಗೆ ಬರೆಗಳನ್ನು ಹಾಕಕೂಡದು. ದೇಶಕಾಲಗಳನ್ನೂ, ಅವನ ಶಕ್ತಿಯನ್ನೂ, ಆ ರೋಗವನ್ನೂ, ಆರೋಗೋತ್ಪತ್ತಿಸ್ಥಾನವನ್ನೂ, ಮರ್ಮಸ್ಥಾನವನ್ನೂ, ಅವನ ಸಹನಶಕ್ತಿಯನ್ನೂ ಚೆನ್ನಾಗಿ ತಿಳಿದು ಬುದ್ಧಿವಂತನಾದ ವೈದ್ಯನು ತಾನೂಕೂಡಾ ಚೆನ್ನಾಗಿ ಆಲೋಚಿಸಿ ಪ್ರತಿಕ್ರಿಯೆಗಳನ್ನು ಮಾಡಬೇಕು.

ಕಾಲುಗಳನ್ನು ಮೊದಲುಮಾಡಿಕೊಂಡು ತಲೇವರಿಗೂ ಅವಯವಗಳಲ್ಲಿ ಇರುವ ಪದ್ಮಗಳನ್ನೂ, ಆ ನಕ್ಷತ್ರಗಳನ್ನೂ, ಆ ಸ್ಥಳಗಳಲ್ಲಿ ಹುಟ್ಟುವ ರೋಗಗಳನ್ನೂ ಸಹ ಹೇಳಲ್ಪಡುತ್ತೆ:—

೧. ಎರಡು ಪಾದಗಳಲ್ಲಿಯೂ ಶರೀರಧಾರಕಪದ್ಮಗಳು ಇರುವವು, ಅವುಗಳಲ್ಲಿ ಅಶ್ವಿನೀ ನಕ್ಷತ್ರವು ಇರುವದು. ಅಲ್ಲಿ ನಾನಾವಿಧಗಳಾದ ಜ್ವರಗಳು ಹುಟ್ಟುವವು.

೨. ಎರಡು ಮೊಣಕಾಲುಗಳಲ್ಲಿ ಗಮನೋಪಕಾರಕ ಕಮಲಗಳು ಇರುವವು. ಅವುಗಳಲ್ಲಿ ಭರಣೀ ನಕ್ಷತ್ರವು ಇರುವದು. ಅದರಿಂದ ಅತಿಸಾರ ರೋಗೋತ್ಪತ್ತಿಯಾಗುವದು.

೩. ಜಂಘಿದ್ವಯಗಳಲ್ಲಿ ಜಂಗಮ ಶರೀರಧಾರಕ ಪದ್ಮಗಳು ಕೃತ್ತಿಕಾ ನಕ್ಷತ್ರಯುಕ್ತವಾಗಿ ಇರುವವು. ಅಲ್ಲಿಯೇ ಗೃಹಣೀರೋಗ ಹುಟ್ಟುವದು.

೪. ತೊಡೆಗಳಲ್ಲಿ ಜಂಗಮಾಧಾರಕ ಪದ್ಮಗಳು ಇರುವವು. ರೋಹಿಣೀ ನಕ್ಷತ್ರಸ್ಥಾನದಲ್ಲಿಯೇ ಪಕ್ಷವಾಯು ರೋಗ ಹುಟ್ಟುವದು.

೫. ಕಟಿಯಲ್ಲಿ ಸುಖಕಾರಕ ಕಮಲ ವಿರುವದು. ಅದು ಮೃಗಶೀರ್ಷ ನಕ್ಷತ್ರಸ್ಥಾನವು. ಅಲ್ಲಿ ಅಜೀರ್ಣರೋಗವು ಬಹಳವಾಗಿ ಹುಟ್ಟುವದು.

೬. ವಸ್ತಿಯುಗ್ಮದಲ್ಲಿ ಅತಿಸುಖಕಾರಕ ಕಮಲವು ಆರ್ದ್ರಾನಕ್ಷತ್ರಯುಕ್ತವಾಗಿರುವದು. ಅಲ್ಲಿಯೇ ಮಂದಾನಿಲರೋಗವು ಹುಟ್ಟುವದು.


೭. ಅದರಮೇಲೆ ಇರುವ ವಂಕ್ಷಣಯುಗ್ಮದಲ್ಲಿ ಮೇಲೆ ಹೇಳಲ್ಪಟ್ಟ ಪದ್ಮಗಳೂ, ಪುನರ್ವಸುನಕ್ಷತ್ರವೂ ಇರುವವು. ಅಲ್ಲಿಯೇ ಸೂತ್ರಿಕಾರೋಗಗಳು ಹುಟ್ಟುವವು.

೮. ಪ್ರಧಾನದಲ್ಲಿ ಪ್ರಜಾಜನಕ ಕಮಲವಿರುವದು. ಅಲ್ಲಿಯೇ ಪುಷ್ಯ ನಕ್ಷತ್ರವಿರುವದು. ಅಲ್ಲಿಯೇ ಅರುಚಿರೋಗ ಹುಟ್ಟುವದು.

೯. ಹೊಕ್ಕಳಲ್ಲಿ ಶ್ವಾಸವಾಯುಗತಿಕಾರಕ ಕಮಲವು ಇರುವದು. ಅದೇ ಕುಂಡಲಿನೀ ಸ್ಥಾನವು, ಆಶ್ಲೇಷಾ ನಕ್ಷತ್ರಸ್ಥಾನವು, ಪಾಂಡುರೋಗೋತ್ಪತ್ತಿಯಾಗುವದು.

೧೦. ಅದರ ಮೇಲೆ ಪಾಚಕಪಿತ್ತ ಪ್ರತಿಪಾದಕ ಪದ್ಮವಿರುವದು. ಅದೇ ಕುಂಡಲೀರೂಪವಾದ ಗರ್ತದಲ್ಲಿ ಮಘಾನಕ್ಷತ್ರ ವಿರುವದು. ಅಲ್ಲಿಯೇ ಶ್ವಾಸರೋಗ ಹುಟ್ಟುವದು.

ಮನುಷ್ಯನ ಆಕಾರ.



೧೧. ಅಂಡದಲ್ಲಿ ಸಪ್ತಧಾತುನಾಳಪೋಷಕ ಕಮಲವು ಪುಬ್ಬಾನಕ್ಷತ್ರಯುಕ್ತವಾಗಿರುವದು. ಅಲ್ಲಿಯೇ ಕಾಸರೋಗ ಹುಟ್ಟುವದು.

೧೨. ಗುದಸ್ಥಾನದಲ್ಲಿ ವಿಸರ್ಜನಸುಖಕಾರಕವಾದ ಕಮಲವು ಉತ್ತರಾನಕ್ಷತ್ರಯುಕ್ತವಾಗಿರುವದು. ಅದೇ ಕುಷ್ಠರೋಗೋತ್ಪತ್ತಿ ಸ್ಥಾನವು. ಮತ್ತು ಸ್ವಾಧಿಷ್ಠಾದಲ್ಲಿ ಸರ್ವರೋಗದ್ಯೋತಕವಾದ ಕಮಲ ವಿರುವದು. ಅಲ್ಲಿ ಪೂರ್ವೋಕ್ತರೋಗನಕ್ಷತ್ರಗಳು ಇರುವವು.

೧೩. ಹೊಟ್ಟೆಯ ದಕ್ಷಿಣಭಾಗದಲ್ಲಿ ದಕ್ಷಿಣಪಕ್ಷವೆಂಬ ಕಮಲ ವಿರುವದು. ಅದೇ ಗರ್ಭಾಶಯವು. ಅಲ್ಲಿಯೇ ಹಸ್ತನಕ್ಷತ್ರ ವಿರುವದು. ಅದೇಯೇ ಮೇಹರೋಗೋತ್ಪತ್ತಿ ಸ್ಥಾನವು.

೧೪. ಹೊಟ್ಟೆಯ ವಾಮಭಾಗದಲ್ಲಿ ವಾಮೋದರವೆಂಬ ಕಮಲ ವಿರುವದು. ಅದೇ ಪೂರ್ಣಗರ್ಭಾಶಯವೆನ್ನಿಸುವದು. ಚಿತ್ತಾನಕ್ಷತ್ರ ಕುಕ್ಷಿರೋಗೋತ್ಪತ್ತಿ ಸ್ಥಾನವು.

೧೫. ಸ್ತ್ರೀ ಪುರುಷರ ದಕ್ಷಿಣ ಕುಚಸ್ಥಾನದಲ್ಲಿ ಸ್ವರವಿಭೇದಕವೆಂಬ ಪದ್ಮ ವಿರುವದು. ಅಲ್ಲಿಯೇ ನೇತ್ರರೋಗೋತ್ಪತ್ತಿಯಾಗುವದು. ಅದೇ ಸ್ವಾತೀ ನಕ್ಷತ್ರಸ್ಥಾನವು.

೧೬. ವಾಮಸ್ತನದಲ್ಲಿ ಸ್ವರಭೇದಕ ಕಮಲವು ವಿಶಾಖಾನಕ್ಷತ್ರಯುಕ್ತವಾಗಿರುವದು. ಅಲ್ಲಿಯೇ ಕರ್ಣರೋಗಗಳು ಹುಟ್ಟುವವು.

೧೭. ಸ್ತ್ರೀ ಪುರುಷರ ದಕ್ಷಿಣ ಭುಜದಲ್ಲಿ ಊರ್ಧ್ವಕಾಯಾಧಾರಕ ಕಮಲವು ಅನೋರಾಧಾ ನಕ್ಷತ್ರದಿಂದ ಕೂಡಿ ಇರುವದು. ಅದೇ ನಾಸಾರೋಗೋತ್ಪತ್ತಿಸ್ಥಾನವು.

೧೮. ವಾಮಭುಜದಲ್ಲಿ ಊರ್ಧ್ವಕಾಯಾಧಾರಕ ಪದ್ಮವಿರುವದು. ಅಲ್ಲಿಯೇ ಜೇಷ್ಠಾನಕ್ಷತ್ರವಿರುವದು. ಅದೇ ಅಂಭಸ್ಕಾರ ರೋಗೋತ್ಪತ್ತಿ ಸ್ಥಾನವು.

೧೯. ದಕ್ಷಿಣಬಾಹುವಿನಲ್ಲಿ ಸರ್ವಕರ್ಮೋಪಕಾರಕ ಕಮಲವು ಮೂಲಾ ನಕ್ಷತ್ರಯುಕ್ತವಾಗಿರುವದು. ಅದೇ ಕ್ಷಯರೋಗೋತ್ಪತ್ತಿಸ್ಥಾನವು.

೨೦. ವಾಮಬಾಹುವಿನಲ್ಲಿ ಸರ್ವಕರ್ಮೋಪಕಾರಕ ಕಮಲವು ಪೂರ್ವಾಷಾಢಾ ನಕ್ಷತ್ರಯುಕ್ತವಾಗಿರುವದು. ಅದೇ ನರದ ರೋಗೋತ್ಪತ್ತಿಸ್ಥಾನವು.

೨೧. ದಕ್ಷಿಣಪ್ರಕೋಷ್ಠದಲ್ಲಿ ಹಸ್ತಕೌಶಲ್ಯಜ್ಞಾಪಕ ಪದ್ಮವು ಉತ್ತರಾಷಾಢಾ ನಕ್ಷತ್ರಯುಕ್ತವಾಗಿರುವದು. ಛರ್ದಿರೋಗವು ಅಲಿಯೇ ಹುಟ್ಟುವದು.

೨೨. ವಾಮಪ್ರಕೋಷ್ಟದಲ್ಲಿ ಹಸ್ತಕೌಶಲ್ಯಜ್ಞಾಪಕ ಕಮಲವು ಶ್ರವಣ ನಕ್ಷತ್ರಯುಕ್ತವಾಗಿರುವದು. ಅದೇ ಹೃತ್ಪದ್ಮ ರೋಗೋತ್ಪತ್ತಿಸ್ಥಾನವು.

೨೩. ಬಲದ ಅಂಗೈಯಲ್ಲಿ ಸರ್ವಾರ್ಥಾಭಿನಯಜ್ಞಾಪಕ ಕಮಲವು ಧನಿಷ್ಠಾ ನಕ್ಷತ್ರಯುಕ್ತವಾಗಿರುವದು ಅದೇ ವಾತರೋಗಗಳ ಸ್ಥಾನವು.

೨೪. ಎಡದ ಅಂಗೈಯಲ್ಲಿ ಪೂರ್ವೋಕ್ತ ನಾಮಧೇಯಕ ಕಮಲವು ಶತತಾರಾ ನಕ್ಷತ್ರ ಯುಕ್ತವಾಗಿರುವದು. ಅದೇಯೇ ಪಿತ್ತರೋಗೋತ್ಪತ್ತಿಸ್ಥಾನವು.

೨೫. ಕಂಠಕೂಪದಲ್ಲಿ ಸ್ವರಭೇದ ಸೂಚಕ ಕಮಲವು ಪೂರ್ವಾಭಾದ್ರಾಯುಕ್ತವಾಗಿರುವದು. ಇದೇ ಕಫರೋಗೋತ್ಪತ್ತಿ ಸ್ಥಾನವು, ಮತ್ತು ಕುತ್ತಿಗೆಯಲ್ಲಿ ಅದೇ ಕಮಲವು ಅದೇ ನಕ್ಷತ್ರಯುಕ್ತವಾಗಿ ಅದೇ ಕಫ ವ್ಯಾಧಿಯನ್ನು ಹುಟ್ಟಿಸುವ ಸ್ಥಾನವು.

೨೬. ಇಚ್ಛಾ ಪ್ರಯತ್ನ ಆತ್ಮಬೋಧಗಳಿಗೆ ಕಾರಣವಾದ ಹೃದಯಾಖ್ಯ ಕಮಲ ಉತ್ತರಾಭಾದ್ರಾಯುಕ್ತವಾಗಿ ಭ್ರೂಮಧ್ಯದಲ್ಲಿ ಇರುವದು. ಉನ್ಮಾದ ರೋಗವು ಅಲ್ಲಿಯೇ ಹುಟ್ಟುವದು.

೨೭. ತಲೆಯಲ್ಲಿ ಸಕಲ ವರ್ಣಜ್ಞಾನ ಜ್ಞಾಪಕ ಕಮಲವು ರೇವತೀನಕ್ಷತ್ರಯುಕ್ತವಾಗಿರುವದು. ಅದೇ ವ್ರಣೋತ್ಪತ್ತಿ ಸ್ಥಾನವು.

ಮೇಲೆ ಹೇಳಲ್ಪಟ್ಟ ಶಲಾಕೆಗಳಲ್ಲಿ ಚಿಂನದ ಶಲಾಕೆಯನ್ನು ಕಾಡು ಬೆರಣಿಗಳಿಂದ ಚೆನ್ನಾಗಿ ಕಾಸಿ ಮುಂದೆ ಹೇಳುವ ರೋಗಗಳಿಗೆ ಚರ್ಮದವರೆಗೆ ಬರೆಯನ್ನು ಹಾಕಿ ಅದರ ಶಮನಾರ್ಥವಾಗಿ ಬೆಣ್ಣೆಯನ್ನು ಹಚ್ಚುತ್ತಾ ಇರಬೇಕು.

ತಲೆ, ಕಣ್ಣುಗಳ ರೋಗಗಳಲ್ಲಿ ಆಲೋಚನೆಯನ್ನು ಮಾಡಿ ಶಂಖಸ್ಥಾನದಲ್ಲಿ ಬರೆಯನ್ನು ಹಾಕಬೇಕು. ಮತ್ತು ಆಂತ್ರವೃದ್ಧಿರೋಗಕ್ಕೆ ಮಾತ್ರ ಬರೆಯನ್ನು ಹಾಕಿದಮೇಲೆ ಹರಳೆಣ್ಣೆಯನ್ನು ಹಚ್ಚಿಸಿ ಮೇಲೆ ಹೇಳಲ್ಪಟ್ಟ ಶಂಖಸ್ಥಾನದ ಬರೆಗಳ ಶಮನಾರ್ಥವಾಗಿ ಬೆಣ್ಣೆಯನ್ನು ಹಚ್ಚಿಸುತ್ತಿರಬೇಕು.

ಜಿಹ್ವಾರೋಗ, ಕರ್ಣಮೂಲ, ತಾಲುರೋಗ, ಮುಖರೋಗ, ಆಂತ್ರವೃದ್ಧಿ, ಸಂಧಿಕೋಭೆ, ಶಂಖರೋಗ, ಚರ್ಮರೋಗ ಇವುಗಳಲ್ಲಿಯೂ, ಹಾವು ದನ, ಹಲ್ಲುಳ್ಳ ಪ್ರಾಣಿಗಳು, ನರಿ, ಕಪಿ, ಹೆಂಗಸರು ಇವರುಗಳ ವಿಷಯಗಳಲ್ಲಿಯೂ, ಸಂಧಿಶೂಲೆ, ಮಕ್ಕಳಹೊಟ್ಟೆಯಲ್ಲಿ ಹುಟ್ಟಿದ ರೋಗ, ಇವುಗಳಿಗೆಲ್ಲಾ ಬ್ರಹ್ಮಸ್ಥಾನರೋಗವೆಂದು ಹೆಸರು. ಅದ್ದರಿಂದ ಇವುಗಳಿಗೆ ರಸ್ಸಿನ ಸುಳಿಯ ಮುಂಭಾಗದಲ್ಲಿ ಚಿನ್ನಬೆಳ್ಳಿಗಳಿಂದ ಮಾಡಲ್ಪಟ್ಟ ಶಲಾಕೆಗಳಿಂದ ಚಿಕಿತ್ಸೆಯಂ ಮಾಡಿ ಇವುಗಳ ಶಮನಾರ್ಥವಾಗಿ ಬೆಣ್ಣೆ ಮತ್ತು ಹರಳೆಣ್ಣೆಗಳನ್ನು ಹಚ್ಚಿಸಬೇಕು.

ಬೆಳ್ಳಿಯ ಶಲಾಕೆ ಕಾರ್ಯಗಳನ್ನು ವಿವರಿಸಲ್ಪಡುತ್ತೆ.—ಮಂದಾಗ್ನಿ, ಪಿತ್ತರೋಗ ಇವುಗಳು ಹುಟ್ಟುವ ಸ್ಥಾನಗಳಲ್ಲಿ ಶಲಾಕೆಯನ್ನು ಹಿಂದೆ ಹೇಳಿರುವ ರೀತಿ ಕಾಸಿ ರಕ್ತದವರೆಗೂ ಬರೆಯನ್ನು ಹಾಕತಕ್ಕದ್ದು. ಉನ್ಮಾದ, ವಾತ

ರೋಗಗಳಲ್ಲಿ ಎರಡು ಶಂಖಪಾರ್ಶ್ವ ಅಂದರೆ ತಲೆಗೂ ಕೆಂನೆಗೂ ಮಧ್ಯೆ ಕಂಣಿನ ಬಾಜುವಿನಲ್ಲಿರುವ ಸ್ಥಳಕ್ಕೆ ಹೆಸರು. ಅಲ್ಲಿ ಒಂದೊಂದು ಬರೆಯನ್ನು ಚರ್ಮಾವಧಿ ಹಾಕಬೇಕು. ಕಾಲು ಹಿಂದಗಡೆಯಲ್ಲೂ, ನಾಭೀಸಮಸ್ಥಾನದಲ್ಲೂ, ಪೃಷ್ಠಗ್ರಂಥಿಯಲ್ಲೂ ಎರಡೆರಡು ಬರೆಗಳನ್ನು ಹಾಕಬೇಕು. ತಲೆಮೇಲೆ ೧, ಹಣೆಮೇಲೆ ೧ ರಕ್ತದವರಿಗೂ ಹಾಕಬೇಕು. ಕಾವಿಲ್ಲುರೋಗದಲ್ಲೂ, ತಲೆನಡಕದಲ್ಲೂ, ನಡುವಿನ ರೋಗದಲ್ಲೂ, ತಲೆ ನೋವಿನಲ್ಲೂ, ದೇಹಕಾರ್ಶ್ಯದಲ್ಲೂ, ಪೃಷ್ಠರೋಗದಲ್ಲೂ, ಬಾಯಿಯಲ್ಲಿ ದುರ್ಗಂಧ ಹುಟ್ಟುವ ರೋಗದಲ್ಲೂ ಕೂಡಾ ಹಿಂದೆ ಹೇಳಿರತಕ್ಕ ರೀತಿಯಾಗಿ ಶಲಾಕೆಯನ್ನು ಕಾಸಿ ಆಯಾ ಸ್ಥಳಗಳಲ್ಲಿ ರಕ್ತದವರಿಗೆ ಬರೆಯನ್ನು ಹಾಕಿ ಅವುಗಳ ಶಾಂತಿಗೋಸ್ಕರ ಕೈಯಂಣೆಯನ್ನು ಮೇಲೆ ಮೇಲೆ ಹಚ್ಚಿಸಬೇಕು.

ತಾಮ್ರಶಲಾಕಾ ಕಾರ್ಯವನ್ನು ವಿವರಿಸುತ್ತೆ.—ಈಶಲಾಕೆಯನ್ನು ಎಥೋಚಿತವಾಗಿ ಕಾಸಿ ಕೆಳಗೆ ಹೇಳುವ ರೋಗಗಳಿಗೆ ಧೈರ್ಯಶಾಲಿಯಾದ ವೈದ್ಯನು ಮಾಂಸದವರಿಗೂ ಬರೆಯನ್ನು ಹಾಕತಕ್ಕದ್ದು.

ಪಾಂಡು, ಶೋಭೆ, ಉದರರೋಗ ಇವುಗಳಲ್ಲಿ ನಾಭೀಮೇಲೆ ಒಂದು ಅಂಗುಲ ಪ್ರಮಾಣವನ್ನು ಬಿಟ್ಟು ನಾಭಿಸುತ್ತಲೂ ನಾಲ್ಕು ಬರೆಗಳನ್ನು ಹಾಕಬೇಕು. ಜಲೋದರದಲ್ಲಿಯೂ ಅದೇಮೇರೇ ಹಾಕತಕ್ಕದ್ದು. ಗುಲ್ಮ, ಅಪಸ್ಮಾರ, ದಾಹ, ಮಕ್ಕಳ ಹೊಟ್ಟೆಯು ರೋಗ, ಭಗಂದರ, ಅಶ್ಮರಿ, ಶೂಲೆ, ಶ್ವಾಸ, ತಲೆರೋಗಗಳಲ್ಲಿಯೂ, ಪಿತ್ತರೋಗದಲ್ಲಿಯೂ, ಮೂತ್ರರೋಗದಲ್ಲಿಯೂ ಇವುಗಳು ಹುಟ್ಟುವ ಸ್ಥಾನಗಳನ್ನು ತಿಳಿದು ಪೂರ್ವೋಕ್ತಕ್ರಮದಿಂದ ಬರೆಯನ್ನು ಹಾಕತಕ್ಕದ್ದು. ಇದರ ಶಾಂತ್ಯರ್ಥವಾಗಿ ಹರಳೆಂಣೆಯನ್ನು ಹಚ್ಚಿಸಬೇಕು.

ಕಬ್ಬಿಣದ ಶಲೂಕೆಯ ಕಾರ್ಯವನ್ನು ವಿವರಿಸುತ್ತೆ.— ನೇರಳೆಯ ಇದ್ದಲಿನಿಂದ ಈಶಲಾಕೆಯನ್ನು ಕಾಸಿ ಬುದ್ಧಿಶಾಲಿಯಾದ ವೈದ್ಯನು ಮುಂದೆ ಹೇಳುವರೋಗಗಳಲ್ಲಿ ಮೂಳೆವರಿಗೂ ಬರೆಯನ್ನು ಹಾಕತಕ್ಕದ್ದು.

ಹೃದ್ರೋಗ, ಕಾಸ, ಶ್ವಾಸ, ಕ್ಷಯ ಇವುಗಳಲ್ಲಿ ಎದೆಮೇಲೆ ಒಂದು ಬರೆಯನ್ನು, ಅದರ ಪಾರ್ಶ್ವ ನಾಲ್ಕರಲ್ಲಿಯೂ ಅಡ್ಡಡ್ಡಾಗಿ ನಾಲ್ಕು ಬರೆಗಳನ್ನು ಹಾಕಬೇಕು. ಕ್ಷಯರೋಗದಲ್ಲಿ ಹನ್ನೆರಡು ಬರೆಗಳನ್ನು ಹಾಕತಕ್ಕದ್ದು. ಈ ಬರೆಗಳಲ್ಲಿ ತಲೆಮೇಲೆ ಆರು, ಹೊಟ್ಟೇಮೇಲೆ ಒಂದು, ಅದರ ಪಾರ್ಶ್ವಗಳಲ್ಲಿ ಎರಡು, ಅದರ ಕೆಳಭಾಗದಲ್ಲಿ ಒಂದು, ಪಕ್ಕೆಯಲ್ಲಿ ಎರಡು ಸಹ ಹಾಕತಕ್ಕದ್ದು. ಸನ್ನಿಪಾತರೋಗದಲ್ಲಿ ತಲೆಮೇಲೆ ಬರೆಯನ್ನು ಹಾಕಬೇಕು. ಅಜೀರ್ಣದಲ್ಲಿಯೂ, ಅಸ್ಥಿರೋಗದಲ್ಲಿಯೂ, ಜಡತ್ವದಲ್ಲಿಯೂ, ಎರಡುವಿಧವಾದ ವಮನಗಳಲ್ಲಿಯೂ, ವೈಕ್ಲೈತ್ಯದಲ್ಲಿಯೂ, ಮೂರ್ಛೆಯಲ್ಲಿಯೂ, ದವಡೆಗಟ್ಟುಗಳಲ್ಲಿಯೂ, ಮೂತ್ರಾತಿಸಾರದಲ್ಲೂ, ಭಾದಿರ್ಯದಲ್ಲೂ, ಬಿಕ್ಕಳಿಕೆಯಲ್ಲೂ, ರಕ್ತ

ವಿದ್ರಧಿಯಲ್ಲೂ, ಪೃಷ್ಠಭಾಗದ ರೋಗದಲ್ಲೂ, ಲಲಾಟರೋಗದಲ್ಲಿಯೂ ಹಿಂದೇ ಹೇಳಿದ ಕಬ್ಬಿಣದ ಶಲಾಕೆಯಿಂದ ಹಿಂಬದಿಮೇಲೆ ಬರೆಯನ್ನು ಹಾಕಿ ತಚ್ಛಾಂತ್ಯರ್ಥವಾಗಿ ಆಕಳ ಮೊಸರಿನಲ್ಲಿ ಇಂಗನ್ನು ತೆಯಿದು ಲೇಪಿಸತಕ್ಕದ್ದು.

ಕಂಚಿನ ಶಲಾಕೆ ಕಾರ್ಯವನ್ನು ವಿವರಿಸುತ್ತೆ.—ಹಿಂದೆ ಹೇಳಿದಂತೆಯೇ ಕಾದುಬೆರಣಿಯಿಂದ ಕಾಸಿ ಕಾಮಾಲೆ, ವಿದ್ರಧಿ, ಪ್ಲೀಹ, ಬ್ರಹ್ಮಸ್ಥಾನದಲ್ಲಿ ಹುಟ್ಟಿದ ರೋಗ ಇವುಗಳು ಹುಟ್ಟಿದ ಸ್ಥಾನವಂನು ತಿಳದು ಬರೆಯನ್ನು ಹಾಕತಕ್ಕದ್ದು. ಈ ರೋಗಗಳಿಗೆ ಬರೆಯಂನು ಹಾಕಿ ಅದರ ಮೇಲೆ ಟಿಂನದ ಶಲಾಕೆಯಿಂದ ಯೋಗ್ಯತೆಯನ್ನರಿತು ನಾಲ್ಕು ಬರೆಗಳಂನು ನಾಲ್ಕು ಅಂಗುಲಪ್ರಮಾಣವಾಗಿ ಹಾಕಬೇಕು. ಯೆಲ್ಲೆಲ್ಲಿ ರೋಗವಿರುವದೋ ಅಲ್ಲಲ್ಲಿ ಬರೆಯನ್ನು ಹಾಕುವದು. ಅಜೀರ್ಣವಾತರೋಗಗಳಲ್ಲಿ ನಾಭೀಕೆಳಗೆ ಮೂರು ಅಂಗುಲ ಪ್ರಮಾಣವಂನ್ನು ಬಿಟ್ಟು ಚರ್ಮ ಸುಡುವವರಿಗೂ ಬರೆಯನ್ನು ಹಾಕಬೇಕು. ಶಂಖರೋಗ, ರಕ್ತದೋಷ, ನಡಗು, ವಾಯು, ಮೈಬಾವು, ಉದಾವರ್ತ, ಕೂಲೆ, ಗೃಹಣೀ ಇವುಗಳಲ್ಲಿ ರಕ್ತದವರಿಗೂ ಮನ್ಯಾಸ್ಥಾನದಲ್ಲಿ ಅಂದರೆ ತಲೆಗೂ ಬೆನ್ನಿಗೂ ಸೇರಿಯಿರುವ ಧಪ್ಪಮೂಳೆಯಲ್ಲಿ ಬರೆಯನ್ನು ಹಾಕಿ ಅದರ ಶಾಂತ್ಯರ್ಥವಾಗಿ ಯೇರಂಡತೈಲವಂನು ಹಚ್ಚಿಸಬೇಕು. ಕರ್ಣ, ನೇತ್ರ ರೋಗಗಳಲ್ಲಿ ಹುಬ್ಬಿನ ಮಧ್ಯದಲ್ಲಿಯೂ, ಕಿವಿಗಳಮೇಲೆಯೂ, ಬರೆಗಳಂನು ಗುಂಡಗೆ ಹಾಕಬೇಕು. ತಲೆನೋವಿನಲ್ಲಿ ಮೂಗಿನ ಕೊನೆಯಂನು ಮೊದಲುಮಾಡಿ ಬ್ರಹ್ಮರಂಧ್ರದವರಿಗೂ ಆಗುವ ಒಂದು ಚೋಟು ಸ್ಥಳವನ್ನು ಬಿಟ್ಟು ಅದರ ಮೇಲುಗಡೆಯಲ್ಲಿ ವರ್ತುಲಾಕಾರವಾಗಿ ಬರೆಯನ್ನು ಹಾಕತಕ್ಕದ್ದು. ಶಂಖಪ್ರದೇಶದ ಮೇಲುಭಾಗದಲ್ಲಿ ವರ್ತುಲಾಕಾರವಾಗಿ ಎರಡು ಬರೆಗಳಂನು ಹಾಕಿ ಆದರ ಶಾಂತ್ಯರ್ಥವಾಗಿ ಹರಳೆಂಣೆ ಶುದ್ಧವಾದ್ದಂನು ಹಚ್ಚಿಸಬೇಕು.

ಮಂಣಿನ ಶಲಾಕೆ ಕಾರ್ಯವಂನ್ನು ಹೇಳುತ್ತೇನೆ.— ಈ ಶಲಾಕೆಯಂನ ಕಾದು ಬೆರಣಿಯಿಂದ ಕಾಸಿ ರಕ್ತದವರಿಗೂ ಬರೆಯನ್ನು ಹಾಕತಕ್ಕದ್ದು. ಹಾವು, ಚೇಳು, ಮತ್ತು ಇತರ ಪ್ರಾಣಿಗಳು, ಶತಪದಿ ಇವುಗಳೇ ಮೊದಲಾದ ದುಷ್ಟಪ್ರಾಣಿಗಳು ಕಚ್ಚಿದ ಸ್ಥಳದಲ್ಲಿಯೇ ಚರ್ಮದವರಿಗೂ ಬರೆಯಂನು ಹಾಕಿ ಮೇಲೆ ಕೈಯಣ್ಣೆಯನ್ನು ಹಚ್ಚಿಸಬೇಕು. ಮತ್ತು ಕಾಮಿಲಾರೋಗಕ್ಕೆ ಬ್ರಹ್ಮಸ್ಥಾನದಲ್ಲಿಯೂ, ಪ್ಲೀಹಾ ರೋಗದಲ್ಲಿ ಅದು ಹುಟ್ಟಿದ ಸ್ಥಾನವಂನು ತಿಳದು ಚರ್ಮದವರಿಗೂ ಬರೆ ಹಾಕಬೇಕು. ಮರ್ಮಸ್ಥಾನದಲ್ಲಿ, ಹೆಂಗಸುರುಗಳ ಸ್ತನಪ್ರದೇಶಗಳಲ್ಲಿ, ಗಂಡಸಿನ ಮಿದುಳಿನ ಮೇಲೆಯೂ ಬರೆಯಂನು ಹಾಕಲೇಕೂಡದು ಅಥವಾ ಹಾಕಬೇಕಾದರೆ ಚರ್ಮಾವಧಿಯಾಗಿಯೇ ಹಾಕತಕ್ಕದ್ದು.

ಈ ಮೇಲೆ ಹೇಳಿಯಿರುವ ಡಂಭಕರ್ಮವು ಶಕ್ತರಾದ ಜನಗಳಿಗೆ ಯೋಗ್ಯವೇ ಹೊರ್ತು ಕೃಶರಾದ ಬಲಹೀನರಾದ ಜನಗಳಿಗೆ ಮಾಡಕೂಡದು.

ದಿನಚರ್ಯೆ.

೧. ಸ್ವಸ್ಥವಾಗಿರುವ ಮನುಷ್ಯನ ಲಕ್ಷಣ.—ವಾತ, ಪಿತ್ತ, ಶ್ಲೇಷ್ಮಗಳು, ಅಗ್ನಿಯು, ಸಪ್ತಧಾತುಗಳು, ಬಲವು, ಕ್ರಿಯೆಯು ಸಹ ಉಕ್ತರೀತ್ಯಾ ಸರಿಯಾಗಿದ್ದು ಮನಸ್ಸು, ಇಂದ್ರಿಯ, ಆತ್ಮ ಇವುಗಳು ಪ್ರಸನ್ನಗಳಾಗಿದ್ದರೆ ಅಂಥಾ ಮನುಷ್ಯನು ಸ್ವಸ್ಥವಾಗಿಧಾನೆಂದು ತಿಳಿಯಬೇಕು. ಇಲ್ಲದೆ ವ್ಯತ್ಯಾಸವಾಗಿದ್ದಲ್ಲಿ ಅಸ್ವಸ್ಥನೆಂದು ತಿಳಿಯತಕ್ಕದ್ದು.

೨. ಮನುಷ್ಯನು ಬೆಳಗಿನಝಾವದಲ್ಲಿ ಎದ್ದು ಮಾಡತಕ್ಕ ಕೆಲಸ.—ಪ್ರಾತಃಕಾಲದಲ್ಲಿ ಎದ್ದು ಮನುಷ್ಯನು ಆಯುಷ್ಯಾಭಿವೃದ್ಧಿಗೋಸ್ಕರಲೂ ಸಮಸ್ತಪಾಪನಿವಾರಣಕ್ಕೂ ಸಹ ದೇವರಸ್ಮರಣೆ ಮಾಡಬೇಕು.

೩. ಮಲವನ್ನು ವಿಸರ್ಜಿಸುವದರಿಂದ ಉಂಟಾಗುವ ಗುಣ ಮತ್ತು ಮಾಡದೆ ಇದ್ದದರಿಂದ ಆಗುವ ದುರ್ಗುಣಗಳು.—ಪ್ರಾತಃಕಾಲದಲ್ಲಿ ಮಲಮೂತ್ರ ವಿಸರ್ಜನೆ ಮಾಡಿದರೆ ಆಯುರ್ವೃದ್ಧಿಯಾಗುತ್ತೆ. ಹೊಟ್ಟೆಯುಬ್ಬರ, ಜಡತ್ವ, ಕೂಗೋಣ ಇವುಗಳು ಪರಿಹಾರವಾಗುತ್ತೆ. ವಿಸರ್ಜನೆ ಮಾಡದೇ ಹೋದರೆ ಮೇಲೆ ಹೇಳಿದ ರೋಗಗಳು, ಶೂಲೆ, ನಡುಕ, ಮಲರೋಧ, ಉದ್ಗಾರ, ಮುಖವಿಟಪ್ರವರ್ತಿ, ವಾಯು, ಮತ್ತು ಮಲಮೂತ್ರರೋಧ, ನೆಗಡಿ, ಬಳಲಿಕೆ ಸಹ ಉಂಟಾಗುತ್ತೆ.

೪. ಮೂತ್ರ ತಡದರೆ ಉಂಟಾಗುವ ದುರ್ಗುಣಗಳು.—ಮೂತ್ರ ತಡದದ್ದೇ ಆದರೆ ವಸ್ತಿ, ಮೂತ್ರದ್ವಾರ ಇವುಗಳಲ್ಲಿ ಶೂಲೆ, ಮೂತ್ರಕೃಛ್ರ, ಮಸ್ತಕಶೂಲೆ ಸಹ ಉಂಟಾಗುತ್ತೆ.

೫. ಶೌಚಾದಿಗಳಿಂದುಂಟಾಗುವ ಗುಣಗಳು.—ಗುದ ಮೊದಲಾದ ಮಲಮಾರ್ಗಗಳನ್ನು ಪ್ರಕ್ಷಾಳನೆಯಿಂದ ನಿರ್ಮಲಮಾಡಿದರೆ ಕಾಂತಿ, ಬಲಗಳನ್ನು ಕೊಟ್ಟು ಪರಿಶುದ್ಧವನ್ನುಂಟುಮಾಡಿ ಆಯುಷ್ಯವನ್ನು ವೃದ್ಧಿಪಡಿಸಿ ಪಾಪವನ್ನು ನಿವಾರಣೆ ಮಾಡುತ್ತೆ.

೬. ಹಸ್ತ ಪಾದಗಳ ಪ್ರಕ್ಷಾಳನೆಯಿಂದ ಉಂಟಾಗುವ ಗುಣ.—ಕೈ ಕಾಲುಗಳನ್ನು ಮಣ್ಣುಸಹಿತ ನೀರಿನಿಂದ ತೊಳದರೆ ಶುದ್ಧಿಯಾಗಿ ದುರ್ವಾಸನೆ ನಾಶವಾಗುತ್ತೆ. ಮಲದಿಂದುಂಟಾದ ಶ್ರಮವು ಪರಿಹಾರವಾಗಿ ಅಗ್ನಿದೀಪನೆಯಾಗಿ ದೃಷ್ಟಿಪಾಟವವಾಗಿ ಪೀಡೆ ಪಿಶಾಚಿಗಳು ನಿವರ್ತಿಯಾಗುತ್ತವೆ.

೭. ಮುಖಪ್ರಕ್ಷಾಳನ ಕ್ರಮ.—ಪ್ರಾತಃಕಾಲದಲ್ಲಿ ಪೂರ್ವಮುಖವಾಗಿ ಕೂತುಕೊಂಡು ಮುಖಪ್ರಕ್ಷಾಳನೆ ಮಾಡಬೇಕು. ಇದರಿಂದ ಅರುಚಿ, ದುರ್ಗಂಧಗಳು ಹೋಗಿ ನಾಲಿಗೆಗೂ ಬಾಯಿಗೂ ವ್ಯಾಧಿ ಉಂಟಾಗುವದಿಲ್ಲ, ಮತ್ತು ರುಚಿ, ಸ್ವಚ್ಛತೆ, ಥಳವು ಸಹ ಉಂಟಾಗುತ್ತೆ.

೮. ಮುಖಪ್ರಕ್ಷಾಳನ ಕ್ರಮ.—ಹಲ್ಲುವುಜ್ಜುವ ಕಡ್ಡಿಯು ಹನ್ನೆರಡಂಗುಲ ವುದ್ದವಾಗಿಯೂ ಕಿರಬೆಟ್ಟು ಧಪ್ಪವಾಗಿಯೂ ಗಂಟುಗಳಿಲ್ಲದೆ ಸರಳಾಗಿಯೂ ಇರಬೇಕು. ಆಕಡ್ಡಿತುದಿಯನ್ನು ಹಲ್ಲಿನಿಂದ ಜಗದು ಜುಂಗು ಮಾಡಿ ಮೆಲ್ಲಮೆಲ್ಲಗೆ ವಸಡಿಗೆ ಬಾಧೆಯಾಗದಂತೆ ಪ್ರತಿದಂತವನ್ನೂ ತಿಕ್ಕಿ ಅನಂತರ ಚೂರ್ಣದಿಂದಲೂ ಅದೇಪ್ರಕಾರ ಮಾಡಬೇಕು.

೯. ದಂತಧಾವನೆ ಕಡ್ಡಿಗಳು ಮತ್ತು ಅವುಗಳ ಗುಣಗಳು.—ಯಕ್ಕದಿಂದ ವೀರ್ಯವೃದ್ಧಿ; ಆಲದಿಂದ ಅಗ್ನಿವೃದ್ಧಿ; ಹೊಂಗೆಯಿಂದ ಶ್ಲೇಷ್ಮನಾಶ; ತಂಡಸೆಯಿಂದ ಆರೋಗ್ಯಭಾಗ್ಯ, ಅರ್ಥಲಾಭ; ಈಚಲಿನಿಂದ ಧೈರ್ಯ; ಬಾಗೆಯಿಂದ ಆರೋಗ್ಯ, ಆಯುರ್ವೃದ್ಧಿ; ಸಂಪಿಗೆಯಿಂದ ಬಲವು, ಕಿವಿಕೇಳುವಿಕೆಯು; ಉತ್ತರಣೆಯಿಂದ ಮೇಧಸ್ಸು, ಧೈರ್ಯ, ಪ್ರಜ್ಞೆ, ಶಕ್ತಿ ಇವುಗಳ ಆಧಿಕ್ಯ; ದಾಳಿಂಬದಿಂದ ರಕ್ತವೃದ್ಧಿಯು, ಸೌಂದರ್ಯವು; ಕೊಡಸಿಗೆ, ಮತ್ತಿ, ಹೊಂಗೆ, ಜಾಜಿ, ಕಂಚುವಾಳ, ತಗರ್ಚೆ ಈ ಕಡ್ಡಿಗಳಿಂದ ಮಲ ಮೂತ್ರಗಳು ಸರಿಯಾಗಿ ಆಗಿ ದುಸ್ವಪ್ನ ನಾಶವಾಗುತ್ತೆ. ಮಲಮೂತ್ರ ಕೆಟ್ಟಿದ್ದರೆ ದುಸ್ವಪ್ನ ಉಂಟಾಗುತ್ತೆ. ಆದರೆ ಈ ಕಡ್ಡಿಗಳಿಂದ ಕಾಲವರಿತು ದಂತಧಾವನೆ ಮಾಡಬೇಕು.

೧೦. ದಂತಧಾವನೆ ಚೂರ್ಣ.—ಜೇನುತುಪ್ಪ, ಶುಂಠಿ, ಮೆಣಸು, ಹಿಪ್ಪಲಿ, ಯಂಜೆ, ಸೈಂಧಲವಣ ಇವುಗಳ ಚೂರ್ಣ. ಅಥವಾ ಗಂಗುಂಗೆ ಚೂರ್ಣದಿಂದಾಗಲಿ ದಂತಶೋಧನೆ ಮಾಡಬೇಕು.

೧೧. ಈ ಕಡ್ಡಿಗಳಿಂದ ಯಾರು ದಂತಧಾವನೆ ಮಾಡಕೂಡದೆಂದರೆ.—ಕೊರಳು, ದವಡೆ, ತುಟಿ, ನಾಲಿಗೆ, ಹಲ್ಲು ಇವುಗಳಲ್ಲಿ ವ್ಯಾಧಿವುಳ್ಳವರು; ನಾಲಿಗೆಶೋಷೆ, ಶ್ವಾಸ, ಕೆಮ್ಮು, ವಾಂತಿ, ದುರ್ಬಲ, ಅಜೀರ್ಣ, ಊಟದ ನಂತರ, ಮತ್ತು ಬಿಕ್ಕಳಿಕೆ, ಮೂರ್ಛೆ, ಮದ, ತಲೆಶೂಲೆ, ಬಾಯಾರಿಕೆ, ಶ್ರಮಪಡುವವನು, ಬಳಲಿದವನು, ಪೀಡಿತನಾದವನು, ವಾತರೋಗಿ, ಕರ್ಣಶೂಲೆಯುಳ್ಳವನು, ನೇತ್ರರೋಗಿ, ಹೊಸದಾಗಿ ಜ್ವರವುಳ್ಳವನು, ಯದೆಶೂಲೆಯುಳ್ಳವನು, ಕೋಳೆಬಾಯಿವುಳ್ಳವನು, ಮುಖದಲ್ಲಿ ವಾತರೋಗಿಗಳು ಮೇಲೆ ಹೇಳಲ್ಪಟ್ಟ ಕಡ್ಡಿಗಳಿಂದ ದಂತಧಾವನೆ ಮಾಡಕೂಡದು.

೧೦. ನಾಲಿಗೆ ವುಜ್ಜುವ ದಬ್ಬೆಗಳು.—ನಾಲಿಗೆಯಲ್ಲಿರುವ ಮಷ್ಟನ್ನು ಹೆರಿಯುವದಕ್ಕೆ ಚಿನ್ನ, ಬೆಳ್ಳಿ, ತಾಂಮ್ರ ಇವುಗಳ ದಬ್ಬೆಗಳಿಂದಾಗಲೀ, ಕೋಮಲವಾದ ಕಡ್ಡಿಯಿಂದಲಾಗಲೀ, ಮೃದುವಾದ ಯಲೆಯಿಂದಲಾಗಲೀ ಅಡ್ಡವಾಗಿ ಉಜ್ಜಬೇಕು.

೧೩. ಬಾಯಿಮುಕ್ಕಳಿಸುವ ನೀರಿನ ಗುಣ ಮತ್ತು ವಿಧಿ.—ಹಲ್ಲು ವುಜ್ಜಿದಮೇಲೆ ತಣ್ಣೀರಿನಿಂದ ಭಾರಿಭಾರಿಗೂ ಬಾಯಿಮುಕ್ಕಳಿಸಿ ಉಜ್ಜಬೇಕು. ಇದರಿಂದ ಕಫ ಮತ್ತು ಕೊಳೆ ಸಹ ನಾಶವಾಗುತ್ತೆ, ಮತ್ತು ಮುಖಶುದ್ಧಿಯುಂಟಾಗುತ್ತೆ. ಬಿಸಿನೀರಿನಿಂದ ಕಫ, ಅರುಚಿ, ಕೊಳೆ, ವಿಷ, ದಂತಜಾಡ್ಯಗಳು ನಾಶವಾಗಿ ನಾಲಿಗೆಗೆ ರುಚಿಯೂ ಲಘುವು ಸಹ ಉಂಟಾಗುತ್ತೆ.

೧೪. ಗಂಡೂಷಣ ಯಾರು ಮಾಡಕೂಡದೆಂದರೆ.—ವಿಷ, ಮೂರ್ಛೆ, ಮದಕ್ಷಯ, ರಕ್ತಪಿತ್ತ, ನೇತ್ರರೋಗ, ಬಲಕ್ಷೀಣ ಈ ರೋಗಿಗಳು ಮಾಡಕೂಡದು.

೧೫. ಮುಖಪ್ರಕ್ಷಾಳನ ನೀರಿನ ಗುಣ.— ಬಳ್ಳಿ ಶೀತೋದಕದಿಂದ ರಕ್ತಪಿತ್ತ, ಮುಖದ ಬೊಕ್ಕೆಗಳು, ಬಾವು, ನೀಲಿಕಾರೋಗ, ಬಂಗು ಇವುಗಳು ನಾಶವಾಗುತ್ತೆ. ಉಷ್ಣೋದಕದಿಂದ ಶ್ಲೇಷ್ಮವಾತ, ಮುಖಬಾವು ಸಹ ಪರಿಹಾರವಾಗಿ ಹೊಳಪು ಉಂಟಾಗುತ್ತೆ.

೧೬. ನಸ್ಯವಿಧಿ ಮತ್ತು ಗುಣ.—ನಸ್ಯಾಭ್ಯಾಸವುಳ್ಳವನು ಸುಗಂಧ ತೈಲ ಮಿಶ್ರಿತವಾದ್ದನ್ನು ಸೇವಿಸಬೇಕು. ಮತ್ತು ಮೂಗಿನಲ್ಲಿ ವ್ಯಾಧಿ ಇದ್ದರೆ ಶಿರಸದ ತೈಲ ಮುಂತಾದವುಗಳನ್ನು ಮೂಗಿಗೆ ಹತ್ತಿಸಬೇಕು. ಈ ತೈಲವನ್ನು ಕಫರೋಗವುಳ್ಳವನು ಪ್ರಾತಃಕಾಲದಲ್ಲೂ, ಪಿತ್ತರೋಗಿ ಮಧ್ಯಾಹ್ನಕಾಲದಲ್ಲೂ, ವಾತರೋಗಿಯು ಸಾಯಂಕಾಲದಲ್ಲೂ ಸಹ ಹತ್ತಿಸಿದರೆ ಮುಖದಲ್ಲಿ ಸುಗಂಧವು, ಸುಸ್ವರವು ಸಹ ಉಂಟಾಗುತ್ತೆ. ಮತ್ತು ಇಂದ್ರಿಯಗಳು ನಿರ್ಮಲವಾಗುತ್ತವೆ. ಬಂಗು, ನರೆ, ಸುಕ್ಕುಗಳು ಈ ರೋಗಗಳು ಉಂಟಾಗುವದಿಲ್ಲ.

೧೭. ಸುರಮಾದ ಅಂಜನದ ಗುಣ.—ನಿತ್ಯದಲ್ಲು ಸುರಮಾದ ಅಂಜನ ಹತ್ತಿಸಿದರೆ ಅಧಿಕಹಿತವಾಗಿ, ನೇತ್ರದಲ್ಲಿ ಸುರೇಖೆಯು ದೃಷ್ಟಿಪಾಟವವು ಉಂಟಾಗಿ ನೇತ್ರದ ತಿನಿಸು, ಕೊಳೆ, ದಾಹ, ಜಿಡ್ಡು ಇವುಗಳನ್ನು ಪರಿಹರಿಸಿ ಗಾಳಿ ಬಿಸಲನ್ನು ಸಹಿಸುವಂತೆ ಮಾಡುತ್ತೆ. ಸಿಂಧು ಪರ್ವತದ ಸುರಮಾದ ಕಲ್ಲು ಉತ್ಕೃಷ್ಟವಾದದ್ದು ಮತ್ತು ಶೋಧಿತವಾದದ್ದು.

೧೮. ಸುರಮಾದ ಅಂಜನ ಯಾರು ಹಚ್ಚಿಕೊಡದಂದರೆ.—ಜಾಗರಣೆ ಮಾಡಿದವನು, ಶ್ರಮಪಟ್ಟವನು, ವಾಂತಿಯಾದವನು, ಭೋಜನ ಮಾಡಿದವನು, ಜ್ವರಬಂದವನು ತಲೆಗೆಸ್ನಾನಮಾಡಿದವನುಸಹ ಹತ್ತಿಸಕೂಡದು.

೧೯. ಕ್ಷೌರದಿಂದುಂಟಾಗುವ ಗುಣ.—ಐದು ದಿವಸಕ್ಕೆ ಒಂದು ಭಾರಿ ಮೀಸೆ, ಗಡ್ಡ, ಉಗುರು, ಮತ್ತು ತಲೆಕೂದಲುಗಳನ್ನು ಸಹ ತೆಗಿಸಬೇಕು. ಕತ್ತಿಯಿಂದಲಾಗಲೀ, ಕತ್ತರಿಯಿಂದಲಾಗಲೀ ಯಾವ ಮನುಷ್ಯನು ಹ್ಯಾಗೆ ಸಾಧನ ಮಾಡಿರುತ್ತಾನೋ ಆ ರೀತಿಯಾಗಿಯೇ ನಡಿಸಬೇಕು. ಅದರಿಂದ ಸೌಂದರ್ಯಉಂಟಾಗಿ; ಸಿರೋರೋಗ ಶೀತರೋಗಗಳು ಪರಿಹಾರವಾಗುತ್ತವೆ; ಮತ್ತು ಪುಷ್ಟಿ, ಆಯುರ್ವೃದ್ಧಿ, ಶುಚಿತ್ವ, ಕಾಂತಿಗಳು ಸಹ ಉಂಟಾಗುತ್ತವೆ. ಯಾವಾಗಲೂ ಮೂಗಿನ ಕೂದಲುಗಳನ್ನು ಚಿಮ್ಮಟದಿಂದ ಕೀಳಿಸಬಾರದು. ಕೀಳಿಸಿದರೆ ದೃಷ್ಟಿಮಂದವಾಗುತ್ತೆ. ಸಿಕ್ಕಟಿಕೆಯಿಂದಲೂ ಬಾಚಣಿಕೆಯಿಂದಲೂ ಸಹ ಕೂದಲುಗಳನ್ನು ಬಾಚಿದರೆ ಕೊಳೆ ಹೋಗಿ ಚನ್ನಾಗುತ್ತೆ ಮತ್ತು ಉದ್ದವಾಗಿ ಬೆಳೆಯುತ್ತೆ.

೨೦. ಕನ್ನಡಿ ನೋಡುವ ಗುಣ.—ಪ್ರಾತಃಕಾಲದಲ್ಲಿ ಕನ್ನಡಿ ನೋಡಿದರೆ ಮಂಗಳಕರ, ಪುಷ್ಟಿಯು, ಕಾಂತಿಯು, ಆನಂದವು, ಬಲವು, ಉಂಟಾಗಿ ಆಯುಸ್ಸನ್ನು ವೃದ್ಧಿಪಡಿಸಿ ಪಾಪ, ಅಲಕ್ಷ್ಮೀ ಸಹ ಪರಿಹಾರವಾಗಿ ಶರೀರಲಾಘವವು, ಕರ್ಮಮಾಡುವದಕ್ಕೆ ಸಾಮರ್ಥ್ಯವು ಸಹ ಉಂಟಾಗುತ್ತೆ.

೨೧. ಸಾಧಕ ಅಂದರೆ ದೇಹಶ್ರಮದಿಂದುಂಟಾಗುವ ಗುಣ.—ಸಾಧಕ ಮಾಡಿದರೆ ವಾತಹರ, ಅಗ್ನಿವೃದ್ಧಿ, ರೋಗಕ್ಕೆ ವಶವಾಗದೆಯಿರುವಿಕೆ, ತಿಂದಆಹಾರವು ವಿರುದ್ಧವಾದ್ದಾದರೂ ಶೀಘ್ರವಾಗಿ ಪಚನವಾಗುತ್ತೆ. ಶರೀರದಲ್ಲಿ ಸುಕ್ಕು, ಶೈಥಿಲ್ಯವು ಸಹ ಉಂಟಾಗುವದಿಲ್ಲ; ಶೀಘ್ರವಾಗಿ ವೃದ್ಧಾಪ್ಯ ಉಂಟಾಗುವದಿಲ್ಲ; ಮತ್ತು ಸ್ಥೂಲವಾದ ಮನುಷ್ಯನಿಗೆ ಕೃಶವಾಗುವದಕ್ಕೆ ಸಾಧಕವೇ ಕಾರಣ ಮತ್ತು ಬಲಿಷ್ಠರಾಗಿಯೂ ಸರಿಯಾದ ಆಹಾರ ಮಾಡುವಂಥಾವರಿಗೂ ಸಾಧಕದಿಂದ ಗುಣವುಂಟು. ವಸಂತಕಾಲದಲ್ಲೂ ಸೀತಕಾಲದಲ್ಲೂ ಸಾಧಕವಿಶೇಷ ಮಾಡಬೇಕು. ಮಿಕ್ಕಕಾಲದಲ್ಲಿ ತನ್ನ ಅರ್ಧಬಲದಲ್ಲಿ ಸಾಧಕ ಮಾಡಬೇಕು.

೨೨. ಅರ್ಧಬಲದ ಲಕ್ಷಣ.—ಯಾವೋನಿಗೆ ಅಲ್ಪಶ್ರಮದಿಂದ ಮುಖದಲ್ಲಿ ಶ್ವಾಸನಿಶ್ವಾಸ ಹೊರಡುತ್ತೆಯೋ ಮತ್ತು ಬಾಯಿಯು ಒಣಗುತ್ತದೆಯೋ

ಹಣೆಯಲ್ಲೂ, ಮೂಗಿನಲ್ಲೂ, ಕಂಕಳಲ್ಲೂ, ಶರೀರಸಂಧಿಗಳಲ್ಲೂ ಬೆವರು ಉಂಟಾಗುತ್ತೋ ಅದು ಅರ್ಧಬಲಕ್ಕೆ ಲಕ್ಷಣ.

೨೩. ಸಾಧಕ ಯಾರು ಮಾಡಕೂಡದೆಂದರೆ.—ಊಟಮಾಡಿದವನು, ಸ್ತ್ರೀಸಂಭೋಗಮಾಡಿದವನು, ಕಾಸಶ್ವಾಸದವನು, ಕೃಶವಾದವನು, ಕ್ಷಯರೋಗೀ, ರಕ್ತಪಿತ್ತಜಾಡ್ಯದವನು, ಘಾಯಪಟ್ಟವನು, ಶೋಷೆಯುಳ್ಳವನು, ಇವರುಗಳು ಮಾಡಕೂಡದು. ಮಾಡಿದರೆ ಕಾಸ, ಜ್ವರ, ಛರ್ದಿ ಬಳಲಿಕೆ, ಬಾಯಾರಿಕೆ, ಕ್ಷಯರೋಗ, ರಕ್ತಪಿತ್ತರೋಗಗಳು ಉಂಟಾಗುತ್ತವೆ.

೨೪. ಅಭ್ಯಂಗವಿಧಿ ಮತ್ತು ಗುಣ.—ಆಗಾಗ್ಯೆ ಸರ್ವಾಂಗಗಳಲ್ಲೂ ತೈಲ ಹತ್ತಿಸಿ ಅಭ್ಯಂಗಮಾಡಿದರೆ ಉಷ್ಣಹರ, ಮತ್ತು ತಲೆಯಲ್ಲೂ, ಕಿವಿಗಳಲ್ಲೂ, ಅಂಗಾಲುಗಳಲ್ಲೂ ವಿಶೇಷವಾಗಿ ಎಣ್ಣೆಹಚ್ಚಬೇಕು. ದೇಶಭೇದದಿಂದ ಸಾಸವೆತೈಲ, ಪರಿಮಳಯುಕ್ತವಾದ ತೈಲ, ಪುಷ್ಪಗಳಿಂದ ಮಾಡಿದ ತೈಲ, ಮಿಕ್ಕ ಒಳ್ಳೇಪದಾರ್ಥದಿಂದ ಮಿಶ್ರಿತವಾದತೈಲ, ಯೇರಂಡ ತಿಲ ತೈಲಗಳನ್ನು ಹತ್ತಿಸಿದರೆ ಅವಗುಣ ವುಂಟಾಗುವದಿಲ್ಲ. ಅಭ್ಯಂಗಮಾಡಿದರೆ ತೈಲ ಭೇದಗಳಿಂದ ಸೀತ ವಾತ, ವುಷ್ಣವಾತ, ವಿಷಮರೋಗ ಸಹ ಪರಿಹಾರವಾಗಿ ಶ್ರಮವನ್ನು ಪರಿಹರಿಸಿ, ಸುಖನಿದ್ರೆ, ಕಾಂತಿ, ಮೃದುತ್ವ, ಆಯುರ್ವೃದ್ಧಿ, ದೃಷ್ಟಿಪಾಟವಗಳಾಗಿ ಶಿರೋರೋಗಗಳೆಲ್ಲಾ ಪರಿಹಾರವಾಗುತ್ತವೆ. ಮತ್ತು ಕೂದಲಿಗೆ ಮೃದುತ್ವವೂ, ದಾರಢ್ಯವೂ, ಬೆಳವಳಿಕೆಯು, ಕಪ್ಪಾಗಿರುಗುವಿಕೆಯು, ತಲೆಗೆ ಬಲವು ಸಹ ಉಂಟಾಗುತ್ತೆ.

೨೫. ಕಿವಿಯಲ್ಲಿ ಯಣ್ಣೆಬಿಡುವದ್ದರಿಂದ ಉಂಟಾಗುವ ಗುಣ.—ಸಾಧನವಿರುವವರು ಆಗಾಗ್ಯೆ ಕಿವಿಗಳಲ್ಲಿ ಎಣ್ಣೆ ಬಿಡುವದರಿಂದ ಕರ್ಣರೋಗ, ಗುಗ್ಗೆ, ಹೆಕ್ಕತ್ತಿನ ನೋವು ಸಹ ಪರಿಹಾರವಾಗುತ್ತೆ; ಮತ್ತು ಇನ್ನೊಬ್ಬ ಮೆತ್ತಗೆ ಮಾತನಾಡಿದಾಗ್ಯೂ ಕೇಳಿಸುತ್ತೆ. ರಸಾದಿ ದ್ರವ್ಯಗಳನ್ನು ಕಿವಿಯಲ್ಲಿ ಹಾಕಬೇಕಾದರೆ ಊಟಕ್ಕೆ ಮುಂಚೆ ಬಿಡಬೇಕು. ತೈಲಾದಿಗಳನ್ನು ಬಿಡಬೇಕಾದರೆ ರಾತ್ರಿಕಾಲದಲ್ಲಿ ಬಿಡಬೇಕು.

೨೬. ಪಾದಾಭ್ಯಂಗದ ಗುಣ.—ಪಾದಗಳಿಗೆ ತೈಲ ತಿಕ್ಕಿದರೆ ಸ್ಥೈರ್ಯವು, ನಿದ್ರೆಯು, ದೃಷ್ಟಿನೈರ್ಮಲ್ಯವು ಸಹ ವುಂಟಾಗುತ್ತೆ ; ಮತ್ತು ಮಾರ್ಗಾಯಾಸ, ಕಾಲುಗಳ ಜಾಡ್ಯವು ಪರಿಹಾರವಾಗುತ್ತೆ ; ಕಾಲುಕಟ್ಟಿಕ್ಕೊಳ್ಳೋಣವು, ಬಿರಿಯುವಿಕೆಯು ಸಹ ತಪ್ಪುತ್ತೆ. ಸರ್ಪಗಳನ್ನು ಗರುಡನು ನಿಗ್ರಹಿಸುವ ರೀತಿ ಎಣೆಯು ನರಗಳಲ್ಲೂ, ರೋಮಕೂಪಗಳ

ಲ್ಲೂ ಸಹ ಪ್ರವೇಶಿಸಿ ರೋಗಾದಿಗಳನ್ನು ಪರಿಹರಿಸುತ್ತೆ. ಆದ್ದರಿಂದ ಸ್ನಾನಕಾಲದಲ್ಲಿ ದೇಹಕ್ಕೆ ಎಣ್ಣೆ ಹಚ್ಚುವಿಕೆ ಉತ್ತಮ. ವೃಕ್ಷಮೂಲದಲ್ಲಿ ನೀರು ಬಿಟ್ಟರೆ ಈ ನೀರು ಒಳಗೆ ಪ್ರವೇಶಿಸಿ ಹ್ಯಾಗೆ ವೃದ್ಧಿಯಾಗಿ ಕೊಂಬೆ ಯಲೆಗಳು ಬೆಳೆಯುತ್ತವೋ ಅದೇರೀತಿ ಪಾದವಗ್ಯೆರೆಗಳಿಗೆ ತೈಲಲೇಪ ದಿಂದ ಧಾತುಗಳು ವೃದ್ಧಿಯಾಗುತ್ತವೆ.

೭೭. ಅಭ್ಯಂಗವನ್ನು ಯಾರು ಮಾಡಕೂಡದೆಂದರೆ.—ತರುಣಜ್ವರ ವುಳ್ಳವ, ಅಜೀರ್ಣವಾಗಿರುವವ, ಭೇದಿಯಾದವ, ವಾಂತಿಮಾಡಿದವ, ಮೂತ್ರವನ್ನು ಕಟ್ಟುವದಕ್ಕೂ, ಅಧಿಕವಾಗಿ ಬಿಡುವದಕ್ಕೂ ತನ್ನಸ್ವಾಧೀನದಲ್ಲಿ ಇಟ್ಟುಕೊಂಡಿರುವವ, ಇವರುಗಳು ಮಾಡಕೂಡದು. ಮಾಡಿದರೆ ರೋಗ ಕಷ್ಟಸಾಧ್ಯವಾಗುತ್ತೆ, ಮತ್ತು ಭೇದಿಯಾದವನಿಗೆ ಅಗ್ನಿಮಾಂದ್ಯ ವಾಗುತ್ತೆ.

೭೮. ಅಭ್ಯಂಗದ ಗುಣ.—ಕಫ ಸಹ ನಾಶವಾಗುತ್ತೆ. ಧಾತು ಬಲ ರಕ್ತ ವೃದ್ಧಿಗಳಾಗುತ್ತವೆ. ಚರ್ಮಕ್ಕೆ ಮೃದುತ್ವ, ನಿರ್ಮಲತ್ವ ಸಹ ಉಂಟಾಗುತ್ತದೆ.

೭೯. ಮುಖಕ್ಕೆಯಣ್ಣೆಹಚ್ಚೋಣದರಗುಣ.—ಮುಖಕ್ಕೆ ಎಣ್ಣೆಲೇಪ ಮಾಡಿದರೆ ದೃಷ್ಟಿಪಾಟವ; ಕೆನ್ನೆಗಳು ಪುಷ್ಟಿಯಾಗಿ ಮುಖದಮೇಲೆ ಗುಳ್ಳೆಗಳು ಮತ್ತು ಬಂಗುಗಳು ಸಹ ವುಂಟಾಗುವದಿಲ್ಲ. ಆಗಿದ್ದರೂ ಪರಿಹಾರವಾಗುತ್ತೆ, ಮತ್ತು ಮುಖವು ಕಮಲದಂತೆ ಸುಂದರವಾಗುತ್ತೆ.

೩೦. ಸ್ನಾನದಿಂದ ಉಂಟಾಗುವ ಗುಣ.—ದೋಷರಹಿತವಾದ ಥಣ್ಣೀರು ಸ್ನಾನದಿಂದ ಅಗ್ನಿವೃದ್ಧಿಯು, ಆಯುಷ್ಯಕರ, ತೇಜಸ್ಸನ್ನು, ಬಲವನ್ನು ಉಂಟುಮಾಡುತ್ತೆ. ಮತ್ತು ನವೆ, ಕೊಳೆ, ಶ್ರಮ, ಬೆವರು, ತೂಕಡಿಕೆ, ಬಾಯಾರಿಕೆ, ಉರಿ ಇವುಗಳು ನಾಶವಾಗುತ್ತೆ. ಥಣ್ಣೀರುಸ್ನಾನ ದಿಂದ ಅಗ್ನಿದೀಪನವಾಗುತ್ತೆ, ರಕ್ತಶಮನವಾಗುತ್ತೆ. ಬಿಸಿನೀರಿನ ಸ್ನಾನ ದಿಂದ ಬಲಕಾರಿ, ವಾಯು ಕಫ ಇವುಗಳ ನಾಶಕ. ಅತಿಬಿಸಿಯಾದ ನೀರನ್ನು ತಲೆಮೇಲೆ ಹಾಕಿಕ್ಕೊಂಡರೆ ನೇತ್ರರೋಗ ಉಂಟಾಗುತ್ತೆ, ಕೂದಲಿನ ಸಾರವನ್ನು ತೆಗಿಯುತ್ತದೆ. ವಾತಾಧಿಕವಾದ ಕಾಲದಲ್ಲಿ ಬಿಸಿನೀರಿನ ಸ್ನಾನ ಹಿತಕರವಾದದ್ದು. ಯಾವ ಮನುಷ್ಯನು ಉಷ್ಣೋದಕ ಸ್ನಾನ, ಕ್ಷೀರಪಾನ, ಯೌವ್ವನಸ್ತ್ರೀಸಂಭೋಗವನ್ನು, ಜಿಡ್ಡಿನ ಪದಾರ್ಥ ಭೋಜನ ಸಹ ಹಿತವಾಗಿ ಮಾಡುವನೋ ಅವನು ಸುಖವಾಗಿರುತ್ತಾನೆ.

ಯಾವ ಮನುಷ್ಯನು ನಿತ್ಯದಲ್ಲೂ ನೆಲ್ಲಿಕಾಯಿರಸವನ್ನು ಮಿಶ್ರಮಾಡಿದ ನೀರಿನಿಂದ ಸ್ನಾನಮಾಡುತ್ತಾನೋ ಆಮನುಷ್ಯನಿಗೆ ಚರ್ಮದ ಸುಕ್ಕು, ನರೆಗಳು ಉಂಟಾಗದೇ ಯೋಗಾಭ್ಯಾಸಮಾಡುವದಕ್ಕೆ ಸಾಧಕವಾಗುತ್ತೆ.

೩೧. ಯಾವ ಮನುಷ್ಯನು ಸ್ನಾನಮಾಡಕೂಡದೆಂದರೆ.—ಜ್ವರ, ಅತಿಸಾರ, ನೇತ್ರರೋಗ, ಕಿವಿರೋಗ, ವಾಯೂಪದ್ರವ, ಹೊಟ್ಟೆಯುಬ್ಬರ, ನೆಗಡಿ, ಅಜೀರ್ಣ ಈ ವ್ಯಾಧಿಗಳುಳ್ಳವರು ಸ್ನಾನ ಮಾಡಕೂಡದು. ಮತ್ತು ಭೋಜನದ ನಂತರ ಸ್ನಾನಮಾಡಕೂಡದು.

೩೦. ಬಟ್ಟೆಯಿಂದ ಮೈ ವೊರಸಿಕೊಂಡರೆ ಉಂಟಾಗುವ ಗುಣ, ಮತ್ತು ಧರಿಸುವದರಿಂದ ಆಗುವ ಗುಣ.—ಶರೀರಕ್ಕೆ ಕಾಂತಿ, ನವೆಪರಿಹಾರ, ಚರ್ಮದೋಷ ನಾಶವಾಗುತ್ತೆ. ಪೀತಾಂಬರ, ಚಿತ್ರವಸ್ತ್ರ, ಕೆಂಪಿನಬಟ್ಟೆ ಇವುಗಳನ್ನು ಧರಿಸೋಣದರಿಂದ ವಾಯು, ಸೀತ ಇವುಗಳನ್ನು ಪರಿಹರಿಸುತ್ತೆ. ಈ ವಸ್ತ್ರಗಳು ಸೀತಕಾಲದಲ್ಲಿ ಧರಿಸತಕ್ಕವು. ಉಷ್ಣಕಾಲದಲ್ಲಿ ಕೆಂಪು ವಸ್ತ್ರವನ್ನು ಧರಿಸಿದರೆ ಅದು ಪರಿಶುದ್ಧವಾದದ್ದು, ಪಿತ್ತಹಾರಕವಾದದ್ದು. ಮತ್ತು ಆವಸ್ತ್ರವು ಸೂಕ್ಷ್ಮವಾಗಿದ್ದರೆ ಉತ್ತಮ. ಶುಭ್ರವಸ್ತ್ರ ಧರಿಸಿದರೆ ಶುಭಕರವು, ಸೀತವು, ಬಿಸಲು ಪರಿಹರವು. ಮಳೆಕಾಲದಲ್ಲಿ ಅತಿಸೀತ ಅತಿಉಷ್ಣ ಆಗದ ವಸ್ತ್ರವನ್ನು ಧರಿಸಬೇಕು; ಮತ್ತು ಅದು ಯಶಸ್ಕರ, ಇಷ್ಟಸಿದ್ಧಿ, ಆಯುಷ್ಯಕರ ಮತ್ತು ಸಂಪತ್ತನ್ನು ಉಂಟುಮಾಡುತ್ತೆ; ಆನಂದಪ್ರದ, ಚರ್ಮಕ್ಕೆ ಹಿತಕರವಾದದ್ದು, ವೇಕರ, ಮನೋಹರ. ಬಟ್ಟೆಯು ನಿರ್ಮಲವಾಗಿ ಹೊಸದಾಗಿರಬೇಕು.

೩೩. ಮಲಿನವಸ್ತ್ರ ನಿಷಿದ್ಧ.—ಕೊಳಕು ಬಟ್ಟೆ ಧರಿಸಿದರೆ ನವೆ, ಕ್ರಿಮಿಗಳನ್ನು ಉಂಟುಮಾಡಿ ಸಂಪತ್ತನ್ನು ಹಾನಿಮಾಡುತ್ತೆ.

೩೪. ಶ್ರೀಗಂಧಲೇಪನದಿಂದ ಉಂಟಾಗುವ ಗುಣ.—ಗಂಧಲೇಪದಿಂದ ನೀರಡಿಕೆ, ಮೂರ್ಛೆ, ದುರ್ಗಂಧ, ಶ್ರಮ, ಉರಿಗಳು ಪರಿಹಾರವಾಗುತ್ತವೆ. ತೇಜಸ್ಸು, ಚರ್ಮದ ರಂಗು, ಪ್ರೀತಿ, ಬಲ ಇವುಗಳನ್ನು ವೃದ್ಧಿಮಾಡುತ್ತೆ.

೩೫. ಗಂಧಲೇಪದ ವಿಧಿ.—ಸೀತಕಾಲದಲ್ಲಿ ಕೇಸರಿ, ಶ್ರೀಗಂಧ, ಅಗರು ಮಿಶ್ರಮಾಡಿದರೆ ಉಷ್ಣ, ವಾತ, ಶ್ಲೇಷ್ಮ ಪರಿಹಾರ; ಉಷ್ಣಕಾಲದಲ್ಲಿ

ಶ್ರೀಗಂಧ, ಪಚ್ಚಕರ್ಪೂರ, ಲಾಮಂಚ ಸಹ ಸೇರಿಸಿದರೆ ತಂಣಗೆ ಇರುವದಲ್ಲದೆ ಪರಿಮಳಯುಕ್ತವಾಗಿರುತ್ತದೆ, ಪಿತ್ತಶಮನಮಾಡುತ್ತೆ; ಮಳೇಕಾಲದಲ್ಲಿ ಶ್ರೀಗಂಧ, ಕೇಸರಿ, ಕಸ್ತೂರಿ ಮಿಶ್ರಮಾಡಿದರೆ ಸೀತೋಷ್ಣ ಸಮನಾಗಿರುತ್ತದೆ. ಯಾವ ರೋಗಿ ಸ್ನಾನಕ್ಕೆ ಅಯೋಗ್ಯನೋ ಅವನು ಗಂಧಲೇಪವನ್ನು ಮಾಡಕೂಡದು. ಆದರೆ ಗಂಧಪುಷ್ಪಪತ್ರಾದಿಗಳು ಕಾಂತಿಕರಗಳು.

೩೬. ಆಭರಣಧಾರಣದ ಗುಣ.—ಭಂಗಾರವೇ ಮೊದಲಾದ ತೊಡವೆಗಳಿಂದ ಯಥೋಚಿತವಾಗಿ ಅಲಂಕಾರ ಮಾಡಿಕೊಂಡರೆ ಸಂತೋಷ, ಸೌಭಾಗ್ಯ, ಸ್ವಚ್ಛತೆ ಸಹ ಉಂಟಾಗುತ್ತೆ.

೩೭. ರತ್ನಾಭರಣದ ಗುಣ.—ನವರತ್ನಗಳ ತೊಡವೆ ಧರಿಸಿದರೆ ಪೀಡೆ ಮತ್ತು ಪಿಶಾಚಿಗಳ ನಿವರ್ತಿ, ಪುಷ್ಟಿಪ್ರದ; ದುಃಸ್ವಪ್ನ, ದೌರ್ಭಾಗ್ಯ, ಪಾಪಗಳ ನಾಶಕ. ಕೆಂಪಿಗೆ ಅಧಿಪತಿ ಸೂರ್ಯ, ಮುತ್ತಿಗೆ ಚಂದ್ರ, ಹವಳಕ್ಕೆ ಅಂಗಾರಕ, ದೂರ್ವಾರಂಗು ಪಚ್ಚೆಗೆ ಬುಧ, ಪುಷ್ಯರಾಗಕ್ಕೆ ಗುರು, ವಜ್ರಕ್ಕೆ ಶುಕ್ರ, ನೀಲಕ್ಕೆ ಶನಿ, ಗೋಮೇಧಿಕಕ್ಕೆ ಕೇತು, ವೈಡೂರ್ಯಕ್ಕೆ ರಾಹು; ಆದ್ದರಿಂದ ಈ ರತ್ನಗಳನ್ನು ಧರಿಸಿದರೆ ಗ್ರಹಗಳಿಗೆ ಪ್ರೀತಿಯುಂಟಾಗುತ್ತೆ. ಪ್ರಾರ್ಥನೆಗೆ ಯೋಗ್ಯ, ಆಯುಷ್ಯಕರ, ಸೌಭಾಗ್ಯಕರಗಳು.

೩೮. ಮಂಗಳಕರವಾದ ಯಂತ್ರಧಾರಣೆಯ ಕ್ರಮ.—ನಿರಂತರದಲ್ಲೂ ಸಿದ್ಧಮಂತ್ರೋಕ್ತವಾದ ಮೂಲಿಕೆ, ಗೋರೋಚನ, ಸಾಸಿವೆ ಬರೆಸಿದ ಯಂತ್ರಧಾರಣೆಯಿಂದ ಮಾಂಗಲ್ಯ, ಆಯುಷ್ಯ, ಲಕ್ಷ್ಮೀಕರವು; ರಾಕ್ಷಸಬಾಧೆಯು, ದುಷ್ಟಮೃಗಗಳ ಬಾಧೆಯು, ಪಿಶಾಚಿಬಾಧೆಯು ಸಹ ನಿವರ್ತಿಯಾಗಿ ಅವುಗಳನ್ನು ವಶಮಾಡುತ್ತೆ. ಇದಲ್ಲದೆ ದೇವರ, ಗೋವಿನ, ಬ್ರಾಹ್ಮರ, ವೃದ್ಧರ, ಗುರುವಿನ ಪೂಜೆಯು ಪುಣ್ಯಕರ, ಆಯುಷ್ಯವೃದ್ಧಿಕರ; ಕಲಿ, ದೌರ್ಭಾಗ್ಯ ನಾಶಕವಾಗುವದು.

೩೯. ಭೋಜನಕಾಲದಲ್ಲಿ ಮಂಗಳಪದಾರ್ಥ ದರ್ಶನೆ.—ಬ್ರಾಹ್ಮಣ, ಗೋವು, ಅಗ್ನಿ, ಸುವರ್ಣ, ತುಪ್ಪ, ಸೂರ್ಯ, ನೀರು, ರಾಜ, ಈ ಎಂಟೂ ದರ್ಶನಕ್ಕೆ ಯೋಗ್ಯವಾದದ್ದು.

೪೦. ಭೋಜನ, ನಿದ್ರೆ, ನೀರಡಿಕೆ, ಸುರತ, ಅವುಗಳಿಗೆ ವಿಘ್ನವುಂಟಾದರೆ ಉಂಟಾಗುವ ದುರ್ಗುಣ.—ಭೋಜನವಿಘಾತದಿಂದ ಮೈನೋವು, ಅರುಚಿ, ಶ್ರಮ, ತೂಕಡಿಕೆ, ನೇತ್ರದೌರ್ಬಲ್ಯ, ಧಾತುಶೋಷ,

ಬಲಕ್ಷಯ ಇವುಗಳು ಆಗುತ್ತವೆ. ನೀರಡಿಕೆವಿಘಾತದಿಂದ ಗಂಟಲು, ಬಾಯಿ ಒಣಗುತ್ತವೆ; ಸ್ವಲ್ಪ ಕಿವಿಕೇಳದೆ ಇರೋಣ, ರಕ್ತಕೋಪ, ಹೃದಯ ಸ್ಥಾನದಲ್ಲಿ ನೋವು ಇವು ಉಂಟಾಗುತ್ತವೆ. ನಿದ್ರೆವಿಘಾತದಿಂದ ಆಕಳಿಕೆ, ತಲೆ ಕಣ್ಣುಗಳಲ್ಲಿ ಜಡತ್ವ, ಮೈಮುರಿಯುವಿಕೆ, ತೂಕಡಿಕೆ, ಅನ್ನವಿಪಾಕ ಸಹ ಆಗುತ್ತೆ. ಸುರತವಿಘಾತದಿಂದ ಧಾತುಕ್ಷಯ. ಹಸಿವೆಯಾದಕಾಲದಲ್ಲಿ ಆಹಾರಮಾಡದೆಹೋದರೆ ಅಗ್ನಿ ನಷ್ಟವಾಗುತ್ತೆ. ಹ್ಯಾಗಂದರೆ—ಅಗ್ನಿಗೆ ಕಟ್ಟಿಗೆ ಹಾಕದೆಹೋದರೆ ಹ್ಯಾಗೆ ನಷ್ಟವಾಗುತ್ತೋ ಹಾಗೆ ಆಹಾರಕೊಡದೆ ಇರೋಣದರಿಂದ ಜಠರಾಗ್ನಿ ನಷ್ಟವಾಗುತ್ತೆ. ಜಠರಾಗ್ನಿಗೆ ಆಹಾರ ಕೊಡದೆ ಹೋದರೆ ಧಾತುಗತದೋಷವನ್ನು ತಿನ್ನುತ್ತೆ. ಧಾತುಗಳಲ್ಲಿ ದೋಷವಿಲ್ಲದೆ ಹೋದರೆ ಕಫಾದಿದೋಷವನ್ನು ತಿನ್ನುತ್ತೆ. ಆ ದೋಷವು ಇಲ್ಲದೆ ಇದ್ದರೆ ಧಾತುವನ್ನೇ ತಿನ್ನುತ್ತೆ. ಅದೂ ಇಲ್ಲದೆ ಹೋದರೆ ಪ್ರಾಣವನ್ನು ಭಕ್ಷಿಸುತ್ತೆ.

೪೧. ಆಹಾರಾದಿಗುಣ.—ಪ್ರಾಣಿಗಳಿಗೆ ಆಹಾರದಿಂದ ತೃಪ್ತಿ, ದೇಹಧಾರಕ, ಬಲ, ಜ್ಞಾಪಕ, ಆಯುಷ್ಯ, ಶಕ್ತಿ, ವರ್ಣ, ತೇಜಸ್ಸು, ಸತ್ವ, ಕಾಂತಿಗಳನ್ನುಂಟುಮಾಡುತ್ತೆ.

೪೨. ಭೋಜನದ ವಿಧಾನ.—ಪ್ರಾತಃಕಾಲ ಸಾಯಂಕಾಲ ಭೋಜನ ಮಾಡತಕ್ಕದ್ದು ಯುಕ್ತ, ಇದು ಶಾಸ್ತ್ರೀಯ, ಇದರ ವ್ಯತಿರಿಕ್ತಕಾಲದಲ್ಲಿ ನಿಷಿದ್ಧ.

೪೩. ಭೋಜನ ಕಾಲ.—ಒಂದು ಝಾಮದವಳಗೆ ಎರಡಾವರ್ತಿ ಭೋಜನ ಮಾಡಕೂಡದು. ಎರಡು ಝಾಮದಮೇಲೆ ಉಪವಾಸ ಇರಕೂಡದು. ಒಂದು ಝಾಮದವಳಗಾಗಿ ಒಂದಾವರ್ತಿ ಊಟಮಾಡಿದರೆ ಅದರಿಂದ ರಸೋತ್ಪತ್ತಿಯಾಗುತ್ತೆ. ಎರಡು ಝಾಮದ ಮೇಲೆ ಭೋಜನ ಮಾಡದೆ ಇದ್ದರೆ ಬಲಕ್ಷಯವಾಗುತ್ತೆ.

೪೪. ರಸಾದಿಗಳ ಜೀರ್ಣಜ್ಞಾನ.—ತೇಗು, ಉತ್ಸಾಹ, ಮಲಮೂತ್ರ, ಸರಿಯಾಗಿ ನಡಿಯುವದು, ಶರೀರಲಘುತ್ವ, ಹಸಿವು, ಬಾಯಾರಿಕೆ ಸಹ ಉಂಟಾದಾಗ ಜೀರ್ಣಸಿತುಯೆಂದು ತಿಳಿಯಬೇಕು.

೪೫. ಭೋಜನವನ್ನು ಮಾಡುವ ಸ್ಥಳ.—ಭೋಜನವನ್ನು, ಮಲಮೂತ್ರ ವಿಸರ್ಜನೆಯನ್ನು, ಸಂಭೋಗವನ್ನು ಸಹ ರಹಸ್ಯವಾಗಿ ಮಾಡಬೇಕು. ಹಾಗೆ ಮಾಡಿದರೆ ದೃಷ್ಟಿದೋಷವು, ಮಾನಹಾನಿ ಸಹ ಆಗುವದಿಲ್ಲ.

೪೬. ಭೋಜನ ಮಾಡತಕ್ಕದ್ದನ್ನು ಯಾರು ನೋಡಕೂಡದೆಂದರೆ.—ನೀಚ, ಭಿಕಾರಿ, ಹಸಿವುಳ್ಳವನು, ಪಾಪಿ, ರೋಗೀ, ಕೋಳಿ, ನಾಯಿ, ಇವುಗಳ ದೃಷ್ಟಿ ನಿಷಿದ್ಧ.

೪೭. ಭೋಜನ ಮಾಡತಕ್ಕದ್ದನ್ನು ಯಾರು ನೋಡಬಹುದೆಂದರೆ.—ತಾಯಿ, ತಂದೆ, ವೈದ್ಯ, ಅಡಿಗೆಮಾಡತಕ್ಕವ, ಹಂಸಪಕ್ಷಿ, ನವಿಲು, ಚಕೋರ, ಇವುಗಳ ದೃಷ್ಟಿ ಉತ್ತಮ.

೪೮. ದುರದೃಷ್ಟಿಗೆ ಶಾಂತಿ.—ದೃಷ್ಟಿದೋಷಕ್ಕೆ ಉಪ್ಪು ನೀರು ಕುಡಿಸಬೇಕು, ಮತ್ತು ದೇವರ ಸ್ಮರಣೆಯನ್ನು ಮಾಡಿದರೆ ದೃಷ್ಟಿದೋಷಹರ.

೪೯. ಭೋಜನ ಪಾತ್ರೆ, ಗುಣ.—ಚಿನ್ನದ ಪಾತ್ರೆಯಲ್ಲಿ ಭೋಜನಮಾಡಿದರೆ ಪಥ್ಯ, ದೋಷಹರ, ದೃಷ್ಟಿಪ್ರದ. ಬೆಳ್ಳೀಪಾತ್ರೆಯಲ್ಲಿ ಭೋಜನ ಮಾಡಿದರೆ ನೇತ್ರಪಾಟವ, ಪಿತ್ತಶಾಮಕ, ಕಫ ವಾಯುಗಳನ್ನು ಉಂಟು ಮಾಡುತ್ತೆ. ಕಂಚಿನಪಾತ್ರೆ ಬುದ್ಧಿಪ್ರದ, ರುಚಿಕರ, ರಕ್ತಪಿತ್ತ ಪರಿಹಾರಕ. ಹಿತ್ತಾಳೆಪಾತ್ರೆ ವಾತಕರ; ರೂಕ್ಷ, ಶೂಲ, ಕ್ರಿಮಿ ಶ್ಲೇಷ್ಮಹರ. ಕಬ್ಬಿಣ ಕಾಂತ ಪಾತ್ರೆಗಳು ಶುದ್ಧಿಕಾರಕ; ಶೋಥೆ, ಪಾಂಡು, ಕಾಮಾಲೆಗಳನ್ನು ಪರಿಹರಿಸಿ ಬಲವನ್ನುಂಟು ಮಾಡುತ್ತೆ. ಕಲ್ಲು ಮತ್ತು ಮಣ್ಣಿನ ಪಾತ್ರೆಗಳು ಲಕ್ಷ್ಮೀಹರಗಳು. ಮರದಪಾತ್ರೆ ರುಚಿಕರ, ಕಫಕಾರಕ. ಮುತ್ತುಗದ ಪತ್ರಾವಳಿ ರುಚಿಕರ, ದೀಪನವಾಗಿ ವಿಷನಾಶವಂ ಮಾಡುತ್ತೆ. ಇತರ ಯಲೆಗಳು ಮತ್ತು ಸೋರೆಬುರುಡೆ, ಬಿದರು, ಚರ್ಮ ಮತ್ತು ಅನೇಕವಿಧವಾದ ಮರಗಳ ಪಾತ್ರೆಗಳು ಸಹ ತಮ್ಮ ತಮ್ಮ ಗುಣಗಳನ್ನು ಕೊಡುತ್ತವೆ.

೫೦. ನೀರುಕುಡಿಯುವ ಪಾತ್ರೆ,ಗುಣ.—ನೀರು ಕುಡಿಯುವ ಪಾತ್ರೆಯು ತಾಂಬ್ರದ್ದಾಗಿರಬೇಕು. ಅದು ಇಲ್ಲದಿದ್ದರೆ ಮಣ್ಣಿನಪಾತ್ರೆ ಉತ್ತಮ. ಒಳಗೆ ಹೊರಗೆ ಸಹ ಹವಳಮೆಟ್ಟಿದ ಪಾತ್ರೆಯು ಮತ್ತು ಸ್ಫಟಿಕದ ಪಾತ್ರೆ, ಗಾಜಿನಪಾತ್ರೆ, ವೈಡೂರ್ಯದ ಪಾತ್ರೆ ಸಹ ತಂಪು.

೫೧. ಭೋಜನಕ್ಕೆ ಆದಿಯಲ್ಲಿ ಮಾಡತಕ್ಕ ಕ್ರಮ.—ಶ್ಲೇಷ್ಮ ಪ್ರಕೃತಿಯಾದವನು ಸೈಂಧವಲವಣ, ಹಸೀಶುಂಠಿ ತಿನ್ನಬೇಕು. ಅದು ಪಥ್ಯಕಾರಿ, ಅಗ್ನಿವೃದ್ಧಿ, ರುಚಿಕರ, ನಾಲಿಗೆ ಮತ್ತು ಕಂಠವನ್ನು ಸರಿಮಾಡುತ್ತೆ. ಸೈಂಧವಲವಣದ ಗುಣ—ರುಚಿ, ಅಗ್ನಿದೀಪನೆ, ಪಾಚಕ, ಲಘು, ಉಷ್ಣ, ಇವುಗಳನ್ನು ಉಂಟುಮಾಡುತ್ತೆ. ಶುಂಠೀಗುಣ—ಮಲಭೇದಕ, ಜಡ,

ಖಾರ, ಉಷ್ಣ, ದೀಪನ, ಖೈ, ಪಾಕದಲ್ಲಿ ಮಧುರರಸವುಳ್ಳದ್ದು, ವಾತ ಶ್ಲೇಷ್ಮ ಪರಿಹಾರವೊಡುತ್ತೆ.

೫೨. ಭೋಜನ ಮಾಡತಕ್ಕ ಕ್ರಮ.—ಭೋಜನ ಕಾಲದಲ್ಲಿ ಏಕಾಗ್ರ ಚಿತ್ತನಾಗಿ ಮೊದಲು ಸೀ, ಮಧ್ಯದಲ್ಲಿ ಹುಳೀ ಉಪ್ಪು, ಅನಂತರ ಖಾರ, ಖೈ, ಒಗರು ಮತ್ತು ದಾಳಿಂಬೆ ಮೊದಲಾದ ಫಲಗಳನ್ನು ತಿನ್ನತಕ್ಕದ್ದು. ಬಾಳೆಹಣ್ಣು ಕೂಡದು. ಆಮೇಲೆ ಸೌತೆಕಾಯಿ, ತಾವರೆಗಡ್ಡೆ, ಕಬ್ಬು ಮುಂತಾದವುಗಳನ್ನು ತಿನ್ನತಕ್ಕದ್ದು. ರವೆಪದಾರ್ಥ, ಅಕ್ಕಿಹಿಟ್ಟಿನ ಪದಾರ್ಥಗಳನ್ನು ವೂಟಾ ಆದಮೇಲೆ ತಿನ್ನಕೂಡದು. ಇವುಗಳನ್ನು ತುಪ್ಪದಲ್ಲಿ ಅದ್ದಿಕೊಂಡು ತಿನ್ನಬೇಕು. ಕಠಿನ ಪದಾರ್ಥಗಳನ್ನು ವೂಟಕ್ಕೆ ಆದಿಯಲ್ಲೂ, ಮೃದುಪದಾರ್ಥಗಳನ್ನು ಅಂತ್ಯದಲ್ಲೂ ವೂಟಾಮಾಡಿದರೆ ಬಲವೂ, ಆರೋಗ್ಯವೂ ವುಂಟಾಗುತ್ತೆ. ಮೊದಲು ದ್ರವಪದಾರ್ಥಗಳನ್ನು ಭಕ್ಷಿಸಿದರೆ ನೀರು ಕುಡಿಯಬಾರದು. ಕಠಿನಪದಾರ್ಥಗಳನ್ನು ತಿಂದು ಅನಂತರ ನೀರು ಕುಡಿಯಬೇಕು. ಭೋಜನಾಂತ್ಯದಲ್ಲಿ ಸೀಪದಾರ್ಥಗಳನ್ನು ತಿಂದರೆ ತೃಪ್ತಿಯಾಗುತ್ತೆ.

೫೩. ಮಧುರಾನ್ನದ ಗುಣ.—ಸೀಪದಾರ್ಥದಿಂದ ಮನಸ್ಸಿಗೆ ಆನಂದ, ಬಲ, ಪುಷ್ಟಿ, ಉತ್ಸಾಹ, ನಾಲಿಗೆಗೆ ಸುಖ ಸಹ ಉಂಟಾಗುತ್ತೆ. ಕಟು ಪದಾರ್ಥದಿಂದ ಗುಣ ವಿಪರೀತವಾಗುತ್ತೆ.

೫೪. ಅನ್ನದ ಗುಣ.—ಅತಿಬಿಸಿಯಾದ ಅನ್ನವನ್ನು ವೂಟಮಾಡಿದರೆ ಬಲಕ್ಷಯ, ಅತಿಥಣ್ಣಗಾದ ಮತ್ತು ಶುಷ್ಕವಾದ ಅನ್ನವು ಕೆಟ್ಟದ್ದು, ಅತಿಶೀಘ್ರವಾಗಿ ವೂಟಮಾಡಿದ ಅನ್ನವು ಬಳಲಿಕೆಯನ್ನು ಉಂಟುಮಾಡುತ್ತೆ. ಆದ್ದರಿಂದ ಹಿತವಾಗಿ ಮಿತವಾಗಿ ಷಡ್ರಸದಲ್ಲಿ ವಿಪಾಕವಿಲ್ಲದಂತೆ ವೂಟಾಮಾಡಬೇಕು.

೫೫. ಗುರುವಾದ ಅನ್ನ ಮೂರು ಪ್ರಕಾರ.—ಹಿಟ್ಟುಬೆರದ ಅನ್ನಕ್ಕೆ ಸಂಸ್ಕಾರಗುರುವೆಂದು ಹೆಸರು. ಹೆಸರುಬೆರದ ಅನ್ನಕ್ಕೆ ಗುರುವೆಂದು ಹೆಸರು. ವುದ್ದು ಮುಂತಾದ್ದು ಬೆರದ ಅನ್ನಕ್ಕೆ ಪ್ರಾಕೃತಗುರುವೆಂದು ಹೆಸರು. ಮಂದಾಗ್ನಿಯು, ಜ್ವರವು, ಉಳ್ಳವನು ಮಾತ್ರ ಗುರುಪದಾರ್ಥವನ್ನು ತಿನ್ನಕೂಡದು, ಮತ್ತು ಸ್ವಭಾವವಾಗಿ ಗುರುಪದಾರ್ಥವನ್ನು, ಗುರುಪದಾರ್ಥಕ್ಕೆ ಸಂಸ್ಕಾರ ಅಂದರೆ ಅತಿಗುರುಪದಾರ್ಥವನ್ನು ಸಹ ಭುಂಜಿಸ ಕೂಡದು.

೫೬. ಷಡ್ರಸಗಳಲ್ಲಿ ನಾಲ್ಕು ವಿಧವಾದ ಅಹಾರ ಯಾವವೆಂದರೆ.— ಕುಡಿಯುವ ಪದಾರ್ಥ, ನೆಕ್ಕತಕ್ಕ ಪದಾರ್ಥ, ನುಂಗತಕ್ಕ ಪದಾರ್ಥ, ಅಗಿದು ತಿನ್ನುವ ಪದಾರ್ಥ.

೫೭. ಅನ್ನಭೋಜನ ಪ್ರಮಾಣ.—ಗುರುವಾದ ಪದಾರ್ಥವನ್ನು ಸ್ವಲ್ಪವಾಗಿಯೂ, ಲಘುವಾದ ಪದಾರ್ಥವನ್ನು ಪೂರ್ಣವಾಗಿಯೂ ತಿನ್ನಬೇಕು. ಪಿತ್ತಪ್ರಕೃತಿವುಳ್ಳವನು ಕುಡಿಯುವ ಪದಾರ್ಥಗಳನ್ನು ಮುಂಚೆ ಸ್ವಲ್ಪ ತೆಗದುಕೊಂಡು ಮೇಲೆ ಅಹಾರ ಹಾಕಬೇಕು. ಪೇಯ, ಲೇಹ್ಯ, ಲಘು, ಹಿಂದೆ ಹೇಳಿದ ಭಕ್ಷ್ಯಾದಿಗಳು ಜಡ; ಕಡಿಯುವ ಪದಾರ್ಥದಸಂಗಡ ಶುಷ್ಕ ಪದಾರ್ಥವನ್ನು ತಿಂದರೆ ಶೀಘ್ರವಾಗಿ ಪಚನವಾಗುತ್ತೆ.

೫೮. ಶುಷ್ಕಾನ್ನದ ದೋಷ.—ಅನ್ನ ಒಣಗಿ ಹೋದಮೇಲೆ ಪದೆಪದೆ ತಿಂದರೆ ಶೀಘ್ರವಾಗಿ ಪಚನವಾಗುವದಿಲ್ಲ. ಶುಷ್ಕಾನ್ನ ವಿರುದ್ಧವಾದದ್ದು. ಮಲಬದ್ಧವಾಗಿ ಅಗ್ನಿಮಾಂದ್ಯವಾಗುತ್ತೆ.

೫೯. ಅಗ್ನಿ ನಾಲ್ಕುಪ್ರಕಾರ.—ಮಂದ, ತೀಕ್ಷ್ಣ, ವಿಷಮ, ಸಮವೆಂದು ನಾಲ್ಕುಪ್ರಕಾರ. ಮಂದಾಗ್ನಿವುಳ್ಳವ, ಜ್ವರವುಳ್ಳವ ಸಹ ಲಘು ಅನ್ನವನ್ನು ತಿನ್ನಬೇಕು. ತೀಕ್ಷ್ಣಾಗ್ನಿವುಳ್ಳವ ಗುರು ಅನ್ನವನನ್ನು ತಿನ್ನಬೇಕು. ವಿಷಮಾಗ್ನಿವುಳ್ಳವ ಜಿಡ್ಡು ಬೆರದ ಅನ್ನವನ್ನು ತಿನ್ನಬೇಕು. ಸಮಾಗ್ನಿವುಳ್ಳವನು ಸಮವಾದ ಅನ್ನವನ್ನು ತಿನ್ನಬೇಕು.

೬೦. ಭೋಜನದಲ್ಲಿ ನೇಮ.—ಊಟವನ್ನು ಮಾಡುವಾಗ ಅನ್ನಾದಿಗಳಮೇಲೆ ದೃಷ್ಟಿಯನ್ನು ಸರಿಯಾಗಿ ಇಟ್ಟು ಮನಸ್ಸಿನಲ್ಲಿ ದೇವರನ್ನು ಧ್ಯಾನಿಸುತ್ತಾ ಪರರ ನಿಂದೆಯನ್ನು ಮಾಡದೆ ನಾಲಿಗೆಯಿಂದ ಪಾಕಭೇದಗಳನ್ನು ತಿಳಿಯುತ್ತಾ ವಿಷ ಪದಾರ್ಥಗಳನ್ನು ಬಿಟ್ಟು ಸುಪಕ್ವಪದಾರ್ಥಗಳನ್ನು ತಿಂದರೆ ರಕ್ತ, ಶರೀರದಲ್ಲಿ ಮಾಂಸಮುಂತಾದವು ವೃದ್ಧಿಯಾಗುತ್ತೆ. ಹೀಗೆ ಮಾಡದೆ ವಿರಸಪದಾರ್ಥಗಳನ್ನು ತಿಂದರೆ ಶ್ಲೇಷ್ಮ ಹೆಚ್ಚಾಗುತ್ತೆ; ಹುಳಿ, ಖೈ, ಕಮರುತೇಗುಗಳು ಕಾಣಿಸಿ ಮಲಕಟ್ಟಿ ನಾಲಿಗೆಯಲ್ಲಿ ಅರುಚಿ ಹುಟ್ಟಿ ಸಕಲರೋಗಕ್ಕೂ ಕಾರಣವಾಗುತ್ತೆ.

೬೧. ಹಿಟ್ಟು ತಿನ್ನುವ ಕ್ರಮ.—ಸತ್ತುವಿನ ಹಿಟ್ಟನ್ನು ರಾತ್ರೆ ನೆನೆಹಾಕಿದ್ದು ಬೆಳಿಗ್ಗೆ ತಿನ್ನಬೇಕು. ಹಿಟ್ಟು, ತುಪ್ಪ, ಸಕ್ಕರೆ ಸೇರಿಸಿ ರಾತ್ರೆಯಲ್ಲಿ ಹಿಟ್ಟಿನ ಪದಾರ್ಥಗಳನ್ನು, ಮಾಂಸ ಇಂಥಾದನ್ನು ವರ್ಜಿಸಬೇಕು.

೬೦. ವಿಷಮಭೋಜನದ ಲಕ್ಷಣ.—ಅಕಾಲದಲ್ಲಿ ಭೋಜನ ಮಾಡಿದರೆ ವಿಷಮಭೋಜನವೆನ್ನಿಸಿಕೊಳ್ಳುತ್ತೆ. ಕಾಲಕ್ಕೆ ಮುಂಚೆ ಭುಂಜಿಸಿದರೆ ದುರ್ಬಲತ್ವ, ಶಿರೋವೇಧನೆ, ಅತಿಸಾರ, ಆಲಸ್ಯ ಮತ್ತು ಅನೇಕವ್ಯಾಧಿಗಳುಉಂಟಾಗುತ್ತವೆ. ವ್ಯಾಧಿಪರಿಹಾರವಾಗದೆ ಇದ್ದರೆ ಮರಣವು ಸಂಭವಿಸುತ್ತೆ. ಕಾಲವನ್ನು ಮೀರಿ ವೂಟವನ್ನು ಮಾಡಿದರೆ ವಾಯುಪ್ರಕೋಪ, ಅಗ್ನಿಮಾಂದ್ಯ ಸಹ ಉಂಟಾಗುತ್ತೆ; ಪುನಃ ಭೋಜನೇಛೆಯೂ ಆಗುವದಿಲ್ಲ. ನಾಲಿಗೆಗೆ ಅನ್ನರಸದಿಂದ ತೃಪ್ತಿಯಾದಮೇಲೆ ಯಾವ ಪದಾರ್ಥವನ್ನೂ ತಿನ್ನಕೂಡದು.

೬೧. ಅತ್ಯಾಹಾರ ಸ್ವಲ್ಪಾಹಾರ ದೋಷಗುಣಗಳು.—ಅನ್ನವನ್ನು ಹೆಚ್ಚಾಗಿ ತಿಂದರೆ ಹೊಟ್ಟೆಯುಬ್ಬರ, ಆಲಸ್ಯ, ಹೊಟ್ಟೆಯಲ್ಲಿ ಗುಡಬಡಶಬ್ದ ಸಹ ಉಂಟಾಗುತ್ತೆ. ಕಮ್ಮಿಯಾಗಿ ವೂಟಮಾಡಿದರೆ ಕೃಶತ್ವವು, ಬಲಕ್ಷಯವು ಸಹ ಉಂಟಾಗುತ್ತೆ.

೬೨. ಭೋಜನಕಾಲದಲ್ಲಿ ನೀರು ಕುಡಿಯುವ ಕ್ರಮ.—ಹೊಟ್ಟೆಯ ಎರಡುಭಾಗಗಳಲ್ಲಿ ಆಹಾರವನ್ನು ತುಂಬಿ ಮೂರನೇ ಭಾಗದಲ್ಲಿ ನೀರನ್ನು ತುಂಬಬೇಕು. ನಾಲ್ಕನೇ ಭಾಗವನ್ನು ವಾಯುಸಂಚಾರಕ್ಕೆ ಬಿಡಬೇಕು. ಅತಿನೀರು ಕುಡಿಯುವದರಿಂದ ಅನ್ನ ಜೀರ್ಣಿಸುವದಿಲ್ಲ. ನೀರು ಕುಡಿಯದೇ ಇರುವದರಿಂದಲೂ ಅದೇದೋಷ ಉಂಟಾಗುತ್ತೆ. ಅಗ್ನಿವೃದ್ಧಿಗೋಸ್ಕರ ಆಗಿಂದಾಗ್ಯೆ ಸ್ವಲ್ಪ ಸ್ವಲ್ಪವಾಗಿ ನೀರು ಕುಡಿಯುತ್ತಿರಬೇಕು. ಶ್ಲೇಷ್ಮಪ್ರಕೃತಿವುಳ್ಳವನು ವೂಟಕ್ಕೆ ಮುಂಚೆ ನೀರುಕುಡಿದರೆ ಮಂದಾಗ್ನಿಯನ್ನು, ಕೃಶತ್ವವನ್ನು ಸಹ ಉಂಟುಮಾಡುತ್ತೆ. ಮತ್ತು ವೂಟದ ಮಧ್ಯದಲ್ಲಿ ನೀರು ಕುಡಿದರೆ ಸ್ಥೂಲತ್ವವನ್ನು, ಕಫವನ್ನು ಸಹ ಉಂಟುಮಾಡುತ್ತೆ. ಬಾಯಾರಿಕೆಯಾದಾಗ ವೂಟವನ್ನು ಮಾಡಬಾರದು. ಹಸಿವು ಆದಾಗ ನೀರನ್ನು ಕುಡಿಯಬಾರದು. ಬಾಯಾರಿಕೆಯಲ್ಲಿ ಅನ್ನ ತಿಂದರೆ ಗುಲ್ಮರೋಗವು, ಹಸಿವು ಆದಾಗ ನೀರು ಕುಡಿದರೆ ಜಲೋದರವು ಸಹ ಉಂಟಾಗುತ್ತೆ.

೬೩. ಭೋಜನವಾದಮೇಲೆ ಹಾಲು ಕುಡಿಯುವದರ ಆಕ್ಷೇಪಣೆಗೆ ಸಮಾಧಾನ.—ಭೋಜನದಲ್ಲಿ ಮೂರುಕಾಲುಗಳು ಇವೆ. ಆದಿಯಲ್ಲಿ ವಾತಕಾಲ, ಮಧ್ಯದಲ್ಲಿ ಪಿತ್ತಕಾಲ, ಅಂತ್ಯದಲ್ಲಿ ಶ್ಲೇಷ್ಮಕಾಲ. ಭೋಜನಾದಿಯಲ್ಲಿ ಮಧುರರಸವನ್ನು, ಮಧ್ಯದಲ್ಲಿ ಹುಳಿ ಉಪ್ಪನ್ನು, ಅಂತ್ಯದಲ್ಲಿ

ಖಾರ, ಕಹಿ, ಒಗರು ಪದಾರ್ಥಗಳನ್ನು ಕ್ರಮವಾಗಿ ತಿಂದರೆ ವಾತ ಪಿತ್ತ ಶ್ಲೇಷ್ಮಗಳ ವೈಷಮ್ಯಗಳು ಶಮನವಾಗುತ್ತೆ. ಈ ಸೀ, ಉಪ್ಪು, ಹುಳಿ, ಖಾರ, ಒಗರು, ಕಹಿ ರಸಗಳುಳ್ಳ ಪದಾರ್ಥಗಳಿಂದಲೇನಾದರೂ ಇದ್ದಾಗ್ಯೂ ಊಟದನಂತರ ಹಾಲು ಕುಡಿದರೆ—ಹಾಲು ಕಫಕಾರಿ, ಸೀ, ಜಿಡ್ಡು, ಗುರು, ಹೀಗೆ ದೋಷಯುಕ್ತವಾದಾಗ್ಯೂ—ಆ ದೋಷಗಳನ್ನೆಲ್ಲಾ ನಿವರ್ತಿಸುತ್ತೆಯಾದ್ದರಿಂದ ಭೋಜನಾಂತ್ಯದಲ್ಲಿ ಹಾಲು ಕುಡಿದರೆ ದೋಷವಿಲ್ಲ. ಮತ್ತು ಬಲಿಷ್ಠನಿಗೆ ತಿಂದ ಆಹಾರಗಳು ಯಾವರೀತಿಯಾಗಿ ವಶವರ್ತಿಯಾಗಿರುತ್ತದೋ ಅದೇಪ್ರಕಾರ ಆಹಾರಜನ್ಯವಾದ ದೋಷಗಳು ಸಹ ಬಲಿಷ್ಠನಿಗೆ ಬಾಧಕವಾಗುವದಿಲ್ಲ.

೬೬. ಆಚಮನವಿಧಿ.—ಈಮೇರೆ ಭೋಜನವಾದಮೇಲೆ ಕೈಬಾಯಿಗಳನ್ನು ತೊಳದುಕೊಂಡು ಊಟಮಾಡುವಾಗ ಅನ್ನಮುಂತಾದವು ದಂತಗಳಲ್ಲಿ ಸಿಕ್ಕಿಕೊಂಡಿದ್ದರೆ ಅವುಗಳನ್ನು ತೆಗದು ಹಾಕಿ ಬಾಯಿಮುಕ್ಕಳಿಸಬೇಕು. ಇಲ್ಲವಾದರೆ ದುರ್ಗಂಧವಾಗುತ್ತೆ. ಬಲವಾಗಿ ಸಿಕ್ಕಿಕೊಂಡ ಅನ್ನವನ್ನು ಬಲಾತ್ಕಾರದಿಂದ ತೆಗೆಯಕೂಡದು.

೬೭. ಊಟವಾದಮೇಲೆ ಮಾಡತಕ್ಕದ್ದು.—ಬಹಳ ಶ್ರಮವಾಗದೆ ಇರುವ ಕೆಲಸವನ್ನು ಮಾಡಬೇಕು.

೬೮. ಭೋಜನವಾದಮೇಲೆ ಉಂಟಾಗುವ ದೋಷ.—ತಿಂದ ಅನ್ನ ಜೀರ್ಣಿಸಿದಮೇಲೆ ವಾಯುಹುಟ್ಟುತ್ತೆ, ಜೀರ್ಣವಾಗುವ ಕಾಲದಲ್ಲಿ ಪಿತ್ತ, ಊಟವಾದಮೇಲೆ ಕಫ ಉಂಟಾಗುತ್ತೆ.

೬೯. ಇದಕ್ಕೆ ಪರಿಹಾರ.—ಅಗರುಮುಂತಾದ್ದು ಹಾಕಿ ಹೊಗೆ ತೆಗದುಕೊಳ್ಳಬೇಕು. ಮತ್ತು ಕಸ್ತೂರಿ, ಲವಂಗ, ಜಾಕಾಯಿ, ಕರ್ಪೂರ ಇವುಗಳಿಂದ ಮಿಶ್ರವಾದ ಎಲೆಅಡಿಕೆಗಳನ್ನು ಹಾಕಿಕೊಳ್ಳಬೇಕು. ಹೊಗೆಬತ್ತಿಯನ್ನೂ ಗುಡಾಖನ್ನೂ ಸೇದುವ ಅಭ್ಯಾಸವುಳ್ಳವರು ಸೇದಬೇಕು.

೭೦. ತಾಂಬೂಲ ಮುಂತಾದವುಗಳ ಸೇವನೆಕಾಲ.—ಸಂಭೋಗ ಕಾಲದಲ್ಲೂ, ಸ್ನಾನಾನಂತರವೂ, ಭೋಜನಾನಂತರವೂ, ವಮನವಾದಮೇಲೂ, ಪ್ರಾತಃಕಾಲದಲ್ಲೂ, ಯುದ್ಧಕಾಲದಲ್ಲೂ, ವಿದ್ವಾಂಸರ ಸಭೆಯಲ್ಲೂ ಸಹ ತಾಂಬೂಲಸೇವನೆ ಮಾಡಬೇಕು.

೭೧. ತಾಂಬೂಲದ ಗುಣ.—ಈ ತಾಂಬೂಲವು ಉಷ್ಣ, ರುಚಿಕರ, ಕ್ಷಾರವುಳ್ಳದ್ದು; ಕಾಮ, ಮತ್ತು ರಕ್ತ ಪಿತವನ್ನು ಸಹ ಉಂಟು ಮಾಡುತ್ತೆ.

ಮತ್ತು ಮುಖಸ್ವಚ್ಛತಾ, ಸುಗಂಧ, ಕಾಂತಿ, ನಾಲಿಗೆಮೃಧು ಇವುಗಳನ್ನುಂಟುಮಾಡುತ್ತೆ; ಗಂಟಲ ರೋಗಗಳನ್ನು ನಾಶಮಾಡುತ್ತೆ; ಮುಖ ದುರ್ಗಂಧ, ಮಲ, ವಾಯು, ಕ್ರಿಮಿಗಳನ್ನು ನಾಶಮಾಡುತ್ತೆ.

೨೨. ವೀಳ್ಯದಯೆಲೆ ಮತ್ತು ಅಡಿಕೆ ಗುಣ.—ಹೊಸಯೆಲೆ ಮಧುರ, ಗುರು, ಕಫಕಾರಿ; ಹಳೆ ಯೆಲೆಯಲ್ಲಿ ಖಾರವಿರುವದಿಲ್ಲ. ಥೆಳ್ಳಗೆ, ಬೆಳ್ಳಗೆ ಇರುವ ಎಲೆಯಲ್ಲಿ ವಿಶೇಷ ಗುಣವಿರುತ್ತೆ. ಕ್ಯಾನೆ ಚಿಗುರುಯಲೆಯಲ್ಲಿ ಗುಣವಿಲ್ಲ. ಅಡಿಕೆಯು ಗುರು, ತಂಪು, ಪಿತ್ತನಾಶಕ, ಮೋಹಕ, ದೀಪಕ, ಅರುಚಿನಾಶಕ; ಹಳೆಅಡಿಕೆ ಮಧ್ಯಮ; ಬೆಯಿಸಿಮಾಡಿದ ಅಡಿಕೆ ಕೆಂಪು ಮಾಡತಕ್ಕದ್ದು, ಅಗ್ನಿನಾಶಕ; ಮತ್ತು ಕಾಚು ಶ್ಲೇಷ್ಮ ಪಿತ್ತಹರ; ಮತ್ತು ಸುಣ್ಣ ವಾತ ಕಫ ನಾಶಕ. ಈ ಮೂರು ಪದಾರ್ಥಗಳನ್ನು ಸೇರಿಸಿ ತಿಂದರೆ ತ್ರಿದೋಷಹರ, ಆನಂದಕರ, ಮುಖಸ್ವಚ್ಛತಾಕರ, ಸುಗಂಧಕರ, ಸೌಂದರ್ಯಕರ. ವಿಳ್ಳೆದೆಲೆ ಅಗ್ರದಲ್ಲಿ ಆಯುಸ್ಸು, ಬುಡದಲ್ಲಿ ಯಶಸ್ಸು, ಮಧ್ಯದಲ್ಲಿ ಸಂಪತ್ತು ಇರುವದ್ದರಿಂದ ಈ ಭಾಗಗಳನ್ನು ಬಿಟ್ಟು ಮಿಕ್ಕದ್ದನ್ನು ತಿನ್ನಬೇಕು. ಬುಡದಲ್ಲಿ ವ್ಯಾಧಿ, ಅಗ್ರದಲ್ಲಿ ಪಾಪ; ಕಟೆ ತಗಲಿದ ಯಲೆ ಆಯುಷ್ಯನಾಶಕ. ಯಲೆಯ ನಾರು ಬುದ್ಧಿ ಕೆಡಿಸುತ್ತೆ. ಅಡಿಕೆ ಯಲೆ ಹಾಕಿಕೊಂಡು ಮೊದಲು ರಸ ವುಗಳಬೇಕು. ಎರಡನೆ ಭಾರಿ ರಸ ಬುದ್ಧಿಕಾರಕ, ಸುಗುಣಮಿಶ್ರವಾದ್ದು, ಅಮೃತಕ್ಕೆ ಸಮಾವಾದ್ದು; ಮೂರನೆ ಭಾರಿ ಚರಟಮಿಶ್ರವಾದದ್ದು ವುಗಳಬೇಕು.

೨೩. ತಾಂಬೂಲವನ್ನು ಯಾರು ಹಾಕಕೂಡದೆಂದರೆ.—ಭೇದಿಆದವನು, ಹಸಿವುವುಳ್ಳವನು, ಹಲ್ಲು ಘಟ್ಟಿಯಿಲ್ಲದವನು, ನೇತ್ರರೋಗವುಳ್ಳವನು; ವಿಷ, ಮೂರ್ಛೆ, ಮದ, ಎದೆವ್ಯಾಧಿ, ರಕ್ತಪಿತ್ತ ಈ ರೋಗಗಳು ಉಳ್ಳವರು ಹಾಕಕೂಡದು. ಭೇದಿಆದವನು, ಹಸಿವುವುಳ್ಳವನು ಸಹ ಹಾಕಿದರೆ ದೇಹ, ದೃಷ್ಟಿ, ಕೇಶ, ದಂತ, ಅಗ್ನಿ, ಕಿವಿ, ಕಾಂತಿ, ಬಲ ಇವುಗಳನ್ನು ಕೆಡಿಸುತ್ತೆ. ಮತ್ತು ಸಾಧನವಿಲ್ಲದವನು ತೆಗದುಕೊಂಡರೂ ಅದೇ ವ್ಯಾಧಿಗಳೇ ಬರುತ್ತೆ.

೨೪. ಶತಪಥದ ಗುಣ.—ಭೋಜನಾನಂತರ ಮೆಲ್ಲಗೆ ಶತಪಥ ನಡಿಯಬೇಕು. ಅದರಿಂದ ಅನ್ನ ಶಿಥಿಲವಾಗುತ್ತೆ. ಊಟಮಾಡಿದ ಕೂಡ್ಲೆ ಕೂತುಕೊಂಡರೆ ಧಪ್ಪವಾಗುತ್ತಾನೆ; ಮಲಗಿದರೆ ಶರೀರ ಭಾರವಾಗುತ್ತೆ; ತಿರಗಿದರೆ ಆಯುಷ್ಯವೃದ್ಧಿ; ಓಡಿದರೆ ಮೃತ್ಯು ಸಮೀಪಿಸುತ್ತೆ. ಶತಪಥದಿಂದ ಕತ್ತು, ಮೊಳಕಾಲು, ನಡವುಗಳಿಗೆ ಸುಖವಾಗುತ್ತೆ.

೭೫. ಮಲಗುವ ಕ್ರಮ.—ಮಲಗಿಕೊಳ್ಳುವಾಗ ಎಂಟು ಭಾರಿ ಶ್ವಾಸ ಬಿಡುವವರಿಗೂ ಅಂಗತಂಗನಾಗಿ, ಅನಂತರ ಹದಿನಾರು ಶ್ವಾಸ ಬಿಡುವವರಿಗೂ ಬಲಮಗ್ಗಲಾಗಿದ್ದು, ಅನಂತರ ಮೂವತ್ತೆರಡು ಶ್ವಾಸ ಬಿಡುವವರಿಗೂ ಎಡಮಗ್ಗಲಾಗಿದ್ದು, ಅನಂತರ ಮನಸ್ಸುಬಂದಂತೆ ಮಲಗಬೇಕು.

೭೬. ಪೀಠಾದಿಗಳಮೇಲೆ ಮಲಗೋಣದರ ಗುಣ.—ಬೆತ್ತದಿಂದ ಮಾಡಿರುವ ಮಂಚದಮೇಲೆ ಮಲಗಿದರೆ ತ್ರಿದೋಷವನ್ನು ಪರಿಹರಿಸುತ್ತೆ. ಹತ್ತೀಹಾಸಿಗೆ ಮೇಲೆ ಮಲಗಿದರೆ ಕಫ, ವಾಯು ಶಮನವಾಗುತ್ತೆ. ನೆಲದ ಮೇಲೆ ಮಲಗಿದರೆ ಭಾರವನ್ನುಂಟುಮಾಡುತ್ತೆ ; ಮತ್ತು ಉಷ್ಣ, ರಕ್ತಪಿತ್ತಗಳನ್ನು ನಾಶನಮಾಡುತ್ತೆ. ಮರದ ಹಲಿಗೆ ಮಂಚದ ಮೇಲೆ ಮಲಗಿದರೆ ವಾಯು ವೃದ್ಧಿಯಾಗುತ್ತೆ.

೭೭. ಹಾಸಿಗೆ ಗುಣ.—ಬಳ್ಳ ಮೆತ್ತಗೆಯಿರುವ ಹಾಸಿಗೆ ಮೇಲೆ ಮಲಗಿಕೊಂಡರೆ ಸುಖ, ಪುಷ್ಟಿ, ನಿದ್ರಾಕರ, ಧೈರ್ಯಕರ, ಶ್ರಮ ವಾಯು ನಾಶಕ, ಸ್ತ್ರೀರಲ್ಲಿ ಇಚ್ಛೆವುಂಟಾಗುತ್ತೆ. ಪಾದಸಂವಾಹನದಿಂದ ಮಾಂಸ, ರಕ್ತ, ಚರ್ಮ ಸ್ವಛಮಾಡುತ್ತೆ ; ಪ್ರೀತಿ, ನಿದ್ರೆ ಸಹ ಉಂಟಾಗುತ್ತೆ ; ಕಫ ವಾಯು ಶ್ರಮಗಳನ್ನು ನಾಶಮಾಡುತ್ತೆ.

೭೮. ಊಟವಾದ ಮೇಲೆ ಬೀಸಿಸಿಕೊಳ್ಳುವದರ ಗುಣ.—ಬೀಸಿಸಿಕೊಂಡರೆ ವಿವರ್ಣತ್ವ, ಸ್ತಂಭ, ಭಾರ ಇವುಗಳನ್ನುಂಟು ಮಾಡುತ್ತೆ ; ದಾಹ, ಪಿತ್ತ, ಸ್ವೇದ, ಮೂರ್ಛೆ ಇವುಗಳನ್ನು ನಾಶನಮಾಡುತ್ತೆ. ಬೀಸಿಸಿಕೊಳ್ಳದೆ ಹೋದರೆ ವಿಪರೀತಗುಣ ಉಂಟಾಗುತ್ತೆ.

೭೯. ಬೀಸಿಸಿಕೊಳ್ಳತಕ್ಕ ಕಾಲ.—ಗ್ರೀಷ್ಮಋತುವಿನಲ್ಲಿ ಸುಖವಾಗಿ ಬೀಸಿಸಿಕೊಳ್ಳಬೇಕು. ಬೀಸಿಸಿಕೊಳ್ಳೋಣದರಿಂದ ಆಯುಷ್ಯ, ಆರೋಗ್ಯ ಸಹ ಉಂಟಾಗುತ್ತೆ.

೮೦. ಸರ್ವದಿಕ್ಕುಗಳಿಂದ ಬರುವ ವಾಯುಗುಣ.—ಪೂರ್ವದಿಕ್ಕಿನ ವಾಯು ಸೀ, ಖಾರ, ಗುರು, ಉಷ್ಣ, ಜಿಡ್ಡು, ಈಗುಣಗಳು ಉಳ್ಳದ್ದು ; ದಾಹ, ರಕ್ತ, ವಾತ, ಪಿತ್ತ, ಸೀತ, ಕಟು, ಪುಷ್ಟಿ, ತ್ವಗ್ದೋಷ, ಅರ್ಶ, ದಂತಕ್ರಿಮಿ, ಸನ್ನಿಪಾತಜ್ವರ, ಶ್ವಾಸ, ಆಮವಾತ ಇವುಗಳ ಪ್ರಕೋಪವಂ ಮಾಡುವದು. ಶ್ರಮಪಟ್ಟವನಿಗೆ, ಕಫರೋಗಿಗೆ, ಶೋಷರೋಗಿಗೆ ಸಹಾ ಹಿತವನ್ನುಂಟುಮಾಡುತ್ತೆ. ದಕ್ಷಿಣದಿಕ್ಕಿನ ವಾಯುವು ಸೀ, ಲಘು, ತಂಪು, ವೀರ್ಯಕಾರಿ, ಬಲಕಾರಿ, ಕಣ್ಣಿಗೆ ಹಿತಕರ, ರಕ್ತ

ಪಿತ್ತನಾಶಕ, ವಾತಹರ. ಪಶ್ಚಿಮದಿಕ್ಕಿನ ವಾಯುವು ತೀಕ್ಷ್ಣ, ರಕ್ತಶೋಷಕ, ಬಲಹಾರಿ, ಲಘು ; ಮೇಧಸ್ಸು, ಪಿತ್ತ, ಕಫಗಳ ನಾಶಕವಾಗಿ ವಾಯುವನ್ನು ಹೆಚ್ಚಿಸುತ್ತೆ. ಉತ್ತರದ ವಾಯುವು ಸೀತಳ, ಜಿಡ್ಡು, ತ್ರಿದೋಷಕಾರಿ, ವಾತಪ್ರಕೃತಿಗೆ ಆಲಸ್ಯವನ್ನುಂಟುಮಾಡುತ್ತೆ ; ಮತ್ತು ಬಲಕರ, ಸೀ, ಮೃದುವಾಗಿರುತ್ತೆ. ಆಗ್ನೇಯದಿಕ್ಕಿನ ಘಾಳಿ ದಾಹಕಾರಕ, ಜಿಡ್ಡು. ನೈರುತ್ಯದಿಕ್ಕಿನ ವಾಯು ದಾಹಶಾಮಕ. ವಾಯುವ್ಯ ದಿಕ್ಕಿನ ವಾಯು ಖೈ. ಈಶಾನ್ಯದಿಕ್ಕಿನ ವಾಯು ಖಾರ. ಅನೇಕದಿಕ್ಕಿನ ಮಿಶ್ರವಾದ ವಾಯು ಆಯುಷ್ಯನಾಶಕ, ಅನೇಕ ರೋಗಗಳನ್ನುಂಟುಮಾಡುತ್ತೆ.

೮೧. ಬೀಸಣಿಕೆಘಾಳಿ ಗುಣ.—ಬೀಸಣಿಕೆ ಘಾಳಿ ದಾಹ, ಜವರು, ಮೂರ್ಛೆ, ಶ್ರಮಗಳನ್ನು ಪರಿಹರಿಸುತ್ತೆ. ತಾಳೆ ವಾಲೆ, ಚವರಿ, ಲಾಮಂಚ, ವಸ್ತ್ರ, ನವಿಲ್‌ಗರಿ, ಬೆತ್ತ ಈ ಬೀಸಣಿಕೆಗಳ ಘಾಳಿ ತ್ರಿದೋಷಶಾಮಕ, ಜಿಡ್ಡು, ಪ್ರೀತಿವುಳ್ಳದ್ದು, ಉತ್ತಮವಾದದ್ದು. ಬಿದುರು ಬೀಸಣಿಕೆಯ ಘಾಳಿಯು ಉಷ್ಣವನ್ನು ರಕ್ತಪಿತ್ತವನ್ನು ಹೆಚ್ಚಿಸುತ್ತೆ.

೮೨. ಹಗಲುನಿದ್ರೆ ನಿಷೇಧ.—ಸಾಧನವಿಲ್ಲದವರು ಹಗಲು ನಿದ್ರೆ ಮಾಡಬಾರದು. ಮಲಗಿದರೆ ಕಫಕಾರಿ. ಗ್ರೀಷ್ಮಋತು ಹೊರ್ತು ಮಿಕ್ಕ ಋತುಗಳಲ್ಲಿ ಹಗಲು ನಿದ್ರೆ ನಿಷೇಧ.

೮೩. ಹಗಲು ನಿದ್ರೆ ಯಾರಿಗೆ ಪ್ರೋಕ್ಷ್ಯೇದೆಂದರೆ.—ಅಭ್ಯಾಸವುಳ್ಳವನಿಗೆ ಮಾಡದೆ ಇದ್ದರೆ ವಾಯು ವೃದ್ಧಿಯಾಗುತ್ತೆ. ಮತ್ತು ಶ್ರಮ, ಸ್ತ್ರೀಸಂಗ, ಮಾರ್ಗಸಂಚಾರ, ವಾಹನದ ಮೇಲೆ ಹೋಗೋಣ ಈ ಕೆಲಸ ಮಾಡತಕ್ಕವರು, ಆಲಸ್ಯದವ, ಅತಿಸಾರಿ, ಶೂಲರೋಗಿ, ಶ್ವಾಸರೋಗಿ, ಬಿಕ್ಕಳಿಕೆ ರೋಗಿ, ವಾತರೋಗಿ, ಕ್ಷಯರೋಗಿ, ಕಫಕ್ಷಯದವ, ಮಕ್ಕಳು, ನಿಷ್ಪಾಪದಾರ್ಥ ತಿಂದವ, ವೃದ್ಧ, ಅಜೀರ್ಣರೋಗಿ, ಜಾಗರಣೆಮಾಡಿದವ, ಉಪವಾಸಮಾಡಿದವ ಸಹ ಹಗಲು ನಿದ್ರೆಮಾಡಬಹುದು, ದೋಷವಿಲ್ಲ.

೮೪. ಭೋಜನೋತ್ತರ ನಿದ್ರಾಗುಣ.—ಅಭ್ಯಾಸವಿದ್ದವನಿಗೆ ಭೋಜನಾನಂತರ ನಿದ್ರೆಮಾಡಿದರೆ ವಾಯುನಾಶಕ, ಪಿತ್ತ, ಕಫಕಾರಿ, ಶರೀರ ಪುಷ್ಟಿ. ಪಿತ್ತಪರಿಹರಿಸುವದಕ್ಕೋಸ್ಕರ ನಿದ್ರೆಮಾಡಬೇಕು, ವಾಯು ಪರಿಹಾರಕ್ಕೋಸ್ಕರ ಗುದ್ದಿಸಿಕೊಳ್ಳಬೇಕು, ಕಫನಾಶಕ್ಕೋಸ್ಕರ ವಾಂತಿಗೆ ತೆಗದುಕೊಳ್ಳಬೇಕು, ಜ್ವರನಾಶಾರ್ಥವಾಗಿ ಲಂಘನೆ ಮಾಡಬೇಕು. ಕೂತುಕೊಂಡು ನಿದ್ರೆಮಾಡಿದರೆ ಪುಷ್ಟಿಕರ, ಉಷ್ಣಹರ.

೮೫. ಊಟವಾದಮೇಲೆ ಅಸಹ್ಯ ಪರಿಹಾರಕ್ಕೆ ಮಾಡುವ ವಿಧಿ.—ಊಟವಾದಮೇಲೆ ರಮ್ಯವಾದ ಶಬ್ದಗಳನ್ನು ಕೇಳಬೇಕು. ಇಷ್ಟವಾದ್ದನ್ನು ಮುಟ್ಟಬೇಕು.

೮೬. ಅಸಹ್ಯವುಂಟಾಗುವದಕ್ಕೆ ಕಾರಣ.—ಅಪ್ರಿಯಶಬ್ದ, ರೂಪ, ಸ್ಪರ್ಶ, ರಸಾದಿಗಳನ್ನು ಹೆಚ್ಚಾಗಿ ಸೇವಿಸುವದು, ಅತಿಹಾಸ್ಯ ಮಾಡೋದು, ಇವುಗಳೆಲ್ಲಾ ವಮನಕಾರಿ.

೮೭. ಭೋಜನವಾದಕೂಡ್ಲೆ ತ್ಯಜಿಸತಕ್ಕದ್ದು.—ಭೋಜನವಾದ ಒಂದು ಮುಹೂರ್ತಪರಿಯಂತ ಅತಿನಿದ್ರೆ, ಚಿಂಕಿ, ಬಿಸಲು ಇವುಗಳನ್ನು ಕಾಯಿಸೋದು, ಯಾಜೋದು, ಅಶ್ವಾರೋಹಣ ಮುಂತಾದ ಶ್ರಮ ಕೆಲಸಗಳನ್ನು, ಸ್ತ್ರೀಗಮನ, ಓಡೋದು, ನಡಿಯೋದು, ಯುದ್ಧಮಾಡೋದು, ಗಾನ, ಅಧ್ಯಯನ, ಇವುಗಳು ಕೂಡದು.

೮೮. ಅಜೀರ್ಣಕ್ಕೆ ಕಾರಣ.—ಹೆಚ್ಚಾಗಿ ನೀರ್‍ಕುಡಿಯುವಿಕೆ, ಭೋಜನದಮೇಲೆ ಭೋಜನ, ಮಲಮೂತ್ರ ನಿರೋಧ, ಕಾಲತಪ್ಪಿ ನಿದ್ರೆ ಮಾಡೋಣ, ಈರ್ಷ್ಯೆ; ಭಯಪಟ್ಟವನು, ಕ್ರೋಧಿ, ಲೋಭಿ, ಭಿಕಾರಿ, ದ್ವೇಷಿ ಇವರುಗಳಿಗೆ ಅನ್ನ ಪಚನವಾಗುವದಿಲ್ಲ. ಕಾಲ ತಪ್ಪಿ ಊಟ ಮಾಡಿದರೆ ಅನ್ನ ಜೀರ್ಣವಾಗುವದಿಲ್ಲ.

೮೯. ಅಧ್ಯಶನ ಲಕ್ಷಣ.—ಮೊದಲು ತಿಂದ ಅನ್ನ ಜೀರ್ಣವಾಗದೆ ಯಿರುವಲ್ಲಿ ಅದರಮೇಲೆ ಪುನಃ ಭೋಜನಮಾಡಿದರೆ ಅಧ್ಯಶನವೆನ್ನಿಸಿಕೊಳ್ಳುತ್ತೆ. ಯಾವಕಾಲದಲ್ಲಾದರೂ ತಿಂದ ಅನ್ನ ಜೀರ್ಣವಾಗದೆ ಶೇಷವಿರುವಾಗ ತಿಂದರೆ ಅಗ್ನಿನಾಶವಾಗಿ ವಿಷವಾಗುತ್ತೆ.

೯೦. ಅದರ ನಿವಾರಣ.—ಅಳಲೇಕಾಯಿ, ಶುಂಠಿ, ಸೈಂಧವಲವಣ ಇವುಗಳ ಚೂರ್ಣವನ್ನು ನೀರಿನಲ್ಲಿ ಬೆರಸಿ ತೆಗದುಕೊಂಡರೆ ಪರಿಹರ. ಮತ್ತು ಭೋಜನದಲ್ಲಿ ಮಿತವಾಗಿರಬೇಕು.

೯೧. ಹಗಲು ಸ್ತ್ರೀನಿಷಿದ್ಧ.—ಸಂಭೋಗಮಾಡಿದರೆ ಆಯುಕ್ಷೀಣ. ಗ್ರೀಷ್ಮ, ವಸಂತಗಳಲ್ಲಿ ಮಾಡಿದರೆ ಮಾಡಬಹುದು. ಮುಖಕಾಂತಿ, ಕಫ, ಸ್ಥೂಲತ್ವ, ಸುಕುಮಾರತ್ವ ಸಹ ಕೊಡುವದು.

೯೨. ಸಂಚಾರದ ಗುಣ.—ಸಂಚಾರಮಾಡುವ ಕಾಲದಲ್ಲಿ ನಾಲ್ಕು ಮಳದಮುಂದೆದೃಷ್ಟಿಯನ್ನು ವಿಶೇಷವಾಗಿ ಯಿಟ್ಟುಕೊಂಡು ನಡಿಯಬೇಕು. ಈಪ್ರಕಾರ ಮಾಡಿದರೆ ಮುಂದೆ ಉಂಟಾಗುವ ಬಾಧಕಗಳು ತಪ್ಪುವದು.

ಸಂಚಾರಮಾಡಿದರೆ ದೇಹಚಾಂಚಲ್ಯವನ್ನು ತಪ್ಪಿಸಿ ದಾರ್ಢ್ಯವನ್ನು ಕೊಡುವದು, ಶ್ಲೇಷ್ಮಹರವು, ಕಾಲಪ್ರವರ್ತಿಯನ್ನು ಸರಿಯಾಗಿ ಮಾಡಿಸುವದು ; ಮನಸ್ಸಿಗೆ ಆನಂದಕರ, ಅಗ್ನಿಸಮ, ವೀರ್ಯವೃದ್ಧಿಗಳಾಗುವವು ; ಕೆಟೆ, ದಾಹ, ತಿನಸು, ಬೆವರು, ಶ್ರಮ ಇವುಗಳು ಹೋಗುವವು.

೯೩. ಅಧಿಕ ಸಂಚಾರದ ದುರ್ಗುಣ.—ಜ್ವರ, ಕೆಂಮುಗಳು ಹೆಚ್ಚುವವು, ರಕ್ತಪಿತ್ತ, ಬಳಲಿಕೆ, ಶ್ರಮ, ವಾಂತಿ, ಬಡವು, ಕ್ಷಯ, ನೀರಡಿಕೆ ಸಹ ಉಂಟಾಗುವವು, ಮತ್ತು ಹುಡುಗರು, ಕೃಶವಾದ ದೇಹವುಳ್ಳವರು, ವೃದ್ಧರು ಸಹ ಸಂಚರಿಸಕೂಡದು.

೯೪. ಮುಂಡಾಸಿನ ಗುಣ.—ತಲೆಮೇಲೆ ಲಘುವಸ್ತ್ರ ಧಾರಣದಿಂದ ಕಾಂತಿಕಾರಕ, ಕೇಶಕ್ಕೆ ಹಿತಕರ, ಧೂಳು ಘಾಳಿ ಕಫ ಇವುಗಳನ್ನು ಪರಿಹರಿಸುತ್ತೆ. ಭಾರವಾಗಿ ಸುತ್ತಿದರೆ ಉಷ್ಣ ಹೆಚ್ಚಾಗಿ ನೇತ್ರರೋಗವನ್ನುಂಟು ಮಾಡುತ್ತೆ.

೯೫. ಪಾದರಕ್ಷೆಯ ಧಾರಣೆಗುಣ.—ಪಾದರಕ್ಷೆಯ ಧಾರಣೆಯಿಂದ ನೇತ್ರಕ್ಕೆ ಹಿತಕರ, ಪಾದರೋಗನಾಶಕ, ಆಯುರ್ವೃದ್ಧಿಕರ, ಸಂಚಾರಕ್ಕೆ ಸುಖಕರ, ತೇಜೋವೃದ್ಧಿಕರ, ವೀರ್ಯವೃದ್ಧಿಯನ್ನು ಮಾಡುತ್ತೆ. ಜೋಡುಯಿಲ್ಲದೆ ಸಂಚಾರದಿಂದ ಅನಾರೋಗ್ಯವನ್ನು ಅಲ್ಪಾಯುಸ್ಸನ್ನು ಸಹ ವುಂಟುಮಾಡುತ್ತೆ, ಮತ್ತು ಇಂದ್ರಿಯಗಳಿಗೂ, ನೇತ್ರಗಳಿಗೂ ವಿಕಾರವನ್ನು ಹುಟ್ಟಿಸುತ್ತೆ.

೯೬. ಛತ್ರಿಗುಣ.—ಮಳೆ, ಬಿಸಲು, ಗಾಳಿ, ಧೂಳು, ಹಿಮ, ಉಷ್ಣಸಹಿತ ಪರಿಹರವಾಗುತ್ತೆ, ಮತ್ತು ಮಂಗಳಕರ.

೯೭. ದಂಡಧಾರಣೆಯ ಗುಣ.—ತಿರಗುವಾಗ ದೊಣ್ಣೆ ಕೈಯಲ್ಲಿ ಇದ್ದರೆ ಸತ್ವ, ಉತ್ಸಾಹ, ಸ್ಥೈರ್ಯ, ಧೈರ್ಯ, ವೀರ್ಯ, ಆಶ್ರಯ ಇವುಗಳು ವುಂಟಾಗಿ ಭಯನಾಶವಾಗುತ್ತೆ.

೯೮. ಪಾಲಕ್ಕಿಮೇಲೆ ಸಂಚಾರದ ಗುಣ.—ಮೇಲೆ ಆವರಣವಿರುವ ಪಾಲಕ್ಕಿ ಉತ್ತಮವಾದದ್ದು, ಅದರಲ್ಲಿ ಹತ್ತುವಿಕೆ ತ್ರಿದೋಷವಂ ಪರಿಹರಿಸುತ್ತೆ.

೯೯. ನಾವೇಮೇಲೆ ಪ್ರಯಾಣದ ಗುಣ.—ತಲೆತಿರುಗುವ ಮನುಷ್ಯನು ನಾವೇಮೆಲೆ ಪ್ರಯಾಣಮಾಡಿದರೆ ವಾತ, ಕಫರೋಗಗಳು ವುಂಟಾಗುತ್ತವೆ.

೧೦೦. ಗಜಾರೋಹಣ ಗುಣ.—ಆನೆಮೇಲೆ ಸವಾರಿಮಾಡಿದರೆ ಶೀತವಾಯುವನ್ನುಂಟುಮಾಡುತ್ತೆ, ಲಕ್ಷ್ಮಿ ಆಯುಷ್ಯ ಪುಷ್ಟಿಗಳನ್ನು ಹೆಚ್ಚಿಸುತ್ತೆ.

೧೦೧. ಅಶ್ವಾರೋಹಣ ಗುಣ.—ಇದರಿಂದ ವಾಯು, ಪಿತ್ತ, ಶ್ರಮ ಇವುಗಳು ವುಂಟಾಗುತ್ತವೆ, ಮತ್ತು ಮೇದಸ್ಸು, ಕಾಂತಿ, ಕಫಹರ; ಇದು ಬಲಿಷ್ಟನಿಗೆ ಅಗ್ನಿವೃದ್ಧಿಯನ್ನು ಮಾಡುತ್ತೆ.

೧೦೨. ಗಾಡಿಯ ಮೇಲೆ ಹೋಗುವದರ ಗುಣ.—ಚಕ್ರಗಳ ಗತಿವೈಷಮ್ಯದಿಂದ ಶರೀರಕ್ಕೆ ವಾತೋತ್ಪಾತಗಳು ಉಂಟಾಗುತ್ತದೆಯಾಗಿ ಪಿತ್ತ ವಾತ ವೃದ್ಧಿಯಾಗುತ್ತೆ. ಇದಕ್ಕೆ ಆಹಾರ ಮತ್ತು ನಿದ್ರೆ ಮಾಡಬೇಕು.

೧೦೩. ನಡಿಯೋಣದರ ಗುಣ.—ಭೂಗಟ್ಟನೆಯಿಂದ ಆ ಭೂರಸವು ಒಳಗೆ ಪ್ರವೇಶಿಸಿ ಜಠರಾಗ್ನಿಯನ್ನು ಹೆಚ್ಚಿಸುತ್ತೆಯಾಗಿ ಭೋಜನವನ್ನು ಕೊಡಿದರೆ ಅತ್ಯಗ್ನಿ ಶಮನವಾಗುತ್ತೆ.

೧೦೪. ವೇಗವಿಶಿಷ್ಟವಾದ ವಾಹನದ ಗುಣ.—ಇದರ ವೇಗದಿಂದ ಜಲಮಲಗಳು ಬದ್ಧಿಸುತ್ತೆಯಾಗಿ ಇದರ ಶಾಂತಿಗೆ ಸ್ನಾನ ಮಾಡಬೇಕು.

೧೦೫. ಬಿಸಲಿನ ದೋಷ, ನೆರಳಿನ ಗುಣ.—ಬಿಸಲಿನಿಂದ ಮೂರ್ಛಾ, ರಕ್ತಪಿತ್ತ, ತೃಷ್ಣಾ, ಆಲಸ್ಯ, ಶ್ರಮ, ದಾಹ, ವೈವರ್ಣ್ಯಗಳು ಉಂಟಾಗುತ್ತವೆ. ಇವುಗಳನ್ನೆಲ್ಲಾ ನೆರಳು ಪರಿಹಾರ ಮಾಡುತ್ತೆ.

೧೦೬. ಮಳೆಗುಣ.—ಇದರಿಂದ ವೀರ್ಯವೃದ್ಧಿ, ತಂಪು, ಬಲಕಾರಿ, ಆಲಸ್ಯವನ್ನುಂಟುಮಾಡುತ್ತೆ. ಅತಿವೃಷ್ಟಿಯು ಭಯ, ಮೋಹ, ಮೈಭಾರ, ಕಫವಾತಗಳನ್ನುಂಟುಮಾಡುತ್ತೆ.

೧೦೭. ಅಗ್ನಿಗುಣ.—ವಾತ, ಕಫ, ನಡುಕಗಳನ್ನು ನಾಶಮಾಡುತ್ತೆ. ಆಮಾದಿಗಳನ್ನು ಶಮನ ಮಾಡಿ ರಕ್ತಪಿತ್ತವನ್ನು ಪ್ರಕೋಪಿಸುತ್ತೆ.

೧೦೮. ಬತ್ತಿ ಶೇದಿದರೆ ಆಗುವ ದುರ್ಗುಣ.—ಶ್ಲೇಷ್ಮವೃದ್ಧಿಕಾರಿ, ನೇತ್ರಗಳಿಗೆ ಬಾಧಕ, ತಲೆಭಾರವನ್ನುಂಟುಮಾಡಿ ವಾತಪಿತ್ತವನ್ನು ಪ್ರಕೋಪಿಸುತ್ತೆ.

೧೦೯. ಸರಿಯಾಗಿ ಕೊತುಕೊಂಡು ಮಾಡುವ ಕೆಲಸಗಳು.—ಶೀನು ಬರುವಕಾಲದಲ್ಲೂ, ವಾಂತಿಮಾಡುವಾಗಲೂ, ಬಿಕ್ಕುವಕಾಲದಲ್ಲೂ, ತೇಗುವಕಾಲದಲ್ಲೂ, ಆಕಳಿಸುವಕಾಲದಲ್ಲೂ ಸಮನಾಗಿ ಕೊತುಕೊಂಡು ಬಿಡಬೇಕು. ಇಲ್ಲವಾದರೆ ನರಗಳು ವ್ಯತ್ಯಾಸವಾಗುತ್ತೆ.

೧೧೦. ಒಳ್ಳೇನಡತೆ.—ಯಾವ ಜನಗಳಾದಾಗ್ಯೂ ಸಜ್ಜನ ದುರ್ಜನರ ಸ್ನೇಹ ಇದ್ದಾಗ್ಯೂ ಸಜ್ಜನರಲ್ಲೇ ಮನಸ್ಸು ಇಡಬೇಕು. ದೇವರನ್ನು, ಗುರುಜನರನ್ನು, ವೃದ್ಧ, ವೈದ್ಯ, ಧೊರೆ, ಅತಿಥಿ, ಅಭ್ಯಾಗತರುಗಳನ್ನು

ಸೇವಿಸಬೇಕು. ತಮ್ಮ ಮನೆಗೆ ಬಂದ ಅತಿಥಿಅಭ್ಯಾಗತರನ್ನು ಆಹಾರಾದಿಗಳನ್ನು ಕೊಡದೆ ವ್ಯರ್ಥವಾಗಿ ಕಳುಹಿಸಬಾರದು. ಯಾರಿಗೂ ಅವಮಾನ ಮಾಡಬಾರದು. ಸಕಲ ಜನರಲ್ಲಿ ವಿನಯ ಸಂಪನ್ನನಾಗಿರಬೇಕು. ವಿಶ್ವಾಸವುಳ್ಳವನಾಗಿ ಗುರು ಸನ್ನಿಧಿಯಲ್ಲಿರಬೇಕು. ಇನ್ನೊಬ್ಬ ತನಿಗೆ ಅಪಕಾರವಮಾಡಿದಾಗ್ಯೂ ತಾನು ಅವನಿಗೆ ಉಪಕಾರ ಚಿಂತೆಯನ್ನೇ ಮಾಡಬೇಕು. ತನ್ನಂತೆ ಸರ್ವಭೂತಗಳನ್ನು ಕಾಣಬೇಕು. ಶತ್ರುವಿಗೆ ದೂರದಲ್ಲಿರಬೇಕು. ತನಿಗೆ ಶತ್ರುವಿನಿಂದ ಆದ ಅವಮಾನವನ್ನೇ ಆಗಲಿ ತಾನು ಅವನಿಗೆ ಮಾಡಿದ ಅವಮಾನವನ್ನೇ ಆಗಲಿ ಇನ್ನೊಬ್ಬರ ಸಂಗಡ ಹೇಳಬಾರದು. ನೀರಿನಲ್ಲಿ ತನ್ನ ನೆರಳನ್ನು ನೋಡಬಾರದು. ನೀರಿನಲ್ಲಿ ಬೆತ್ತಲೆ ಇಳಿಯಬಾರದು. ದುಷ್ಟಪ್ರಾಣಿಯ ಹತ್ತರ ಸೇರಬಾರದು. ಸಮಯದಲ್ಲಿ ಹಿತವನ್ನು, ಸತ್ಯವನ್ನು ಹೇಳತಕ್ಕವನ ಸಂಗಡ ಸೌಮ್ಯವಾಗಿ ಮಾತಾಡಬೇಕು. ಬಳ್ಳೇಸಮಯದಲ್ಲಿ ಸೀ, ಜಿಡ್ಡು ಪದಾರ್ಥಗಳನ್ನು ತಿನ್ನಬೇಕು. ಮತ್ತು ರಾತ್ರಿ ಮೊಸರನ್ನು ವೂಟ ಮಾಡಬಾರದು. ಮುಖ್ಯವಾಗಿ ಮಧುರಪದಾರ್ಥಗಳನ್ನೇ ತಿನ್ನಬೇಕು. ಜನಗಳ ಇಂಗಿತವನ್ನು ತಿಳಿದು ಅವರಿಗೆ ಸಂತೋಷವಾಗುವಂತೆ ನಡದುಕೊಳ್ಳಬೇಕು. ತಾನು ಒಬ್ಬನೇ ಸುಖಿಯಾಗಿರಬೇಕೆಂದು ಯೋಚಿಸಬಾರದು. ಸದಾ ಸಂದೇಹ ಮನಸ್ಸಿನವನಾಗಿರಬಾರದು. ಉದ್ಯೋಗವಿಲ್ಲದೆ ಸುಮ್ಮನೆ ಇರಬಾರದು. ಕೆಲಸವನ್ನು ಮುಖ್ಯವಾಗಿ ತಿಳಿಯಬೇಕೇಹೊರ್ತು ಅದರಿಂದ ಫಲದಲ್ಲಿ ದೃಷ್ಟಿಯಿಡಬಾರದು. ಮನಸ್ಸು ಹೋದಂತೆ ಬಿಡಬಾರದು. ಜಲ ಮಲಗಳನ್ನು ಬಂದ ವ್ಯಾಳೆ ಬಿಟ್ಟು ಬಿಡಬೇಕು. ಇಂದ್ರಿಯಗಳನ್ನು ಕಟ್ಟಲೂ ಬಾರದು. ಅದರಂತೆ ಬಿಡಲೂಬಾರದು. ಮಳೆಕಾಲದಲ್ಲೂ ಬಿಸಲುಕಾಲದಲ್ಲೂ ಛತ್ರಿ ಹಿಡಿದುಕೊಳ್ಳಬೇಕು. ರಾತ್ರಿಯಲ್ಲಿಯೂ ಅರಣ್ಯದಲ್ಲೂ ಒಬ್ಬನೇ ಸಂಚಾರ ಮಾಡಿದಾಗ್ಯೂ ಕಾಲಲ್ಲಿ ಜೋಡು ಹಾಕಿಕೊಂಡು ಕೈಯ್ಯಲ್ಲಿ ದೊಣ್ಣೆ ಹಿಡಿದುಕೊಂಡು ತಿರಗಬೇಕು. ದಾರಿಯಲ್ಲಿ ನಡಿಯುವಾಗ ನಾಲ್ಕು ಮೊಳದವ್ರೊಳಗೆ ದೃಷ್ಟಿ ವಿಶೇಷವಾಗಿ ಇಟ್ಟುಕೊಂಡು ನಡಿಯಬೇಕು. ನೀರಿನಲ್ಲಿ ಬಹಳವಾಗಿ ಯೀಜಬಾರದು. ವೂರ ದಾಟಬಾರದು. ಅನುಮಾನವಾಗಿರುವ ತೆಪ್ಪ, ಮರ ಇವುಗಳಮೇಲೂ, ತುಂಟಕುದುರೇಮೇಲೂ ಆನೆ ಇವುಗಳಮೇಲೆ ಹತ್ತಬಾರದು. ಸಭೆಯಲ್ಲಿ ಶೀನುಬೇಕಾದರೂ, ಕೆಮ್ಮಬೇಕಾದರೂ, ನಗಬೇಕಾದರೂ, ಆಕಳಿಸಬೇಕಾದರೂ ಬಾಯಿಮೇಲೆ ವಸ್ತ್ರಮುಚ್ಚಿಕೊಂಡು ಬಿಡಬೇಕು.

ಸದಾ ಮೂಗಿನಲ್ಲಿ ಬೆರಳು ಹಾಕಿ ತಿಕ್ಕಬಾರದು. ಭಯಂಕರವಾದ ಸ್ಥಳದಲ್ಲಿ ಕೂತುಕೊಳ್ಳ ಬಾರದು. ಮೊಳಕಾಲುಗಳನ್ನು ಬಹಳ ಹೊತ್ತು ಯತ್ತಿಕೊಂಡಿರಬಾರದು. ಕಸವನ್ನು ಮೇಲೆ ಹಾಕಬಾರದು. ಉಗುರುಗಳಿಂದ ಕಡ್ಡಿಯನ್ನು ಸೀಳಬಾರದು. ಕೆಟ್ಟ ಪದಾರ್ಥಗಳನ್ನು ಮುಟ್ಟಲೇಬಾರದು. ಬಂದುವೇಳೆ ಮುಟ್ಟಿದರೆ ಕೈಗಳನ್ನು ತೊಳದುಕೊಳ್ಳಬೇಕು. ಸೂರ್ಯನನ್ನು ಗ್ರಹಣಕಾಲದಲ್ಲೂ ಉದಯಾಸ್ತಕಾಲಗಳಲ್ಲೂ ಬಿಂಬವನ್ನು ನೋಡಬಾರದು. ನಿರಂತರದಲ್ಲೂ ಅತಿಜ್ವಾಲೆಯನ್ನೂ ಸೂಕ್ಷ್ಮಪದಾರ್ಥಗಳನ್ನೂ ಕೆಟ್ಟ ಅಮೇಧ್ಯಾದಿ ಅಮಂಗಳ ಪದಾರ್ಥಗಳನ್ನೂ ಅಸ್ಪಷ್ಟವಾದ್ದನ್ನೂ ಸಹ ದೃಷ್ಟಿಸಿ ನೋಡಬಾರದು. ಕಾಮನ ಬಿಲ್ಲನ್ನು ಯಾವಾಗಲೂ ಇನ್ನೊಬ್ಬನಿಗೆ ತೋರಿಸಬಾರದು. ಬಲಿಷ್ಠನ ಸಂಗಡ ಕಲಹ ಗುದ್ದಾಟಗಳನ್ನು ಮಾಡಬಾರದು. ಕೈಯಿಂದಲೇ ಕೂದಲನ್ನು ಬಹಳವಾಗಿ ಝಾಡಿಸಕೂಡದು. ಝಾಡಿಸಿದರೆ ಹೆಕ್ಕತ್ತು ನೋವಾಗುತ್ತೆ. ತನ್ನ ಕೈಯಿಂದ ತಾನು ಮೈಗುದ್ದಿಕೊಳ್ಳಬಾರದು. ದಂಪತಿಗಳ ಮಧ್ಯದಲ್ಲೂ ದೇವರ ಪೂಜೆ ಮಾಡುವವರ ಮಧ್ಯದಲ್ಲೂ ತಿರಗಬಾರದು. ಶತ್ರುವಿನ ಅನ್ನವನ್ನೂ ಸೂಳೆ ಅನ್ನವನ್ನೂ ತಿನ್ನಬಾರದು. ಯಾವನಿಗೂ ಹೊಣೆಯಾಗಬಾರದು. ಯಾವಾಗಲೂ ಸುಳ್ಳು ಆಡಬಾರದು. ಜೂಜಿಗೆ ದೂರವಾಗಿರಬೇಕು. ಸ್ತ್ರೀಯನ್ನು ನಂಬಬಾರದು. ಅವರಿಗೆ ಸ್ವಾತಂತ್ರ್ಯವನ್ನು ಕೊಡಬಾರದು. ಮತ್ತು ಅವರನ್ನು ಯೌವನದಲ್ಲಿ ಯೆಚ್ಚರದಿಂದ ಕಾಯಬೇಕು. ಅವರನ್ನು ಬೇರೆ ಹಾಸಿಗೆಯಲ್ಲಿ ಮಲಗಗೊಡಿಸಬಾರದು. ಬಹಳ ಸ್ತ್ರೀಜನರು ಇರುವ ಸ್ಥಳದಲ್ಲಿ ಗಂಡಸು ಒಬ್ಬನೇ ಇರಕೂಡದು. ದೇವಸ್ಥಾನದಲ್ಲೂ ಮರದ ಬುಡದಲ್ಲೂ ವಬ್ಬನೇ ಮಲಗಬಾರದು. ಕಳ್ಳತನ, ಹಾದರ, ಚಾಡಿ, ಸಂಹಾರ, ದುರ್ವಾಕ್ಯ, ಒಬ್ಬನಲ್ಲಿ ಸುಳ್ಳು ಆರೋಪಿಸುವದು, ಜನಹಿಂಸೆ, ಇಂಥಾ ಪಾಪಕರ್ಮಗಳನ್ನು ಮನೋವಾಕ್ಕಾಯಕರ್ಮಗಳಿಂದ ಬಿಡಬೇಕು. ಬಡವರಲ್ಲಿಯೂ, ರೋಗಿಷ್ಟರಲ್ಲಿಯೂ, ದುಃಖಪಡುವವರಲ್ಲಿಯೂ ದಯವಿಡಬೇಕು. ಯಾಚಕಮಾಡುವವನಿಗೆ ಕೆಟ್ಟಮಾತಾಡದೆ ತನ್ನ ಶಕ್ತಿಯನ್ನರಿತು ಸಹಾಯ ಮಾಡಬೇಕು. ತನ್ನ ಪತ್ನಿಯಲ್ಲೇ ರಮಿಸಬೇಕು. ನಿರರ್ಥಕವಾಗಿ ಜನರ ಸಮೂಹದಲ್ಲಿ ಸೇರಬಾರದು. ಶುಚಿರ್ಭೂತನಾಗಿರಬೇಕು. ಶುಭ್ರವಸ್ತ್ರಗಳನ್ನು ಧರಿಸಬೇಕು. ಸುಗಂಧಪದಾರ್ಥಗಳನ್ನು ಸಮೀಪದಲ್ಲಿಡಬೇಕು. ರತ್ನಾಲಂಕೃತನಾಗಿರಬೇಕು. ತಲೇಮೇಲೆ ಭಾರವನ್ನು ಹೊರಕೂಡದು. ರಾತ್ರಿ

ಯಲ್ಲಿ ಕಾಮಾತುರನಾಗಿ ಒಬ್ಬನೇ ಸಂಚರಿಸಕೂಡದು. ಮೇಲೆ ಹೇಳಲ್ಪಟ್ಟ ಸಕಲಋತುಗಳಿಂದಲೂ ಸೌಖ್ಯವನ್ನುಂಟುಮಾಡಿಕೊಳ್ಳುತ್ತಿರಬೇಕು. ಈ ಹಿಂದೆ ಹೇಳಿದ ಪ್ರಕಾರ ಮನುಷ್ಯನು ದಿನಚರ್ಯದಲ್ಲು ನಡದು ಮುಂದೆ ಹೇಳುವ ಪ್ರಕಾರ ರಾತ್ರೀಚರ್ಯವನ್ನು ನಡಿಯತಕ್ಕದ್ದು.

ರಾತ್ರಿಚರ್ಯ.

೧೧೧. ಸಾಯಂಕಾಲದಲ್ಲಿ ಅಹಾರ, ನಿದ್ರೆ, ಮೈಥುನ, ಪಾಠ, ಮಾರ್ಗಸಂಚಾರಗಳನ್ನು ಮಾಡಕೂಡದು. ಆಹಾರದಿಂದ ವ್ಯಾಧಿ, ಮೈಥುನದದೆಶೆಯಿಂದಲೂ ಸಹ ವ್ಯಾಧಿ, ಗರ್ಭವಿಕಾರ; ನಿದ್ರೆಯಿಂದ ದಾರಿದ್ರ್ಯ, ಪಾಠದಿಂದ ಆಯುಷ್ಯಹಾನಿ, ಮಾರ್ಗಸಂಚಾರದಿಂದ ಭಯ ಸಹ ವುಂಟಾಗುತ್ತವೆ.

೧೧೨. ಬೆಳದಿಂಗಳ ಗುಣ.—ಇದರಿಂದ ಶೀತಗುಣ, ಕಾಮವೃದ್ಧಿ ; ತೃಷಾ, ದಾಹ, ಪಿತ್ತ ಇವುಗಳು ಶಮನವಾಗುತ್ತೆ.

೧೧೩. ಮಂಜಿನ ಗುಣ.—ಇದರಿಂದ ವಾಯು ಕಫಗಳು ವುಂಟಾಗುತ್ತವೆ.

೧೧೪. ಕತ್ತಲೆ ಗುಣ.—ಇದರಿಂದಭಯ, ಮೋಹ, ಭ್ರಾಂತಿ ಕಫ, ಕಾಮ, ಶ್ರಮ ಇವುಗಳನ್ನುಂಟುಮಾಡಿ ಪಿತ್ತವಂ ನಾಶಮಾಡುತ್ತೆ.

೧೧೫. ರಾತ್ರಿಭೋಜನ ಕ್ರಮ.—ರಾತ್ರೀಕಾಲದಲ್ಲಿ ಒಂದು ಝಾಮದೊಳಗಾಗಿ ಸ್ವಲ್ಪಕಮ್ಮಿಯಾಗಿ ಗುರುಪದಾರ್ಥಗಳನ್ನು ಬಿಟ್ಟು ವೂಟವಂ ಮಾಡಬೇಕು.

೧೧೬. ಸ್ತ್ರೀಸಂಭೋಗದ ಗುಣ.—ಸ್ತ್ರೀಸಂಭೋಗದಿಂದ ಲಾಘವವುಂಟಾಗುತ್ತೆ; ದೀಪನೆಯಾಗುತ್ತೆ; ಜಡತ್ವ, ಶ್ಲೇಷ್ಮಸಹ ಪರಿಹರವಾಗುತ್ತವೆ; ಮೋಹ, ಮೇದಸ್ಸು ಹೆಚ್ಚಾಗಿ ಶರೀರ ಕೃಶವಾಗುತ್ತೆ.

೧೧೭. ಸ್ತ್ರೀದಶಾ.—ಹದಿನಾರು ವರುಷದವರಿಗೂ ಸ್ತ್ರೀಯು ಬಾಲೆ ಅನ್ನಿಸಿಕೊಳ್ಳುತ್ತಾಳೆ. ಮುವತ್ತೆರಡು ವರುಷದವರಿಗೂ ತರುಣಿ ಅನ್ನಿಸಿಕೊಳ್ಳುತ್ತಾಳೆ. ಐವತ್ತು ವರುಷಗಳವರಿಗೂ ಅಧಿರೂಢಾ ಅನ್ನಿಸಿಕೊಳ್ಳುತ್ತಾಳೆ. ಅನಂತರ ವೃದ್ಧಳು ಅನ್ನಿಸಿಕೊಳ್ಳುತ್ತಾಳೆ. ಈ ವಾರ್ಧಿಕ್ಯದಲ್ಲಿ ಅವರಲ್ಲಿ ಸುರತ ಮಾಡಕೂಡದು.

೧೧೮. ಸಂಭೋಗಕ್ಕೆ ಯಾವ ಸ್ತ್ರೀ ಅಗಬೇಕಂದರೆ.—ಗ್ರೀಷ್ಮ ಶರತ್ಕಾಲಗಳಲ್ಲಿ ಬಾಲಸ್ತ್ರೀ ಸಂಭೋಗವು, ಶೀತಕಾಲದಲ್ಲಿ ತರುಣಿ, ಮಳೆಕಾಲ, ವಸಂತಕಾಲಗಳಲ್ಲಿ ಪ್ರೌಢ ಸ್ತ್ರೀ, ಈಪ್ರಕಾರ ಸಂಭೋಗಮಾಡಿದರೆ ಒಳ್ಳೇದಾಗುತ್ತೆ. ಮತ್ತು ಪ್ರತಿದಿನದಲ್ಲಿಯೂ ಬಾಲಸ್ತ್ರೀ ಸಂಭೋಗ ಮಾಡಿದರೆ ಬಲವೃದ್ಧಿಯಾಗುತ್ತದೆ. ತರುಣಿ ಬಲವನ್ನು ತಗ್ಗಿಸುತ್ತಾಳೆ. ಪ್ರೌಢಸ್ತ್ರೀ ವಾರ್ಧಿಕ್ಯವನ್ನುಂಟುಮಾಡುತ್ತಾಳೆ. ಇದು ಅನುಕೂಲವಿರುವವರಿಗೇನೇ ಹೊರ್ತು ಇತರರಿಗಲ್ಲ.

೧೧೯. ಅನ್ನ ಮತ್ತು ಸ್ತ್ರೀಸಂಭೋಗ ಯಾವದು ಒಳ್ಳೇದಂದರೆ.—ಹೊಸದಾದ ಮಾಂಸ, ಹಾಲು ಅನ್ನ, ಬಾಲಸ್ತ್ರೀ, ಘೃತ, ಬಿಸಿನೀರು, ಅನ್ನ, ಈ ಆರು ಪ್ರಾಣಕ್ಕೆ ಹಿತಕರ ಮತ್ತು ಸುಖವನ್ನುಂಟುಮಾಡುತ್ತೆ.

೧೨೦. ಯಾವಯಾವ ಸ್ತ್ರೀಸಂಭೋಗವು ಮತ್ತು ಅನ್ನಾದಿಗಳು ಕೆಟ್ಟವೆಂದರೆ.—ಕೆಟ್ಟಮಾಂಸ, ವೃದ್ಧಸ್ತ್ರೀ, ಎಳೆಬಿಸಲು ಕಾಯೋಣ, ಮೊಸರನ್ನ ತಿನ್ನೋಣ, ಪ್ರಾತಃಕಾಲದಲ್ಲಿ ನಿದ್ರೆಯು, ಸಂಭೋಗ, ಇವುಗಳು ಕೆಟ್ಟವು.

೧೨೧. ಸ್ತ್ರೀಸಂಭೋಗದಿಂದ ಉಂಟಾಗುವ ಗುಣಾವಗುಣಂಗಳು.—ಮುದುಕನಾಗಿದ್ದಾಗ್ಯೂ ಬಾಲಸ್ತ್ರೀಸಂಭೋಗದಿಂದ ಯೌವ್ವನಸ್ಥನಾಗುತ್ತಾನೆ. ಯೌವ್ವನಸ್ಥನಾದಾಗ್ಯೂ ವೃದ್ಧ ಸ್ತ್ರೀ ಸಹವಾಸದಿಂದ ವೃದ್ಧನಾಗುತ್ತಾನೆ. ಮತ್ತು ಸ್ತ್ರೀ ಸಹವಾಸದಿಂದ ಪುರುಷನಿಗೆ ಆಯುಷ್ಯ, ತಾರುಣ್ಯ, ಕಾಂತಿ, ಬಲ, ಪುಷ್ಟಿ, ಸ್ಥಿರತ್ವ ಸಹ ಉಂಟಾಗುತ್ತವೆ.

೧೨೨. ಸಂಭೋಗಕ್ಕೆ ಕಾಲ.—ಇಚ್ಛೆವುಂಟಾದ ಸಂಭೋಗ ಮಾಡಬೇಕು. ಹಿಮಂತ ಋತುವಿನಲ್ಲಿ ವಾಜೀಕರಣಮುಂತಾದ್ದನ್ನು ಮಾಡಿಕೊಂಡು ಸಂಭೋಗ ಮಾಡಬೇಕು. ವಸಂತ ಶರತ್ಕಾಲಗಳಲ್ಲಿ ಮೂರುದಿವಸಕ್ಕೆ ಒಂದುಭಾರಿ ಮಾಡಬೇಕು. ಮಳೆಗಾಲದಲ್ಲೂ, ಬೇಸಿಗೆಕಾಲದಲ್ಲೂ ಸಹ ೧೫ ದಿವಸಗಳಿಗೆ ಒಂದುಭಾರಿ ಮಾಡಬೇಕು. ಶಿಶಿರ ಋತುವಿನಲ್ಲಿ ಯಥೇಷ್ಟವಾಗಿ ಮಾಡಬೇಕು.

೧೨೩. ಕಾಮಸ್ಥಾನ.—ಶೀತಕಾಲದಲ್ಲಿ ರಾತ್ರಿಯು, ಗ್ರೀಷ್ಮಋತುವಿನಲ್ಲಿ ಹಗಲು, ವಸಂತದಲ್ಲಿ ಹಗಲೂ ರಾತ್ರಿ, ವರ್ಷಾಕಾಲದಲ್ಲಿ ಮೇಘಗರ್ಜನೆ

ಸಂಗಡ, ಶರತ್ಕಾಲಗಳಲ್ಲಿ ಕೊಳ ಕಟ್ಟೆಗಳ ಬಳಿಯಲ್ಲಿ ಕಾಮಸ್ಥಾನವಿರುತ್ತೆ.

೧೭೪. ಮೈಥುನಕ್ಕೆ ನಿಷಿದ್ಧ ಕಾಲ.—ಪ್ರಾತಃಕಾಲ, ಸಾಯಂಕಾಲ, ಮಧ್ಯಾನ್ಹ, ಅರ್ಧರಾತ್ರಿ, ಪರ್ವಕಾಲಗಳು, ಅಮಾವಾಸ್ಯೆ, ಪೌರ್ಣಿಮಾ ಮತ್ತು ಪ್ರಾತಃಕಾಲ ಎಂಟುಘಂಟೆಯಲ್ಲೂ ಸಹ ಸಂಭೋಗವು ನಿಷೇಧವು.

೧೭೫. ಸ್ತ್ರೀ ಸಂಭೋಗ ಕ್ರಮ.—ರಮ್ಯಪ್ರದೇಶದಲ್ಲೂ, ಸ್ತ್ರೀಗಾನ ಕೇಳುತ್ತಾ ಸುಗಂಧಯುಕ್ತವಾದ ಸ್ಥಳದಲ್ಲೂ, ತಂಗಾಳಿ ಬೀಸುವ ಜಾಗದಲ್ಲೂ ಸಂಭೋಗ ಮಾಡಬೇಕು.

೧೭೬. ಸಂಭೋಗಕ್ಕೆ ಅಯೋಗ್ಯಸ್ಥಳ.—ಹಿರಿಯರು ಇರತಕ್ಕಸ್ಥಳ, ಮನಸ್ಸಿಗೆ ನಾಚಿಕೆಹುಟ್ಟುವಸ್ಥಳ, ಆಳುಗಳು ಮುಂತಾದವರ ಶಬ್ದವು ಕಿವಿಗೆ ಕೇಳುವಸ್ಥಳ, ದುರ್ಗಂಧಯುಕ್ತವಾದ ಸ್ಥಳ, ಈ ಸ್ಥಳಗಳಲ್ಲಿ ಸಂಭೋಗ ಕೂಡದು.

೧೭೭. ಸಂಭೋಗದ ಅಲಂಕಾರ.—ಸ್ನಾನಮಾಡಿ ಗಂಧ ಹಚ್ಚಿಕೊಂಡು ಪರಿಮಳಯುಕ್ತವಾದ ಹೂವುಗಳನ್ನು ಧರಿಸಿಕೊಂಡು ವೀರ್ಯವೃದ್ಧಿಕರಪದಾರ್ಥಗಳನ್ನು ಭುಂಜಿಸಿ, ಶುಭ್ರವಸ್ತ್ರಗಳನ್ನು ಧರಿಸಿಕೊಂಡು ತನ್ನ ಸ್ತ್ರೀಯೊಡನೆ ಪುತ್ರೋತ್ಪಾದನೆಯಾಗಬೇಕೆಂಬ ಸಂಕಲ್ಪದಿಂದ ರಮಿಸಬೇಕು.

೧೭೮. ಸಂಭೋಗಕ್ಕೆ ಅಯೋಗ್ಯ ಪುರುಷನು.—ಅತಿಭೋಜನಮಾಡಿದವ, ಹಸಿವುಳ್ಳವ, ಧೈರ್ಯವಿಲ್ಲದವ, ಶರೀರಬಾಧೆಯುಳ್ಳವ, ಬಾಯಾರಿಕೆಯುಳ್ಳವ, ಹುಡುಗ, ಮುದುಕ, ಕಣ್ಣು ಕುಕ್ಷಿ ಶಿರಸ್ಸು ಇವುಗಳ ರೋಗೀ, ಜ್ವರ ವ್ರಣ ರೋಗಗಳುಳ್ಳವನು ಸಹ ಮೈಥುನವನ್ನು ಮಾಡಕೂಡದು.

೧೭೯. ಇಂಥಾವರು ಮಾಡಿದರೆ ಉಂಟಾಗುವ ದೋಷ.—ಹಸಿವುಳ್ಳವ, ಕ್ಷುಬ್ಧಚಿತ್ತನಾದವ, ಮಧ್ಯಾನ್ಹದಲ್ಲಿ ಬಾಯಾರಿಕೆವುಳ್ಳವ, ದುರ್ಬಲನಾದವ, ಕ್ಷಯರೋಗದವ ಇವರುಗಳು ಮಾಡಿದರೆ ವೀರ್ಯನಾಶವು, ವಾಯುಪ್ರಕೋಪವು ಸಹ ಆಗುತ್ತೆ; ಮತ್ತು ರೋಗಿಯಾದವ ಸಂಭೋಗಮಾಡಿದರೆ ಪ್ಲೀಹ, ಮೂರ್ಛೆ, ಮರಣಗಳು ಸಹ ಸಂಭವಿಸುತ್ತೆ.

೧೮೦. ಸ್ತ್ರೀ ಗುಣ.—ರೂಪವತಿಯಾದ, ಸತ್ಕುಲಪ್ರಸೂತಳಾದ, ತನ್ನಮನಸ್ಸಿನಂತೆ ಮನಸ್ಸುಳ್ಳ, ಸಂತೋಷಯುಕ್ತಳಾದ, ಅಲಂಕೃತಳಾದ, ಸ್ವಸ್ತ್ರೀ

ಯನ್ನು, ವಾಜೀಕರಣವುಂಟಾದ್ದು ದೃಢವಾಗುವಂತೆ ಮಾಡಿ, ಯುಕ್ತಿ ಚಮತ್ಕಾರಗಳಿಂದ ರಮಿಸಬೇಕು.

೧೩೧. ಎಂಥಾ ಸ್ತ್ರೀ ಸಹವಾಸ ಮಾಡಕೂಡದೆಂದರೆ.—ಮುಟ್ಟಾದವಳು, ಇಚ್ಛೆಯಿಲ್ಲದೆ ಇರುವಳು, ಕಲ್ಮಷಯುಕ್ತಳಾದವಳು, ಪ್ರೀತಿ ಇಲ್ಲದವಳು, ಜಾತಿಶ್ರೇಷ್ಠಳು, ವಯೋವೃದ್ಧಳು, ರೋಗಿಷ್ಟಳು, ಅಂಗಹೀನಳು, ದ್ವೇಷಿ, ಯೋನಿರೋಗದವಳು, ಸ್ವಂತ ಗೋತ್ರದವಳು, ಗುರುಪತ್ನೀ, ವಿರಕ್ತಳು, ಆರುತಿಂಗಳಗರ್ಭಿಣೀ, ಇವರುಗಳಲ್ಲಿ ಸಂಭೋಗ ಮಾಡಕೂಡದು.

೧೩೨. ಇದರಿಂದ ಉಂಟಾಗತಕ್ಕ ರೋಗ.—ರಜಸ್ವಲಾಗಮನದಿಂದ ಆಯುಸ್ಸು, ರೇತಸ್ಸು, ತೇಜಸ್ಸು ಸಹ ಹಾನಿ. ವಿರಕ್ತಳು, ಗುರುಪತ್ನಿ, ಸ್ವಗೋತ್ರದವಳು, ವಯೋವೃದ್ಧಳು, ಜಾತಿಶ್ರೇಷ್ಠಳು ಇವರುಗಳಲ್ಲಿ ಸಂಭೋಗ ಮಾಡಿದರೆ ಆಯುಸ್ಸು ಕ್ಷೀಣವಾಗಿ ಮರಣ ಉಂಟಾಗುತ್ತೆ. ಗರ್ಭಿಣೀಯಾದವಳ ಸಂಭೋಗದಿಂದ ಗರ್ಭಕ್ಕೆ ಬಾಧಕ ಉಂಟಾಗುತ್ತೆ. ರೋಗಿಷ್ಟಳ ಸಂಭೋಗ ಮಾಡಿದರೆ ಬಲಕ್ಷಯವಾಗುತ್ತೆ. ಅಂಗಹೀನಳು, ಕಲ್ಮಷದವಳು, ಬಂಜೆ ಇವರುಗಳ ಸಂಭೋಗದಿಂದ ರೇತೋಹಾನಿ ಮತ್ತು ಗ್ಲಾನಿ ಸಹ ಉಂಟಾಗುತ್ತೆ.

೧೩೩. ಪುಂಸವನ ಆದನಂತರ ಸ್ತ್ರೀರುಗಳು ಬಿಡತಕ್ಕದ್ದು.—ಗರ್ಭಿಣೀ ಆದ ಎರಡು ತಿಂಗಳು ಮೊದಲುಮಾಡಿಕೊಂಡು ನದೀತೀರ, ದೇವಖಾತ, ಗಂಡನ ಹಾಸಿಗೇ ಸಹ ಬಿಡಬೇಕು. ಮಗುಸತ್ತವಳೂನೂ ಪ್ರಯತ್ನಪೂರ್ವಕ ಮಾಂಸಭೋಜನ ಸಹ ಬಿಡಬೇಕು.

೧೩೪. ಸಂಭೋಗದಿಂದ ಉಂಟಾಗುವ ದುರ್ಗುಣ.—ಪ್ರಾತಃಕಾಲದಲ್ಲೂ, ಸಾಯಂಕಾಲದಲ್ಲೂ ಸಂಭೋಗ ಮಾಡಿದರೆ ವಾತಪಿತ್ತ ಪ್ರಕೋಪ, ಚತುಷ್ಪಾದದ ಹೆಣ್ಣು ಮೃಗಗಳ ಸಹವಾಸದಿಂದಲೂ ಕೆಟ್ಟ ಯೋನಿವುಳ್ಳವರ ಸಹವಾಸದಿಂದಲೂ ವಾಯುಪ್ರಕೋಪ, ಧಾತುನಾಶ, ಸುಖಕ್ಷಯಗಳಾಗುತ್ತನೆ.

೧೩೫. ಧಾತುನಿರೋಧದಿಂದ ಉಂಟಾಗುವ ದುರ್ಗುಣ.—ಮಲಮೂತ್ರನಿರೋಧ, ಊರ್ಧ್ವರೇತಸ್ಸಿನ ಬಲದಿಂದ ರೇತೋನಿರೋಧ ; ಹೀಗೆ ಆದ್ದೇ ಆದರೆ ಅದರಿಂದ ಶುಕ್ರಾಶ್ಮರೀರೋಗೋತ್ಪತ್ತಿಯಾಗುತ್ತೆ ; ಇಹಪರಸಾಧನೆ ನಷ್ಟ. ಶುಕ್ಲವೇಗ ಉಂಟಾದಾಗ ನಿರೋಧಮಾಡಕೂಡದು.

೧೩೬. ಮೈಥುನಕ್ಕೆ ಹಿತಕರ ದ್ರವ್ಯಗಳು.—ಸಂಭೋಗ ಮಾಡಿದಮೇಲೆ ಸ್ನಾನ, ಸಕ್ಕರೆಮಿಶ್ರವಾದ ಹಾಲು, ಕಬ್ಬಿನ ಹಾಲು ಬೆರದ ಪದಾರ್ಥ, ತಂಗಾಳಿ, ಮಾಂಸರಸ, ನಿದ್ರೆ, ಇವುಗಳೆಲ್ಲಾ ಒಳ್ಳೇದು.

೧೩೭. ಅತಿಮೈಥುನದಿಂದ ಉಂಟಾಗುವ ದೋಷಗಳು.—ಶೂಲೆ, ಕಾಸ, ಜ್ವರ, ಶ್ವಾಸ, ಕಾರ್ಶ್ಯ, ಪಾಂಡು, ಕ್ಷಯ ಇತ್ಯಾದಿ ರೋಗಗಳು ಉಂಟಾಗುತ್ತವೆ.

೧೩೮. ಜಾಗರಣೆ ಗುಣ.—ಇದರಿಂದ ಉಷ್ಣವೃದ್ಧಿ, ಕಫದೋಷ, ವಿಷ, ಪೀಡೆ ಇವುಗಳನ್ನು ಪರಿಹರಿಸುತ್ತೆ.

೧೩೯. ನಿದ್ರೇಗುಣ.—ಇದರಿಂದ ಧಾತುಸಮ, ಆಲಸ್ಯಹರ, ಪುಷ್ಟಿ; ಕಾಂತಿ ಬಲ, ಧೈರ್ಯ, ಜಠರಾಗ್ನಿ ಇವುಗಳು ವೃದ್ಧಿಯಾಗುತ್ತವೆ.

೧೪೦. ನಿದ್ರೆಗೆ ಮುಂಚೆ ಸೇವಿಸತಕ್ಕ ಪದಾರ್ಥ.—ಮಲಗಿಕೊಳ್ಳುವಾಗ ದೇವತಾಸ್ಮರಣೆಯನ್ನುಮಾಡಿ ಮಹಾಲುಂಗಿ ಯಲೇಚೂರ್ಣವನ್ನು ಜೇನು ತುಪ್ಪದಲ್ಲಿ ಕಲಸಿ ಸೇವಿಸಿದರೆ ವಾಯುವೇಗ ನಾಶವಾಗಿಸುಖನಿದ್ರೆಬರುತ್ತೆ.

೧೪೧. ಉಷಃಪಾನ.—ಉಷಃಕಾಲದಲ್ಲಿ ಎಟುಶರೆ ನೀರು ಕುಡಿದರೆ ರೋಗಗಳಿಂದಲೂ,ವೃದ್ಧಾಪ್ಯದಿಂದಲೂ ಪೀಡಿತನಾಗದೆ ಮನುಷ್ಯನು ನೂರುವರುಷ ಬದುಕುವನು.

೧೪೨. ಉಷಃಪಾನಗುಣ.—ಇದರಿಂದ ಅರ್ಶ, ಶೋಫೆ, ಗ್ರಹಣಿ, ಜ್ವರ, ಉದರರೋಗ, ವೃದ್ಧತ್ವ, ಕೋಷ್ಟ,ಮೇದೋರೋಗ, ಮೂತ್ರಘಾತ, ರಕ್ತಸ್ರಾವ, ವಾತ, ಪಿತ್ತ, ಕಫ; ಕಿವಿ, ಕುತ್ತಿಗೆ, ಮಸ್ತಕ, ಕಟಿಪಶ್ಚಾದ್ಭಾಗ ಇವುಗಳಲ್ಲೂ ನೇತ್ರಗಳಲ್ಲೂ ಸಹ ಉಂಟಾಗುವ ರೋಗಗಳನ್ನುನಾಶಮಾಡುತ್ತೆ. ಮತ್ತು ನೀರನ್ನು ಮೂಗಿನ ರಂಧ್ರದಿಂದ ಮೂರುಶೆರೆ ಶೇದಿದರೆ ಬುದ್ಧಿವೃದ್ಧಿ, ಗರುಡನಹಾಗೆ ನೇತ್ರಪಾಟವ ಸಹ ಉಂಟಾಗುತ್ತೆ; ಸುಕ್ಕು, ನರೇಕೂದಲು ಸಹ ಪರಿಹರ ; ಮತ್ತು ಶರೀರವಿಕಾರ, ನೆಗಡಿ, ವಿಸ್ವರತ್ವ, ಕೆಮ್ಮು, ಶೋಫೆ, ಗೂರಲು ಇವುಗಳು ಪರಿಹರವಾಗುತ್ತವೆ ; ರಸಾಯನದಹಾಗೆ ದೃಷ್ಟಿನಿರ್ಮಲವಾಗುತ್ತೆ.

೧೪೩. ಮೂಗಿನಿಂದ ಯಾರು ನೀರು ಶೇದಕೂಡದೆಂದರೆ.—ಯಣ್ಣೇಕುಡಿಯುವ ಅಭ್ಯಾಸವುಳ್ಳವ," ಗಾಯಪಟ್ಟವ, ಹೊಟ್ಟೆಯುಬ್ಬರವುಳ್ಳವ,

ಅಗ್ನಿಮಾಂದ್ಯದವ, ಬಿಕ್ಕಳಿಕೆವುಳ್ಳವ, ಕಫವಾತರೋಗಿ ಸಹ ನೀರನ್ನು ಕೇದಕೂಡದು.

೧೪೪. ಬಿಸಿನೀರನ್ನು ಸಾಧನೆಗೆ ಆದಿಭಾಗದಲ್ಲಿ ಕುಡಿಯುವದ್ದರಿಂದ ಉಂಟಾಗುವ ದುರ್ಗುಣಗಳು.—ಮೈಯಲ್ಲಿ ತಾಪ, ಸರ್ವಾಂಗದಾಹ, ಪಿತ್ತರೋಗ ವೃದ್ಧಿಗಳಾಗುತ್ತವೆ ; ಮತ್ತು ರಕ್ತಕ್ಷಯ, ವಿಷವೃದ್ಧಿ ಸಹ ಆಗುತ್ತೆ.

೧೪೫. ಬಿಸಿನೀರನ್ನು ಕ್ರಮವಾಗಿ ಸಾಧಿಸಿದರೆ ಉಂಟಾಗುವ ಗುಣ.—ಅಗ್ನಿಸಮವಂ ಮಾಡುತ್ತೆ, ಜೀರ್ಣಕಾರಿ, ಕಂಠಸಮನಾಗುತ್ತೆ, ಶರೀರಲಾಘವ ಹುಟ್ಟುವದು, ಶೈತ್ಯವಂ ಪರಿಹರಿಸುವದು, ಉಷ್ಣಭಾವವಂ ಕೊಡುವದು, ವಸ್ತಿದೋಷಹರ, ಮೂತ್ರವನ್ನು ಸರಿಯಾಗಿಮಾಡುವದು, ಮತ್ತು ಸಕಲರೋಗಗಳನ್ನೂ ಪರಿಹರಿಸುವದು.

೧೪೬. ದೋಷರಹಿತವಾದ ಥಣ್ಣೀರುಕುಡಿಯುವದರಿಂದ ಉಂಟಾಗುವ ಗುಣ.—ನಾಲಿಗೆಗೆ ರುಚಿಯನ್ನೂ ಮತ್ತು ತೃಪ್ತಿಯನ್ನೂ ಉಂಟುಮಾಡುತ್ತೆ, ನೀರಡಿಕೆಯನ್ನು ತಪ್ಪಿಸುತ್ತೆ, ಬುದ್ಧಿಚಾಂಚಲ್ಯ ಹೋಗುತ್ತೆ, ಹೊಟ್ಟೆತುಂಬಿದಹಾಗೆ ತೃಪ್ತಿಯಾಗುತ್ತೆ; ನಿದ್ರಾ, ಆಲಸ್ಯ, ವಿಷ ಇವುಗಳನ್ನು ಕಡಿಮೆಯಾಗಿ ಮಾಡಿ ವೀರ್ಯವೃದ್ಧಿ, ಬಲವೃದ್ಧಿ, ಶರೀರಪುಷ್ಟಿ ಇವುಗಳನ್ನುಂಟುಮಾಡುತ್ತೆ .

೧೪೭. ದೋಷರಹಿತವಾದ ಥಣ್ಣೀರು ಯಾವವೆಂದರೆ.—ಬಿಸಲು, ಗಾಳಿ, ಚಂದ್ರಕಿರಣ ಸಹ ತಗಲುವ ಮಳೇನೀರು, ಆಗಳು ಮಾಸಲರಂಗಾಗುವವರಿಗೂ ರಜತಪಾತ್ರೆಯಲ್ಲಿ ಅನ್ನಸಮೇತ ಹಾಕಿಟ್ಟಿದ್ದನೀರು, ಜೇಷ್ಠ, ಆಷಾಢ, ಶ್ರಾವಣ, ಭಾದ್ರಪದ ಮಾಸಗಳಲ್ಲಿ ಕುಡಿಯಬಹುದು; ಭೂಮಿಮೇಲೆ ಬೀಳದ ಮಣ್ಣಿನಪಾತ್ರೆಯಲ್ಲಿ ಹಿಡಿದು ತುಂಬಿದನೀರು, ಆಶ್ವೀಜಮಾಸದಲ್ಲಿ ಭೂಸಂಬಂಧವಾದ ನಿರ್ಮಲೋದಕವು, ಮಾರ್ಗಶಿರ ಆರಭ್ಯ ಫಾಲ್ಗುಣದವರಿಗೂ ಸುವೇಗವಾಗಿ ಹರಿಯುವನೀರು, ಯಾವಕಾಲದಲ್ಲೂ ಭಾವೀ ತೋಡದೆ ಯಿರುವ ಜಾಗದಲ್ಲಿ ಭಾವಿ ತೋಡಿ ಬಂದ ಉದಕವು, ಬಿಳೀಕಲ್ಲು, ಜೇಡೀಮಣ್ಣುಗಳಿರುವ ಭಾವೀ ನೀರು, ಬರೀಮಳಲಿನಲ್ಲಿ ಬಂದ ನೀರು, ಪರ್ವತವು ವಿಸ್ತಾರವಾಗಿದ್ದು ನಿರ್ಮಲವಾಗಿದ್ದ ಬಿಳೀಮಣ್ಣುಳ್ಳ ಕೆಸರಿಲ್ಲದ ಸರೋವರದ ನೀರು, ಬಿಸಲು, ಗಾಳಿ, ಬೆಳದಿಂಗಳು ತಗಲುವ

ನೀರು, ಪಶ್ಚಿಮ ಸಮುದ್ರಕ್ಕೆ ವೇಗವಾಗಿ ಹರಿಯುವ ನದೀನೀರು, ಮಲಯ ಪರ್ವತದಿಂದ ಸಣ್ಣಕಲ್ಲು, ಮಳಲು ಇವುಗಳಮೇಲೆ ಶೀಘ್ರವಾಗಿ ಹರಿಯುವನೀರು, ಪಾರಿಯಾತ್ರ ಪರ್ವತದ ನೀರು, ಛಳಿಕಾಲದಲ್ಲಿ ಪ್ರಾತಃಕಾಲಕ್ಕೆ ಬಿಸಿಯಾಗಿರುವ ನದೀ ಉದಕವು, ಕೆರೆಯೊಳಗೆ ಮಣ್ಣುನಿಂತು ಬಹುಕಾಲದಿಂದ ಮಣಗಿದ ಭೂಮಿಯಲ್ಲಿ ತೆಗದ ಸುವಾಸನೆಯುಳ್ಳ ಭಾವಿನೀರು, ಪರ್ವತದ ಮೇಲುಭಾಗದಲ್ಲಿ ಮೃಗಗಳು, ಮನುಷ್ಯರು ಸಹ ಸಂಚರಿಸದ ದೋಣಿಯಲ್ಲಿ ನಿಂತಿರುವ ನೀರು, ಹೊಗೆ ವುರಿಯಿಲ್ಲದಸಂಕಿಗೆ ಹನ್ನೆರಡಂಗುಲ ಯತ್ರದಮೇಲೆ ಹೊಗೆಯೂ ಗುಳ್ಳೆಯೂ ಬರದಹಾಗೆ ಆಗಾಗ್ಯೆ ಗಾಳಿಯನ್ನು ಬೀಸುತಿದ್ದ ಅರ್ಧಮಟ್ಟಿಗೆ ಇಂಗಿದನೀರು, ಪತಂಗಿಸಿದನೀರು, ಅಲ್ಲದೆ ಒಂದು ಮಡಿಕೆಗೆ ೪–೫ ತೂತುಗಳುಮಾಡಿ ಅದಕ್ಕೆ ಅರವೆಬತ್ತಿಗಳುಹಾಕಿ ಅಮಡಿಕೆಗೆ ೪ ಬೆರಳಷ್ಟುಮರಳು, ಅದರಮೇಲೆ ಇದ್ಲು, ಅನಂತರ ಕೆಸರುರಾಡಿ ಸಹ ಆಗಿರುವ ನೀರನ್ನು ತುಂಬಿ ಕೆಳಗೆ ಒಂದುಪಾತ್ರೆಯಿಟ್ಟು ಅದರ ಮೇಲೆ ಈಮಡಿಕೆ ಇಡಲು ಮೇಲಿನಿಂದ ಕೆಳಗಣಮಡಿಕೆಗೆ ರಾಡಿತಪ್ಪಿ ನಿರ್ಮಲವಾಗಿ ಬಂದನೀರು, ಒಂದುಪಾತ್ರೆಯಲ್ಲಿ ಪಟಿಕದಗಡ್ಡೆಯನ್ನು ಹಿಡಿವೊಳಗೆ ಹಿಡಿದು ಏಳಾವರ್ತಿ ವೃಜ್ಜೋಣದರಿಂದ ನಿರ್ಮಲವಾದ ನೀರು, ನಾಲ್ಕು ಆಣೆ ತೂಕ ಕೊಳವಳಿಕೆಬೀಜದ ಪುಡಿಯನ್ನು ಹಾಕುವದ್ದರಿಂದ ನಿರ್ಮಲವಾದ ನಾಲ್ಕು ಕೊಡ ನೀರು, ಮತ್ತು ಶೀತವೀರ್ಯವುಳ್ಳ ಚಿಲ್ಲದಬೀಜದ ಗಂಧಹಾಕುವದ್ದರಿಂದ ನಿರ್ಮಲವಾದ ಉದುಕವು ಸಹ ದೋಷರಹಿತವಾದವು ; ಪಾನಮಾಡಬಹುದು, ಇದರಿಂದೆ ದೊಷ ಉಂಟಾಗುವದಿಲ್ಲ.

೧೪೮. ಕೆಟ್ಟನೀರು ಯಾವದೆಂದರೆ.—ಕೆಸರು, ಪಾಚಿ, ತೃಣ, ಪರ್ಣ, ಜಾಡನ ತಂತು, ಕಪ್ಪೆಮೊಟ್ಟೆ, ಪುಂಡೀಕಡ್ಡಿ, ಭೂತಾಳೆ ಮತ್ತು ಸತ್ತಸರ್ಪವೇ ಮೊದಲಾದವು ಬಿದ್ದು ಕೊಳತುಬರುವ ನದೀನೀರು; ಮಲ ಮೂತ್ರಗಳನ್ನು ವಿಸರ್ಜನೆ ಮಾಡುವ ಹಳ್ಳಗಳಲ್ಲಿಯೂ ನದಿಗಳಲ್ಲೂ ಚಲುಮೆಗಳು ತೋಡಿ ಬಂದ ನೀರು; ಬಿಸಲು, ಗಾಳಿ, ಚಂದ್ರ ಕಿರಣಗಳು ತಗಲದೆ, ರಾಡಿಯಾಗಿಯೂ, ದಪ್ಪವಾಗಿಯೂ, ಭಾರವಾಗಿಯೂ, ನೊರೆಯಾಗಿರುವ ನೀರು ; ಹುಳಗಳು ಯಿರುವ ನೀರು; ಮೊಸಳೆಗಳು ಇರುವದ್ದರಿಂದ ಬೆಳಗಿನ ಸಮಯದಲ್ಲಿ ಬಿಸಿಯಾಗಿರುವ ನೀರು ; ಪ್ರವಾಹಕಾಲದಲ್ಲಿ ಮುಂದೆ ಹರಿಯುವ ಮಧ್ಯಾನ್ಹಕಾಲಕ್ಕೆ ಅತಿಶೀತಳವಾದ ಸ್ವಲ್ಪಸ್ವಲ್ಪ ತಗ್ಗುಗಳಲ್ಲಿ ನಿಂತು ನಿಂತು ಹರಿಯುವ ನೀರು ; ಅಕಾಲದ ಮಳೇನೀರು ; ಋತು ಆದಿಯಲ್ಲಿ ಬಂದನೀರು ; ಪರ್ವತಗಳಿಂದ ಪಶ್ಚಿಮ ಸಮುದ್ರಕ್ಕೆ ನಿಂತು ನಿಂತು

ಹರಿಯುವ ನದೀನೀರು ; ಸವಳುಭೂಮಿಯಲ್ಲಿ ಬರುವ ನೀರು ; ಕುಷ್ಠ, ಪಾಂಡು, ಶಿರೋರೋಗಗಳನ್ನುಂಟುಮಾಡುವ ವಿಂಧ್ಯ, ಸಹ್ಯ ಪರ್ವತಗಳ ಸಮೀಪದಲ್ಲಿರುವ ಕೆರೆ ಕಟ್ಟೆ ಭಾವಿಗಳ ನೀರು ; ಜಾಂಗಲದೇಶದಲ್ಲಿ ಜೌಗಿನಿಂದ ಬರುವ ನೀರು ; ಮಂದಾಗ್ನಿ, ಗುಲ್ಮ, ಪಾಂಡು, ಅತಿಸಾರ, ಅರ್ಶ, ಗ್ರಹಣಿ, ಶೋಷ ರೋಗಗಳನ್ನುಂಟುಮಾಡುವ ನೀರು ; ಮಹೇಂದ್ರ, ಸಹ್ಯ, ವಿಂಧ್ಯ ಈ ಪರ್ವತಗಳ ಪಶ್ಚಿಮ ದಿಕ್ಕಿನಲ್ಲಿ ಹುಟ್ಟಿ ಪೂರ್ವ ದಿಕ್ಕಿಗೆ ಹರಿಯುವ ನದೀನೀರು ; ಕೆರೆಯಲ್ಲಿ ನೀರಿಲ್ಲದೆ ಬಹುಕಾಲದಿಂದ ವಣಗಿದ್ದು ಅಲ್ಲಿ ಭಾವಿತೋಡಿದಾಗ ಕೊಳಕು ವಾಸನೆಯುಳ್ಳ ನೀರು ; ಇವುಗಳೆಲ್ಲಾ ಕೆಟ್ಟವು.

೧೪೯. ನೀರು ಕುಡಿಯುವ ಕ್ರಮ.—ಗ್ರೀಷ್ಮ ಶರದೃತುಗಳಲ್ಲಿ ದಾರ್ಢ್ಯವುಳ್ಳವನು ಯಥೇಚ್ಛೆಯಾಗಿ ಪಾನ ಮಾಡಬಹುದು. ಮಿಕ್ಕ ಕಾಲದಲ್ಲಿ ಸ್ವಲ್ಪ ಪಾನಮಾಡಬಹುದು. ಮತ್ತು ಸಮ ಪ್ರಕೃತಿಯುಳ್ಳವನು ಭೋಜನಮಧ್ಯದಲ್ಲೂ, ಸ್ಥೂಲಸ್ವಭಾವದವನು ಭೋಜನಾಂತ್ಯದಲ್ಲೂ, ಕೃಶ ಸ್ವಭಾವವುಳ್ಳವನು ಭೋಜನಾದಿಯಲ್ಲೂ ಸಹ ನೀರು ಕುಡಿದರೆ ಶರೀರಕ್ಕೆ ಹಿತವಾಗುತ್ತೆ.

ಋತುಚರ್ಯೆ.

ಇದು ಆರುಪ್ರಕಾರ, ಹ್ಯಾಗಂದರೆ:—

೧. ಕಾಲದಲ್ಲಿ ಷಡೃತು ಹ್ಯಾಗಂದರೆ.—ಮಾಘಮಾಸಕ್ಕೆ ಆದಿಭಾಗವೆಂದರೆ ಪುಷ್ಯಮಾಸದ ಕೆಲವು ದಿವಸಗಳು ಸಂದಬಳಿಕ ಅದನ್ನು ಮೊದಲುಮಾಡಿಕೊಂಡು ಷಡೃತುಗಳು ಹುಟ್ಟುವವು. ಆರುತಿಂಗಳು ಉತ್ತರಾಯಣ, ಆರುತಿಂಗಳು ದಕ್ಷಿಣಾಯನವೆನ್ನಿಸಿಕೊಳ್ಳುತ್ತವೆ. ದಿನನಾಥನಾದ ಸೂರ್ಯನು ಉತ್ತರಾಯಣಕ್ಕೆ ಬರಲಾಗಿ ಶಖೆ ಹುಟ್ಟಿ ರೋಗಪರಿಹಾರವಾಗುವದು. ನಿಶಾನಾಥನಾದ ಚಂದ್ರನು ದಕ್ಷಿಣಾಯನಕ್ಕೆ ಬರಲಾಗಿ ಶೈತ್ಯಹುಟ್ಟಿ ರೋಗಸಮೂಹ ಹುಟ್ಟುವದು. ರಾತ್ರಿಯಲ್ಲಿ ರೋಗ ಹೆಚ್ಚುವದಕ್ಕೆ ಚಂದ್ರನೇ ಕಾರಣ. ಈ ಋತುಗಳಲ್ಲಿ ಊಟದ ವಿಷಯವನ್ನು ಸಂಕ್ಷೇಪವಾಗಿ ಹೇಳುತ್ತೇನೆ. ಶಿರ, ವಸಂತ, ಗ್ರೀಷ್ಮ ಈ ಋತುಗಳಲ್ಲಿ ಖಾರ, ವಗರು, ಕೈ ಇವುಗಳನ್ನು ತೆಗದುಕೊಳ್ಳಬೇಕು. ಹಿತಕರವಾದ ಗಾಳಿ, ಬಿಸಲು, ಸಹ ಮೈಗೆ ತಗಲಿದರೆ ಬಲವು, ಪುಷ್ಟಿಯು ಸಹ ಉಂಟಾಗುವದು. ಮತ್ತು ವರ್ಷಋತು, ಶರದೃತು, ಹೇಮಂತಋತುಗಳಲ್ಲಿ ಹುಳಿ,

ಉಪ್ಪು, ಮಧುರ ಮತ್ತು ಜಿಡ್ಡಿನ ಪದಾರ್ಥಗಳನ್ನು ಸಹ ಸೇವಿಸಬೇಕು. ಶೈತ್ಯೋಪಚಾರ ಮಾಡಕೂಡದು. ಮಾಡಿದರೆ ಬಲಕ್ಷಯವಾಗುವದು. ಹಿಮಂತಋತುವಿನ ಧರ್ಮವೇನಂದರೆ :—ಶರೀರಕ್ಕೆ ಮಳೆಗಾಲ, ಛಳಿಗಾಲ, ಬ್ಯಾಸಿಗೆಕಾಲ ಎಂಬ ಮೂರು ಅಧಿಕಾರಿಗಳು. ಮಳೆಗಾಲ, ಶಖೆಕಾಲ ಸಹ ಕಳೆಯುತ್ತಿರಲಾಗಿ ಶರೀರಕ್ಕೆ ಅಹಂಕಾರ ಉಂಟಾದ್ದರಿಂದ ಗಾಳಿಯರೂಪವಾದ ಛಳಿಯು ಒಳಹೊಕ್ಕು, ಜಠರಾಗ್ನಿಯನ್ನು ಎಬ್ಬಿಸಲಾಗಿ ಅದು ಹೆಚ್ಚಿ ಸಪ್ತಧಾತುಗಳನ್ನು ದಹಿಸುವದು. ಆದ್ದರಿಂದ ರಾತ್ರಿಯಲ್ಲಿ ಆಹಾರವನ್ನು ಹೆಚ್ಚಾಗಿ ತೆಗದುಕೊಂಡಾಗ್ಯು ಬೆಳಗಾಗುವದರ ವಳಗಾಗಿ ಹಸಿವನ್ನುಂಟುಮಾಡುವದು. ಆ ಕಾಲದಲ್ಲಿ ಕೆಲವರು ಧನುರ್ಮಾಸವೆಂದು ಮುಂಚಿತವಾಗಿ ಆಹಾರಗಳನ್ನು ತೆಗದುಕೊಳ್ಳುತ್ತಾರೆ. ಯಾರಾದಾಗ್ಯೂ ಸೀ, ಖೈ, ವಗರು ಈ ರಸಗಳಲ್ಲಿ ಹಿತವಾಗುವಂತೆ ಪಕ್ವಮಾಡಿಸಿ ಭುಂಜಿಸಬೇಕು. ವಾತಹರವಾದ ತೈಲದಿಂದ ಅಭ್ಯಂಜನವನ್ನು ಮಾಡಿ, ವಗರುಪದಾರ್ಥಗಳಿಂದ ಜಿಡ್ಡು ನಿಲ್ಲದಂತೆ ತೊಳೆಯುತ್ತಾ, ಶೌಚಾದಿಕೃತ್ಯಗಳಿಗೂ ಸ್ನಾನಕ್ಕೂ ಸಹ ಬಿಸಿನೀರನ್ನೇ ಉಪಯೋಗಿಸಿ, ಕುಂಕುಮಕೇಸರದಿಂದ ಯುಕ್ತವಾದ ಗಂಧಲೇಪವಂ ಮೈಗೆ ಮಾಡಿ, ಅಗಿಲುಚಕ್ಕೆ ಧೂಪವನ್ನು ಹಾಕಿ, ಜಿಡ್ಡಿನ ಪದಾರ್ಥವನ್ನು ಸೇವಿಸಬೇಕು. ಮದ್ಯ ಮತ್ತು ಫಲಾದಿಗಳನ್ನು ತೆಗದುಕೊಳ್ಳಲಾಗದು. ಸಾರಾಯಿ, ಮಿಾನು, ಹಾಲು, ಕಬ್ಬು, ಎಣ್ಣೆ ಇವುಗಳನ್ನು ಸೇವಿಸುತ್ತಿರಬೇಕು. ಗೋಧಿ, ಉದ್ದುಗಳ ಭಕ್ಷ್ಯಗಳನ್ನೂ ಬಿಸಿಅನ್ನವನ್ನೂ ಸಹ ಭುಂಜಿಸಬೇಕು. ಬೆಚ್ಚಗೆ ಇರುವ ಹಾಸಿಗೆ ಮೇಲೆ ಮಲಗಿ ಪಟ್ಟೆ,ಕಂಬಳಿ ಇವುಗಳ ವಸ್ತ್ರವನ್ನು ಹಿತವಾಗುವಂತೆ ಹೊದ್ದುಕೊಂಡು ಬೆವರು ಹುಟ್ಟುವಂತೆ ಸೂರ್ಯಕಿರಣದಿಂದಲೂ ಅಗ್ಗಿಷ್ಟಿಕೆಯ ಕೆಂಡದ ಶಖೆಯಿಂದಲೂ ಕಾಸುತ್ತಿರಬೇಕಲ್ಲದೆ ಸರ್ವದಾ ಪಾದರಕ್ಷೆಹಾಕಿಯೇ ಸಂಚರಿಸಬೇಕು. ಎದೆಬದಿಗಳಲ್ಲಿ ಸ್ಥೂಲತ್ವವು, ಉಷ್ಣಶರೀರವು ಸಹಾವುಳ್ಳ ಮದವತಿಯಾದ ಸುಂದರಾಂಗಿಯಾದ ಮೋಹಿನಿಯಂತಿರುವ ಸ್ತ್ರೀಯ ಮೈಗೆ ಕೇಸರಿ ಕಸ್ತೂರಿ ಮಿಶ್ರವಾದ ಗಂಧವನ್ನು ಲೇಪಿಸಿ ಆಲಿಂಗಿಸಿಕೊಂಡು ಇಟ್ಟಿಗೆಗಳಿಂದ ಕಟ್ಟಿದ ಮನೆಯಲ್ಲಿ ವಾಸಮಾಡುತ್ತಾ ಛಳಿಯನ್ನು ಕಳೆಯಬೇಕು. ಶಿಶಿರಋತುವಿನಲ್ಲಿ ಕಫ ಹೆಚ್ಚುವದರಿಂದ ಹಿಮಂತಋತುವಿನಂತೆ ನಡಿಸಬೇಕು. ವಸಂತಋತುವಿನಲ್ಲಿ ಆ ಶಿಶಿರಋತುವಿನಲ್ಲಿ ಹೆಚ್ಚಿದ ಕಫವು ಅಗ್ನಿಯನ್ನು

ಮುಚ್ಚುವದು. ಅಗ್ನಿಯನ್ನು ಮೇಲಕ್ಕೆ ಯೇಳದಂತೆ ತಗ್ಗಿಸಿ ಸಕಲರೋಗಕ್ಕೂ ಕಾರಣವನ್ನುಂಟುಮಾಡುವದು. ಅಕಾಲದಲ್ಲಿ ಕಫಪರಿಹಾರಕ್ಕೋಸ್ಕರ ವಾಂತಿಮಾಡಿಸಬೇಕು. ಲಘು, ರೂಕ್ಷ ಈ ಪದಾರ್ಥಗಳನ್ನು ಸೇವಿಸುತ್ತಾ ಇರಬೇಕು ; ಮತ್ತು ತಿರಗಾಡಬೇಕು. ಅಭ್ಯಂಜನ, ಕರ್ಪೂರ, ಚಂದನ, ಅಗರು, ಕುಂಕುಮಕೇಸರ ಇವುಗಳಿಂದ ಮಾಡಿದ ಗಂಧಲೇಪನದಿಂದಲೂ, ಹಳೇ ಜವೆಗೋಧಿ, ಜೇನು, ಅಡವೀಮೃಗದ ಮಾಂಸ, ಮಾವಿನಹಣ್ಣು ಇವುಗಳನ್ನು ಸೇವಿಸುತ್ತಾ ತನ್ನ ಪತ್ನಿಯಿಂದ ಮಾಡಲ್ಪಟ್ಟ ಅನ್ನವನ್ನು ಮಧುರವಚನದಿಂದ ಭುಂಜಿಸುತ್ತಾ ಸ್ನೇಹಿತರಿಂದ ಕೂಡಿ ಆನಂದಭರಿತನಾಗಿ ತಿರಗಾಡುತ್ತಾ ಇದ್ದರೆ ಶ್ಲೇಷ್ಮಶಮನವಾಗುವದು. ವನದೊಳಗೆ ಕೋಗಿಲೆ ಧ್ವನಿಯಂ ಕೇಳುತ್ತಾ ಸುಗಂಧ ಪುಷ್ಪಗಳ ವಾಸನೆಯಂ ತೆಗದುಕೊಳ್ಳುತ್ತಾ ಶರೀರಕ್ಕೆ ಹಿತವಾಗುವಂತೆ ಆಕಾಲದಲ್ಲಿ ಜೇನುತುಪ್ಪ ಬಿಸಿನೀರಾಗಲಿ, ಶುಂಠಿ ಅಥವಾ ಕೊನ್ನಾರಿಗೆಡ್ಡೆಯನ್ನಾಗಲಿ ಹಾಕಿ ಕುದಿಸಿದ ಬಿಸಿನೀರನ್ನು ಕುಡಿಯಬೇಕು. ಬೆವರುವಂತೆ ಕಾರ್ಯವನ್ನು ಮಾಡದೆ ಇರಬೇಕು. ಮೈ ಬೆವರಿದರೆ ಶೀತ ಅಧಿಕವಾಗುತ್ತೆ.

ಗ್ರೀಷ್ಮಋತುವಿನಲ್ಲಿ ನಡಿಯತಕ್ಕ ಧರ್ಮ.—ಸೂರ್ಯಕಿರಣದಿಂದ ತಾಪಪಟ್ಟ ಶರೀರದಲ್ಲಿ ಹೆಚ್ಚಾಗಿರುವ ಶ್ಲೇಷ್ಮವನ್ನು ಕರಗಿಸಿ ವಾತವು ನಿಲ್ಲುವದಕ್ಕೆ ಅವಕಾಶವನ್ನುಂಟುಮಾಡುವದು. ಆದ್ದರಿಂದ ಹುಳಿ, ಉಪ್ಪು, ಖಾರಗಳನ್ನು ಮೊದಲುಭಾಗದಲ್ಲಿ ತಿನ್ನಬೇಕು, ತಿರಗಾಡುತ್ತಿರಬೇಕು, ಮತ್ತು ಮಧುರ ಪದಾರ್ಥ, ಜಿಡ್ಡಿನ ಪದಾರ್ಥಗಳನ್ನು, ರಾತ್ರಿ ನೀರು ಹಾಕಿಯಿಟ್ಟು ಇದ್ದ ತಂಗಳನ್ನವನ್ನು, ಬಳ್ಳೀ ತಣ್ಣೀರಿನಿಂದ ಮೈ ತೊಳದು ಸೇವಿಸಬೇಕು. ಮತ್ತು ಅರಳು ಹಿಟ್ಟು ಸಕ್ಕರೆ ತುಪ್ಪಾ ಮಿಶ್ರಮಾಡಿ ತಿನ್ನಬೇಕು. ಮದ್ಯ ಕುಡಿಯಬಾರದು. ಹೆಚ್ಚಾಗಿ ಅಭ್ಯಾಸವುಳ್ಳವ ಸ್ವಲ್ಪವಾಗಿ ತೆಗದುಕೊಳ್ಳಬೇಕು. ಎದೆ ಬಣಗದಂತೆ ಪಾನಕ ಮುಂತಾದ್ದನ್ನು ಆಗಾಗ್ಯೆ ತೆಗದುಕೊಳ್ಳುತ್ತಿರಬೇಕು. ಹೀಗೆ ನಡಿಯದೇ ಹೋದರೆ ಶರೀರಕಾರ್ಶ್ಯ, ಮೂರ್ಛೆಗಳು ಹುಟ್ಟುವವು. ಆದ್ದರಿಂದ ಸಣ್ಣಕ್ಕಿ ಅನ್ನ, ಅಡವೀಫಲಗಳ ಪಂಚಸಾರ ಮುಂತಾದ ಪಾನಕಗಳು ಅಗಲವಾದ ಹೊಸ ಮಡಿಕೆಯಲ್ಲಿಟ್ಟು ಸ್ವಲ್ಪ ಹೊತ್ತು ಬಿಟ್ಟು ತಂಣಗಾದಮೇಲೆ ಕುಡಿಯಬೇಕು. ಪಂಚಸಾರ ಪಾನಮಾಡತಕ್ಕ ವಿಧಿ.—ಜೇನುತುಪ್ಪ, ಈಚಲು


ಹಣ್ಣು, ಖರ್ಜೂರ, ದೀಪದ ದ್ರಾಕ್ಷಿ, ಕಲ್ಲುಸಕ್ಕರೆ ಇವುಗಳನ್ನೆಲ್ಲಾ
ಅರದು ಹೊಸ ಮಡಿಕೆಯಲ್ಲಿ ನೀರುಹಾಕಿ ಕಲಸಿಯಿಟ್ಟು ಸ್ವಲ್ಪ ಹೊತ್ತು
ಬಿಟ್ಟರೆ ಪಂಚಸಾರವೆನ್ನಿಸಿಕೊಳ್ಳುತ್ತದೆ. ಪಾದರಿ ಹುವ್ವು, ಪಚ್ಚ
ಕರ್ಪೂರ, ಮತ್ತು ಪರಿಮಳ ಪದಾರ್ಥಗಳನ್ನು ಸಹ ಕೂಡಿಸಿ
ಹೊಸ ಮಡಿಕೆಯಲ್ಲಿ ನೀರು ಹಾಕಿ ಕದಡಿ ಕಡದು ನೀರು ತಿಳಿ ಆದ
ಮೇಲೆ ಕುಡಿಯಬೇಕು. ಇದಲ್ಲದೆ ರಾತ್ರಿಯಲ್ಲಿ ಶುಭ್ರವಾದ ಘೃತ
ಪಕ್ವವಾದ ಭಕ್ಷ್ಯಗಳನ್ನು, ಹಾಲು ತುಪ್ಪ ಸಕ್ಕರೆ ಸಹ ಸೇರಿಸಿದ
ಪರಮಾನ್ನವನ್ನು ಬೆಳದಿಂಗಳಿನಲ್ಲಿ ಸೇವಿಸಬೇಕು. ತಾಳೆಯಲೆಯ
ಚಪ್ಪರವನ್ನು ಹಾಕಿಸಿ ಅದರಲ್ಲಿ ಶಖೆಯನ್ನು ಕಳಿಯಬೇಕು. ಪ್ರತಿ
ದಿನದಲ್ಲೂ ಹಗಲಿನಲ್ಲಿ ಬಾಳೆಯಲೆ, ಕಮಲದ ಪತ್ರ ಇವುಗಳಲ್ಲಿ
ಪರಿಮಳದ ಪುಷ್ಪಗಳಿಟ್ಟು ಕಾರಂಜಿ ಇರುವಮನೆಯಲ್ಲಿ ಮಧ್ಯಾಹ್ನದೋ
ಳ ಈ ಪುಷ್ಪಗಳ ವಾಸನೆಯನ್ನು ತೆಗದುಕೊಳ್ಳುತ್ತಾ ನಿದ್ರೆಯಂ
ಗೈಯಬೇಕು. ರಾತ್ರಿಕಾಲದಲ್ಲಿ ಬೆಳದಿಂಗಳೊಳು ವುಪ್ಪರಿಗೆ ಮೇಲೆ
ಗಂಧ ಪುಷ್ಪಗಳಿಂದ ಅಲಂಕರಿಸಿಕ್ಕೊಂಡು ಶರೀರವು ತಂಪಾಗಿರುವ ತರು
ಣಿಯರ ಸಂಭೋಗವಂ ಮಾಡಿದರೆ ಶಖೆ ಪರಿಹಾರವಾಗುವದು.

ವರ್ಷಾಋತುವಿನಲ್ಲಿ ನಡಿಯತಕ್ಕ ಧರ್ಮ.—ದೋಷತ್ರಯವು ಹೆಚ್ಚಿ ಮಳೆ
ಗಾಳಿಗಳಿಂದ ಕೊಳತ ಯೆಲೆಗಳಿಂದ ಕೂಡಿದ ನೀರು ಚಳಿ ಇತ್ಯಾದಿ
ಗಳಿಂದ ಬೆಳದು ಅಮ್ಲಪಾಕವಂ ಹೊಂದಿ ವಿಷಮದಿಂದ ಅಗ್ನಿಮಾಂದ್ಯ
ವಂ ಉಂಟುಮಾಡಿ ಬಂದಕ್ಕೊಂದು ಕೋಪಿಸಿಕ್ಕೊಂಡು ಅನೇಕವಿಧ
ವಾದ ರೋಗಗಳನ್ನು ಶರೀರಕ್ಕೆ ಉಂಟುಮಾಡುವದು. ಆಕಾಲದಲ್ಲಿ
ಸಾಮ್ಯವಾದ ರಸವನ್ನು ಸಾಧಾರಣವಾಗಿ ತೆಗದುಕೊಳ್ಳಬೇಕು. ಮ
ತ್ತು ಹಳೇಧಾನ್ಯ, ಅಡವೀಮೃಗದ ಮಾಂಸ, ಯಣ್ಣೆ ತುಪ್ಪಾ ಇವುಗ
ಳಲ್ಲಿ ಕರದ ಪದಾರ್ಥ, ಹಳೇ ಜೇನುತುಪ್ಪಾ, ಪಂಚಮೂಲದ ಚೂರ್ಣ,
ಕಾಸಿದ ನೀರು, ಜಿಡ್ಡಿನ ಪದಾರ್ಥ, ಉಪ್ಪು, ಹುಳಿ ಇವೇ ಮೊದಲಾದ
ವುಗಳನ್ನು ತೆಗದುಕೊಳ್ಳಬೇಕು. ಬರೀಕಾಲಿನಿಂದ ಸಂಚರಿಸಕೂಡದು.
ಅತಿಭೋಜನ, ಅತಿನಿದ್ರೆ, ದೇಹಕ್ಕೆ ಆಯಾಸವಾಗುವ ಕಷ್ಟಗಳನ್ನು
ಸಹ ಮಾಡಕೂಡದು. ಹೆಚ್ಚಾಗಿ ಮಳೆ ಮೋಡಗಳು ಕೂಡಿದ ಕಾಲ
ದಲ್ಲಿ ಹಿತ ಮಿತವಾಗಿ ಭೋಜನವಂ ಮಾಡಬೇಕು. ಪರಿಮಳ ಧೂಪದಿಂ
ದ ಭಾವನೆಯಾದ ವಸ್ತ್ರಗಳಂ ಧರಿಸಿ ಬಹಳವಾಗಿ ಮಾತಾಡದೆ ಉಪ್ಪ
ರಿಗೆಯಲ್ಲಿರಬೇಕು. ಅತಿಸೀತವಾದ ನೀರನ್ನು ಸೇವಿಸಬಾರದು.

ಶರದೃತುವಿನಲ್ಲಿ ನಡಿಯುವ ಧರ್ಮ.—ಮಳೆಕಾಲದಲ್ಲಿ ವ್ಯಾಪಿಸಿದ್ದ ಸೀತದಿಂದಲೂ, ಮೇಘಗಳಿಂದಲೂ, ಚಂದ್ರಕಿರಣ ಇವುಗಳಿಂದಲೂ ಸಹ ದೇಹವು ಕಂಪಿಸುತ್ತದೆ. ಕ್ಷೀಣವಾದ ಪಿತ್ತವು ವೃದ್ಧಿಯಾಗುತ್ತದೆ. ಇದನ್ನು ತಪ್ಪಿಸುವದಕ್ಕೆ ತುಪ್ಪದಿಂದ ಸಾರಣೆಯಾದ ಪದಾರ್ಥಸೇವನೆಯಿಂ ರಕ್ತಮೋಕ್ಷವನ್ನುಮಾಡಿ ತೈ, ೬, ವಗರುವುಳ್ಳ ಪದಾರ್ಥಗಳನ್ನು ಸೇವಿಸಬೇಕು. ಕ್ಷುತ್ತು ಬಹಳವಾದರೆ ಲಘ್ವನ್ನ, ಹೆಸರು, ಅಕ್ಕಿ, ನೆಲ್ಲಿಕಾಯಿ, ಪಡವಲಕಾಯಿ, ಹೊಸ ಜೇನು, ಹಾಲು, ನೀರು, ಅಡವೀ ಮೃಗದ ಮಾಂಸ ಇವುಗಳನ್ನು ಸೇವಿಸಿದರೆ ಆ ಪಿತ್ತದ ವೇಗವು ನಿಲ್ಲುವದು. ಇದಲ್ಲದೆ ಹಗಲು ನೀರನ್ನು ಬಿಸಲಿನಲ್ಲಿ ಇಟ್ಟು ಮತ್ತು ರಾತ್ರಿ ಬೆಳದಿಂಗಳಲ್ಲಿ ಇಟ್ಟರೆ ಅದು ಅಂಶೋದಕವೆನ್ನಿಸಿಕೊಳ್ಳುವದು. ಅದು ಅಮೃತಕ್ಕೆ ಸಮಾನವಾದ್ದರಿಂದ ಶಿಖೆ ಪರಿಹಾರವಾಗುವದು. ಮತ್ತು ಪಚ್ಚಕರ್ಪೂರದ ನೀರು, ಮುತ್ತಿನಹಾರ, ಪರಿಮಳಯುಕ್ತವಾದ ಗಂಧ, ಬಿಳೀ ವಸ್ತ್ರ, ಉಪ್ಪರಿಗೆ, ಬೆಳದಿಂಗಳು ಇವುಗಳನ್ನು ಮೊದಲುಝಾಮದಲ್ಲಿ ಸೇವಿಸಿದರೆ ಪಿತ್ತ ಶಮನವಾಗುವದು. ಮತ್ತು ಮೊಸರು, ಯಣ್ಣೆ, ಬಿಸಲು, ನೀರು, ಮತ್ತು ಉಷ್ಣ ಪದಾರ್ಥಗಳು, ಹಗಲು ನಿದ್ರೆ, ಹೆಚ್ಚಾದ ಮೂಡಗಾಳಿ, ಇವು ಹಿತವಲ್ಲಾ. ಇದಲ್ಲದೆ ನಿತ್ಯದಲ್ಲೂ ಷಡ್ರಸ ಭೋಜನವಂ ಮಾಡಬೇಕು. ಯಾವಯಾವ ಋತುವಿನಲ್ಲಿ ಯಾವಯಾವ ಪದಾರ್ಥಗಳು ವರ್ಜಿಸಬೇಕೆಂದು ಹೇಳಿರುವವೋ ಅವುಗಳನ್ನ ಬಿಡಬೇಕು. ಯಾವಾಗಲೂ ಸಾಧಿಸುವ ಪದಾರ್ಥಗಳನ್ನು ಒಂದೇ ಕಾಲದಲ್ಲಿ ಬಿಡಕೂಡದು. ರೋಗ ಪರಿಹಾರಕ್ಕೂ ದೇಹಕ್ಕೂ ಹಿತವಾದ ರಸವನ್ನು ಸೇವಿಸಿದರೆ ಪ್ರತ್ಯೇಕ ರೋಗವು ಹುಟ್ಟುವದಿಲ್ಲ, ಸಮಾಧಾನಕ್ಕೆ ಬರುವದು.

೨. ದೇಶದಲ್ಲಿ ಷಡೃತು ಹ್ಯಾಗೆಂದರೆ.—ಪೂರ್ವಸಮುದ್ರದ ದಡದಿಂದ ಪಶ್ಚಿಮಸಮುದ್ರದ ದಡದವರಿಗೂ ಸಮಸೂತ್ರವಾಗಿ ಒಂದು ಅಳತೆಮಾಡಿ ಅದನ್ನು ಎರಡುಭಾಗಮಾಡಿ ಆಭಾಗದಲ್ಲಿ ಒಂದನ್ನು ಆರುಪಾಲುಮಾಡಲು ಯಾವ ದಿಕ್ಕಿನಿಂದಲೇಆಗಲಿ ಸಮುದ್ರದಡದಿಂದ ಲೆಕ್ಕಿಸಿದರೆ ಆರು ಋತುಗಳು ನಾಲ್ಕುದಿಕ್ಕಿನಲ್ಲೂ ಸಮವಾಗಿ ಸುತ್ತುತ್ತವೆ. ಸಮುದ್ರದ ದಡದಿಂದ ವಸಂತವೇ ಆದಿಯಾಗಿ ಕ್ರಮವಾಗಿ ಲೆಕ್ಕ ಮಾಡಲು ತಾನು ಇರುವ ಸ್ಥಳದಲ್ಲಿ ವರ್ತಿಸುವ ಋತು ತಿಳಿಯುವದು.

ಇದರ ನಕ್ಷೆಯನ್ನು ಇದರ ಕೆಳಗೆ ಬರದಿದೆ.



೩. ದೇಹದಲ್ಲಿ ಷಡೃತು ಹ್ಯಾಗೆಂದರೆ.—ಜ್ಯೋತಿಷ, ವೈದ್ಯ, ಅಥವಾ ಯೋಗ ಶಾಸ್ತ್ರಗಳಂ ತಿಳಿದವರ ಮೂಲಕ ತನ್ನ ಆಯುಸ್ಸನ್ನು ತಿಳಿದು ಅದನ್ನು ಆರುಭಾಗವಾಗಿ ಮಾಡಿ ಆಭಾಗವನ್ನು ಬಾಲ್ಯದಿಂದ ವಸಂತಾದಿಯಾಗಿ ಲೆಕ್ಕಿಸಿದರೆ ದೇಹಕ್ಕೆ ತತ್ಕಾಲದಲ್ಲಿ ಬರುವ ಋತುವು ತಿಳಿಯುತ್ತೆ.

೪. ದಿವದಲ್ಲಿ ಷಡೃತು ಹ್ಯಾಗೆಂದರೆ.—ಒಂದು ಅಹಸ್ಸನ್ನು ಆರುಭಾಗ ಮಾಡಿ ಸೂರ್ಯೋದಯಾದಿಯಾಗಿ ವಸಂತಋತು ಮೊದಲುಮಾಡಿ ಸೂರ್ಯಾಸ್ತಮಯದವರೆಗೂ ಲೆಕ್ಕಿಸಲು ಆರು ಋತುಗಳು ವರ್ತಿಸುವವು.

೫. ದಿವದಲ್ಲಿ ಋತುಭೇದವನ್ನು ತಿಳಿಯುವ ಪ್ರಕಾರವೇ ರಾತ್ರಿಯಲ್ಲಿಯೂ ಸೂರ್ಯಾಸ್ತಮಯ ಮೊದಲುಮಾಡಿ ಸೂರ್ಯೋದಯದವರೆಗೂ ಋತುಭೇದಗಳನ್ನು ತಿಳಿಯಬೇಕು.

೬. ನಾಡೀಗತಿಗಳಲ್ಲಿ ಋತುಲಕ್ಷಣ.—ವಸಂತಋತುವಿನಲ್ಲಿ ರಾಜಹಂಸಗಮನದೋಪಾದಿಯಲ್ಲಿ ಗಂಭೀರವಾಗಿಯೂ, ಗ್ರೀಷ್ಮಋತುವಿನಲ್ಲಿ ಹಂಸಪಾದಗತಿಯಂತೆ ಕೃಶವಾಗಿಯೂ, ವರ್ಷಋತುವಿನಲ್ಲಿ ಶತಮೂಲದಂತೆಯೂ ಇಲಿ ಮುಂಗಸಿಗಳ ಗಮನದಂತೆಯೂ, ಶರದೃತುವಿನಲ್ಲಿ ಚಕ್ರಾಕಾರವಾಗಿಯೂ, ಹೇಮಂತಋತುವಿನಲ್ಲಿ ಸಣ್ಣಕಪ್ಪೆಯಂತೆಯೂ ಜಲಕಾಗೆಯ ಗಮನದಂತೆಯೂ, ಶಿಶಿರಋತುವಿನಲ್ಲಿ ಜಲೂಕದಂತೆಯೂ, ಗಜಗಮನದಂತೆಯೂ ಸಹ ನಾಡೀಗತಿಗಳು ಇರುವವು.

ದೇಹದಲ್ಲಿ ಅಗ್ನಿಲಕ್ಷಣ.—ಅಗ್ನಿ ಕ್ಲಿಪ್ತವಾಗಿರತಕ್ಕದ್ದು ಕಮ್ಮಿಯಾಗುವದರಿಂದ ಮಂದಾಗ್ನಿಯೆನ್ನಿಸಿಕೊಳ್ಳುತ್ತೆ, ಮತ್ತು ಶ್ಲೇಷ್ಮರೋಗವನ್ನು ಹೆಚ್ಚಿಸುತ್ತೆ. ಅಗ್ನಿ ಹೆಚ್ಚುವದರಿಂದ ತೀಕ್ಷ್ಣಾಗ್ನಿಯೆನ್ನಿಸಿಕೊಳ್ಳುತ್ತೆ.ಇದು ಪಿತ್ತರೋಗವನ್ನು ಹೆಚ್ಚಿಸುತ್ತೆ. ವಿಷಮಾಗ್ನಿಅಂದರೆ ವಾಯುವಿನಿಂದ ಅಗ್ನಿ ಹೆಚ್ಚುಕಡಮೆಯಾಗತಕ್ಕದ್ದು. ಇದು ವಾತರೋಗವನ್ನು ಹೆಚ್ಚಿಸುತ್ತೆ. ಸಮಾಗ್ನಿಅಂದರೆ ಮನುಷ್ಯಶರೀರಕ್ಕೆ ಉಕ್ತವಾದ ಅಗ್ನಿಯು ಶರೀರವನ್ನು ರಕ್ಷಿಸುತ್ತೆ.

ಸಾಧನ ಲಕ್ಷಣ.—ಸಾತ್ಮ್ಯಅಂದರೆ ಶರೀರಕ್ಕೆ ವಿಷ ಮೊದಲು ಮಾಡಿಕೊಂಡು ಯಾವಪದಾರ್ಥವನ್ನಾದರೂ ಸ್ವಲ್ಪದಿಂದ ಕ್ರಮವಾಗಿ ಹೆಚ್ಚಿಸುತ್ತಾ ಸೇವಿಸಲು ದೋಷವನ್ನುಂಟುಮಾಡುವದಿಲ್ಲ.

ಪ್ರಕೃತಿಲಕ್ಷಣ.—ವಾತಪ್ರಕೃತಿ ಮನುಷ್ಯನು ಹೀನರೂಪವುಳ್ಳವನಾಗಿ ವಕ್ರನಾಗಿ ನಡಿಯುವನು. ಪಿತ್ತಪ್ರಕೃತಿಯುವನು ಸಮರೂಪವುಳ್ಳವನಾಗಿ ಉದ್ದವಾದ

ಮುಖವುಳ್ಳವನಾಗಿ ನೆಟ್ಟಗೆ ತೀರು ಹೊಡಿದಹಾಗೆ ನಡಿಯುವನು. ಶ್ಲೇಷ್ಮಪ್ರಕೃತಿ ಪುರುಷನು ಗುಂಡಾದ ಮುಖವುಳ್ಳವನಾಗಿ ಸ್ಥೂಲಶರೀರಿಯಾಗಿ ಅಡ್ಡಡ್ಡವಾಗಿ ನಡೆಯುವನು. ಮೇಲೆ ಹೇಳಿರುವ ರೂಪಲಕ್ಷಣಗಳು ಮಿಶ್ರವಾಗಿದ್ದರೆ ಮಿಶ್ರಪ್ರಕೃತಿಯೆಂದು ತಿಳಿಯಬೇಕು.

ಬಲಾಬಲಶರೀರಲಕ್ಷಣ.—ಯಾವ ಮನುಷ್ಯನು ಆಹಾರವನ್ನು ಹೆಚ್ಚಾಗಿ ತಿಂದು ಜೀರ್ಣಿಸಿಕ್ಕೊಂಡು ಪುನಃಪುನಃ ತಿಂಡಿಯನ್ನು ಅಪೇಕ್ಷಿಸುತ್ತಾನೋ ಮತ್ತು ಭಾರವಾದ ಗುಂಡು ಮುಂತಾದವುಗಳನ್ನು ಲಕ್ಷ್ಯವಿಲ್ಲದೆ ಹೊರುತ್ತಾನೋ ಅಂತವನು ಬಲಿಷ್ಠನೆಂದು ತಿಳಿಯತಕ್ಕದ್ದು. ಇದಕ್ಕೆ ವ್ಯತಿರಿಕ್ತನಾದವನು ಅಂದರೆ ಸ್ವಲ್ಪಕೆಲಸದಿಂದ ಬಹಳಶ್ರಮ ಹೊಂದತಕ್ಕವನು, ಸ್ವಲ್ಪಆಹಾರ ಸೇವಿಸಿ ಶರೀರದಪ್ಪವಾಗಿದ್ದು ಒಂದು ಪದಾರ್ಥವನ್ನೂ ಹೊರಲಾರದವನು ದುರ್ಬಲನೆಂದು ತಿಳಿಯಬೇಕು.

ಚತುರ್ದಶವೇಗಗಳು ಮತ್ತು ಇವುಗಳಿಂದ ಹುಟ್ಟುವ ರೋಗಗಳು, ಇವುಗಳಿಗೆ ಪ್ರತಿಕ್ರಿಯೆಗಳು ಸಹ ಇದರ ಕೆಳಗೆ ವಿವರಿಸಲ್ಪಡುತ್ತೆ. ಈ ರೋಗಗಳಲ್ಲಿ ಸೀತೋಷ್ಣವ್ಯತ್ಯಾಸಗಳನ್ನು ನಿರ್ಣೈಸಿ ಪ್ರತೀಕಾರಗಳನ್ನು ಮಾಡಬೇಕು. ॥ ಶ್ಲೋ ॥ ವೇಗಾನ್ನಧಾರಯೇನ್ಮೂತ್ರವಿಡ್ವಾತಕ್ಷುತರೇತಸಾಂ ॥ ಜೃಂಭಾನಿದ್ರಾವಮಿಶ್ವಾಸಚ್ಛರ್ದಿಕಾಸಾಸ್ರತೃಟ್ಕ್ಷುಧಾಂ ॥ ॥ ಚತುರ್ದಶವೇಗವೆಂದರೆ—ಮೂತ್ರ, ಮಲ, ಅಧೋವಾತ, ಸೀನು, ಶುಕ್ಲ, ಆಕಳಿಕೆ, ನಿದ್ರೆ, ಉದ್ಗಾರ, ಶ್ವಾಸ, ವಾಂತಿ, ಕಾಸ, ರಕ್ತ, ಬಾಯಾರಿಕೆ, ಹಸಿವು ಇವುಗಳನ್ನು ತಡಿಯುವದರಿಂದಲೂ, ಅಧಿಕವಾಗಿ ಬಿಡುವದರಿಂದಲೂ ಉಂಟಾಗುವ ರೋಗಗಳು, ತತ್ಪ್ರತಿಕ್ರಿಯೆಗಳು:—

೧. ಮೂತ್ರವೇಗಕ್ಕೆ ಪ್ರತಿಕ್ರಿಯೆಗಳು.—ಬತ್ತಿ, ಅಭ್ಯಂಗ, ಬೆವರು, ವಸ್ತಿಶೋಧನೆ, ಅವಗಾಹನಸ್ನಾನ ಇವುಗಳನ್ನು ಮಾಡಿಸಬೇಕು. ಮತ್ತು ಮೂತ್ರ ಕೃಛ್ರ, ಅಶ್ಮರಿ ಈ ರೋಗಗಳ ಪ್ರತಿಕ್ರಿಯೆಗಳ ಮಾಡಿಸಬೇಕು. ಮೂತ್ರದಿಂದ ಉಂಟಾಗುವ ರೋಗಗಳು ಮತ್ತು ಪ್ರತಿಕ್ರಿಯೆಗಳು:—

೧ನೇ ಮೈನೋವಿಗೆ—ಈ ನೋವು ಪ್ರವರ್ತಿ ಕಟ್ಟಿ ಹುಟ್ಟಿ ಇದ್ದರೆ ಪ್ರವರ್ತಿಯನ್ನು ಮಾಡಿಸಬೇಕು. ಪ್ರವರ್ತಿ ಕಟ್ಟದೆ ಮೈನೋವಿದ್ದರೆ ಬೆವರು ಹುಟ್ಟಿಸುವಂತೆ ತೈಲಲೇಪನಂ ಮಾಡಿಸಿ ಹಿತವಾಗುವಂತೆ ಬಿಸಿನೀರಿನಲ್ಲಿ ಸ್ನಾನವಂ ಮಾಡಿಸಬೇಕು.

೨ನೇ ಮೂತ್ರದಲ್ಲಿ ಕಲ್ಲುಕಟ್ಟುವದಕ್ಕೆ—ಮೂತ್ರವು ಸರಿಯಾಗಿ ಆಗುವ ಔಷಧಗಳನ್ನು ಕೊಡಿಸಬೇಕು. ಮತ್ತು ಅಶ್ಮರೀರೋಗದ ಪ್ರತಿಕ್ರಿಯೆಯನ್ನು ಮಾಡಿಸಬೇಕು.

೩ನೇ ವಸ್ತಿನೋವಿಗೆ—ನೀರಿನ ಪದಾರ್ಥದಿಂದ ವಸ್ತಿಶೋಧನೆಯಂ ಮಾಡಿಸಬೇಕು.

೪ನೇ ಪ್ರಧಾನನೋವಿಗೆ—ಅಶ್ಮರೀರೋಗದ ಪ್ರತಿಕ್ರಿಯೆಯಂ ಮಾಡಿಸಬೇಕು.

೫ನೇ ತೊಡೆಸಂದುನೋವಿಗೆ—ಅಶ್ಮರೀರೋಗದ ಪ್ರತಿಕ್ರಿಯೆಯನ್ನೇ ಮಾಡಿಸಬೇಕು.

೨. ಮಲವೇಗಕ್ಕೆ ಪ್ರತಿಕ್ರಿಯೆಗಳು.—ಪ್ರವರ್ತಿಯನ್ನು ಮಾಡಿಸಿ ಪ್ರವರ್ತಿಕಾರಿ ಔಷಧಗಳನ್ನು ಮತ್ತು ಅಹಾರಗಳಗನ್ನು ಸಹ ಕೊಡಿಸಿ ಅಭ್ಯಂಗಸ್ನಾನ, ಸ್ವೇದಕರ್ಮ, ವಸ್ತಿಕರ್ಮಗಳನ್ನು ಮಾಡಿಸಬೇಕು. ಇದರಿಂದ ಉಂಟಾಗುವ ರೋಗಗಳು ಮತ್ತು ಪ್ರತಿಕ್ರಿಯೆಗಳು :—

೧ನೇ ಗುಲ್ಮಕ್ಕೆ—ಶೋಧನೆ, ಜವರು, ಅಗ್ನಿಸಮವಾಗುವಂತೆಮಾಡಿಸಬೇಕು.

೨ನೇ ಉದಾವರ್ತಕ್ಕೆ—ವಾತನಿಗ್ರಹಕಾರಿ ಔಷಧವನ್ನು ಕೊಡಬೇಕು.

೩ನೇ ಕೋಷ್ಠಶೂಲೆಗೆ—ಜಿಡ್ಡಿನಪದಾರ್ಥಗಳಿಂದ ನರಗಳನ್ನು ಮೃದುವಾಗುವಂತೆ ತಿಕ್ಕಿಸಬೇಕು.

೪ನೇ ಬಳಲಿಕೆಗೆ—ಸೀತದಿಂದಹುಟ್ಟಿದ್ದಕ್ಕೆ ಕೆಟ್ಟರಕ್ತವು ಹೋಗುವಂತೆಯೂ ಉಷ್ಣದಿಂದ ಹುಟ್ಟಿದ್ದಕ್ಕೆ ರಕ್ತವೃದ್ಧಿಯಾಗುವಂತೆಯೂ ರೋಗ ಪ್ರತಿಕ್ರಿಯೆಗಳನ್ನು ಮಾಡಿಸಬೇಕು.

೫ನೇ ವಾತಸಂಗದಲ್ಲಿ—ಊರ್ಧ್ವವಾತಕ್ಕೆ ಅಧೋಮುಖವಾಗುವಂತೆಯೂ ಅಧೋವಾತವು ಊರ್ಧ್ವಮುಖವಾಗುವಂತೆ ಔಷಧೀ ಕೊಡಬೇಕು.

೬ನೇ ಮೂತ್ರಸಂಗದಲ್ಲಿ—ಮೂತ್ರವೇಗದ ಪ್ರತಿಕ್ರಿಯೆಗಳನ್ನೇಮಾಡಿಸಬೇಕು.

೭ನೇ ಶಕೃತ್ಸಂಗದಲ್ಲಿ—ಮಲಮೂತ್ರಗಳು ಸರಿಯಾಗಿ ಆಗುವಂತೆ ಮಾಡಿಸಬೇಕು.

೮ನೇ ದೃಷ್ಟಿನಾಶಕ್ಕೆ—ವಾತಹರ ತೈಲದಲ್ಲಿ ಶಾಂತವಾದ ಪದಾರ್ಥಗಳನ್ನು ಸೇರಿಸಿ ರಾತ್ರಿ ಮಲಗುವಕಾಲದಲ್ಲಿ ಸ್ವಲ್ಪ ಸೇವನೆ ಮಾಡಿಸುವದಲ್ಲದೆ ಪ್ರಾತಃಕಾಲದಲ್ಲಿ ಮೂತ್ರವು ಸರಿಯಾಗಿ ಆಗುವಂತೆ ಔಷಧೀ ಕೊಡಬೇಕು.

೯ನೇ ಅಗ್ನಿಮಾಂದ್ಯಕ್ಕೆ—ಬಾಯಿಯಲ್ಲಿ ದ್ರವವಿದ್ದರೆ ಯೋಗ್ಯತಾನುಸಾರವಾಗಿ ಶೋಧನೆ ಮಾಡಿಸಬೇಕು.

೧೦ನೇ ಹೃದ್ರೋಗಕ್ಕೆ—ವಿಷಮಾಗ್ನಿ ಹರವಾಗುವಂತೆ ಔಷಧೀಕೊಟ್ಟುಅಗ್ನಿ ಸಮವಾಗುವಂತೆ ಮಾಡಿಸಬೇಕು.

೧೧ನೇ ಪಿಂಡಿಕೋದ್ವೇಷ್ಟಕ್ಕೆ—ಶೋಧನೆ ಮಾಡಿಸಬೇಕು.

೧೨ನೇ ನೆಗಡಿಗೆ—ನೀರಿನ ಪ್ರತಿಕ್ರಿಯೆಗಳನ್ನೇ ಮಾಡಿಸಬೇಕು.

೧೩ನೇ ಶಿರೋರೋಗಕ್ಕೆ—ಶಿರಸ್ಸಿಗೆ ಯಳೆಬೇವಿನ ಸೊಪ್ಪು ರಾತ್ರಿಕಾಲದಲ್ಲಿ ಕಟ್ಟಿಸಬೇಕು. ಪ್ರವರ್ತಿ ಆಗುತ್ತಿದ್ದರೆ ಶೀತೋಷ್ಣಗಳನ್ನು ತಿಳಿದು ಶಿರಸ್ಸಿನ ಚಿಕಿತ್ಸೆಯನ್ನು ಮಾಡಿಸಬೇಕು.

೧೪ನೇ ಮಲಮೂತ್ರಗಳು ಎರಡೂ ಕಟ್ಟಿದ್ದರೆ—ಪ್ರಾತಃಕಾಲದಲ್ಲಿ ರಾತ್ರೆಯ ತಂಗಳನ್ನಕ್ಕೆ ತುಪ್ಪವನ್ನು ಹಾಕಿ ತೆಗದುಕೊಳ್ಳುವದಲ್ಲದೇ ಅದಿನ ರಾತ್ರಿಯಲ್ಲಿ ಅರ್ಧಅನ್ನ ಜೀರ್ಣವಾದನಂತರ ಎರಡಾವರ್ತಿ ಶೋಧನೆಯಾಗುವಂತೆ ಎರಡು ಮಾತ್ರೆಗಳನ್ನು ಕೊಡಬೇಕು.

೧೫ನೇ ಮುಖವಿಟ್ಪ್ರವರ್ತಿಗೆ—ವಾಯುಭೂತರಸದಿಂದ ಪಕ್ವವಾದ ಕೈಯಂಣೆಯ ಅನುಪಾನದಿಂದ ಅಧೋಮುಖವಾಗುವಂತೆ ಔಷಧಿ ಕೊಡಬೇಕು.

೩. ಅಧೋವಾತವೇಗಕ್ಕೆ ಪ್ರತಿಕ್ರಿಯೆಗಳು.—ಸ್ನೇಹಪಾನ, ಸ್ವೇದನ, ವಸ್ತಿಕರ್ಮ, ಊರ್ಧ್ವಮುಖವಾಗುವಂತೆ ವಾಯುಪರಿಹಾರಕ ಆಹಾರಗಳನ್ನು ಕೊಡಿಸಬೇಕು. ಮಲಮೂತ್ರಗಳು ಆಗುವಂತೆ ಮಾಡಿಸಬೇಕು. ಅಂಗಮರ್ದನವಂ ಮಾಡಿಸಬೇಕು. ಅಭ್ಯಂಜನ, ನಿದ್ರೆಬರುವ ಉಪಾಯಗಳಂ ಮಾಡಬೇಕು. ಪ್ರಕೋಪಕಾಲದಲ್ಲಿ ಲಂಘನ ಮತ್ತು ಪಾಚನಗಳಂಮಾಡಿಸಬೇಕು. ಪುನಃ ಅಪಥ್ಯವಂ ಮಾಡಿದರೆ ಪೂರ್ವದಂತೆ ತಿರಿಗಿ ರೋಗವು ಹುಟ್ಟುವದು. ಅಧೋವಾತಜನ್ಯ ರೋಗಗಳು ಮಲವೇಗಜಾಯಮಾನ ರೋಗಗಳೇ ಆಗಿರುವದ್ದರಿಂದ ಮಲವೇಗದ ಪ್ರತಿಕ್ರಿಯೆಗಳನ್ನೇ ಮಾಡಿಸಬೇಕು.

೪. ಸೀನಿನ ವೇಗಕ್ಕೆ ಪ್ರತಿಕ್ರಿಯೆಗಳು.—ಹೊಗೆ ಕೊಡಬೇಕು, ಅಂಜನ, ಬಿಸಲಿನಲ್ಲಿ ಅಂಗತಂಗನಾಗಿ ಕಂಣು ಮುಚ್ಚಿಕೊಂಡು ಮಲಗಬೇಕು. ಕಬ್ಬಿನರಸ ಹಾಕಿದ್ದ ಬತ್ತಿ ಮೂಗಿನಲ್ಲಿಡಬೇಕು. ಜಿಡ್ಡಿನ ಪದಾರ್ಥಗಳಿಂದ ಜೆವರು ಹುಟ್ಟಿಸಬೇಕು. ಸೀನು ಸರಿಯಾಗಿ ಆಗುವಂತೆ ಮಾಡಿಸಬೇಕು. ಅಭ್ಯಂಜನ ಮಾಡಿಸಬೇಕು. ಇದರಿಂದ ಉಂಟಾಗುವ ರೋಗಗಳಿಗೆ ಪ್ರತಿಕ್ರಿಯೆಗಳು :—

೧ನೇ ಶಿರೋರೋಗಕ್ಕೆ.—ಮಲವೇಗದಲ್ಲಿ ಹೇಳಿರುವಂತೆ ಮಾಡಿಸಬೇಕು.

೨ನೇ ದರ್ಶೇಂದ್ರಿಯಬಲವು ಕಡಮೆಯಾಗಿದ್ದರೆ—ಅಗ್ನಿ ಸಮವಾಗುವಂತೆಯೂ, ವಾಯುನಿಗ್ರಹವಾಗುವಂತೆಯೂ ಮಾಡಿಸಬೇಕು.

೩ನೇ ಮನ್ಯಾಸ್ತಂಭಕ್ಕೆ—ಸೀನುಬರುವ ಉಪಾಯಗಳನ್ನು ಮಾಡಿಸಬೇಕು.

೫. ಶುಕ್ಲವೇಗಕ್ಕೆ ಪ್ರತಿಕ್ರಿಯೆಗಳು.—ಕ್ಷಾರಪದಾರ್ಥಗಳಿಂದ ಕೂಡಿದ ತೈಲಾಭ್ಯಂಗವನ್ನು ಮಾಡಿಸಿ ತಾಮ್ರಚೂಡವನ್ನು ತದ್ಭಕ್ಷಕರಿಗೆ ಕೊಡಿಸಬೇಕು. ಅಗ್ನಿಸಮವನ್ನು ಮಾಡುತ್ತಾ ರಕ್ತವೃದ್ಧಿ ಪದಾರ್ಥ ಸೇವನೆಯಿಂದ ಬಲವೃದ್ಧಿಯಾಗುವಂತೆ ಮಾಡಿಸಬೇಕು. ಬತ್ತಿಯನ್ನುಹಾಕಿ ಸುರಾ, ಶಾಲಿ, ತುಪ್ಪದಿಂದ ಊಟ, ಸ್ವಸ್ತ್ರೀಯಲ್ಲಿ ರಮಣ, ಸೀತದಿಂದ ಧಾತುನಷ್ಟವಾಗಿದ್ದರೆ ಶೋಧನೌಷಧಿಗಳನ್ನುಕೊಡುತ್ತಿರಬೇಕು. ಇದರಿಂದ ಹುಟ್ಟುವ ರೋಗಗಳಿಗೆ ಪ್ರತಿಕ್ರಿಯೆಗಳು :—

೧ನೇ ಮೂತ್ರಸಂಗ, ೨ನೇ ವೃಷಣನೋವು, ಈ ಎರಡಕ್ಕೆ ಮೂತ್ರವೇಗದಲ್ಲೂ, ೩ನೇ ಹೃದ್ರೋಗಕ್ಕೆ ಮಲವೇಗದಲ್ಲೂ ಹೇಳಿರುತ್ತೆ.

೪. ಜ್ವರಕ್ಕೆ—ಅರ್ಧಭಾಗದಲ್ಲಿ ಯೋಗ್ಯತಾನುಸಾರ ಲಂಘನೆಯನ್ನುಮಾಡಿಸಿ, ಎರಡನೇ ಭಾಗದಲ್ಲಿ ಶಾಸ್ತ್ರೀಯವಾದ ಗಂಜೀಯನ್ನು ಕುಡಿಸಿ, ಮೂರನೇ ಭಾಗದಲ್ಲಿ ಅಂತರ್ವೇಗ ಜ್ವರವಾಗಿದ್ದರೆ ಸೀತಪರಿಹಾರವಾಗುವ ಉಪಾಯವನ್ನು ಮಾಡಿಸಬೇಕು. ನಾಲ್ಕನೇ ಭಾಗದಲ್ಲಿ ಪ್ರವರ್ತಿಯಂ ಮಾಡಿಸಬೇಕು.

೫. ಶೋಭೆಗೆ—ಮಲ ಮೂತ್ರ ಆಗುವಂತೆ ಮಾಡಿಸಬೇಕು.

೬. ಶುಕ್ಲಸ್ರಾವಕ್ಕೆ—ಶುಕ್ಲವೇಗದಲ್ಲಿ ಹೇಳಿರುವ ಪ್ರತಿಕ್ರಿಯೆಗಳನ್ನು ಮಾಡಬೇಕು.

೭. ಆಸನ ನೋವಿಗೆ—ವಗರು ಪದಾರ್ಥಗಳಿಂದ ಭಾವಿತವಾದ ಏರಂಡತೈಲವನ್ನು ಆಸನದ್ವಾರಕ್ಕೆ ಹಚ್ಚಿಸಬೇಕು. ರಾತ್ರಿ ಮಧುಮಿಶ್ರವಾದ ಏರಂಡತೈಲವನ್ನು ಸ್ವಲ್ಪ ಕೊಡಬೇಕು.

೮. ನಪುಂಸಕತ್ವಕ್ಕೆ—ಹಿಮಂತಋತುವಿನ ಅರುಣೋದಯಕಾಲದಲ್ಲಿ ತಂಣೀರಿನಲ್ಲಿ ಮುಳಗಿಸಿ ಎದ್ದಮೇಲೆ ನಿರ್ವಾಣದಲ್ಲಿ ನಿಲ್ಲಿಸಿ ನೋಡಿದರೆ ಪ್ರಧಾನವು ಅಂಡವು ಸಹ ಮೇಲೆ ಸೇದಿಕೊಂಡಿದ್ದರೆ ವೀರ್ಯವೃದ್ಧಿಯಾಗುವ ಔಷಧೀ ಕೊಡಬೇಕು. ಇಲ್ಲವಾದರೆ ಕೊಡಕೂಡದು.

೬. ಜೃಂಭಾ ವೇಗಕ್ಕೆ ಪ್ರತಿ ಕ್ರಿಯೆಗಳು.—ವಾಯುಪರಿಹಾರವಾಗುವ ರೀತಿಮಾಡತಕ್ಕದ್ದು. ಸ್ನೇಹಪಾನ, ಸ್ವೇದನ, ಮದ್ಯಪಾನಗಳನ್ನು

ಮಾಡಿಸಿ ಪ್ರಿಯೋಕ್ತಿಗಳನ್ನಾಡಿಸಬೇಕು. ಈ ವೇಗದಿಂದುಂಟಾಗುವ ರೋಗಗಳಿಗೆ ಪ್ರತಿಕ್ರಿಯೆಗಳು :—

೧ನೇ ಶಿರೋರೋಗಕ್ಕೆ ಮಲವೇಗದಲ್ಲೂ, ೨ನೇ ಇಂದ್ರಿಯದೌರ್ಬಲ್ಯ, ೩ನೇ ಮನ್ಯಾಸ್ತಂಭಕ್ಕೆ ಸಹ ಸೀನಿನ ವೇಗದಲ್ಲೂ ಹೇಳಿರುವ ಪ್ರತಿ ಕ್ರಿಯೆಗಳನ್ನೇ ಮಾಡಿಸಬೇಕು.

೭. ನಿದ್ರಾವೇಗಕ್ಕೆ ಪ್ರತಿಕ್ರಿಯೆಗಳು.—ಅಂಗ ಮರ್ದನೆಮಾಡಿ ನಿದ್ರಾಕಾರಿ ಪದಾರ್ಥಗಳಂ ಕೊಡಿಸಿ ವಾಹನಾದಿಗಳ ಮೇಲೆ ಕೂಡಿಸಿ ಸಂಚಾರವಂ ಮಾಡಿಸಬೇಕು. ವಿಶ್ರಾಂತಿ ಕೊಡಿಸಬೇಕು. ಉಷ್ಣ ಗುರು ಪದಾರ್ಥಗಳಿಂದ ಭೋಜನವಂ ಮಾಡಿಸಬೇಕು. ಮಲಗಿದ ಕಾಲದಲ್ಲಿ ಕಾಲುಮೇಲೆ ತಟ್ಟಿಸಬೇಕು. ಪ್ರಿಯೋಕ್ತಿಗಳನ್ನಾಡಬೇಕು. ಇದರಿಂದ ಉಂಟಾಗತಕ್ಕ ರೋಗಗಳು ಮತ್ತು ಪ್ರತಿಕ್ರಿಯೆಗಳು :—

೧ನೇ ದೃಷ್ಟಿಮಂದ, ೨ನೇ ಅಗ್ನಿ ಮಂದ, ೩ನೇ ಬಳಲಿಕೆ, ೪ನೇ ಶಿರೋರೋಗ, ಈ ನಾಲ್ಕು ರೋಗಗಳಿಗೂ ಮಲವೇಗದ ಚಿಕಿತ್ಸೆಗಳನ್ನೇ ಮಾಡಿಸಬೇಕು.

೫ನೇ ಅಜ್ಞಾನಕ್ಕೆ—ನಿದ್ರೆಯಂ ಮಾಡಿಸಬೇಕು.

೬ನೇ ಬುದ್ಧಿವಿಕಾರಕ್ಕೆ—ಶೋಧನದಿಂದ ಪಿತ್ತಶಮನವಂ ಮಾಡಿಸಬೇಕು.

೭ನೇ ಆಗುಳಿಕೆಗೆ—ಜೃಂಭಾವೇಗದ ಚಿಕಿತ್ಸೆಯನ್ನೇ ಮಾಡಿಸಬೇಕು.

೮ನೇ ಜಡತ್ವಕ್ಕೆ—ಶೋಧನವಂ ಮಾಡಿಸಿ ಜೀರ್ಣವಾಗುವಷ್ಟೇ ಆಹಾರಗಳಂಕೊಡುತ್ತಾ ಹಗಲು ನಿದ್ರೆ ಮಾಡಿಸಬೇಕು.

೯ನೇ ತೂಕಡಿಕೆಗೆ—ನಿದ್ರೆಯಂ ಮಾಡಿಸಬೇಕು.

೮. ಉದ್ಗಾರವೇಗಕ್ಕೆ ಪ್ರತಿಕ್ರಿಯೆಗಳು.—ಸ್ನಿಗ್ಧವಾದ ಪದಾರ್ಥದ ಹೊಗೆಯಂ ಕೊಡಿಸಬೇಕು. ವಾಂತಿ, ಲಂಘನ, ಅಭ್ಯಂಗ, ವಸ್ತಿಶೋಧನೆ, ವಾಯುನಿಗ್ರಹೋಪಾಯ, ನಿದ್ರೆಬರುವ ಉಪಾಯ, ಸಂಚಾರವನ್ನು ಸಹ ಮಾಡಿಸಬೇಕು. ಒಳ್ಳೇ ಮಾತುಗಳಂ ಪ್ರಯೋಗಿಸಬೇಕು. ವಾತಹರಘೃತವಂ ಶಿರಸ್ಸಿಗೆ ಹತ್ತಿಸಬೇಕು. ಇದರಿಂದ ಉಂಟಾಗುವ ರೋಗಗಳು, ತತ್ಪ್ರತಿಕ್ರಿಯೆಗಳು :—

೧ನೇ ಹೃದ್ರೋಗ, ೨ನೇ ನೆಗಡಿಗೆ ಸಹ ಮಲವೇಗದಲ್ಲಿ ಹೇಳಿರುತ್ತೆ.

೩ನೇ ಅರುಚಿಗೆ—ಮೊದಲು ಶೋಧನೆ ಮಾಡಬೇಕು. ಅನಂತರ ಒಂದು ಪಕ್ಕಾ ಪಾವು ಅನ್ನ ತಿನ್ನುವವನಿಗೆ ಆರುರೂಪಾಯಿ ತೂಕ ಅನ್ನದಿಂದ ಜೀರ್ಣಿಸಿ ಶಕ್ತಿ ಹೆಚ್ಚುತ್ತಾ ಬಂದ ಬಂದ ಹಾಗೆ ಹೆಚ್ಚುಮಾಡುತ್ತಾ ಶುಷ್ಕಪದಾರ್ಥಗಳನ್ನು ತಿನ್ನಿಸಬೇಕು. ಮತ್ತು ಊಟದಕಾಲದಲ್ಲಿ ಸೀತೋ

ಷ್ಣ ರೋಗಗಳ ವಿಚಾರವನ್ನು ತಿಳಿದು ಯಥೋಚಿತವಾಗಿ ನೀರನ್ನು ಕುಡಿಸಬೇಕು.

೪ನೇ ನಡುಕಕ್ಕೆ—ಬೆವರುಬರುವ ಉಪಾಯವನ್ನು ಮಾಡಬೇಕು. ಮತ್ತು ಉದ್ಗಾರಕ್ಕೆ ಮಾಡುವ ಉಪಾಯವನ್ನು ಮಾಡಬೇಕು.

೫ನೇ ಕೆಮ್ಮಿಗೆ—ಮಗರುಪದಾರ್ಥಗಳಿಂದ ವಮನಪ್ರವರ್ತಿಗಳನ್ನು, ಅಗ್ನಿಸಮವನ್ನು ಸಹ ಮಾಡಿಸಬೇಕು. ಮತ್ತು ಮಗರುಪದಾರ್ಥಗಳಿಂದ ಮಾಡಿದ ವಟಕಗಳನ್ನು ಬಾಯಿಯಲ್ಲಿಡಿಸಬೇಕು.

೬ನೇ ಬಿಕ್ಕಿಗೆ—ಕೆಮ್ಮಿಗೆ ಮಾಡುವ ಉಪಾಯವನ್ನೇ ಮಾಡಬೇಕು.

೯. ಶ್ವಾಸವೇಗಕ್ಕೆ ಪ್ರತಿಕ್ರಿಯೆಗಳು.—ಗಂಡೂಷ, ಧೂಮಪಾನ, ರೂಕ್ಷಾಹಾರ, ಸಂಚಾರ, ಪ್ರವರ್ತಿಗಳಂ ಮಾಡಿಸಿ ಲವಣಾದಿಮಿಶ್ರ ತೈಲಾಭ್ಯಂಗ ವಾತಹರಕ್ರಿಯೆಗಳಂ ಮಾಡಿಸಬೇಕು. ಇದರಿಂದ ಉಂಟಾಗುವ ೧ನೇ ಗುಲ್ಮ, ೨ನೆ ಹೃದ್ರೋಗಗಳಿಗೆ ಮಲವೇಗದಲ್ಲಿ ಹೇಳಿರುವ ಪ್ರತಿ ಕ್ರಿಯೆಗಳನ್ನೇ ಮಾಡಿಸಬೇಕು. ೩ನೇ ಅಜ್ಞಾನಕ್ಕೆ ನಿದ್ರಾವೇಗದ ಪ್ರತಿಕ್ರಿಯೆಯನ್ನು ಮಾಡಬೇಕು.

೧೦. ಛರ್ದಿವೇಗಕ್ಕೆ ಪ್ರತಿಕ್ರಿಯೆಗಳು.—ನಸ್ಯವು, ರಕ್ತತೆಗೆಯುವದು. ಸ್ನೇಹಪದಾರ್ಥದಿಂದ ನಿಗ್ರಹ, ಲಂಘನಗಳಂ ಮಾಡಿಸಬೇಕು. ಇದರಿಂದ ಹುಟ್ಟುವ ರೋಗಗಳಿಗೆ ಪ್ರತಿಕ್ರಿಯೆಗಳು :—

೧ನೇ ದೃಷ್ಟಿಮಂದಕ್ಕೆ—ಮಲವೇಗದಲ್ಲಿ ಹೇಳಿದೆ.

೨ನೇ ಕೆಮ್ಮಿಗೆ—ಉದ್ಗಾರದಲ್ಲಿ ಹೇಳಿದೆ.

೩ನೇ ಕಾಸಕ್ಕೆ—ಶ್ವಾಸಕ್ಕೆ ಮಾಡುವ ಔಷಧವನ್ನು ಉದ್ಗಾರವೇಗದಲ್ಲಿ ಹೇಳಿರುವ ರೀತಿ ಮಾಡಬೇಕು.

೪ನೇ ವಿಸರ್ಪಕ್ಕೆ—ಜಿಡ್ಡಿನಪದಾರ್ಥ ಹಚ್ಚಿಸಿದ ದಿನವೇ ಬೆವರು ಹುಟ್ಟುವ ಕ್ರಿಯೆಗಳಂ ಮಾಡಬೇಕು.

೫ನೇ ಕೋಷ್ಠಕ್ಕೆ, ೬ ನೇ ಕುಷ್ಠಕ್ಕೆ ಸಹ ಸಪ್ತಧಾತುಗಳಲ್ಲಿ ವೈಷಮ್ಯ ಇಲ್ಲದಂತೆ ಶೋಧನೆ ಮಾಡಿಸಬೇಕು. ಆಹಾರಗಳಿಂದ ಕ್ರಿಮಿ ಅಧಿಕವಾಗದಂತೆ ಪದಾರ್ಥಗಳಂ ಕೊಡಿಸಬೇಕು. ಶುದ್ಧ ಖೈರಸದ ಸೇವನೆ, ಮಗರು ಖಾರ ರಸಗಳು ಕೂಡಿದ್ದರಿಂದ ಲೇಪನ, ಜೇನುತುಪ್ಪವನ್ನು ಸ್ವಲ್ಪ ತೆಗೆದುಕೊಳ್ಳಬೇಕು.

೭ನೇ ಕಂಡುವಿಗೆ—ಚರ್ಮದಲ್ಲಿರುವ ದೋಷಕ್ಕೆ ಲೇಪದಿಂದ ಸ್ನಾನವಂ ಮಾಡಿಸಬೇಕು. ಮತ್ತು ರೇತಸ್ಸು ಶುದ್ಧಿಯಾಗುವಂತೆ ಮಾಡಬೇಕು.

೮ನೇ ಪಾಂಡುವಿಗೆ—ಶ್ರೈಯೂದ ಔಷಧಿಯಿಂದ ಅಗ್ನಿಸಮ, ಶೋಧನೆ, ನಿದ್ರೆಗಳು ಮಾಡಿಸಬೇಕು.

೯ನೇ ಜ್ವರಕ್ಕೆ—ಶುಕ್ಲವೇಗದಲ್ಲಿ ಹೇಳಿದೆ.

೧೦ನೇ ಹೃಲ್ಲಾಸಕ್ಕೆ—ಧಾತುವೈಷಮ್ಯವಂ ತಪ್ಪಿಸಿ ರಕ್ತವೃದ್ಧಿಯಾಗುವ ಪದಾರ್ಥವಂ ಕೊಡಬೇಕು.

೧೧ನೇ ಬಂಗಿಗೆ—ವಾಯುಘೂತ ತೈಲದಿಂದ ಲೇಪನವಂ ಮಾಡಿಸಬೇಕು.

೧೨ನೇ ಶೋಭೆಗೆ—ಶುಕ್ಲ ವೇಗದಲ್ಲಿ ಹೇಳಿದೆ.

೧೧. ಕಾಸಕ್ಕೆ.—ಶುಕ್ಲವೇಗದಲ್ಲಿ ಹೇಳಿರುವ ಪ್ರತಿಕ್ರಿಯೆಯುಂ ಮಾಡಿ ಕೆಮ್ಮಿಗೆ ಕೊಡುವ ಔಷಧೀ ಕೊಡಬೇಕು. ಇದರಿಂದ ಉಂಟಾಗುವ ರೋಗಗಳು:—

೧ನೇ ಹೃದ್ರೋಗಕ್ಕೆ—ಮಲವೇಗದಲ್ಲಿ ಹೇಳಿದೆ.

೨ನೇ ಕೆಮ್ಮು, ೩ನೇ ಅರುಚಿ, ೪ನೇ ಬಿಕ್ಕಿಗೆ ಸಹ ಉದ್ಗಾರವೇಗದಲ್ಲಿ ಹೇಳಿದೆ.

೫ನೇ ನೀರಡಿಕೆಗೆ—ಕಾಸಕ್ಕೆ ಕೊಡುವ ಔಷಧವನ್ನು ಕೊಡಬೇಕು.

೬ನೇ ಶ್ವಾಸಕ್ಕೆ—ಕಾಸವೇಗದಲ್ಲಿ ಹೇಳಿದೆ.

೧೨. ರಕ್ತವೇಗಕ್ಕೆ ಪ್ರತಿ ಕ್ರಿಯೆಗಳು.—ವಾತಹರೋಪಚಾರವಂ ಮಾಡಿಕಣ್ಣಿನಲ್ಲಿ ನೀರು ಬರಿಸಬೇಕು. ನಿದ್ರೆಬರತಕ್ಕ ಉಪಾಯ, ಒಳ್ಳೇಮಾತು ಉಪಯೋಗಿಸಬೇಕು. ನಾಮ್ಯ ನಸ್ಯವಂ ಹಾಕಿಸಬೇಕು. ಬೆವರು ಹುಟ್ಟಿಸಬೇಕು. ವ್ಯಾಯಾಮ, ಪ್ರವರ್ತಿ ಸಹ ಮಾಡಿಸಬೇಕು. ಇದರಿಂದ ಹುಟ್ಟುವ ರೋಗಗಳು :—

೧ನೇ ಗುಲ್ಮ, ೨ನೇ ಹೃದ್ರೋಗ, ೩ನೇ ದೃಷ್ಟಿಮಂದ, ೪ನೇ ಶಿರೋರೋಗಗಳಿಗೆ ಮಲವೇಗದ ಪ್ರತಿಕ್ರಿಯೆಗಳನ್ನು ಮಾಡಬೇಕು.

೫ನೇ ಅರುಚಿಗೆ—ಉದ್ಗಾರವೇಗದ ಪ್ರತಿಕ್ರಿಯೆಯುಂ ಮಾಡಬೇಕು.

೬ನೇ ಮನ್ಯಾಸ್ತಂಭಕ್ಕೆ—ಸೀನಿನವೇಗದ ಪ್ರತೀಕಾರವೇ.

೭ನೇ ಬುದ್ಧಿವಿಕಾರಕ್ಕೆ—ನಿದ್ರಾವೇಗದ ಪ್ರತಿಕ್ರಿಯೆಯೇ.

೮ನೇ ಪೀನಸಕ್ಕೆ—ವಸ್ತ್ರಾಣದಿಂದ ಮಾಡಿದ ಧಾರವನ್ನು ಮೂಗಿನಲ್ಲಿ ಹಾಕಿ ಬಾಯಿಯಿಂದ ತೆಗದುಕೊಂಡು ಒಂದುಕೈಯಿಂದ ಮೂಗಿನಕಡೆ ಧಾರವನ್ನು, ಒಂದು ಕೈಯಿಂದ ಬಾಯಿನಕಡೆ ಧಾರವನ್ನು ಸಹ ಹಿಡದುಕೊಂಡು ಸ್ವಲ್ಪ ಹೊತ್ತು ಮಥಿಸಬೇಕು. ಮತ್ತು ಬೇವಿನಯಣ್ಣೆಯಿಂದ ಅದ್ದಿದ ಬತ್ತಿಯನ್ನು ರಾತ್ರಿಕಾಲದಲ್ಲಿ ಮೂಗಿನಲ್ಲಿಡಬೇಕು.

೧೩. ತೃಷ್ಣಾವೇಗಕ್ಕೆ—ಸೀತೋಪಚಾರವಂ ಮಾಡಬೇಕು. ಈ ವೇಗ ನಿರೋಧದಿಂದ ಉಂಟಾಗುವ ರೋಗಗಳು:—

೧ನೇ ಹೃದ್ರೋಗಕ್ಕೆ—ಮಲವೇಗದಲ್ಲಿ ಹೇಳಿದೆ.

೨ನೇ ಮುಖ ಮಣಗುವದಕ್ಕೆ—ಕಾಸವೇಗದಲ್ಲಿ ಹೇಳಿದೆ.

೩ನೇ ದೇಹಕಾರ್ಶ್ಯಕ್ಕೆ—ಮಸ್ತಕಕ್ಕೆ ಲೇಪಾದಿಗಳನ್ನು ಮಾಡಿಸಬೇಕು.

೪ನೇ ಕಿವುಡಿಗೆ—ಕಾಲಪ್ರವರ್ತಿ ಸರಿಯಾಗಿ ಆಗುವಂತೆ ಮಾಡಿಸಬೇಕು. ಮತ್ತು ಔಷಧೀ ಮಿಶ್ರವಾದ ಧಾರವನ್ನು ಮೂಗಿನಲ್ಲಿ ಹಾಕಬೇಕು. ಕಿವಿಗೂ ಔಷಧೀ ಹಾಕಬೇಕು.

೫ನೇ ಅಜ್ಞಾನಕ್ಕೆ—ನಿದ್ರಾ ಪ್ರತಿಕ್ರಿಯೆಯಂ ಮಾಡಬೇಕು.

೬ನೇ ಬುದ್ಧಿವಿಕಾರಕ್ಕೂ—ನಿದ್ರಾಪ್ರತೀಕಾರವೇ.

೧೪. ಕ್ಷುದ್ವೇಗಕ್ಕೆ ಪ್ರತಿಕ್ರಿಯೆಗಳು.—ಸ್ನಿಗ್ಧ, ಉಷ್ಣ, ಲಘು, ರುಚಿಕರ, ಮಿತಭೋಜನವಂ ಮಾಡಿಸಿ ಪುಷ್ಪವಾಸನೆಗಳಂ ಕೊಡಿಸಬೇಕು. ಹಸಿವೆಯಿಂದುಂಟಾಗುವ ರೋಗಗಳಿಗೆ ಪ್ರತಿಕ್ರಿಯೆಗಳು:—

೧ನೇ ಬಳಲಿಕೆಗೆ—ಮಲವೇಗದ ಪ್ರತೀಕಾರವೇ.

೨ನೇ ಮೈನೋವಿಗೆ—ಶುಕ್ಲವೇಗದ ಪ್ರತಿಕ್ರಿಯೆಯೇ.

೩ನೇ ಅರುಚಿಗೆ—ಉದ್ಗಾರವೇಗದಲ್ಲಿ ಹೇಳಿರುವಂತೆಯೇ ಮಾಡಬೇಕು.

೪ನೇ ಬುದ್ಧಿವಿಕಾರಕ್ಕೆ—ನಿದ್ರಾವೇಗದಲ್ಲಿ ಹೇಳಿರುವ ಪ್ರತಿಕ್ರಿಯೆಯೇ.

೫ನೇ ಪಾರ್ಶ್ವಶೂಲೆಗೆ—ಶೋಧನ ಮತ್ತು ಶಮನೌಷಧಿಗಳನ್ನು ಕೊಡುತ್ತಾ ಇರಬೇಕು.

ಒಬ್ಬ ಮನುಷ್ಯನ ರೋಗವನ್ನು ನಿಶ್ಚಯಿಸಬೇಕಾದರೆ ಪ್ರಾತಃಕಾಲದಲ್ಲಿ ಅಷ್ಟಸ್ಥಾನ ಪರಿಕ್ಷೆಯಂ ಮಾಡಬೇಕು. ಇದಕ್ಕೆ ನಾಡಿಯೇ ಮುಖ್ಯವೆಂತಲೂ, ಉಳಿದ ಏಳು ಸ್ಥಾನಗಳು ಈನಾಡಿಯ ಅಂಗಗಳೆಂತಲೂ ತಿಳಿಯಬೇಕು. ಅಲ್ಲದೆ ಪ್ರಕೃತಿಯಂ, ಷಡೃತುಗಳಂ ಮತ್ತು ನಾಡಿಯನ್ನು ಸಹ ತಿಳಿಯಬೇಕು.

ಇಂಥಾ ನಾಡಿಗೆ ಸಹಾಯವಾದ ಏಳು ಸ್ಥಾನಪರೀಕ್ಷೆಯ ಕ್ರಮ.

೧. ಮೂತ್ರದಿಂದ ತಿಳಿಯುವ ಲಕ್ಷಣ.—ಮೂತ್ರಧಾರೆ ಕೆಂಪಾಗಿ ಬಂದರೆ ಪಿತ್ತರೋಗ, ಹಳದಿರಂಗಾಗಿ ಬಂದರೆ ಹಳೇಜ್ವರ, ಬಿಳಪುರಂಗಾದರೆ ಶ್ಲೇಷ್ಮರೋಗ, ಕಪ್ಪುಛಾಯೆ ಕಂಡರೆ ವಾತರೋಗ, ಮತ್ತು ಮಿಶ್ರವರ್ಣವಾಗಿ ಕಂಡರೆ ಸಂಕಲಿತ, ದ್ವಂದ್ವಜ, ತ್ರಿದೋಷವೆಂದು ತಿಳಿಯಬೇಕು.

೨. ಮಲದಿಂದ ತಿಳಿಯತಕ್ಕ ಲಕ್ಷಣ.—ಪಿತ್ತ ರೋಗಕ್ಕೆ ಮಲವು ಹಳದಿ ಕೆಂಪು, ನೀಲಿ, ಚಕ್ಕೆ ಮರಳಿಸಿದ ವಗೆರು ರಂಗು ಸಹ ಆಗುತ್ತೆ. ಶ್ಲೇಷ್ಮ ರೋಗಕ್ಕೆ ಮಲ ಬಿಳಪಾಗಿಯೂ ಅಂಟಾಗಿಯೂ ಧಸಾರೆಯಾಗಿಯೂ ಜಂಡಜಂಡಾಗಿಯೂ ಹೋಗುತ್ತೆ. ವಾತಕ್ಕೆ ಆಮ ಕಾಣಿಸುವದು, ಹಿಕ್ಕೆಯೋಪಾದಿಯಲ್ಲಿ ಬೀಳುವದು, ಬದ್ಧಿಸಿರುವದು, ಕಪ್ಪು ರಂಗಾಗುವದು ; ಮತ್ತು ಮಿಶ್ರರೋಗಕ್ಕೆ ಮಿಶ್ರವರ್ಣವುಳ್ಳ ಮಲವು ಬೀಳುವದು.

೩. ನಾಲಿಗೆಯಿಂದ ತಿಳಿಯತಕ್ಕ ಲಕ್ಷಣ.—ಪಿತ್ತರೋಗಕ್ಕೆ ನಾಲಿಗೆಯು ಕಪ್ಪೈ, ಬೊಕ್ಕೆಗಳಾಗುವವು, ಹಳದಿವರ್ಣವಾಗುವದು, ಒಡದಿರುವದು, ಒಣಗುವದು. ಶ್ಲೇಷ್ಮರೋಗಕ್ಕೆ ನಾಲಿಗೆಯ ರಂಗು ಬಿಳಪಾಗಿ ತೆಳವಾಗಿರುವದು, ನೀರು ಬರುವದು, ಉಪ್ಪಾಗಿಯೂ ಸಾಳಾಗಿಯೂ ಇರುವದು. ವಾತರೋಗಕ್ಕೆ ಕಪ್ಪಾಗಿರುವದು, ಬೆಂದಂತೆ ಇರುವದು, ಸೀಯಾಗಿಯೂ ಉಪ್ಪಾಗಿಯೂ ಇರುವದು.

೪. ಧ್ವನಿಯಿಂದ ತಿಳಿಯತಕ್ಕ ಲಕ್ಷಣ.—ವಾತಕ್ಕೆ ಹುಂಕಾರ, ಪಿತ್ತಕ್ಕೆ ಘುಂಕಾರ, ಶ್ಲೇಷ್ಮಕ್ಕೆ ಹ್ರೂಂಕಾರಗಳು ತೋರುವವು.

೫. ಸ್ಪರ್ಶದಿಂದ ತಿಳಿಯುವ ಲಕ್ಷಣ.—ಪಿತ್ತ ರೋಗಕ್ಕೆ ಶರೀರವು ಬಿಸಿಯಾಗಿಯೂ, ವಾತಕ್ಕೆ ತಣ್ಣಗೂ ದಪ್ಪನಾಗಿಯೂ, ಶ್ಲೇಷ್ಮಕ್ಕೆ ಮೃದುವಾಗಿಯೂ ಸಹ ಇರುವದು.

೬. ರೂಪದಿಂದ ತಿಳಿಯತಕ್ಕ ಲಕ್ಷಣ.—ವಾತಕ್ಕೆ ಹೀನರೂಪ, ಪಿತ್ತಕ್ಕೆ ಸಮೀಚೀನ ರೂಪ, ಶ್ಲೇಷ್ಮಕ್ಕೆ ಸಾಮಾನ್ಯರೂಪ ಯೆಂದು ತಿಳಿಯಬೇಕು.

೭. ನೇತ್ರದಿಂದ ತಿಳಿಯತಕ್ಕ ಲಕ್ಷಣ.—ಪಿತ್ತಕ್ಕೆ ನೇತ್ರದಲ್ಲಿ ರಕ್ತವರ್ಣ, ಹಳದೀಬಣ್ಣ, ಶ್ಲೇಷ್ಮಕ್ಕೆ ಬಿಳಪಾದ ವರ್ಣ, ವಾತಕ್ಕೆ ಶ್ಯಾಮವರ್ಣ, ನೀಲವಾದ ವರ್ಣ, ಮಿಶ್ರಕ್ಕೆ ಮಿಶ್ರವರ್ಣವಾಗಿರುವದು.

ಅಸಾಧ್ಯಲಕ್ಷಣ ಮತ್ತು ಅರಿಷ್ಟ ಸೂಚಕಗಳು.—ಅಂತರಿಕ್ಷದಲ್ಲಿ ಮೇಘ ಹುಟ್ಟಿದರೆ ಮಳೆ ಬರುವದೆಂದು ಹ್ಯಾಗೆ ತಿಳಿಯುವದೋ, ಹುವ್ವು ಆದರೆ ಫಲಕ್ಕೆ ಕಾರಣವೆಂದು ಹ್ಯಾಗೆ ತಿಳಿಯುವದೋ ಮತ್ತು ಹೊಗೆ ಕಂಡರೆ ಬೆಂಕಿ ಇಧೆಯೆಂದು ಹ್ಯಾಗೆ ತಿಳಿಯುತ್ತದೋ ಹಾಗೆಯೇ ಮನುಷ್ಯನಿಗೆ ಸ್ವಸ್ಥವಾಗಿರುವ ಕಾಲದಲ್ಲೂ ರೋಗಬಂದಿರುವ ಕಾಲದಲ್ಲೂ ಮರಣಕ್ಕೆ ಕಾರಣವಾದ ಅರಿಷ್ಟ ಸೂಚನೆಯು ವಿವರಿಸಲ್ಪಡುತ್ತೆ.

ಸ್ವಸ್ಥಾರಿಷ್ಟ ಸೂಚಕಗಳು.

೧. ಬಲ, ಶೀಲ, ಬುದ್ಧಿ, ಭಕ್ತಿ, ಜ್ಞಾನಗಳು ಕಾರಣವಿಲ್ಲದೆ ಉಂಟಾದರೂ ಇದ್ದವನಿಗೆ ತಪ್ಪಿದರೂ ಆತನು ಆರು ತಿಂಗಳು ಬದುಕುತ್ತಾನೆ.

೨. ರೂಪ, ಸ್ವರ, ಛಾಯೆ, ಇಂದ್ರಿಯ, ನಡವಳಿಕೆ ಇವುಗಳು ವಿಪರೀತವಾಗಿ ತೋರಿದರೆ ಅರಿಷ್ಟ ಸೂಚಕವು.

೩. ಬಾಯಿಯಿಂದ ಊದಿದರೆ ಶರೀರವು ರೋಮಾಂಚವಾಗೋದು, ಮೈಮೇಲೆ ಯಣ್ಣೆ ಹಚ್ಚಿದಹಾಗೆ ಕಲೆಗಳು ಕಾಣೋದು, ಕಣ್ಣುಗಳು ತಿರಗೋದು, ಮೈ ಜೋಲೋದು, ಕಣ್ಣುಗುಡ್ಡುಗಳು ಒಳಸರಿಯೋದು ಅಥವಾ ಹೊರಕ್ಕೆ ಹೊರಡೋದು, ಇವು ಅರಿಷ್ಟಸೂಚಕಗಳು.

೪. ಮೂಗು ಹಿಗ್ಗುವದು, ಬತ್ತುವದು, ಉದ್ದವಾಗುವದು, ಗುಡ್ಡವಾಗುವದು, ಮೈ ಭಾರವಾಗಿ ಮಲ ಬಣಗಿ ಹಿಕ್ಕೆಯಂತೆ ಬಿದ್ದು ನಾಲಿಗೆಯಲ್ಲಿ ಮುಳ್ಳುಗಳಿದ್ದರೂ ಸಹ ಅರಿಷ್ಟಸೂಚಕವು.

೫. ಕಪ್ಪಾಗಿರುವ ರಂಗು ಕೆಂಪಾದರೂ, ಭುಜಗಳು ದೊಡ್ಡದಾಗಿ ಕಂಡರೂ, ಮತ್ತು ಅಕಸ್ಮಾತ್ತಾಗಿ ದಂತಗಳು ಬಿದ್ದರೂ, ತುಟಿ ಕಪ್ಪಾಗಿ ವೊಣದು ಬಾಡಿದರೂ, ಕೆಳತುಟಿ ಜೋಲುಬಿದ್ದರೂ ಅರಿಷ್ಟಸೂಚಕವು.

೬. ಕೊರಳಿಗೆ ಶಿರಸ್ಸು ಭಾರವಾಗೋದು, ಶರೀರಕ್ಕೆ ಬೆನ್ನು ಭಾರವಾಗೋದು, ವಿಷದೋಷಗಳಿಲ್ಲದೆ ಕಿವಿಯಲ್ಲಿ ರಕ್ತವು ಸುರಿಯುವದು, ಪ್ರಧಾನವು ಮೇಲಕ್ಕೆ ಸೇದಿಕೊಳ್ಳುವದು, ಅಂಡಗಳು ಜೋಲೋದು, ಇವು ಅರಿಷ್ಟ ಸೂಚಕವು.

೭. ನರಗಳೇಆಗಲಿ ಶಿರ, ಹಣೆ, ಕಿಬ್ಬೊಟ್ಟೆಗಳಲ್ಲೇಆಗಲಿ ಬಿದಿಗೆಯ ಚಂದ್ರನ ಹಾಗೆ ಹೊಸದಾಗಿ ಕಾಣಿಸಿದ ಮನುಷ್ಯನಿಗೆ ಆರುತಿಂಗಳಿಗೆ ಗಂಡಕಾಲವು.

೮. ಬೆರಣಿಯ ಪುಡಿಯಂತೆ ಚೂರ್ಣವು ತಲೆಯಲ್ಲೂ ಮುಖದಲ್ಲೂ ಬರುತ್ತಿರಲು ಮತ್ತು ತಲೆಯಲ್ಲಿ ಆಕಸ್ಮಿಕವಾಗಿ ಹೊಗೆ ಹೊರಡಲು ಒಂದು ತಿಂಗಳಲ್ಲಿ ಆಮನುಷ್ಯನಿಗೆ ಗಂಡಕಾಲವೆಂದು ತಿಳಿಯತಕ್ಕದ್ದು.

೯. ನೀರಿನಲ್ಲಿ ಸ್ನಾನವಂ ಮಾಡಿದಾಗ ಕಮಲದ ಯಲೇಮೇಲೆ ಬಿದ್ದ ನೀರು ಜಾರುವಹಾಗೆ ಮನುಷ್ಯನಮೇಲೆ ಬಿದ್ದನೀರು ಜಾರಿದರೆ ಗಂಡಕಾಲವು ಆರುತಿಂಗಳಲ್ಲಿ ಉಂಟಾಗುತ್ತೆಂದರಿಯುವದು.

೧೦. ಮೈಗೆಲ್ಲಾ ಗಂಧ ಲೇಪನವಂ ಮಾಡಿದಾಗ ಮುಂಚೆ ಯದೆ ಬಣಗಿ ಆಮೇಲೆ ಮಿಕ್ಕಸ್ಥಳಗಳೆಲ್ಲಾ ಹಸಿಯಾಗಿದ್ದರೆ ಅವನಿಗೆ ಹದಿನೈದು ದಿವಸಗಳಲ್ಲಿ ಗಂಡಕಾಲವು.

೧೧. ವರ್ಚಸ್ಸು ಇದ್ದು ಹೀನವಾಗೋದು, ಇಲ್ಲದೇ ಉಂಟಾಗುವದು, ಸುಮ್ಮನೆ ಮೈಯಲ್ಲಿ ಕಳೆಯುಂಟಾಗುವದು, ಅಂಥಾವನಿಗೆ ಗಂಡಕಾಲವೆಂದರಿಯುವದು.

೧೨. ಒಂದಾವರ್ತಿ ಅಧಿಕಶ್ವಾಸ, ಮತ್ತೊಂದಾವರ್ತಿ ಕಮ್ಮಿಯಾಗೋದು, ರೋಗವಿಲ್ಲದೆ ಮೂಗಿನಲ್ಲಿ ಒಳ್ಳೇ ವಾಸನೆ ಮತ್ತು ಕೆಟ್ಟವಾತ ಉಂಟಾಗೋದು, ಅಭ್ಯಂಗ ಮಾಡಿದರೂ ಮಾಡದೆ ಇದ್ದರೂ ಮೈಯಲ್ಲಾ ಕಪ್ಪೆವಾತದಂತೆ ತೋರುವದು, ಈ ಮನುಷ್ಯನಿಗೆ ಒಂದುವರುಷದಲ್ಲಿ ಗಂಡಕಾಲವು.

೧೩. ಅತಿರುಚಿಯಿಂದ ಇರತಕ್ಕ ಶರೀರಕ್ಕೆ ಹೇನು ನೊಣ ಸಹ ಮುತ್ತೋದು, ಅತಿ ಕಳೆಯು, ಅತಿಸೀತವು ಆಗುವ ಮನುಷ್ಯನಿಗೆ ಒಂದು ವರುಷದಲ್ಲಿ ಗಂಡಕಾಲವು.

೧೪. ಎದೆಯಲ್ಲಿ ಉರಿ, ಮಲಭಿನ್ನವಾಗಿ ಬೀಳೋದು, ಹೊಟ್ಟೆಯಲ್ಲಿ ಹಸಿವು ಕಾಣದೆ ಇರೋದು, ಬಾಯಾರಿಕೆ ಅಧಿಕವಾಗೋದು, ಇಂಥಾವನಿಗೆ ಗಂಡಕಾಲವೆಂದರಿಯುವದು.

೧೫. ಆಕಾಶವನ್ನು ಮೋಡದಹಾಗೂ, ಮೋಡವನ್ನು ಆಕಾಶದಹಾಗೂ, ಕಪ್ಪಾಗಿರುವದನ್ನು ಬಿಳಿದಾಗಿಯೂ, ಬಿಳುಪನ್ನು ಕಪ್ಪಾಗಿಯೂ ಕಂಡವನಿಗೆ ಗಂಡಕಾಲವೆಂದರಿಯುವದು.

೧೬. ನೇತ್ರದಲ್ಲಿ ರೋಗವಿಲ್ಲದೆ ಇರುವಾಗ ರಾತ್ರಿಕಾಲದಲ್ಲಿ ಚಂದ್ರನು ಅನೇಕ ರೂಪವಾಗಿ ಕಾಣೋದು, ಮತ್ತು ಅವನಲ್ಲಿರುವ ಕಪ್ಪು ಕಾಣಿಸದೇ ಹೋದರೆ ಒಂದುವರುಷದಲ್ಲಿ ಗಂಡಕಾಲವು.

೧೭. ಯಚ್ಚರದಲ್ಲಿರುವಾಗ ಯಕ್ಷರು, ರಾಕ್ಷಸರು, ಗಂಧರ್ವರು, ಸತ್ತವರು, ಯಮದೂತರು ದಿನವಹಿ ಕಾಣಿಸಿದ್ದೇ ಆದರೆ ಅವನಿಗೆ ಗಂಡವು.

೧೮. ಮನುಷ್ಯನ ಕಿರಿನಾಲಿಗೆಗೆ ಹಿಂದೆ ಇರುವ ರಾಜದಂತಬಿಲವೆಂಬ ದ್ವಾರದಿಂದ ಶಿರಸ್ಸಿನಲ್ಲಿರುವ ಚಂದ್ರಮಂಡಲದಿಂದ ಬರುವ ನೀರೆ ಆಕಾಶಗಂಗೆಯೆಂದು ಹೆಸರುಳ್ಳದ್ದು; ಇದು ಒಣಗೋದು, ಮೂಗಿನ ತುದಿಯು ಮತ್ತು ಭ್ರೂಮಧ್ಯವು ಕಾಣದೆ ಹೋಗೋದು ; ಹೀಗಿದ್ದರೆ ಆರುತಿಂಗಳಲ್ಲಿ ಗಂಡಕಾಲವು.

೧೯. ಗುಡುಗು, ತಮಟೆ, ವೀಣಾ, ವೇಣುಗಳ ಧ್ವನಿಯುಂಟಾಗಿರುವ ಕಾಲದಲ್ಲಿ ಭಿನ್ನಧ್ವನಿ ಕೇಳಿದ್ದೇಆದರೆ ಗಂಡಕಾಲವು.

೨೦. ಕಿವಿಯರಡರಲ್ಲಿಯೂ ಬೆರಳಿಟ್ಟು ನೋಡಲು ಘೋರೆನ್ನುವ ಶಬ್ದ ಕೇಳದೆ ಹೋದರೆ ಮತ್ತು ಮೂಗಿನಲ್ಲಿ ವಾಸನೆ ತಿಳಿಯದೆ ಇದ್ದರೆ ಗಂಡಕಾಲವೆಂದು ತಿಳಿಯಬೇಕು.

೨೧. ಹೀನಸ್ವರ, ದೀನಧ್ವನಿ, ಉಗ್ಗು ಮಾತು, ಹರ್ಷವಿಲ್ಲದಿರುವಿಕೆ, ದೌರ್ಬಲ್ಯ, ವರ್ಣನಾಶ ಇವುಗಳಿದ್ದರೆ ಗಂಡಕಾಲವು.

೨೨. ಅನ್ನ, ಔಷಧಿ, ವೈದ್ಯರು, ಸನ್ಮಿತ್ರರು, ಗುರುಗಳು, ದೇವರು ಇವರಲ್ಲಿ ದ್ವೇಷ ಉಂಟಾಗುವದು, ಮತ್ತು ನಿವಾಳಿಸಿಹಾಕಿದ ಬಲಿಯನ್ನು ಕಾಗೆ ತಿನ್ನದೆ ಇರುವದು, ಹೀಗಾದವರಿಗೆ ಗಂಡಕಾಲವು.

೨೩. ಉಗಳು, ಇಂದ್ರಿಯ, ಮಲ, ಮೂತ್ರಗಳನ್ನ ನೀರಿನಲ್ಲಿ ಹಾಕಿದರೆ ಮುಳಗುವದು ; ಉಗಳು ಅನೇಕವರ್ಣವಾಗೋದು ; ಹೀಗಾಗುವವನಿಗೆ ಗಂಡಕಾಲವೆಂದರಿಯುವದು.

೨೪. ಕಾರಣವಿಲ್ಲದೆ ಮೈ ಉಬ್ಬೋದು, ಅತಿಸೌಂದರ್ಯ ಉಂಟಾಗೋದು, ಅತ್ಯಾಚಾರವಂತನಾಗೋದು, ಮತ್ತು ಇವು ಇದ್ದದ್ದು ತಪ್ಪಿಹೋಗೋದು, ಹೀಗಾದವನಿಗೆ ಗಂಡವೆಂದು ತಿಳಿಯಬೇಕು.

೨೫. ಬಿಸಲಲ್ಲಿ ಛಾಯಾಪುರುಷ, ಕನ್ನಡಿಯಲ್ಲಿಯೂ ನೀರಿನಲ್ಲಿಯೂ ಪ್ರತಿಬಿಂಬವು ವ್ಯತ್ಯಾಸವಾಗಿ ಕಂಡವನಿಗೆ ಗಂಡಕಾಲವು.

೨೬. ಸ್ವಪ್ನದಲ್ಲಿ ಪ್ರೇತಗಳೊಡನೆ ಭೋಜನವನ್ನು ಮಾಡಿದಂತೆಯೂ ಮತ್ತು ನಾಯಿಗಳಿಂದ ಪೀಡಿತನಾದಂತೆಯೂ ಕಂಡವನಿಗೆ ಗಂಡಕಾಲವು.

೨೭. ಲಲಾಟದಲ್ಲಿ ತನುಸ್ವೇದ, ಮೈ ಬಿಳುಪುಛಾಯೆ, ಅತಿಸೀತ, ಕಂಟದಲ್ಲಿ ಬೆವರು ಹುಟ್ಟಿ ವಕ್ಷಸ್ಥಳಕ್ಕೆ ಬಾರದೇ ಇರುವ ಮನುಷ್ಯನಿಗೆ ಗಂಡವು.

೨೮. ಹನುಗಳು ಕೂಡೋದು, ಅನ್ನದ್ವೇಷ, ಅವಯವಗಳು ನಿಮಿತ್ಯವಿಲ್ಲದೆ ಭಾರವಾಗೋದು, ಅಥವಾ ಲಘುವಾಗೋದು, ಈ ಲಕ್ಷಣವುಳ್ಳ ಮನುಷ್ಯನಿಗೆ ಗಂಡಕಾಲವು.

೨೯. ರೋಗವಿಲ್ಲದೇ ಇದ್ದಾಗ್ಯೂ ಇಂದ್ರಿಯ ಮತ್ತು ಬಲಗಳು ತಗ್ಗುವದು, ರಕ್ತವು ಸ್ರವಿಸುವದು, ಪ್ರಧಾನವು ಮೇಲಕ್ಕೆ ಶಳದುಕೊಳ್ಳುವದು, ಅಂಡಗಳು ಜೋಲುಬೀಳೋದು, ಈಪ್ರಕಾರವಾದ ಮನುಷ್ಯನಿಗೆ ಗಂಡಕಾಲವೆಂದರಿಯುವದು.

ರೋಗಾರಿಷ್ಟಸೂಚಕದಲ್ಲಿ ಚತುರ್ದಶವೇಗಕ್ಕೆ ಅಸಾಧ್ಯಲಕ್ಷಣ.

೧. ಗುಲ್ಮರೋಗಕ್ಕೆ ಅಸಾಧ್ಯಲಕ್ಷಣ —ಬಹಳ ದಿವಸದಿಂದ ಇರುವ ಉದರಶೂಲೆಯುಳ್ಳ, ಭ್ರಮೆ, ಕೂರ್ಮದಂತೆ ಗ್ರಂಥಿ ತೋರುವ, ದಿನೇದಿನೇ

ಧಪ್ಪನಾಗುತ್ತಿರುವದು, ದುರ್ಬಲತ್ವ, ಅರುಚಿ, ಲಾಲಾ, ಶ್ವಾಸ, ಛರ್ದಿ, ದಾಹ, ತಂದ್ರ, ಪ್ರತಿಶ್ಯಾಯ ಮತ್ತು ಜ್ವರಗಳಿಂದ ಕೂಡಿದ್ದರೆ ಅಸಾಧ್ಯವು.

೨. ಉದಾವರ್ತಕ್ಕೆ—ನೀರಡಿಕೆ, ಕ್ಷೀಣತ್ವ, ಶೂಲೆ, ವಾಂತಿಯಲ್ಲಿ ಮಲಬಿದ್ದರೆ ಅಸಾಧ್ಯವು.

೩. ಕೋಷ್ಠಶೂಲೆಗೆ—ಕೋಷ್ಠವು ಬಿಗಿ ಅಲ್ಲಿಯು ವ್ರಣಗಳು ಹುಟ್ಟಿದರೆ ಅಸಾಧ್ಯವು.

೪. ಕ್ಲಮಕ್ಕೆ—ತ್ರಿದೋಷದಿಂದ ಹುಟ್ಟಿದ್ದರೆ ಅಸಾಧ್ಯವು.

೫. ವಾತಸಂಗಕ್ಕೆ—ರಕ್ತಾದಿಗಳು ಕ್ಷೀಣವಾಗಿ ವಾತಾಧಿಕ್ಯವಾಗುತ್ತಾ ಬಂದರೆ ಅಸಾಧ್ಯವು.

೬. ಮೂತ್ರಸಂಗಕ್ಕೆ—ಕಫದಿಂದಹುಟ್ಟಿ ಜ್ವರ, ಶೋಥೆ, ಜಡತ್ವಗಳಿಂದ ಕೂಡಿ ಬೆಳ್ಳಗೆ ಗಟ್ಟಿಯಾಗಿ ಸ್ವಲ್ಪಸ್ವಲ್ಪ ಮೂತ್ರಸ್ರಾವವಾಗುತ್ತಿದ್ದರೆ ಅಸಾಧ್ಯವು.

೭. ಶಕೃತ್ಸಂಗಕ್ಕೆ—ಪಕ್ಕವಾದ ನೇರಳೇಹಣ್ಣಿನ ರಂಗು, ಕಪ್ಪುರಂಗು, ತುಪ್ಪ, ಎಣ್ಣೆ, ವಸೆ, ಮಜ್ಜೆ, ಮೊಸರು, ಕೊಳೇ ನೀರುಗಳಂತೆಯೂ, ಮಾಂಸ ತೊಳೆದ ನೀರಿನಂತೆಯೂ ಕೆಂಪುರಂಗುಗಳಿಂದ ಕೂಡಿದ್ದರೆ ಅಸಾಧ್ಯವು.

೮. ದೃಷ್ಟಿನಾಶಕ್ಕೆ—ನಾಡೀಗತಿಗಳಿಂದ ಅಸಾಧ್ಯವನ್ನು ನಿರ್ಣಯಿಸಬೇಕು.

೯. ಅಗ್ನಿನಾಶಕ್ಕೆ—ಮೂರ್ಛೆ, ಪ್ರಳಾಪ, ವಾಂತಿ, ಗ್ಲಾನಿ ಭ್ರಮೆಗಳಿಂದ ಕೂಡಿ ನಾಲಿಗೆಯಲ್ಲಿ ನೀರು ಸುರಿಯುತ್ತಿದ್ದರೆ ಅಸಾಧ್ಯವು.

೧೦. ಹೃದ್ರೋಗಕ್ಕೆ—ರೋಮಾಂಚ, ನೇತ್ರದಲ್ಲಿ ಕೆಂಪು, ಹೃದಯಶೂಲೆ ನಿಟ್ಟುಸುರು ಇದ್ದರೆ ಅಸಾಧ್ಯವು.

೧೧. ಪಿಂಡಿಕೋದ್ವೇಷ್ಟಕ್ಕೆ—ಜನನಾರಭ್ಯ ತ್ರಿದೋಷವೈಷಮ್ಯ, ಸೀತವಾತ ಗತಿಗಳಲ್ಲಿಯೇ ಆಧಿಕ್ಯ, ಮೂರ್ಛೆ, ಮೋಹ, ಶರೀರದಲ್ಲಿ ಕಾರ್ಶ್ಯ, ಶುಭ್ರತ್ವವಿದ್ದರೆ ಅಸಾಧ್ಯವು.

೧೨. ಪ್ರತಿಶ್ಯಾಯಕ್ಕೆ—ಮೂಗಿನಲ್ಲಿ ನೀರು ಸುರಿಯುವಿಕೆ ಮತ್ತು ಬಿಗುವಿಕೆ, ಉಸಿರಿನಲ್ಲಿ ದುರ್ಗಂಧವಿದ್ದರೆ ಅಸಾಧ್ಯವು.

೧೩. ಶಿರೋರೋಗಕ್ಕೆ—ಊರ್ಧ್ವಶ್ವಾಸ, ಮೂಗು, ಕೈ, ಕಾಲುಗಳಲ್ಲಿ ಶೈತ್ಯ ತಲೆಯಲ್ಲಿ ಶೂಲೆಯಿದ್ದರೆ ಅಸಾಧ್ಯವು.

೧೪. ಮುಖವಿಟ್ಪ್ರವರ್ತಿಗೆ—ನೀರಡಿಕೆ, ಅಂಗಕ್ಷೀಣತ್ವ, ವಾಂತಿಯಲ್ಲಿ ಮಲ ಬೀಳುವರೀತಿ ಕೂಡಿದ್ದರೆ ಅಸಾಧ್ಯವು.

೧೫. ಅಂಗಭಂಗಕ್ಕೆ—ನಾಡೀಗತಿಗಳಿಂದ ತಿಳಿಯಬೇಕು.

೧೬. ಅಶ್ಮರೀರೋಗಕ್ಕೆ—ನಾಭಿ ವೃಷಣಗಳಲ್ಲಿ ಬಾವು ಮತ್ತು ನೋವು ಕಂಡು ಮೂತ್ರಕಟ್ಟಿ ಮರಳಿನ ಹಾಗೆ ಮೂತ್ರಬಿದ್ದರೆ ಅಸಾಧ್ಯವು.

೧೭. ವಸ್ತಿವೇದನೆಗೆ
೧೮. ಮೇಢ್ರವೇದನೆಗೆ
೧೯. ವಂಕ್ಷಣವೇದನೆಗೆ
} ಈ ಮೂರಕ್ಕೂ ಮೂತ್ರರೋಗದ ಅಸಾಧ್ಯಲಕ್ಷಣ ವಿದ್ದರೆ ಅಸಾಧ್ಯವು.

೨೦. ಅರುಚಿಗೆ—ಅಗ್ನಿನಾಶಕ್ಕೆ ಹೇಳಿರುವರೀತಿ ಇದ್ದರೆ ಅಸಾಧ್ಯವು.

೨೧. ಕಂಪಕ್ಕೆ—ಕೈಗಳು,ಶಿರಸ್ಸು, ಜಂಘೆಗಳಲ್ಲಿ ನಡುಕ ಹುಟ್ಟಿ ಬಂದು ಭಾಗ ದಲ್ಲಿ ಸೂಕ್ಷ್ಮವಾಗಿ ನಡುಗುತ್ತಿದ್ದರೆ ಅಸಾಧ್ಯವು.

೨೨ ಕಾಸಕ್ಕೆ—ನಾಡಿಗಳಿಂದ ತಿಳಿಯಬೇಕು, ಮತ್ತು ಬಲ ಮಾಂಸಗಳು ಕಮ್ಮಿ ಯಾಗಿ ಕೆಮ್ಮು ಉಂಟಾಗುವದು ಮತ್ತು ಶ್ಲೇಷ್ಮದಿಂದ ಉತ್ಪನ್ನವಾಗಿ ದ್ದರೆ ಅಸಾಧ್ಯವು.

೨೩. ಹಿಧ್ಮಕ್ಕೆ—ಪ್ರಲಾಪ, ಪೀಡೆ, ಮೋಹ, ತೃಷ್ಣಾ, ಊರ್ಧ್ವಶ್ವಾಸವಿದ್ದರೆ ಅಸಾಧ್ಯವು.

೨೪. ಇಂದ್ರಿಯದಾರ್ಬಲ್ಯಕ್ಕೆ—ದಶೇಂದ್ರಿಯಗಳಿಗೆ ಬಲ ಕಡಮೆಯಾಗಿ ಮಾಂ ಸವು ಕ್ಷೀಣವಾಗಿದ್ದರೂ ಮತ್ತು ಮನುಷ್ಯನ ಹಿಂಭಾಗದಲ್ಲಿಯೂ ಮುಂಭಾ ಗದಲ್ಲಿಯೂ ಸಣಮೂಳೆಗಳು ಕಂಡರೆ ಅಸಾಧ್ಯವು.

೨೫. ಮನ್ಯಾಸ್ತಂಭಕ್ಕೆ—ನಾಡೀಗತಿಗಳಿಂದ ಅಸಾಧ್ಯವನ್ನು ತಿಳಿಯಬೇಕು.

೨೬. ಶೋಷೆಗೆ—ನಾಲಿಗೆಯಲ್ಲಿ ಶೈತ್ಯವೂ, ಕಪ್ಪು, ಶರೀರದಲ್ಲಿ ಶೈತ್ಯ, ಗಂಟಲಲ್ಲಿ ಶ್ಲೇಷ್ಮ, ಮುಖದಲ್ಲಿ ನೀರಸಭಾವ, ನೇತ್ರದಲ್ಲಿ ಕೆಂಪುಗಳಿದ್ದರೆ ಅಸಾ ಧ್ಯವು.

೨೭. ಅಂಗಸಾದ
೨೮. ಬಾಧಿರ್ಯ
೨೯. ಸಂಮೋಹ
೩೦. ಭ್ರಮೆ
} ಈನಾಲ್ಕಕ್ಕೂ ನಾಡೀಗತಿಯಿಂದ ತಿಳಿಯಬೇಕು.

೩೧. ಪಾರ್ಶ್ವಶೂಲೆಗೆ—ವಾತಸಂಗದ ಅಸಾಧ್ಯಲಕ್ಷಣವಿದ್ದರೆ ಅಸಾಧ್ಯವು.

೩೨. ಆಲಸ್ಯಕ್ಕೆ—ದಿನದಿನಕ್ಕೆ ಶರೀರವು ತಗ್ಗುತ್ತಾ ಬಂದು ತ್ರಿದೋಷಗತಿ ಕಂಡು ಅನಂತರ ನಾಡೀ ಕಾಣದೆ ಹೋದರೆ ಅಸಾಧ್ಯವು.

೩೩. ಜೃಂಭಾ
೩೪. ಜಡತ್ವ
೩೫. ತಂದ್ರ
} ಈ ಮೂರಕ್ಕೂ ನಾಡೀಗತಿಯಿಂದ ಅಸಾಧ್ಯವನ್ನು ತಿಳಿಯ ಬೇಕು.

೩೬. ಶ್ವಾಸಕ್ಕೆ—ತ್ರಿದೋಷದಿಂದ ಕೂಡಿ ಯಿದ್ದರೆ ಅಸಾಧ್ಯವು.

೩೭. ಪೀನಸಕ್ಕೆ—ಜ್ವರ ವಾಂತಿಗಳಿಂದ ಕೂಡಿದ್ದರೆ ಅಸಾಧ್ಯವು.

೩೮. ವಿಸರ್ಪಕ್ಕೆ—ಸಂನಿಪಾತದಿಂದಲೂ, ಪಿತ್ತದಿಂಲೂ ಹುಟ್ಟಿ ಕಪ್ಪುರಂಗಿನಿಂದ ಕೂಡಿದ ಮತ್ತು ಮರ್ಮಸ್ಥಾನದಲ್ಲಿ ವ್ಯಾಪ್ತವಾದ್ದು ಅಸಾಧ್ಯವು.

೩೯. ಕುಷ್ಠಕ್ಕೆ—ಗುಹ್ಯ, ಹಸ್ತ, ಓಷ್ಠಗಳಲ್ಲಿ ಬಹುಕಾಲದಿಂದ ಇದ್ದರೆ ಅಸಾಧ್ಯವು.

೪೦. ಶೋಷ }
೪೧. ಕಂಡು } ಈ ಎರಡಕ್ಕೂ ನಾಡೀಗತಿಗಳಿಂದ ಅಸಾಧ್ಯವನ್ನು ತಿಳಿಯಬೇಕು.

೪೨. ಪಾಂಡುವಿಗೆ—ಜ್ವರ, ಅರೋಚಕ, ಲಾಲಾ ಇವುಗಳಿದ್ದು ಬಿಕ್ಕಳಿಕೆ, ಬಾಯಾರಿಕೆ, ಅನಾಯಾಸ ಶ್ರಮ, ಅತ್ಯಂತ ಕ್ಷೀಣತ್ವವಿದ್ದರೆ ಅಸಾಧ್ಯವು.

೪೩. ಜ್ವರಕ್ಕೆ—ಅಗ್ನಿನಷ್ಟವಾಗಿ ತ್ರಿದೋಷ ಮತ್ತು ಸನ್ನಿಪಾತದಿಂದ ಕೂಡಿದ್ದರೆ ಅಸಾಧ್ಯವು.

೪೪. ಹೃಲ್ಲಾಸ }
೪೫. ಬಿಂಗು } ಈ ಎರಡಕ್ಕೂ ನಾಡೀಗತಿಯಿಂದ ಅಸಾಧ್ಯವನ್ನು ತಿಳಿಯಬೇಕು.

೪೬. ಶೋಭೆಗೆ—ಇತರೋಪದ್ರವದಿಂದ ಹುಟ್ಟಿ ಪುರುಷನಿಗೆ ಕಾಲಿನಿಂದಲೂ ಹೆಂಗಸಿಗೆ ಮುಖದಿಂದಲೂ ವೃದ್ಧಿಯಾಗುತ್ತಿರುವದು. ಗುಹ್ಯಸ್ಥಾನದಲ್ಲಿ ಬಹಳ ದಿವಸದಿಂದಿದ್ದರೆ ಅಸಾಧ್ಯವು.

೪೭. ಶುಕ್ಲಸ್ರಾವಕ್ಕೆ—ಗುದಸ್ಥಾನದಲ್ಲಿ, ಹೃದಯದಲ್ಲಿ, ಶಿರಸ್ಸಿನ ಅಂತ್ಯದಲ್ಲಿ, ಪೃಷ್ಟಭಾಗದಲ್ಲಿ, ಮರ್ಮಸ್ಥಾನಗಳಲ್ಲಿ ನೋವು ಇದ್ದು ಶುಕ್ಲಸ್ರಾವವಾಗುತ್ತಿದ್ದರೆ ಅಸಾಧ್ಯವು.

೪೮. ಗುಹ್ಯವೇದನೆಗೆ—ಅಸಾಧ್ಯವನ್ನು ನಾಡೀಗತಿಗಳಿಂದ ತಿಳಿಯಬೇಕು.

೪೯. ಷಂಡತ್ವಕ್ಕೆ—ಹಿಮಗಾಲದಲ್ಲಿ ತಣ್ಣೀರಿನಲ್ಲಿ ಮನುಷ್ಯನನ್ನು ಮುಳಗಿಸಿದ ಮೇಲೆ ನಿರ್ವಾಣದಲ್ಲಿ ನಿಲ್ಲಿಸಿ ನೋಡಲು ಪ್ರಧಾನವೂ ಅಂಡಗಳೂ ಮೇಲೆ ಶೇದದೆ ಹೋದರೆ ಅಸಾಧ್ಯವು.

ರೋಗಾರಿಷ್ಟಸೂಚಕಗಳು.

೧. ಜ್ವರದಲ್ಲಿ ಅಸಾಧ್ಯ ಲಕ್ಷಣಗಳು :—

೧. ಹಳೇಜ್ವರವಿದ್ದು ದಿನೇದಿನೇ ವೃದ್ಧಿಯಾಗುತ್ತಾ ಬಂದರೆ ಅಸಾಧ್ಯವು.

೨. ಭ್ರಮೆ, ಊರ್ಧ್ವಶ್ವಾಸ, ಬಲಕ್ಷಯ, ಅಳೋಣ, ವಣಕೆಮ್ಮು, ಹೃದಯದಲ್ಲಿ ನೋವು, ಶೋಷಗಳಿರುವ ಜ್ವರವು ಅಸಾಧ್ಯವು.

೩. ರೋಮಾಂಚ, ಮೂತ್ರಕಟ್ಟೋದು, ಒಣಕೆಮ್ಮು, ಪುನಃಪುನಃ ನಗೋದು, ಸಿಂಹನಾದ ಮಾಡೋಣ, ಹಾಸಿಗೆಯನ್ನು ಒದೆಯೋಣ, ಚಿತ್ರವನ್ನು ನೋಡೋಣ, ಇವುಗಳುಳ್ಳ ಜ್ವರವು ಅಸಾಧ್ಯವು.

೪. ಜ್ವರಾದಿಯಲ್ಲಿ ವಿಷಮಲಕ್ಷಣ ತೋರಿ ಬಹುದಿವಸದ ಜ್ವರವಾಗಿ ಮೇಲೆ ಮೇಲೆ ಸ್ವಲ್ಪವೇಆಗಲಿ ಬಹಳವೇಆಗಲಿ ಬರುತ್ತಿರುವಜ್ವರವು ಅಸಾಧ್ಯವು.

೫. ಜ್ವರ ಬಂದಕಾಲದಲ್ಲಿ ಜ್ಞಾನತಪ್ಪಿ ಜ್ವರ ಬಿಟ್ಟಮೇಲೆಯೂ ಮೇಲಕ್ಕೆ ಯೇಳದೆ ಅಂತರ್ದಾಹಯುಕ್ತವಾದ ಶೈತ್ಯಯುಕ್ತವಾದ ಜ್ವರವು ಅಸಾಧ್ಯವು.

೬. ಮೈ ತಣ್ಣಗೆಯಿದ್ದು ಕುತ್ತಿಗೆಯಲ್ಲಿ ಬೆವರು ಬಂದರೆ ಆಜ್ವರವು ಅಸಾಧ್ಯವು.

೭. ಹಣೆಮೇಲೆ ಹುಟ್ಟಿದ ಬೆವರಿನಲ್ಲಿ ಶೈತ್ಯವು, ಸಂಧಿಗಳಲ್ಲಿ ಶೈಥಿಲ್ಯವು, ಉಬ್ಬಿಸಿ ಕೂಡಿಸಿದ ಮೌತ್ರಕ್ಕೆ ಪ್ರಜ್ಞೆತಪ್ಪುವ ಜ್ವರವು ಅಸಾಧ್ಯವು.

೮. ಪೂರ್ವಾಹ್ಣದಲ್ಲಿ ಜ್ವರ, ಪುಡಿಕೆಮ್ಮು, ದೇಹದಲ್ಲಿ ಅತ್ಯುಷ್ಣ, ಮತ್ತು ಅಪರಾಹ್ಣದಲ್ಲಿ ಜ್ವರ, ಶ್ಲೇಷ್ಮಯುಕ್ತವಾದ ಶ್ವಾಸ, ಬಲಮಾಂಸಗಳ ಕ್ಷಯಗಳುಳ್ಳ ಜ್ವರವು ಅಸಾಧ್ಯವು.

೯. ಅತಿಜ್ವರಸಂತಾಪ, ಮೂರ್ಛೆ, ಬಲಹಾನಿ, ನೀರಡಿಕೆ, ಸಂಧಿಶೈಥಿಲ್ಯಗಳುಳ್ಳ ಜ್ವರವು ಅಸಾಧ್ಯವು.

೧೦. ಆಕಳು ಪ್ರಸವಕಾಲದಲ್ಲಿ ನರಳುವಂತೆ ನರಳಿಕೆ, ಸ್ವೇದಗಳುಳ್ಳ ಜ್ವರವು ಅಸಾಧ್ಯವು.

೧೧. ಗೋವಿನ ಮುಖದಲ್ಲಿರುವ ನೀರಿನ ಗುಳ್ಳೆಗಳಂತೆ ಗುಳ್ಳೆಗಳು ಸರ್ವಾಂಗದಲ್ಲೂ ಹುಟ್ಟಿ ಸ್ವೇದ, ಶ್ರಮ, ಸಂತಾಪಗಳಿಂದ ಕೂಡಿದ ಲೇಪಿಜ್ವರವು ಅಸಾಧ್ಯವು.

೨. ಸನ್ನಿಯಲ್ಲಿ ಅಸಾಧ್ಯ ಲಕ್ಷಣ:—

೧. ತ್ರಿದೋಷ ಮತ್ತು ಅನೇಕಕಾರಣಗಳಿಂದ ಹುಟ್ಟಿದ ಜ್ವರದಲ್ಲಿ ಅಗ್ನಿ ನಷ್ಟವಾಗಿ, ಬಲವು ಅಧಿಕವಾಗಿದ್ದರೂ ಇಂದ್ರಿಯಗಳು ನಷ್ಟವಾಗಿ ದೇಹದಲ್ಲಿ ಕಾರ್ಶ್ಯ, ಕೊಲೆಗಳು ಬಹುದಿವಸದಿಂದ ವಿಕರೀತಿಯಾಗಿದ್ದರೂ ಮತ್ತು ತಲೆಮೇಲೆ ಸೀಮಂತರೇಖೆಯುಂಟಾದರೂ ಆಸನ್ನಿಯು ಅಸಾಧ್ಯವು.

೨. ಸನ್ನಿಪಾತಯುಕ್ತನಾದ ಮನುಷ್ಯನ ಕೂದಲುಗಳನ್ನು ಕಿತ್ತಾಗ್ಯೂ ಬಾಧೆಯಾಗದೇಲೂ ತಿಳಿಯದೇಲೂ ಹೋದರೆ ಅಸಾಧ್ಯವು.

೩. ಶರೀರಕೃಶವಾಗಿರುವಾಗ ಏಕಕಾಲದಲ್ಲಿ ಬಹುವಿಕಾರಗಳು ತೋರಿದರೆ ಆಸನ್ನಿಯು ಅಸಾಧ್ಯವು.

೪. ಉಗುರುಗಳನ್ನು ಹಲ್ಲಿಂದ ಕಚ್ಚೋದು, ತನ್ನ ಕೂದಲನ್ನು ತಾನೇ ಕಿತ್ತುತಿನ್ನುವದು, ನೆಲದಮೇಲೆ ಬರಿಯುವದು, ಇವು ಅಸಾಧ್ಯವು.

೩. ಅತಿಸಾರದಲ್ಲಿ ಅಸಾಧ್ಯಲಕ್ಷಣ:—

೧. ಮಲದಲ್ಲಿ ನಾನಾವರ್ಣಗಳು ತೋರಿ ಆಸನದ್ವಾರವು ಸಡಲವಾಗಿ ಮಾಂಸವನ್ನು ತೊಳೆದ ನೀರಿನಂತೆಯೂ, ನೇಣದಂತೆಯೂ, ಹಾಲು, ಮೊಸರು, ಜೇನು, ತುಪ್ಪಗಳು ಕೆಟ್ಟ ನಾತದಂತೆಯೂ, ಹೇಣದ ಕಂಪಿನಂತೆಯೂ, ದುರ್ಗಂಧದಂತೆ ಕೂಡಿಯಿರುವ ಅತಿಸಾರವು ಅಸಾಧ್ಯವು.

೨. ಪಕ್ವವಾದ ನೇರಳೆಹಣ್ಣಿನಂತೆ ಮಲದಲ್ಲಿ ಕಪ್ಪುರಂಗು, ಎಣ್ಣೆ, ತುಪ್ಪ ವಸೆ, ಮಜ್ಜೆಗಳಂತೆ ಜೊಂಡು ತೋರಿ ಮೊಸರಿನ ಕೊಳೆನೀರಿನಂತೆಯೂ ಮಾಂಸವನ್ನು ತೊಳದ ನೀರಿನಂತೆಯೂ ನೀಲಿ, ಕೆಂಪು, ಮತ್ತು ಅನೇಕ ವಿಧ ರಂಗುಗಳಿಂದ ಕೂಡಿದ ಅತಿಸಾರವು ಅಸಾಧ್ಯವು.

೩. ಶ್ವಾಸ, ಶೂಲೆ, ನೀರಡಿಕೆ, ದುರ್ಬಲ, ಕೃಶ, ಜ್ವರ, ಪೀಡೆಗಳುಳ್ಳ ಅತಿಸಾರವು ಅಸಾಧ್ಯವು.

೪. ದುರ್ಗಂಧಯುಕ್ತವಾಗಿ ಮಿದುಳಿನಂತೆ ಪ್ರವರ್ತಿಯಲ್ಲಿ ಬೀಳೋಣವು, ಮಲದಲ್ಲಿ ಆಧಿಕ್ಯವು, ನೀರಡಿಕೆ, ಅನ್ನದ್ವೇಷ, ಬಿಕ್ಕಳಿಕೆ, ಉಬ್ಬಸ, ಪಾರ್ಶ್ವಶೂಲೆ, ಮೂರ್ಛೆ, ಸಕಲಪದಾರ್ಥಗಳ ಅಹಾರುಹಿತ್ಯ, ಆಸನದಲ್ಲಿ ಕೊಳತ ಹಾಗೆ ತೋರೋಣವು, ಪ್ರಲಾಪಗಳುಳ್ಳ ಅತಿಸಾರವು ಅಸಾಧ್ಯವು.

೫. ಯಾವ ಮನುಷ್ಯನಿಗೆ ಆಸನದ್ವಾರವು ತುಂಬಿದ ಹಾಗೆ ಇದ್ದು ದೇಹದಲ್ಲಿ ಕಾರ್ಶ್ಯವು, ಮೂಗಿನಲ್ಲಿ ವಿಶೇಷವಾಗಿ ಸಿಂಬಳ ತುಂಬಿ ಇರೋಣವು, ಆಸನದ್ವಾರದಲ್ಲಿ ಸಣ್ಣಸಣ್ಣ ಬೊಕ್ಕೆಗಳು ಏಳುವಿಕೆಯು, ಭ್ರಮೆ, ಅಗ್ನಿನಾಶಗಳುಳ್ಳ ಅತಿಸಾರವು ಅಸಾಧ್ಯವು.

೬. ಗಂಟುಗಂಟಾಗಿ ಮಲಬಿದ್ದು ಮಾಂಸವನ್ನು ತೊಳದ ನೀರಿನಂತೆಯೂ, ತೈಲ, ಘೃತ, ಲವಣ, ದಧಿ, ಮಜ್ಜೆ, ವಸೆ, ಪೂಯಗಳಿಂದ ಕೂಡಿದಂತೆಯೂ, ಕಪ್ಪಿನಿಂದಕೂಡಿದ ಕೆಂಪಿನಂತೆಯೂ, ಜೇನಿನಂತೆಯೂ ಮಲವು ಸ್ರವಿಸಿದರೆ ಅಸಾಧ್ಯವು.

೪. ರಕ್ತಾತಿ ಸಾರದಲ್ಲಿ ಅಸಾಧ್ಯಲಕ್ಷಣ:—

೧. ಹೆಚ್ಚಾಗಿ ರಕ್ತಬೀಳುವದು, ದುರ್ಗಂಧ, ಬಿಳಪುರಂಗು, ಆಸನದ್ವಾರದಲ್ಲಿ ನೋವು, ಸರ್ವದಾ ರಕ್ತಸ್ರಾವ, ಧಾತುನಾಶ, ಬದ್ಧಮಲ, ಕೆಲವುಕಾಲ

ಮಲದಲ್ಲಿ ಅತಿಸ್ರಾವ, ಮತ್ತು ಧಾರೆದಂತೆ ಬೀಳೋಣ, ಅದಕ್ಕೆ ನೊಣಗಳು ಮುತ್ತೋಣ, ಆಸನದ್ವಾರವು ತೆರದಿರುವದು, ಮೈಮೇಲೆ ಕೆಂಪಾಗಿ ಗುಂಡುಗುಂಡಾಗಿರುವರೀತಿ ಕಾಣಿಸುವದು, ಅಂಡದಮೇಲಿನ ಚರ್ಮ ಕಳಿಯುವದು, ತಿಂದ ಅನ್ನವೇ ಮಲದಲ್ಲಿ ಬೀಳುವದು, ಸರ್ವಾಂಗ ಸಂಧಿ, ಶೈಥಿಲ್ಯ, ಬಲಹಾನಿ, ಅಗ್ನಿನಷ್ಟ, ಶ್ವಾಸ, ಕಾಸದಲ್ಲಿ ರಕ್ತಬೀಳುವಿಕೆ, ಜ್ವರ, ದಾಹಗಳಿಂದ ಕೂಡಿದ ಅತಿಸಾರವು ಅಸಾಧ್ಯವು.

೫. ರಕ್ತಪ್ರವರ್ತಿಯಲ್ಲಿ ಅಸಾಧ್ಯಲಕ್ಷಣ:—

೧. ಕೀವಿನಿಂದ ಕೂಡಿದ ರಕ್ತಸ್ರಾವ, ಆಸನದ್ವಾರದಲ್ಲಿ ನೋವು, ಮೇಲುಸುರು ಕೆಮ್ಮುಗಳಿಂದ ಕೂಡಿದ್ದರೆ ಅಸಾಧ್ಯವು.

೬. ಸಂಗ್ರಹಣೀಯಲ್ಲಿ ಅಸಾಧ್ಯಲಕ್ಷಣ:—

೧. ತ್ರಿದೋಷದಿಂದ ಹುಟ್ಟಿ ಹುಟ್ಟಿದಾರಭ್ಯ ನಿರ್ವಿಚಾರದೆ ಕರಳು ಹೊರಗೆ ಬರುತ್ತಾ ಬಲವು ಕಡಮೆಯಾಗುತ್ತಿರುವ ಸಂಗ್ರಹಣಿಯು ಅಸಾಧ್ಯವು.

೨. ಕೈಕಾಲು, ನಾಭಿ, ಗುದ, ಮುಖಗಳಲ್ಲಿ ಶೋಭೆ, ಹೃದಯ, ಪಾರ್ಶ್ವಗಳಲ್ಲಿ ಶೂಲೆಗಳುಳ್ಳ ಸಂಗ್ರಹಣಿಯು ಅಸಾಧ್ಯವು.

೩. ಅಸಾಧ್ಯ ಮೂಲವ್ಯಾಧಿ ಇದ್ದು ರೋಗಿಗೆ ಆಯುಷ್ಯವಿದ್ದು ಚತುಷ್ಪಾದ ಜಂತುವಿನಂತೆ ನಡಿಯುತ್ತಿರುವವನಿಗೆ ಅಗ್ನಿನಷ್ಟವಾದ ಸಂಗ್ರಹಣಿಯು ಅಸಾಧ್ಯವು.

೪. ಹೃದಯದಲ್ಲೂ ಪಾರ್ಶ್ವದಲ್ಲಿಯೂಶೂಲೆ, ಸಂಮೋಹ, ಛರ್ದಿ, ಮೈನೋವು, ಜ್ವರ ಇವುಗಳಿದ್ದು ತೃಷ್ಣಾ, ಗುದಸ್ಥಾನದಲ್ಲಿ ಮೆತ್ತಗಿದ್ದು ಹುಣ್ಣು ಇದ್ದರೆ ಅಂಥಾ ಸಂಗ್ರಹಣಿ ಅಸಾಧ್ಯವು.

೫. ತೃಷ್ಣಾ, ಅರುಚಿ, ಶೂಲೆ, ಅಧಿಕರಕ್ತಸ್ರಾವ, ಶೋಭೆ, ಅತಿಸಾರ, ಅರ್ಶ ಇವುಗಳಿಂದ ಕೂಡಿದ ಸಂಗ್ರಹಣಿಯು ಅಸಾಧ್ಯವು.

೬. ತ್ರಿದೋಷದಿಂದ ಹುಟ್ಟಿದ್ದಾಗಿ ಹೊಟ್ಟೆದಪ್ಪನಾಗಿ ಕೈ, ಕಾಲು, ಗುದ, ಹೊಟ್ಟೆ, ಅಂಡ ಇವುಗಳಲ್ಲಿ ಶೋಭೆಯು ಇದ್ದು ಪಾರ್ಶ್ವ, ಹೃದಯ ಇವುಗಳಲ್ಲಿ ಶೂಲೆ ಇವುಗಳುಳ್ಳ ಸಂಗ್ರಹಣಿಯು ಅಸಾಧ್ಯವು.

೭. ವಾಂತಿ, ಜ್ವರ, ಮೋಹ, ತೃಷ್ಣಾ, ಗುದದ್ವಾರಪಕ್ವವಾಗಿರುವ ರೀತಿ ಇರುವದು, ಅಗ್ನಿಮಾಂದ್ಯ, ಅರುಚಿ, ಅಂಗಭಂಗ ಇವುಗಳಿರುವ ಸಂಗ್ರಹಿಣಿಯು ಅಸಾಧ್ಯವು.

೮. ಮೂಲವ್ಯಾಧಿಯಲ್ಲಿ ಕಣ್ಣು ಕಾಣದೆ ಹೋದರೂ, ಹೊಟ್ಟೆ, ಕಣ್ಣು, ಕೈ, ಕಾಲು, ಗುದ, ಅಂಡ ಇವುಗಳಲ್ಲಿ ಶೋಭೆಯಿದ್ದರೂ, ಹೃದಯಶೂಲೆ,

ಶ್ವಾಸ, ಶೋಷೆ, ಅತಿಸಾರದಲ್ಲಿ ಅತ್ಯಂತರಕ್ತ ಇವುಗಳಿದ್ದರೆ ಅಂಥಾ ಸಂಗ್ರಹಣಿಯು ಅಸಾಧ್ಯವು.

೭. ಹದಯರೋಗದಲ್ಲಿ ಅಸಾಧ್ಯಲಕ್ಷಣ :—

೧. ರೋಮಾಂಚವು, ಕಣ್ಣುಗಳಲ್ಲಿ ಕೆಂಪು, ಹೃದಯಶೂಲೆ, ನಿಟ್ಟುಸುರು ಇವುಗಳು ಇರುವ ಹೃದಯರೋಗ ಅಸಾಧ್ಯವು.

೨. ವಾಯುವು ನಾಭಿಗುದಗಳ ವೊಳಹೊಕ್ಕು ವಂಕ್ಷಣಪ್ರದೇಶವನ್ನು ಆಶ್ರಯಿಸಿ ಗುದಹೃದಯಗಳನ್ನು ಹಿಡಿದುಕೊಂಡು, ಮಲ, ವಸ್ತಿ, ಸಿರಸ್ಸು, ನಾಭಿ ಇವುಗಳನ್ನು ಗಟ್ಟಿಯಾಗಿ ಹಿಡಿದು ಆಯಾಸ್ಥಳಗಳಲ್ಲಿ ರೋಗಗಳನ್ನುಂಟುಮಾಡಿ ವಂಕ್ಷಣಪ್ರದೇಶಗಳಲ್ಲಿ ಶೂಲೆಗಳನ್ನು ಉಂಟುಮಾಡಿ ನೀರಡಿಕೆ, ಮಲ, ಭಿನ್ನ, ಶ್ವಾಸ ಇವುಗಳನ್ನು ಹುಟ್ಟಿಸುತ್ತದೆ. ವಕ್ಷಸ್ಥಳದಲ್ಲಿ ಹಿಡದುಕೊಂಡು ಕಣ್ಣು ದೊಡ್ಡದಾಗಿ ಗುಡ್ಡೆಗಳು ಅಲ್ಲಾಡದಂತೆ ಮಾಡುತ್ತದೆ. ಕ್ಷೀಣದೇಹಿಗೇಆಗಲಿ ಬಲಿಷ್ಠನಿಗೇಆಗಲಿ ಈ ಲಕ್ಷಣಗಳು ಇದ್ದ ಹೃದಯರೋಗವು ಅಸಾಧ್ಯವು.

೮. ರಕ್ತಪಿತ್ತದಲ್ಲಿ ಅಸಾಧ್ಯಲಕ್ಷಣ :—

೧. ಬಾಯಿಯಲ್ಲಿಯೂ ಗುದದ್ವಾರದಲ್ಲಿಯೂ ಸಹ ರಕ್ತ ಬೀಳುತ್ತಿದ್ದರೆ ಆ ರಕ್ತಪಿತ್ತವು ಅಸಾಧ್ಯವು.

೨. ತ್ರಿದೋಷದಿಂದ ಹುಟ್ಟಿ ಅಗ್ನಿಮಾಂದ್ಯವಾಗಿರುವ ರಕ್ತಪಿತ್ತವು ಅಸಾಧ್ಯವು.

೩. ವ್ಯಾಧಿಯಿಂದ ಕ್ಷೀಣವಾಗಿ ಭೋಜನವಿಲ್ಲದೆ ಇರುವ ವೃದ್ಧನಾದ ಮನುಷ್ಯನಿಗೆ ಈ ರಕ್ತಪಿತ್ತವು ಇದ್ದರೆ ಅಸಾಧ್ಯವು.

೪. ರಕ್ತಕ್ಷಯವಾಗಿ ಅಂತರಿಕ್ಷವು ತಲೇಮೇಲೆ ಬಿಳುವಂತೆ ಕಾಣುವ ರಕ್ತಪಿತ್ತವು ಅಸಾಧ್ಯವು.

೯. ಓಕರಿಕೆ ರಕ್ತಪಿತ್ತದಲ್ಲಿ ಅಸಾಧ್ಯ ಲಕ್ಷಣ :—

೧. ರಕ್ತವಾಂತಿ, ಕಣ್ಣು ಕೆಂಪು, ರಕ್ತದೋಷಾದಿಯಲ್ಲಿ ಕೆಂಪಾಗಿ ದಿಕ್ಕುಗಳು ಕಾಣುವದು, ಇವುಗಳುಳ್ಳ ರಕ್ತಪಿತ್ತವೂ ಓಕರಿಕೆಯೂ ಅಸಾಧ್ಯವು.

೨. ಇಂದ್ರಚಾಪದ ರಂಗಿನಂತೆ ಅತಿರಕ್ತಸ್ರಾವವು, ಅನೇಕ ರೂಪ ಕಾಣೋದು, ಕಿವಿ, ಮುಖ, ಹೃದಯ, ರೋಮಕೂಪಗಳಲ್ಲಿ ರಕ್ತಸ್ರಾವವು, ಹೊಟ್ಟೆ ಬಟ್ಟೆಯಲ್ಲಿ ಅತಿದುರ್ಗಂಧಗಳುಳ್ಳ ರಕ್ತಪಿತ್ತವು, ಓಕರಿಕೆಯು ಅಸಾಧ್ಯವು.

೧೦. ಮೂಲರೋಗದಲ್ಲಿ ಅಸಾಧ್ಯಲಕ್ಷಣ.—ಕೈಕಾಲು, ನಾಭಿ, ಗುದ, ವೃಷಣ, ಮುಖ ಇವುಗಳಲ್ಲಿ ಶೋಭೆ ಮತ್ತು ಹೃದಯ ಪಾರ್ಶ್ವ, ಅಂಗ ಇವುಗಳಲ್ಲಿ ನೋವು, ವಮನ, ಜ್ವರ ಇವುಗಳಿದ್ದು ಆಸನದ್ವಾರವು ತೆರದು ಇದ್ದರೆ ಅಸಾಧ್ಯವು.

೧೧. ದೇವೀರೋಗಕ್ಕೆ ಅಸಾಧ್ಯಲಕ್ಷಣ :—

೧. ಹವಳದ ಗುಳಿಗೆಯು ಹಾಗೆ ಪ್ರಕಾಶವಾಗಿ ಯಾರ ದೇಹದಲ್ಲಿ ಸಿಡುಬು ಹುಟ್ಟಿ ಹುಟ್ಟಿ ವಡಿಯುತ್ತಾ ಇದ್ದರೆ ಅದು ಅಸಾಧ್ಯವು.

೨. ಬಾಳೆಹ್ಯಾಗೆ ಹರಡಿಕೊಂಡು ಕೆಂಪಾಗಿ ವೊಳಮುಖವಾಗಿ ಸಣ್ಣಸಣ್ಣವಾಗಿ ಗುಳ್ಳೆಗಳು ಹುಟ್ಟಿದರೆ ಆಸಿಡಬು ಅಸಾಧ್ಯವು.

೧೨. ಕಾಮಿಲೆಯಲ್ಲಿ ಅಸಾಧ್ಯಲಕ್ಷಣ.—ಕಣ್ಣುಗಳಲ್ಲಿ ಹಳದಿ, ಮುಖದಲ್ಲಿಯೂ ಕಿವಿಗಳಸಮೀಪದಲ್ಲಿಯೂ ಮಾಂಸ ನಷ್ಟವು, ಸರ್ವಾಂಗ ತಾಪ, ಮೈಬಿಸಿ ಇವುಗಳಿದ್ದರೆ ಅದು ಅಸಾಧ್ಯವು.

೧೩. ಪಿತ್ತಕಾಮಿಲೆಯಲ್ಲಿ ಅಸಾಧ್ಯಲಕ್ಷಣ.—ಕಾರಣವಿಲ್ಲದೆ ವೋಡೋಣ, ಚರ್ಮದಲ್ಲಿ ಕಾರ್ಶ್ಯ, ಸರ್ವಾಂಗದಲ್ಲಿ ಶೂಲೆ, ಮತ್ತು ಉರಿ ಇರೋದು, ಇಂಥಾದ್ದು ಅಸಾಧ್ಯವು.

೧೪. ಕಫದಕಾಮಿಲೆಯಲ್ಲಿ ಅಸಾಧ್ಯಲಕ್ಷಣ.—ಬಾಯಿಯಲ್ಲಿ ಕೀವಿನಂತೆ ಕಫವು, ಮರ್ಮಸ್ಥಾನದಲ್ಲಿ ನೋವು, ಅಕಸ್ಮಾತ್ ದೋಷ, ದೊಡ್ಡದಾಗಿಯೂ ಸಣ್ಣಸಣ್ಣದಾಗಿಯೂ ಮೈಮೇಲೆ ಗುಳ್ಳೆಗಳು ಹುಟ್ಟಿದರೆ ಅಸಾಧ್ಯವು.

೧೫. ಧ್ವನಿಯಲ್ಲಿ ಅಸಾಧ್ಯಲಕ್ಷಣ :—

೧. ಯಾವಮನುಷ್ಯನಿಗೆ ಬಲನಾಶ, ಹೀನಸ್ವರ, ಅವ್ಯಕ್ತಸ್ವರ, ಗದ್ಗದಸ್ವರ, ಮೋಹ ಇವುಗಳಿದ್ದರೆ ಅಸಾಧ್ಯವು.

೨. ಮತ್ತು ಯಾವನಿಗೆ ಹೀನಸ್ವರ, ದುರ್ಬಲತ್ವ, ವರ್ಣ ಕೆಡೋದು, ರೋಗಗಳು ನಾನಾಪ್ರಕಾರವಾಗಿ ತೋರುವದು, ಇಂಥಾದ್ದು ಅಸಾಧ್ಯವು.

೩. ಯಾವನಿಗೆ ಮಾತನಾಡಿದರೆ ಹೀನಧ್ವನಿ ಹುಟ್ಟಿದರೆ ಅದು ಅಸಾಧ್ಯವು.

೧೬. ಶ್ವಾಸದಲ್ಲಿ ಅಸಾಧ್ಯಲಕ್ಷಣ :—

೧. ಯಾವ ಮನುಷ್ಯನು ಆಹಾರವನ್ನು ಸ್ವಲ್ಪವಾಗಿ ತೆಗದುಕೊಂಡರೂ ಶ್ಲೇಷ್ಮಾಧಿಕ್ಯವು, ನಿಟ್ಟುಸುರು, ಶ್ವಾಸ ಒಳಗೆಹೋಗುವಾಗ ಸಣ್ಣನಾಗುವ ರೀತಿ, ಗಂಟಲಿನಲ್ಲಿ ಶ್ಲೇಷ್ಮ ಮತ್ತು ತಾಪ ಇವುಗಳಿದ್ದರೆ ಅಸಾಧ್ಯವು.

೨. ಯಾವನಿಗೆ ಶ್ವಾಸವು ಕಿರಿದಾಗಿ ಬರುವದೋ, ಮೈಯೆಲ್ಲಾ ನಡುಗುವದೋ, ತಲೆ ಹಿಡಿದುಕೊಳ್ಳುವದೋ ಅದು ಅಸಾಧ್ಯವು.

೩. ಮೂರು ದೋಷವೈಷಮ್ಯಗಳಿಂದ ಊರ್ಧ್ವಭಾಗದಲ್ಲಿ ಹುಟ್ಟುವ ಶ್ವಾಸವು ಅಸಾಧ್ಯವು.

೧೭. ಉತ್ಪಾತಜ್ವರಕ್ಕೆ ಇಂಗ್ಲೀಷಿನಲ್ಲಿ ಡೆಂಗ್ಯುಫೀವರ್, ತಮಿಳಿನಲ್ಲಿ ಮುಡು ಕುಮಾರಿ, ಇದರ ಅಸಾಧ್ಯಲಕ್ಷಣ.—ಯಾವನಿಗೆ ಸರ್ವದಾ ಹುಳಿ ಯಲ್ಲಿ ಇಚ್ಛೆ, ನರಗಳು, ನಾಲಿಗೆ, ಉಗುರು, ಚರ್ಮ, ಕಣ್ಣು, ಮಲ ಮೂತ್ರ ಇವುಗಳೆಲ್ಲಾ ಹಳದೀರಂಗು, ಪಿತ್ತಾಧಿಕ್ಯ, ಯಾವಾಗಲೂ ಛಳಿಯಾಗುವದು ; ಈ ಜ್ವರದಲ್ಲಿ ಕೂದಲುಗಳು ಸುರಟಿಕೊಂಡರೆ ಅಸಾಧ್ಯವು.

೧೮. ತಿಲಕರೋಗದಲ್ಲಿ ಅಸಾಧ್ಯಲಕ್ಷಣ.—ಮುಖ, ದಂತ, ಉಗುರು ಇವುಗಳಲ್ಲಿ ಹುವ್ವು ಅಂದರೆ ಬಿಳಿಚಿಕ್ಕಿ ಆಗೋದು, ಹೊಟ್ಟೆ ಮೇಲೆ ನಾನಾವಿಧವಾದ ವರ್ಣವುಳ್ಳ ನರಗಳು ಹುಟ್ಟೋದು, ಊರ್ಧ್ವಶ್ವಾಸ, ಮೈಯಲ್ಲಿ ತನು ವು, ವಂಕ್ಷಣದಲ್ಲಿ ಶೂಲೆ, ಯಾವಕಾಲದಲ್ಲಿಯೂ ಸುಖವಿಲ್ಲದೆ ಸಂಕಟ ಪಡುತ್ತಿದ್ದರೆ ಅಸಾಧ್ಯವು.

೧೯. ಬೆವರಿನಲ್ಲಿ ಅಸಾಧ್ಯಲಕ್ಷಣ.—ಬಲಿಷ್ಠನೇಆಗಲಿ ಅಬಲಿಷ್ಠನೇಆಗಲಿ ಎದ್ದು ನಿಂತು ಹಂಪೈಸುವನೋ, ಸರ್ವಾಂಗ ಸಂಧಿಗಳ ಶೈಥಿಲ್ಯವು, ಲಲಾಟದಲ್ಲಿ ಬೆವರು, ನಿಂತು ಕೊಂಡೆ ನಿದ್ರೆ ಮಾಡುವರೀತಿ, ಕಾಲುಸುರಟಿಕೊಳ್ಳುವಿಕೆ, ಮತ್ತು ಮಲಗುವ ವಿಷಯದಲ್ಲಿಯೂ ಬಟ್ಟೆಗಳಲ್ಲಿಯೂ ಇಚ್ಛೆಯಿಲ್ಲದೆ ಇರುವ ರೀತಿ ಇದ್ದರೆ ಅಸಾಧ್ಯವು.

೨೦. ನಿದ್ರೆಯಲ್ಲಿ ಅಸಾಧ್ಯಲಕ್ಷಣ.—ಏನುಕಾರಣವೂ ಇಲ್ಲದೆ ಹೊಸದಾಗಿ ಯಲ್ಲಾ ಕಾಲದಲ್ಲೂ ನಿದ್ರೆ ಮಾಡುವರೀತಿ, ಹಾಗೆಯೇ ಯಲ್ಲಾಕಾಲದಲ್ಲೂ ನಿದ್ರೆ ಮಾಡುವವನಿಗೆ ನಿದ್ರೆ ಬರದೆಯಿದ್ದರೆ ಅಸಾಧ್ಯವು.

೨೧. ನೇತ್ರದಲ್ಲಿ ಅಸಾಧ್ಯಲಕ್ಷಣ.—ಕಣ್ಣಿನ ನೀರು ಮುಖಕ್ಕೆಲ್ಲಾ ವ್ಯಾಪಿಸಿ ಕಾ ಲುಗಳಲ್ಲಿ ನೋವು ಇದ್ದು ಮೇಲಕ್ಕೆ ಸೆಳದುಕೊಳ್ಳುತ್ತಾ ಛಳಕು ಉಂ ಟಾಗಿ ವೇದನೆ ಕಾಣಿಸಿ ನೇತ್ರದಲ್ಲಿ ಬಳಲಿಕೆ ಇದ್ದರೆ ಅಸಾಧ್ಯವು.

೨೨. ಹಸಿವಿನಲ್ಲಿ ಅಸಾಧ್ಯಲಕ್ಷಣ.—ಯಾವಾಗ್ಯು ಇಚ್ಛೆ ಇರುವಪದಾರ್ಥದ ಲ್ಲಿ ಇಚ್ಛೆ ತಪ್ಪಿದರೆ ಅಸಾಧ್ಯವು.

೨೩. ಛರ್ದಿಯಲ್ಲಿ ಅಸಾಧ್ಯಲಕ್ಷಣ.—ಜಾಗ್ರತೆಯಲ್ಲಿ ಮೂತ್ರಸ್ರಾವ, ಅಮೇಧ್ಯದಂತೆ ಮೈಯಲ್ಲಿ ದುರ್ವಾಸನೆ, ಮಲಮೂತ್ರಗಳ ವಾಸನೆಯಂತೆಕೆಂಪು ವರ್ಣವುಳ್ಳದ್ದಾಗಿ ವಾಂತಿಯಾದರೆ ಅಸಾಧ್ಯವು. ಎದೆಯಲ್ಲಿ ಉರಿ, ನೀರಡಿಕೆ, ಉತ್ತಮವಾದ ಔಷಧದಿಂದ ಶಮನವಾಗದೆ ಇರೋಣವು, ಇದು ಅಸಾಧ್ಯವು.

೨೪. ನೀರಡಿಕೆಯಲ್ಲಿ ಅಸಾಧ್ಯಲಕ್ಷಣ.—ಕ್ಷಣಕ್ಷಣೆ ಉಪರೋಗಗಳು ಹುಟ್ಟಿ ನಾಲಿಗೆ ಹೊರಗೆ ಹಾಯ್ದು ಕೊಂಡರೆ ಅಸಾಧ್ಯವು.

೨೫. ಗುಲ್ಮರೋಗದಲ್ಲಿ ಅಸಾಧ್ಯಲಕ್ಷಣ:—

೧. ಬಹಳದಿನ ಸಂಚಿತವಾದ ಉದರಶೂಲೆಯನ್ನುಂಟುಮಾಡುವ ತಲೆ ಮೊದಲಾದಸ್ಥಳಗಳಲ್ಲಿ ಸುತ್ತಿಕೊಂಡು ಕೂರ್ಮದೋಪಾದಿಯಲ್ಲಿ ದಪ್ಪನಾಗಿರುವಿಕೆ, ದುರ್ಬಲತ್ವ, ಅರುಚಿ, ಲಾಲಾ, ಛರ್ದಿ, ಓಕರಿಕೆ, ಬಾಯಾರಿಕೆ, ನೆಗಡಿ, ತಂದ್ರ ಇವುಗಳುಳ್ಳ ಗುಲ್ಮರೋಗವು ಅಸಾಧ್ಯವು.

೨. ಜ್ವರ, ಶ್ವಾಸ, ಛರ್ದಿ, ಅತಿಸಾರ ಇವುಗಳಿಂದ ಪೀಡಿತವಾಗೋದು, ಹೃದಯ ನಾಭಿ ವಸ್ತಿ, ಪಾದ ಇವುಗಳಲ್ಲಿ ಶೋಭೆಯು, ಶೂಲೆವುಳ್ಳ ಮನುಷ್ಯನ ಗುಲ್ಮರೋಗವು ಅಸಾಧ್ಯವು.

೩. ದಮ್ಮು, ಶೂಲೆ, ಬಾಯಾರಿಕೆ, ಅನ್ನನೀರುಗಳಲ್ಲಿ ದ್ವೇಷ, ಅಕಸ್ಮಾತ್ ಗುಲ್ಮಗ್ರಂಥಿ ಚಲಿಸೋದು, ದುರ್ಬಲತ್ವ ಇವುಗಳಿಂದ ಕೂಡಿದ ಗುಲ್ಮರೋಗವು ಅಸಾಧ್ಯವು.

೪. ಜ್ವರ, ದಮ್ಮು, ಕೆಮ್ಮು, ನೆಗಡಿ, ಆಲಸ್ಯ, ವಾಂತಿ, ಭ್ರಾಂತಿ ; ಗುದ, ನಾಭಿ, ಹೃದಯ, ಕೈಕಾಲು ಇವುಗಳಲ್ಲಿ ಶೋಭೆ ; ಕೃಶತ್ವ, ಅತಿಸಾರ, ಬಾಯಾರಿಕೆ, ಶೂಲೆ ಇವುಗಳಿಂದ ಕೂಡಿದ ಗುಲ್ಮರೋಗವು ಅಸಾಧ್ಯವು.

೫. ಬೇರೆಬೇರೆ ಗಂಟು ಗಂಟಾಗಿರುವದು, ಗಟ್ಟಿಯಾಗಿರುವದು, ಕೂರ್ಮದಂತೆ ಮೇಲಿನಿಂದ ಕೆಳಕ್ಕೆ ಕೆಳಗಿನಿಂದ ಮೇಲಕ್ಕೆ ಬೆಳೆಯುತ್ತಾ ಬರುವ ನರಗಳಿಂದ ಕಟ್ಟಿಕೊಂಡಿರುವದು, ಜ್ವರ, ವಮನ, ಬಿಕ್ಕಳಿಕೆ, ನೆಗಡಿ ಇವುಗಳಿಂದ ಕೂಡಿರುವ ಗುಲ್ಮರೋಗವು ಅಸಾಧ್ಯವು.

೨೬. ಮೂತ್ರಾಘಾತರೋಗದಲ್ಲಿ ಅಸಾಧ್ಯಲಕ್ಷಣ:—

೧. ಕಫದಿಂದ ಉಂಟಾದ ಮೂತ್ರಾಘಾತವು, ಜ್ವರ, ಶೋಷೆ, ಜಡತ್ವ ಇವುಗಳಿಂದ ಕೂಡಿಯಿದ್ದು ಬಿಳುಪಾಗಿ ಗಟ್ಟಿಯಾಗಿ ಸ್ವಲ್ಪಸ್ವಲ್ಪವೆ ಮೂತ್ರಸ್ರಾವವಾಗುತ್ತಿದ್ದರೆ ಅಸಾಧ್ಯವು.

೨. ಶ್ಲೇಷ್ಮದಿಂದ ಗಂಟಲುಕಟ್ಟಿಕೊಂಡು ವಸ್ತಿಯಲ್ಲಿ ಪಿತ್ತಾಧಿಕ್ಯವಾಗಿರುವ ಮೂತ್ರಾಘಾತವು ಅಸಾಧ್ಯವು.

೩. ವಸ್ತಿಯಲ್ಲಿ ಕುಂಡಲಾಕಾರವು ತೋರಿ ತೃಷೆ, ಮೋಹ, ಶ್ವಾಸ ಇವುಗಳಿಂದ ಕೂಡಿದ ಮೂತ್ರಾಘಾತವು ಅಸಾಧ್ಯವು.

೨೩. ಅಶ್ಮರೀರೋಗದಲ್ಲಿ ಅಸಾಧ್ಯಲಕ್ಷಣ:—

೧. ನಾಭಿ, ವೃಷಣ ಇವುಗಳು ದಪ್ಪನಾಗಿ ಮತ್ತು ನೋವು, ಮೂತ್ರಕಟ್ಟುವಿಕೆ, ಬಿಳುಪಾಗಿರುವರೀತಿ ಇವುಗಳಿರುವ ಅಶ್ಮರೀರೋಗವು ಅಸಾಧ್ಯವು.

೨. ಅಂಡದಲ್ಲಿ ಚುಚ್ಚುವಿಕೆ, ಅಂಡವು ಬತ್ತುವದು, ಮೂತ್ರಬಂಧ ಇವುಗಳ ಮೇಲೆ ಉಪರೋಗಗಳು ಹುಟ್ಟಿದ ಅಶ್ಮರೀರೋಗವು ಅಸಾಧ್ಯವು.

೨೪. ಪ್ರಮೇಹರೋಗದಲ್ಲಿ ಅಸಾಧ್ಯಲಕ್ಷಣ:—

೧. ಪಿತ್ತದಿಂದ ಉತ್ಪನ್ನವಾದ ಆರುವಿಧ ಪ್ರಮೇಹವು, ವಾತದಿಂದ ಉತ್ಪನ್ನವಾದ ನಾಲ್ಕು, ಶ್ಲೇಷ್ಮದಿಂದ ಹುಟ್ಟಿದ್ದು ಹತ್ತುವಿಧ ಪ್ರಮೇಹ, ಇವುಗಳು ಅಸಾಧ್ಯವು.

೨. ಕಂಠ, ಹೃದಯ ಇವುಗಳು ಕಟ್ಟಿಕೊಳ್ಳುವಿಕೆ, ಸಕಲಪದಾರ್ಥದಮೇಲೆಯೂ ಅಪೇಕ್ಷೆ, ಶೂಲೆ, ನಿದ್ರೆನಾಶ, ಶೋಷೆ, ಕೆಮ್ಮು, ಶ್ವಾಸ, ಕಡ್ಡಿಯಹಾಗೆ ಮೂತ್ರಸ್ರಾವ, ಇವುಗಳುಳ್ಳ ವಾತಮೇಹವು ಅಸಾಧ್ಯವು.

೩. ಪಿತ್ತಪ್ರಮೇಹವು ಗರ್ಭದಿಂದ ಹುಟ್ಟಿಇದ್ದರೆ ಅಸಾಧ್ಯವು.

೪. ಶ್ಲೇಷ್ಮಪ್ರಮೇಹದಲ್ಲಿ ಅಸಾಧ್ಯ, ಮೈಮೇಲೆ ಗುಳ್ಳೆಗಳುಯಿದ್ದು ಮರ್ಮಸ್ಥಳಗಳಲ್ಲಿ ವಾಯು ಹಿಡಿದು ಅಂಡ, ಸ್ತನ, ಭುಜ, ಗುದದ್ವಾರ, ತಲೆ, ಕಣ್ಣು, ಕೈಕಾಲು ಇವುಗಳಲ್ಲಿ ಗುಳ್ಳೆಗಳು ಯೇಳೋದು, ಸ್ಥಿರವಾಗಿದ್ದ ಸಂತೋಷವು ನಷ್ಟವಾಗುವಿಕೆ, ದಾಹ, ನೀರಡಿಕೆ, ಜ್ವರ, ಮತ್ತಿನಹಾಗೆ ಮಲಗಿರುವದು, ಇಂಥಾ ಪ್ರಮೇಹವು ಅಸಾಧ್ಯವು.

೨೯. ಪ್ರಮೇಹಪಿಟಿಕಾರೋಗದಲ್ಲಿ ಅಸಾಧ್ಯಲಕ್ಷಣ.—ಗುದಸ್ಥಾನದಲ್ಲಿ, ಹೃದಯದಲ್ಲಿ, ಮರ್ಮಸ್ಥಾನದಲ್ಲಿ, ಶಿರಸ್ಸಿನಲ್ಲಿ, ಪೃಷ್ಠದಲ್ಲಿ ಸಹ ಉತ್ಪತ್ತಿಯಾಗಿರುವ ಪ್ರಮೇಹಪಿಟಿಕೆ, ಅಗ್ನಿಬಲ ಕಡಮೆಯಾಗಿ ಹುಟ್ಟಿದ್ದೇ ಆದರೆ ಅಸಾಧ್ಯವು.

೩೦. ಮೇಹರೋಗದಲ್ಲಿ ಅಸಾಧ್ಯಲಕ್ಷಣ.—ನೀರಡಿಕೆ, ಮೈಯುರಿ, ಗುಳ್ಳೆಗಳು, ಮಾಂಸ ಕರಗೋದು, ಅತಿಸಾರ, ಇವುಗಳುಳ್ಳಮೇಹವು ಅಸಾಧ್ಯವು.

೩೧. ಉದರರೋಗದಲ್ಲಿ ಅಸಾಧ್ಯಲಕ್ಷಣ :—

೧. ಕಣ್ಣಿನ ತೇಜಸ್ಸು ಕಮ್ಮಿಯಾಗಿ ಶಿಶ್ನವು ವಕ್ರವಾಗಿ ಚರ್ಮವು ತೆಳುವಾಗಿ ಬಲ, ರಕ್ತ, ಮಾಂಸ, ಅಗ್ನಿ ಇವುಗಳು ಕ್ಷೀಣವಾದರೆ ಆ ಉದರರೋಗವು ಅಸಾಧ್ಯವು.

೨. ಚರ್ಮ ತೆಳುವಾಗಿ ನೇತ್ರವು ಶೀತಳವಾಗಿ ಹುಬ್ಬು, ಕಿವಿ ಸಹ ವಕ್ರವಾಗಿ ಬಲ, ರಕ್ತ, ಮಾಂಸ, ಅಗ್ನಿ ಇವುಗಳು ಕ್ಷೀಣವಾಗಿ ಶೋಥೆ, ಅತಿಸಾರ, ಪಾರ್ಶ್ವಶೂಲೆ, ಅನ್ನದ್ವೇಷ, ಪ್ರವರ್ತಿ, ಹೊಟ್ಟೆಯುಬ್ಬರ ಇವುಗಳಿರುವ ಉದರರೋಗವು ಅಸಾಧ್ಯವು.

೩. ಕೆಮ್ಮು, ಪೀನಸ, ಹೃಲ್ಲಾಸ, ಊರ್ಧ್ವಶ್ವಾಸ, ಅತಿಸಾರ, ಶೋಥೆ ಇವುಗಳಿದ್ದ ಉದರರೋಗವು ಅಸಾಧ್ಯವು.

೪. ಮಲಮೂತ್ರಗಳು ಕಟ್ಟಿ ಶ್ವಾಸ, ಶೋಥೆ, ಬಿಕ್ಕಳಿಕೆ, ಭ್ರಮೆ, ಜ್ವರ, ಮೂರ್ಛೆ, ವಾಂತಿ, ಅತಿಶಾರ ಇವುಗಳಿದ್ದ ಉದರರೋಗವು ಅಸಾಧ್ಯವು.

೩೨. ಶೋಥೆಯಲ್ಲಿ ಅಸಾಧ್ಯಲಕ್ಷಣ :—

೧. ಕೆಳಗಿನಿಂದ ಮೇಲಕ್ಕೆ ಕಂಠದವರಿಗೂ ಯೇರುವ ಶೋಥೆಯು ಅಸಾಧ್ಯವು.

೨. ಶ್ವಾಸ, ಬಾಯಾರಿಕೆ, ವಾಂತಿ, ದುರ್ಬಲತ್ವ, ಜ್ವರ, ಅರುಚಿ ಇವುಗಳಿರುವ ಶೋಥೆಯು ಅಸಾಧ್ಯವು.

೩. ಇತರ ಉಪದ್ರವಗಳಿಂದ ಹುಟ್ಟಿದ ಶೋಥೆ ಪುರುಷನಿಗೆ ಕಾಲಿನಲ್ಲಿ ಹೆಂಗಸರಿಗೆ ಮುಖ ಗುಹ್ಯಗಳಲ್ಲಿ ಉತ್ಪತ್ತಿಯಾದ ಬಹುದಿನದಿಂದ ಸಂಚಿತವಾದ ಶೋಥೆಯು ಅಸಾಧ್ಯವು.

೪. ಕಾಲುಮಾತ್ರ ಊದಿ ಹೊಟ್ಟೆತೆಳ್ಳಗೆಯಿರೋಣ ಮತ್ತು ಶಕ್ತಿಹೀನನಾಗಿರುವ ಶೋಥೆಯು ಅಸಾಧ್ಯವು.

೩೩. ಅಂಡರೋಗದಲ್ಲಿ ಅಸಾಧ್ಯಲಕ್ಷಣ :—

೧. ಅಂಡದಲ್ಲಿ ಚುಚ್ಚುವಿಕೆ, ದಪ್ಪವಾಗಿ ಮೇಲಕ್ಕೆ ಯೇರುವದು ಅಸಾಧ್ಯವು.

೩೪. ಗಳಗಂಡರೋಗದಲ್ಲಿ ಅಸಾಧ್ಯಲಕ್ಷಣ :—

೧. ಕಷ್ಟದಿಂದ ಶ್ವಾಸವನ್ನು ಬಿಡುವರೀತಿ, ಮೈ ಮೃದುವಾಗಿರುವಿಕೆ, ಒಂದುವರುಷ ಕಳೆದುಹೋಗಿ ಅರುಚಿ, ಬಹಳ ಆರ್ತಿ, ಕ್ಷೀಣಬಲ, ಸ್ವರಭಿನ್ನಗಳಿರುವದು ಅಸಾಧ್ಯವು.

೩೫. ಪೀನಸರೋಗದಲ್ಲಿ ಅಸಾಧ್ಯಲಕ್ಷಣ :—

೧. ಕಾಸ, ಜ್ವರ, ವಾಂತಿಗಳಿಂದ ಕೂಡಿದ್ದರೆ ಅಸಾಧ್ಯವು.

೩೬. ಅರ್ಬುದರೋಗದಲ್ಲಿ ಅಸಾಧ್ಯಲಕ್ಷಣ :—

೧. ಮರ್ಮಸ್ಥಾನಗಳಲ್ಲಿ ಅಸಾಧ್ಯ ಗ್ರಂಥಿಗಳು ಹುಟ್ಟಿ ಅದರಲ್ಲಿ ನಾಳಗಳು ಕಂಡು ಕೀವು ರಕ್ತ ಸುರಿಯುವದು, ಮೂಗಿನಒಳಗೆ ಕಾಣೋದು, ಸ್ಥಿರ ವಾಗಿರುವದು, ಏಕಕಾಲದಲ್ಲಿ ಎರಡು ಹುಟ್ಟೋದು ಸಹ ಅಸಾಧ್ಯವು.

೨. ಹುತ್ತಿನಹಾಗೆ ಯೆದ್ದು ಮುಳ್ಳುಗಳಿಂದ ವೃದ್ಧಿಯಾಗೋದು, ಒಂದು ವರುಷಕ್ಕೆ ಹೆಚ್ಚಾದದ್ದು ಅಸಾಧ್ಯವು.

೩೭. ಶ್ಲೀಪದರೋಗದಲ್ಲಿ ಅಸಾಧ್ಯಲಕ್ಷಣ :—

೧. ಕಫಪ್ರಕೃತಿಯಾಗಿರುವ ರೋಗಿಗೆ ಶ್ಲೇಷ್ಮಾಹಾರಗಳಿಂದ ಉತ್ಪತ್ತಿಯಾಗಿ ರಕ್ತವು ಸ್ರವಿಸುತ್ತಾ ಮೇಲೆ ಬೊಕ್ಕೆಗಳು ಹುಟ್ಟಿದ್ದು ನವೆಯು ಇದ್ದರೆ ಅಸಾಧ್ಯವು.

೩೮. ವಿದ್ರಧಿರೋಗದಲ್ಲಿ ಅಸಾಧ್ಯಲಕ್ಷಣ :—

೧. ಮೂತ್ರಬಂಧ, ನೆಗಡಿ, ವಾಂತಿ, ಬಿಕ್ಕಳಿಕೆ, ಬಾಯಾರಿಕೆ, ಮೈನೋವು, ಶ್ವಾಸ ಇವುಗಳಿಂದ ಕೂಡಿದ್ದು ಸನ್ನಿಪಾತವಿದ್ದರೆ ಅಸಾಧ್ಯವು.

೩೯. ವ್ರಣರೋಗದಲ್ಲಿ ಅಸಾಧ್ಯಲಕ್ಷಣ :—

೧. ಮರ್ಮಸ್ಥಾನದಲ್ಲಿ, ಬೇರೆಕಡೆಯಲ್ಲಿ ಹುಟ್ಟಿದ್ದು, ಚರ್ಮ ಮಾಂಸಗಳಲ್ಲಿ ಹುಟ್ಟಿದ್ದು, ಇತರ ಉಪದ್ರವವಿಲ್ಲದೆ ಇರುವದು, ಬಾಲಕನಿಗಾಗಲಿ ಜ್ಞಾನವಂತನಿಗಾಗಲಿ ಆಗಿರುವ, ಹೇಮಂತ ಶಿಶಿರ ಕಾಲಗಳಲ್ಲಿ ಉತ್ಪನ್ನವಾಗಿರುವದು. ಈ ಗುಣಗಳಲ್ಲಿ ಯಾವದೂ ಇಲ್ಲದೆ ಇದ್ದರೆ ಅಸಾಧ್ಯವು.

೨. ತ್ರಿದೋಷದಿಂದ ಹುಟ್ಟಿ ವಸೆ, ಮೇದಸ್ಸು, ಮಜ್ಜಾ ಇವುಗಳಲ್ಲಿ ಉತ್ಪತ್ತಿಯಾಗಿದ್ದರೆ ಅಸಾಧ್ಯವು.

೩. ಮದ್ಯ ಅಗರು, ತುಪ್ಪ, ಕಮಲ, ಚಂದನ, ಸಂಪಿಗೆ, ಪಾರಿಜಾತಗಳ ವಾಸನೆಯುಳ್ಳದ್ದು ಅಸಾಧ್ಯವು.

೪. ಮರ್ಮಸ್ಥಾನದಲ್ಲಿ ಉತ್ಪತ್ತಿ, ಅತಿವೇದನೆ, ಒಳಗೆ ತಾಪ, ಹೊರಗೆ ಸೀತ ಮತ್ತು ಹೊರಗೆ ತಾಪ, ಒಳಗೆ ಸೀತ, ಬಲ ಮಾಂಸಗಳ ಕ್ಷಯ, ಶ್ವಾಸ, ಕಾಸ, ಅರೋಚಕಗಳು ಉಂಟಾಗಿ ರಕ್ತಸ್ರಾವದಿಂದಲೂ ಕೂಡಿದ್ದರೆ ಅಸಾಧ್ಯವು.

೫. ಒಳಗೆ ರಕ್ತವಿರುವದು, ಹೊರಗೆ ಬಿಳಿದಾಗಿ ಕಾಣೋದು, ಕೈಕಾಲುಮುಖಗಳಲ್ಲಿ ಶೈತ್ಯ, ಮತ್ತು ಶ್ವಾಸ ಕಣ್ಣಿನಲ್ಲಿ ಕೆಂಪುಗಳುಳ್ಳ ಆಗಂತುಕ ವ್ರಣವು ಅಸಾಧ್ಯವು.

೬. ಕಪಾಲ ವೊಡಿಯುವದು, ಕಟಿಭಾಗದ ಕೀಲು, ಜಘನ, ಪೃಷ್ಠಗಳಲ್ಲಿ ಶೂಲೆ ಯುಂಟಾಗಿದ್ದರೆ ಭಗ್ನವ್ರಣವು ಅಸಾಧ್ಯವು.

೭. ತ್ರಿದೋಷದಿಂದ ಹುಟ್ಟಿದ ನಾಡೀವ್ರಣವು ಅಸಾಧ್ಯವು.

೪೦. ಭಗಂದರರೋಗದಲ್ಲಿ ಅಸಾಧ್ಯಲಕ್ಷಣ :—

೧. ಬಹಳ ಗಾಯವಾಗಿ ತ್ರಿದೋಷದಿಂದ ಹುಟ್ಟಿದ ಭಗಂದರ ಧ್ವಜಾಕಾರವಾಗಿ ಕ್ರಿಮಿಯಿಂದ ಸಹಿತವಾಗಿ ಮಲಮೂತ್ರ ವಾಯುಸಹಿತ ವಹಿಸಿರುವದು ಅಸಾಧ್ಯವು.

೨. ತ್ರಿದೋಷದಿಂದ ಉಂಟಾದ ವಾಯು, ಮೂತ್ರ, ಕ್ರಿಮಿ, ಮಲ, ಶುಕ್ಲ, ಉಳ್ಳ ಭಗಂದರ ಅಸಾಧ್ಯವು.

೪೧. ಕುಷ್ಟರೋಗದಲ್ಲಿ ಅಸಾಧ್ಯಲಕ್ಷಣ :—

೧. ಮೇದಸ್ಸು ಧಾತುಗಳಲ್ಲಿ ಉತ್ಪತ್ತಿಯಾಗಿ ಅಸ್ಥಿ ಶುಕ್ಲಗಳಲ್ಲಿ ಪ್ರವೇಶವಾದರೆ ಅಸಾಧ್ಯವು.

೨. ಕುಷ್ಟ ಒಡೆದು ಕೆಂಪುಕಣ್ಣಾಗಿ ಸ್ವರ ಹೀನವಾಗೋದು, ವಮನ, ವಿರೇಚನವೇ ಮೊದಲಾದ ಪಂಚಕರ್ಮಗಳಿಂದಲೂ ಪರಿಹಾರವಾಗದೆ ಇರುವ ಕುಷ್ಟವು ಅಸಾಧ್ಯವು.

೩. ಬೀಳೀಕೂದಲುಹುಟ್ಟಿ ನೂತನವಾಗದೆಯಿರುವ ಅಗ್ನಿದಗ್ಧವಾದ ಕುಷ್ಟವು ಅಸಾಧ್ಯವು.

೪. ಗುಹ್ಯ, ಹಸ್ತ, ತುಟಿಗಳಲ್ಲಿ ಉತ್ಪತ್ತಿಯಾಗಿ ಬಹುಕಾಲದಿಂದಿದ್ದರೆ ಅಸಾಧ್ಯವು.

೫. ಕಣ್ಣುಗಳಲ್ಲಿ ಕೆಂಪು, ಸ್ವರನಾಶ, ಮಂದಾಗ್ನಿ, ಕ್ರಿಮಿ, ಕೃಷ್ಣಾತಿಸಾರಗಳುಳ್ಳದ್ದು ಅಸಾಧ್ಯವು.

೪೨. ಆಮ್ಲಪಿತ್ತರೋಗದಲ್ಲಿ ಅಸಾಧ್ಯಲಕ್ಷಣ :—

೧. ಬಹಳ ದಿವಸದಿಂದ ಸಂಚಿತವಾಗಿದ್ದರೆ ಅಸಾಧ್ಯವು.

೪೩. ವಿಸರ್ಪರೋಗದಲ್ಲಿ ಅಸಾಧ್ಯಲಕ್ಷಣ :—

೧. ಸನ್ನಿಪಾತ ಮತ್ತು ಕ್ಷತಗಳಿಂದ ಉತ್ಪನ್ನವಾದ ವಿಸರ್ಪವು ಅಸಾಧ್ಯವು.

೨. ಕಾಸ, ಅಂಗಕಾಂತಿನ್ಯೂನತ್ವ, ಜ್ವರ, ಮೂರ್ಛೆ, ಸಂಧಿಗಳಲ್ಲಿ ನೋವು, ಭ್ರಮೆ, ಮುಖಶೋಷ, ಹಂಮ್ಯೆಸುವಿಕೆ, ಶರೀರದಲ್ಲಿ ಉರಿ, ಅತಿಸಾರಗಳುಳ್ಳ ವಿಸರ್ಪವು ಅಸಾಧ್ಯವು.

೪೪. ವಿಸ್ಫೋಟ ರೋಗದಲ್ಲಿ ಅಸಾಧ್ಯಲಕ್ಷಣ :—

೧. ತ್ರಿದೋಷದಿಂದ ಕೂಡಿ ಇದ್ದರೆ ಅಸಾಧ್ಯವು.

೪೫. ರೋಮಾಂತಿಕ ರೋಗದಲ್ಲಿ ಅಸಾಧ್ಯಲಕ್ಷಣ :—

೧. ಸನ್ನಿಪಾತದಿಂದ ಉತ್ಪನ್ನವಾಗಿ ಟಿಗರಿನ ಹಾಗೆ ಇರುವದು. ನೇರಳೇಹಣ್ಣಿನಹಾಗೆ, ಲೋಹದಹಾಗೆ, ಅತಸೀಫಲದೋಪಾದಿಯಲ್ಲಿ ಸಹ ಅನೇಕ ವರ್ಣವಿದ್ದು ದೋಷಭೇದಗಳಿಂದ ಉತ್ಪತ್ತಿಯಾಗಿದ್ದರೆ ಅಸಾಧ್ಯವು.

೪೬. ಕರ್ಣಶೂಲೆರೋಗದಲ್ಲಿ ಅಸಾಧ್ಯಲಕ್ಷಣ :—

೧. ಮೂರ್ಛೆ, ದಾಹ, ಜ್ವರ, ಕೆಮ್ಮು, ಬಳಲಿಕೆ, ವಾಂತಿಗಳಿದ್ದರೆ ಅಸಾಧ್ಯವು.

೪೭. ಶೂಕರೋಗದಲ್ಲಿ ಅಸಾಧ್ಯಲಕ್ಷಣ :—

೧. ಮಾಂಸಾರ್ಬುದ, ಜಠರಾಗ್ನಿ, ಶರೀರಗಳೆಲ್ಲಾ ಕ್ಷೀಣತ್ವ, ವಿದ್ರಧಿಗಳುಳ್ಳದ್ದು ಅಸಾಧ್ಯವು.

೪೮. ಸೀನು ಕೆಮ್ಮು ರೋಗದಲ್ಲಿ ಅಸಾಧ್ಯಲಕ್ಷಣ :—

೧. ಯಾವನಿಗೆ ಸೀನುಕೆಮ್ಮುಗಳಲ್ಲಿ ಅಪೂರ್ವಧ್ವನಿ, ಶ್ವಾಸ ಅಡಗಿಕೊಂಡು ಧೀರ್ಘವಾಗಿ ಉಸರು ಬಿಡೋದು, ಸ್ನಾನ ಮಾಡಿದಾಗ್ಯೂ, ಮಾಡದೆ ಇದ್ದಾಗ್ಯೂ ಮೈಯಲ್ಲಿ ದುರ್ಗಂಧ, ಮತ್ತು ಉಸರಿನಲ್ಲಿ ಸುಗಂಧವಿರುತ್ತೋ ಅದು ಅಸಾಧ್ಯವು.

೪೯. ಕಾಸ ಶ್ವಾಸ ರೋಗದಲ್ಲಿ ಅಸಾಧ್ಯಲಕ್ಷಣ :—

೧. ಜ್ವರ, ವಾಂತಿ, ಕೆಮ್ಮು, ಶೋಭೆ, ನೀರಡಿಕೆ, ಅತಿಸಾರಗಳಿದ್ದರೆ ಅಸಾಧ್ಯವು.

೫೦. ಕಾಸರೋಗದಲ್ಲಿ ಅಸಾಧ್ಯಲಕ್ಷಣ :—

೧. ಬಲ, ಮಾಂಸಗಳು ಕಮ್ಮಿ, ಕೆಮ್ಮು ಉಂಟಾದರೆ ಅಸಾಧ್ಯವು.

೫೧. ಮದಾತ್ಯಾಯರೋಗದಲ್ಲಿ ಅಸಾಧ್ಯಲಕ್ಷಣ :—

೧. ತುಟಿ ಬತ್ತಿರುವದು, ಅಲ್ಲಾಡದೆ ಇರುವದು, ಶರೀರದಲ್ಲಿ ಶೈತ್ಯ, ಅಂತರ್ದಾಹ, ಮುಖದಲ್ಲಿ ಯಣ್ಣೆ ಬಸಿಯುವದು, ಹೀಗಿದ್ದರೆ ಅಸಾಧ್ಯ.

೨. ಸೀತದಿಂದ ಯೇನಾದರು ಬಂದು ಬಾಧೆಯುಂಟಾಗುವದು, ಶರೀರದಲ್ಲಿ ಶೈತ್ಯ, ಮುಖದಲ್ಲಿ ಯಣ್ಣೆ ಬಸಿಯೋದು, ಹೀಗಿದ್ದರೆ ಅಸಾಧ್ಯವು.

೫೨. ಮದರೋಗದಲ್ಲಿ ಅಸಾಧ್ಯಲಕ್ಷಣ:—

೧. ಮೈಯಲ್ಲಿ ಶೈತ್ಯ, ಹೊಟ್ಟೆಯಲ್ಲಿ ಉರಿ, ಸರ್ವದಾ ದಾಹವಿದ್ದರೆ ಅಸಾಧ್ಯವು.

೫೩. ಉನ್ಮಾದರೋಗದಲ್ಲಿ ಅಸಾಧ್ಯಲಕ್ಷಣ :—

೧. ಕಣ್ಣು ದೊಡ್ಡದಾಗಿ ಬಿಡುವದು, ಜಾಗ್ರತೆಯಾಗಿ ನಡಿಯುವದು, ತುಟಿಯನ್ನು ನಾಲಿಗೆಯಿಂದ ಸರ್ವದಾ ನೆಕ್ಕೋದು, ಸರ್ವದಾ ನಿದ್ರೆ ಮಾಡೋದು,

ಭಾರಿಭಾರಿಗೂ ಬೀಳೋದು, ಅತಿಕಂಪನ, ಮತ್ತು ಪರ್ವತದಿಂದಲೂ ಆನೆ ಮೇಲಿನಿಂದಲೂ ಯೆತ್ತರದಿಂದಲೂ ಬೀಳೋದು, ಇಂಥಾದ್ದು ರೋಗ ಹುಟ್ಟಿ ಹದಿಮೂರು ವರುಷವಾಗಿದ್ದರೆ ಅಸಾಧ್ಯವು.

೫೪. ಅಪಸ್ಮಾರರೋಗದಲ್ಲಿ ಅಸಾಧ್ಯಲಕ್ಷಣ:—

೧. ಬಹಳವಾಗಿ ಕಂಪ, ಕ್ಷೀಣಬಲತ್ವ, ಹುಬ್ಬುಗಳು ಅಲ್ಲಾಡಿ ಕಣ್ಣು ತಿರುಗುತ್ತಿರುವದು, ಹೀಗಿದ್ದರೆ ಅಸಾಧ್ಯವು.

೨. ತ್ರಿದೋಷದಿಂದ ಹುಟ್ಟಿದ್ದರೆ ಅಸಾಧ್ಯವು.

೩. ಅನ್ನದ್ವೇಷ ಬಲನಾಶಗಳಿದ್ದರೆ ಅಸಾಧ್ಯವು.

೫೫. ದಾಹರೋಗದಲ್ಲಿ ಅಸಾಧ್ಯಲಕ್ಷಣ:—

೧. ಮೈಯಲ್ಲಿ ಶೈತ್ಯ, ಹೊಟ್ಟೆಯಲ್ಲಿ ಉರಿ, ಸರ್ವದಾ ದಾಹವಿದ್ದರೆ ಅಸಾಧ್ಯವು.

೫೬. ವಾತರೋಗದಲ್ಲಿ ಅಸಾಧ್ಯಲಕ್ಷಣ:—

೧. ಗರ್ಭಜನ್ಯವಾದ ರಕ್ತನಾಶಪಡಿಸಿದ ಅಭಿಘಾತ ಜನ್ಯವಾಯುವು ಅಸಾಧ್ಯವು.

೨. ಶರೀರ ಕೃಶವಾಗಿ ಕಣ್ಣುಗಳು ಪೊಳಸರಿಯುವದು, ಅತಿ ಮೂತಾಡುವದು, ಮೂರು ವರುಷಗಳಿಂದ ಕಫ ಕೂಡಿರುವದು, ಈ ವಾಯುವು ಅಸಾಧ್ಯವು.

೩. ಮೈಯಲ್ಲಿ ಚಟ್ಟು, ದಾಹ, ಮಲ ಮೂತ್ರ ಅಪಾನವಾಯುಗಳ ಸ್ತಂಭ, ಮೂರ್ಛೆ, ಅರುಚಿ, ಅಗ್ನಿಮಾಂದ್ಯ, ಬಲಕ್ಷಯ, ಪಿಳು ಚರ್ಮದವರಿಗೂ ಭೇದಿಸಿರುವದು, ಕಿವಡು, ಮೈನಡುಗುವದು, ನೆಲಕ್ಕೆ ಬೀಳುವದು, ಕಫದಿಂದ ಹೊಟ್ಟೆಯುಬ್ಬರ ಮತ್ತು ನೋವು, ಛಳಕುಗಳುಳ್ಳ ವಾಯುವು ಅಸಾಧ್ಯವು.

೫೭. ವಾತರಕ್ತದಲ್ಲಿ ಅಸಾಧ್ಯಲಕ್ಷಣ:—

೧. ಮೊಣಕಾಲಿನವರೆಗೂ ಹುಟ್ಟಿದ ವಾತರಕ್ತವುಅಸಾಧ್ಯವು.

೨. ಯಾವ ಭಾಗದ ತ್ವಕ್ಕು ಹೋಗಿರುತ್ತದೋ ಅಲ್ಲಿ ಬಲಮಾಂಸಗಳ ಕ್ಷಯದಿಂದ ಇನ್ನೂ ಅನೇಕ ರೋಗಗಳು ಹುಟ್ಟುವ ವಾತ ರಕ್ತವು ಅಸಾಧ್ಯವು.

೩. ಸರ್ವೋಪದ್ರವದಲ್ಲೂ ತ್ರಿದೋಷದಿಂದ ಉಂಟಾಗಿರುವ ವಾತರಕ್ತವು ಅಸಾಧ್ಯವು.

೫೮. ಆಮ ವಾತ ರೋಗದಲ್ಲಿ ಅಸಾಧ್ಯಲಕ್ಷಣ:—

೧. ತ್ರಿದೋಷದಿಂದ ಹುಟ್ಟಿದ ದೇಹದಲ್ಲಿ ಶೋಭೆಯುಳ್ಳ ಸನ್ನಿಪಾತಾತ್ಮಕವಾದ ಆಮವಾತವು ಅಸಾಧ್ಯವು.

೫೯. ವಾತಪ್ರಕೋಪ ರೋಗಕ್ಕೆ ಅಸಾಧ್ಯಲಕ್ಷಣ:—

೧. ಚರ್ಮಸ್ಪೃಗ್ನಾಶ, ಕಂಪನ, ಕೃಶತ್ವ, ಮಮತಾಶೂನ್ಯತ್ವ, ಮೂರ್ಛೆ, ವಾತದಿಂದ ಅನೇಕ ರೋಗೋತ್ಪತ್ತಿ, ಇವುಗಳಿದ್ದು ಮೊದಲು ನೋಡಿದ ಪದಾರ್ಥವನ್ನು ಬೇರೆವಿಧವಾಗಿ ತಿಳಿಯೋಣವು ಇದ್ದರೆ ಅಸಾಧ್ಯವು.

೬೦. ಉರಸ್ತಂಭ ರೋಗದಲ್ಲಿ ಅಸಾಧ್ಯಲಕ್ಷಣ:—

೧. ದಾಹಕಂಪನ ಉಳ್ಳದ್ದಾದರೆ ಅಸಾಧ್ಯವು.

೬೧. ಉದಾವರ್ತರೋಗದಲ್ಲಿ ಅಸಾಧ್ಯಲಕ್ಷಣ:—

೧. ಬಾಯಾರಿಕೆ, ಬಲಕ್ಷಯ, ಶೂಲೆಯಿಂದಕೂಡಿದ ವಾಂತಿಯಲ್ಲಿ ಮಲವು ಬಿದ್ದರೆ ಅಸಾಧ್ಯವು.

೬೨. ಶೂಲೆರೋಗದಲ್ಲಿ ಅಸಾಧ್ಯಲಕ್ಷಣ:—

೧. ತ್ರಿದೋಷದಿಂದ ಕೂಡಿಯಿದ್ದರೆ ಅಸಾಧ್ಯವು.

೬೩. ತಲೆಶೂಲೆ ರೋಗದಲ್ಲಿ ಅಸಾಧ್ಯಲಕ್ಷಣ:—

೧. ಅರುಚಿ, ಶ್ವಾಸಸಂಕೋಚ, ಗುಳ್ಳೆಗಳು ಏಳೋದು, ತಲೆನೋವು, ಮೋಹ, ಮಲವು ಭೇದಿಸುವ ರೀತಿ, ನೀರಡಿಕೆ, ಭ್ರಮೆಗಳಿದ್ದರೆ ಅಸಾಧ್ಯವು.

೬೪. ಪಿಂಡಿಕಾವಾಯು ರೋಗದಲ್ಲಿ ಅಸಾಧ್ಯಲಕ್ಷಣ:—

೧. ಶರೀರದಲ್ಲಿರುವ ವಾಯುವು ಶಿಥಿಲವಾಗಿ ಮೂಗು ನಾಲಿಗೆಗಳು ಉಸರು ಬಿಡುವಾಗಲೂ ಮಾತನಾಡುವಾಗಲೂ ಅಧಿಕವಾಗಿ ತೋರಿದರೆ ಅಂತಸ್ಥ ವಾಯುವು ಬರುವಾಗ ಅತಿ ಸೂಕ್ಷ್ಮವಾಗಿ ಬಂದರೆ ಅಸಾಧ್ಯವು.

೬೫. ಪಾಂಡುರೋಗದಲ್ಲಿ ಅಸಾಧ್ಯಲಕ್ಷಣ:—

೧. ಜ್ವರ, ವಾಂತಿ, ಕೆಮ್ಮು, ಶೋಭೆ, ಅತಿಸಾರಗಳಿದ್ದರೆ ಅಸಾಧ್ಯವು.

೨. ಶೋಭೆ, ಕಣ್ಣು ಉಗರು ಮತ್ತು ನೋಡಿದ ಪದಾರ್ಥಗಳು ಸಹ ಹಳದೀ ಬಣ್ಣ, ನಿದ್ರೆ, ಮೈಸುಡೋಣ, ಜ್ವರ, ವಾಂತಿ, ಮೂರ್ಛೆ, ಬಿಕ್ಕಳಿಕೆ, ಅತಿಸಾರಗಳಿಂದ ಯುಕ್ತವಾಗಿ ಕಾಲಿನಿಂದ ಗಂಡುಸರಿಗೂ ಮುಖದಿಂದ ಹೆಂಗಸರಿಗೂ ಶೋಭೆವೃದ್ಧಿಯಾದ ಪಾಂಡುರೋಗವು ಅಸಾಧ್ಯವು.

೩. ಕುಕ್ಷಿ, ಗುಹ್ಯಗಳಲ್ಲಿ ಹುಟ್ಟಿದ ಶೋಭೆ ಗಂಡಸರಿಗೂ ಹೆಂಗಸರಿಗೂ ಕಾಲು ಮುಖಗಳಲ್ಲಿ ವೃದ್ಧಿಯಾದರೆ ಅಸಾಧ್ಯವು.

೪. ಹೆಂಗಸಿಗೆ ಕಾಂತಿ ಅಧಿಕವಾಗೋದು, ಯೋನಿದ್ರವಿಸುವದು, ಇವು ಇರುವ ಪಾಂಡುರೋಗವು ಅಸಾಧ್ಯವು.

೫. ವಾಂತಿ, ಜ್ವರ, ಊರ್ಧ್ವಶ್ವಾಸ, ಅತಿಸಾರಗಳುಳ್ಳದ್ದಾದರೆ ಅಸಾಧ್ಯವು.

೬೬. ಕ್ಷಯರೋಗದಲ್ಲಿ ಅಸಾಧ್ಯಲಕ್ಷಣ:—

೧. ಶೋಥೆ ಹುಟ್ಟಿದ ಮೇಲೆ ಹುಟ್ಟಿದ ವಾತಮಿಶ್ರವಾದ ಕ್ಷಯವು, ಜ್ವರ ಅತಿಸಾರ ದುರ್ಬಲತ್ವಗಳು ಇದ್ದರೆ ಅಸಾಧ್ಯವು.

೨. ಮುಖ ಹಸ್ತ ಕಾಲುಗಳಲ್ಲಿ ಕಾರ್ಶ್ಯವು, ದೇಹವು ತೂರ್ಯಾಡುವ ಕ್ಷಯವು ಅಸಾಧ್ಯವು.

೩. ಪಾರ್ಶ್ವಶೂಲೆ, ರಕ್ತವಮನ, ಮೈಯಲ್ಲಿ ತಾಪಗಳುಳ್ಳ ಕ್ಷಯವು ಅಸಾಧ್ಯವು.

೪. ಕಣ್ಣು ಬಿಳಪು, ಅನ್ನದ್ವೇಷ, ಊರ್ಧ್ವಶ್ವಾಸ ಕಷ್ಟದಿಂದ ಅಧಿಕ ಮೂತ್ರವಾಗೋದು, ಹೀಗಿದ್ದರೆ ಅಸಾಧ್ಯವು.

೫. ಹೃದಯಶೂಲೆ, ರಕ್ತವಾಂತಿ, ಕಾಸ, ಮೂತ್ರದಲ್ಲಿ ರಕ್ತ, ಪಾರ್ಶ್ವ, ಪೃಷ್ಠ ಕಟಿಗಳು ಬಿಗಿರುವ ಕ್ಷಯವು ಅಸಾಧ್ಯವು.

೬. ಬಲ ಕಡಮೆಯಾಗಿರುವದು, ಅತಿ ರೋಗ ಉಂಟಾಗುವ ಕ್ಷಯವು ಅಸಾಧ್ಯವು.

೬೭. ಬಿಕ್ಕಳಿಕೇ ರೋಗದಲ್ಲಿ ಅಸಾಧ್ಯಲಕ್ಷಣ:—

೧. ನಿಟ್ಟುಸುರು, ನೀರಡಿಕೆ, ಬುದ್ಧಿವಿಕಾರ, ಕಣ್ಣು ತಿರುಗುವಿಕೆ, ಶರೀರ ಕಾರ್ಶ್ಯ, ಬಿಕ್ಕಳಿಕೆಗಳಿದ್ದರೆ ಅಸಾಧ್ಯವು.

೬೮. ಅರೋಚಕ ರೋಗದಲ್ಲಿ ಅಸಾಧ್ಯಲಕ್ಷಣ:—

೧. ಕಾಂತಿನಾಶ, ಇಂದ್ರಿಯ ಬಲನಾಶ, ದೇಹಕಾರ್ಶ್ಯಗಳಿದ್ದರೆ ಅಸಾಧ್ಯವು.

೬೯. ಗಂಡಮಾಲೇ ರೋಗದಲ್ಲಿ ಅಸಾಧ್ಯಲಕ್ಷಣ:—

೧. ಕಾಸಜ್ವರ, ಪೀನಸ, ಛರ್ದಿ, ಪಾರ್ಶ್ವ ಶೂಲೆಗಳಿದ್ದರೆ ಅಸಾಧ್ಯವು.

೭೦. ಸ್ತ್ರೀ ರೋಗದಲ್ಲಿ ಅಸಾಧ್ಯಲಕ್ಷಣ:—

೧. ನರಗಳು ನೀಲೀ ಬಣ್ಣವಾಗಿ ಬಿಗಿಯಾಗಿ ಶರೀರದಲ್ಲಿ ಶೈತ್ಯವೂ ಲಜ್ಜೆಯೂ ಇಲ್ಲದೆ ಹೋಗೋದು, ಹೀಗಿರುವ ಗರ್ಭಿಣಿಯು ಅಸಾಧ್ಯಳು.

೨. ಯೋನಿ ಅಡಕವಾಗೋದು, ಗರ್ಭ ಒಳಗೆ ಕೆಳದುಕೊಂಡು ಹೋಗುವದು, ಕಾಸ ಶ್ವಾಸಗಳಿಂದ ಕೂಡಿದ ಹೊಟ್ಟೆಯಲ್ಲೂ ಪಕ್ಕದಲ್ಲಿಯೂ ಶೂಲೆಗಳುಳ್ಳ ಗರ್ಭಿಣಿಯು ಅಸಾಧ್ಯಳು.

೭೧. ದಂಶರೋಗದಲ್ಲಿ ಅಸಾಧ್ಯ ಲಕ್ಷಣ:—

೧. ಶಸ್ತ್ರದಿಂದ ಘಾಯ ಮಾಡಿದರೆ ರಕ್ತ ಬರದೆ ಇರೋಣವು, ಹೊಡಿಯುವದಕ್ಕೆ ಬಲ ಬರದೆ ಇರುವದು, ತಣ್ಣೀರು ಹಾಕಿದರೂ ರೋಮಾಂಚವಾಗದೆ ಇರುವದು, ಈ ದಂಶವು ಅಸಾಧ್ಯವು.

೨. ಯಾತರಿಂದ ಕಡಿಯಲ್ಪಡುತ್ತಾನೋ ಅದರ ಹಾಗೆ ಚೇಷ್ಟೆ ಮಾಡುವದು, ಕೂಗುವದು, ನೀರಿನಲ್ಲೂ ಅದನ್ನೇ ಕಾಣುವದು, ಹೀಗಿರುವ ದಂಶವು ಅಸಾಧ್ಯವು.

೨೨. ಮಾರಿಕಾ, ವಿಷೂಚಿಕಾ, ಅಗ್ನಿಮಾಂದ್ಯ, ಕಾಲರಾಯೆಂಬ ಹೆಸರುಳ್ಳ ವಾಂತಿಭ್ರಾಂತಿಯ ರೋಗಕ್ಕೆ ಅಸಾಧ್ಯ ಲಕ್ಷಣ:—

೧. ವಾಂತಿ ಹೆಚ್ಚೋದು, ಪ್ರವರ್ತಿಯು ನಾನಾ ವಿಧವಾಗಿ ಆಗೋದು, ಎಚ್ಚರಿಕೆಯು ತಪ್ಪೋದು, ಮುಖದಲ್ಲಿ ರಸ ತಪ್ಪೋದು, ನೇತ್ರಗಳು ಒಳಸರಿಯುವದು, ಕೀರಧ್ವನಿ ಹುಟ್ಟೋದು, ಸಂಧಿಗಳು ಸಡ್ಲೋದು, ಇಂಥಾ ವಿಷೂಚಿಕೆಯು ಅಸಾಧ್ಯವು.

೨. ಘಾಳಿ ಇಲ್ಲದ ಸ್ಥಳದಲ್ಲಿ ಎಣ್ಣೆಯೂ ದೀಪವೂ ಹ್ಯಾಗೆ ನಷ್ಟವಾಗುವವೋ ಅದೇಮೇರಿಗೆ ರೋಗಿಯ ದೇಹದಲ್ಲಿ ಅಗ್ನಿಯು ನಷ್ಟವಾಗಿ ಅನೇಕ ವಿಧ ತೋರಿದರೆ ಅಸಾಧ್ಯವು.

೨೩. ಪ್ರದರರೋಗದಲ್ಲಿ ಅಸಾಧ್ಯಲಕ್ಷಣ:—

೧. ಕಣ್ಣುಗಳು ಕುಕ್ಕುವದು, ಉಪಸ್ಥ ಸುರಟಿಕೊಳ್ಳುವದು, ಶರೀರದ ತ್ವಕ್ಕು ಒಳಸರಿಯುವದು, ಪ್ರವರ್ತಿಯಾಗುವದು, ಶ್ವಾಸ ತಡದುಬಿಡುವದು, ಶರೀರವೆಲ್ಲಾ ದಹಿಸೋದು, ಹೀಗಿದ್ದರೆ ಅಸಾಧ್ಯವು.

೨೪. ಸಾಮಾನ್ಯವಾಗಿ ರೋಗಾರಿಷ್ಟದಲ್ಲಿ ಅಸಾಧ್ಯಲಕ್ಷಣ:—

೧. ರೋಗಿಯ ಮೂತ್ರವನ್ನು ಎಣ್ಣೆಯಲ್ಲಿ ಬಿಟ್ಟರೆ ಹರಡಿಕೊಂಡರೆ ಒಳ್ಳೇದು, ಹರಡಿಕೊಳ್ಳದೆ ಮುಳಗಿದರೆ ಅಸಾಧ್ಯವು.

೨೫. ಕೆಲವರು ಅರಿಷ್ಟಸೂಚನೆಯನ್ನು ವಿಚಾರಿಸುತ್ತಾರೆ. ವಿಚಾರ ಮಾಡುವಲ್ಲಿ ಅನುಮಾನದಿಂದ ನಿಶ್ಚಯಿಸುವದಕ್ಕೆ ಆಗುವದಿಲ್ಲ. ಆ ರೋಗಕ್ಕೆ ತಕ್ಕ ಔಷಧ ಕೊಟ್ಟಾಗ್ಯೂ ಹೆಚ್ಚುತ್ತಾ ಬಂದರೆ ಅಸಾಧ್ಯವೆಂದು ತಿಳಿಯಬೇಕು.

೨೬. ಯಾವನಿಗೆ ನಾಲಿಗೆ ಉಬ್ಬೋದು ಅಥವಾ ಶುಷ್ಕವಾಗೋದು, ಭಾರವಾಗಿ ಕಪ್ಪಾಗಿ ಲೇಪನ ಮಾಡಿದ್ದು ತೋರದೆ ಹೋದರೆ, ಮತ್ತು ಲೇಪದ ಹಾಗೆ ಕಂಡರೆ, ನಾಲಿಗೆ ಮುದರಿಕೊಂಡರೆ, ಮುಳ್ಳು ಚುಚ್ಚಿದಹಾಗೆ ತೋರಿದರೆ, ಶರೀರವೇ ಆಗಲಿ ತಲೆಯೇ ಆಗಲಿ ಅಂಡಗಳೇ ಆಗಲೀ ಭಾರೈಸಿದರೆ ಅಸಾಧ್ಯವು.

೨೭. ಯಾವನಿಗೆ ಹನುಗಳು ಕೂಡಿ, ಅನ್ನದ್ವೇಷ, ಅವಯವಗಳು ನಿಮಿತ್ತವಿಲ್ಲದೆ ಭಾರವಾಗೋದು, ಮತ್ತು ಲಘು ಈ ಲಕ್ಷಣಗಳು ಅಸಾಧ್ಯವು.

೭೮. ಯಾವನಿಗೆ ಶಿರಸ್ಸಿನಲ್ಲಿ ಹೊಸದಾಗಿ ಬೈತಲಿ ತೆಗದ ಹಾಗೆ ತೋರಿದರೆ ಮತ್ತು ಸುಳಿ ಹಾಗೆ ತೋರಿ ಸುರಟಿಕೊಂಡು ಹೋದರೆ ಸ್ವಸ್ಥವಾಗಿದ್ದವನಿಗೆ ಆರುದಿನ, ರೋಗಿಗೆ ಮೂರು ದಿನದಲ್ಲಿ ಗಂಡಕಾಲವೆಂದು ತಿಳಿಯತಕ್ಕದ್ದು.

೭೯. ಯಾವನಿಗೆ ನಾಲಿಗೆಯಲ್ಲಿ ಕಪ್ಪು, ಮುಖದಲ್ಲಿ ದುರ್ಗಂಧ, ಎಡದ ಕಣ್ಣೊಳಗೆ, ತಲೆಯಲ್ಲಿ ಬಾಣಾಕಾರವಾಗಿ ಅಡಗುವದು, ಇದು ಗಂಡಕಾಲವೆಂದು ತಿಳಿಯತಕ್ಕದ್ದು.

೮೦. ಸಮಸ್ತ ಶರೀರದಲ್ಲಿ ಸರ್ವಕಾಲದಲ್ಲೂ ಉಷ್ಣ ಅಥವಾ ಸೀತ, ಮತ್ತು ಹೊರಗೆ ಸೀತ, ಅಂತರ್ದಾಹ, ಕಾರಣವಿಲ್ಲದೆ ಜವರು ಸ್ತಂಭವಾಗೋಣ, ಹೊಟ್ಟೆಯು ತಂಣವಾಗಿರೋಣ, ಮೈ ದಹಿಸೋದು, ಛಳಿ ಇರೋದು, ಪೆಟ್ಟು ಬಿದ್ದಾಗ್ಯೂ ತೋರದೆ ಇರೋಣ, ಅಂಥಾವನಿಗೆ ಗಂಡಕಾಲವು.

೮೧. ಯಾವನಿಗೆ ಆಕಸ್ಮಿಕವಾಗಿ ಕಾಲುಗಳು ಮುಂದೆ ಚಲಿಸುವದು, ಜಂಘಾಬಲ ಹೋಗೋದು, ತನ್ನಷ್ಟಿಗೆತಾನೆ ಕಾಲುಗಳು ಹರದು ಹೋಗುತ್ತೊ, ಏಕಕಾಲದಲ್ಲಿ ಬಲನಷ್ಟ, ಏನು ಇಚ್ಛೆಯಿಲ್ಲದೆ ಇರೋಣ, ಸ್ವಲ್ಪ ಊಟ ಮಾಡಿದರೆ ಮಲಮೂತ್ರಗಳು ಅಧಿಕವಾಗೋಣ, ಅಧಿಕ ತಿಂದರೆ ಸ್ವಲ್ಪವಾಗೋದು, ಇಂಥಾವನಿಗೆ ಗಂಡಕಾಲವೆಂದು ತಿಳಿಯಬೇಕು.

೮೨. ಉತ್ತಮ ಔಷಧ ಪ್ರಯೋಗ ಮಾಡಿದರೂ ಶಮನವಾಗದೆ ಇದ್ದರೆ ಅಸಾಧ್ಯವು.

೮೩. ಯಾವನಿಗೆ ವರ್ಣ, ಗಂಧ, ಅನ್ನಗಳು ವ್ಯತ್ಯಾಸವಾದರೆ ಗಂಡಕಾಲವೆಂದು ತಿಳಿಯಬೇಕು.

೮೪. ಯಾವನಿಗೆ ಅನ್ನದ್ವೇಷ, ಸರ್ವ ಪದಾರ್ಥದಲ್ಲೂ ಇಚ್ಛೆ ತಪ್ಪೋದು, ರೋಗವಿಲ್ಲದೆ ಕೃಶವಾದರೆ ಗಂಡಕಾಲವೆಂದರಿಯುವದು.

ಚಿಕಿತ್ಸಾ ಪ್ರಕರಣ.

ಪೂರ್ವೋಕ್ತಗಳಾದ ರೋಗಗಳಿಗೆ ಚಿಕಿತ್ಸೆಯನ್ನು ರಸಸಾರಸಂಗ್ರಹದಲ್ಲಿ ಹೇಳಿರುವ ಮೇರೆಯೂ ಇನ್ನೂ ಚರಕ, ಸುಶ್ರುತ, ಬಾಹಟ, ಮಾರುತೀಸ್ಮೃತಿ, ಸಾರಂಗಧರ, ಸಿದ್ಧಸಾರ, ನಿಘಂಟು ರತ್ನಾಕರ, ದಾಮೋದರ, ಹಾಸಾರ್ಣವ, ಪಾರಿಜಾತ, ಕೌಮುದಿ, ನಾಗಾರ್ಜುನ, ಕಾಪಾಲಿ, ರಸವೃಕ್ಷ, ಇಂದ್ರಸಾರ, ಸೂತರಾಜ, ಟೆಂಕಣ, ಕಲ್ಯಾಣಿ, ಭೇಷಜಕಲ್ಪ, ವೀರಭಟ್ಟೀಯ, ಸೋಮನಾಥ, ನಂದಿನಾಥ, ಆತ್ರೇಯ, ರಸೇಂದ್ರ, ಚೂಡಾಮಣಿ, ಚಂದ್ರಜ್ಞಾನ, ವಾಸಿಷ್ಠ, ದತ್ತಾತ್ರೇಯ, ಹಾರೀತ, ಆತ್ರೇಯಸಂಹಿತ, ಪರಾಶರಸಂಹಿತ, ಅಗ್ನಿವೇಶ, ವಾಗ್ಭಟ, ಭಾವಪ್ರಕಾಶ, ಯೋಗರತ್ನ, ಕಲ್ಪತರು, ವೃಂದಮಾ

ಧವ, ಯೋಗತರಂಗಿಣಿ, ವಂಗಸೇನ ಇವುಗಳೇ ಮೊದಲಾದ ಗ್ರಂಥಗಳನ್ನು ಶೋಧೀಕರಿಸಿ ಹೇಳಿರುತ್ತೆ. ರಸಸಾರಸಂಗ್ರಹರೀತ್ಯಾ ರಸ, ಉಪರಸ, ಲೋಹ, ರತ್ನ, ವಿಷ ಮೊದಲಾದವುಗಳ ಉತ್ಪತ್ತಿಯನ್ನು, ಶೋಧನೆಯನ್ನು, ಭಸ್ಮ, ಸಿಂಧೂರ, ಮಾತ್ರೆ, ವಟಿಕ, ಚೂರ್ಣ, ಲೇಹ್ಯ, ರಸಾಯನ, ತೈಲ ಇವುಗಳನ್ನು ಮಾಡತಕ್ಕ ರೀತಿಯನ್ನು, ಭಸ್ಮಾದಿ ಪರೀಕ್ಷೆ, ಭಸ್ಮಶುದ್ಧಿ ಪರೀಕ್ಷೆ, ರೋಗಗಳಮೇಲೆ ಅವುಗಳನ್ನು ಪ್ರಯೋಗಿಸತಕ್ಕ ರೀತಿಯನ್ನು ಸಹ ಸಂಕ್ಷೇಪವಾಗಿ ಹೇಳಿರುತ್ತೆ. ಯಂತ್ರ, ಪುಟ, ಪಾಕ, ಮೂಷಾ ಇವುಗಳ ಲಕ್ಷಣಗಳನ್ನು ಗುರುಮುಖದಿಂದಲೇ ತಿಳಿಯಬೇಕೇ ಹೊರ್ತು ಬೇರೆವಿಧವಾಗಿ ತಿಳಿಯುವದಿಲ್ಲ.

ಪಾದರಸದ ಮಹಿಮೆಯನ್ನು ಸಿದ್ಧರು ಬಲ್ಲರೆ ಹೊರ್ತು ಇತರರು ತಿಳಿಯಲಾರರು. ಅಂಥಾ ಪಾದರಸದ ಮಹಿಮೆಯನ್ನು ಪರಮೇಶ್ವರನು ಪಾರ್ವತೀಗೆ ಅನೇಕವಿಧವಾಗಿ ಹೇಳಿರುತ್ತಾನೆ. ಅದನ್ನು ಸಂಕ್ಷೇಪವಾಗಿ ನಾನು ವಿವರಿಸುತ್ತೇನೆ.

ಅಭ್ರಕಪಾದರಸಗಳನ್ನು, ಗಂಧಕಪಾದರಸಗಳನ್ನು ಸಹ ಯಾರು ಕೂಡಿಸುತ್ತಾರೊ ಅವರು ಮೃತ್ಯುವನ್ನಾದರೂ ಜಯಿಸುತ್ತಾರೆ. ಇದರ ಪರೀಕ್ಷೆ—ಕೂಡಿಸಿರುವ ಗಂಧಕಪಾದರಸಗಳನ್ನು ತೂಕ ಮಾಡಿ ಮಣ್ಣಿನ ಪಾತ್ರೆಯಲ್ಲಿ ಹಾಕಿ ಚೀರು ಮಣ್ಣು ಮಾಡಿ ದೊಡ್ಡದಾಗಿ ಪುಟವನ್ನು ಹಾಕಿ ಅದು ಆರಿದಬಳಿಕ ತೆಗೆದು ತೂಕವನ್ನು ಮಾಡಿ ನೋಡುವಲ್ಲಿ ಆ ಇಟ್ಟ ತೂಕ ಸರಿಯಾಗಿದ್ದರೆ ಅದು ಸಿದ್ಧರಸವೆನ್ನಿಸಿಕೊಂಡು ಸಕಲ ಕಾರ್ಯಗಳಿಗೂ ಉಪಯೋಗಿಸುವದು.

ಈ ಬ್ರಹ್ಮಾಂಡದಲ್ಲಿರುವ ಸ್ಥಾವರ ಜಂಗಮಗಳೆಲ್ಲಾ ಪೃಥಿವ್ಯಾದಿ ಪಂಚಭೂತಾತ್ಮಕಗಳಾದವು. ಆದ್ದರಿಂದ ಪಾದರಸದಲ್ಲಿರುವ ಪಂಚಭೂತ ಲಕ್ಷಣವನ್ನು ಶಾಸ್ತ್ರ ಮರ್ಯಾದಾನುಸಾರವಾಗಿ ವಿವರಿಸುತ್ತೇನೆ. ಪಾದರಸದಲ್ಲಿ ಭಾರವಿರುವದ್ದರಿಂದ ಪೃಥ್ವೀಗುಣವು, ನೀರಿನಂತೆ ಇರುವದ್ದರಿಂದ ಜಲಗುಣವು, ಹೊಳೆಯುವದ್ದರಿಂದ ಅಗ್ನಿಗುಣವು, ಅತಿಚಾಂಚಲ್ಯವಾದ್ದರಿಂದ ವಾಯುಗುಣವು, ಬೆಂಕಿಯಮೇಲೆ ಇಟ್ಟರೆ ಕಾಣದೆ ಅಡಗಿಹೋಗುವದ್ದರಿಂದ ಆಕಾಶಗುಣವು ಸಹ ಇರುವದೆಂದು ತಿಳಿಯತಕ್ಕದ್ದು.

ಅಷ್ಟಾದಶ ಸಂಸ್ಕಾರದಿಂದ ಪಾದರಸಕ್ಕೆ ಶುದ್ಧಿಯನ್ನು ಮಾಡಬೇಕೆಂದು ಅನೇಕ ಸಿದ್ಧರು ಹೇಳಿರುತ್ತಾರೆ. ಹೀಗೆ ಮಾಡುವದಕ್ಕೆ ಒಂದು ಸಂವತ್ಸರವಾದರೂ ಸಾಲದು. ಮತ್ತು ಅರವತ್ತುನಾಲ್ಕು ಮೂಲಿಕೆಗಳಿಂದಲೂ ಕ್ರಮವಾಗಿ ಮಾಡಿದ ಶಂಖದ್ರಾವಕದಿಂದಲೂ ಶುದ್ಧಿಮಾಡಿದ ರಸವು ಅಣಿಮಾದ್ಯಷ್ಟ ಸಿದ್ಧಿಗಳಿಗೆ ಉಪಯೋಗವಾಗುವದೆಂದು ಕಶ್ಯಪರು ಹೇಳಿರುತ್ತಾರೆ. ಈ ರಸಶೋಧನ ಗ್ರಂಥಗಳೆಲ್ಲಾ ಪರಿಶೋಧಿಸಿ ಇದಕ್ಕೆ ಅಧಿಕಾರಿಗಳನ್ನ ಮತ್ತು ದ್ರವ್ಯ, ಅದರ ಪರೀಕ್ಷೆ, ಪಾಕಲಕ್ಷಣ, ಪಾಕ ಪರೀಕ್ಷೆ, ಈ ನಾಲ್ಕನ್ನೂ ಪೂರ್ವೋಕ್ತ ಶಾಸ್ತ್ರಾನುಸಾರಗಳಾಗಿ ತಿಳಯಪಡಿಸುತ್ತೇನೆಂದು ಗೋವಿಂದ

ಭಗವತ್ಪಾದಾಚಾರ್ಯರು ಹೇಳಿರುವ, ರಸಶೋಧನೆಯು ಸುಲಭವಾಗಿರುವದ್ದರಿಂದ ಅದನ್ನು ಅನುಸರಿಸಿ ಹೇಳಿದೆ.

ರಸಶೋಧನೆ ಪ್ರಕರಣ.

ಇಂಗ್ಲೀಕದೊಳಗಣ ರಸವನ್ನು ಕ್ರಮವಾಗಿ ತೆಗದು ಶೀಶಿಯಲ್ಲಾಗಲಿ ಒಂದು ತೆಂಗಿನ ಬುರುಡೆಯಲ್ಲಾಗಲಿ ಇಟ್ಟುಕೊಂಡು ಬಳ್ಳಿ ಭಂಗಾರದ ತಗಡುಗಳನ್ನು ಏಳು ಭಾಗಗಳನ್ನಾಗಿ ಮಾಡಿಕೊಂಡು ಆ ತಗಡುಗಳ ಕಲ್ಮಷವು ಹೋಗುವಹಾಗೆ ನಿಂಬೆಹಣ್ಣಿನ ರಸದಿಂದ ತೊಳದು ಬಟ್ಟೆಯಲ್ಲಿ ವರೆಸಿ ಇಟ್ಟುಕೊಂಡು ಆ ಏಳು ಭಾಗದಲ್ಲಿ ಒಂದು ಭಾಗದ ತಗಡನ್ನು ಸಣ್ಣನಾಗಿ ಕತ್ತರಿಸಿ ಒಂದು ಕಲ್ಲುಪತ್ತಿನಲ್ಲಿ ಹಾಕಿ ಇದರತೂಕಕ್ಕೆ ನಾಲ್ಕರಷ್ಟು ಹಿಂದೆ ಹೇಳಿದ ಪಾದರಸವನ್ನು ಹಾಕಿ ಅಂಕೋಲೆ ಬೇರಿನ ತೊಗಟೆ, ಕಕ್ಕೆ ಬೇರಿನ ತೊಗಟೆ, ಚಿತ್ರಮೂಲದ ಬೇರಿನ ತೊಗಟೆ, ಲೋಳಸರದ ತಿಳಲು ಈ ನಾಲ್ಕನ್ನು ಸಮವಾಗಿ ಹಾಕಿ ಅರದು ಹಿಂಡಿಕೊಂಡು ಆ ರಸದಿಂದ ಮೇಲೆ ಹೇಳಿದ ರಸ ಭಂಗಾರಗಳನ್ನು ಅರದು ಮುದ್ದೆ ಮಾಡಿಕೊಂಡು ಆ ಮುದ್ದೆಯನ್ನು ಸರಿಯಾಗಿ ಬಾಯಿಗಳು ಕೀರುವಂತೆ ಎರಡು ಮಡಿಕೆಗಳನ್ನು ಮಾಡಿಕೊಂಡು ಆ ಮಡಿಕೆಗಳಲ್ಲಿ ಕೆಳಗಿನ ಮಡಿಕೇಲಿ ಈ ಮುದ್ದೆಯನ್ನು ಇಟ್ಟು, ಮೇಲಿನ ಮಡಿಕೆಯನ್ನು ಮುಚ್ಚಿ, ಎರಡು ಮಡಿಕೆಗಳ ಬಾಯಿಗಳು ಕೂಡುವಸ್ಥಳದಲ್ಲಿ ಚೀರುಮಣ್ಣು ಮಾಡಿ, ಅದನ್ನು ಒಲೆಮೇಲೆ ಇಟ್ಟು ಮೇಗಳ ಮಡಿಕೆಗೆ ತಗಲುವಂತೆ ಉರಿಯನ್ನು ಹಾಕಬೇಕು. ಮತ್ತು ಮೇಲಿನ ಮಡಿಕೆಗೆ ಮೇಲು ಭಾಗದಲ್ಲಿ ನಾಲ್ಕು ಮಡಿಕೆಯುಳ್ಳ ವಳ್ಳೆ ಬಟ್ಟೆಯನ್ನು ವದ್ದೆ ಆರದಂತೆ ನೀರಿನಲ್ಲಿ ಅದ್ದಿ ಅದ್ದಿ ಹಿಂಡಿಹಿಂಡಿ ಹಾಕುತ್ತಿರಬೇಕು. ಈ ರೀತಿಯಾಗಿ ನಾಲ್ಕು ಝಾವದವರಿಗೂ ಉರಿಯನ್ನು ಹಾಕಿ ಸ್ವಲ್ಪ ಆರಿದ ಬಳಿಕ ಮೇಗಳ ಮಡಿಕೆಯನ್ನು ಪತಂಗಿಸಿರುವ ರಸವು ಕದಲದಹಾಗೆ ಸ್ವಲ್ಪ ಪ್ರೇರವೆಮಾಡಿ ಇಳಿಸಿಕೊಂಡು ಚೀರುಮಣ್ಣು ಒಡೆದು ಮೇಲಿನ ಮಡಿಕೆಯೊಳಗೆ ಕೈಹಾಕಿ ನೋಡಿದರೆ ಕೆಳಗಿನ ರಸವು ನೀರಿನಂತೆ ಪತಂಗಿಸಿರುವದು ಕಾಣಿಸುತ್ತೆ. ಅದನ್ನು ತೆಗದುಕೊಂಡು ಶೀಶಿಯಲ್ಲಿಟ್ಟುಕೊಳ್ಳಬೇಕು. ಇದೆ ಪ್ರಕಾರ ಏಳಾವರ್ತಿ ಹೊಸ ಹೊಸದಾಗಿ ಚಿನ್ನದ ತಗಡುಗಳನ್ನು ಅದೇ ರಸಕ್ಕೆ ಮೇಲೆ ಹೇಳಿದ ರೀತಿಯಾಗಿಯೇ ಮೂಲಿಕಾ ರಸಗಳಿಂದ ಮರ್ದಿಸಿ ಪತಂಗಿಸಬೇಕು. ಅದು ಶುದ್ಧಿಯಾದ ರಸವೆನ್ನಿಸುತ್ತೆ. ಏಳುಭಾರಿ ಪತಂಗಿಸಿದ ಆಭಂಗಾರವನ್ನು ಬೇರೆ ಪುಟವನ್ನು ಹಾಕಿಕೊಳ್ಳಬೇಕು, ಮತ್ತು ಎರಡು ಕೊಡ ನೀರು ಹಿಡಿಯುವ ಗುಡಾಣಗಳನ್ನು ಬಾಯಿಸಂದು ಸೇರ್ವೆ ಸರಿಯಾಗಿಮಾಡಿಕೊಂಡು ಕೆಳಗಿನ ಗುಡಾಣದಲ್ಲಿ ಶೋಧಿಸಿದ ಹೆಂಚಿನ ಪುಡಿ ಎರಡು ಭಾಗ, ಸೈಂಧವಲವಣ ಒಂದುಭಾಗ ಸಹ ಕೂಡಿಸಿ ಗುಡಾಣದ ಮೂರು ಭಾಗದವರಿಗು ತುಂಬಿ, ಮಧ್ಯದಲ್ಲಿ ಸ್ವಲ್ಪ ಹಳ್ಳವನ್ನು ಮಾಡಿ ಆ ಹಳ್ಳದಲ್ಲಿ ಮೇಲೆಹೇಳಿದ ಶುದ್ಧವಾದ ರಸವನ್ನು ಇಟ್ಟು ಆರಸವು ಚಲಿಸದಂತೆ ಸುತ್ತಲೂ ಮೇಲೆಹೇಳಿದ ಪುಡಿಯನ್ನು

ಹಾಕಿ ಮೇಲೆ ಗುಡಾಣವನ್ನು ಮುಚ್ಚಿ ಎರಡು ಬಾಯಿಗಳು ಕೂಡಿದ ಸಂದು ಚೀರು ಮಣ್ಣು ಮಾಡಿ, ಮೇಲೆ ಹೇಳಿದಪ್ರಕಾರ ವದ್ದೆ ಬಟ್ಟೆಯನ್ನು ಹಾಕುತ್ತಾ ಇಪತ್ತು ನಾಲ್ಕು ಝಾವದ ವರಿಗೂ ವೇಗಳ ಗುಡಾಣಕ್ಕೆ ತಗಲುವಂತೆ ಉರಿಯನ್ನು ಯೇಕಪ್ರಕಾರ ಹಾಕುತ್ತಿದ್ದರೆ ಪೂರ್ವೋಕ್ತ ರೀತಿಯಾಗಿ ಪತಂಗಿಸುವದು. ಆ ಪತಂಗಿಸಿದ ರಸವು ಪುಡಿ ಪುಡಿಯಾಗಿ ಕಾಣುವದು. ಅದನ್ನೆ ರಸಭಸ್ಮವೆಂದು ತಿಳಿಯತಕ್ಕದ್ದು.

ಉಪರಸಗಳ ಲಕ್ಷಣಗಳು.—ಶಿಲಾಸತ್ತು, ಅಭ್ರಕ, ಕಾಂತ, ಭೂನಾಗ, ಇವು ಬೇರೆ ಬೇರೆ ಪೃಥ್ವೀ ಗುಣವುಳ್ಳವು, ಶಂಖದ ಚೂರುಗಳು, ಕೋಳಿ ಮೊಟ್ಟೆ, ಕಪ್ಪೆ ಚಿಪ್ಪು, ನಳ್ಳಿ, ಇವು ಬೇರೆ ಬೇರೆ ಜಲಗುಣವುಳ್ಳವು. ಮೂಳೆಗಳು, ಇಂದ್ರಗೋಪ ವಿಮಳಿ, ಕಂಚು, ಸಮುದ್ರದ ನೊರೆ, ಇವು ಬೇರೆಬೇರೆ ಅಗ್ನಿಗುಣ ಉಳ್ಳವು. ತಾಂಬ್ರ, ಇಂಗು, ಕಲ್ಲುನಾರು, ಕಲ್ಲುಮದ, ಅನ್ನಭೇದಿ, ಲವಂಚ, ರೋಮ, ಇವು ಪ್ರತ್ಯೇಕ ಪ್ರತ್ಯೇಕ ವಾಯುಗುಣವುಳ್ಳವು. ವೈಕ್ರಾಂತ, ತುತ್ತ, ಸುಣ್ಣ, ಮತ್ತು ಸುಣ್ಣದ ಹಳೇ ಹರಳು, ಇವು ಬೇರೆ ಬೇರೆ ಆಕಾಶ ಗುಣವುಳ್ಳವು.

ಈ ಮೇಲೆ ಹೇಳಿದ ಉಪರಸಗಳನ್ನು ಆಯಾ ಕಾಲದಲ್ಲಿ ಉಪಯೋಗಿಸಬೇಕು.

ಲೋಹಭೇದಗಳು.—ಸುವರ್ಣ, ಬೆಳ್ಳಿ, ತಾಮ್ರ, ತವರ, ಸೀಸ, ಸೂಜಿಕಲ್ಲು, ಪುಕ್ಕ, ಕಬ್ಬಿಣ, ಕಂಚು, ಹಿತ್ತಾಳೆ, ಕಿಟ್ಟ, ಇವು ಹನ್ನೊಂದೂ ಲೋಹಗಳೆಂದು ಕರೆಸಿಕೊಳ್ಳುತ್ತವೆ.

ಶುದ್ಧ ಮತ್ತು ಮಿಶ್ರಲೋಹಗಳ ವಿವರ.—ಸುವರ್ಣ, ಬೆಳ್ಳಿ ಇವು ಶುದ್ಧ ಲೋಹಗಳು. ತಾಮ್ರ, ಕಬ್ಬಿಣಗಳು ಕಠಿನಲೋಹಗಳು. ಸತ್ತು ಸೀಸ ತವರಗಳು ಮೃದುಲೋಹಗಳು. ಕಂಚು ಹಿತ್ತಾಳೆಗಳು ಮಿಶ್ರಲೋಹಗಳು.

ಲೋಹಗಳಿಗೆ ಸಾಧಾರಣ ಶುದ್ಧಿಕ್ರಮ.—ಯಣ್ಣೆ, ಮಜ್ಜಿಗೆ, ಗೋಮೂತ್ರ, ಅಕ್ಕೀಕಚ್ಚು, ಹುರಳೀಕಟ್ಟು, ನಿಂಬೇರಸ, ಇವುಗಳಲ್ಲಿ ಕಾಸಿ ಕಾಸಿಯೇ ಆಗಲಿ ಅಥವಾ ಕರಗಿಸಿಯೇ ಆಗಲಿ ಏಳಾವರ್ತಿ ಹಾಕಬೇಕು.

ಲೋಹಗಳಿಗೆ ಉತ್ತಮ ಶುದ್ಧಿಕ್ರಮ.—ಹುತ್ತದಮಣ್ಣು, ಕಾವಿ, ಇಟ್ಟಿಗೆ, ಸೈಂಧವಲವಣ, ಇಲ್ಲಣ, ಈ ಐದು ಬಗೆಗಳನ್ನು ಸಮತೂಕವಾಗಿ ಹಾಕಿ ನಿಂಬೆರಸದಲ್ಲಿ ಆಗಲಿ ಅಕ್ಕಿಕಚ್ಚಿನಲ್ಲಾಗಲಿ ಅರದು ಯಲ್ಲಾಲೋಹಗಳ ತಗಡುಗಳಿಗೆ ಲೇಪಿಸಿ ಪುಟವನ್ನು ಹಾಕಿದರೆ ಚಿನ್ನವೇ ಮೊದಲಾದ ಲೋಹಗಳು ಶುದ್ಧಿಯಾಗುತ್ತವೆ.

ಇನ್ನೊಂದು ಪ್ರಕಾರ ಲೋಹಗಳ ಶುದ್ಧಿ ಕ್ರಮ.—ವೃತ್ತಿಗೆ, ಮಾದಲದ ಹಂಣಿನ ರಸ ಈ ಯರಡನ್ನು ಅರದು ಐದಾವರ್ತಿ ಭಾವನೆ ಮಾಡಿ ಪುಟಾ ಹಾಕಿದರೆ ಶುದ್ಧಿಯಾಗುತ್ತೆ.

ಯಶ್ಲಿಂಲೋಹಗಳು ಶುದ್ಧಿಯಾದ್ದಕ್ಕೆ ಗುರ್ತುಗಳು.—ಸುವರ್ಣದಲ್ಲಿ ಮೃದುತ್ವಹೋಗಿ ಕಾಠಿಣ್ಯ ಹುಟ್ಟಬೇಕು. ಬೆಳ್ಳಿಯಲ್ಲಿರುವ ಪ್ರಕಾಶವು ತಪ್ಪಬೇಕು. ತಾಮ್ರದಲ್ಲಿ ಕಾಳಿಕಾ ಹೋಗಬೇಕು. ಕಬ್ಬಿಣದಲ್ಲಿ ಕಾಠಿಣ್ಯ ಹೋಗಬೇಕು. ಸತ್ವದಲ್ಲಿ ಮಹತಾಪು ಹೋಗಬೇಕು. ಸೀಸದಲ್ಲಿ ಕಾಳಿಕಾ ಹೋಗಬೇಕು. ತವರದಲ್ಲಿ ದುರ್ಗಂಧ ಹೋಗಬೇಕು. ಈ ಪ್ರಕಾರವಾದರೆ ಲೋಹಗಳು ಶುದ್ಧಿಯಾದವೆಂದು ತಿಳಿಯತಕ್ಕದ್ದು.

ಲೋಹಗಳಿಗೆ ಮಾರಣ ಕ್ರಮ.—ತವರದ ತಗಡಿಗೆ ಮುತ್ತುಗದ ರಸ ಮತ್ತು ತಾಳಕಗಳನ್ನು ಅರದು ಹಚ್ಚಿಸಬೇಕು. ಸೀಸಕ್ಕೆ ಯಕ್ಕದ ಹಾಲು, ಮಣಿಶಿಲೆಗಳಿಂದಲೂ, ತಾಂಮ್ರಕ್ಕೆ ಮೇಕೆ ಹಾಲು ಪ್ರೋಳ್ಳೀ ಗಂಧಕಗಳಿಂದಲೂ, ಸೂಜಿಕಲ್ಲು ಕಬ್ಬಿಣ, ಉಕ್ಕಿಗೆ ಸಹ ಸ್ತನ್ಯ ಇಂಗ್ಲೀಕಗಳಿಂದಲೂ, ಬೆಳ್ಳಿಗೆ ಆಲದ ಹಾಲು ಮಾಕ್ಷಿಕಗಳಿಂದಲೂ, ಚಿನ್ನಕ್ಕೆ ಅಂಕೋಲೆದಳ ಸೀಸ ಭಸ್ಮಗಳಿಂದಲೂ, ಸರಿಯಾಗಿ ಸಂಸ್ಕಾರ ಮಾಡಿದರೆ ಮೇಲೆ ಹೇಳಲ್ಪಟ್ಟ ಎಂಟು ಲೋಹಗಳು ಮಾರಣವಾಗುತ್ತವೆ. ಇದಲ್ಲದೆ ಹನ್ನೊಂದು ಲೋಹಗಳನ್ನು ತ್ರಿಫಲಾ ಕಷಾಯ ಗಂಧಕಗಳನ್ನು ಹಾಕಿ ಮರ್ದಿಸಿ ಒಣಗಿಸಿ ಪುಟವನ್ನು ಹಾಕಬೇಕು. ಈ ಪ್ರಕಾರ ೩೦೫ ಪುಟಗಳನ್ನು ಬೇರೆ ಬೇರೆ ಹಾಕಿದರೆ ಭಸ್ಮವಾಗುತ್ತವೆ.

ಮತ್ತೊಂದು ಪ್ರಕಾರ ರಸದಿಂದ ಮಾರಣ ಕ್ರಮ.—ಶುದ್ಧಿಯಾದ ಇಂಗ್ಲೀಕದ ರಸವನ್ನು ಮೇಲೆ ಹೇಳಿದ ಭಸ್ಮಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಏಳಾವರ್ತಿ ಮರ್ದಿಸಬೇಕು, ಮತ್ತು ಪತಂಗಿಸಬೇಕು. ಹೀಗೆ ಪತಂಗಿಸೋಣದರಿಂದ ನಿಂತ ರಸವನ್ನು ಬೇರೆ ಬೇರೆ ಶೀಶೆಗಳಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಬಂದಕ್ಕೊಂಡು ಸಂಬಂಧಿಸದಂತೆ ಇಟ್ಟುಕೊಳ್ಳಬೇಕು. ಮತ್ತು ಆಯಾ ಲೋಹಗಳ ಭಸ್ಮಗಳಿಗೇನೆ ಉಪಯೋಗಿಸಿಕೊಳ್ಳಬೇಕು. ಮತ್ತು ಮೇಲೆ ಹೇಳಿದ ಭಸ್ಮಗಳನ್ನ ಉಪ್ಪೇ ಹಣ್ಣಿನ ರಸ ಅಥವಾ ಇಂಗ್ಲೀಕದಿಂದತೆಗದ ದ್ರಾವಕದಿಂದ ಮರ್ದಿಸಿ ಒಣಗಿಸಿ ಪತಂಗಿಸಬೇಕು. ಈ ಮೇಲೆ ಹೇಳಿದ ರೀತಿ ಮಾಡಿ ಪ್ರತಿ ಭಸ್ಮವನ್ನೂ ಮೂರಾವರ್ತಿ ಗಜಪುಟಗಳನ್ನು ಹಾಕಿದರೆ ಶುದ್ಧ ಭಸ್ಮವಾಗುತ್ತೆ.

ಭಸ್ಮಗಳು ಶುದ್ಧಿಯಾದ್ದನ್ನು ತಿಳಿಯುವ ಕ್ರಮ.—ಈ ೧೧ ಲೋಹ ಭಸ್ಮಗಳಲ್ಲಿ ಯಾವದನ್ನಾದರೂ ಕರಗಿಸಿದ ಸುವರ್ಣಕ್ಕೆ ಹಾಕಿದರೆ ಆ ಸುವರ್ಣವು ಒಡಿಯ ಕೂಡದು. ಹಾಗೆ ಒಡದರೆ ಇನ್ನು ದೋಷವಿಧೆಯೆಂದು ತಿಳಿದು ಪುನಃ ಪುನಃ ಆ ದೋಷ ಹೋಗುವವರಿಗೂ ಭಸ್ಮವನ್ನು ಮರ್ದಿಸಿ ಒಲೀ ಪುಟವನ್ನು ಹಾಕಬೇಕು. ಈ ಪುಟಕ್ಕೆ ಇಡುವ ಕುಡಿಕೆಯನ್ನು ಚೀರು ಮಣ್ಣು ಮಾಡಕೂಡದು.

ಲೋಹಭಸ್ಮಗಳು ಶುದ್ಧವಾಗದೆ ಇದ್ದರೆ ; ಉಂಟಾಗುವ ರೋಗಗಳು.— ಸ್ವರ್ಣ ಭಸ್ಮದಿಂದ ಶ್ರಮೆ, ಕೆಟ್ಟ ಜ್ವರುಗಳು; ರಜತ ಭಸ್ಮದಿಂದ ಉದರರೋಗವು ಮಾಂದ್ಯವು; ತಾಂಮ್ರ ಭಸ್ಮದಿಂದ ಅತಿಭ್ರಾಂತಿಯು; ಸೀಸ ತವರ ಭಸ್ಮಗಳಿಂದ ಅಂಗ ದೋಷಗಳು, ಉಷ್ಣಾಧಿಕ್ಯವು; ಕಂಚಿನ ಭಸ್ಮದಿಂದ ಗುಳ್ಳೆಗಳು, ಧಪ್ಪವಾದ ಗುಲ್ಮವು, ಕಾಸವು, ಮಣ ಕಟ್ಟುವಿಕೆಯು; ಸೂಜಿಕಲ್ಲಿನ ಭಸ್ಮಧಿಂದಸ್ತನದಲ್ಲಿ ಶೂಲೆಯು; ಕಿಟ್ಟ ಉ ಕ್ಕುಗಳ ಭಸ್ಮಗಳಿಂದ ಹಸಿವಾಗದೆ ಇರುವಿಕೆಯು; ಹಿತ್ತಾಳೆ ಭಸ್ಮದಿಂದ ಮೋಹವು, ಶೋಷೆಯು ಸಹ ಉಂಟಾಗುತ್ತೆ.

ಶುದ್ಧವಾದ ಲೋಹಭಸ್ಮಗಳಿಂದುಂಟಾಗುವ ಗುಣಗಳು.

ಸ್ವರ್ಣಭಸ್ಮ.—ಈ ಭಸ್ಮದಲ್ಲಿ ಎರಡು ಗುಂಜೀ ತೂಕವನ್ನು ತುಪ್ಪದಲ್ಲಿ ಕ ಲಸಿ ಸೇವಿಸಿದರೆ ಅದು ಮನುಷ್ಯನ ದೇಹಸಂಬಂಧವಾದ ಅಗ್ನಿಕೋಶದಲ್ಲಿ ವ್ಯಾಪಿ ಸಿರುವ ಕ್ಷಯಾದಿರೋಗಗಳನ್ನು, ಶ್ವಾಸರೋಗವನ್ನು, ಕಾಸಾರುಚಿಗಳನ್ನು, ಪಾಂಡು ಶೋಭೆ ಸರ್ಪವಿಷ ಇನ್ನು ಇತರ ವಿಷಗಳನ್ನು ಮತ್ತು ದುಷ್ಟಗ್ರಹಗಳಿಂದುಂಟಾದ ಪೀ ಡೆಗಳನ್ನು ಸಹ ನಾಶಮಾಡಿ ಓಜಸ್ಸು, ಧಾತು, ಬಲ ಇವುಗಳನ್ನು ವೃದ್ಧಿಪಡಿಸುವದು; ಮ ತ್ತು ಈ ಭಸ್ಮವನ್ನು ಸೇವಿಸಿದರೆ ಹಿಂದೆ ಉಂಟಾದ ರೋಗವನ್ನು ನಿವರ್ತಿಸಿ ಮುಂದೆ ಬರುವ ರೋಗಕ್ಕೆ ತಡೆಮಾಡಿ ದೋಷತ್ರಯಗಳ ಭಯವನ್ನು ಪರಿಹರಿಸಿ ಮೇದಸ್ಸು ಬುದ್ಧಿಗಳನ್ನು ಹೆಚ್ಚಿಸಿ ಸಮಸ್ತ ಉನ್ಮಾದಗಳನ್ನು ನಾಶಮಾಡುವದು. ಬಿಲ್ವಫಲ ಹೊರ್ತಾಗಿ ಇತರ ಯಲ್ಲಾ ಪದಾರ್ಥಗಳನ್ನೂ ಈ ಭಸ್ಮಕ್ಕೆ ಅನುಪಾನವಾಗಿ ಕೊಡಲ್ಪಡ ಬಹುದು. ಈ ಸುವರ್ಣ ಭಸ್ಮವೆ ವಿಷಹಾರಿ ರಸಾಯನವೆನ್ನಿಸಿಕೊಳ್ಳುವದು. ಇದು ಬುದ್ಧಿ ಮೇದಸ್ಸು ಯುಕ್ತಿರಿಕೆಗಳನ್ನುಂಟು ಮಾಡಿ ವಿಷವಂ ನಾಶಮಾಡುತ್ತೆ.

ರಜತಭಸ್ಮ.—ಇದರಿಂದ ವಾತರೋಗವು ಮತ್ತು ಸಕಲ ರೋಗಗಳು ನಾಶವಾ ಗುವವು. ಇದು ಸೀತ, ಖೈ, ಹುಳಿ, ಮನೋಹರವು, ಮತ್ತು ವಿಧಿಯಿಂದ ಮಾಡಲ್ಪಟ್ಟ ರಸಾಯನವು.

ತಾಮ್ರಭಸ್ಮ.—ಈ ಭಸ್ಮವನ್ನು ಎರಡು ಗುಂಜೀ ತೂಕ ತುಪ್ಪದಲ್ಲಿ ಹಾ ದಿನಪ್ರತಿಯಲ್ಲೂ ಶೇವಿಸಿದ್ದೇ ಆದರೆ ವಾಂತಿಭ್ರಾಂತಿ, ಬಳಲಿಕೆ, ಮೋಹ, ದೋಷವೈಷಮ್ಯ ಗಳು ಇವುಗಳನ್ನು ನಾಶಮಾಡಿ ಶರೀರಕ್ಕೆ ಹಿತವನುಂಟುಮಾಡುತ್ತೆ, ಮತ್ತು ಈ ಭಸ್ಮವ ನ್ನು ತಕ್ಕ ಅನುಪಾನದಿಂದ ಶೇವಿಸಿದ್ದೇ ಆದರೆ ಸ್ವರಭೇದ, ಪರಿಣಾಮಶೂಲೆ ಉದರ, ಶೂಲೆ, ಪಾಂಡುರೋಗ, ಭ್ರಮೆ, ಗುಲ್ಮ, ಗ್ರಂಥಿ, ಕ್ಷಯ, ಮೇಹ, ಮೂಲ, ಗ್ರಹಣಿ, ಸರ್ವಜ್ವರ ಗಳು ಇವುಗಳನ್ನು ಮತ್ತು ಅನೇಕ ರೋಗಗಳನ್ನು ಸಹ ನಾಶವಂ ಮಾಡುತ್ತೆ.

ಕಿಟ್ಟಭಸ್ಮ.—ಇದು ಮೃದುವಾಗಿರುವದು. ಮತ್ತು ದೀಪನವಾಗಿ ರಕ್ತವೃದ್ಧಿಯನ್ನುಂಟುಮಾಡುತ್ತೆ. ಅಲ್ಲದೆ ಇದರ ಸೇವನೆಯಿಂದ ಕಫವಾತದಿಂದುಂಟಾದ ಶೂಲೆ ಮೂಲರೋಗ, ಮೇಹರೋಗ, ಕಾಮಾಲೆ, ಪಾಂಡು, ಗುಲ್ಮ, ಆಮವಾತ, ಉದರಬೇನೆ, ಶೋಭೆ, ಕುಷ್ಠ ಈ ರೋಗಗಳು ನಾಶವಾಗುವವು.

ಲೋಹಭಸ್ಮ.—ಈ ಭಸ್ಮಸೇವನೆಯಿಂದ ಕ್ಷಯ, ಪಾಂಡು, ಗುಲ್ಮ, ಶೂಲೆ, ಉನ್ಮಾದ, ಅಗ್ನಿಮಾಂದ್ಯ, ಗ್ರಂಥಿ, ಕಾಮಾಲೆ, ಶ್ವಾಸ, ಕಾಸ, ಕುಷ್ಠ, ಜ್ವರ ಸಹ ಪರಿಹಾರವಾಗುವವು.

ಕಾಂತಸಿಂಧೂರ.—ಇದರ ಸೇವನೆಯು ಮನಸೋ ಇಚ್ಛೆ ಆಯುಸ್ಸನ್ನು ಕೊಡುವದಲ್ಲದೆ ಇದು ಮನೋಹರವಾಗಿರುವದು ಮತ್ತು ತ್ರಿದೋಷವೈಷಮ್ಯಗಳನ್ನು ಶಮನಮಾಡಿ ಶೂಲೆ, ಶೋಭೆ, ಮೂಲರೋಗ, ಗುಲ್ಮ, ಗ್ರಂಥಿ, ಕ್ಷಯ, ಪಾಂಡು, ಉದರ ಈ ರೋಗಗಳನ್ನು ಪರಿಹರಿಸುತ್ತೆ. ಮತ್ತು ಇದು ಶೈತ್ಯವಾಗಿಯೂ, ಉಷ್ಣವಾಗಿಯೂ, ಶತವೀರ್ಯವುಳ್ಳದ್ದಾಗಿಯೂ, ತತ್ತದ್ರೋಗಾನುಸಾರವಾಗಿ ಸಕಲ ರೋಗಗಳನ್ನು ಪರಿಹರಿಸುತ್ತದೆ.

ವಂಗಭಸ್ಮ.—ಈ ಭಸ್ಮಸೇವನೆಯಿಂದ ಧಾತುಕ್ಷಯ, ಪಾಂಡು, ವಾತರೋಗ ಕಫರೋಗ, ಪಿತ್ತರೋಗ, ಬಹುಮೂತ್ರ, ಪ್ರಮೇಹ, ನಷ್ಟೇಂದ್ರಿಯ, ಶೋಷೆ, ಶೂಲೆಗಳು ಪರಿಹಾರವಾಗುತ್ತವೆ.

ಸೀಸಭಸ್ಮ.—ಈ ಭಸ್ಮವು ರಸವೀರ್ಯವಿಪಾಕದಿಂದ ವಂಗಭಸ್ಮದ ಸಮಾನವಾಗಿ ಉಷ್ಣ, ಕಫವಾತ, ಅರ್ಶರೋಗಗಳನ್ನು ಪರಿಹರಿಸುವದು, ಇದು ಗುರುವಾಗಿಯೂ, ತೆಳುವಾಗಿಯೂ ಸಹ ಇರುವದು.

ಹಿತ್ತಾಳೆಭಸ್ಮ.—ಎರಡು ವಿಧ ಹಿತ್ತಾಳೆ ಭಸ್ಮಗಳು ಸೀತಳವಾಗಿರುವವು, ಮತ್ತು ರಸದಲ್ಲಿ ಲವಣರಸವುಳ್ಳವು. ಶೋಧನೆಯನ್ನು ಮಾಡಿ ಪಾಂಡು, ವಾತರೋಗ, ಕ್ರಿಮಿ, ಗ್ರಂಥಿ, ನೋವು, ಪಿತ್ತರೋಗ, ಈ ರೋಗಗಳನ್ನು ಪರಿಹರಿಸುತ್ತವೆ. ಇವು ರಸವೀರ್ಯವಿಪಾಕದಲ್ಲಿ ಶ್ರೇಷ್ಠಕ್ಕೆ ಎರಡನೆ ತರಗತಿವುಳ್ಳವು.

ಕಂಚಿನಭಸ್ಮ.—ಈ ಭಸ್ಮವು ಲಘುವಾಗಿಯೂ, ಶೈತ್ಯವಾಗಿಯೂ, ಉಷ್ಣವಾಗಿಯೂ, ತೆಳುವಾಗಿಯೂ, ಕಣ್ಣಿಗೆ ಹಿತಕರವಾಗಿಯೂ, ಇರುವದು. ಇದರಿಂದ ಕ್ರಿಮಿಸಮೂಹ, ವಾತರೋಗ, ಪಿತ್ತರೋಗ, ಸೋಮರೋಗ, ಯೋನಿರೋಗಗಳು ಪರಿಹಾರವಾಗುವವು. ಉಪ್ಪು, ಹುಳಿಗಳನ್ನು ವರ್ಜಿಸಿ ತುಪ್ಪದಿಂದಲೇ ಅನ್ನವನ್ನು ತಿನ್ನುತ್ತಾ ಈ ಭಸ್ಮವನ್ನು ಸೇವಿಸಿದರೆ ಸೌಖ್ಯವನ್ನುಂಟು ಮಾಡುತ್ತೆ.

ವರ್ತಲೋಹ ಭಸ್ಮ.—ಈ ಲೋಹವು ಕಾಂಸ್ಯ, ಅರ್ಕಲೋಹ, ಹಿತ್ತಾಳೆ ಸೀಸ ಇವುಗಳಿಂದ ಉಂಟಾದ್ದರಿಂದ ವರ್ತಲೋಹವೆಂದು ಕರೆಸಿಕೊಳ್ಳುತ್ತೆ. ಇದು ಹಿಮ

ಆಮ್ಲ, ಕಟು, ರೂಕ್ಷ, ಕಫಪಿತ್ತವನ್ನು ನಾಶಮಾಡುತ್ತೆ, ಮತ್ತು ಕ್ರಿಮಿ, ನೇತ್ರರೋಗಗಳನ್ನು ಪರಿಹರಿಸುತ್ತೆ. ಇದು ರುಚಿಯನ್ನು, ನಿರ್ಮಲತ್ವವನ್ನು ಸಹ ಉಂಟು ಮಾಡುತ್ತೆ.

ಸತ್ತು ಭಸ್ಮ.—ಇದರಿಂದ ಸರ್ವಮೇಹರೋಗಗಳೂ ಮತ್ತು ಕಫ ಪಿತ್ತ ರೋಗಗಳೂ ಸಹ ಪರಿಹಾರವಾಗುತ್ತವೆ.

ರತ್ನಗಳು.—ಮಾಣಿಕ್ಯ, ಮುತ್ತು ಹವಳ, ತಾರ್ಕ್ಷ್ಯ, ಪದ್ಮ, ವೈಡೂರ್ಯ, ನೀಲ, ಗೋಮೇಧಕ, ವಿದೂರಕ, ಇವುಗಳು ಕ್ರಮವಾಗಿ ನವಗ್ರಹಸ್ವರೂಪಗಳಾದ ನವರತ್ನಗಳು.

ಈ ರತ್ನಗಳಲ್ಲಿ ದೋಷಗಳು.—ಪಾಶ, ತ್ರಾಸ, ರೇಖೆ, ಬಿಂದು, ಜಲಗರ್ಭ ಈ ಐದು ಪ್ರಕಾರ ದೋಷಗಳಿರುವವು.

ಉಪರತ್ನಗಳು.—ಸೂರ್ಯಕಾಂತ, ಚಂದ್ರಕಾಂತ, ತಾರಾಕಾಂತ, ಲೋಹಕಾಂತ ಎಂದು ೪ ವಿಧಗಳಿರುತವೆ,

ನವರತ್ನಗಳ ಶುದ್ಧಿಕ್ರಮ.—ಹುಳಿ ಹಂಣಿನಿಂದ ಮಾಣಿಕ್ಯವನ್ನೂ, ಅರಿಶಿನದಿಂದ ಮುತ್ತನ್ನೂ, ಕ್ಷಾರ ವರ್ಗದಿಂದ ಹವಳವನ್ನೂ, ಹಸುವಿನ ಹಾಲಿನಿಂದ ತಾರ್ಕ್ಷ್ಯವನ್ನೂ, ಧಾನ್ಯ, ಹುಳಿಹಂಣುಗಳನ್ನು ಕೂಡಿಸಿ ಪುಷ್ಯರಾಗವನ್ನೂ, ಅಕ್ಕೀಕಟ್ಟಿನಿಂದ ವಜ್ರವನ್ನೂ, ನೀಲೀರಸದಿಂದ ನೀಲವನ್ನೂ, ತ್ರಿಫಲಾರಸಗಳಿಂದ ರೋಚನಾಭಿ, ಗೋಮೇಧಕ, ವೈಡೂರ್ಯಗಳನ್ನೂ, ಹುಳಿಯಲ್ಲಿ ಉಪರತ್ನಗಳನ್ನೂ ಸಹ ಕಾಸಿ ಕಾಸಿ ಹಾಕಿ ಶುದ್ಧಿ ಮಾಡಬೇಕು.

ವಜ್ರ ಹೊರ್ತಾದ ಎಂಟು ರತ್ನಗಳ ಮಾರಣಕ್ರಮ.—ನಿಂಬೇ ಹಂಣಿನ ರಸದಿಂದ ಮಣಿಸಿಲಾ, ಗಂಧಕ, ತಾಳಕಗಳನ್ನು ಅರದು ಎಂಟು ರತ್ನಗಳಿಗೆ ಚೆನ್ನಾಗಿ ಲೇಪಿಸಿ, ಚೀರಮಂಣು ಮಾಡಿ ಪುಟವನ್ನು ಹಾಕಲು ಭಸ್ಮಗಳಾಗುವವು.

ವಜ್ರ ಶುದ್ಧಿ ಕ್ರಮ.—ಹುರಳೀಕಟ್ಟಿನಲ್ಲಿ ಒಂದು ಝಾಮದ ವರಿಗೂ ವಜ್ರವನ್ನು ಕಾಸಿ ಕಾಸಿ ಯದ್ದಿದರೆ ವಜ್ರವು ಶುದ್ಧಿಯಾಗುತ್ತೆ.

ವಜ್ರಭಸ್ಮ ಮಾಡತಕ್ಕ ಕ್ರಮ.—ಈ ಶುದ್ಧಿಯಾದ ವಜ್ರವನ್ನು ತಿಗಣೀ ರಕ್ತದಿಂದ ನಾಲ್ಕಾವರ್ತಿ ಭಾವನೆಮಾಡಿ ವಜ್ರಮೂಷೆಯಲ್ಲಿ ಮಡಗಿ ಚೀರಮಂಣು ಮಾಡಿ ೩೦ ಆವರ್ತಿ ಸಲಗವಾದ ವರಾಹ ಪುಟವನ್ನು ಹಾಕಬೇಕು. ಅನಂತರ ನೂರಾವರ್ತಿ ಮೇಲೆ ಹೇಳಿದಪ್ರಕಾರ ತಿಗಣೀ ರಕ್ತದಿಂದ ಭಾವಿಸಿ ಕಾಸಿ ಕಾಸಿ ಹುರಳೀ ಕಟ್ಟಿನಲ್ಲಿ ಹಾಕುತ್ತಿದ್ದು ಆಮೇಲೆ ಹುರಳೀ ಕಟ್ಟಿನಿಂದಲೂ ನಿಂಬೇಹಂಣಿನ ರಸದಿಂದಲೂ ಬಿಳೀ ಶಿಲೆಯನ್ನು ಮರ್ದಿಸಿ ಮೂಷೆಗೆ ಲೇಪಿಸಿ ಆ ಮೂಷೆಗೆ ಶುದ್ಧವಜ್ರವನ್ನು ಹಾಕಿ ಬಾಯಿಮುಚ್ಚಿ ಇದಕ್ಕೆ ನಾಲ್ಕು ಪದರ ಬಟ್ಟೆಗಳನ್ನು ಸುತ್ತಿ ಅದರಮೇಲೆ, ಮೇಲೆಹೇಳಿದ ಕಲ್ಲಿನ

ಲೇಪವನ್ನು ಮಾಡಿ ಕಾಡುಬೆರಣಿಗಳಿಂದ ಎಂಟೂವರ್ತಿ ಪುಟವನ್ನು ಹಾಕಿ ಮತ್ತು ನೂರಾ ವರ್ತಿ ಮೇಲೆ ಹೇಳಿದಪ್ರಕಾರ ಊವಿ ಶುದ್ಧಿಯಾದ ಪಾದರಸದಲ್ಲಿ ಅರದು ಊದಿದರೆ ನೀರಿನ ಹಾಗೆ ಆಗುತ್ತೆ. ಅದಕ್ಕೆ ಪುನಹಾ ಏಳಾವರ್ತಿ ತಿಗಣೆರಕ್ತವನ್ನು ಭಾವಿಸಿ ವಣಗಿಸಿ ದರೆ ಧೂಳಾಗುತ್ತೆ; ಅದೇ ವಜ್ರಭಸ್ಮವೆಂದು ತಿಳಿಯತಕ್ಕದ್ದು.

ಅಶುದ್ಧವಾದ ರತ್ನಗಳಿಂದ ಉಂಟಾಗುವ ರೋಗಗಳು.—ದಾಹ, ಮೂರ್ಛೆ, ಅಗ್ನಿಮಾಂದ್ಯ, ಅನ್ನದ್ವೇಷ, ಗುಲ್ಮಗಳು, ತಲೆಸುತ್ತೋದು, ಕಣ್ಣು ಕಾಲುಗಳಲ್ಲಿ ಸಂತಾಪ, ಕೋಪ, ಉನ್ಮಾದಗಳು ಉಂಟಾಗುವವು.

ನವರತ್ನಭಸ್ಮಗಳಿಂದುಂಟಾಗುವ ಗುಣಗಳು.

ಮಾಣಿಕ್ಯಭಸ್ಮ.—ಈ ಭಸ್ಮವು ದೀಪನವಾಗಿ ಶರೀರ ಪುಷ್ಟಿಯನ್ನು ಉಂಟುಮಾಡುತ್ತೆ. ಮತ್ತು ಕ್ಷಯ, ವಾತರೋಗ, ಕಫರೋಗಗಳನ್ನು ನಾಶಮಾಡುತ್ತೆ.

ಮುತ್ತಿನಭಸ್ಮ.—ಇದು ಕಫರೋಗ, ಪಿತ್ತರೋಗ, ಕ್ಷಯ, ಕಾಸ, ಶ್ವಾಸ, ಅಗ್ನಿಮಾಂದ್ಯ, ದಾಹ ಇವುಗಳನ್ನು ಪರಿಹರಿಸಿ ಪುಷ್ಟಿ, ವೀರ್ಯವೃದ್ಧಿಗಳನ್ನುಂಟು ಮಾಡುತ್ತೆ.

ಪ್ರವಾಳಭಸ್ಮ.—ಈ ಭಸ್ಮಸೇವನೆಯಿಂದ ಕ್ಷಯ, ರಕ್ತಪಿತ್ತ, ವಿಷ, ನೇತ್ರರೋಗಗಳು ನಾಶವಾಗಿ ದೀಪನೆ, ಪಾಚಕನೆ, ಲಘು ಸಹ ಉಂಟಾಗುತ್ತೆ.

ಪಚ್ಚೆಭಸ್ಮ.—ಇದು ಜ್ವರ, ಛರ್ದಿ, ವಿಷ, ಶ್ವಾಸ, ಸನ್ನಿಪಾತ, ಅಗ್ನಿಮಾಂದ್ಯ, ಪಾಂಡು, ಶೋಭೆ ಇವುಗಳನ್ನು ನಾಶಮಾಡಿ ಓಜಸ್ಸನ್ನು ವೃದ್ಧಿಪಡಿಸುತ್ತೆ.

ಪುಷ್ಯರಾಗಭಸ್ಮ.—ಈ ಭಸ್ಮವು ಗುರುವಾಗಿ ಛರ್ದಿ, ಕಫವಾತ, ಅಗ್ನಿಮಾಂದ್ಯ, ದಾಹ, ಕುಷ್ಠ ಇವುಗಳನ್ನು ಶಮನಮಾಡಿ ದೀಪನವಾಗಿ ಲಘು, ಪಾಚನೆಯನ್ನುಂಟುಮಾಡುತ್ತೆ.

ನೀಲಭಸ್ಮ.—ಈ ಭಸ್ಮವು ಕಾಸ, ಶ್ವಾಸ, ತ್ರಿದೋಷ, ವಿಷಮಜ್ವರ, ಪಾಂಡು ಈ ರೋಗಗಳಂ ನಾಶಮಾಡಿ ವೀರ್ಯವೃದ್ಧಿ ದೀಪನೆಗಳನ್ನುಂಟುಮಾಡುತ್ತೆ.

ಗೋಮೇಧಕಭಸ್ಮ.—ಇದು ಕಫ, ಪಿತ್ತ, ಕ್ಷಯ, ಪಾಂಡು ಈ ರೋಗಗಳನ್ನು ಪರಿಹರಿಸಿ ರುಚಿಯನ್ನೂ ದೀಪನೆಯನ್ನೂ ಬುದ್ಧಿಯನ್ನೂ ಸಹ ಉಂಟುಮಾಡುತ್ತೆ.

ವೈಡೂರ್ಯಭಸ್ಮ.—ಈ ಭಸ್ಮವು ರಕ್ತಪಿತ್ತ, ಪಿತ್ತಪ್ರಧಾನವಾದ ರೋಗಗಳನ್ನು ಪರಿಹರಿಸಿ ದೀಪನೆ ಬಲಗಳನ್ನುಂಟುಮಾಡುತ್ತೆ.

ವಜ್ರಭಸ್ಮ.—ಈ ಭಸ್ಮವನ್ನು ಸೇವಿಸಿದರೆ ಆಯುಷ್ಯವನ್ನು ವೃದ್ಧಿಮಾಡು ತ್ತೆ. ಮತ್ತು ಅದು ಬಹಳ ಶ್ರೇಷ್ಠ್ಯ ಗುಣವುಳ್ಳದ್ದು. ಪುಷ್ಟಿಯನ್ನುಂಟುಮಾಡುವದು. ದೋಷತ್ರಯಗಳ ಸಕಲರೋಗಗಳನ್ನೂ ಪರಿಹರಿಸುವದು. ಮತ್ತು ಪಾದರಸದ ದೋ ಷವನ್ನು ನಿವಾರಣಮಾಡುವದು, ಬಲಕಾರಿ, ಅಗ್ನಿ ಸಮವಾಗುವದು, ಮೃತ್ಯುವನ್ನು ಜಯಿಸುವದು, ಈ ಗುಣಗಳು ಉಳ್ಳದ್ದು.

ವಜ್ರಹೊರ್ತಾದ ಎಂಟು ರತ್ನಗಳ ರಸಾಯನ.—ಈ ಮೇಲೆ ಹೇಳಲ್ಪ ಟ್ಟ ವಜ್ರ ಹೊರ್ತಾದ ಎಂಟು ರತ್ನಗಳ ಭಸ್ಮಗಳನ್ನು ಸಮತೂಕವಾಗಿ ತೆಗೆದುಕೊಂ ಡು ಇವುಗಳು ಯೆಷ್ಟು ತೂಕ ವಿರುವದೋ ಅಷ್ಟುತೂಕ ಮೇಲೆ ಹೇಳಲ್ಪಟ್ಟ ಶುದ್ಧವಾ ದ ಪಾದರಸವನ್ನೂ, ತಗ್ಗು ಪುಟ ಹಾಕಿದ ಸುವರ್ಣವನ್ನೂ ಮತ್ತು ಈ ಭಂಗಾರದಲ್ಲಿ ಹತ್ತರಲ್ಲಿ ಒಂದು ಭಾಗ ತೂಕವುಳ್ಳ ಕಸ್ತೂರಿಯನ್ನೂ ಸಹ ಕೂಡಿಸಿ ಕಮಲದ ಯಲೇ ಮೇಲೆ ಬಿದ್ದ ಹಿಮದ ನೀರಿನಿಂದ ಮೂರುದಿವಸಗಳ ಪರಿಯಂತ ಮರ್ದಿಸಿ ಚನ್ನಾಗಿ ಕೂಡಿದ್ದನ್ನು ನೋಡಿ ಬಜ್ಜಲೀ ಮಾತ್ರೆಯನ್ನು ಮಾಡಿ ತಕ್ಕ ಅನುಪಾನಗಳಿಂದ ತಿಲ ಪ್ರಮಾಣ ಪ್ರಯೋಗಿಸಬೇಕು. ಇದು ಅಷ್ಟಮಂಗಳ ರಸಾಯನವೆನ್ನಿಸಿಕೊಳ್ಳುತ್ತೆ.

ಈ ಅಷ್ಟಮಂಗಳಮಾತ್ರೆ ಗುಣ.—ಗುಲ್ಮ, ಶೂಲೆ, ರಕ್ತಪಿತ್ತ, ಕಾಸ, ಶ್ವಾಸ, ಕ್ಷಯ, ವಿಷಮಜ್ವರ, ವಿಷ, ಅತಿಸಾರ, ಛರ್ದಿ, ನೇತ್ರರೋಗ, ಸನ್ನಿಪಾತ, ಆಮ್ಲಪಿತ್ತ, ಜ್ವರ, ಕೋಪೆ, ಅಗ್ನಿಮಾಂದ್ಯ, ದಾಹ ಈ ರೋಗಗಳನ್ನು ಪರಿಹರಿಸಿ ದೀ ಪನೆಯನ್ನೂ, ಪಾಚನೆಯನ್ನೂ ಶರೀರದಾರ್ಢ್ಯವನ್ನೂ, ಆಯುಸ್ಸನ್ನೂ, ಪ್ರಜ್ಞೆಯನ್ನೂ, ಬಲಾಧಿಕ್ಯವನ್ನೂ, ಓಜಸ್ಸನ್ನೂ, ತೇಜಸ್ಸನ್ನೂ, ವೀರ್ಯವೃದ್ಧಿಯನ್ನೂ ಸಹ ಉಂಟು ಮಾಡುತ್ತೆ.

ಇದೇ ಮೇರೆ ಶುದ್ಧಿಯಾದ ಹಸಿಯಾದ ಎಂಟು ರತ್ನಗಳನ್ನು ಸಮತೂಕವಾಗಿ ಯೂ ಮೇಲೆ ಹೇಳಿದ ರಸಭಸ್ಮವನ್ನು ಇದರ ಜೊತೆಗೆ ಸಮಾಂಶವಾಗಿಯೂ ಈ ರಸ ಭಸ್ಮದಲ್ಲಿ ನಾಲ್ಕರಲ್ಲಿ ಒಂದುಭಾಗ ಕಸ್ತೂರಿಯನ್ನೂ ಸಹ ಹಾಕಿ ಸ್ವಾತೀ ಮಳೆನೀರಿನಿಂದ ಮರ್ದಿಸಿ ಮಾಡಿದ ಮಾತ್ರೆಯೇ ಜವಾಹಿರ್‌ಮೊಹರಾವೆಂದು ಯುನಾನಿ ಜನರು ಹೇಳು ತ್ತಾರೆ. ಇದಲ್ಲದೆ ಈ ರತ್ನಗಳ ರಸಾಯನಗಳನ್ನೂ ಮಾತ್ರೆ ಮುಂತಾದವನ್ನೂ ಮಾಡ ತಕ್ಕ ರೀತಿಯು ವಿಸ್ತಾರವಾಗಿ ರಸಸಾರಸಂಗ್ರಹವೆಂಬ ಗ್ರಂಥದಲ್ಲಿ ಹೇಳಿರುವದ್ದರಿಂದ ನೋಡಿ ತಿಳದುಕೊಳ್ಳಬಹುದು.

ಧಾತುವೈಷಮ್ಯದಿಂದುಂಟಾಗುವ ರೋಗಗಳಿಗೂ ಮತ್ತು ಮೇಲೆ ಹೇಳಲ್ಪಟ್ಟ ಭಸ್ಮಗಳ ಅನುಪಾನಕ್ಕೂ ಸಹಾಯವಾಗಿರುವ ಔಷಧಿಗಳು ಸಂಕ್ಷೇಪವಾಗಿ ವಿವರಿ ಸಲ್ಪಡುತ್ತೆ.

ಜ್ವರಾದಿ ಸಕಲರೋಗೋತ್ಪತ್ತಿಗೂ ಅಗ್ನಿವೈಷಮ್ಯವೂ ಕ್ರಿಮಿಗಳೂ ಸಹ ಮುಖ್ಯ ಕಾರಣವಾಗಿರುತ್ತವೆಯಾಗಿ ಅಗ್ನಿವೈಷಮ್ಯವೇ ಆದಿಯಾಗಿ ಸಕಲರೋಗಗಳ ನಿವಾರಣಾರ್ಥವಾಗಿ ತಕ್ಕ ಔಷಧಗಳು ವಿವರಿಸಲ್ಪಡುತ್ತೆ.

೧. ಮಂದ, ತೀಕ್ಷ್ಣ, ವಿಷಮ, ರಸಶೇಷಗಳೆಂಬ ನಾಲ್ಕುಪ್ರಕಾರಗಳಾದ ಅಗ್ನಿವೈಷಮ್ಯಗಳನ್ನು ತಿದ್ದಿ ಸಮಜಠರಾಗ್ನಿ ಯೆಂಬುವದಕ್ಕೆ ಔಷಧಗಳನ್ನು ಮಾಡತಕ್ಕ ಕ್ರಮ.

೧. ಆಮದಿಂದ ಅಜೀರ್ಣವಾದರೆ ಮಂದಾಗ್ನಿ, ಆಮವೆಂದರೆ ಶ್ಲೇಷ್ಮವು ಶ್ಲೇಷ್ಮದಿಂದ ಆದ ಅಜೀರ್ಣಕ್ಕೆ ಉಂಟಾಗುವ ಲಕ್ಷಣ. ಮತ್ತು ಪ್ರತಿಕ್ರಿಯೆಗಳು.— ಶರೀರದಲ್ಲಿ ಗುರುತ್ವ, ಬೆವರು, ಕಪೋಲ ಅಕ್ಷಿಕೂಪಗಳಲ್ಲಿ ಶೂಲೆ, ತೇಗು, ಶೋಥೆ, ಭೋಜನಮಾಡಿದ್ದು ಜೀರ್ಣಿಸದೆ ಇರೋಣ, ಇವು ಆಗುತ್ತವೆ. ಇದಕ್ಕೆ ಉಷ್ಣೋದಕಸ್ನಾನವೂ ಮತ್ತು ಪಾನವೂ, ಜೀರ್ಣಿಸುವವರೆಗೆ ಉಪವಾಸವೂ ಸಹ ಮಾಡಬೇಕು.

ಮಂದಾಗ್ನಿಯನ್ನು ತಪ್ಪಿಸಿ ಸಮಾಗ್ನಿಯಂ ರಕ್ಷಿಸುವದಕ್ಕೆ
ಔಷಧಗಳು.

೧. ಸೈಂಧವಲವಣ, ಹಿಪ್ಪಲಿ, ಅಳಲೇಶಿಪ್ಪೆ, ಚಿತ್ರಮೂಲ, ವಾಯುವಿಳಂಗ ಇವುಗಳನ್ನು ಸಮತೂಕವಾಗಿ ಚೂರ್ಣಮಾಡಿ ಬಿಸಿನೀರಿನಲ್ಲಿ ಹಾಕಿ ತೆಗದುಕೊಂಡರೆ ಮಂದಾಗ್ನಿ ಹರವು.

೨. ಬೆಲ್ಲ ಶುಂಠಿಪುಡಿಗಳಂ ತೆಗದುಕೊಂಡರೆ ಮಂದಾಗ್ನಿಹರವು.

೩. ಅಳಲೇಶಿಪ್ಪೆ, ಸೈಂಧವಲವಣ ಇವುಗಳ ಪುಡಿಯನ್ನು ತೆಗದುಕೊಂಡರೆ ಮಂದಾಗ್ನಿಹರವು.

೪. ಸೈಂಧವಲವಣ, ಚಿತ್ರಮೂಲ, ಹಿಪ್ಪಲಿ, ಅಳಲೇಶಿಪ್ಪೆಗಳ ಪುಡಿಯನ್ನು ಬಿಸಿನೀರಿನಲ್ಲಿ ಕದಡಿ ಕುಡಿದರೆ ಮಂದಾಗ್ನಿಹರವಾಗುತ್ತೆ.

೫. ಶುಂಠಿ, ಮೆಣಸು, ಹಿಪ್ಪಲಿ, ಇಂಗು, ಸೈಂಧವಲವಣಗಳನ್ನು ನೀರಿನಿಂದ ಅರದು ಮೈಗೆ ಲೇಪಿಸಿ ಜೀರಿಗೆ ಮೊಸರುಗಳನ್ನು ತಿನ್ನಿಸಿ ಭಾರವಾದ ಹಚ್ಚಡವನ್ನು ಹೊದ್ದಿಸಿ ಮಲಗಿಸಿದರೆ ಮಂದಾಗ್ನಿಹರವು.

೬. ಎರಡಜವಾನ, ಸೈಂಧವಲವಣ, ಹಿಪ್ಪಲಿ, ಶುಂಠಿ, ಮೆಣಸು, ಅಳಲೇ, ನೆಲ್ಲಿ, ತಾರೆಕಾಯಿಗಳ ಶಿಪ್ಪೆಗಳ ಪುಡಿಗೆ ಸಮತೂಕ ಬೆಲ್ಲವನ್ನು ಬೆರಸಿ ಕೊಟ್ಟರೆ ಮಂದಾಗ್ನಿಹರವು.

೭. ಏಳುಪದರದ ಬಟ್ಟೆಯಲ್ಲಿ ಸೋಧಿಸಿದ ರಾಗಿಹಿಟ್ಟನ್ನು ಮಜ್ಜಿಗೆಗೆ ಕದಡಿ ಆ ಅಂಬಲಿಯಲ್ಲಿ ಈಶ್ವರೀಪೇರಿನಬೂದಿ ಹಾಕಿ ನೆಕ್ಕಿಸಿದರೆ ಮಂದಾಗ್ನಿ ಪರಿಹರವಾಗುತ್ತೆ.

೮. ಪಾಯುವಳಂಗ, ಶುಂಠಿ, ಅಳಲೇಶಿಪ್ಪೆ, ಚಿತ್ರಮೂಲದ ಬೇರುಗಳ ಸಮತೂಕ ಚೂರ್ಣವನ್ನು ಒಂದುಭಾಗ ಗೇರುಹಾಕಿ ಮರ್ದಿಸಿ ಈ ಪುಡಿಯಲ್ಲಿ ಎರಡು ಹಣತೂಕವನ್ನು ಬಿಸಿನೀರಿನಲ್ಲಿ ಹಾಕಿ ಕೊಟ್ಟರೆ ಮಂದಾಗ್ನಿ ಹರವು.

೯. ನೀರಿನಿಂದ ಉತ್ತರಣೆಬೇರನ್ನು ಅರೆದು ಕೊಟ್ಟರೆ ಮಂದಾಗ್ನಿಹರವು.

೧೦. ನೀರಿನಿಂದ ಸೈಂಧವ, ಈಶ್ವರೀಪೇರುಗಳನ್ನು ಅರೆದು ಕೊಟ್ಟರೆ ಮಂದಾಗ್ನಿ ಹರವು.

೧೧. ಬೇವಿನಯಂಚೆ ಅಗಸೇಯಂಚೆಗಳನ್ನು ಬೆರಸಿ ಮೈಗೆ ಲೇಪಿಸಿ ಅಂಗಮರ್ದನವನ್ನು ಮಾಡುತ್ತಾ ಒಂದು ಝಾಮದವರೆಗೂ ಇರಬೇಕಲ್ಲದೆ ಮಜ್ಜಿಗೆ, ನಿಂಬೇಚಿಗರು ಬೆಲ್ಲಗಳನ್ನು ತಿನ್ನಿಸಿದರೆ ಮಂದಾಗ್ನಿಹರವು ಮತ್ತು ಅಜೀರ್ಣ ಹರವು.

೧೨. ಕಡ್ಲೆಯನ್ನು ಆಡಿನಮೂತ್ರದಲ್ಲಿ ಏಳಾವರ್ತಿ ನೆನಸಿ ನೆಳಲಿನಲ್ಲಿ ಒಣಗಿಸಿ ಅವುಗಳಲ್ಲಿ ಮೂರು ನಾಲ್ಕನ್ನು ಕೊಟ್ಟರೆ ಮಂದಾಗ್ನಿಯು ಪರಿಹರವಾಗುತ್ತೆ.

೧೩. ಘೃತಕ್ಕೆ ೫ ದಿವಸಗಳ ಪರಿಯಂತ್ರವೂ, ತೈಲಕ್ಕೆ ೧೨ದಿವಸಗಳ ಪರಿಯಂತ್ರವೂ, ಕ್ಷೀರಕ್ಕೆ ೧೫ ದಿವಸಗಳ ಪರಿಯಂತ್ರವೂ, ಮೊಸರಿಗೆ ೨೦ ದಿವಸಗಳ ಪರಿಯಂತ್ರವೂ, ಮಾಂಸಾಜೀರ್ಣಕ್ಕೆ ಒಂದು ತಿಂಗಳ ಪರಿಯಂತ್ರವೂ ಜೀರ್ಣಿಸುವದಕ್ಕೆ ಉಪಾಯಗಳನ್ನು ಮಾಡಬೇಕು.

೧. ತುಪ್ಪದಿಂದ ಆದ ಅಜೀರ್ಣಕ್ಕೆ ಪ್ರತಿಕ್ರಿಯೆಗಳು—ಬಿಸಿನೀರು ಕುಡಿಯಬೇಕು. ನಿಂಬೇಹಂಣಿನ ರಸಕ್ಕೆ ಮೆಣಸು ಹಾಕಿ ಕುಡಿಯಬೇಕು. ಹೇರಳೇ ಹಂಣಿನ ರಸದಲ್ಲಿ, ಬೇವಿನಬೀಜಗಳನ್ನು ಹಾಕಿಕೊಡಬೇಕು. ಮತ್ತು ನಿಂಬೇಹಂಣು, ಹಿಪ್ಪಲಿ, ಮಜ್ಜಿಗೆ ಸಹ ಕೊಡಬೇಕು. ಮತ್ತುಮಜ್ಜಿಗೆ ಮೆಣಸು ಕೊಡಬೇಕು.

೨. ಜೇನುತುಪ್ಪದ ಅಜೀರ್ಣಕ್ಕೆ—ಅಳಲೇಕಾಯಿನ ಪುಡಿಯನ್ನುಕೊಡಬೇಕು.

೩. ತೈಲದಿಂದ ಆದ ಅಜೀರ್ಣಕ್ಕೆ—ಹೆಸರು ಗಂಜೀ ಕೊಡಬೇಕು.

೪. ಬಳ್ಳೆಣ್ಣೆಯಿಂದ ಆದ ಅಜೀರ್ಣಕ್ಕೆ—ಗಂಜೀ, ಯವಕ್ಷಾರ, ಸಹ ಕೊಡಬೇಕು.

೫. ಕೈಯಣ್ಣೆಯಿಂದ ಆದ ಅಜೀರ್ಣಕ್ಕೆ—ಗಂಜೀ ಕೊಡಬೇಕು.

೬. ತುಪ್ಪ, ತೈಲ ಮುಂತಾದವುಗಳಿಂದ ಆದ ಅಜೀರ್ಣಕ್ಕೆ—ಮಜ್ಜಿಗೆಗೆ ಹೆಸರು ಗಂಜೀ ಹಾಕಿ ಕೊಡಬೇಕು.

೭. ಹಾಲಿನಿಂದ ಆದ ಅಜೀರ್ಣಕ್ಕೆ—ಮಜ್ಜಿಗೆ, ಕೊಡಶಿಗೆಬೀಜ, ಮತ್ತು ಉಪ್ಪು, ಹೆಸರು ಸಹ ಕೊಡಬೇಕು. ಅಲ್ಲದೇ ಬಂದೇ ಮಜ್ಜಿಗೆಯನ್ನು ಕೊಡಬೇಕು.

೮. ಯಮ್ಮೆಹಾಲಿನಿಂದ ಆದ ಅಜೀರ್ಣಕ್ಕೆ—ಸೈಂಧವಲವಣ ಅಥವಾ ಶಂಖ ಭಸ್ಮ ಕೊಡಬೇಕು.

೯. ಆಕಳುಹಾಲಿನಿಂದ ಆದ ಅಜೀರ್ಣಕ್ಕೆ—ಬಿಸಿಯಾದ ಕೆನೆ ಮತ್ತು ಶಂಖ ಭಸ್ಮ ಸಹ ಕೊಡಬೇಕು.

೧೦. ಕಬ್ಬಿನಹಾಲಿನಿಂದ ಆದ ಅಜೀರ್ಣಕ್ಕೆ—ಶುಂಠಿ, ಹಲಸಿನ ಕ್ಷಾರಗಳನ್ನು ಕೊಡ ೕಕು.

೧೧. ಮೊಸರಿನಿಂದ ಆದ ಅಜೀರ್ಣಕ್ಕೆ—ಶಂಖಭಸ್ಮ ಕೊಡಬೇಕು.

೧೨. ಮೊಲೆಹಾಲಿನಿಂದ ಆದ ಅಜೀರ್ಣಕ್ಕೆ—ಶಂಖದ ಚೂರ್ಣ ಕೊಡಬೇಕು.

೧೩. ಮಜ್ಜಿಗೆ ಹಿಟ್ಟಿನಿಂದ ಆದ ಅಜೀರ್ಣಕ್ಕೆ—ಲಂಘನ ಮತ್ತು ಅರಳು ಹಿಟ್ಟು, ಮಜ್ಜಿಗೆ ಸಹ ಕೊಡಬೇಕು.

೧೪. ನವಿಲ್ ಮಾಂಸದಿಂದ ಆದ ಅಜೀರ್ಣಕ್ಕೆ—ಸಾಸುವೆ ಕೊಡಬೇಕು.

೧೫. ಪಾರಾವತ, ಕಪೋತ, ಕಪಿಂಜಲ, ನವಿಲು, ತಿತ್ತಿರ ಇವುಗಳ ಮಾಂಸದಿಂದ ಆದ ಅಜೀರ್ಣಕ್ಕೆ—ಸೈಂಧವ ಹಾಕಿ ಕೊಡಬೇಕು, ಮತ್ತು ೕವಿನಸೊಪ್ಪು ಸಹ ಕೊಡಬೇಕು.

೧೬. ಮಾಂಸದಿಂದ ಆದ ಅಜೀರ್ಣಕ್ಕೆ—ಉದ್ದು ಕೊಡಬೇಕು.

೧೭. ಸಾಲಸಿತ, ಉಡ, ಗೇಂಡ, ಚಿತ್ತಲ, ಹಂದಿ, ಆಮೆ ಇವುಗಳ ಮಾಂಸದಿಂದ ಆದ ಅಜೀರ್ಣಕ್ಕೆ—ಯವಕ್ಷಾರವನ್ನು ಕೊಡಬೇಕು.

೧೮. ಕತ್ತೆ, ಉಡ ಇವುಗಳ ಮಾಂಸದಿಂದ ಆದ ಅಜೀರ್ಣಕ್ಕೆ—ಕೈಯಣ್ಣೆ ಕುಡಿಸಬೇಕು.

೧೯. ಮೀನಿನ ಮಾಂಸದಿಂದ ಆದ ಅಜೀರ್ಣಕೆ—ದತ್ತೂರಿಯಲೆ ಮತ್ತು ಮಾವಿನಹಣ್ಣು ಸಹ ಕೊಡಬೇಕು.

೨೦. ಮೊಲದಮಾಂಸದಿಂದ ಆದ ಅಜೀರ್ಣಕ್ಕೆ—ಕೈಯಣ್ಣೆ ಕುಡಿಸಬೇಕು.

೨೧. ನೀಲಕಂಠ ಮಾಂಸದಿಂದ ಆದ ಅಜೀರ್ಣಕ್ಕೆ—ಬೇವಿನಸೊಪ್ಪು ಕೊಡಬೇಕು.

೨೨. ಮಾಂಸದಿಂದ ಆದ ಅಜೀರ್ಣಕ್ಕೆ—ಬಿಸಿನೀರು ಕೊಡಬೇಕು.

೨೩. ಮಾವಿನಹಣ್ಣಿನಿಂದ ಆದ ಅಜೀರ್ಣಕ್ಕೆ—ಹಾಲು, ಘೃತ ಮತ್ತು ಸೈಂಧವ, ಶುಂಠಿ, ಮೆಣಸು, ಹಿಪ್ಪಲಿಗಳ ಚೂರ್ಣ ಸಹ ಕೊಡಬೇಕು.

೨೪. ತೆಂಗಿನಕಾಯಿಗೆ—ಅಕ್ಕಿ, ತಾಳೇಫಲ ಮತ್ತು ಮೋಡಿ ಕೊಡಬೇಕು.

೨೫. ಬಾಳೇಹಣ್ಣಿಗೆ—ತುಪ್ಪವನ್ನು ಕೊಡಬೇಕು.

೨೬. ಕಿತ್ತಲೇಹಂಣಿಗೆ—ಬೆಲ್ಲ, ಕೊದ್ರವ, ಹಾರಕ ಧಾನ್ಯಗಳಂ ಕೊಡಬೇಕು.

೨೭. ಹಲಸಿನ ಹಣ್ಣಿಗೆ—ನಿಂಬೇಹಣ್ಣು, ಮೆಣಸು, ರಾಳ ಮತ್ತು ಬಾಳೇಹಂಣು, ಮಾವಿನಬೀಜದಪೊಪ್ಪು ಸಹ ಕೊಡಬೇಕು.

೨೮. ನಿಂಬೇಹಂಣಿಗೆ—ಉಪ್ಪು ಕೊಡಬೇಕು.

೨೯. ತಾಳೇಫಲಕ್ಕೆ—ಅಕ್ಕಿಕಚ್ಚು, ಬಕುಳ, ಮೆಣಸು ಕೊಡಬೇಕು.

೩೦. ದಾಳಿಂಬಕ್ಕೆ—ನೆಲ್ಲೀಕಾಯಿ ಮತ್ತು ಬಕುಳ ಸಹ ಕೊಡಬೇಕು.

೩೧. ಲಿಂಗತೊಂಡೆಗೆ—ಬಕುಳದ ಹಂಣು ಕೊಡಬೇಕು.

೩೨. ಬಿಲ್ವ, ಬ್ಯಾಲ, ಖರ್ಜೂರದ ಹಂಣುಗಳಿಗೆ—ಬೇವಿನಬೀಜ ಮತ್ತು ಸೊಪ್ಪು ಸಹ ಕೊಡಬೇಕು. ಮತ್ತು ಬಿಲ್ವಫಲಕ್ಕೆ ನಿಂಬೇಹಂಣು ಕೊಡಬೇಕು.

೩೩. ದ್ರಾಕ್ಷೆಗೆ—ಸಕ್ಕರೆ ಮತ್ತು ಭದ್ರಮೋಥ ಸಹ ಕೊಡಬೇಕು.

೩೪. ಅತ್ತಿ, ಅಶ್ವತ್ಥ, ಹುಣಸೆ, ಆಲ ಈ ಫಲಗಳಿಗೆ—ತಣ್ಣೀರಿನಿಂದ ಶುಂಠಿ ಅರದು ಕೊಡಬೇಕು, ಮತ್ತು ಬಳ್ಳೆಣ್ಣೆ ಕೊಡಬೇಕು. ಹುಣಸೇಹಂಣಿಗೆ ಸುಣ್ಣ ಮತ್ತು ಬಳ್ಳೆಣ್ಣೆಯನ್ನೂ ಮತ್ತು ತಣ್ಣೀರನ್ನೂ ಸಹ ಕೊಡಬೇಕು.

೩೫. ಯಲಚೀಹಂಣಿಗೆ—ಬಿಸಿನೀರು ಕೊಡಬೇಕು.

೩೬. ಬಕುಳದಹಂಣಿಗೆ—ಯಿದರ ಮೂಲವನ್ನೇ ಕೊಡಬೇಕು.

೩೭. ಮಾವಿನಕಾಯಿಗೆ—ಹಳೇನೀರು ಕೊಡಬೇಕು.

೩೮. ಹಿಪ್ಪೇಹಣ್ಣಿಗೆ—ಲವಣವನ್ನು ಕೊಡಬೇಕು.

೩೯. ಎಳನೀರಿಗೆ—ಸಮುದ್ರಫಲ ಕೊಡಬೇಕು.

೪೦. ಹಿರಳೇಹಂಣಿಗೆ—ಲವಣ, ಕೊದ್ರವಧಾನ್ಯ ಸಹ ಕೊಡಬೇಕು.

೪೧. ಮಾವಿನಬೀಜಕ್ಕೆ—ಬಿಸಿನೀರು ಕೊಡಬೇಕು.

೪೨. ಸೌತೇಕಾಯಿಗೆ—ಹೊಂಗೇಬೀಜವನ್ನು ಕೊಡಬೇಕು.

೪೩. ಅಡಿಕೆ ಮತ್ತು ಜಾಯಿಕಾಯಿಗೆ—ಎಳನೀರಿನಲ್ಲಿ ಸಮುದ್ರದ ನೊರೆ ಹಾಕಿ ಕೊಡಬೇಕು.

೪೪. ಕುಂಬಳಕ್ಕೆ — ಹಲಸಿನಹಣ್ಣಿನಕ್ಷಾರ, ಯೇರಂಡಮೂಲ, ಹೊಂಗೇ ಬೀಜ ಗಳನ್ನ ಕೊಡಬೇಕು.

೪೫. ನೇರಳೇಹಣ್ಣಿಗೆ—ಶುಂಠೀ ಕೊಡಬೇಕು.

೪೬. ಯುಲ್ಲಾ ಫಲಗಳಿಗೂ — ನಸಗುನ್ನಿಬೀಜ ಕೊಡಬೇಕು.

೪೭. ಗೋಧವೆಯಿಂದ ಆದ ಅಜೀರ್ಣಕ್ಕೆ—ಸಾತೇಕಾಯಿ ಮತ್ತು ದತ್ತೂರಿ ಕೊಡಬೇಕು.

೪೮. ಹಾರಕ ಧಾನ್ಯಕ್ಕೆ—ಬಿಳೀಗೆಣಸು ಕೊಡಬೇಕು.

೪೯. ಉದ್ದಿಗೆ—ಮಾಂಸ ಮತ್ತು ಚೀನಾ ಸಕ್ಕರೆ ಮತ್ತು ಬಿಡಾ ಲವಣ, ಮಾವಿನ ಹಣ್ಣು ಸಹ ಕೊಡಬೇಕು. ಮತ್ತು ಯೇರಂಡಮೂಲ, ದತ್ತೂರಿ ಮತ್ತು ಹುಣಸೇ ಬೇರುಸಹ ಕೊಡಬೇಕು.

೫೦. ಅಕ್ಕಿಗೆ—ತೆಂಗಿನಕಾಯಿ ಮತ್ತು ಬಿಳೀ ಶಿರಸ ಸಹ ಕೊಡಬೇಕು.

೫೧. ಬಿದುರು ಕಳಲೆಗೆ—ಸಾಸುವೆ ಕೊಡಬೇಕು.

೫೨. ದ್ವಿದಳಧಾನ್ಯಕ್ಕೆ—ಗಂಜಿ, ಹಿಪ್ಪಲಿ, ಪ್ರೇಮ, ಮತ್ತು ನೀರು, ಶುಂಠಿ ಮತ್ತು ಬಾಲಹರಡೆ, ಲವಣ, ಮತ್ತು ಹಾಗಲಕಾಯಿ ಸಹ ಕೊಡಬೇಕು.

೫೩. ಸಾವೆಗೆ ಮತ್ತು ನವಣೆ, ಎಳ್ಳು, ಅರವತ್ತುದಿನದ ಅಕ್ಕಿಗೆ ಸಹ—ಜೇನು, ತುಪ್ಪ, ದಾಳಿಂಬ, ಬೆಲ್ಲ ಸಹ ಬೆರಸಿ ಕೊಡಬೇಕು. ಮೆಂತ್ಯಾ, ಮೊಸರು, ನೀರು ಸಹ ಕೊಡಬೇಕು.

೫೪. ಹುರಳೀಗೆ—ಒಳ್ಳೆಣ್ಣೆ ಕೊಡಬೇಕು.

೫೫. ಕಡ್ಲೆ, ಹೆಸರು, ಯವೆ, ಬಟಾಣಿಗಳಿಗೆ—ಸೈಂಧವಲವಣ, ದತ್ತೂರಿಸಹ ಕೊಡಬೇಕು.

೫೬. ಶುಂಠಿ, ಕೊದ್ರವಗಳಿಗೆ—ಜೀರಿಗೆ, ಮೆಣಸು, ಚಂದನ, ಕಾವೀಕಲ್ಲುಗಳನ್ನು ಕೊಡಬೇಕು.

೫೭. ಅರಳು ಅಕ್ಕೀಗೆ—ಹಾಲು, ನೀರು ಕೊಡಬೇಕು.

೫೮. ಅವಲಕ್ಕಿ ಘಾರ್ಗೆಗೆ—ಅಜವಾನ ನೀರು ಕೊಡಬೇಕು.

೫೯. ಗಂಜಿಗೆ—ಮಜ್ಜಿಗೆಹಿಟ್ಟು ಕೊಡಬೇಕು.

೬೦. ಹುಗ್ಗಿಗೆ—ಸೈಂಧವಲವಣವನ್ನು ಕೊಡಬೇಕು.

೬೧. ಹಪ್ಪಳಕ್ಕೆ—ನುಗ್ಗೇಬೀಜ ಕೊಡಬೇಕು.

೬೨. ಲಾಡೂಗೆ—ಹಿಪ್ಪಲೀ ಕೊಡಬೇಕು.

೬೩. ಘಾರ್ಗೆ, ಮಂಡಿಗೆ, ಚಕ್ಕುಲಿಗಳಿಗೆ—ಶುಂಠಿ ಕೊಡಬೇಕು.

೬೪. ಜೇನು ಅನ್ನಗಳಿಗೆ—ಅಳಲೆಕಾಯಿ ಕೊಡಬೇಕು.

೬೫. ಕಟೋರಕ್ಕೆ—ಕೊನ್ನಾರಿ, ಹಸೀ ಶುಂಠಿ ಕೊಡಬೇಕು.

೬೬. ಪಿಷ್ಟಾನ್ನಕ್ಕೆ—ಬಿಸಿನೀರು, ಗಂಜಿ ಕೊಡಬೇಕು.

೬೭. ಹಸೀಹಿಟ್ಟಿಗೆ—ಉಪ್ಪು, ಗಂಜಿ, ತುಪ್ಪ, ಯವಕ್ಷಾರ ಸಹ ಕೊಡಬೇಕು.

೬೮. ಗೋಧಿಹಿಟ್ಟು ತುಪ್ಪಗಳಿಂದ ಆದ ಅಜೀರ್ಣಕ್ಕೆ—ಬಿಸಿನೀರು ಕೊಡಬೇಕು.

೬೯. ಹಾಲೆ, ಮುತ್ತಗ, ಹಾಗಲ, ಬದನೆ, ಗೆಡ್ಡೆ, ಚುಕ್ಕಿ, ಬೂದಗುಂಬಳ, ಪಡವಲಗಳಿಗೆ—ಸಾಸುವೆಯು, ಮತ್ತು ಬೂದಗುಂಬಳಕ್ಕೆ ಬೃಂದಾವನದ ಮೂಲವು ಸಹ ಕೊಡಬೇಕು.

೭೦. ಬಕುಳ, ಮಹಾಲುಂಗಿಗಳಿಗೆ—ಅವುಗಳ ಮೂಲವನ್ನೇ ಕೊಡಬೇಕು. ಬಕುಳಕ್ಕೆ ಬಿಳೀ ಶಿರಸದಗಿಡ ಕೊಡಬೇಕು.

೭೧. ತಾವರೆ, ಶಿಂಗಾಡೆ, ಸಕ್ಕರೆಗಳಿಗೆ—ಭದ್ರಮುಸ್ತ ಕೊಡಬೇಕು.

೭೨. ಬೆಳ್ಳುಳ್ಳಿಗೆ—ಹಾಲು ಕೊಡಬೇಕು.

೭೩. ಕನ್ನೈದಲಿಗೆ—ಶಿರಸದ ತೈಲ ಕೊಡಬೇಕು.

೭೪. ಗೇರುವುಪ್ಪಿಗೆ—ಅಳಲೇಕಾಯಿ ಮತ್ತು ಬಾಲಹರೀತಕೀ, ಮೆಣಸು, ಬಿಸಿನೀರು ಕೊಡಬೇಕು.

೭೫. ಪೊಪ್ಪಿಗೆ—ಅಕ್ಕಿಕಚ್ಚು, ಮತ್ತು ಕರಬೀಜಗಳನ್ನು ಕೊಡಬೇಕು.

೭೬. ಚಕೋತ್ರ, ಸಾಸುವೆ, ಹುಳಿಚಕ್ಕೆಗಳಿಗೆ—ಕಾಚು ಕೊಡಬೇಕು.

೭೭. ಕೊನ್ನಾರಿ, ಆಲುಗಡ್ಡೆಗಳಿಗೆ—ಅಕ್ಕಿಕಚ್ಚು ಕೊಡಬೇಕು.

೭೮. ಮಹಾಲುಂಗೀಗೆ—ಉಪ್ಪು ಕೊಡಬೇಕು.

೭೯. ಪಡವಲ, ಬಿಂಬಫಲಗಳಿಗೆ—ಬೃಹತೀಫಲ, ಇದ್ರಾವಾರುಣೀಮೂಲ ಕೊಡಬೇಕಲ್ಲದೆ ನಿದ್ರೆಮಾಡಿಸಬೇಕು. ಮತ್ತು ಸಾತೇಕಾಯಿ ಕೊಡಬೇಕು. ಮತ್ತು ಪಡವಲಕ್ಕೆ ಬಿಳೀಶಿರಸದ ಗಿಡ ಕೊಡಬೇಕು.

೮೦. ಭೂರುಗದಲಂಟು, ಪೀಲಸೊಪ್ಪುಗಳಿಗೆ—ತೋಳನಮಾಂಸ ಕೊಡಬೇಕು.

೮೧. ವಟಕ್ಕೆ—ಹಿಪ್ಪಲಿ, ಮೆಣಸು, ಶುಂಠಿ, ಬೆಲ್ಲ, ತುಪ್ಪಗಳನ್ನ ಶೇರಿಸಿ ಕೊಡಬೇಕು.

೮೨. ನುಗ್ಗೇಯಲೆ, ಅಕ್ಕಿಕಚ್ಚು, ತಾಂಬೂಲ, ಸಾಸುವೆಗಳಿಗೆ—ಗಂಜಿ, ಮೊಸರು, ತಾರೇಗಿಡದ ಕಷಾಯ, ತಾಳೀವೃಕ್ಷದ ಹಾಲು ಸಾಸುವೆಗೆ ಅಜವಾನ ಸಹ ಕೊಡಬೇಕು.

೮೩. ಯಲೆಯಲ್ಲಿ ಸುಣ್ಣ ಅಧಿಕವಾದರೆ—ಸಕ್ಕರೆ, ಯಣ್ಣೆ, ಗಂಜೀ ಕೊಡಬೇಕು, ಮತ್ತು ಬದರೀಯಲೆ ಕೊಡಬೇಕು.

೮೪. ಹುಳಿಗೆ—ಖಾರ ಕೊಡಬೇಕು.

೮೫. ಖಾರಕ್ಕೆ—ವಾಂತಿ ಮಾಡಿಸಬೇಕು. ಯಣ್ಣೆ, ತುಪ್ಪ, ಹಾಲು ಕೊಡಬೇಕು.

೮೬. ವಾಂತೀಗೆ—ಸಕ್ಕರೆ ಕೊಡಬೇಕು.

೮೭. ಕಮಲದ ಕೇಸರಿಗೆ—ಭದ್ರಮೋಥೆ ಕೊಡಬೇಕು.

೮೮. ಸಣ್ಣಜಾತೀ ಕಮಲದ ಗಡ್ಡೆಗೆ—ಖಾರದಯಣ್ಣೆ ಕೊಡಬೇಕು.

೮೯. ಹಿಪ್ಪಲಿಗೆ—ಅಜವಾನ ಕೊಡಬೇಕು.

೯೦. ಹತ್ತೀಗಿಡಕ್ಕೆ—ಮತ್ತು ಹಿಪ್ಪಲೀ ಫಲಕ್ಕೆ ಸಹ, ಥಣ್ಣೀರು ಕೊಡಬೇಕು.

೯೧. ವಿಳ್ಳೀದೆಲೆಗೆ—ಎಳ್ಳು, ಕರೀಕ್ಷಾರ ಮತ್ತು ಸಮುದ್ರದನೊರೆ ಸಹ ಕೊಡಬೇಕು.

೯೨. ಯಳ್ಳಿಗೆ—ಮೆಂಥ್ಯ, ದತ್ತೂರಿ ಕೊಡಬೇಕು.

೯೩. ಹಾಲುಸೊರೆಗೆ—ಶಿರಸದಕ್ಷಾರ ಮತ್ತು ಅಕ್ಕಿಕಚ್ಚು ಕೊಡಬೇಕು.

೯೪. ಕೆಸವಿನ ದಂಟಿಗೆ—ಅಕ್ಕೀಕಚ್ಚು ಕೊಡಬೇಕು.

೯೫. ಕಬ್ಬಿಗೆ—ಹಸೀಶುಂಠೀರಸ ಕೊಡಬೇಕು.

೯೬. ಆಲುಬೊಖಾರ, ಗೆಣಸುಗಳಿಗೆ—ಹಾರಕಧಾನ್ಯ, ಶುಂಠೀ ಕಷಾಯಗಳು ಕೊಡಬೇಕು.

೯೭. ಹುಳೀ ಪದಾರ್ಥಗಳಿಗೆ—ಕೊನ್ನಾರೀಗಡ್ಡೆ ಕೊಡಬೇಕು.

೯೮. ಹಿಂದೆ ಹೇಳಿದಯಲೆ, ಮೂಲ, ಫಲಗಳಿಗೆ—ಯಳ್ಳು, ಕಡ್ಡೀಕ್ಷಾರ, ಶುಂಠಿ, ಮೆಣಸು ಕೊಡಬೇಕು.

೯೯. ಫೇಣಿಗೆ—ಲವಂಗ, ನುಗ್ಗೆಬೀಜ ಕೊಡಬೇಕು.

೧೦೦. ಕರ್ಪೂರ, ವಿಳ್ಳೀದೆಲೆ, ಕೇಸರಿ, ಜಾಯಿಫಲ, ಜಾಯಿಪತ್ರೆ, ಕಸ್ತೂರಿಗಳಿಗೆ—ಸಮುದ್ರದನೊರೆ ಕೊಡಬೇಕು.

೧೦೧. ನೆಲ್ಲೀಕಾಯಿಗೆ—ಮಗಡೇಬೀಜ ಕೊಡಬೇಕು.

೧೦೨. ನೆಲ್ಲೀಕಾಯಿಗೂ, ಮದ್ಯಕ್ಕೂ—ಸಾಸುವೆ, ಆಕಾಶಬಳ್ಳೀ ನೀರು ಕೊಡಬೇಕು.

೧೦೩. ನೀರಿನಿಂದ ಆದ್ದಕ್ಕೆ—ಜೇನು ಕೊಡಬೇಕು.

೧೦೪. ಹೊಂಗೆಗೆ—ಹಿಪ್ಪಲೀಮೂಲ ಕೊಡಬೇಕು.

೧೦೫. ಲೋಳಸರಕ್ಕೆ—ಅಮೃತಬಳ್ಳೀ ಕೊಡಬೇಕು.

೧೦೬. ಕರ್ಣರೋಗಕ್ಕೆ—ವೊಳ್ಳೆಣ್ಣೆ ಹಾಕಬೇಕು.

೧೦೭. ಕಣಿಗಿಲೆಗೆ—ಹಿಪ್ಪಲೀ ಮೂಲವನ್ನು ಕೊಡಬೇಕು.

೧೦೮. ಬಜೆಗೆ—ಮೆಂಥ್ಯ, ಮೊಸರು, ನೀರು ಕೊಡಬೇಕು.

೧೦೯. ಕಿಚಡಿಗೆ—ಸೈಂಧವಲವಣ ಕೊಡಬೇಕು.

೧೧೦. ಗ್ರಾಸಬಳಗೆ ಇಳಿಯದೆ ಹೋದರೆ—ಹಸೀ ಶುಂಠೀರಸದಲ್ಲಿ ಅನ್ನ ಕಲಸಿ ಕೊಡಬೇಕು.

೧೧೧. ಸುಣ್ಣಕ್ಕೆ—ಬಾಯಿ ತೊಳಸಬೇಕು, ಮತ್ತು ಯುಗಚೀಸೊಪ್ಪು, ಮೊಳ್ಳೆಣ್ಣುಗಳು ಕೊಡಬೇಕು.

೧೧೨. ಹುಣಸೇ ಚಿಗುರಿಗೆ—ಕಾಚಿನ ನೀರು ಕೊಡಬೇಕು.

೧೧೩. ಮೂಲಂಗಿಗೆ—ಬೀಳೀರಸದ ಗಿಡ ಕೊಡಬೇಕು.

೧೧೪. ವಡೇಗೆ—ಲವಣ ಕೊಡಬೇಕು.

೧೧೫. ಬಾಗೆಗೆ—ಲವಣ ಕೊಡಬೇಕು.

೧೧೬. ಸಕ್ಕರೆಗೆ—ಭದ್ರಮೋಥ ಕೊಡಬೇಕು.

೧೧೭. ಶೀತಕ್ಕೆ—ಉಷ್ಣ, ಉಷ್ಣಕ್ಕೆ ಶೀತ ಮಾಡಬೇಕು.

೧೧೮. ಹೂರ್ಣಕ್ಕೆ—ಕಲ್ಲ ಹಾಕಬೇಕು.

೧೧೯. ಅಡಿಕೆಗೆ—ಸಮುದ್ರದನೊರೆ, ಬೆಳ್ಳುಳ್ಳೀ, ನೀರು ಮತ್ತು ಅಡವೀಸಗಣಿ ಸುಟ್ಟು ಅದರ ವಾಸನೆ ತೆಗದು ಕೊಳ್ಳಬೇಕು.

೧೨೦. ಅನೇಕ ದಿವಸಗಳಿಂದ ಆದ ಅಜೀರ್ಣಕ್ಕೆ—ಚಿನ್ನ ಬೆಳ್ಳಿಗಳನ್ನು ಕಾಸಿ ಅದ್ದಿದ ನೀರನ್ನು ಕುಡಿಸಬೇಕು.

೧೨೧. ಶ್ರಮದಿಂದ ಆದ ಅಜೀರ್ಣಕ್ಕೆ—ಮೃಗಗಳ ಮಾಂಸ ಕೊಡಬೇಕು.

೧೨೨. ಸ್ತ್ರೀಗಮನದಿಂದ ಆದ ಅಜೀರ್ಣಕ್ಕೆ—ಶಾಲಿಯಲ್ಲಿ ಮಲಗಿಸಬೇಕು, ಮತ್ತು ಹಾಲು, ಮೆಣಸು, ಸೈಂಧವಲವಣಗಳಿಂದ ಪಕ್ವಮಾಡಿದ ಕುರಿ ಅಂಡವನ್ನು ಕೊಡಬೇಕು.

೧೨೩. ವಾಯುಶ್ರಮ, ಮೈಥುನ ಶ್ರಮಕ್ಕೆ—ಮೃಗದ ಮಾಂಸ ಕೊಡಬೇಕು.

೧೨೪. ಸರ್ವಪಾಚಕ ಆಮನಾಶ ದ್ರವ್ಯಗಳು, ಬೆಲ್ಲ, ಜೇನು, ಗಂಜೀ, ಮಜ್ಜಿಗೇ ಇವು ಏಕತ್ರಮಾಡಿ ಮೂರು ದಿವಸ ಧಾನ್ಯದಲ್ಲಿಟ್ಟು ತೆಗದು ಮೂರುದಿನ ಕೊಡಬೇಕು.

೧೨೫. ವಮನ, ವಸ್ತಿಶುದ್ಧಿ, ವಿರೇಚನಗಳು ಆಗುವಂತೆ ತೆಗದುಕೊಳ್ಳಬೇಕಾದರೆ—ರಾತ್ರಿಕಾಲದಲ್ಲಿ ಶುಂಠಿ, ಧಮಾಸ ಇವುಗಳ ಕಷಾಯವನ್ನು ಪಾಚನಾರ್ಥವಾಗಿ ತೆಗದುಕೊಳ್ಳಬೇಕು.

೧೨೬. ನಾಸಾ ರೋಗಕ್ಕೆ—ಥಣ್ಣೀರು ಕೊಡಬೇಕು.

೧೨೭. ಅಂಜನಾದಿ ಹೊಗೆ ವಿಕಾರಗಳಿಗೆ—ರಾಳಿನ ನೀರು ಕೊಡಬೇಕು.

೧೨೮. ಪ್ರವರ್ತೀವಿಕಾರಕ್ಕೆ--ನೆಲ್ಲೀಕಾಯಿ ಕೊಡಬೇಕು.

೧೨೯. ದಂತರೋಗಕ್ಕೆ—ಹೇ ಶುಂಠಿಗುಳಿಗೆ ಬಾಯಿಯಲ್ಲಿಡಬೇಕು.

೧೩೦. ಮದ್ಯದಿಂದ ನಿದ್ರೆ ಇಲ್ಲದಿದ್ದರೆ—ತುಪ್ಪ, ಸಕ್ಕರೆ ಕೊಡಬೇಕು.

೧೩೧. ಮದ್ಯದಿಂದಅಜೀರ್ಣವಾದರೆ—ನಾಗರಮೋಥ, ಜೇಷ್ಠಮಧು,ಯಾಲಕ್ಕಿ, ಕೋಷ್ಟ, ಕೊಲಂಜನ, ದಾರುಹಳದಿ ಇವುಗಳ ಚೂರ್ಣವನ್ನು ಬಾಯಿಯಲ್ಲಿಡಬೇಕು. ಮತ್ತು ಉದ್ದು, ಅಮೃತಬಳ್ಳಿ, ನಾಗರಮೋಥ, ಕಾಯಿ,

ಫಲ, ಈ ಪದಾರ್ಥಗಳ ಏಕೋತ್ತರಗುಳಿಗೆ ಬಾಯಿಯಲ್ಲಿ ಮಡಗಬೇಕು. ಇದರಿಂದ ಬೆಳ್ಳುಳ್ಳೀದುರ್ಗಂಧವು ಪರಿಹಾರವಾಗುತ್ತೆ.

೧೩೨. ಮದ್ಯಕ್ಕೆ—ಗೇರು, ಶ್ರೀಗಂಧ ಕೊಡಬೇಕು, ಗೇರು ಕೊಡಬೇಕು.

೧೩೩. ಕಣ್ಣುನೋವಿಗೆ—ಮೊಲೆಹಾಲು ಹಾಕಬೇಕು.

೧೩೪. ದತ್ತೂರೀವಿಷಕ್ಕೆ—ಹಾಲು, ಸಕ್ಕರೆ ಕೊಡಬೇಕು.

೧೩೫. ಹೊಗೆ ಕುಡಿದ ರೋಗಕ್ಕೆ—ರಾಳಿನನೀರು ಕೊಡಬೇಕು.

೧೩೬. ಸರ್ವಪಾಚನಕ್ಕೆ—ಸೈಂಧವ, ಶುಂಠಿ, ಮೆಣಸು, ಹಿಪ್ಪಲಿ, ಧಣಿಯ, ದಾಳಿಂಬ, ಅರಿಸಿನ, ಇಂಗುಗಳ ಚೂರ್ಣವನ್ನು ಕೊಡಬೇಕು.

೧೩೭. ರೇಚಕದ್ರವ್ಯಗಳಿಗೆ—ನಾಗರಮೋಥವನ್ನು ಶ್ಲೇಷ್ಮವಾಗಿದ್ದರೆ ಶುಂಠಿ, ಕೊತ್ತುಂಬರೀ ಬೀಜಗಳನ್ನು ಕೊಡಬೇಕು.

೧೩೮. ಹಾರಕದಿಂದ ಆದ ಮಂದಕ್ಕೆ—ಕೂಶ್ಮಾಂಡರಸದಲ್ಲಿ ಬೆಲ್ಲ ಹಾಕಿ ಕೊಡಬೇಕು.

೧೩೯. ಅಡಿಕೆ ಸೊಕ್ಕಿಗೆ—ತಣ್ಣೀರು ಕೊಡಬೇಕು.

೧೪೦. ಸರ್ವಪಾಚಕ, ಬೆಲ್ಲ, ಜೇನು, ಗಂಜೀ, ಮಜ್ಜಿಗೆ, ಈ ಪದಾರ್ಥಗಳನ್ನು ದೋಷೋತ್ತರ ಕೂಡಿಸಿ ತೆಗದುಕೊಂಡು ಮೂರುದಿವಸ ಅನ್ನದಲ್ಲಿ ಮಡಗಿಕೊಡಬೇಕು.

೨. ವಿದಗ್ಧಾಜೀರ್ಣವೆಂದರೆ ತೀಕ್ಷ್ಣಾಗ್ನಿ. ಇದು ಅತ್ಯಗ್ನಿಯಿಂದ ಉಂಟಾಗುವ ಅಜೀರ್ಣವು. ಇದಕ್ಕೆ ಆಗತಕ್ಕ ಲಕ್ಷಣ ಮತ್ತು ಪ್ರತಿಕ್ರಿಯೆಗಳು.—

ಭ್ರಮೆ, ಮೂರ್ಛೆ, ಪಿತ್ತದದೆಸೆಯಿಂದ ಅನೇಕರೋಗಗಳು, ಧೂಮಯುಕ್ತವಾಗಿ ವಮನ ಮತ್ತು ಬೆವರು, ದಾಹಗಳು ಉಂಟಾಗುತ್ತವೆ, ಇದಕ್ಕೆ ಪಿತ್ತಪರಿಹಾರಕ ದ್ರವ್ಯಗಳು ಕೊಡಬೇಕು.

ತೀಕ್ಷ್ಣಾಗ್ನಿಯನ್ನು ತಪ್ಪಿಸಿ ಸಮಾಗ್ನಿ ರಕ್ಷಿಸುವದಕ್ಕೆ ಔಷಧಗಳು.

೧. ಗುರುವಾಗಿ, ರುಚಿ, ಶ್ಲೇಷ್ಮ ಹೆಚ್ಚುವತೆರನರಿದು ಔಷಧಿಯನ್ನು ಕೊಟ್ಟು ಪಿತ್ತ ಪರಿಹಾರವಾಗುವರೀತಿ ಮಾಡಿ ಹಗಲಿನಲ್ಲಿ ನಿದ್ರೆಮಾಡಿಸಬೇಕು.

೨. ಎಷ್ಟು ಆಹಾರ ತೆಗದುಕೊಂಡಾಗ್ಯೂ ಜೀರ್ಣಿಸಿದರೆ, ಅದು ಭಸ್ಮಕರೋಗವು. ಇದಕ್ಕೆ ಎಮ್ಮೆ ಹಾಲು, ಮೊಸರು, ತುಪ್ಪಗಳನ್ನು ತಿನ್ನಿಸಿದರೆ ಪರಿಹಾರವಾಗುತ್ತೆ.

೩. ವಿಷ್ಟಬ್ಧಾಜೀರ್ಣವೆಂದರೆ ವಿಷಮಾಗ್ನಿ. ಇದು ವಾತದಿಂದ ಉಂಟಾಗುವ ಅಜೀರ್ಣವು. ಇದರ ಲಕ್ಷಣ ಮತ್ತು ಪ್ರತಿಕ್ರಿಯೆ.—ಎದೆಯಲ್ಲಿ ಶೂಲೆ, ನೆಗಡಿ, ಅನೇಕವಿಧವಾತವೇದನೆ, ಮಲಕಟ್ಟೋಣ, ಅಂಗಪೀಡನೆ ಸಹ ಉಂಟಾಗುತ್ತೆ. ಇದಕ್ಕೆ ಶೋಧನಾಹಾರ ಮತ್ತು ಔಷಧೀ ಸಹ ಕೊಡಬೇಕು.

ವಿಷವಾಗ್ನಿಯನ್ನು ತಪ್ಪಿಸಿ ಸಮಾಗ್ನಿ ರಕ್ಷಿಸುವದಕ್ಕೆ ಔಷಧಗಳು.

೧. ಒಂದಾವರ್ತಿ ವಾತಪದಾರ್ಥಗಳನ್ನು, ಒಂದುಭಾರಿ ತೀಕ್ಷ್ಣಪದಾರ್ಥಗಳನ್ನು, ಮತ್ತೊಂದುಭಾರಿ ಶೀತಪದಾರ್ಥಗಳನ್ನು ಹೆಚ್ಚು ಕಡಮೆಯಾಗಿ ತಿಂದದ್ದರಿಂದಲೂ ಮತ್ತು ದೇಶಕಾಲಕ್ಕೆ ವಿರುದ್ಧವಾಗಿ ನಡದ್ದರಿಂದಲೂ, ವಿಷವಾಗ್ನಿಯುಂಟಾಗುತ್ತಾಗಿ ಇದಕ್ಕೆ ಒಂದು ಪಾವಲಿತೂಕ ಜೀರಿಗೆಯನ್ನೂ, ಮೆಲೆಕೆಳಗೆ ಮೊಸರನ್ನೂ ಹಾಕಿ ತೆಗದುಕೊಂಡರೆ ಮೈಭಾರವು ಕಮರುತೇಗು ಸಹ ಅಡಗುತ್ತೆ.

೨. ಶುಂಠಿ, ಮೆಣಸು, ಹಿಪ್ಪಲಿ, ಅಜಮೋದ, ಸೈಂಧವ, ಜೀರಿಗೆ, ಕರಿಜೀರಿಗೆ, ಇಂಗು ಇವುಗಳನ್ನೆಲ್ಲಾ ಸಮಭಾಗವಾಗಿ ಚೂರ್ಣವಂ ಮಾಡಿ ಯುಕ್ತಿಯಿಂದ ಅನ್ನದಲ್ಲಿ ಕೊಟ್ಟರೆ ಯಲ್ಲಾ ಅಜೀರ್ಣತೆಗಳು ಪರಿಹರವಾಗುತ್ತವೆ.

೩. ಕರಿಬೇವು, ಶುಂಠಿ, ಅಳಲೆಕಾಯಿಗಳನ್ನು ಸಮತೂಕವಾಗಿ ಪುಡಿಮಾಡಿ ಬಿಸಿನೀರಿನಲ್ಲಿ ತಕ್ಕಷ್ಟು ಸೈಂಧವಲವಣ ಮಿಶ್ರವಾಗಿ ಹಾಕಿ ಕೊಟ್ಟರೆ ಹೊಟ್ಟೆಯುಬ್ಬರ, ಶೂಲೆ, ವಾಂತಿ, ಭ್ರಾಂತಿ ಸಹ ಪರಿಹರವು.

೪. ಯೆರಡು ಶೆರೆ ಅಕ್ಕಿ, ವೊಂದು ಶೆರೆ ಹೆಸರು, ಯೆಂಟು ಭಾಗ ಮಜ್ಜಿಗೆ, ವೊಂದು ಪಾವಲಿ ತೂಕ ಕೊತ್ತುಂಬರಿ ಬೀಜ, ಯೆರಡಾಣೆತೂಕ ಇಂಗು, ನಾಲ್ಕಾಣೆ ತೂಕ ಶುಂಠಿ, ಮೂರು ರೂಪಾಯಿತೂಕ ವೊಳ್ಳೆಣ್ಣೆಗಳನ್ನು ಪಕ್ವಮಾಡಿ ಹಿತವಾಗುವವುಟ್ಟಿಗೆ ಸೈಂಧವಲವಣವನ್ನು ಹಾಕಿ ಕೊಟ್ಟರೆ ವಿಷವಾಗ್ನಿ ಹರವು.

೪. ರಸಶೇಷಾಜೀರ್ಣವೆಂದರೆ ಷಡ್ರಸಶೇಷದಿಂದುಂಟಾಗುವ ಅಜೀರ್ಣವು. ಇದಕ್ಕೆ ಲಕ್ಷಣ ಪ್ರತಿಕ್ರಿಯೆಗಳು.—ಅರುಚಿ, ಮನಸ್ಸು ಅಶುಚಿ, ಶರೀರಭಾರವು ಸಹ ಉಂಟಾಗುತ್ತೆ. ಇದರಿಂದ ಉಂಟಾಗುವ ಮಿಶ್ರರೋಗಕ್ಕೆ ನಿದ್ರೆಮಾಡಿಸಬೇಕು.

೨. ಕ್ರಿಮಿರೋಗ ಪರಿಹಾರವಾಗುವದಕ್ಕೆ ಔಷಧಗಳು:—

೧. ಹುಚ್ಚೆಳ್ಳು, ವಾದಕ್ಕಿಗಳನ್ನು ವೊಂದೊಂದು ವರಹಾ ತೂಕವಾಗಿ ಹಳೇ ನೀರಿನಲ್ಲಿ ಅರದು ಪ್ರಾತಃಕಾಲದಲ್ಲಿ ಕುಡಿದರೆ ಕ್ರಿಮಿಹರವು.

೨. ಕಲ್ಲು ಶಣಬು ಬೆಲ್ಲಗಳನ್ನು ಅರದು ಕೊಟ್ಟರೆ ಕಿಲುಬೆಹುಳಗಳು ನಾಶವಾಗುತ್ತೆ.

೩. ಇಲೀ ಕಿವಿ ಸೊಪ್ಪು, ಮೂರು ನುಗ್ಗೆ ಕಾಯಿಗಳು, ದೇವದಾರು ಕೊನ್ನಾರಿಗಳನ್ನು ನೀರಿನಿಂದ ಅರದು ಶೋಧಿತರಸದಲ್ಲಿ ವೊಂದು ರೂಪಾಯಿ ತೂಕ

ಎಳೆ

ವಾಯುವಿಳಂಗ, ಹಿಪ್ಪಲಿಗಳು ಕೂಡಿದ ಚೂರ್ಣವನ್ನು ಹಾಕಿ ಕುಡಿಸಿದರೆ ಜಂತು ಮತ್ತು ಕಿಲುಪೆ ಹುಳಗಳು ಪರಿಹರವಾಗುತ್ತವೆ.

೪. ಮುತ್ತುಗದ ಯಲೆ ಕಷಾಯವನ್ನು ಬೆಳಿಗ್ಯೆ ತೆಗದುಕೊಂಡರೆ ಕ್ರಿಮಿಹರವು.

೫. ಮುತ್ತುಗದ ಬೀಜವನ್ನು ಮಜ್ಜಿಗೆಯಲ್ಲಿ ಮೆತ್ತಗೆ ಅರದು ತೆಗದುಕೊಂಡರೆ ಕ್ರಿಮಿಹರವು.

೬. ಮಂಗರವಳ್ಳೀ ರಸವನ್ನು ಯಣ್ಣೆಗೆ ಹಾಕಿ ಕೊಟ್ಟರೆ ಕ್ರಿಮಿಹರವು.

೭. ಗೇರಿನ ಕಷಾಯದಲ್ಲಿ ಸ್ವಲ್ಪ ಜೇನು ಹಾಕಿಕೊಟ್ಟರೆ ಕ್ರಿಮಿಹರವು.

೮. ವಾಯುವಿಳಂಗದ ಪುಡಿಗೆ ಜೇನು ಹಾಕಿ ಕಲಸಿಕೊಟ್ಟರೆ ಕ್ರಿಮಿಹರವು.

೯. ಕಿರಸದ ರಸದಲ್ಲಿ ಜೇನು ಹಾಕಿ ಕೊಟ್ಟರೆ ಕ್ರಿಮಿಹರವು.

೧೦. ಲಕ್ಕೀ ರಸಕ್ಕೆ ಜೇನುಹಾಕಿಕೊಟ್ಟರೆ ಕ್ರಿಮಿ ಹರವು.

೧೧. ವಾಯುವಿಳಂಗದ ಪುಡಿಯನ್ನು ನಿತ್ಯದಲ್ಲೂ ಸೇವಿಸಿದರೆ ಕ್ರಿಮಿಹರವು.

೧೨. ಕುದುರೆಲದ್ದೀರಸದಲ್ಲಿ ಅಳಲೆ, ನೆಲ್ಲಿ, ತಾರೇಕಾಯಿಗಳ ಸಿಪ್ಪೆಯನ್ನು ನೂರಾವರ್ತಿ ಭಾವನೆಮಾಡಿ ಒಣಗಿಸಿ ಚೂರ್ಣವಂ ಮಾಡಿ ಜೇನುತುಪ್ಪದಲ್ಲಿ ಕಲಸಿಕೊಟ್ಟರೆ ಆಸನದಲ್ಲಿ ಬಾಧಿಸುವ ತ್ವಾಳೀಹುಳವನ್ನು ಪರಿಹರಿಸುವದು.

೧೩. ಮರಳಿದ ನೀರಿನಲ್ಲಿ ಇಲ್ಲಣ ಹಿಪ್ಪಲಿಗಳನ್ನು ಪುಡಿಮಾಡಿ ಹಾಕಿಕೊಟ್ಟರೆ ಗುದ, ಬದಿ, ಹೃದಯಸ್ಥಾನಗಳಲ್ಲಿ ಬಾಧಿಸುವ ಕ್ರಿಮಿಗಳು ನಾಶವಾಗುತ್ತವೆ.

೧೪. ಸೈಂಧವ, ಮೆಣಸು, ಗಜ್ಜುಗದ ತಿಳಲುಗಳನ್ನು ಹುರದು ಚೂರ್ಣವಂ ಮಾಡಿ ಕೈಯಣ್ಣೆಯಿಂದ ಕಲಸಿ ಬೆರಳಿನಿಂದ ನೆಕ್ಕಿಸಿದರೆ ಕ್ರಿಮಿ, ಹೊಟ್ಟೆ ಬೇನೆ, ಅತಿಸಾರಗಳು ಪರಿಹರವಾಗುತ್ತವೆ.

೧೫. ಇಲೀಕಿವಿಸೊಪ್ಪಿನ ರಸದಿಂದ ಹಿಟ್ಟನ್ನು ನಾದಿ ರೊಟ್ಟಿಯನ್ನು ಮಾಡಿ ತಿನ್ನಿಸಿಬಿಸಿನೀರು ಕುಡಿಸಿದರೆ ಕ್ರಿಮಿಹರವು.

೧೬. ನುಗ್ಗೆ, ಇಲೀಕಿವಿಯಲೆ, ಕೊನ್ನಾರಿ ಗಡ್ಡೆ, ಶುಂಠಿಗಳನ್ನು ಬಿಸಿನೀರಿನಿಂದ ಅರದು ಶೋಧಿಸಿಕೊಟ್ಟರೆ ಕ್ರಿಮಿಹರವು.

ಈ ಮೇಲೆ ಹೇಳಲ್ಪಟ್ಟ ಔಷಧಗಳಲ್ಲಿ ಗೇರು ಮುಂತಾದ ಕ್ರೂರಪದಾರ್ಥಗಳನ್ನು ತಿನ್ನಲು ಸಾಧನವಿಲ್ಲದವಗೆ ಸಾಧನವಾಗುವರೀತಿ ಮಾಡಿಕೊಡಬೇಕು.

೭. ಜ್ವರಗಳಿಗೆ ತಕ್ಕಔಷಧಗಳು:—ಈ ಜ್ವರಗಳು ಮಲಕಟ್ಟಿ ಬರುವದರಿಂದ ಮೊದಲು ಮಲ ಸಡಲುವದಕ್ಕೆ ಲಂಘನವು, ಗಂಜಿಯು, ಕುಡಿಯುವ ನೀರು ಇವುಗಳನ್ನು ಕೊಡತಕ್ಕ ಕ್ರಮ.

೧. ಜ್ವರಾದಿಯಲ್ಲಿ ಶಕ್ತ್ಯಾನುಸಾರ ಲಂಘನವನ್ನು ಮಾಡಿಸಿ ಅನಂತರ ಮಲಸಡಿಲುವದಕ್ಕೆ ವಿಧಿವತ್ತಾದ ಗಂಜಿಯನ್ನೂ ನೀರನ್ನೂ ಸಹ ಕೊಡಬೇಕು.

೨. ಜ್ವರಗಳಿಗೆ ಉಕ್ತರಸಗಳು.—ಕೈರಸವು ಪಿತ್ತಜ್ವರಗಳಿಗೂ, ಖಾರವು ಶ್ಲೇಷ್ಮಜ್ವರಗಳಿಗೂ, ಕೈ ವಗರು ಕೂಡಿದ ರಸವು ಪಿತ್ತಶ್ಲೇಷ್ಮಜ್ವರಗಳಿಗೂ ಸಹ ಉತ್ತಮವಾಗಿರುತ್ತವೆ. ಬದ್ಧಕಾರಿಜ್ವರಕ್ಕೆ ಆದಿಯಲ್ಲಿ ಯಾವದನ್ನೂ ಮಾಡಕೂಡದು.

೩. ಗಂಜಿವಿಧಿ.—ಲಂಘನಮಾಡಿದವನಿಗೆ ಹಳೇಭತ್ತದ ಅರಳಿನಲ್ಲಿ ಹಿಪ್ಪಲಿ, ಶುಂಠಿ ಸೈಂಧವಲವಣ, ಕೊತ್ತಂಬರೀಬೀಜಗಳನ್ನು ಹಾಕಿ ಗಂಜಿಯನ್ನು ಮಾಡಿಕೊಡಬೇಕು. ಬಹುಪಿತ್ತಕ್ಕೆ ಹುಳಿಯನ್ನು ಅಪೇಕ್ಷಿಸಿದರೆ ಹುಳಿ ದಾಳಿಂಬದ ಹಣ್ಣಿನ ರಸದಿಂದ ಮೇಲೆ ಹೇಳಲ್ಪಟ್ಟ ಜಿನಸುಗಳನ್ನು ಹಾಕಿರುವ ಅರಳಿನ ಗಂಜಿಯನ್ನು ಕೊಡಬೇಕು. ಮತ್ತು ಪ್ರವರ್ತಿ ಆಗುತ್ತಿದ್ದರೆ ಮಾವಿನ ಚಕ್ಕೆ, ಶುಂಠಿಗಳನ್ನು ಹಾಕಿ ಜೇನುತುಪ್ಪವನ್ನು ಸಹ ಶೇರಿಸಿ ಮೇಲೆ ಹೇಳಲ್ಪಟ್ಟ ಗಂಜಿಯನ್ನು ಕೊಡಬೇಕು. ಕಿರಿಗುಳ್ಳ, ನೆಗ್ಗಿಲುಗಳನ್ನು ಶೇರಿಸಿ ಮೇಲೆ ಹೇಳಲ್ಪಟ್ಟ ಗಂಜಿಯನ್ನು ಕೊಟ್ಟರೆ ಕಿಬ್ಬೊಟ್ಟೆ ಮಗ್ಗಲುಗಳ ಶೂಲೆಯು ಪರಿಹರವಹುದು. ಕಿರಿಪಂಚಮೂಲವನ್ನು ಹಾಕಿ ಮೇಲೆ ಹೇಳಲ್ಪಟ್ಟ ಗಂಜಿಯನ್ನು ಕೊಟ್ಟರೆ ಬಿಕ್ಕು, ಶ್ವಾಸ, ಕಾಸ, ಇವು ಪರಿಹರವಾಗುತ್ತವೆ. ಬೊಬ್ಬಳಿ, ಕಮಲ, ಬಿಲ್ವ, ಕೊತ್ತಂಬರೀ ಬೀಜ, ಕಳ್ಳಂಗಡ್ಲೆ, ಕೋಲುಜೊನ್ನೆ ಇವುಗಳನ್ನು ಹಳೇಭತ್ತದ ಅರಳಿನಲ್ಲಿ ಹಾಕಿ ಗಂಜೀಮಾಡಿ ಕೊಟ್ಟರೆ ಜ್ವರದಲ್ಲಿ ಪ್ರವರ್ತಿಯು, ಆಮವು ಪರಿಹರವಾಗಿ ದೀಪನವಾಗುತ್ತೆ. ಮತ್ತು ಹಿರಿಪಂಚಮೂಲವನ್ನು, ಯವೆಯನ್ನು ಅಥವಾ ಹಳೇಅಕ್ಕೀನೊಡಕಲನ್ನು, ಅಥವಾ ಹುರದಅಕ್ಕೀ ನುಚ್ಚನ್ನು ಹಾಕಿ ಗಂಜೀ ಮಾಡಿಕೊಟ್ಟರೆ ಕಫ ಪರಿಹರವಾಗುತ್ತೆ. ಮತ್ತು ಹಿಪ್ಪಲಿ, ಜೇಷ್ಠಮಧುಗಳನ್ನು ಕೂಡಿಸಿ ಗಂಜಿಯನ್ನುಕೊಟ್ಟರೆ ಮಲಬದ್ಧವೂ ಕಾಸವೂ ಸಹ ಪರಿಹರವಾಗುತ್ತೆ.

೪. ನೀರನ್ನು ಕೊಡತಕ್ಕ ಕ್ರಮ.—ವಾತಶ್ಲೇಷ್ಮಜ್ವರದಲ್ಲಿ ತತ್ಕಾಲಕ್ಕೆ ಅರ್ಧ ಬತ್ತುವಂತೆ ಕಾಸಿದ ನೀರು ಬಿಸಿಯಾಗಿರುವಾಗಲೇ ಕುಡಿಸಬೇಕು, ಮತ್ತು ಪಿತ್ತಜ್ವರದಲ್ಲಿಯೂ, ಗ್ರೀಷ್ಮಋತುವಿನಲ್ಲಿಯೂ, ವಿಷಮಕಾಲದಲ್ಲಿಯೂ, ಅತಿಸಾರದಲ್ಲಿಯೂ, ರಕ್ತ ಹೋಗುವ ಕಾಲದಲ್ಲಿಯೂ, ಪಿತ್ತದಲ್ಲಿಯೂ ಸಹ ಮೇಲೆ ಹೇಳಿದವೇಳಿಗೆ ಕಾಸಿದನೀರನ್ನು ಆರಿಸಿ ಕುಡಿಯಬೇಕು.

ನೀರು ಕಾಸುವ ಲಕ್ಷಣ.—ಶ್ರೀಗಂಧ, ಕೊನ್ನಾರಿಗಡ್ಡೆ, ಪರಪಾಷ್ಟಕ, ಪಾದರಿ, ಲಾವಂಚಗಳ ಪ್ರತಿ ಒಂದು ತೊಲೆಯನ್ನೂ ನಾಲ್ಕು ಸೇರು ನೀರಿನಲ್ಲಿ ಹಾಕಿ ಕಾಸಿ ಅರ್ಧಾಂಶ ಬತ್ತಿದಮೇಲೆ ಆ ನೀರನ್ನು ಕುಡಿಯಬೇಕು.

೫. ಜ್ವರಬಂದವನ ಶರೀರಕ್ಕೆ ಲೇಪವಿಧಿ.—ಮೋಸು, ಹಸಿಶುಂಠಿ, ಕಾವೀಕಲ್ಲು, ಶ್ರೀಗಂಧ, ಸಜ್ಜೀಖಾರ, ಅಂತರಗಂಗೆ, ರೇಣುಕೆ ಬೀಜ, ಕಕ್ಕೋಲು ಹಿಪ್ಪಲಿ, ಖೈಪೇವು, ಅಮೃತಬಳ್ಳೀ, ಸತ್ವ, ಹಸಿವಿನ ತುಪ್ಪ, ತುಲಸಿ, ಕಾಡು ಸಬ್ಬಸೀಗೆ, ಬಿಳೀ ಹುವ್ವಿನ ಹಾಲೀಬಳ್ಳಿ, ಕೆಂದೆಂಗು, ತೆಂಗಿನಕಾಯಿನಮೋಗಳಿಪ್ಪೆ, ಬಾವಂಚೀಬೀಜ, ನೈದಲುಗಡ್ಡೆ, ತಾವರೆ ಗಡ್ಡೆ, ಅರ ನ ಗೊರಟೆ, ಗರಿಕೆ, ನೀಲಿ ಈ ಜಿನಸುಗಳ ರಸಗಳು ಮೇಲೆ ಹೇಳಲ್ಪಟ್ಟ ಜಿನಸುಗಳ ಚೂರ್ಣಗಳು ಸಹ ಹಾಕಿ ಮರ್ದಿಸಿ ಮೈಗೆ ಲೇಪಿಸಿದರೆ ಸಕಲಜ್ವರಗಳೂ ಪಾಚನೆಗೆ ಬರುವದಲ್ಲದೆ ಬಾಲ, ವೃದ್ಧ, ಗರ್ಭಿಣೀಯರುಗಳಿಗೆ ಭೂತಾದಿಚೇಷ್ಟೆಗಳನ್ನು ಪರಿಹರಿಸಿ ರಕ್ತ ಪಿತ್ತ ಕ್ರಿಮಿಗಳನ್ನು ಪರಿಹರಿಸುತ್ತವೆ.

೬. ವಾತಜ್ವರಕ್ಕೆ ಔಷಧಗಳು:—

೧. ಅಮೃತ ಬಳ್ಳಿ, ಶುಂಠಿ, ಮೋಡಿಗಳ ಕಷಾಯವನ್ನು ಸ್ವಲ್ಪ ಬಿಸಿ ಇರುವ ಕಾಲದಲ್ಲಿ ಏಳು ದಿವಸದ ಮೇಲೆ ಕೊಟ್ಟರೆ ವಾತಜ್ವರ ಹರವು.

೨. ನೆಲಹೊನ್ನೆ, ಕಳ್ಳಂಗಡ್ಲೆ, ನೆಲಹಾಲೀಬೇರು, ಅಮೃತಬಳ್ಳಿ, ದೀಪದ್ರಾಕ್ಷಿಗಳ ಕಷಾಯವು ವಾತಜ್ವರಹರವು.

೩. ನೆಲಬೇವು, ಕೊನ್ನಾರಿ ಗಡ್ಡೆ, ನೆಲಗುಳ್ಳ, ಗುಳ್ಳ, ಅಮೃತಬಳ್ಳಿ, ಲಾಮಂಚ, ನೆಗ್ಗಲು, ನೆಲಹೊನ್ನೆ, ಕೋಲುಹೊನ್ನೆ, ಶುಂಠಿ ಇವುಗಳ ಕಷಾಯವು ವಾತಜ್ವರಹರವು.

೪. ನೆಲಹಾಲೆ, ರೇಣುಕೆ, ಹಿಪ್ಪಲಿ, ಸಬ್ಬಶೀಗೆ, ದ್ರಾಕ್ಷಿ, ಬಿಳೀಕೊಮ್ಮೆ, ಇವುಗಳಕಷಾಯವು ವಾತಜ್ವರಹರವು.

೫. ನೆಲಹಾಲೆ, ಕಕ್ಕೆ, ಕಳ್ಳಂಗಡ್ಲೆ, ಅತಿಮಧುರ, ಧೂಮರಾಕ್ಷಿಗಳ ಕಷಾಯವು ವಾತಜ್ವರಹರವು.

೭. ಪಿತ್ತಜ್ವರಕ್ಕೆ ಔಷಧಗಳು:—ಹತ್ತು ದಿವಸಗಳು ಆದ ಮೇಲೆ ಕೊಡಬೇಕು.

೧. ಒಂದು ಹಿಡಿ ಪರಪಾಷ್ಟಕವನ್ನು ಒಂದು ಪಕ್ಕಾ ಸೇರು ನೀರಿಗೆ ಹಾಕಿ ಕಷಾಯ ಮಾಡಿ ಅರಪಾವಿಗೆ ಇಳಿಸಿಕೊಟ್ಟರೆ ಪಿತ್ತಜ್ವರಹರವು.

೨. ಶುಂಠಿ, ಶ್ರೀಗಂಧ, ಲಾಮಂಚಗಳನ್ನು ನೀರಿನಿಂದ ಅರದು ಮರಳಿಸಿ ಕೆಂಪು ಕಲ್ಲು ಸಕ್ಕರೆಯನ್ನು ಹಾಕಿ ಕೊಟ್ಟರೆ ಪಿತ್ತಜ್ವರಹರವು.

೩. ಶ್ರೀಗಂಧ, ಲಾವಂಚ, ಕಬ್ಬು, ನೆಲಹಾಲೆ, ಹೆಸರು, ಶೀಘರೀ ಬೇರುಗಳ ಸಮಭಾಗವನ್ನು ಕಷಾಯ ಮಾಡಿ ಸಕ್ಕರೆ ಹಾಕಿ ಕೊಟ್ಟರೆ ಪಿತ್ತಜ್ವರ ಹರವು.

೪. ಕೊನ್ನಾರೀ ಗಡ್ಡೆ, ಕಟುಕರೋಹಿಣಿ, ಕಕ್ಕೆ, ಪರಪಾಷ್ಟಕ, ಪಾಲವಾಣದ ಚಕ್ಕೆ, ದ್ರಾಕ್ಷಿಗಳ ಕಷಾಯವು ಪಿತ್ತಜ್ವರಹರವು.

೫. ಕಟುಕರೋಹಿಣಿಯನ್ನರದು ಸಕ್ಕರೆ ಹಾಕಿ ಕೊಟ್ಟರೆ ಪೈತ್ಯಜ್ವರಹರವು.

೬. ಮೂರು ತೊಲೆ ದ್ರಾಕ್ಷಿ ರಸದಲ್ಲಿ ಅಳಲೇ ನೆಲ್ಲೀ ತಾರೆಕಾಯಿಗಳ ಶಿಪ್ಪೆಯ ಒಂದು ತೊಲೆ ಚೂರ್ಣವನ್ನು ಹಾಕಿ ಕೊಟ್ಟರೆ ಪಿತ್ತಜ್ವರಹರವು.

೭. ಶಿವನಿ, ನೆಲಬೇವು, ಇಂದ್ರಜವೆ, ಕೊನ್ನಾರಿ, ಕಟುಕರೋಹಿಣಿಗಳ ಕಷಾಯಕ್ಕೆ ಸಕ್ಕರೆ ಹಾಕಿ ಕೊಟ್ಟರೆ ಪಿತ್ತಜ್ವರಹರವು.

೮. ಚಂದನ, ಕೊನ್ನಾರೀಗಡ್ಡೆ, ಶ್ರೀಗಂಧ, ಪಡವಲ, ಪಾಲವಾಣ, ಲಾವಂಚ ಗಳ ಕಷಾಯವನ್ನು ಆರಿಸಿ ಸಕ್ಕರೆ ಹಾಕಿ ಕೊಟ್ಟರೆ ಪಿತ್ತಜ್ವರಹರವು.

೯. ವಂದೆಲಗ, ಕಟುಕರೋಹಿಣಿ, ಅಳಲೇ, ತಾರೆ, ನೆಲ್ಲಿ, ಅಗಳಕುಂಪಿ, ಕಕ್ಕೆ ಗಳ ಕಷಾಯಕ್ಕೆ ಜೇನುತುಪ್ಪ ಹಾಕಿ ಕೊಟ್ಟರೆ ಪಿತ್ತಜ್ವರಹರವು.

೮. ಈ ಮೇಲೆ ಹೇಳಿದ ಪಿತ್ತಜ್ವರಕ್ಕೆ ಉಪಾಯಾಂತರಗಳು.—

೧. ಬಾಯಿಯಲ್ಲಿ ಮಡಗುವದಕ್ಕೆ ಗುಳಿಗೆ, ನೆಲ್ಲಿಕಾಯಿನ ಶಿಪ್ಪೆ, ಕಮಲ, ಕೋಷ್ಠ, ಭತ್ತದ ಅರಳು, ಆಲದ ಕುಡಿಗಳನ್ನು ಜೇನುತುಪ್ಪದಲ್ಲಿ ಅರದು ಗುಳಿಗೆ ಮಾಡಿ ಬಾಯಿಯಲ್ಲಿ ಮಡಗಿಕೊಳ್ಳುವದಕ್ಕೆ ಕೊಟ್ಟರೆ ಬಾಯಾರಿಕೆ, ಮೈಯಲ್ಲಿ ತಾಪ ಮತ್ತು ದಹಿಸುವದು ಸಹ ನಿವಾರಣವಾಗುತ್ತೆ.

೨. ಗಾಳಿ ಯಿರುವ ಮನೆಯಲ್ಲಿ ಮಲಗಿಸಿ ಪರಿಮಳ ಲೇಪನವಂ ಮಾಡಿ ಶೀತ ಪದಾರ್ಥಗಳಂ ಕೊಟ್ಟರೆ ತಾಪಹರವು.

೩. ಬದರೀ ಸೊಪ್ಪನ್ನು ಬಿಸಿನೀರಿನಿಂದ ಅರದು ಕಡಡಿ ಮಂತಿನಿಂದ ಕಡದು ಆದರಿಂದ ಬರುವ ನೊರೆಯನ್ನು ಸರ್ವಾಂಗಕ್ಕೂ ಲೇಪಿಸಿದರೆ ತಾಪಹರವು.

೪. ನೆಲ್ಲೀಶಿಪ್ಪೆಯನ್ನು ತುಪ್ಪದ ಕೈಯಿಂದ ತಿಕ್ಕಿ ಹುರದು ಬಿಸಿನೀರಿನಿಂದ ಅರದು ಲೇಪಿಸಲು ತಾಪಹರವು.

೫. ಹಸುವಿನ ತುಪ್ಪವನ್ನು ಕಾದಾರಿದ ನೀರಿನಿಂದ ತಿಕ್ಕಬೇಕು, ಮತ್ತು ತೊಳೆಯಬೇಕು. ಈ ಪ್ರಕಾರ ಸಹಸ್ರಾವರ್ತಿ ಮಾಡಿದನಂತರ ಉಗುರು ಬೆಚ್ಚಗೆ ಇರುವ ಚನ್ನಾಗಿ ಮರಳಿದ ನೀರಿನಲ್ಲಿ ಹಾಕಿ ಒಂದು ಗಡಿಗೆಯಲ್ಲಿ ಕಡದರೆ ನೊರೆ ಬರುತ್ತೆ. ಆ ನೊರೆಯನ್ನು ಅಂಗಕ್ಕೆ ಲೇಪಿಸೆ ದಾಹಶಮನವು.

೬. ಗರಗರನೆ ತಿರುಗುವಹಾಗೆ ಮಾಡಿರುವ ತಾಳೇ ಪ್ರೋಲೆ ಬೀಸಣಿಕೆ ಮೇಲೆ ಸುಗಂಧವನ್ನು ಲೇಪಿಸಿ ಅಥವಾ ತೊಯಿದು ಬೀಸಿಕೊಂಡರೆ ತಾಪಹರವು.

೬. ಬಾಳೇಯಲೆ ಅಥವಾ ಕಮಲಪತ್ರಗಳನ್ನು ಹರವಿ ಅದರ ಮೇಲೆ ಮಲಗಿಸಿ ಯೌವ್ವನಸ್ಥೆಯಾದ ಮತ್ತು ಚತುರೆಯಾದ ಹೆಂಗಸು ಸಂಭೋಗವನ್ನು ಮಾಡದೆ ತನ್ನ ಯದೆಗೆ ಗಂಧವನ್ನು ಲೇಪಿಸಿಕೊಂಡು ಆಲಿಂಗನವಂ ಮಾಡಿಕೊಂಡರೆ ತಾಪಹರವು.

೭. ಕೊತ್ತುಂಬರೀ ಬೀಜವನ್ನು ರಾತ್ರಿಯಲ್ಲಿ ಮರಳಿಸಿ ಆನೀರಿಗೆ ಸಕ್ಕರೆ ಹಾಕಿ ಕೊಡಲು ಪಿತ್ತವೂ ಅಂತರ್ದಾಹವೂ ಸಹ ಪರಿಹರವಹುದು.

೮. ನಾಭೀಮೇಲೆ ತಣ್ಣೀರುಧಾರೆಯನ್ನು ಬಿಟ್ಟರೆ ದಾಹಹರವು.

೯. ಶ್ಲೇಷ್ಮಜ್ವರಕ್ಕೆ ಔಷಧಗಳು:—ಹನ್ನೆರಡು ದಿವಸಗಳು ಕಳದ ಮೇಲೆ ಕೊಡಬೇಕು.

೧. ಮಾದಲದ ಬೇರು, ಶುಂಠಿ, ಮೋಡಿ, ಅಳಲೇಪ್ಪೆಗಳ ಕಷಾಯವು ಶ್ಲೇಷ್ಮಜ್ವರವನ್ನು ಜೀರ್ಣತೆಗೆ ತರುವದು.

೨. ಅರಿಶಿನ, ಇಂದ್ರಜವೆ, ಕಟುಕರೋಹಿಣಿ, ಅಳಲೇಶಿಪ್ಪೆ, ದೇವದಾರುಗಳ ಕಷಾಯವು ಶ್ಲೇಷ್ಮಜ್ವರಹರವು.

೩. ತುಲಸಿ, ಅತಿಬಜೆ, ಕೋಷ್ಠ, ಶುಂಠಿ, ದೇವದಾರುಗಳ ಕಷಾಯವು ಕೆಮ್ಮುಳ್ಳ ಶ್ಲೇಷ್ಮಜ್ವರಹರವು.

೪. ಕಕ್ಕೆ, ಕಲ್ಲುಶಣಬು, ಕೋಲಮುಕ್ಕ, ತುಲಸಿಗಳ ಕಷಾಯವು ಶ್ಲೇಷ್ಮಜ್ವರಹರವು.

೫. ಕಟುಕರೋಹಿಣಿ, ಬಜೆ, ಅಗಳುಶುಂಠಿ, ಹೊಂಗೇಬೇರು, ಕಕ್ಕೆ, ಕಲ್ಲುಸಣಬುಗಳ ಕಷಾಯವು ಕೆಮ್ಮುವುಳ್ಳ ಶ್ಲೇಷ್ಮಜ್ವರಹರವು.

೬. ಬೇವು, ಅಮೃತಬಳ್ಳಿ, ಗುಳ್ಳ, ನೆಲಬೇವು, ಪುಷ್ಕರ, ಕಚೋರ, ಹಿಪ್ಪಲಿ, ಶುಂಠಿ, ದೇವದಾರುಗಳ ಕಷಾಯವು ಕೆಮ್ಮುವುಳ್ಳ ಶ್ಲೇಷ್ಮಜ್ವರಹರವು.

ಮೇಲೆ ೩–೧೦–೧೨ ದಿವಸಗಳ ನಿಬಂಧನೆಯನ್ನು ಹೇಳಿ ಇಧೆಯಷ್ಟೆ. ರೋಗಗದ ಬಲಾಬಲವನ್ನು ತಿಳಿದು ಔಷಧೀ ಕೊಡುವದಕ್ಕೆ ಕಾಲವನ್ನು ನಿರ್ಣಯಿಸಬೇಕು.

೧೦. ವಾತಪಿತ್ತಜ್ವರಕ್ಕೆ ಔಷದಗಳು:—

೧. ಸೈಂಧವಲವಣ, ಪಾಲವಾಣದ ಚಕ್ಕೆ, ಶುಂಠಿ, ಕೊನ್ನಾರೀ ಗಡ್ಡೆ, ನೆಲಬೇವು, ಅಮೃತಬಳ್ಳಿಗಳ ಕಷಾಯವು ವಾತಪಿತ್ತಜ್ವರಹರವು.

೨. ಅಳಲೆ, ನೆಲ್ಲಿ, ತಾರೆಕಾಯಿಗಳ ಶಿಪ್ಪೆ, ಬೂರಲದಚಕ್ಕೆ, ರಾಸ್ನೆ, ಕಕ್ಕೆ, ಆಡುಸೋಗೆಗಳ ಕಷಾಯಕ್ಕೆ ಸಕ್ಕರೆ ಹಾಕಿ ಕೊಡಲು ವಾತಪಿತ್ತಜ್ವರಹರವು.

೧೧. ತ್ರಿದೋಷಜ್ವರಕ್ಕೆ:—ರಾಸ್ನೆ, ಸಕ್ಕರೆ, ಶುಂಠಿ, ಕಟುಕರೋಹಿಣಿಗಳ ಕಲ್ಕ ವನ್ನು ತೆಗದುಕೊಂಡರೆ ತ್ರಿದೋಷಜ್ವರಹರವು.

೧೨. ವಾತ ಶ್ಲೇಷ್ಮಜ್ವರಕ್ಕೆ ಔಷಧಗಳು:—

೧. ನೋಡಿ, ಅಳಲೆಕಾಯಿ, ಕೊನ್ನಾರಿಗಡ್ಡೆ, ಕಕ್ಕೆ, ಕಟುಕರೋಹಿಣಿಗಳ ಕಷಾಯವು ಆಮ ಮತ್ತು ಶೂಲೆಗಳಿಂದ ಕೂಡಿದ ವಾತಶ್ಲೇಷ್ಮ ಜ್ವರ ವನ್ನು ನಾಶಮಾಡಿ ದೀಪನೆಯನ್ನುಂಟುಮಾಡುತ್ತೆ.

೨. ನೆಲಗುಳ್ಳ, ಶುಂಠಿ, ಅಮೃತಬಳ್ಳಿ, ಪುಷ್ಕರಗಳ ಕಷಾಯವು ವಾತ ಶ್ಲೇಷ್ಮ ಜ್ವರಹರವು.

೩. ಕಕ್ಕೆ, ಕೊನ್ನಾರಿಗಡ್ಡೆ, ನೋಡಿ, ಅಳಲೇಕಾಯಿ, ಕಟುಕರೋಹಿಣಿಗಳ ಕಷಾಯವು ವಾತಶ್ಲೇಷ್ಮ ಜ್ವರಹರವು.

೪. ನೆಲಗುಳ್ಳ, ಶುಂಠಿ, ಅಮೃತಬಳ್ಳಿಗಳ ಕಷಾಯದಲ್ಲಿ ಹಿಪ್ಪಲೀಪುಡಿಯನ್ನು ಹಾಕಿ ಕೊಟ್ಟರೆ ವಾತಶ್ಲೇಷ್ಮಜ್ವರಹರವು.

೫. ಬಜೆ, ಅಗಳಶುಂಠಿ, ಕಕ್ಕೆ, ಕೋಲಮುಕ್ಕ, ಕಟುಕರೋಹಿಣಿಗಳ ಕಷಾ ಯದಲ್ಲಿ ಹಿಪ್ಪಲಿಪುಡಿ ಹಾಕಿ ಕೊಟ್ಟರೆ ವಾತಶ್ಲೇಷ್ಮಜ್ವರಹರವು.

೧೩. ಪಿತ್ತಶ್ಲೇಷ್ಮ ಜ್ವರಕ್ಕೆ ಔಷಧಿ:—

೧. ಅಮೃತಬಳ್ಳಿ, ಇಂದ್ರಜವೆ, ಪಡವಲ, ಬೇವು, ಕೊನ್ನಾರಿಗಡ್ಡೆ, ಚಂದನ, ಶುಂಠಿ, ಕಟುಕರೋಹಿಣಿಗಳ ಕಷಾಯವು ಪಿತ್ತಶ್ಲೇಷ್ಮಜ್ವರಹರವು.

೨. ಬೇವು, ಕಳ್ಳಂಗಡ್ಲೆ, ಪಡವಲ, ತ್ರಿಫಲೆ ಅಂದರೆ ನೆಲ್ಲಿ ಅಳಲೆ ತಾರೆಕಾ ಯಿಗಳ ಶಿಪ್ಪೆ, ಅತಿಮಧುರಗಳ ಕಷಾಯವು ಪಿತ್ತಶ್ಲೇಷ್ಮ ಜ್ವರಹರವು.

೪. ಸನ್ನಿಪಾತಕ್ಕೂ ಮತ್ತು ಇದರಿಂದ ಕೂಡಿದ ಜ್ವರಗಳಿಗೂ ಔಷಧಿಗಳು ಸಹ ಬರಿಯಲ್ಪಡುತ್ತೆ:—

೧. ಸನ್ನಿಗೆ ತಕ್ಕ ಔಷಧಗಳು:—

೧. ನೆಲಹೊನ್ನೆ, ಕೋಲು ಹೊನ್ನೆ, ನೆಲಗುಳ್ಳ, ಗುಳ್ಳ, ನೆಗ್ಗಲು, ಲಘುಪಂಚ ಮೂಲಗಳ ಕಷಾಯವು ಕಾಸ, ಸನ್ನಿಜ್ವರಗಳನ್ನು ಪರಿಹರಿಸುತ್ತವೆ.

೨. ಪಾದರಿ, ಶಿವನಿ, ಕಕ್ಕೆ, ನುಗ್ಗೆಗಳ ಕಷಾಯವು ಸನ್ನಿ, ಶೂಲೆ, ವಾತಜ್ವ ರಗಳನ್ನು ಪರಿಹರಿಸುತ್ತೆ.

೩. ಹಿರಿಪಂಚಮೂಲ, ಕಿರಿ ಪಂಚಮೂಲಗಳ ಕಷಾಯವನ್ನು ಕೊಡಲು ಸ ನ್ನಿ, ವಾತ, ಹೃದಯಶೂಲೆಗಳು ಪರಿಹರವಾಗುವವು.

೪. ದೇವದಾರು, ಶುಂಠಿ, ಕೊತ್ತುಂಬರೀಬೀಜ, ನೆಲಬೇವು, ಇಂದ್ರಜವೆ, ಬೋಣ ಸು, ಕೊನ್ನಾರಿಗಡ್ಡೆ, ಹಿಪ್ಪಲಿಗಳ ಕಷಾಯವು ಸನ್ನಿಪಾತಜ್ವರಹರವು.

೫. ನೆಲಗುಳ್ಳ, ಹಿಟ್ಟುಳಿಕ, ಬೆಡಲ, ಮಾದಲ, ಬಿಲ್ವ, ಶುಂಠಿಗಳ ಕಷಾಯ ದಲ್ಲಿ ಸೈಂಧವಲವಣವನ್ನು ಹಾಕಿ ಕೊಟ್ಟರೆ ಸನ್ನಿ, ಶೂಲೆಗಳು ಪರಿಹರ ವಾಗುವವು.

೬. ಅಳಲೆ, ನೆಲ್ಲಿ, ತಾರೆ, ಶುಂಠಿ, ಮೆಣಸು, ಹಿಪ್ಪಲಿ, ಅಮೃತಬಳ್ಳಿ, ಕಟುಕ ರೋಹಿಣಿ, ಪಡವಲ, ನೆಲಬೇವು, ಕೊನ್ನಾರಿ ಗೆಡ್ಡೆಗಳ ಕಷಾಯವು ತ್ರಿ ದೋಷ ಜ್ವರಹರವು.

೨. ಸನ್ನಿಗೆ ಲೇಪವಿಧಿ:—

೧. ಮೊದಲು ಕಿವಿಗಳು ಬಾತರೆ ಅದಕ್ಕೆ ಜಿಗಳೆಯನ್ನು ಹತ್ತಿಸಿ ರಕ್ತ ತೆಗ ದು ತುಪ್ಪವನ್ನು ಕುಡಿಸುತ್ತಾ ಶೀಘ್ರದಲ್ಲಿ ಮೂಲಿಕೆಗಳ ಲೇಪವಂ ಮೊಡಬೇಕು.

೨. ಮಾದಲದ ಹುಳಿಯಲ್ಲಿ ಇಂಗು, ಶುಂಠಿಗಳನ್ನು ತೆಯಿದು ನಾಲಿಗೇಗೆ ಲೇಪ ವಂ ಮಾಡಿದರೆ ಯಚ್ಚರ ಹುಟ್ಟುತ್ತೆ.

೩. ಶಾರ, ಶೈಗಳನ್ನು ಮಾದಲದ ಹುಳಿಯಿಂದ ತೆಯಿದು ನಾಲಿಗೇಗೆ ಲೇಪ ಸಿದರೆ ಯಚ್ಚರವಾಗುತ್ತೆ.

೪. ಹವಳ, ಸುವರ್ಣ, ಕೊನ್ನಾರೀಗಡ್ಡೆ, ಕಸ್ತೂರಿ, ಕುಂಕುಮಕೇಸರಿ, ಶುಂಠಿ, ಬ್ಯಾಲ, ಲವಂಗ, ಹಿಪ್ಪಲಿ, ಸಾರಗದಕೋಡು, ನಿಂಬೇಬೀಜ, ಕೋಷ್ಠ ಸೀತೊಂಡೆ, ನವಿಲ್‌ಶಿಖಿ, ಬೆಳ್ಳಿ, ಗೋರೋಚನ, ಶಂಖ, ರುದ್ರಾಕ್ಷಿ, ಹಿಪ್ಪೇ ಹುವ್ವು, ರಾಸ್ನೆ, ಅತಿಮಧುರ, ಹರಳಿನಬೇರು, ದ್ರಾಕ್ಷಿಗಳನ್ನು ಮೊಲೆಹಾ ಲಿನಲ್ಲಿ ತೇಯಿದು ನಾಲಿಗೆಗೆ ಲೇಪಿಸಿದರೆ ಯಲ್ಲಾ ಸನ್ನಿಗಳೂ ಮತ್ತು ದಾಹ ಸಹ ಶಾಂತವಾಗುತ್ತೆ.

೩. ಸನ್ನೀಗೆ ಅಂಜನವಿಧಿ:—

೧. ಮೆಣಸು, ಹಿಪ್ಪಲಿ, ಸೈಂಧವಲವಣ, ಮಣಿಶಿಲೆ, ಬೆಳ್ಳುಳ್ಳಿ, ಬಜೆ, ಶಿರಸದ ಬೀಜಗಳಂ ಗೋಮೂತ್ರದಿಂದ ಅರದು ಕಣ್ಣಿಗೆ ಹಚ್ಚಿಸಿದರೆ ಭಿನ್ನಾಸಕ ಸನ್ನಿಯಲ್ಲಿ ಯಚ್ಚರ ಉಂಟಾಗುತ್ತೆ.

೨. ಸೈಂಧವಲವಣ, ಶುಂಠಿ, ಮೆಣಸು, ಹಿಪ್ಪಲಿಗಳನ್ನು ಹಸೀಶುಂಠಿ ರಸದಿಂ ದ ಅರದು ಗುಳಿಗೆ ಮಾಡಿ ಬಾಯಿಯಲ್ಲಿ ಇಟ್ಟುಕೊಂಡರೆ ಹೃದಯ ಶಿರ ಸ್ಸುಗಳಲ್ಲಿರುವ ನೋವನ್ನು, ಕಂಠದಲ್ಲಿರುವ ಶ್ಲೇಷ್ಮವನ್ನು, ಸನ್ನಿಯನ್ನು ಸಹ ಪರಿಹರಿಸುವದು.

೩. ಇಂಗು, ಸೈಂಧವ ಲವಣ, ಹಿಪ್ಪಲಿಗಳನ್ನು ಗೋಮೂತ್ರದಲ್ಲಿ ತೇಯಿದು ಕಣ್ಣಿಗೆ ಹಚ್ಚಿಸಿದರೆ ಯಚ್ಚರವಾಗುತ್ತೆ. ಈ ಅಂಜನಕ್ಕೆ ಭೈರವಾಂಜ ನವೆಂದು ಹೆಸರು. ಇದು ಸನ್ನೀಗೆ ಕೊಡ್ಲಿಪ್ರಾಯವಾದದ್ದು.

೪. ಸನ್ನಿಗೆ ನಶ್ಯವಿಧಿ.

೧. ಹಿಪ್ಪೆಕೆಚ್ಚು, ಸೈಂಧವಲವಣ, ಹಿಪ್ಪಲಿ, ಬಜೆ, ಮೆಣಸುಗಳನ್ನು ಬಿಸಿನೀರಿನಿಂದ ಅರೆದು ಮೂಗಿಗೆ ಹಿಂಡಿದರೆ ಉನ್ಮಾದಸನ್ನಿ ಮತ್ತು ವಾತಜ್ವರ ಸಹ ಪರಿಹರವು.

೨. ಸಾಸುವೆ, ಕೋಷ್ಠ, ಸೈಂಧವಲವಣ, ಮೆಣಸುಗಳನ್ನು ಆಡಿನಮೂತ್ರದಿಂದ ಚನ್ನಾಗಿ ಮರ್ದಿಸಿ ಮೂಗಿಗೆ ಹಿಂಡಿದರೆ ಛಳಿ, ಸನ್ನಿವಾತಜ್ವರ ಸಹ ಪರಿಹರವು.

೩. ಅಗಸೇಯಲೆಗಳ ರಸವಂ ತೆಗದು ಶುಂಠಿ, ಮೆಣಸು, ಹಿಪ್ಪಲಿಗಳನ್ನು ಆ ರಸದಿಂದಲೇ ತೆಯಿದು ಸೈಂಧವಲವಣವಂ ಕೂಡಿಸಿ ಮೂಗಿನಲ್ಲಿ ಹಾಕಿದ್ದೇ ಆದರೆ ಹಾವಿನ ಕುಲಕ್ಕೆ ನಾಶಕರವಾದಗರುಡನೋಪಾದಿಯಲ್ಲಿ ಅನೇಕ ದೋಷಜ್ವರವನ್ನು ಪರಿಹರಿಸುತ್ತೆ.

೪. ಕಾಡುಬೆರಣೀಯಿಂದ ಮಾಡಲ್ಪಟ್ಟ ಶುಭ್ರವಾದ ಭಸ್ಮವನ್ನು ಯಕ್ಕೀಹಾಲಿನಿಂದ ರಾಡಿಯಾಗುವಂತೆ ಕಲಸಿ ಒಣಗಿಸಿ ಈ ಭಸ್ಮದ ತೂಕದ ಪೈಕಿ ನಾಲ್ಕರಲ್ಲಿ ಒಂದುಭಾಗದಷ್ಟು ಮೆಣಸಿನಪುಡಿಯುನ್ನು ಸೇರಿಸಿ ಮೂಗಿಗೆ ಯೇರಿಸಿದರೆ ಸನ್ನಿಹರವು.

೫. ಸನ್ನಿಯಲ್ಲಿ ಮೇಲೆ ಹೇಳಲ್ಪಟ್ಟ ಕ್ರಿಯೆಯಿಂದ ಯಚ್ಚರವಾಗದೇ ಇದ್ದರೆ.

ಕಬ್ಬಿಣವನ್ನುಕಾಸಿ ಹಿಂಬಡಿಯಮೇಲೆ ಕುದುರೆಯ ಖುರದಂತೆಯೂ, ಮತ್ತು ಹುಬ್ಬಿನ ಮಧ್ಯದಲ್ಲಿ ಸಾಧಾರಣವಾಗಿಯೂ ಬರೆಗಳನ್ನು ಹಾಕಿದರೆ ಯಚ್ಚರವಾಗುತ್ತೆ.

೬. ಭಿನ್ನಾಸಕಸನ್ನಿಗೆ ಕಷಾಯ ವಿಧಿ.

೧. ನೆಲಗುಳ್ಳ, ಮಾದಳ, ಹಿಟ್ಟಿಳಿಕ, ಬಿಡಲ, ಕಕ್ಕೆ, ಬಿಲ್ವದಫಲ, ಅಗಳು ಶುಂಠಿಗಳನ್ನು ಹಾಕಿ ಮಾಡಿದ ಕಷಾಯವನ್ನು ಕೊಟ್ಟರೆ ಭಿನ್ನಾಸಕ ಸನ್ನಿಹರವು.

೨. ಗೋಮೂತ್ರದಲ್ಲಿ ಸೈಂಧವಲವಣವನ್ನು ಹಾಕಿಕೊಟ್ಟರೆ ಸನ್ನಿಯಲ್ಲಿ ಎಚ್ಚರ ಉಂಟಾಗುತ್ತೆ.

೩. ನೆಲಗುಳ್ಳ, ಗುಳ್ಳ, ಹೊಂಗೆ, ಚಿತ್ರಮೂಲ, ಬೋಳಪತ್ರೆ, ಶುಂಠಿ, ಹಿಪ್ಪಲಿ, ಮೆಣಸು, ಬೈ ಪಡವಲ, ಬಿಲ್ವಪತ್ರೆಗಳನ್ನು ಹುಡುಗರ ಮೂತ್ರದಲ್ಲಿ ಅರೆದು ಕೊಟ್ಟರೆ ಗಂಟಲಲ್ಲಿ ಕಟ್ಟಿ ಇರುವ ಶ್ಲೇಷ್ಮಹರವು.

೫. ವಿಷಮಜ್ವರಗಳಿಗೆ ಔಷಧಗಳು.

೧. ಚಿಕಿತ್ಸಾವಿಧಿ.

೧. ನೆಲಹಾಲೆ, ಜೇಷ್ಠಮಧು, ಹಿಪ್ಪಲಿ, ಕಳ್ಳಂಗಡ್ಲೆ, ದ್ರಾಕ್ಷಿಗಳನ್ನು ಗಂಧ ಮಾಡಿ ಹಸುವಿನಹಾಲಿನಿಂದ ಬೇಯಿಸಿ ಕಷಾಯವನ್ನು ಕೊಡಲು ತಲೇ ಮತ್ತು ಪಕ್ಕೆಗಳ ಶೂಲೆಯು ಕಾಸ ಮತ್ತು ಹಳೇಜ್ವರ ಸಹ ಪರಿಹರವಹುದು.

೨. ಪಡವಲ, ಕಟುಕರೋಹಿಣಿ, ಇಂದ್ರಜವೆಗಳ ಕಷಾಯವನ್ನು ಕೊಟ್ಟರೆ ಸಂತತ ಜ್ವರ ಪರಿಹರವಾಗುತ್ತೆ.

೩. ನೆಲಹಾಲೆ, ಕೊನ್ನಾರಿಗಡ್ಡೆ, ಪಡವಲ, ಕಟುಕರೋಹಿಣಿ, ಅಗಳಶುಂಠಿಗಳ ಕಷಾಯವನ್ನು ಕೊಟ್ಟರೆ ಸಂತತ ಜ್ವರಹರವು.

೪. ಪಡವಲ, ಬೇವು, ಅಳಲೇಕಾಯಿ, ನೆಲ್ಲೀಕಾಯಿ, ತಾರೇಕಾಯಿ, ದ್ರಾಕ್ಷೆ, ಕಟುಕರೋಹಿಣಿ, ಕಕ್ಕೆಗಳ ಕಷಾಯದಲ್ಲಿ ಜೇನುತುಪ್ಪ, ಸಕ್ಕರೆಗಳಂ ಹಾಕಿಕೊಟ್ಟರೆ ದಿನಪ್ರತಿಯಲ್ಲೂ ಬರುವ ಜ್ವರಹರವು.

೫. ಕೊತ್ತುಂಬರಿ ಬೀಜ, ರಕ್ತಚಂದನ, ಕೊನ್ನಾರಿಗಡ್ಡೆ, ಅಮೃತಬಳ್ಳಿ, ಶುಂಠಿ, ಲಾಮಂಚಗಳ ಕಷಾಯದಲ್ಲಿ ಜೇನು ಸಕ್ಕರೆಗಳಂ ಹಾಕಿಕೊಟ್ಟರೆ ಮೂರು ದಿವಸಕ್ಕೆ ಒಂದಾವರ್ತಿ ಬರುವ ಜ್ವರಹರವು.

೬. ನೆಲ್ಲಿ, ಅಳಲೆ, ದೇವದಾರು, ನೆಲಹೊನ್ನೆ, ಶುಂಠಿ ಆಡುಸೋಗೆಗಳ ಕಷಾಯದಲ್ಲಿ ಜೇನು ಸಕ್ಕರೆ ಹಾಕಿಕೊಟ್ಟರೆ ಚಾತುರ್ಥಿಕ ಜ್ವರಹರ.

೭. ನೆಲಬೇವು, ಅಮೃತಬಳ್ಳಿ, ಚಂದನ, ಶುಂಠಿಗಳ ಕಷಾಯದಲ್ಲಿ ಜೇನು ಸಕ್ಕರೆಗಳನ್ನು ಹಾಕಿ ಕೊಟ್ಟರೆ ಮೂರು ದಿವಸಗಳಿಗೆ ವೊಂದಾವರ್ತಿ ಬರುವಜ್ವರ ಹರವು.

೮. ನೆಲ್ಲಿ, ಕೊನ್ನಾರಿಗಡ್ಡೆ, ಅಮೃತಬಳ್ಳಿ, ಅತಿಮಧುರಗಳ ಕಷಾಯದಲ್ಲಿ ಜೇನು ಸಕ್ಕರೆಗಳನ್ನ ಹಾಕಿ ಕೊಟ್ಟರೆ ಚಾತುರ್ಥಿಕ ಜ್ವರಹರವು.

೯. ಲಕ್ಕೀಕುಡಿ, ಹಿಪ್ಪಲಿ, ತುಂಬೇಹುವು ಕಟುಕರೋಹಿಣಿಗಳ ಕಲ್ಕವನ್ನು ಕೊಟ್ಟರೆ ವಿಷಮಜ್ವರಹರವು.

೧೦. ಪಡವಲ, ಕಟುಕರೋಹಿಣಿ, ಕೊನ್ನಾರಿಗಡ್ಡೆ, ಅಳಲೆ, ಅತಿಮಧುರಗಳ ಕಷಾಯವನ್ನು ೩, ೪, ೫ ದಿವಸಗಳು ಕೊಟ್ಟರೆ ವಿಷಮಜ್ವರಹರವು.

೧೧. ಒಂದು ತೊಲ ಹಿಪ್ಪಲಿ, ಒಂದುಪಾವು ಹಾಲು, ಒಂದುಶೇರು ನೀರುಹಾಕಿ ಹಾಲುನಿಲ್ಲುವವರಿಗು ಕಾಸಿ ಕೊಟ್ಟರೆ ವಿಷಮಜ್ವರ ಹರವು.

೧೨. ಹಾಲಿನಿಂಡ ಹಿಪ್ಪಲಿ ಅರದುಕೊಟ್ಟರೆ ವಿಷಮಜ್ವರ ಹರವು.

೧೩. ನೆಲಗುಳ್ಳ, ಚಿತ್ರಕ, ಹರಳು, ಕಳ್ಳಂಗಡ್ಲೆ, ಶುಂಠಿ, ಬಿಳೇಕೊಮ್ಮೆಗಳ ಕಷಾಯದಲ್ಲಿ ಹಿಪ್ಪಲಿ ಪುಡಿಯನ್ನು ಹಾಕಿ ಕೊಟ್ಟರೆ ಛಳಿಜ್ವರಹರವು.

೧೪, ಅಮೃತಬಳ್ಳಿ, ಹರಳು ಅಂದರೆ ಔಡಲ, ಲಕ್ಕಿ, ಶುಂಠಿ, ಕೊತ್ತುಂಬರಿಗಳ ಕಷಾಯವನ್ನು ಕೊಟ್ಟರೆ ಛಳಿಕೂಡಿದಜ್ವರಹರವು.

೧೫. ನೆಲಗುಳ್ಳ, ಅಮೃತಬಳ್ಳೀ ಶುಂಠಿಗಳ ಕಷಾಯದಲ್ಲಿ ಹಿಪ್ಪಲಿ ಪುಡಿಯನ್ನು ಹಾಕಿ ಕೊಟ್ಟರೆ ಕಾಸ, ಛಳಿ, ಜ್ವರ, ಪೀನಸ, ಸ್ವರಹೀನತ್ವಗಳು ಪರಿಹರವಹವು.

೧೬. ನೆಲಗುಳ್ಳ, ಲಕ್ಕಿ, ವಂದೆಲಗ, ಜೀರಿಗೆ, ಗರಗ, ಶುಂಠಿ, ಹಿಪ್ಪಲಿ, ಮುಳ್ಳು ರಂಜಿಕೆ, ಅಳಲೇ ಇವುಗಳ ಕಷಾಯದಲ್ಲಿ ವೊಂದು ತೊಲೆ ಜೇನುತುಪ್ಪವನ್ನು ಹಾಕಿಕೊಟ್ಟರೆ ವಿಷಮಜ್ವರಹರವು.

೨. ವಿಷಮಜ್ವರಕ್ಕೆ ನಸ್ಯವಿಧಿ.

೧. ಹಾಗಲಸೊಪ್ಪಿನ ರಸದಲ್ಲಿ ಬೆಳ್ಳುಳ್ಳಿ, ಮೆಣಸು, ಸೈಂಧವಲವಣಗಳಂ ಪುಡಿಮಾಡಿ ಹಾಕಿ ಮರ್ದಿಸಿ ಮೂಗಿನಲ್ಲಿ ಯೇರಿಸಿದರೆ ವಿಷಮಜ್ವರಹರವು.

೨. ಬೆಳ್ಳುಳ್ಳಿ, ಮೆಣಸುಗಳಂ ನೀರಿನಿಂದರೆದು ಮೂಗಿಗೆ ಹಿಂಡಿದರೆ ಶ್ಲೇಷ್ಮಜ್ವರಹರವು.

೩. ಸೈಂಧವಲವಣ, ಶಿರಸದ ಬೀಜಗಳನ್ನು ನೀರಿನಿಂದರೆದು ಮೂಗಿನಲ್ಲಿ ಹಾಕಿದರೆ ಸೀತದಿಂದ ಉತ್ಪನ್ನವಾದ ಜ್ವರವು ಪರಿಹರವಾಗುತ್ತೆ.

೬. ಹಳೇಜ್ವರಕ್ಕೆ ಚಿಕಿತ್ಸೆಗಳು.

೧. ಪ್ರವರ್ತಿಕಾರಿ ಔಷಧಗಳು.

೧. ಅಳಲಿ, ನೆಲ್ಲಿ, ತಾರೆ, ಅತಿಮಧುರ, ದ್ರಾಕ್ಷಿ, ಪಡವಲ, ಕಕ್ಕೆ, ಕಟುಕರೋಹಿಣಿ, ದಾಳಿಂಬ, ಅಗಳ ಶುಂಠಿಗಳ ಕಷಾಯವಂ ಕೊಟ್ಟರೆ ಪ್ರವರ್ತಿಯಾಗುತ್ತೆ.

೨. ಕಕ್ಕೆ, ಪಡವಲ, ಹಾವುಮೆಕ್ಕೆ, ಅಳಲೆ, ತಾರೆ, ನೆಲ್ಲಿ, ತಿಗುಡೆ, ಕಟುಕರೋಹಿಣಿ, ಯಕ್ಕೆಯಕ್ಷಾರಗಳ ಕಷಾಯವನ್ನು ಕೊಟ್ಟರೆ ಪ್ರವರ್ತಿಯಾಗುತ್ತೆ.

೩. ದ್ರಾಕ್ಷಿ, ನೆಲ್ಲೀರಸಗಳನ್ನು ಸಮತೂಕವಾಗಿಕೊಟ್ಟರೆ ಪ್ರವರ್ತಿಯಾಗುತ್ತೆ.

೪. ದ್ರಾಕ್ಷಿ, ಅಳಲೇಕಾಯಿಗಳ ಕಷಾಯವನ್ನು ಕೊಟ್ಟರೆ ಪ್ರವರ್ತಿಯಾಗುತ್ತೆ.

೫. ತಿಗಡೇಪುಡಿಯನ್ನು ಜೇನುತುಪ್ಪದಲ್ಲಿ ಕಲಸಿಕೊಟ್ಟರೆ ಪ್ರವರ್ತಿಯಾಗುತ್ತೆ.

೬. ಹಾಲಿನಲ್ಲಾಗಲೀ, ದ್ರಾಕ್ಷೀಕಷಾಯದಲ್ಲಾಗಲೀ ಕಕ್ಕೇಮ್ಯಾಣವನ್ನು ಹಾಕಿ ಕೊಟ್ಟರೆ ಸುಖಪ್ರವರ್ತಿಯಾಗಿ ಹಳೇಜ್ವರನಿವಾರಣವಾಗುತ್ತೆ.

೨. ಜೀರ್ಣಜ್ವರಕ್ಕೆ ನಸ್ಯ, ಧೂಮಪಾನ, ಗಂಡೂಷಣ, ಕವಳಗಳನ್ನು ಸಹ ಮಾಡಿದರೆ, ಶಿರೋಭಾರ, ಕಾಸ, ಅರುಚಿಗಳು ಪರಿಹರವಾಗುತ್ತವೆ.

೩. ಹಳೇಜ್ವರಕ್ಕೆ ಕ್ಷೀರ ಸಂಸ್ಕಾರ.

೧. ಜ್ವರದಿಂದ ಬಳಲಿದ ದೇಹವು ಸೊರಗಿದರೆ ತುಪ್ಪ ಹಾಲುಗಳನ್ನು ಸಂಸ್ಕರಿಸಿ ಸ್ವಲ್ಪ ಉಷ್ಣವಾಗಿರುವದನ್ನು ಸೇವಿಸಿದರೆ ಜ್ವರದಲ್ಲಿ ಅಮೃತವಾಗುತ್ತೆ.

೨. ಪಾವು ಮೂಲಿಕೆಗಳನ್ನು ಒಂದುಶೇರು ಹಸುವಿನಹಾಲನ್ನು ನಾಲ್ಕುಶೇರು ನೀರನ್ನು ಸಹ ಕೂಡಿಸಿ ನೀರುಬತ್ತುವವರಿಗೆ ಕಾಸಿ ಶೋಧಿಸಿಕೊಟ್ಟರೆ ಹಿತವಾಗುತ್ತೆ.

೩. ಹಾಲಿನಲ್ಲಿ ಕಲ್ಲುಸಕ್ಕರೆ, ಶುಂಠಿ, ಖರ್ಜೂರ, ದ್ರಾಕ್ಷೆಗಳನ್ನು ಹಾಕಿಕಾಸಿ ಕೊಟ್ಟರೆ ಹಿತವಾಗುತ್ತೆ.

೪. ಮೂರು ತೊಲೆ ಬಿಲ್ವಫಲ, ಹನ್ನೆರಡುತೊಲೆ ಹಾಲು, ನಾಲ್ಕುಶೇರು ನೀರು ಇವುಗಳನ್ನು ಕೂಡಿಸಿ ನೀರು ಬತ್ತುವವರಿಗೂ ಕಾಸಿ ಬಿಸಿಯಾಗಿರುವದನ್ನುತೆಗದುಕೊಂಡರೆ ಹಳೇಜ್ವರಕ್ಕೂ ದೇಹಕ್ಕೂ ಹಿತಕರವು.

೫. ನೆಲಗುಳ್ಳ, ಶುಂಠಿ, ನೆಗ್ಗಲು, ಕಳ್ಳಂಗಡ್ಲೆ, ಬೆಲ್ಲಗಳನ್ನು ಹಾಲಿಗೆ ಹಾಕಿಕಾಸಿ ಕೊಟ್ಟರೆ, ಕಾಸ, ಜ್ವರ, ಶೋಭೆಗಳು ನಿವಾರಣವಾಗುವವು.

೬. ಒಂದುಪಾಲು ಹಾಲು ನಾಲ್ಕು ಪಾಲು ನೀರುಗಳಂ ಶೇರಿದ್ದಕ್ಕೆ ಹರಳು, ಲಕ್ಕಿಗಳ ಬೇರನ್ನು ಹಾಕಿ ನೀರು ಬತ್ತುವವರಿಗೂ ಕಾಸಿ ತೆಗದುಕೊಂಡರೆ ಶೂಲೆ, ಹಳೇಜ್ವರ, ವಾತದೇಹಕ್ಕೆ ಹಿತಕರವು.

೭. ಅಮೃತಬಳ್ಳಿ, ಜೇಷ್ಠಮಧು, ದ್ರಾಕ್ಷಿ, ನೆಗ್ಗಲು, ಅಳಲೆ, ನೆಲ್ಲೀತಾರೆಗಳನ್ನು ಸಮತೂಕವಾಗಿ ತುಪ್ಪದಲ್ಲಿ ಹುರದುಕೊಟ್ಟರೆ ಜ್ವರಕ್ಕೆ ಹಿತಕರವು, ಮತ್ತು ಪುಷ್ಟಿಯನ್ನುಂಟುಮಾಡುತ್ತೆ.

೮. ಒಂದು ತೂಕ ಬಿಲ್ವದಬೇರು, ಯರಡುತೂಕ ಕೊಮ್ಮೆಬೇರುಗಳನ್ನು ಹಾಲಿಗೆ ಹಾಕಿ ಕಾಸಿಕೊಟ್ಟರೆ ಜ್ವರ, ಶೋಭೆಗಳು ಪರಿಹರವಾಗುತ್ತವೆ.

೯. ಬೀಟೆಯ ಕೆಚ್ಚನ್ನು ಹಾಲಿಗೆಹಾಕಿ ಕಾಸಿ ಕೊಟ್ಟರೆ ಹಳೇಜ್ವರಹರವು.

೧೦. ಶೀಗೆಯಕುಡಿ, ಮೆಣಸು, ಈರುಳ್ಳಿಗಳನ್ನು ಬಿಸಿನೀರಿನಿಂದರದು ಕೊಟ್ಟರೆ ಛಳಿಜ್ವರವು ಬೇಗದಿಂ ಪರಿಹರವಹುದು.

೧೧. ಹಳೇಜ್ವರಕ್ಕೆ ಅಂದರೆ ವಾತ ಪಿತ್ತದಿಂದ ಹುಟ್ಟಿದ ಹಳೇಜ್ವರಕ್ಕೆ ಹಾಲು ತುಪ್ಪಗಳು ಅಮೃತವಾಗುವವು. ತರುಣಜ್ವರಕ್ಕೆ, ಕೆಮ್ಮು, ಕಾಸ, ಶ್ವಾಸಗಳುಳ್ಳ ಜ್ವರಗಳಿಗೆ ವಿಷಪ್ರಾಯವು.

೧೨. ಜ್ವರ, ಅತಿಸಾರ, ರಕ್ತಬೀಳುವ ಕಾಸ, ಪೈತ್ಯರೋಗಕ್ಕೆ ಸಹ ಆದಿಯಲ್ಲಿ ವೈದ್ಯವನ್ನು ಮಾಡಬಾರದು. ಮಾಡಿದರೆ ರೋಗವು ಹೆಚ್ಚಿ ಇತರ ವಿಧರೋಗಗಳನ್ನು ಹುಟ್ಟಿಸುತ್ತೆ.

೨. ಅತಿಸಾರಕ್ಕೆ ಔಷಧಗಳು.

೧. ವಾತಾತಿಸಾರಕ್ಕೆ ಔಷಧಗಳು.

೧. ಎಳೇ ಬಿಲ್ವದಫಲ, ಎಳ್ಳುಗಳ ಸಮತೂಕವನ್ನು ಕಂಬಳಿಯ ಬೂದಿಯಲ್ಲಿ ಶೇರಿಸಿ ಮೊಸರಿಂದ ಮರ್ದಿಸಿ, ತುಪ್ಪದಲ್ಲಿ ಗುಳಗುಳನೆ ಕುದಿಸಿ ಬೇಸಿ ಕೊಟ್ಟರೆ ಅತಿಸಾರಹರವು.

೨. ಒಂದೊಂದು ತೊಲೆತೂಕ, ಶುಂಠಿ, ಅಳಲೆಗಳನ್ನು ಮೊಸರಿನಲ್ಲಿ ಕಲಸಿ ಕೊಟ್ಟು ನೇರಳೇ ಎಲೆಇಂದ ಪೊಟ್ಟಣಂ ಮಾಡಿ ಆದರಲ್ಲಿ ಮೊಸರು ಅನ್ನವನ್ನು ಇಟ್ಟು ಅದರಮೇಲೆ ಆ ಎಲೆಯನ್ನು ಮುಚ್ಚಿ ಕೆಂಡದಲ್ಲಿ ಪುಟವನ್ನು ಹಾಕಿ ಆ ಅನ್ನವನ್ನು ಕೊಟ್ಟರೆ ವಾತಾತಿಸಾರಹರವು.

೩. ಅಳಲೆ, ಅಗಳಶುಂಠಿ, ಬಿಲ್ವದಹಣ್ಣು, ವಾಯುವಳಂಗ, ಬಜೆ, ಸೈಂಧವ ಲವಣಗಳನ್ನು ಬಿಸಿಯಾದ ನೀರಿನಲ್ಲಿ ಪುಡಿಮಾಡಿ ಹಾಕಿ ಕೊಟ್ಟರೆ ಆ ಮಾತಿಸಾರ ಪಾಚನೆಗೆ ಬರುತ್ತೆ.

೪. ಬಜೆ, ಶುಂಠಿ, ಹಿಪ್ಪಲಿ, ಮೆಣಸು, ಅಳಲೆ, ಅತಿಬಜೆ, ಸಂವತ್ಸರಲವಣ, ಇಂಗುಗಳನ್ನು ನೀರಿನಿಂದ ಅರದು ನುಂಗಿದರೆ ಬಹಳ ತೊಂದ್ರೆ ಕೊಡುವ ಆಮಕ್ಕೆ ಹಿತವು.

೫. ಬಜೆ, ಕಟುಕರೋಹಿಣಿ, ಸೈಂಧವ, ಜೀರಿಗೆ, ಇಂದ್ರಜವೆಗಳಂ ನೀರಿನಿಂದ ಅರದು ನುಂಗಿದರೆ ಆಮಾತಿಸಾರಹರವು.

೬. ಇಂಗು, ಅತಿಬಜೆ, ಶುಂಠಿ, ಕೊನ್ನಾರಿಗಡ್ಡೆ, ಚಿತ್ರಮೂಲ, ಇಂದ್ರಜವೆಗಳನ್ನು ನೀರಿನಲ್ಲಿ ಅರದು ನುಂಗಿದರೆ ಆಮಕ್ಕೆ ಹಿತವು.

೭. ಕಿರಿದಂಚಮೂಲ, ಶುಂಠಿ, ಆಲ, ಬ್ಯಾಲ, ಕಳಂಗಡ್ಡೆಗಳನ್ನು ಹುಳಿಯಾದ ಮೊಸರಿನಲ್ಲಿ ಹಾಕಿ ಕೊಟ್ಟರೆ ವಾತಾತಿಸಾರಹರವು.

೮. ಶುಂಠಿಯ ಚೂರ್ಣಕ್ಕೆ ಸ್ವಲ್ಪ ತುಪ್ಪವನ್ನು ಸವರಿ ಔಡಲದ ಎಲೆಯಲ್ಲಿ ಗಂಟುಕಟ್ಟಿ ಪುಟವನ್ನುಹಾಕಿ ಅದಕ್ಕೆ ಸಕ್ಕರೆಹಾಕಿ ತೆಗದುಕೊಂಡರೆ ಅತಿಸಾರಹರವು.

೯. ದಾಳಿಂಬದ ಹಣ್ಣನ್ನು ಮಂಬುಪ್ರೊರದು ಪುಟವನ್ನುಹಾಕಿ ಜೇನುತುಪ್ಪದಲ್ಲಿ ಕಲಸಿ ತಿಂದು ಇದೇ ದಾಳಿಂಬದ ರಸವನ್ನು ಕಣ್ಣಿಗೆ ಹಚ್ಚಿಸಿದರೆ ಹೊಟ್ಟೆಕೂಲೆಯು ಅತಿಸಾರವು ಸಹ ಪರಿಹರವಹುದು.

೧೦. ಮೂರು ರೂಪಾಯಿತೂಕ ನೇರಳೇ ನಾರಿನರಸದಲ್ಲಿ ಬೂರುಗದ ಮ್ಯಾಣ ಸಕ್ಕರೆಗಳನ್ನು ಅರದು ಮೊಂದು ತೊಲೆಯನ್ನು ಕೊಟ್ಟರೆ ಅತಿಸಾರ ಹರವು.

೧೧. ಆಲದ ಬೀಳನ್ನು ಕಟ್ಟುಮೊಸರಿನಿಂದ ಅರದು ಕೊಟ್ಟರೆ ಅತಿಸಾರ ಹರವು.

೧೨. ಯಳೇದಾಳಿಂಬದ ಬೀಜವನ್ನು ಕಳದು ಆ ಚಿಪ್ಪೆಯಲ್ಲಿ ಒಂದುತೊಲೆ ಜೀರಿಗೆಯನ್ನು ಹಾಕಿ ಪುಟವಿಟ್ಟು ಮೊಸರಿನಲ್ಲಾಗಲಿ ನೀರಿನಲ್ಲಾಗಲಿ ಕೊಟ್ಟರೆ ಗರ್ಭಿಣೀಗಾದ ಹೊಟ್ಟೆನೋವು ಹರವು.

೧೩. ಮಾವಿನಚಕ್ಕೆ ಅಥವಾ ಜೋರೇಗಿಡದ ಚಕ್ಕೆ ಯಾಗಲಿ ಮೊಸರಿನಲ್ಲಿ ತೆಯಿದು ಹೊಕ್ಕಳಿಗೆ ಹತ್ತಿಸಿದರೆ ಸಾರಣೆಗಳು ಹರವು.

೧೪. ಬೆಲ್ಲದರಸ, ತೈಲ, ಬಿಲ್ವ, ಮೊಂದುಶೇರು ಹಾಲು,, ನಾಲ್ಕುಶೇರು ನೀರು ಸಹ ಹಾಕಿ ನೀರುಬತ್ತುವ ವರಿಗೂ ಕಾಸಿ ಆ ಹಾಲನ್ನು ಕೊಟ್ಟರೆ ವಾತಾತಿಸಾರಹರವು.

೧೫. ಬೆಲ್ಲದರಸದಲ್ಲಿ ತೈಲ, ಬಿಲ್ವಫಲ, ಶುಂಠಿ, ಹಿಪ್ಪಲಿಗಳನ್ನು ಹಾಕಿ ಕುದಿಸಿ ತೆಗದುಕೊಂಡರೆ ವಾತಾತಿಸಾರಹರವು.

೧೬. ಯಳೇಬಿಲ್ವ, ಹರಳುಗಳನ್ನು ಅರದು ತೆಗದುಕೊಂಡರೆ ವಾತಾತಿಸಾರ ಹರವು.

೧೭. ಯಳೇಬಿಲ್ವ, ಹರಳು ಎಲೆಗಳಂ ಅರದು ಒಂದುಶೇರು ಹಾಲು, ನಾಲ್ಕುಶೇರು ನೀರಿನಲ್ಲಿ ಕಲಸಿ ನೀರು ಬತ್ತುವವರಿಗೂ ಕಾಸಿ ತೆಗದುಕೊಂಡರೆ ಆಮಾತಿಸಾರಹರವು.

೧೮. ಉಪ್ಪು, ಎಣ್ಣೆ, ಶುಂಠಿ, ಬೆಲ್ಲಗಳನ್ನು ಹಾಲು ಮತ್ತು ಮೊಸರಲ್ಲಿ ಸಹ ಅರದು ಕುದಿಸಿ ಗುಳಿಗೆಮಾಡಿ ಕೊಟ್ಟರೆ ಹೊಟ್ಟೆಯನೋವು ವಾತದಿಂದ ಹುಟ್ಟಿದ ನೋವಿಗೆ ಹಿತವು.

೧೯. ತಡೆಯಿಲ್ಲದೆ ಪ್ರವರ್ತಿಯಾಗುವದಕ್ಕೆ ಹಾಲಿಂದ ಮಾಡಿದ ತೊಗರೀಬ್ಯಾಳೆ ಹುಗ್ಗಿಯನ್ನುಕೊಟ್ಟರೆ ಹಿತವಾಗುತ್ತೆ ಮತ್ತು ಹೊಟ್ಟೇನೋವು ಸಹ ಪರಿಹರವಾಗುತ್ತೆ.

೨೦. ನೀರಿನಿಂದ ಜೀರಿಗೆಯನ್ನರದು ಈಶ್ವರೀಬೇರಿಗೆ ಸವರಿ ಸುಟ್ಟ ಬೂದಿಯನ್ನು ಮಜ್ಜಿಗೆಯಿಂದ ಮಾಡಿದ ರಾಗೀ ಅಂಬಲಿಯಲ್ಲಿ ಹಾಕಿ ಮರುದಿನ ತೆಗದುಕೊಂಡರೆ ಅತಿಸಾರ ಹರವು.

೨. ಪಿತ್ತಾತಿಸಾರಕ್ಕೆ ಔಷಧಗಳು.

೧. ನೇರಳೇ ಮಾವಿನವಾಟೆ ತಿಳಲು, ತುರಚಿ, ಆಗಳ ಶುಂಠಿಗಳಚೂರ್ಣವನ್ನು ಅಕ್ಕೀಕಚ್ಚಿನಲ್ಲಿ ಅರದು ಜೇನುತುಪ್ಪಹಾಕಿ ಕೊಟ್ಟರೆ ಪಿತ್ತಕ್ಕೆ ಹೊಟ್ಟೇ ನೋವಿಗೆ ಸಹ ಹಿತಕರವು.

೨. ಬೂರುಗದ ಹೀಚನ್ನು ಬೆಯಿಸಿ ಆ ನೀರನ್ನು ಬಸಕೊಂಡು ವೊಂದುಪಾವು ಆಡಿನ ಹಾಲನ್ನು ಆ ನೀರಿಗೆ ಹಾಕಿ ತೆಗದುಕೊಂಡರೆ ಪಿತ್ತಾತಿಸಾರಕ್ಕೆ ಹಿತವು.

೩. ಹೆಬ್ಬೇವಿನರಸಕ್ಕೆ, ಜೇನು ಬೂರುಗದ ಮ್ಯಾಣ ಸಹ ಹಾಕಿ ವೊಂದು ತೊಲೆಯನ್ನು ಕೊಟ್ಟರೆ ಜಠರಾಗ್ನಿ ಉಂಟಾಗಿ ಸರ್ವಾತಿಸಾರವನ್ನು ಪರಿಹರಿಸುವದು.

೪. ತುರಚಿ, ಅರಿಸಿನಗಳಂ ಅಕ್ಕೀಕಚ್ಚಿನಲ್ಲಿ ಅರದು ಜೇನುತುಪ್ಪವನ್ನು ಹಾಕಿ ಕೊಟ್ಟರೆ ಪಿತ್ತಾತಿಸಾರಹರವು.

೫. ಬಿಲ್ವ, ಅಮೃತಬಳ್ಳಿ, ಅರಿಸಿನ, ದೇವದಾರು, ಕೋಲಮುಕ್ಕಗಳನ್ನು ಅಕ್ಕಿಕಚ್ಚಿನಿಂದ ಅರದು ಜೇನುತುಪ್ಪ ಹಾಕಿ ಕೊಟ್ಟರೆ ಪಿತ್ತಾತಿಸಾರಹರವು.

೬. ಅಕ್ಕಿಕಚ್ಚಿನಿಂದ ಕೋಲಮುಕ್ಕವನ್ನು ಅರದು ಅರ್ಧಶೇರು ಉಂಡೆಯನ್ನು ನೇರಳೇ ಯಲೆಯಲ್ಲಿಟ್ಟು ಪುಟವನ್ನು ಹಾಕಿ ಅದಕ್ಕೆ ಸಕ್ಕರೆ, ಜೇನುತುಪ್ಪಗಳನ್ನು ಹಾಕಿ ತೆಗದುಕೊಂಡರೆ ಪಿತ್ತಾತಿಸಾರಹರವು.

೩. ರಕ್ತಾತಿಸಾರಕ್ಕೆ ಔಷಧಗಳು.

೧. ಮತ್ತಿ, ಮಾವು, ನೇರಳೆ ತೊಗಟೆಗಳನ್ನು ಮತ್ತು ಬೇರುಗಳನ್ನು ಅರದು ಆಡಿನಹಾಲಿನಲ್ಲಿ ಹಾಕಿಕೊಟ್ಟರೆ ರಕ್ತಾತಿಸಾರ ಹರವು.

೨. ಕೀಘರೀಬೇರಿನ ಚೂರ್ಣವನ್ನು ಹಸುವಿನಹಾಲಿನಲ್ಲಾಗಲಿ ತುಪ್ಪದಲ್ಲಾಗಲೀ ಹಾಕಿ ತೆಗದುಕೊಂಡು ಹಾಲು ಅನ್ನ ಪಥ್ಯವಿದ್ದರೆ ರಕ್ತಾತಿಸಾರಹರವು.

೩. ಬೋರೇಬೇರಿನ ಕಲ್ಕವನ್ನು ಹಾಲಿನಲ್ಲಿ ಹಾಕಿ ಜೇನುತುಪ್ಪವನ್ನು ಹಾಕಿಕೊಟ್ಟರೆ ರಕ್ತಾತಿಸಾರಹರವು.

೪. ಗಂಧದ ಚೂರ್ಣವನ್ನು ಸಕ್ಕರೆ ಜೇನುತುಪ್ಪಗಳನ್ನು ಸಹ ಅಕ್ಕಿಯಲ್ಲಿ ಹೊಂದಿಸಿ ತಿಂದರೆ ರಕ್ತಾತಿಸಾರವು, ದಾಹ ತೃಷೆಗಳೂ ಪರಿಹರವಾಗುತ್ತವೆ.

೫. ಸಕ್ಕರೆ, ಇದಕ್ಕೆ ಅರ್ಧತೂಕ ಆದಿವಸವೇ ಮಾಡಿದ ಆಡಿನ ಬೆಣ್ಣೆ, ವೊಂದು ತೊಲೆ ಜೇನು ಸಹ ಹಾಕಿ ಕಲಸಿ ಕೊಟ್ಟರೆ ರಕ್ತಾತಿಸಾರಹರವು.

೬. ಕುರಿಯರಕ್ತವನ್ನು ತುಪ್ಪದಿಂದ ಪಕ್ವಮಾಡಿ ಹಾಲಿನಲ್ಲಿ ಹಾಕಿ ಮೂರು ದಿವಸ ತೆಗದುಕೊಂಡು ಹಾಲು ಅನ್ನ ಪಥ್ಯಮಾಡಿದರೆ ರಕ್ತಾತಿಸಾರ ಹರವು.

೭. ಇಂದ್ರಜವೆಯನ್ನು ಹಾಕಿ ಕುದಿಸಿದ ನೀರಿಗೆ ಜೇನು, ಮ್ಯಾಕೆಹಾಲನ್ನು ಸಹ ಹಾಕಿ ಕೊಟ್ಟರೆ ರಕ್ತಾತಿಸಾರಹರವು.

೮. ಲಾಮಂಚ, ಕೊನ್ನಾರಿಗಡ್ಡೆ, ಅತಿಬಜೆ, ಕೋಲಮುಕ್ಕ, ಯಳೆಬಿಲ್ವ ಫಲಗಳನ್ನು ನೀರಿನಿಂದ ಕುದಿಸಿ ಆ ನೀರನ್ನು ಕೊಟ್ಟರೆ ರಕ್ತಾತಿಸಾರಹರವು.

೯. ಕೊನ್ನಾರಿಗಡ್ಡೆಯನ್ನು ಕುದಿಸಿದ ನೀರಿಗೆ ಜೇನುತುಪ್ಪವನ್ನು ಹಾಕಿ ಕೊಟ್ಟರೆ ರಕ್ತಾತಿಸಾರಹರವು.

೧೦. ನೇರಳೆ, ಮಾವುಗಳ ಚಿಗರನ್ನೂ, ತೆಂಗು, ಬಾಳೇಹೂವುಗಳ ರಸವನ್ನು, ಕೊನ್ನಾರಿಗೆಡ್ಡೆ, ಇಂದ್ರಜವೆಗಳನ್ನು ಸಹ ಕುದಿಸಿದ ಕಷಾಯಕ್ಕೆ ಜೇನು ಹಾಕಿ ಕೊಟ್ಟರೆ ರಕ್ತಾತಿಸಾರಹರವು.

೧೧. ಪಡವಲ, ಇಂದ್ರಜವೆ, ಕೊತ್ತುಂಬರೀ ಬೀಜಗಳನ್ನು ಕಷಾಯ ಮಾಡಿ ಆರಿಸಿ ಜೇನು ಸಕ್ಕರೆಗಳನ್ನು ಹಾಕಿ ತೆಗದುಕೊಂಡರೆ ವಾಂತ್ಯಾತಿಸಾರ ಹರವು.

೪. ಶ್ಲೇಷ್ಮಾತಿಸಾರಕ್ಕೆ ಔಷಧಗಳು.

೧. ಶುಂಠಿ, ಕೊನ್ನಾರಿಗೆಡ್ಡೆ, ಬೂರುಗದ ಮ್ಯಾಣಿ, ದಾಳಿಂಬದ ಕುಸುಮ, ಬಿಲ್ವ, ಅಗಳುಶುಂಠಿ ಇವುಗಳ ಕಷಾಯವು ಶ್ಲೇಷ್ಮಾತಿಸಾರಹರವು.

೨. ಹಿಪ್ಪಲಿ, ಜೇನುಗಳಂ ಸೇವಿಸಿದರೆ ಶ್ಲೇಷ್ಮಾತಿಸಾರಹರವು.

೩. ಮಜ್ಜಿಗೆಯಲ್ಲಿ ಚಿತ್ರಮೂಲವನ್ನು ಹಾಕಿ ಸೇವಿಸಿದರೆ ಅತಿಸಾರಹರವು.

೪. ಯಳೇಬಿಲ್ವವನ್ನು ಕೊಟ್ಟರೆ ಹೊಟ್ಟೇನೋವಿನಿಂದ ಕೂಡಿದ ಶ್ಲೇಷ್ಮಾತಿಸಾರಹರವು.

೫. ಹುಣಸೆ, ಮಾವುಗಳ ಬೀಜ, ಅಳಲೆ, ಶುಂಠಿ, ಜಾಯಿಕಾಯಿ, ಸೈಂಧವ ಲವಣಗಳನ್ನು ಮೊಸರಿನಿಂದ ಅರದುಕೊಟ್ಟರೆ ಹೊಟ್ಟೇನೊವಿನಿಂದ ಕೂಡಿದ ಶ್ಲೇಷ್ಮಾತಿಸಾರಹರವು.

೬. ಬೆಲ್ಲ. ಮಜ್ಜಿಗೆಗಳಂ ಕೊಟ್ಟರೆ ಹೊಟ್ಟೆನೋವು ಉಳ್ಳ ಶ್ಲೇಷ್ಮಾತಿಸಾರ ಹರವು.

೭. ದಾಳಿಂಬದಕಾಯಿ, ಬಿಲ್ವ, ಶುಂಠಿ, ಬೂರುಗದ ಮ್ಯಾಣಿಗಳನ್ನು ಅರೆದು ಕೊಟ್ಟರೆ ಹೊಟ್ಟೇ ಪೇನೆಯುಳ್ಳ ಶ್ಲೇಷ್ಮಾತಿಸಾರಹರವು.

೮. ಕೊನ್ನಾರಿ, ಶುಂಠಿ, ಅಮೃತಬಳ್ಳಿಗಳನ್ನು ಅರೆದುಕೊಟ್ಟರೆ ಹೊಟ್ಟೆನೋವು ಶ್ಲೇಷ್ಮಾತಿಸಾರ ಸಹ ಪರಿಹರವಹುದು.

೫. ಸರ್ವಾತಿಸಾರಕ್ಕೆ ಔಷಧಗಳು.

೧. ನೆಲಬೇವು, ಅತಿಬಜೆ, ಶುಂಠಿ, ಕೋಲಮುಕ್ಕ, ಅಮೃತಬಳ್ಳಿ, ಕೊನ್ನಾರಿಗಳ ಕಷಾಯವನ್ನು ಕೊಟ್ಟರೆ ಜ್ವರಾತಿಸಾರ ಶಮನವಹುದು.

೨. ಕಟುಕರೋಹಿಣಿ, ತ್ರಿಲವಣ, ಚಿತ್ರಮೂಲ, ಯವಕ್ಷಾರ, ಮೋಡಿ, ಇಂದ್ರಜವೆ, ಅಜಮೋದಗಳನ್ನು ಮೊದಳದ ಹುಳಿಯಲ್ಲಿ ಅರೆದು ಗುಳಿಗೆ ಮಾಡಿ ಕೊಡೆ ಗ್ರಹಣೀಗೆ ಹಿತಕರವು.

೩. ನೇರಳೆ, ನೆಲ್ಲಿ, ಮಾವುಗಳ ಚಿಗರುಗಳ ರಸದಲ್ಲಿ ಆಡಿನಹಾಲನ್ನು ಜೇನುನ್ನು ಸಹ ಹಾಕಿ ಕೊಟ್ಟರೆ ಅತಿಸಾರದಲ್ಲಿ ರಕ್ತಸ್ರಾವನಿಲ್ಲುತ್ತೆ.

೪. ಕೊಳವೆಳಿಕೆ, ಬಿಲ್ವ, ಜವೆ, ಔಡಲಗಳನ್ನು ಜಲದಿಂದ ಬೇಯಿಸಿ ಬಸೆಕೊಂಡು ಆ ನೀರಿನಲ್ಲಿ ಬೆಲ್ಲ ಅಳಲೆ ಪುಡಿಗಳನ್ನು ಒಂದೊಂದು ತೊಲದ ಪ್ರಕಾರ ಹಾಕಿ ಲೇಹಮಾಡಿ ಕೊಟ್ಟರೆ ಹೊಟ್ಟೆನೋವು ಅತಿಸಾರ ಸಹ ಪರಿಹರವಾಗುತ್ತೆ.

೫. ಮಾವಿನ ವಾಟೆ ತಿಳಲು, ದಾಳಿಂಬದ ಹೂವು, ಲವಂಗ, ಶುಂಠಿ, ಸೈಂಧವ ಲವಣ, ವೋಮು, ಬ್ಯಾಲದಹಣ್ಣು, ಹಿಪ್ಪಲಿ, ಬೊರುಗದ ಮ್ಯಾಣಗಳನ್ನು ಹಸುವಿನ ಮಜ್ಜಿಗೆಯಿಂದಲಾಗಲಿ, ಅಕ್ಕಿಕಟ್ಟಿನಿಂದಲಾಗಲಿ ಅರೆದು ಕೊಟ್ಟರೆ ಹೊಟ್ಟೆನೋವತಿಸಾರಗಳು ಪರಿಹರವಾಗುತ್ತವೆ.

೬. ಕೊನ್ನಾರಿಗಡ್ಡೆ, ಹೆಬ್ಬೇವು, ಶುಂಠಿ, ಮಾವಿನಚಕ್ಕೆ, ನೆಲಬೇವು, ದಾಳಿಂಬ, ಇವುಗಳ ತೂಕಕ್ಕೆ ತಕ್ಕಷ್ಟು ಬಿಲ್ವಫಲಗಳನ್ನು ಹಾಕಿ ಕಷಾಯ ಮಾಡಿ ಕೊಟ್ಟರೆ ಜ್ವರಕ್ಕೆ ಅತಿಸಾರಕ್ಕೆ ಸಹ ಹಿತವಾಗುತ್ತೆ.

೭. ಅತಿಬಜೆ, ಕೊಡಸಿಗೆ, ಬಿಲ್ವ, ಹೆಬ್ಬೇವು, ಕೊನ್ನಾರಿ, ದಾಳಿಂಬದ ಫಲಗಳ ಕಷಾಯ ಕೊಟ್ಟರೆ ಅತಿಸಾರಕ್ಕೆ ಹಿತವು.

೮. ಕಡವದಚಕ್ಕೆ, ಶುಂಠಿ, ಕೊಡಸಿಗೆ, ಜಾಪತ್ರೆ, ಕೋಲಮುಕ್ಕ, ದಾಳಿಂಬ, ಮಡಹಾರಮರದ ರಸಗಳಂ ಕೂಡಿಸಿ ಕಷಾಯವನ್ನು ಕೊಟ್ಟರೆ ಸರ್ವಾತಿಸಾರಕ್ಕೆ ಹಿತವು.

೯. ಅಮೃತಬಳ್ಳಿ, ಗಜಗದ ತಿಳಲು, ನೆಲಬೇವು, ಕೋಲಮುಕ್ಕ, ಶುಂಠಿ, ಅತಿಬಜೆ, ಕೊನ್ನಾರಿ, ಬಿಲ್ವಗಳ ಕಷಾಯವು ದೋಷದತಿಸಾರಕ್ಕೆ ಹಿತವು

೧೧. ಇಪ್ಪೇಯಲೆ, ಮೆಣಸು, ಇಂಗು, ಬೆಳ್ಳುಳ್ಳಿ, ಸಾರಗನ ಕೊಂಬು, ಶುಂಠಿಗಳ ಕಷಾಯವು ಶೂಲೆ ಅತಿಸಾರಗಳನ್ನು ಪರಿಹರಿಸುತ್ತದೆ.

೬. ಜ್ವರಾತಿಸಾರಕ್ಕೆ ಔಷಧಗಳು.—

೧. ಹಿಪ್ಪಲಿ, ಶುಂಠಿ, ಕೊನ್ನಾರಿ, ಅತಿಬಜೆಗಳ ಚೂರ್ಣವು ಜ್ವರಾತಿಸಾರವನ್ನು ಪಾಚನೆಗೆ ತರುತ್ತೆ.

೨. ಶುಂಠಿ, ಅತಿಬಜೆ, ಬಿಲ್ವ, ಹೆಬ್ಬೇವಿನವ್ಯಾಣ, ದಾಳಿಂಬ, ಕೊನ್ನಾರಿಗಡ್ಡೆಗಳ ಕಷಾಯವು ಜ್ವರಾತಿಸಾರಹರವು.

೩. ದಶಮೂಲ ರಸದಲ್ಲಿ ಶುಂಠಿಯನ್ನು ಹಾಕಿ ಕೊಟ್ಟರೆ ಜ್ವರಾತಿಸಾರಹರವು.

೪. ಕಿರಿಪಂಚ ಮೂಲದಿಂದ ಪಿತ್ತಜ್ವರ, ಹೊಟ್ಟೆನೋವು ಸಹ ಪರಿಹಾರವಾಗುತ್ತೆ.

೫. ಹಿರಿಪಂಚಮೂಲವು ವಾತ ಶ್ಲೇಷ್ಮಜ್ವರ ಹೊಟ್ಟೆನೋವಿಗೆ ಹಿತವು.

೭. ಗ್ರಹಣೀಗೆ ಔಷಧಗಳು.—

೧. ವಾತಗ್ರಹಣೀಗೆ ಔಷಧಗಳು.—

೧. ಅಮೃತಬಳ್ಳೀ, ಅತಿಬಜೆ, ಶುಂಠಿ, ಕೊನ್ನಾರಿಗಳಿಂದ ಮಾಡಿದ ಕಷಾಯಕ್ಕೆ ಉತ್ತಮಾಜಾತಭದ್ರವೆಂದು ಹೆಸರು, ಈ ಕಷಾಯವು ದೀಪನೆಯನ್ನುಂಟುಮಾಡಿ ಪಾಚನವನ್ನುಮಾಡಿ ಗ್ರಹಣೀಯನ್ನು ಪರಿಹರಿಸುವದು.

೨. ನೆಲಹೊನ್ನೆ, ಶುಂಠಿ, ಬಿಲ್ವದಫಲ, ಕಳ್ಳಂಗಡ್ಲೆಬೇರು, ಕೊತ್ತುಂಬರಿಗಳ ಕಷಾಯಕ್ಕೆ ಸಕ್ಕರೆಯನ್ನು ಬೆರಸಿಕೊಟ್ಟರೆ ಹೊಟ್ಟೆ ಯುಬ್ಬರಉಳ್ಳ ಸಂಗ್ರಹಣಿ ಹರವು.

೩. ಮಾದಲದ ಹುಳಿಯಲ್ಲಿ ತುಪ್ಪವನ್ನು ಹಾಕಿ ಕಾಸಿ ಆ ತುಪ್ಪವನ್ನು ತಿಂದು ಅದೇಹುಳಿಯಲ್ಲಿ ತೈಲವನ್ನುಹಾಕಿ ಕಾಸಿ ಮೈಗೆಲ್ಲಾ ಲೇಪಿಸೆ ವಾತಸಂಗ್ರಹಣೀಗೆ ಹಿತಕರವಹುದು.

೨. ಪಿತ್ತಗ್ರಹಣೀಗೆ ಔಷಧಗಳು.—

೧. ತಣ್ಣೀರಿನಲ್ಲಿ ಬೆಲ್ಲದ ಪಾನಕವಂ ಮಾಡಿ ಕೊಟ್ಟರೆ ಗುಲ್ಮ ಸಂಗ್ರಹಣೀ, ಕಾಮಾಲೆ, ಪಾಂಡು, ಮೇಹ, ಅರುಚಿ, ಅತಿಸಾರಗಳು ಪರಿಹರವಾಗುತ್ತವೆ.

೨. ನೆಲನೇವು, ಇಂದ್ರಜವೆ, ಕಮಲಗಡ್ಡೆ, ಹಿಪ್ಪಲಿ, ವಡವಿನ ಗಿಡಗಳನ್ನು ತುಪ್ಪಕ್ಕೆಹಾಕಿ ಕಾಸಿಕೊಟ್ಟರೆ ಬಲಹೀನವಾದ ಗ್ರಹಣಿಯು ಪರಿಹರವಾಗುತ್ತೆ.

೩. ಶ್ಲೇಷ್ಮಗ್ರಹಣೀಗೆ ಔಷಧಗಳು.—

೧. ಹಿಪ್ಪಲಿ, ಮಧುಗಳನ್ನು ಕೊಟ್ಟರೆ ಗ್ರಹಣಿಹರವು.

೨. ಚಿತ್ರಮೂಲವನ್ನು ಮಜ್ಜಿಗೆಯಲ್ಲಿ ಹಾಕಿ ಕೊಟ್ಟರೆ ಶ್ಲೇಷ್ಮಗ್ರಹಣಿಯು ಪರಿಹರವಹುದು.

೩. ಬಿಲ್ವವನ್ನು ತೆಗೆದುಕೊಂಡರೆ ಶ್ಲೇಷ್ಮ ಗ್ರಹಣಿಯು ಪರಿಹರವಾಗುತ್ತೆ.

೪. ಬೆಲ್ಲವನ್ನು ಮಜ್ಜಿಗೆಗೆ ಹಾಕಿ ಕೊಟ್ಟರೆ ಶ್ಲೇಷ್ಮ ಗ್ರಹಣಿಯು ಪರಿಹರವಾಗುತ್ತೆ.

೫. ಹಸುವಿನ ಮಜ್ಜಿಗೆಯಲ್ಲಿ ಸಂವರ್ಚಲವಣ, ಚಿತ್ರಮೂಲಗಳನ್ನು ಹಾಕಿ ಕೊಟ್ಟರೆ ಶ್ಲೇಷ್ಮ ಗ್ರಹಣಿಹರವು.

೬. ಅರಿಸಿನ, ಬಜೆ, ಕೋಷ್ಠ, ಮರದರಿಸಿನ, ಚಿತ್ರಮೂಲ, ಕಟುಕರೋಹಿಣಿ, ಕೊನ್ನಾರೀ ಗೆಡ್ಡೆಗಳ ಬೂದಿಯನ್ನು ಆಡಿನ ಮೂತ್ರದಲ್ಲಿ ಹಾಕಿ ತೆಗೆದುಕೊಂಡರೆ ದೀಪನೆಯಾಗಿ ಗ್ರಹಣಿ ಪರಿಹರವಾಗುತ್ತೆ.

೭. ಕ್ಷಾರದ್ವಯ, ಪಂಚಮೂಲ, ಸೈಂಧವಲವಣ, ಶುಂಠಿ, ಹಿಪ್ಪಲಿ, ಮೆಣಸು, ರಾಸ್ನೆ, ಅಳಲೆ, ಕಚೋರಗಳ ಚೂರ್ಣವನ್ನು ಮಾದಲದ ಹಣ್ಣಿನಲ್ಲಿ ತೆಗೆದುಕೊಂಡರೆ ಬಲ ಉಂಟಾಗಿ ಶ್ಲೇಷ್ಮ ಗ್ರಹಣಿಯು ಪರಿಹರವಾಗುತ್ತೆ.

ವಾತದಿಂದ ಹುಟ್ಟಿದ ಹೊಟ್ಟೇನೋವನ್ನು ಮೊದಲಲ್ಲಿಯೂ, ಅನಂತರ ಪಿತ್ತದಿಂದ ಹುಟ್ಟಿದ್ದನ್ನೂ, ಅನಂತರ ಕಫದಿಂದ ಹುಟ್ಟಿದ ಹೊಟ್ಟೆಬೇನೆಯನ್ನು ಸಹ ಕ್ರಮವಾಗಿ ನಿಲ್ಲಿಸಬೇಕು.

೪ ಸರ್ವಗ್ರಹಣೀಗೆ ಔಷಧಗಳು.

೧. ಹಿಪ್ಪೇಹೂವಿನ ರಸವನ್ನು ಅರ್ಧಾಂಶ ನಿಲ್ಲುವಂತೆ ಒಂದು ತಿಂಗಳು ಇಟ್ಟು ಆ ನಿಂತ ಮದ್ಯದ ಪೈಕಿ ಚಾತುರ್ಭಾಗವನ್ನು ತೆಗೆದುಕೊಂಡರೆ ಗ್ರಹಣೀ ಪರಿಹರವು.

೨. ಮೂರುಪ್ಪು, ಹಿಪ್ಪಲಿ, ಮೆಣಸು, ಶುಂಠಿ, ಗೇರುಬೀಜದ ಕ್ಷಾರಗಳ ಒಂದು ಕರ್ಷವನ್ನು ತುಪ್ಪದಲ್ಲಿ ಹಾಕಿಕೊಟ್ಟರೆ ಶೂಲೆ, ಗುಲ್ಮ, ಗ್ರಹಣೀಗೆ ಹಿತವು.

೩. ಜಾಜಿಕಾಯಿ, ಶುಂಠಿ, ಮೆಣಸು, ಹಿಪ್ಪಲಿ, ದಾಲಚಿನ್ನಿ, ಯಾಲಕ್ಕಿ ತಮಾಲಪತ್ರ, ಕೊತ್ತುಂಬರಿಗಳ ತೂಕಕ್ಕೆ ಎರಡರಷ್ಟು ಭಂಗೀಸೊಪ್ಪು,

ನ್ನು ನಾಲ್ಕರಷ್ಟು ಸಕ್ಕರೆಯನ್ನು ಹಾಕಿ ತೆಗದುಕೊಂಡರೆ ಗ್ರಹಣೀಗೆ ಹಿತವು.

೪. ಪಂಚಲವಣ, ಶುಂಠಿ, ಹಿಪ್ಪಲಿ, ಮೆಣಸು, ಯಿಂಗು, ಅಜವಾನ, ಇಂದ್ರಜವೆ, ಚಿತ್ರಮೂಲ, ಮೋಡಿ, ಎರಡು ಖಾರಗಳನ್ನು ಚೂರ್ಣವನ್ನು ಸಮಭಾಗವಾಗಿಮಾಡಿ ದಾಳಿಂಬ, ಬೋರೆ, ಮಾದಳದ ಫಳಗಳಿಂದಾ ತೊಲೆಯನ್ನು ತೆಗದುಕೊಂಡರೆ ಅಗ್ನಿ ದೀಪನೆಯಾಗಿ ಪಾಚನೆಯಾಗುತ್ತೆ.

೫. ಗುಳ್ಳೆಕಂಬದ ಭಸ್ಮಕ್ಕೆ ಸೈಂಧವಲವಣ, ಜೇನು ಸಹ ಹಾಕಿ ತೆಗದುಕೊಂಡರೆ ಗ್ರಹಣೀಯು ಪರಿಹರವಹುದು,

೯ ರಕ್ತಪೈತ್ಯಕ್ಕೆ ಔಷಧಗಳು.

೧ನೇ ಭಾಗಕ್ಕೆ.—

೧. ಹೊಸದಾದ ರಕ್ತಪೈತ್ಯಕ್ಕೆ ಸೇರಿರುವ ರೋಗಗಳನ್ನು ತಿಳದು ಔಷಧವನ್ನು ಮಾಡಿದರೆ ಹಿತವಾಗುತ್ತೆ.

೨. ರಕ್ತವು ವಾಂತಿಯಲ್ಲಿ ಹೋಗುತ್ತಿದ್ದರೆ ಪ್ರವರ್ತಿಗೆ ಕೊಡು. ಪ್ರವರ್ತಿಯಲ್ಲಿ ರಕ್ತ ಹೋಗುತ್ತಿದ್ದರೆ ವಮನಕ್ಕೆ ಕೊಡಬೇಕು, ಈ ಎರಡು ಬಗೆಗಳಿಗೂ ಯುಕ್ತವಾದ ವಿಷ, ವಗರು, ೀ ರಸಗಳನ್ನು ಕೊಡಬೇಕು.

೩. ಲಂಘನವನ್ನು ಮಾಡಿಸಬೇಕು. ಅನಂತರ ವೈ ಧಪ್ಪವಾಗುವಂತೆ ಮಾಡಬೇಕು, ತಂಪಿನ ಔಷಧಿ ಕೊಡಬೇಕು ಆದಿಯಲ್ಲಿ ಥಕ್ಕನೆ ರಕ್ತವನ್ನು ನಿಲ್ಲಿಸಕೂಡದು, ನಿಲ್ಲಿಸಿದರೆ ಬದಲು ರೋಗೋತ್ಪತ್ತಿಯಾಗುತ್ತೆ.

೨ನೇ ಭಾಗ—ಔಷಧಗಳು.

೧ ಲಾಮಂಚ, ಆಲದಬೀಳು, ಮಾವು, ನೇರಳೆಗಳ ಚಿಗರುಗಳನ್ನು ಸಹ ಹಾಕಿ ಕಷಾಯವನ್ನು ಮಾಡಿ ಜೇನುಹಾಕಿಕೊಟ್ಟರೆ ವಾಂತಿ, ಅರುಚಿ, ಜ್ವರ, ಪ್ರವರ್ತಿಗಳು ಪರಿಹಾರವಾಗುತ್ತೆ.

೨. ಗಂಧ, ದಾಳಿಂಬ, ದ್ರಾಕ್ಷಿ, ಜೇನು, ಸಕ್ಕರೆಗಳನ್ನು ಅಕ್ಕಿಕಟ್ಟಿನಲ್ಲಿ ಅರದುಕೊಟ್ಟರೆ ಶ್ಲೇಷ್ಮದಿಂದ ಹುಟ್ಟಿದ ವಮನವು ಪರಿಹರವಾಗುತ್ತೆ.

೩. ನೇರಳೆ, ಮಾವುಗಳ ವ್ಯಾಣವನ್ನು ಬೆಲ್ಲ ಜೇನುಗಳಲ್ಲಿ ಅರದುಕೊಟ್ಟರೆ ವಾಂತಿ ಅತಿಸಾರಗಳು ಹರವು.

೪. ಅಮೃತಬಳ್ಳಿ, ಅಥವಾ ಬ್ಯಾಲ, ಅಥವಾ ಬೇವಿನ ಕಷಾಯದಲ್ಲಿ ಜೇನು ಹಾಕಿಕೊಟ್ಟರೆ ತ್ರಿದೋಷವಾಂತಿ ಹರವಹುದು.

೫. ಶುಂಠಿ, ಬೆಲ್ಲ ಅರಳುಗಳ ಕಷಾಯವನ್ನು ಸ್ವಲ್ಪ ಬಿಸಿಯಾಗಿರುವಾಗ ತೆಗದುಕೊಂಡರೆ ವಾತಪಿತ್ತ ವಾಂತಿ ಹರವು.

೬. ಆಡಿನ ಹಾಲಿಗೆ ಹುಳಿಯನ್ನು ಹಿಂಡಿದರೆ ಒಡೆಯುತ್ತೆ, ಅದರ ಜೊಂಡಂನು ತೆಗದು ನೀರನ್ನು ತೆಗದುಕೊಂಡರೆ ವಾಂತಿ ಸಾರಣೆಗಳು ಹರವಹವು.

೭. ಶುಂಠಿ, ಖೂರುಗಗಳ ಕಷಾಯವನ್ನು ತೆಗದುಕೊಂಡರೆ ವಾಂತಿ ಸಾರಣೆ ಹರವು.

೮. ಎಳೆದುಂಬೆ, ಲಕ್ಕಿ, ಸಕ್ಕರೆಗಳನ್ನು ಅರೆದುಕೊಟ್ಟರೆ ವಾಂತಿ ಹರವು.

೯. ಕರಿತುಲಸಿ ಕಬ್ಬುಗಳ ರಸಗಳನ್ನು ಕೂಡಿಸಿ ಅದಕ್ಕೆ ಯಾಲಕ್ಕಿಯನ್ನು ಹಾಕಿಕೊಟ್ಟರೆ ವಾಂತಿ ಹರವು.

೧೦. ಕ್ರಿಮಿಯಿಂದಕೂಡಿದ ವಾಂತಿಗೆ ಕ್ರಿಮಿ ರೋಗಕ್ಕೆ ಹೇಳಿದ ಔಷಧವನ್ನು ಕೆಟ್ಟವಾಸನೆಯಿದ್ದರೆ ಒಳ್ಳೇ ಭೋಜನವನ್ನು ಕೊಟ್ಟು ಗಂಧವನ್ನು ಲೇಪಿಸಬೇಕು.

೧೧. ಕೊನ್ನಾರಿಗೆಡ್ಡೆ ಕಷಾಯದಲ್ಲಿ ಜೇನು ಸಕ್ಕರೆಯನ್ನು ಹಾಕಿಕೊಟ್ಟರೆ ಓಕರಿಕೆ, ಜ್ವರ, ಶ್ವಾಸೋದ್ರೇಕ ಅತಿಸಾರ ತೃಷೆಗಳು ಹರವು.

೧೨. ಒಂದು ಪಾವು ನೆಲ್ಲೀ ರಸದಲ್ಲಿ ಒಂದು ತೊಲೆ ಗಂಧವನ್ನು ಪುಡಿಮಾಡಿಹಾಕಿ ಜೇನುಹಾಕಿಕೊಟ್ಟರೆ ವಾಂತಿ ಹರವು.

೧೩. ಅಳಲೆ, ತಾರೆ, ನೆಲ್ಲಿ, ತಿಗಡೆ, ಎರಡು ಹಿಪ್ಪಲಿ ಇವುಗಳಿಗೆ ನಾಲ್ಕರಷ್ಟು ಸಕ್ಕರೆಯನ್ನು ಹಾಕಿ ಕಷಾಯವನ್ನುಮಾಡಿ ಜೇನುಹಾಕಿ ಒಂದು ತೊಲೆಯನ್ನು ತೆಗದುಕೊಂಡರೆ ರಕ್ತಪೈತ್ಯಹರ, ಪ್ರವರ್ತಿಕಾರಿ.

೧೪. ಮಂಗಾರೆಯಫಲವನ್ನು ವಮನಕ್ಕೆ ಕೊಟ್ಟು ದೇಹಕ್ಕೆ ಆಪ್ಯಾಯನವಾಗುವದಕ್ಕೆ ಜಲ, ಜೇನು, ಮತ್ತು ಗೋಕ್ಷೀರ, ತುಪ್ಪ, ಅರಳಿನ ಪುಡಿಗಳನ್ನು ತಿನ್ನುವದಕ್ಕೆ ಕೊಡಬೇಕು.

೧೫. ಬೆಣ್ಣೆ, ಸಕ್ಕರೆ, ನೆಲ್ಲರಳನ್ನು ದ್ರಾಕ್ಷಿಯನ್ನು ತಿಂದು ಸಪ್ಪೆ ತುಪ್ಪವನ್ನು ತಲೆಗೆ ಹತ್ತಿಸಿದರೆ ರಕ್ತಪೈತ್ಯ ಹರವು.

೧೬. ಬಿಲ್ವದ ಫಲ, ಲಾಮಂಚ, ತುರಚೆ, ದಾಳಿಂಬದ ಹೂವು, ಇವುಗಳ ಕಷಾಯದಲ್ಲಿ ನೆಲ್ಲರಳು ಹಾಕಿ ಗಂಜಿಯನ್ನುಮಾಡಿ ಆರಿಸಿ ಸಕ್ಕರೆಹಾಕಿ ಕೊಟ್ಟರೆ ಪಿತ್ತಾತಿಸಾರ ಹರವು.

೧೭. ನೆಲ್ಲು ಹೆಸರುಗಳನ್ನು ಕುದಿಸಿದ ಜಲದಲ್ಲಿ ಅರಳನ್ನು ಹಾಕಿ ಗಂಜೀಮಾಡಿ ಸಕ್ಕರೆ ಜೇನುಗಳನ್ನು ಹಾಕಿ ಕೊಟ್ಟರೆ ರಕ್ತಪೈತ್ಯ ಹರವು.

೧೮. ಹಸುವಿನ ಸಗಣಿಯನ್ನು ಹಿಂಡಿ ಪಾವು ರಸವನ್ನು ತೆಗದು ಅದಕ್ಕೆ ಜೇನು ತುಪ್ಪಗಳನ್ನು ಹಾಕಿ ಕೊಟ್ಟರೆ ಪೈತ್ಯೋದ್ರೇಕದ ರುಚಿ ಹರವು.

೧೯. ಶೀಘ್ರಿ, ನೆಗ್ಗಿಲು ಅಥವಾ ಜೇಷ್ಠಮಧು, ಕಳ್ಳಂಗಡೆಗಳನ್ನಾಗಲಿ ಹಾಲಿನಲ್ಲಿ ಬೇಯಿಸಿ ಆ ಹಸುವಿನ ಹಾಲನ್ನು ತೆಗದುಕೊಂಡರೆ ರಕ್ತಪಿತ್ತ ಹರವು.

೨೦. ಆಲದ ಬೀಳು, ಲಾಮಂಚ, ಬೂರುಗದ ಮ್ಯಾಣ, ಶುಂಠಿ, ಉತ್ತತ್ತಿಕಾಯಿ, ಕ್ಷೀರದಲ್ಲಿ ಹಾಕಿ ಕಾಸಿ ಕುಡಿದರೆ ರಕ್ತಪಿತ್ತಕ್ಕೆ ಹಿತಕರವು.

೨೧. ಉತ್ತತ್ತಿ, ಲಾಮಂಚ, ದ್ರಾಕ್ಷಿ, ದಾಳಿಂಬದ ಹಣ್ಣು, ಗಂಧ, ಜೇಷ್ಠಮಧು, ಹಿಪ್ಪೇಹೂವು, ಲಕ್ಕಿ, ದಾಳಿಂಬಗಳ ತೊಗಟೆ, ಒಂದು ತೊಲೆ ಸಕ್ಕರೆಯನ್ನು ಸಹ ಹಾಕಿ ಅರದು ಕೊಟ್ಟರೆ ರಕ್ತಪೈತ್ಯಕ್ಕೆ ಹಿತವು.

೨೨. ನೆಲ್ಲಿಕಾಯಿನ ಚೂರ್ಣಕ್ಕೆ ಸಕ್ಕರೆಯನ್ನು ಹಾಕಿ ವಂದುತೊಲೆಯನ್ನ ಕೊಟ್ಟರೆರಕ್ತಪೈತ್ಯ ಬಾಯಾರಿಕೆಗಳು ಹರವು.

೨೩. ಭತ್ತದರಳು ಸಕ್ಕರೆಗಳನ್ನು ತಿಂದರೆ ರಕ್ತಪೈತ್ಯ ಬಾಯಾರಿಕೆಗಳು ಹರವು.

೨೪. ಅತ್ತೀಹಣ್ಣನ್ನು ತುಪ್ಪದಲ್ಲಿ ಕರದು ಅದಕ್ಕೆ ನಾಲ್ಕುಪಾಲುಸಕ್ಕರೆ ಹತ್ತರಲ್ಲಿ ವೊಂದುಪಾಲು ಮೆಣಸು, ಲಕ್ಕೀ ಸಹ ಹಾಕಿ ಅರದುಕೊಟ್ಟರೆ ರಕ್ತಪೈತ್ಯ ಹರವು.

೨೫. ಸಹಮೂಲವಾಗಿ ಅಡುಸೋಗೆಯನ್ನು ಕಷಾಯಮಾಡಿ ಅದರ ಸಮತುಪ್ಪವನ್ನು ಹಾಕಿ ಕೊಟ್ಟರೆ ಪಿತ್ತ ಪ್ರವರ್ತಿ ಹರವು.

೨೬. ಜೇನಿನಲ್ಲಿ ಅಳಲೆ ಪುಡಿಯನ್ನು ಹಾಕಿ ಕೊಟ್ಟರೆ ಜಠರಾಗ್ನಿ ವೃದ್ಧಿಯಾಗಿ ಅತಿಸಾರ, ರಕ್ತಪಿತ್ತಶೂಲೆ ಶ್ಲೇಷ್ಮಗಳು ಪರಿಹರವಾಗುತ್ತವೆ.

೨೭. ಮುತ್ತುಗದ ಚಕ್ಕೆಯ ಅರೆಪಾವು ಕಷಾಯಕ್ಕೆ ವೊಂದು ತೊಲೆ ಮಧುವೆರದು ಕೊಟ್ಟರೆ ದೃಢವಾದ ರಕ್ತಪೈತ್ಯ ಹರವು.

೨೮. ವೊಂದು ಪಾವು ಅಡ್ಡಸರದ ರಸ, ನೆಲಬೇವು, ಕಟುಕರೋಹಿಣಿಗಳನ್ನು ಹಾಕಿ ಸಕ್ಕರೆ ಹಾಕಿ ಕೊಟ್ಟರೆ ರಕ್ತಪೈತ್ಯ ಹರವು.

೨೯. ತಾಳೀಸಪತ್ರೆಯ ಪುಡಿಯನ್ನು ಅಡ್ಡಸರದ ರಸದಲ್ಲಿ ಹಾಕಿಕೊಟ್ಟರೆ ಕಾಸ ಶ್ವಾಸ, ರಕ್ತಪೈತ್ಯಗಳು ಪರಿಹರವು.

೩೦. ಅಡ್ಡಸರದ ಕಷಾಯಕ್ಕೆ ಆಗಲಿ, ರಸಕ್ಕೆಆಗಲಿ, ಸಕ್ಕರೆ ಜೇನು ಹಾಕಿ ಕೊಟ್ಟರೆ ರಕ್ತಪೈತ್ಯಹರವು.

೩೧. ಅಡ್ಡಸರವು ಜೇನು ಕೂಡಿದರೆ ಶ್ವಾಸ, ಕಾಸ, ದೊಡ್ಡಕ್ಷಯ, ರಕ್ತಪೈತ್ಯಗಳು ಹರವಹವು.

೩೨. ಅಡುಸೋಗೆ ರಸದಲ್ಲಿ ಭಾವನೆಮಾಡಿದ ಅಳಲೆಪುಡಿಗೆ ಹಿಪ್ಪಲಿಪುಡಿ ಜೇನುಹಾಕಿ ಕೊಟ್ಟರೆ ರಕ್ತಪೈತ್ಯ ಹರವು.

೩೩. ಪಾರಿವಾಳದ ಪಕ್ಷಿಯ ಹಿಕ್ಕೆಯನ್ನು ಜೇನಿನಲ್ಲಿ ಹಾಕಿ ಕೊಡುವದರಿಂದಲೇ ಆಗಲಿ ಅಥವಾ ಅದರ ರಕ್ತಕ್ಕೆ ಜೇನುಹಾಕಿ ಕೊಡುವದರಿಂದಲೇ ಆಗಲಿ ವಾಂತಿಯಲ್ಲಿ ರಕ್ತದ ಗಡ್ಡೆಗಳು ಬೀಳುತ್ತಿದ್ದರೆ ಪರಿಹರವಾಗುತ್ತವೆ.

೩೪. ಅಕ್ಕಿತೊಳದ ನೀರಿನಲ್ಲಿ ತೊರೆಮತ್ತಿಯನ್ನರದು ವೊಂದುಪಾವು ಕೊಟ್ಟರೆ ರಕ್ತಪೈತ್ಯ ಹರವು.

೩೫. ತೊರೆಮತ್ತಿ ಚಂದನಗಳನ್ನು ನೀರಲ್ಲಿ ಅರದುಕೊಟ್ಟರೆ ರಕ್ತಪೈತ್ಯಹರವು.

೩೬. ತರಿಯು, ಕಂಚವಾಳ, ಬೂರುಗ, ಮುರಕಿಗಳ ಹೂವುಗಳ ಚೂರ್ಣಕ್ಕೆ ಜೇನುಹಾಕಿ ಕಲೆಸಿದರಿಂದ ನೆಕ್ಕಿದರೆ ಶೀಘ್ರವಾಗಿ ರಕ್ತಪೈತ್ಯ ಹರವು.

೩೭. ಅತ್ತಿಯ ಹಣ್ಣೆಲೆ, ದ್ರಾಕ್ಷಿ, ಖರ್ಜೂರ, ಆಳಲೆ, ಚಪ್ಪದ್ರಾಕ್ಷಿಗಳನ್ನು ಅರದು ಅಧಿಕವಾಗಿ ಜೇನುಹಾಕಿ ಕೊಟ್ಟರೆ ರಕ್ತಪೈತ್ಯಹರವು.

೩೮. ಉಸರಲ್ಲಿ ಕಬ್ಬಿನನಾತ, ತೇಗಿನಲ್ಲಿ, ಮೂತಿನಲ್ಲಿ, ಹೊಗೆವಾಸನೆಗಳು ಬರುತ್ತಿದ್ದರೆ ದ್ರಾಕ್ಷಿಗೆ ಎರಡುಪಾಲು ಸಕ್ಕರೆಹಾಕಿ ವೊಂದು ತೊಲೆಯನ್ನು ತೆಗದುಕೊಂಡರೆ ಪೈತ್ಯದ ಶ್ರಮ ಹರವು.

೧ ಹೃದ್ರೋಗಕ್ಕೆ ಔಷಧಗಳು.

೧. ಬಿಸಿಯಾದ ನೀರಿಗೆ ಬೆಲ್ಲವನ್ನು ಹಾಕಿಕೊಟ್ಟರೆ ವಾತ ಹೃದ್ರೋಗ ಹರವು.

೨. ಮಜ್ಜಿಗೆ ಅಥವಾ ಮೊಸರಿಗೆ ಆಗಲಿ ಬೆಲ್ಲವನ್ನು ಹಾಕಿಕೊಟ್ಟರೆ ವಾತ ಹೃದ್ರೋಗ ಹರವು.

೩. ದಾಳಿಂಬ, ನಿಂಬೇಬೀಜ, ಕೋಷ್ಟ, ಶುಂಠಿ, ಸೈಂಧವಲವಣ, ಇಂಗುಗಳ ಚೂರ್ಣವು ಎದೆನೋವನ್ನು ಪರಿಹರಿಸುತ್ತದೆ.

೪. ಲಘುಪಂಚಮೂಲದ ಕಷಾಯವು ವಾತ ಹೃದ್ರೋಗ ಹರವು.

೫. ಕಾಡುಕಡಲೆ ತೊಗಟೆಯನ್ನು ಹಾಲಿನಲ್ಲಿ ಹಾಕಿ ಕಾಸಿ ಆ ಹಾಲನ್ನು ಕೊಟ್ಟರೆ ಹೃದ್ರೋಗ ಹರವು.

೬. ಐವತ್ತು ಆಳಲೇಕಾಯಿ, ಸೌವರ್ಚಲ ಲವಣದಪುಡಿ ಅರ್ಧಶೇರುಗಳನ್ನು ನಾಲ್ಕುಶೇರು ತುಪ್ಪದಲ್ಲಿ ಹಾಕಿ ಕಾಸಿ ತೆಗದುಕೊಂಡರೆ ಹೃದ್ರೋಗ ಗುಲ್ಮ ದುಶ್ವಾಸಗಳು ಹರ.

೭. ದಶಮೂಲದಕಷಾಯದಲ್ಲಿ ಯವಕ್ಷಾರ ಸೈಂಧವಲವಣಗಳನ್ನು ಹಾಕಿ ಕೊಟ್ಟರೆ ಹೃದ್ರೋಗ, ಅರುಚಿ, ಗುಲ್ಮ, ಶೂಲೆಗಳು ಹರವಹವು.

೮. ಪಂಚಲವಣಗಳನ್ನು ಕೈಯಣ್ಣೆಯಲ್ಲಿ ಹಾಕಿ ಕಾಇದ ಎಣ್ಣೆಯನ್ನು ಕೊಟ್ಟರೆ ವಾತ ಹೃದ್ರೋಗ ಹರವು.

೯. ಕೈಯಷ್ಟೆಯನ್ನು ಆಡಿನ ಮೂತ್ರದಲ್ಲಿ ಹೊಳೆಟ್ಟು ತೆಗೆದುಕೊಂಡರೆ ವಾತ ಹೃದ್ರೋಗ ಹರವು.

೧೦. ವೊಂದುಪಾವು ಬಿಳಿಯಾಗಿರುವ ಶುಂಠಿಯ ಕಷಾಯವನ್ನು ತೆಗೆದುಕೊಂಡರೆ ದೀಪನೆಯಾಗಿ ಹೃದ್ರೋಗ, ಶ್ವಾಸ, ಕಾಸಗಳು ಪರಿಹರವಾಗುತ್ತದೆ.

೧೧. ಸಕ್ಕರೆ, ಜೇನು, ಕಬ್ಬು, ದ್ರಾಕ್ಷಿಗಳಿಗೆ ಪ್ರವರ್ತಿಮಾಡಿಸತಕ್ಕ ಮೂಲಿಕೆಯನ್ನು ಹಾಕಿ ಅರದು ಕೊಟ್ಟರೆ ಮಲಸಡಲಿ, ಪಿತ್ತದ ವುರಿ ಪರಿಹರವಾಗುತ್ತೆ.

೧೨. ಕಟುಕರೋಹಿಣಿ, ಜೇಷ್ಠಮಧುಗಳನ್ನು ಸಕ್ಕರೆ ಪಾನಕಕ್ಕೆ ಹಾಕಿ ವೊಂದು ತೊಲೆ ಪಾನಕವನ್ನು ತೆಗೆದುಕೊಂಡರೆ ಪೈತ್ಯ ಹೃದ್ರೋಗಹರವು.

೧೩. ಬೂದಗುಂಬಳದ ರಸದಲ್ಲಿ ವೊಂದು ದುಡ್ಡುತೂಕ ಅರಿನವನ್ನು ಪುಡಿ ಮಾಡಿ ಹಾ ದಕೊಡ್ಲೆ ತೆಗೆದುಕೊಂಡರೆ ಹೃದ್ರೋಗ ಪರಿಹರವಾಗುತ್ತೆ, ಮತ್ತು ಕ್ಷಯರಕ್ತಗಳ ಸಂಕ್ಷಯ ಸಹ ಪರಿಹರವಾಗುತ್ತೆ.

೧೪. ತೊರಮತ್ತೀ ಚಕ್ಕೆಯನ್ನಾಗಲಿ ಜೇಷ್ಠಮಧುವನ್ನಾಗಲಿ ಹಾಲಿನಲ್ಲಿಹಾಕಿ ಕಾಸಿದ್ದನ್ನು ತೆಗೆದುಕೊಂಡರೆ ಹೃದ್ರೋಗ ಹರವು.

೧೫. ಕಫ ಹೃದ್ರೋಗಕ್ಕೆ ವಾಂತಿಗೆ ಕೊಡಬೇಕು ಅನಂತರ ಬಜೆಯ ಕಷಾಯವನ್ನಿತ್ತು ಜವೆಗೋಧಿ, ಹುರಳಿಗಳ ಪದಾರ್ಥಗಳನ್ನು ತಿನ್ನಿಸಿ ತೀಕ್ಷ್ಣವಾದಮದ್ಯವನ್ನು ಕುಡಿಸಬೇಕು.

೧೬. ಬಜೆ, ಇಂಗು, ಎರಡುಪ್ಪು, ಶುಂಠಿ ಪುಡಿಗಳನ್ನು ಹಾಕಿ ಕಷಾಯವಂನು ಕೊಟ್ಟರೆ ಕಫ ಹೃದ್ರೋಗ ಹರವು.

೧೭. ಶುಂಠಿ, ಕೋಷ್ಟ, ರಾಸ್ನೆ, ಹಿಪ್ಪಲಿ, ಬಜೆ, ಪುಷ್ಕರಮೂಲ, ಅಣಲೆಗಳ ಕಷಾಯವಂನು ಕೊಟ್ಟರೆ ಕಫ ಹೃದ್ರೋಗ ಹರವು.

೧೮. ಬಿದರಿನ ಗೆಡ್ಡೆ ಚೂರ್ಣಕ್ಕೆ ಹಳೇಬೆಲ್ಲ ಮೆಣಸು ತುಪ್ಪಗಳಂನು ಹಾಕಿ ಅರೆದು ಗುಳಿಗೆಮಾಡಿ ಕೊಟ್ಟರೆ ಎದೆನೋವು ಹರವು.

೧೦. ವಾಂತಿಗೆ ಔಷಧಗಳು.

೧. ಅಮೃತಬಳ್ಳಿ, ಕೊನ್ನಾರಿ, ಗರಿಕೆ, ಮೆಣಸು, ಶುಂಠಿ, ಯಾಲಕ್ಕಿಗಳ ಕಷಾಯಕ್ಕೆ ಜೇನುಹಾಕಿ ತೆಗೆದುಕೊಂಡರೆ ವಾತದಿಂದ ಹುಟ್ಟಿದ ವಾಂತಿ ಹರವು.

೨. ವಾಂತಿಯಾಗುವವನಿಗೆ ಲಂಘನವು ಹಿತವು. ಅರಳು, ಸಕ್ಕರೆ ಹೆಸರು ಜೇನುಗಳು ಹಿತವು, ಗಂಧ ಲೇಪನವು ಹಿತವು, ಸೈಂಧವಲವಣ ಹಾಕಿದ ತುಪ್ಪವು ಹಿತವಾಗುತ್ತದೆ.

೩. ಮಾದಳ, ಮಾವು, ನೇರಳೆಗಳ ಚಿಗರುಗಳಿಂದಲಾಗಲಿ, ಅವುಗಳ ಬೇರುಗಳನ್ನು ಪುಟ ಹಾಕಿಯೇಆಗಲಿ ರಸವನ್ನು ತೆಗದು ಜೇನು ಹಾಕಿ ಕೊಟ್ಟರೆ ವಾಂತಿಹರವು.

೪. ಜೋರೆ ಹಣ್ಣು, ಭತ್ತದಅರಳುಗಳನ್ನು ಅರದ ಮುದ್ದೆಯನ್ನು ಬಟ್ಟೆಯಲ್ಲಿ ಹಾಕಿ ಗಂಟುಕಟ್ಟಿ ನೀರಿನಲ್ಲಿ ಹಿಸಿಕಿದರೆ ನೀರಿಗೆ ಕೇರುವ ಶುದ್ಧರಸಕ್ಕೆ ಜೇನು ಹಾಕಿ ಕೊಟ್ಟರೆ ವಾಂತಿಹರವು.

೫. ಮಾವಿನವಾಟೆ ತಿಳಲು, ಅರಳು, ಸೈಂಧವಲವಣಗಳನ್ನು ಚೂರ್ಣಮಾಡಿ ಜೇನಿನಿಂದ ಕಲಸಿ ಕೊಟ್ಟರೆ ವಾಂತಿಹರವು.

೬. ಒಂದುಪಲ ಅಂದರೆ ಮೂರುತೊಲ ದಶಮೂಲಗಳನ್ನು, ಅರ್ಧಶೇರು ಹಾಲನ್ನು, ನಾಲ್ಕುಶೇರು ನೀರನ್ನು ಸಹ ಕೂಡಿಸಿ ನೀರು ಬತ್ತುವವರೆಗೂ ಕಾಸಿ ಬಿಸಿಯಾದ್ದನ್ನು ಕೊಟ್ಟರೆ ವಾಂತಿ, ಪಾಂಡು, ಹಳೇಜ್ವರಗಳು ಸಹ ಪರಿಹಾರವಾಗುತ್ತೆ.

೭. ಕಬ್ಬು, ದ್ರಾಕ್ಷೀರಸದಲ್ಲಿ ತಿಗಡೆ ಪುಡಿಯನ್ನು ಹಾಕಿ ಕೊಟ್ಟರೆ ಪ್ರವರ್ತಿಯಾಗಿ ಪಿತ್ತದ ವಾಂತಿ ಶಾಂತಿಯಾಗುತ್ತೆ.

೮. ಹಳೇಹೆಂಟೆಯನ್ನು ಬೆಂಕಿಯಲ್ಲಿ ಹಾಕಿ ಕಾದದ್ದನ್ನು ನೀರಿನಲ್ಲಿ ಹಾಕಿ ಆ ನೀರನ್ನು ಸೋದಿಸಿಕೊಟ್ಟರೆ ವಾಂತಿಹರವು.

೯. ಕಬ್ಬನ್ನು ಪುಟಕ್ಕೆ ಹಾಕಿ ಕೊಟ್ಟರೆ ವಾಂತಿಗೆ ಹಿತವು.

೧೦. ಹಾಲು ನೀರು ಸಮವಾಗಿ ಬೆರಸಿ ನೀರು ಬತ್ತುವವರಿಗೂ ಕಾಸಿ ಕೊಟ್ಟರೆ ವಾಂತಿಗೆ ಹಿತವು.

೧೧. ಅರಳಿನಗಂಜಿಯಾಗಲಿ ವಾ ಅರಳನ್ನುನೆನಸಿ ಅದನ್ನು ಮಥಿಸಿ ಅನೊರಗೆ ಮಧು, ಸಕ್ಕರೆಗಳನ್ನು ಹಾಕಿ ಕೊಟ್ಟರೆ ವಾಂತಿಹರವು.

೧೨. ಯಾಲಕ್ಕಿ, ನಾಗಕೇಸರಿ, ಲವಂಗ, ಸಕ್ಕರೆ, ಕಮಲಗೆಡ್ಡೆಗಳನ್ನು ಅರದು ಕೊಟ್ಟರೆ ವಾಂತಿ, ಅರುಚಿ ಮುಂತಾದವುಗಳನ್ನು ನಿಲ್ಲಿಸುವದು, ಮತ್ತು ಜೇನು ಹಾಕಿ ಕೊಟ್ಟರೆ ವಿಷಮವಾಂತಿಗೆ ಹಿತವು.

೧೨. ವಾಂತಿ ಮಾಡಿಸುವದಕ್ಕೆ ಔಷಧಗಳು.

೧. ಕಫವಾಂತಿಗೆ ಬೇವು, ಹಿಪ್ಪಲಿ, ಸಾಸುವೆಗಳನ್ನು ಕೊಟ್ಟು ಉಪಶಮನವಾಗುವಂತೆ ಮಾಡಬೇಕು, ಮತ್ತು ಬಡವಾಗಿದ್ದರೆ ಉಪವಾಸವನ್ನು ಯೋಗ್ಯತಾನುಸಾರ ಮಾಡಿಸಬೇಕು.

೨. ಮೆಣಸು, ಹಿಪ್ಪಲಿ, ಮಾಚಿಲೆಗಳನ್ನು ಅರದು ಮುಡಿವಾಳದ ರಸದಲ್ಲಿ ಕಲಸಿ ಕೊಟ್ಟು ಭಕ್ಷ್ಯವನ್ನು ಬ್ಯಾಲದಹಣ್ಣಿಗೆ ಜೇನು ಹಾಕಿ ಕೊಟ್ಟರೆ ಕಫವಾಂತಿಹರವು.

೧೩. ಬಾಯಾರಿಕೆಗೆ ಔಷಧಗಳು.

೧. ದರ್ಭೆಗಳೆರಡರ ಬೇರು, ಅಪ್ಪೆ, ಆಲ, ಮಾದಿವಾಳಗಳ ಚಿಗುರು, ಸಕ್ಕರೆ ಹಾಕಿ ಕೊಟ್ಟರೆ ದಾಹಪರಿಹರವು.

೨. ಲಾಮಂಚ, ಸೈಂಧವಲವಣ, ಪಾರಿವಾಳ, ಮುಡಿವಾಳ, ಶ್ರೀಗಂಧ, ಕೊನ್ನಾರಿ, ಶುಂಠಿಗಳನ್ನು ನಾಲ್ಕು ಸೇರು ನೀರಿನಲ್ಲಿ ಹಾಕಿ ಅರ್ಧ ಬತ್ತುವತನಕ ಕಾಸಿ ಆರಿಸಿಕೊಟ್ಟರೆ ಬಾಯಾರಿಕೆ ಹರವು.

೩. ಆಲದಚಿಗುರಿನ ಕಷಾಯಕ್ಕೆ ಜೇನುಹಾಕಿ ಕೊಟ್ಟರೆ ದಾಹಪರಿಹರವು.

೪. ಬಿಳೀ ಅರಳೀಯಲೆಯನ್ನು ಹಾಕಿ ಕಾಸಿದ ನೀರನ್ನು ಜೇನು ಹಾಕಿ ಕೊಟ್ಟರೆ ವಿಷಮಜ್ವರಹರವು.

೫. ಪಿತ್ತಜ್ವರದಲ್ಲಿ ದೇಹಕ್ಕೆ ಯತ್ತಿದಲೇಪಗಳನ್ನು ಮಾಡಿ ಕೊಳ್ಳ, ನದಿಗಳನ್ನು ಸ್ಮರಣೆ ಮಾಡುತ್ತಾ ಮೊಸರಿಗೆ ಬೆಲ್ಲಹಾಕಿ ನೆಕ್ಕಿದರೆ ಬಾಯಾರಿಕೆಹರವು.

೬. ಅತ್ತಿಹಣ್ಣಾಗಲಿ ಅಥವಾ ಕಷಾಯವಾಗಲಿ, ಅದಕ್ಕೆ ಬಿಳೀ ಸಕ್ಕರೆಯನ್ನು ಒಂದುಪಾವು ಹಾಕಿ, ಆರಿಸಿಕೊಟ್ಟರೆ ಬಾಯಾರಿಕೆ ಪರಿಹಾರವು.

೭. ಅಕ್ಕಿ ಅಥವಾ ಹಾರಕದಅಕ್ಕಿಯ ಗಂಜಿಯನ್ನು ಕೊಟ್ಟು ಯಮ್ಮೆಮೊಸರನ್ನೂ, ಬೆಲ್ಲವನ್ನೂ ಕೊಟ್ಟರೆ ನೀರು ಬಾಯಾರಿಕೆ ಪರಿಹರವು.

೮. ಬಿಸಲುನಿಂದ ತಪಿಸಿ ಬಹು ಬಾಯಾರಿಕೆಯಾಗಿರುವವನಿಗೆ ಎಮ್ಮೆಹಿಂಡಿಯನ್ನು ನೀರಲ್ಲಿ ಅರದು ಮೈಗೆಲ್ಲಾ ಲೇಪಿಸಿ ಸ್ವಲ್ಪ ಸ್ವಲ್ಪ ಪಾನಕವನ್ನು ಕೊಟ್ಟರೆ ತೃಷೆಹರವು.

೧೪. ಶ್ವಾಸಕ್ಕೆ ಔಷಧಗಳು.

೧. ವಾತಶ್ವಾಸಕ್ಕೆ ಔಷಧಗಳು.

೧. ಹಳೇಬೆಲ್ಲ, ಕೊಷ್ಟ, ಹಿಪ್ಪಲಿ, ತುರಚೆ, ಕೊನ್ನಾರಿ, ಭಾರ್ಜೆ, ಕರ್ಕಾಟಕ ಶೃಂಗಿಗಳನ್ನು ಬಿಳೆಣ್ಣೆಯಿಂದಅರದು ಕೊಟ್ಟರೆ ವಾತಶ್ವಾಸಹರವು.

೨. ಹಿಪ್ಪಲಿ, ಸೈಂಧಲವಣಗಳ ಪುಡಿಯನ್ನು ಬಿಸಿನೀರಿಗೆಹಾಕಿ ಕೊಟ್ಟರೆ ವಾತ ಶ್ವಾಸ ಹರವು.

೩. ತುರಚೆ, ಶುಂಠಿ, ಕೋಷ್ಟ, ಬೊಬ್ಬುಳೀ ರು, ದ್ರಾಕ್ಷಿ, ಕರ್ಕಾಟಕಶೃಂಗಿ, ಸಕ್ಕರೆಗಳನ್ನು ಪುಡಿಮಾಡಿ ಯೇರಂಡತೈಲದಲ್ಲಿ ಕೊಟ್ಟರೆ ವಾತಶ್ವಾಸ ಹರವು.

೪. ಕಿರಿಗುಳ್ಳ, ಅಮೃತಬಳ್ಳಿಗಳ ಎರಡೆರಡು ಸೇರುಗಳಲ್ಲಿ ಒಂದು ಸೇರು ತುಪ್ಪವನ್ನು ಹಾಕಿ ಕಾಸಿ ಆಘೃತವನ್ನು ಕೊಟ್ಟರೆ ವಾತಶ್ವಾಸಹರವು.

೫. ಗಂಟುಭಾರಂಗಿ, ರಾಸ್ನೆ, ಶುಂಠಿ, ಕ್ಷಾರ, ಹಿಪ್ಪಲಿ, ವಿಳಂಗ, ಸೈಂಧವಲವಣ, ಇಂಗುಗಳ ಪುಡಿಯನ್ನು ತುಪ್ಪದಲ್ಲಿ ಕಲಸಿಕೊಟ್ಟರೆ ವಾತಕಫ, ಬಿಕ್ಕು, ಶ್ವಾಸಗಳು ಪರಿಹಾರವಾಗಿ ಹಸಿವು ಕೂಡಾ ಆಗುತ್ತೆ.

೬. ಒಂದುತೊಲೆ ಹಿಪ್ಪಲಿಯನ್ನು ಒಳ್ಳೆಣ್ಣೆಯಲ್ಲಿ ಹುರಿದು ಪುಡಿಮಾಡಿ ಕಲ್ಲು ಸಕ್ಕರೆಯನ್ನು ಕೂಡಿಸಿ ನೀರಿನಲ್ಲಿಆಗಲಿ ಹುರುಳೀ ಕಟ್ಟಿನಲ್ಲಾಗಲಿ ಕಲಸಿ ಕೊಟ್ಟರೆ ಖಾಸೆಹರವು.

೭. ಹಸೀಶುಂಠಿಯನ್ನೂ ಸಕ್ಕರೆಯನ್ನೂ ಸಹ ಮೊಸರಿನ ತಿಳಿಯಿಂದ ಅರದು ಕೊಟ್ಟರೆ ಕೆಮ್ಮುಹರವು.

೮. ಹಿಪ್ಪಲಿ, ರೇಣುಕೆಗಳನ್ನು ಮೊಸರಿನಿಂದರದು ಕೊಟ್ಟರೆ ಕೆಮ್ಮುಹರವು.

೯. ಬೆಲ್ಲ, ಯಣ್ಣೆ, ಮೊಸುಗಳಲ್ಲಿ ಔಗಲ, ತುಳಸಿಗಳಸುಟ್ಟ ಬೂದಿಗಳನ್ನು ಹಾಕಿಕೊಟ್ಟರೆ ಕೆಮ್ಮು ಶ್ವಾಸಗಳು ಪರಿಹರವಾಗುತ್ತೆ.

೧೦. ಜವೆಗೋಧಿ, ಹೆಸರು, ಹುರಳಿ, ಬಿಸಿಯಾಗಿ ಅಧಿಕಖಾರವುಳ್ಳ ಬದನೇಕಾಯನ್ನು ಮತ್ತುನೆಲಗುಳ್ಳ ಅರಳು ಸಾಸಿವೆಗಳನ್ನು ತಿಂದರೆ ಖಾಸಕ್ಕೆ ಹಿತವು.

೧೧. ಬೆಲ್ಲ, ಭಾರಂಗಿ, ಶುಂಠಿ, ಹಿಪ್ಪಲಿ, ತೈಲದಲ್ಲಿ ಪುಡಿಮಾಡಿ ಕಲಸಿ ಕೊಟ್ಟರೆ ವಾತದ ಕಫ ಹರವು.

೧೨. ತುಪ್ಪದಲ್ಲಿ ಸೈಂಧವಲವಣ, ಹಿಪ್ಪಲಿಗಳನ್ನು ಹುರಿದು ಕೊಟ್ಟರೆ ವಾತ ಕಫಹರವು.

೨. ಪಿತ್ತಖಾಸಕ್ಕೆ ಔಷಧಗಳು.

೧. ತಾರೇಕಾಯನ್ನು ಗೋಧೀಹಿಟ್ಟಿನಲ್ಲಿ ಹೂಳಿ ಅದರಮೇಲೆ ತುಪ್ಪವನ್ನು ಹಾಕಿ ಮುಚ್ಚಿ ಪುಟವನ್ನುಹಾ ಆ ತೊಗಟೆಯನ್ನು ತಿಂದರೆ ಕೆಮ್ಮುಹರವು.

೨. ತುಪ್ಪ, ಜೇನುಗಳಲ್ಲಿ ಬೃಹತೀಫಲ, ಜೇಷ್ಠಮಧು, ಹಿಪ್ಪಲಿ, ದ್ರಾಕ್ಷಿಗಳನ್ನು ಅರದು ಗುಳಿಗೆ ಮಾಡಿಕೊಟ್ಟರೆ ಕ್ಷಯ, ಖಾಸೆಗಳು ಪರಿಹಾರವಾಗುತ್ತೆ.

೩. ಮಂಗಾರೆಕಾಯಿ, ಶಿವನಿ, ಜೇಷ್ಠಮಧುಗಳ ಕಷಾಯಕ್ಕೆ ತುಪ್ಪವನ್ನು ಹಾಕಿ ಕೊಡಲು ವಾಂತಿ ಪಿತ್ತಖಾಸಗಳು ಪರಿಹಾರವಾಗುತ್ತವೆ.

೪. ಕೊನ್ನಾರಿ, ಅರಳು, ಶುಂಠಿ, ದ್ರಾಕ್ಷಿ, ತಾರೆ, ನೆಲ್ಲಿಗಳ ಚೂರ್ಣವನ್ನು ಸಕ್ಕರೆ ಜೇನುಹಾಕಿ ಕಲಸಿಕೊಟ್ಟರೆ ಪಿತ್ತ ಕಾಸೋದ್ರೇಕ ಪರಿಹಾರವಾಗುತ್ತೆ.

೫. ಐವತ್ತುಪಾಲು ದ್ರಾಕ್ಷಿ, ಮೂವತ್ತುಪಾಲು ಹಿಪ್ಪಲಿಗಳನ್ನು ಕೂಡಿಸಿ ಜೇನಿನಿಂದಾಗಲಿ, ಗೋಮಯದ ರಸದಿಂದಾಗಲಿ ಕೊಟ್ಟರೆ ಪಿತ್ತ ಖಾಸೆ ಪರಿಹರವಾಗುತ್ತೆ.

೬. ಬೆಲ್ಲ, ಶುಂಠಿ, ಅಳಲೆ, ಕೊನ್ನಾರಿಗಳ ಪುಡಿಯನ್ನು ಮೋದಕವನ್ನು ಮಾಡಿ ಕೊಟ್ಟರೆ ಖಾಸ ಪರಿಹರವಾಗುತ್ತೆ.

೭. ತಾರೇಕಾಯಿಯನ್ನು ಬಾಯಿಯಲ್ಲಿಟ್ಟುಕೊಂಡರೆ ಕೆಮ್ಮು ಪರಿಹರವಾಗುತ್ತೆ.

೮. ಬೆಲ್ಲ, ಹಿಪ್ಪಲಿಗಳನ್ನು ಕೊಟ್ಟರೆ ಮಂದ, ವಿಷಮಾಗ್ನಿ, ವಾಂತಿಗಳು ಹೃದ್ರೋಗ, ಕೆಮ್ಮು, ಕ್ರಿಮಿ, ಬಿಕ್ಕುಗಳನ್ನು ಬಂಧಿಸುತ್ತದೆ.

೩. ಕಫ ಖಾಸಕ್ಕೆ ಔಷಧಗಳು.

೧. ಬಿಸಿನೀರನ್ನೂ ಜೇನನ್ನೂ ಸಹ ಕಾಲತ್ರಯದಲ್ಲಿಯೂ ಊಟದಕಾಲದಲ್ಲೂ ಕೊಟ್ಟರೆ ಕಫ ಖಾಸೆಹರವು.

೨. ತಿಗಡೆಯ ಪುಡಿ, ಹಿಪ್ಪಲಿ, ಕೊನ್ನಾರಿ, ಹಾವುಮೆಕ್ಕೆಗಳ ಪುಡಿಯನ್ನು ಜೇನಿನಲ್ಲಿ ಕಲಸಿ ತೆಗದುಕೊಂಡರೆ ಕಫ ಖಾಸೆಹರವು.

೩. ದೇವದಾರುವಿಗೆ ತುಪ್ಪವನ್ನುಸವರಿ ಒಳ್ಳೇ ಬಟ್ಟೆಗೆ ತುಪ್ಪವನ್ನುಸವರಿ ಆ ಬಟ್ಟೆಯನ್ನು ಆ ದೇವದಾರುವಿಗೆ ಸುತ್ತಿ ದೀಪಕ್ಕೆ ಹಿಡದರೆ ತೈಲ ತೊಟ್ಟುತ್ತೆ. ಆ ತೈಲಕ್ಕೆ ಯವಕ್ಷಾರ ಮೆಣಸುಗಳನ್ನು ಹಾಕಿಕೊಟ್ಟರೆ ಕಫ ಖಾಸೆ ಹರವು.

೪. ಜೇನಿನಲ್ಲಿ ಮೆಣಸು, ಹಿಪ್ಪಲಿಗಳನ್ನು ಹಾಕಿಯೇ ಆಗಲಿ ಬದನೆ, ನೆಲಗುಳ್ಳ, ತುಲಸಿ ಗರಗ ಇವುಗಳನ್ನು ಪ್ರತ್ಯೇಕಗಳಾಗಿ ರಸಗಳನ್ನು ತೆಗದು ಹಾಕಿಯೇಆಗಲಿ ಕುದುರೆ ಲದ್ದೀ ರಸವನ್ನು ಹಾಕಿಯೇ ಆಗಲಿ ಕೊಟ್ಟರೆ ಕಫ ಖಾಸೆ ಹರವು.

೪. ಸಂಕಲಿತ ಖಾಸಕ್ಕೆ ಔಷಧಗಳು.

೧. ನೆಲಗುಳ್ಳವನ್ನು ಸಹಮೂಲವಾಗಿ ಚೆನ್ನಾಗಿ ಮರ್ದಿಸಿ ಆರಸವನ್ನು ಸ್ವಲ್ಪ ಪಚ್ಚಿಗೆಮಾಡಿ ಹಿಪ್ಪಲಿ ಪುಡಿಯನ್ನು ಹಾಕಿ ಕೊಟ್ಟರೆ ಶ್ವಾಸ ಖಾಸೆಗಳು ನಲಗುವವು.

೨. ಹಿಪ್ಪಲಿ, ಮೆಣಸು, ಯವಕ್ಷಾರಗಳನ್ನು ಒಂದೊಂದು ಪಾಲುಗಳನ್ನು, ದಾಳಿಂಬ ಎರಡು ಪಾಲನ್ನು, ಬೆಲ್ಲ ಅರ್ಧಪಾಲನ್ನು ಸಹ ಕೂಡಿ ಗುಳಿಗೆ ಮಾಡಿಕೊಡಲು ಕೆಂಮಿಗೆ ಒಳ್ಳೇದು.

೩. ಹಿಪ್ಪಲಿ, ಮೆಣಸು, ಶುಂಠಿಗಳನ್ನು ಒಂದೊಂದು ರೂಪಾಯಿ ತೂಕ ಚೂರ್ಣಮಾಡಿ ಜೇನಿನಲ್ಲಿ ಕಲಸಿಕೊಟ್ಟರೆ ಕೆಮ್ಮು ನೆಗಡಿಗಳು ತಪ್ಪುವವು.

೪. ಹಿಪ್ಪಲಿ, ಹಿಪ್ಪಲೀಮೂಲ, ಚವ್ಯ, ಚಿತ್ರಮೂಲ, ಶುಂಠಿಗಳ ಪುಡಿಯನ್ನು ಸೇವಿಸಿದರೆ ರುಚಿಕರವಾಗಿ ದೀಪನೆಯಾಗಿ ಗುಲ್ಮಕೆಂಮುಗಳಿಗೆ ಹಿತ ವಾಗುತ್ತೆ.

೫. ದಾಳಿಂಬ ಎರಡು ಭಾಗ, ಮೆಣಸು ಮೂರು ಭಾಗ, ಬೆಲ್ಲವೆಂಟುಭಾಗಗಳನ್ನು ಹಾಕಿ ಮಾಡಿದಚೂರ್ಣವು ಕೆಂಮುಹರವು.

೬. ಮಣಿಲೆಯನ್ನು ನೀರಲ್ಲಿ ಅರದು ಜೋರೆಯಾಲಿಗೆ ಹತ್ತಿಸಿ ಬಿಸಲಿನಲ್ಲಿ ಒಣಗಿಸಿ ಹಾಲಿಗೆ ಹಾಕಿ ಕಾಸಿ ಜೇನುಹಾಕಿ ತೆಗದು ಕೊಂಡರೆ ಏರಿದ ಕಫ ಶ್ವಾಸ ಪರಿಹರವಾಗುವದು.

೭. ದಶಮೂಲದ ಕಷಾಯಕ್ಕೆ ಹಳೇಬೆಲ್ಲ ಪಂಚಕೋಲದ ಚೂರ್ಣಗಳನ್ನು ಹಾಕಿ ಒಂದೊಂದು ತೊಲೆಯ ಪ್ರಕಾರ ಗುಳಿಗೆಮಾಡಿ ತೆಗದುಕೊಂಡರೆ ಶ್ವಾಸ, ಮೂರು ದೋಷದ ಶ್ವಾಸಗಳು ಹರವು.

೮. ಹಿಪ್ಪಲಿ, ಹಿಪ್ಪಲಿಮೂಲ, ತಾರೇಕಾಯಿಗಳನ್ನು ಪುಡಿಮಾಡಿ ಹಾಶುಂಠಿರಸಕ್ಕೆ ಹಾಕಿಕೊಟ್ಟರೆ ಶ್ವಾಸಕ್ಕೆ ಹಿತವು.

೯. ಹಿಪ್ಪಲಿ, ಕೊನ್ನಾರಿ, ತಿಗಡೆ, ಜೇಷ್ಠಮಧು, ಹಾವುಮೆಕ್ಕೆಗಳನ್ನು ನೀರಿನಿಂದರದು ಪಕ್ವಮಾಡಿ ಕೊಟ್ಟರೆ ಶ್ವಾಸವು ಪರಿಹರವಾಗುತ್ತೆ.

೧೦. ಅಳಲೆ, ತಾರೆ, ನೆಲ್ಲಿ, ದೇವದಾರು, ವಿಳಂಗ, ಕಮಲ, ದ್ರಾಕ್ಷಿ, ಮೆಣಸು, ಶುಂಠಿ, ಕೊನ್ನಾರಿಗಳ ಸಮತೂಕದ ಚೂರ್ಣಕ್ಕೆ ಸಮ ಸಕ್ಕರೆ ಬೆರಸಿ ಜೇನು ಅಥವಾ ತುಪ್ಪದಲ್ಲಿ ಹಾಕಿ ಕೊಟ್ಟರೆ ಶ್ವಾಸ ಹರವು.

೧೧. ಶುಂಠಿ, ಮೆಣಸು ಹಿಪ್ಪಲಿ, ಯಕ್ಕೇನಾರುಗಳ ಕಷಾಯವು ಶ್ವಾಸರೋಗೆ ಹರವು.

೧೨. ಕೃಷ್ಣಾಗರು ಚೂರ್ಣಕ್ಕೆ ಜೇನುಹಾಕಿ ತೆಗದುಕೊಂಡರೆ ಶ್ವಾಸರೋಗ ಹರವು.

೫. ಸಂಕಲಿತ ಶ್ವಾಸಕ್ಕೆ ಔಷಧಗಳು.—ನಶ್ಯ.—ಬಿಸಿನೀರಿನಲ್ಲಿ ಶುಂಠಿ, ಬೆಲ್ಲಗಳನ್ನು ತೆಯಿದು ನಸ್ಯ ಹಾಕಿದರೆ ತಲೆಯಲ್ಲಿರುವ ವಾತ ಶ್ಲೇಷ್ಮಗಳು ಪರಿಹರವಾಗಿ ಕೆಂಮು ಶ್ವಾಸಗಳು ಪರಿಹರವಾಗುತ್ತವೆ.

೬. ರಕ್ತ ಶ್ವಾಸಕ್ಷಯಕ್ಕೆ ಔಷಧಗಳು.

೧. ಕೆಂಬುತ್ತೀ ಅಕ್ಕಿಯ ಹಿಟ್ಟು, ಬಿಳೇಗಣಿಜಿಲು, ಸಕ್ಕರೆ, ದ್ರಾಕ್ಷಿಗಳನ್ನು ಸಮಗೊಳಿಸಿ ಹಾಲಿಗೆ ಈ ಪುಡಿಗಳನ್ನೂ ಜೇನನ್ನೂ ಹಾಕಿ ತೆಗದುಕೊಂಡರೆ ಬಹುವಿಧ ರಕ್ತ ಶ್ವಾಸ ಪರಿಹರವು.

೨. ಅರಗಿನ ಪುಡಿಯನ್ನು ಜೇನಿನಲ್ಲಿ ಕಲಸಿ ತೆಗದುಕೊಂಡರೆ ಶ್ವಾಸಕ್ಷಯ, ಶ್ವಾಸಗಳನ್ನು ಪರಿಹರಿಸುತ್ತೆ.

೩. ನೆಲ್ಲೀ ಚೂರ್ಣವನ್ನು ಹಾಲಿಗೆ ಹಾಕಿ ಕಾಯಿಸಿ ತುಪ್ಪವನ್ನು ಹಾಕಿಕೊಟ್ಟರೆ ಶ್ವಾಸಕ್ಷಯ ಶ್ವಾಸಗಳು ಪರಿಹರವಾಗುತ್ತವೆ.

೪. ಆಡಿನ ಹಾಲಿಗೆ ತುಪ್ಪವನ್ನು ಹಾಕಿಯೇ ಆಗಲಿ ಕಲ್ಲ ಹಿಪ್ಪಲಿಗಳನ್ನು ಘೃತ ಪಾಕ ಮಾಡಿಯೇಆಗಲಿ ಕೊಟ್ಟರೆ ಅಗ್ನಿದೀಪನೆಯಾಗಿ ಕ್ಷಯ ಕಾಸಗಳನ್ನು ಪರಿಹರಿಸುವದು.

೫. ಶುಂಠಿ, ಹಿಪ್ಪಲಿ, ಮೆಣಸು ಎರಡು ಭಾಗಗಳು, ದಾಳಿಂಬದರಸ ಎರಡು ಭಾಗಗಳನ್ನು ಕೂಡಿಸಿ ಕಾಸಿ ಯುಕ್ತವಾದಷ್ಟು ಯವಕ್ಷಾರ ತುಪ್ಪಗಳನ್ನು ಸೇರಿಸಿಕೊಟ್ಟರೆ ಸಕಲಕ್ಷಯ, ಕಾಸಗಳು ಪರಿಹರವಾಗಿ ದೀಪನೆಯಾಗುತ್ತೆ.

೬. ಕಿರಿಗುಳ್ಳ, ಅಡ್ಡಸರಗಳ ಚೂರ್ಣವನ್ನು ಅಮೃತಬಳ್ಳೀರಸದಲ್ಲಿ ಕಲಸಿ ತುಪ್ಪಕ್ಕೆ ಹಾಕಿ ಕಾಸಿಕೊಟ್ಟರೆ ಕಾಸಹರವು; ಜ್ವರ, ಅರುಚಿ ಹರವು.

೭. ಲಕ್ಕಿಸೊಪ್ಪನ್ನು ತುಪ್ಪದಲ್ಲಿಹಾಕಿ ಕಾಸಿಕೊಟ್ಟರೆ ಕಾಸಹರವು.

೮. ಎಂಟುಭಾಗ ಅಂಕೋಲೆರಸಕ್ಕೆ ಎರಡುಭಾಗ ಮೆಣಸಿನಪುಡಿಯನ್ನು ಕೂಡಿಸಿ ಪಕ್ವಾದಷ್ಟು ತಿಂದರೆ ಕಾಸ ಶ್ವಾಸರೋಗಗಳು ಪರಿಹರವಾಗುತ್ತೆ.

೯. ಹಳೇಬೆಲ್ಲಕ್ಕೆ ಸುರಭಿಯ ಹಾಲನ್ನು ಮುಳುಗುವ ಪರಿಯಂತ್ರ ಭಾವಿಸಿ ಒಂದು ಮೆಣಸಿನಷ್ಟು ತೆಗದುಕೊಂಡರೆ ಕೆಂಮು ಶ್ವಾಸಗಳಿಗೆ ಹಿತವಹುದು.

೧೦. ಮದ್ದಾನೆ, ವೊಂಟೆ, ಹಸು, ಕುದುರೆ, ಆಡು, ಕಾಡುಹಂದಿ, ಕುರಿ, ಕತ್ತೆಗಳ ಲದ್ದಿಗಳರಸಕ್ಕೆ ಜೇನುಹಾಕಿ ಬ್ಯಾರೆಬ್ಯಾರೆ ಕೊಟ್ಟರೆ ಆಯಾಯ ಶ್ವಾಸಕ್ಕೆ ಹಿತವು.

೭. ಶ್ವಾಸಕ್ಕೆ ಹೊಗೇಬತ್ತಿ.—ಅರಿನದ ಯಲೆ, ಅರಗು, ಮಣಿಲೆ, ದೇವದಾರು, ಜಟಾಮಾಂಸಿ, ಅವುಡಲ ಬೇರುಗಳನ್ನು ಅರದು ಅರುವೆಗೆ ಮರಸಿ ತುಪ್ಪದಲ್ಲಿ ಅದ್ದಿ ಅದರ ಹೊಗೆಯನ್ನು ತೆಗದುಕೊಂಡರೆ ಶ್ವಾಸಕೆ ಹಿತವಾಗುತ್ತೆ.

೮. ಶ್ವಾಸಕ್ಕೆ ಔಷಧ.—ತುಪ್ಪದ ಗಡಿಗೆಯಲ್ಲಿ ಹಿಪ್ಪಲಿ, ಹಿಪ್ಪಲೀಮೂಲ ಚಿತ್ರಮೂಲ, ಅಳಲೆ, ವಿಳಂಗಗಳನ್ನು ಹಾಕಿ ಒಂದು ತಿಂಗಳಾದಮೇಲೆ ಇವುಗಳನ್ನು ಕೊಟ್ಟು ಮೇಲೆ ಹಸುವಿನ ಮಜ್ಜಿಗೆಯನ್ನು ಸೇವಿಸಿದರೆ ಶ್ವಾಸಹರವು.

೧೫. ಪಾಂಡುರೋಗಕ್ಕೆ ಔಷಧಗಳು.

೧. ವಾತದಿಂದ ಹುಟ್ಟಿದ ಪಾಂಡುವಿಗೆ ಹಿಡಸಿನಿಂದಲೂ, ಜಿಡ್ಡಿನ ಪದಾರ್ಥ, ಪಿತ್ತದಿಂದ ಹುಟ್ಟಿದ ಪಾಂಡುವಿಗೆ ಆರಿಸಿದ ಕ್ಷೈರಸದಿಂದಲೂ, ಶ್ಲೇಷ್ಮಕ್ಕೆ ಬಿಸಿಯಾಗಿಯೂ ಉಷ್ಣವಾಗಿಯೂ ಇರುವ ಕ್ಷಾರವನ್ನು ಹಾಕಿದ ರಸದಿಂದಲೂ, ಮಿಶ್ರವಾದ ಪಾಂಡುರೋಗಕ್ಕೆ ಮಿಶ್ರೌಷಧಗಳಿಂದಲೂ ಪರಿಹಾರವನ್ನು ಮಾಡಬೇಕು.

೨. ಅಳಲೆ, ನೆಲ್ಲಿ, ತಾರೇಕಾಯಿಗಳನ್ನು ಗೋಮೂತ್ರದಲ್ಲಿ ಹಾಕಿ ಕಾಸಿ ಉಪಯೋಗಿಸಿದರೆ ಪಾಂಡುಹರವು.

೩. ಆಳಲೇಕಾಯಿಯನ್ನು ಗೋಮೂತ್ರದಲ್ಲಿ ಮರ್ದಿಸಿ ಕೊಟ್ಟರೆ ಪರಿಹರವಾಗುತ್ತೆ.

೪. ತಿಗಡೆಪುಡಿ ಸಕ್ಕರೆಗಳನ್ನು ಸೇರಿಸಿ ಕೊಟ್ಟರೆ ಪಿತ್ತದ ಪಾಂಡುಹರವು.

೫. ದಶಮೂಲ ಕಷಾಯದಲ್ಲಿ ಪ್ರವರ್ತಿ ಆಗುವ ಔಷಧವನ್ನು ಹಾಕಿಕೊಟ್ಟರೆ ಶ್ಲೇಷ್ಮದ ಪಾಂಡುಹರವಾಗುತ್ತೆ.

೬. ನೆಲಬೇವು, ಕಟುಕರೋಹಿಣಿ, ೯ ರೂಪಾಯಿ ತೂಕ ಆಡುಸೋಗೆ, ಬೇವುಗಳನ್ನು ನೀರಿನಲ್ಲಿ ಹಾಕಿ ಕಷಾಯವನ್ನು ಮಾಡಿ ಜೇನು ಹಾಕಿ ಕೊಟ್ಟರೆ ಕಾಮಾಲೆ ಪಾಂಡುರೋಗಗಳು ಪರಿಹರವಾಗುತ್ತೆ.

೭. ಶುಂಠಿ, ಹಿಪ್ಪಲಿ, ಮೆಣಸು, ಚಿತ್ರಮೂಲ, ಕೊನ್ನಾರಿ, ವಾಯುವಿಳಂಗಗಳ ಚೂರ್ಣಕ್ಕೆ ಸಮಭಾಗ ಲೋಹಭಸ್ಮವನ್ನು ಸೇರಿಸಿಕೊಟ್ಟರೆ ಸಕಲ ಜ್ವರ, ಪಾಂಡು, ಕುಷ್ಟ, ಶೋಭೆ ಪರಿಹರ.

೮. ಶುಂಠಿ, ಹಿಪ್ಪಲಿ, ಮೆಣಸು, ಅಳಲೆ, ತಾರೆ, ನೆಲ್ಲಿ, ಚಿತ್ರಮೂಲ, ಲೋಹಭಸ್ಮವನ್ನು ಇಟ್ಟು ಕೂಡಿಸಿ ಕೊಟ್ಟರೆ ಸಕಲ ಜ್ವರ, ಪಾಂಡು, ಕುಷ್ಟ, ಶೋಭೆಗಳು ಪರಿಹರವಾಗುತ್ತೆ.

೯. ಆಡುಸೋಗೆ, ಪಡವಲಪೇರು, ಬೇವಿನಕಡ್ಡಿ, ಸಣಗುಳ್ಳಗಳನ್ನು ಕಷಾಯವನ್ನು ಮಾಡಿ ಆ ಕಷಾಯದಲ್ಲೇ ಮೇಲೆ ಹೇಳಿದ ಜಿನಸುಗಳನ್ನರದು ಆ ರಾಡಿಯನ್ನು ಹಾಕಿ ತುಪ್ಪವನ್ನು ಕಾಸಿ ಕೊಟ್ಟರೆ ಪಾಂಡು ವಿಷಜ್ವರಗಳು ಪರಿಹರವಾಗುತ್ತೆ.

೧೦. ಕಬ್ಬಿಣದ ತಗಡು, ಶುಂಠಿ, ಹಿಪ್ಪಲಿ, ಮೆಣಸು, ಚಿತ್ರಮೂಲ, ದೇವದಾರುಗಳ ಕಷಾಯವನ್ನು ಕೊಟ್ಟರೆ ಪಾಂಡು ಶೋಭೆಗಳು ಹರವು.

೧೧. ಹುಣಸೆಯಲೆಯೊಡನೆ ಕಬ್ಬಿಣವಾಗಲಿ, ಕಿಟ್ಟವಾಗಲಿ ಹಾಕಿ ಕಷಾಯಮಾಡಿ ಹಿಪ್ಪಲಿಪುಡಿ ಹಾಕಿ ಕೊಟ್ಟರೆ ಪಾಂಡು, ಕಾಮಾಲೆ, ಶೋಭೆಗಳು ಪರಿಹರವಾಗುತ್ತೆ.

೧೨. ಕಿಟ್ಟವನ್ನು ಕಾಯಿಸೋದು, ಅನಂತರ ಗೋಮೂತ್ರಕ್ಕೆ ಹಾಕಿ ಆರಿಸೋದು, ಈ ಪ್ರಕಾರ ಐವತ್ತಾವರ್ತಿಮಾಡಿ ಚೂರ್ಣಿಸಿ ಜೇನಿನಲ್ಲಾಗಲಿ, ತುಪ್ಪದಲ್ಲಾಗಲಿ ಹಾಕಿ ತೆಗದುಕೊಂಡರೆ ಹಸಿವು ಉಂಟಾಗಿ ಪಾಂಡು, ಶೋಭೆಗಳು ಪರಿಹರವಾಗುತ್ತೆ.

೧೩. ಅಳಲೆ, ಚಿತ್ರಮೂಲ, ಗಣಜಿಲಬೇರು, ಶುಂಠಿಗಳ ಕಷಾಯಕ್ಕೆ ಸಕ್ಕರೆ ಹಾಕಿ ಕೊಟ್ಟರೆ ಪಾಂಡುರೋಗ ಪರಿಹರವಾಗುತ್ತೆ.

೧೪. ಕಿಟ್ಟವನ್ನು ತಾರೇ ಕೊರಡಿನಲ್ಲಿಟ್ಟು ಮುಚ್ಚಿ ಸುಟ್ಟು ಗೋಮೂತ್ರದಲ್ಲಿ ಅರಿಸುತ್ತಾ ಈ ಪ್ರಕಾರ ಎಂಟುವರ್ತಿ ಮಾಡಿದನಂತರ ಜೇನುಹಾಕಿ ತೆಗದುಕೊಂಡರೆ ಕುಂಭಕಾಮಾಲೆಹರವು.

೧೫. ನೆಗ್ಗಲು, ನೆಲ್ಲಿಗಳ ಚೂರ್ಣವನ್ನು ಅಮೃತಬಳ್ಳಿಯ ಬೂದಿಯ ಜೊತೆಗೆ ಸೇರಿಸಿ ಜೇನು ಮತ್ತು ತುಪ್ಪ ಸಹ ಹಾಕಿಕೊಟ್ಟರೆ ಪಾಂಡು, ಹಲೀಮುಖ, ವಾತರಕ್ತ, ರಕ್ತಪೈತ್ಯಗಳ ಹರವಾಗುತ್ತೆ.

೧೬. ಕಿರಿಪಂಚಮೂಲದ ಕಷಾಯವಾಗಲಿ ವಾ ಅನ್ನದೊಡನೆ ದ್ರಾಕ್ಷಿರಸವಾಗಲಿ ಜಟ್ಟನೆಲ್ಲೀರಸವಾಗಲಿ ಹಾಕಿಕೊಟ್ಟರೆ ಪಾಂಡುಹರವು.

೧೭. ನಾಲ್ಕು ಸೇರು ಹಿಪ್ಪಲಿ, ನಾಲ್ಕು ಸೇರು ದ್ರಾಕ್ಷಿ, ಹನ್ನೆರಡು ಸೇರು ಸಕ್ಕರೆ, ಬಂದೊಂದು ಪಾವುಗಳ ಪ್ರಕಾರ ಶುಂಠಿ, ತವಕ್ಷಾರ ಜೇಷ್ಠಮಧುಗಳ ಚೂರ್ಣ, ಅರವತ್ತು ಸೇರು ನೆಲ್ಲೀರಸಗಳನ್ನು ಹಾಕಿ ಲೇಹ ಮಾಡಿ ನಾಲ್ಕು ಸೇರು ಜೇನು ಹಾಕಿ ಕಲಸಿಕೊಟ್ಟರೆ ಕಾಮಾಲೆ, ಪಾಂಡು ರೋಗಗಳು ನಾಶವಾಗುತ್ತೆ.

೧೮. ಪಾಂಡುರೋಗಿಗೆ ಯವೆ, ಗೋಧಿ, ಅಕ್ಕಿಗಳ ಅನ್ನ, ಎಸರು ಸಹ ಪಥ್ಯವು. ಬೆಂಕಿ, ಬಿಸಲು, ಸಂಭೋಗ, ಮಾರ್ಗ ಸಂಚಾರವು, ಪಿತ್ತೋದ್ರೇಕ ಕೆಲಸಗಳು ಸಹ ವರ್ಜ್ಯವು.

೧೯. ಬೀಳಿಗಣಿಜೆಲುಬುಲತ ಬೇರನ್ನು ಹಾಲಿನಲ್ಲಿ ಹಾಕಿ ಕಾಸಿ ಅದನ್ನು ಒಣಗಿಸಿ ಚೂರ್ಣ ಮಾಡಿ ತುಂಬಾ ಜೇನು ಹಾಕಿ ಕೊಟ್ಟರೆ ಪಾಂಡು, ಉದರ ಶೋಭೆಗಳನ್ನು ಪರಿಹರಿಸುತ್ತೆ.

೧೬. ಕಾಮಾಲೆಗೆ ಔಷಧಗಳು.

೧. ಕಾಮಾಲೆಗೆ ಔಷಧಗಳು.

೧. ಬೇವಾಗಲಿ, ಅಮೃತಬಳ್ಳಿಯಾಗಲಿ, ಅಳಲೆ ತಾರೆ ನೆಲ್ಲಿ ಮರದರಿಸಿನಗಳಾಗಲಿ, ಕಷಾಯವನ್ನು ಮಾಡಿ ಜೇನು ತೊಲೆಯನ್ನು ಹಾಕಿ ಕೊಟ್ಟರೆ ಕಾಮಾಲೆಹರವು.

೨. ತಾರೆ, ಅಳಲೆ, ನೆಲ್ಲಿ, ವಜ್ರನೀಲೀಸೊಪ್ಪುಗಳ ಕಷಾಯಕ್ಕೆ ಮೂರು ತೊಲೆ ಸಕ್ಕರೆಯನ್ನು ಹಾಕಿ ಬಂದು ತೊಲೆಯನ್ನು ತೆಗದುಕೊಂಡರೆ ಕಾಮಾಲೆಸಮೂಹಹರವು.

೩. ಬೇವು, ಅಮೃತಬಳ್ಳಿ, ಲಾಮಂಚ, ಚಿಲ್ಲದಬೀಜ, ಸಂಣಿಪ್ಪೆ, ಆಡುಸೋಗೆಗಳ ಕಷಾಯಕ್ಕೆ ಜೇನು ಹಾಕಿ ತುಪ್ಪ ಹಾಕಿ ಬಂದು ಪಾವುವರಿಗೂ ಬತ್ತಿಸಿ ತೆಗದರೆ ಕಾಮಾಲೆಹರವು.

೪. ಬೇವಿನಪಟ್ಟೆ, ಜೇಷ್ಠಮಧು, ನೆಲಹಾಲೆ, ಕೊನ್ನಾರಿ, ಚಂದನ, ಲಾಮಂಚಗಳ ಕಷಾಯವನ್ನು ಕೊಟ್ಟರೆ ಕಾಮಾಲೆಹರವು.

೫. ಅರಿಶಿನ, ಅಣಿಲೆಗಳ ಚೂರ್ಣಕ್ಕೆ ಕಬ್ಬಿಣದ ಭಸ್ಮವನ್ನು ಸಮವಾಗಿ ಸೇರಿಸಿ ಜೇನು ಅಥವಾ ತುಪ್ಪದಲ್ಲಿ ಕೊಟ್ಟರೆ ಕಾಮಾಲೆಹರವು.

೬. ಅಳಲೆ ಚೂರ್ಣಕ್ಕೆ ಸಮವಾಗಿ ಕಬ್ಬಿಣದ ಭಸ್ಮವನ್ನು ಸೇರಿಸಿ ಜೇನಿನಲ್ಲಿ ಕಲಸಿ ತೆಗದು ಕೊಂಡರೆ ಕಾಮಾಲೆಹರವು.

೭. ಮಾವು, ಅಳಲೇಕಾಯಿಗಳ ರಸವನ್ನು ನಾಲ್ಕು ಸೇರು ತುಪ್ಪಕ್ಕೆ ಹಾಕಿ ಕಾಸಿ ತುಪ್ಪವನ್ನು ಸೇವಿಸಿದರೆ ಕಾಮಾಲೆಹರವು.

೮. ಅರಿಶಿನ, ಕಟುಕರೋಹಿಣಿ, ಮರದರಿಶಿನ, ಕೋಷ್ಟ, ಕೊನ್ನಾರಿ, ಅಳಲೆ, ನೆಲ್ಲಿ, ತಾರೆಗಳ ಚೂರ್ಣವನ್ನು ತುಪ್ಪದಿಂದಾಗಲಿ, ಜೇನಿನಿಂದಾಗಲೀ ಕಲಸಿ ಕೊಟ್ಟರೆ ಕಾಮಾಲೆಹರವು.

೯. ಅರಿಶಿನ, ಕಟುಕರೋಹಿಣಿ, ಮರದರಿಶಿನ, ಲೋಹಭಸ್ಮ, ಅಳಲೆ, ನೆಲ್ಲಿ, ತಾರೆಗಳ ಚೂರ್ಣಕ್ಕೆ ಜೇನನ್ನು ಹಾಕಿ ಕೂಡಿಸಿ ಸೇವಿಸಿದರೆ ಕಾಮಾಲೆಹರವು.

೧೦. ಹಾವುಮೆಕ್ಕೆ, ಬೆಲ್ಲಗಳನ್ನು ಕೊಟ್ಟರೆ ಕಾಮಾಲೆಹರವು.

೨. ಕಾಮಾಲೆಗೆ ನಸ್ಯ.

೧. ಕೈಸೋರೆಕಾಯಿಯಾಗಲಿ, ಹಾಗಲಬೇರಾಗಲಿ ಚೂರ್ಣಮಾಡಿ ನಸ್ಯಹಾಕಿ ಅರಿಶಿನ, ಅಳಲೆ, ತಾರೆ, ನೆಲ್ಲಿ, ಸಕ್ಕರೆಗಳನ್ನು ತಿಂದರೆ ಹಿತವಾಗುತ್ತೆ; ಕಾಮಾಲೆಹರವು.

೨. ಬಿಕ್ಕೆಯ ಬೇರಾಗಲಿ, ದೇವದಾರುವಾಗಲಿ ಅಕ್ಕಿ ತೊಳದ ನೀರಲ್ಲಿ ತೈಯಿದು ನಸ್ಯಹಾಕಿದರೆ ಕಾಮಾಲೆಹರವು.

೩. ಅಂಜನ.

೧. ಲೋಳೆಸರದ ಬೇರನ್ನು ತಣ್ಣೀರಲ್ಲಿಯೂ ಅಥವಾ ಇದರ ಮೂಲವನ್ನು ಅಕ್ಕಿ ಕಚ್ಚಿನಲ್ಲಿಯೂ ತೇಯಿದು ಕಣ್ಣಿಗೆ ಹಚ್ಚಿಸಿದರೆ ಕಾಮಾಲೆಹರವು.

೨. ತುಂಬೆಹುವ್ವಿನ ರಸವನ್ನಾಗಲಿ, ನೆಲ್ಲು, ಅರಿಶಿನ, ಜಾಜಿ ಬಳ್ಳಿಗಳನ್ನು ಅರದು ರಸವನ್ನು ಬಟ್ಟೆಯಿಂದ ಹಿಂಡಿ ಕಣ್ಣಿಗೆ ಹಚ್ಚಿಸಿದರೆ ಕಾಮಾಲೆಹರವು.

೩. ಪಿತ್ತ ಪರಿಹರವಾಗುವ ಮೂಲಿಕೆಗಳನ್ನು ಕೂಡಿಸಿ ಕಷಾಯವನ್ನು ಮಾಡಿಕೊಟ್ಟರೆ ಕಾಮಾಲೆಹರವು.

೪. ಕಾಮಾಲೆ ಬಲಿತರೆ ಹಲೀಮುಖವೆನ್ನಿಸುವದು. ಇದಕ್ಕೆ ತುಪ್ಪದಲ್ಲಾಗಲಿ, ಬೆಣ್ಣೆಯಲ್ಲಾಗಲಿ ಅಮೃತಬಳ್ಳಿ ಸತ್ವವನ್ನು ಹಾಕಿ ಕೊಟ್ಟರೆ ತೃಷೆ, ಜ್ವರ ಹಲೀಮುಖ, ರಕ್ತ ಪಿತ್ತಗಳು ಪರಿಹರವು.

೧೭. ಶೋಭೆಗೆ ಔಷಧಗಳು.

೧. ಶೋಭೆಗೆ ತಕ್ಕ ಚಿಕಿತ್ಸೆಗಳು.

೧. ಹಳೇ ಬಿಳೀಗಣಿಜಿಲು ಬೇರನ್ನು ಹಸುವಿನ ಹಾಲಿನಲ್ಲಿ ಬೇಯಿಸಿ ಒಣಗಿಸಿ ಚೂರ್ಣಮಾಡಿ ತುಪ್ಪ ವಾ ಬೆಲ್ಲದಲ್ಲಿ ತೋಲೆಯನ್ನು ಕೊಟ್ಟರೆ ಶೋಭೆಗೆ, ಪಾಂಡು ಮೂಲಗಳಿಗೆ ಹಿತವು.

೨. ಒಂದು ತೊಲ ಬಿಲ್ವ, ಎರಡು ತೊಲ ಗಣಿಜಿಲ ಬೇರುಗಳನ್ನು ಹಾಲಿನಲ್ಲಿ ಹಾಕಿ ಕಾಯಿಸಿ ಆ ಹಾಲನ್ನು ಕೊಟ್ಟರೆ ಶೋಭೆ, ಜ್ವರಗಳು ಪರಿಹರವಾಗುತ್ತೆ.

೩. ನುಗ್ಗಿಲು, ಇಪ್ಪೆಯ ಕೆಚ್ಚುಗಳನ್ನು ಹಾಕಿ ಕಾಸಿದ ಹಾಲನ್ನು ಕೊಟ್ಟರೆ ಜ್ವರಹರವು.

೨. ಶೋಭೆಗೆ ಲೇಪಗಳು.

೧. ಅಂಕೋಲೆ, ಹುಲಿಗಿಲ ಬೇರುಗಳಾಗಲಿ, ಅಂಕೋಲೆ ಬಜೆ, ಶುಂಠಿಗಳನ್ನಾಗಲಿ ಅರದು ಲೇಪವನ್ನು ಮಾಡಿದರೆ ಕಠಿಣವಾದ ಶೋಭೆಯು ಪರಿಹರವಾಗುತ್ತೆ.

೨. ಮಂದಾಗ್ನಿಯಿಂದ ಮಲಬದ್ಧತೆಯಾಗಿದ್ದರೆ ಮಜ್ಜಿಗೆ ಸಂವರ್ಚಲಲವಣ ಶುಂಠಿ, ಹಿಪ್ಪಲಿ, ಮೆಣಸು, ಜೇನುಗಳನ್ನು ಹಾಕಿ ಕೊಡಬೇಕು.

೩. ಬಿಲ್ವ, ಅಳಲೆಗಳನ್ನು ಕೊಟ್ಟರೆ ಮಂದಾಗ್ನಿಯಿಂದ ಮಲಬದ್ಧತೆಯು ಪರಿಹರವಾಗುತ್ತೆ.

೪. ಹಾಲಿನಲ್ಲಿ ಗೋಮೂತ್ರವನ್ನು ಹಾಕಿ ಕೊಟ್ಟು ಅನಂತರ ಪಥ್ಯಕ್ಕೆ ಹಾಕಿಕೊಳ್ಳುವ ಹಾಲಿಗೂ ಸ್ವಲ್ಪ ಮೂತ್ರವನ್ನು ಹಾಕಿ ಊಟವನ್ನು ಉಷ್ಣವಾದ ಪದಾರ್ಥಗಳನ್ನು ತಿಂದರೆ ಶೋಭೆಹರವು.

೫. ಗುಗ್ಗುಳವನ್ನು ತಿಂದರೆ ಶೋಭಹರವು.

೬. ದಶಮೂಲದ ಕಷಾಯದಲ್ಲಿ ಹಳೇ ಅಕ್ಕಿಯನ್ನಾಗಲಿ, ಯವೆಯನ್ನಾಗಲಿ ಹಾಕಿ ಅನ್ನವನ್ನು ಮಾಡಿ ಸ್ವಲ್ಪ ತೈಲ, ಲವಣಗಳನ್ನು ಹಾಕಿ ಭುಂಜಿಸಿದರೆ ಶೋಭೆಹರವಾಗುತ್ತೆ.

೭. ಕ್ಷಾರ, ಶುಂಠಿ, ಹಿಪ್ಪಲಿ, ಮೆಣಸುಗಳನ್ನು ಹೆಸರು ಕಟ್ಟಿನಲ್ಲಿ ಹಾಕಿಯೇ ಆಗಲಿ, ಹುರಳಿಯ ಕಟ್ಟಿನಲ್ಲಿ ಹಿಪ್ಪಲಿ ಹಾಕಿಯೇ ಆಗಲಿ ಕೊಟ್ಟರೆ ಶೋಭೆ ನಿವಾರಣವಾಗುತ್ತೆ.

೮. ನೆಲಬೇವು, ಶುಂಠಿಯಾಗಲಿ, ಜೀರಿಗೆ, ಕೊನ್ನಾರಿ, ಪಂಚಕೋಲ, ಅರಿಶಿನ, ನೆಲಗುಳ್ಳ, ಗುಳ್ಳ, ಶುಂಠಿಗಳ ಕಷಾಯವನ್ನು ಕೊಟ್ಟರೆ ತ್ರಿದೋಷದ ಶೋಭೆಹರವು.

೧೮. ಮೂಲಕ್ಕೆ ಔಷಧಗಳು.

೧. ಮೂಲಕ್ಕೆ ಚಿಕಿತ್ಸೆಗಳು.

೧. ಅರ್ಶಯನ್ನು ಪರಿಹರಿಸಬೇಕಾದರೆ ಔಷಧ.—ಊಟ, ಶಸ್ತ್ರ, ಅಗ್ನಿ, ವೈದ್ಯಗಳೆಂಬ ನಾಲ್ಕು ವಿಧಗಳುಂಟು. ಆ ಪೈಕಿ ಶೀಘ್ರದಲ್ಲಿ ವಾಸಿಯಾಗುವ ಮೂಲಿಕೆಗಳು ಹೇಳಲ್ಪಡುತ್ತೆ.

೨. ಧೂಪವನ್ನು ಕೊಡುವದರಿಂದಲೂ, ಲೇಪನದಿಂದಲೂ, ಅಭ್ಯಂಗನದಿಂದಲೂ, ರಕ್ತಮೋಕ್ಷದಿಂದಲೂ, ವ್ಯಾಪಿಸಿ ಇರುವ ಮೂಲರೋಗ ತಾಪವು ಪರಿಹಾರವಾಗುತ್ತೆ.

೩. ಮೂಲವ್ಯಾಧಿಗೆ ಜಿಗಳೆಯನ್ನು ಹಿಡಿಸಿ ಔಷಧಲೇಪವನ್ನು ಮಾಡಿದರೆ ಶೀಘ್ರವಾಗಿ ಗುಣವಾಗುತ್ತೆ.

೨. ವಾತಮೂಲಕ್ಕೆ ಚಿಕಿತ್ಸೆಗಳು.

೧. ಚೂರ್ಣಗಡ್ಡೆಯನ್ನು ಪುಟವಿಟ್ಟು ಅದರ ರಸಕ್ಕೆ ಒಳ್ಳೆಣ್ಣೆ, ಸೈಂಧವಲವಣಗಳನ್ನು ಹಾಕಿ ಹೊಟ್ಟೆಗೆ ಕೊಟ್ಟು ಬಿಲೆಗೆ ಬೈಯ ಹೊಗೆಯನ್ನು ಕೊಟ್ಟರೆ ಮೂಲರೋಗಹರವು.

೨. ಒಂದುಪಾಲು ಚೂರ್ಣಗೆಡ್ಡೆ, ಅರ್ಧಪಾಲು ಚಿತ್ರಮೂಲ, ಎಂಟರಲ್ಲಿ ಒಂದು ಪಾಲು ಶುಂಠಿ, ಹದಿನಾರ್ರಲ್ಲಿ ಒಂದುಪಾಲು ಮೆಣಸುಗಳ ಚೂರ್ಣವನ್ನು ಕೊಟ್ಟರೆ ಮೂಲರೋಗಹರವು.

೩. ಮೆಣಸು ಮೂರುತೊಲೆ, ಶುಂಠಿ ಆರುತೊಲೆ, ಚಿತ್ರಮೂಲ ಹನ್ನೆರಡು ತೊಲೆ, ಚೂರ್ಣಗೆಡ್ಡೆ ಒಂದುಸೇರು, ಬೆಲ್ಲ ನಾಲ್ವತ್ತೈದು ತೊಲೆಗಳನ್ನು ಹಾಕಿ ಚೂರ್ಣ ಮಾಡಿ ಕೊಟ್ಟರೆ ಶೂಲೆ ಮೂಲರೋಗಗಳು ಪರಿಹರವಾಗುತ್ತೆ.

೪. ಯಳ್ಳು, ಗೇರು, ಅಳಲೆ, ಬೆಲ್ಲಗಳ ಸಮಭಾಗಮಾಡಿ ಒಂದು ತೊಲೆಯನ್ನು ತಿಂದರೆ ಮೂಲ, ಶ್ವಾಸ, ಕಾಸ, ಪಾಂಡು, ಪ್ಲೀಹಗಳು ಪರಿಹರವಾಗುತ್ತೆ.

೫. ಯಳ್ಳನ್ನು ನೀರಿನಲ್ಲಿ ನೆನೆಹಾಕಿ ಸೂರ್ಯೋದಯದಕಾಲದಲ್ಲಿ ತಿಂದರೆ ಮೂಲರೋಗಹರ, ಶರೀರಪುಷ್ಟಿ, ಹಲ್ಲು ಘಟ್ಟಿಯಾಗುತ್ತೆ.

೩. ರಕ್ತಮೂಲಕ್ಕೆ ಔಷಧಗಳು.

೧. ಕ್ಷೀರಸವನ್ನು ಸೇವಿಸಿದರೆ ರಕ್ತಾರ್ಶ ಪರಿಹರವಾಗುತ್ತೆ.

೨. ಇಂದ್ರನ ಜವೆ, ಅಗಳು ಶುಂಠಿ, ಬ್ಯಾಲ, ಪ್ರೋಮು, ಶುಂಠಿಗಳ ಚೂರ್ಣವನ್ನು ಲೇಹವಮಾಡಿ ಕೊಟ್ಟರೆ ರಕ್ತಾರ್ಶ ಶೂಲೆಗಳು ಪರಿಹರವಾಗುತ್ತೆ.

೩. ಕಮಲದ ನೀರಿನಲ್ಲಾಗಲಿ, ಯಳ್ಳಿನಲ್ಲಾಗಲಿ ಸಕ್ಕರೆಯನ್ನು ಸಮಗೂಡಿಸಿ ತೆಗದುಕೊಂಡರೆ ರಕ್ತಾರ್ಶ ಪರಿಹರವು.

೪. ಉತ್ತರಣೆಯ ಬೀಜವನ್ನು ಅಕ್ಕೀಕಟ್ಟಿನಲ್ಲರದು ಕೊಟ್ಟರೆ ರಕ್ತಾರ್ಶಹರವು.

೫. ಈರುಳ್ಳಿಯನ್ನು ಅನ್ನಪಾನಗಳಲ್ಲಿ ಕೊಟ್ಟರೆ ಸಂತತವಾಗಿ ಗುದದಲ್ಲಿ ರಕ್ತ ಬೀಳುವ ಮೂಲವ್ಯಾಧಿಗೆ ಹಿತವು.

೪. ಶ್ಲೇಷ್ಮಮೂಲಕ್ಕೆ ಚಿಕಿತ್ಸೆಗಳು.

೧. ಫೋಮು, ಬೀಡುಲವಣಗಳನ್ನು ಮಜ್ಜಿಗೆಯಲ್ಲಿ ಕಲಸಿಕೊಟ್ಟರೆ ಮೂಲದ ಮೊಳೆ ಮೇಲಕ್ಕೆ ಏರುತ್ತದೆ.

೨. ಸೂರ್ಯೋದಯದ ಕಾಲದಲ್ಲಿ ಏಳು ಅಥವಾ ಹತ್ತು, ಹದಿನೈದು, ಮೂವತ್ತು ದಿವಸಗಳು ಮಜ್ಜಿಗೆಯನ್ನು ತೆಗದುಕೊಂಡರೆ ಮೂಲದಮೊಳೆ ಕೆಡುತ್ತೆ.

೩. ಮಜ್ಜಿಗೆ ಅಥವಾ ಮಜ್ಜಿಗೆ ಅನ್ನ, ಮಜ್ಜಿಗೆ ಗಂಜಿ, ಸೈಂಧವಲವಣ, ನೊರೆ ಮಜ್ಜಿಗೆ, ಅಳಲೇಕಾಯಿ, ಮಜ್ಜಿಗೆಯನ್ನಾಗಲಿ ತೆಗದುಕೊಂಡರೆ ಅರ್ಶದ ರೋಗ ಪರಿಹರವಾಗುತ್ತೆ.

೪. ಚಿತ್ರಮೂಲವನ್ನು ಅರದು ಗಡಿಗೇಒಳಗೆ ಸವರಿ ಅದಕ್ಕೆ ಮಜ್ಜಿಗೆಯನ್ನು ಹಾಕಿ ಇಟ್ಟು ದಿನವಹಿ ತೆಗದುಕೊಂಡರೆ ಗುದದಲ್ಲಿ ಒತ್ತುವಮೊಳೆಗೆ ಹಿತವಾಗುತ್ತೆ.

೫. ಕಿರಿಗುಳ್ಳದಕಾಯಿಯನ್ನು ಮರ್ದಿಸಿ ಗಡಿಗೆಒಳಕ್ಕೆ ಲೇಪಿಸಿ ಮಜ್ಜಿಗೆಯನ್ನೂ, ಅಂಬಲಿಯನ್ನೂ ತುಂಬಿಯಿಟ್ಟು ಸೇವಿಸುತ್ತಾ ಬಂದರೆ ಅರ್ಶರೋಗಹರವಹುದು.

೬. ಮೇಲೆ ಹೇಳಿದ ಪ್ರಕಾರ ಮಜ್ಜಿಗೆ ಕುಡಿಯುವದರಿಂದ ಅನ್ನದರಸ ಮೈಗೇರಿ ಕಾಂತಿ ಉಂಟಾಗುತ್ತೆ.

೭. ಒಳ್ಳೇ ಚಿತ್ರಮೂಲವನ್ನು ನೀರಿನಲ್ಲಿ ಹಾಕಿ ಸೈಂಧವಲವಣ ಹಾಕಿ ತೆಗದುಕೊಂಡರೆ ಅಗ್ನಿದೀಪನೆಯಾಗುತ್ತೆ, ಮತ್ತು ಯಳ್ಳಿನ ಪುಡಿಯನ್ನೂ, ಗೇರನ್ನೂ ಸಹ ಸಾಧಿಸಿದರೆ ಕುಷ್ಟ ಪರಿಹಾರವಾಗಿ ಅಗ್ನಿದೀಪನೆಯಾಗಿ ಅರ್ಶಗೆ ಹಿತವನ್ನು ಉಂಟುಮಾಡುತ್ತೆ.

೮. ಬೆಲ್ಲ ಶುಂಠಿಗಳನ್ನು ಆಮದೋಷಕ್ಕೂ, ಬೆಲ್ಲ ಹಿಪ್ಪಲಿಗಳನ್ನು ಅಜೀರ್ಣಕ್ಕೂ, ಬೆಲ್ಲ ಜೀರಿಗೆಗಳನ್ನು ಮೂತ್ರ ಕೃಛ್ರಕ್ಕೂ, ಬೆಲ್ಲ ಅಳಲೆಗಳನ್ನು ಮೂಲವ್ಯಾಧಿಗೂ ಕೊಟ್ಟರೆ ಹಿತವಾಗುತ್ತೆ.

೯. ಕೊರಟಿಗೆ ಬೇರಿನ ತೊಗಟೆಯನ್ನು ಆಡಿನ ಮೂತ್ರದಿಂದರದು ಕೊಟ್ಟರೆ ಮೂಲರೋಗಹರವಾಗುತ್ತೆ.

೧೦. ಬದನೇಕಾಯಿಯನ್ನು ಬೇಯಿಸಿ ಬೆಲ್ಲ ಹಾಕಿ ತಿಂದರೆ ಮೂಲರೋಗ ಪರಿಹರವಾಗುತ್ತೆ.

೧೧. ಜಾಪಾಳ, ಬೆಲ್ಲ, ತಿಗಡೆಗಳನ್ನು ಅರದು ಒಂದು ಗುಂಜಿ ಮಾತ್ರ ತೆಗದು ಕೊಂಡರೆ ಮಲ ಸಡಲಿ ಮೂಲರೋಗ ಪರಿಹರವಾಗುತ್ತೆ.

೧೨. ಬಿಳಿಗಾರಕ್ಕೆ ಬೆಲ್ಲವನ್ನು ಸಮವಾಗಿ ಕೇರಿಸಿ ಒಂದುವರಹಾ ತೂಕದ ಗುಳಿಗೆಯನ್ನು ತೆಗದು ಕೊಂಡರೆ ಮೂಲದಲ್ಲಿರುವ ತಿನಸುರೋಗ ಸಹ ಪರಿಹಾರವಾಗುತ್ತೆ.

೧೩. ಅರವತ್ತು ಸೇರು ಗೋಮೂತ್ರದಲ್ಲಿ ನೂರು ಅಳಲೇಕಾಯಿಗಳನ್ನು ಹಾಕಿ ಸುಂಡುವವರಿಗೂ ಕಾಸಿ ಎರಡೆರಡು ಕಾಯಿಗಳನ್ನು ಜೇನುತುಪ್ಪದಲ್ಲಿ ಕಲಸಿ ತಿಂದರೆ ಅರ್ಶರೋಗಹರವು.

೧೪. ತುರುಚಿಕೆಯಲ್ಲಾಗಲಿ, ಸುಂಠಿಯಲ್ಲಾಗಲಿ, ಬಿಲ್ವದೊಳಗಾಗಲಿ, ಅಜವಾನದೊಳಗಾಗಲಿ ಅಳಲೇಕಾಯಿಯ ಸಮ ಪುಡಿಯನ್ನು ಬೆರಸಿ ತಿಂದರೆ ಅರ್ಶರೋಗಹರವು.

೨೫. ಮೂಲಕ್ಕೆ ಲೇಪಗಳು.

೧. ಬೆಲ್ಲ, ಕೋಳಿಯಪಿಕ್ಕೆ, ಸುಂಠಿ, ಸೈಂಧವಲವಣ, ಮರದರಿ ನಗಳನ್ನು ನೀರಿನಲ್ಲಿ ಅರದು ಲೇಪವನ್ನು ಗುದಕ್ಕೆ ಮಾಡಿದರೆ ಗುದದಲ್ಲಿ ಅಡಸಿರುವ ಮೊಳೆ ಪರಿಹರವಾಗುತ್ತೆ.

೨. ದಾಳಿಂಬ, ಸೈಂಧಲವಣಗಳನ್ನು ನೀರಿನಲ್ಲಿ ಹಾಕಿ ಮರ್ದಿಸಿ ಲೇಪಿಸಿದರೆ ಗುದದಲ್ಲಿ ಮೂಲದಮೊಳೆ ಕೆಡುವದು.

೩. ಸೀಸದ ಗಟ್ಟಿಯನ್ನು ನಿಂಬೇರಸದಿಂದ ತೇಯಿದು ಲೇಪಿಸಿದರೆ ಮೂಲದಮೊಳೆ ಕೆಡುವದು.

೪. ಯಕ್ಕೇಹಾಲಿನಲ್ಲಿ ಅಳಲೆ, ತಾರೆ, ನೆಲ್ಲಿಗಳನ್ನು ತೇಯಿದು ಹಚ್ಚಿಸಿದರೂ, ಅಥವಾ ನುಗ್ಗೇಬೇರು ಯಕ್ಕೇಯಲೆಗಳನ್ನು ಅರದು ಗುದಕ್ಕೆ ಇಟ್ಟರೂ ಮೊಳೆ ಕರಗುತ್ತದೆ.

೫. ಕೈಸೋರೆಯಲೆ, ಹುಲಿಗಿಲಬೇರು, ಮಂಡಗಳ್ಳಿಕೊನೆ, ಯಕ್ಕೇಹಾಲುಗಳನ್ನು ಕೇರಿಸಿ ಆಡಿನಮೂತ್ರದಲ್ಲಿ ಅರದು ಲೇಪಿಸಿದರೆ ನವೆ ಪರಿಹರವಾಗುತ್ತೆ.

೬. ಕಿರಿಬೆರಳಿನಗಾತ್ರದ ಸೀಸದ ಕಣಿಗೆ ಸೈಂಧವಲವಣ, ತುಪ್ಪಗಳನ್ನು ಅರದು ಲೇಪಿಸಿ ಗುದದಲ್ಲಿಟ್ಟು ಕಟ್ಟಿದರೆ ಮಲಸಡಲಿ ಮೂಲರೋಗ ಪರಿಹಾರವಾಗುತ್ತೆ.

೩. ಗುಲಗಂಜಿಪುಡಿಯನ್ನೂ, ಕುಂಬಳದಬೀಜವನ್ನೂ ಸಹ ನೀರಿನಿಂದ ಮರ್ದಿಸಿ ಬತ್ತಿಗೆ ಲೇಪಿಸಿ ಒಣಗಿಸಿ ಆ ಬತ್ತಿಯನ್ನು ಗುದದಲ್ಲಿಟ್ಟರೆ ಮೂಲರೋಗಹರವು.

೪. ನಿಂಬೇಹುಳಿಯಲ್ಲಿ ಚಿತ್ರಮೂಲವನ್ನರೆದು ಬತ್ತಿಗೆ ಹತ್ತಿಸಿ ಗುದದಲ್ಲಿಟ್ಟರೆ ಮೂಲರೋಗಹರವು.

೬. ಮೂಲಕ್ಕೆ ಧೂಪಗಳು.

೧. ಹಾವಿನಪರೆ, ಅಥವಾ ಮನುಷ್ಯರ ಕೂದಲು, ಅಥವಾ ಬಾವಕ್ಕಿತೊಗಲು, ಅಥವಾ ಯಕ್ಕೆಬೇರು, ಅಥವಾ ಬನ್ನಿಯಲೆ, ಹಸುವಿನ ತುಪ್ಪವನ್ನು ಸವರಿ ಧೂಪಕೊಟ್ಟರೆ ಮೂಲದ ಮೊಳೆ ಬತ್ತುವದು.

೭. ಅರ್ಶಗುಲ್ಮಕ್ಕೆ ಔಷಧಗಳು.

೧. ಹುಳಿಗೊಳಿಗಡ್ಡೆ, ಮಂಗರವಳ್ಳಿ, ಚಿತ್ರಮೂಲ, ಚೋರ್ಣಗಡ್ಡೆ, ಕಲ್ಲುಕಣುಬುಗಳ ಪುಡಿಯನ್ನು ಮಜ್ಜಿಗ್ಗೆ ಹಾಕಿ ಕೊಟ್ಟರೆ ಅರ್ಶ ಗುಲ್ಮಗಳು ಹರವು.

೨. ಜಾಪಾಳ, ಗೇರು, ಚಿತ್ರಮೂಲ, ಅಳಲೆ, ನೆಲ್ಲಿ, ತಾರೆಗಳ ಪುಡಿಗೆ ಎರಡಷ್ಟು ಸೈಂಧವಲವಣವನ್ನು ಬೆರಸಿ ಮಣ್ಣಿನ ಮುಚ್ಚಳದಲ್ಲಿ ಇಟ್ಟು, ಮೇಲೆ ಮುಚ್ಚಳ ಮುಚ್ಚಿ ಪುಟಹಾಕಿ ಆಪುಡಿಯಲ್ಲಿ ಒಂದು ತೊಲೆ ಪ್ರಕಾರ ಅನ್ನ ತುಪ್ಪಗಳ ಜೊತೆಯಲ್ಲಿ ಹಾಕಿ ಕಲಸಿ ತಿಂದರೆ ಅರ್ಶಹರವು.

೮. ರಕ್ತಾರ್ಶಿಗೆ ಔಷಧಗಳು.

೧. ಬಿಸಿನೀರಾಗಲಿ, ಹಸುವಿನ ಮಜ್ಜಿಗೆಯಾಗಲಿ, ಎಳ್ಳು ಬೆಣ್ಣೆಗಳಾಗಲಿ, ಲಾಮಂಚ, ಬೆಣ್ಣೆ, ಸಕ್ಕರೆ ಸಮತೂಕದಲ್ಲಿ ಅರೆದ್ದಾಗಲಿ, ತೆಗದುಕೊಂಡು ರಕ್ತಾರ್ಶಹರವು.

೨. ನೆಲಬೇವು, ಕೊನ್ನಾರಿ, ಚಂದನ, ಕೋಲಮುಕ್ಕನ ತೊಗಟೆ, ದಾಳಿಂಬ, ಮರದರಿಶಿನಗಳ ಚೂರ್ಣವನ್ನು ನೀರಿನಲ್ಲಾಗಲಿ, ಸಕ್ಕರೆಯಲ್ಲಾಗಲಿ ಕಲಸಿಕೊಟ್ಟರೆ ರಕ್ತಾರ್ಶಹರವು.

೩. ಲವಂಗಚಕ್ಕೆ, ಲಾಮಂಚ, ಬೇವಿನವಳನಾರು, ಜೇಷ್ಠಮಧುಗಳ ಕಷಾಯವನ್ನಾಗಲಿ, ಕಳ್ಳಿಗಡ್ಡೆ ಮಾವುಗಳ ಕಷಾಯವಾಗಲಿ ಕೊಟ್ಟರೆ ರಕ್ತಾರ್ಶಹರವು.

೪. ಇಂದ್ರಜವೆಯನ್ನು ಕಲ್ಕಮಾಡಿ ತುಪ್ಪಕ್ಕೆ ಹಾಕಿ ಕಾಸಿ ಆ ತುಪ್ಪವನ್ನು ತಿಂದರೆ ರಕ್ತಾರ್ಶಹರವು.

೫. ಕೆಂಪು ಉತ್ತರಣೆ, ಕೊನ್ನಾರಿಗಳ ಕಷಾಯವು ರಕ್ತಾರ್ಶಹರವು.

೬. ಉತ್ತರಣೆ ಬೇರು, ತಾರೆಕಾಯಿಗಳ ನೀರಿನಿಂದ ಮರ್ದಿಸಿ ತಿಂದರೆ ಸೋರುವ ರಕ್ತಾರ್ಶಗೆ ವೊಳ್ಳೇದು.

೭. ಅರಿಶಿನವ ಪುಟವಿಟ್ಟ ಬೂದಿಯು ಕಳ್ಳಿಹಾಲಿನಿಂದ ಮರ್ದಿಸಿ ಮೊಳೆಗೆ ಲೇಪಿಸಿದರೆ ಕರಗಿ ಮೂಲರೋಗಹರವು.

೮. ಅರಿಶಿನವನ್ನು ಯಕ್ಕೇಹಾಲಿನಿಂದ ಮರ್ದಿಸಿ ಧಾರಕ್ಕೆ ಭಾವನೆಮಾಡಿ ಮೊಳೆಗೆ ಕಟ್ಟಿದರೆ ಬೇರು ಕಿತ್ತಂತೆ ಮೊಳೆ ಹೋಗುವದಲ್ಲದೆ ಅರ್ಶಗೆ ಹಿತವು.

೯. ಗರುಗದರಸವನ್ನು ಹಾಲುಹಾಕಿ ಮಾಡಿದ ಅಕ್ಕೀ ಪರಮಾನ್ನಕ್ಕೆ ತುಪ್ಪವನ್ನು ಹಾಕಿ ಊಟವನ್ನು ಮಾಡಿದರೆ ಅರ್ಶರೋಗಹರವು.

೧೦. ಕಿರಿಯಳ್ಳು ಹಿಡಿಕಲ್ಲುಪ್ಪುಗಳನ್ನು ತಿಂದರೆ ಅರ್ಶರೋಗಹರವು.

೧೧. ಅತ್ತೀಹಾಲಿನಿಂದ ಕಾಚನ್ನು ಅರದು ತೊತುಗಳು ಮಾಡಿದ ಮೊಲಂಗೀಗೆ ಹತ್ತಿಸಿ ಗುದದಲ್ಲಿಟ್ಟರೆ ಬಳಮೊಳೆಯಲ್ಲವು ಪರಿಹರವಾಗುತ್ತೆ.

೧೯. ಕ್ಷಯಕ್ಕೆ ಔಷಧಗಳು.

೧. ಬಹುದೋಷಗಳು ಕೂಡಿದ್ದು ದೇಹದಲ್ಲಿ ಬಲವಿದ್ದರೆ ಅದನ್ನು ತಿಳಿದು ಸುಖವಾಗಿ ವಾಂತಿಯಾಗುವದಕ್ಕೂ, ಪ್ರವರ್ತಿಯಾಗುವದಕ್ಕೂ ವೈದ್ಯವನ್ನು ಮಾಡಬೇಕು.

೨. ಕ್ಷಯರೋಗಿಗೆ ಧಾತು ಬಲಕ್ಷಯವಾಗಿದ್ದು ಮಲ ಬಲ ವಂದಾದರೂ ಇದ್ದರೆ ಆಬಲ ಕೆಡದಹಾಗೆ ಉಪಾಯದಿಂದ ಆಬಲವನ್ನು ರಕ್ಷಿಸುತ್ತಾ ಔಷಧೀ ಮಾಡಬೇಕು.

೩. ಬಲವಿದ್ದರೆ ವಾಂತಿ ಪ್ರವರ್ತಿಗಳಿಗೆ ಔಷಧವನ್ನು ಕೊಡಬಹುದು. ಬಲವಿಲ್ಲದ ಕಾಲದಲ್ಲಿ ವಾಂತಿ ಪ್ರವರ್ತಿಗಳಿಗೆ ಕೊಟ್ಟರೆ ವಿಷದ ಜೊತೆಗೆ ಮತ್ತಷ್ಟು ವಿಷವನ್ನು ಸೇರಿಸಿದಂತೆ ರೋಗವು ಅಧಿಕವಾಗುತ್ತೆ. ಅದ್ದರಿಂದ ಮಲಬಲವಿಲ್ಲದವೇಳೆ ವಾಂತಿ ಪ್ರವರ್ತಿಗಳಿಗೆ ಔಷಧವನ್ನು ಕೊಡದೆ ಶಮನದ ಔಷಧಗಳನ್ನೇ ಕೊಡಬೇಕು.

೪. ಕ್ಷಯಕ್ಕೆ ಶರೀರಕೃಶವಾಗುವ ಔಷಧವನ್ನು ಕೊಡದೆ ಶರೀರವು ಪುಷ್ಟಿಯಾಗುವಂತೆಯೂ ಲಘುವಾಗುವಂತೆಯೂ ವಾತಹರವಾಗಿಯೂ ರುಚಿಯಾಗಿಯೂ ಮೃದುಭೋಜನವಾಗಿಯೂ ಇರುವ ಔಷಧ, ಅನ್ನಗಳನ್ನು ಕೊಡಬೇಕು.

೫. ಹಾಲನ್ನಾಗಲಿ, ಗಂಜೀರಸವನ್ನಾಗಲಿ ತುಪ್ಪವೆರದು ಕುಡಿಸಿ ಮೂಲಿಕೆ ರಸಗಳನ್ನು ಕೊಟ್ಟು ಕಾರಿಸಲೂಬಹುದು, ಅಥವಾ ಪುಡಿಯನ್ನು ಕೊಟ್ಟು ಪ್ರವರ್ತಿಯನ್ನು ಮಾಡಿಸಬಹುದು.

೬. ಮಂಗಾರೆಫಲವನ್ನು ವಾಂತಿಗೂ, ಕಕ್ಕೆತಿಗಡೆಗಳ ಪುಡಿಯನ್ನು ಪ್ರವರ್ತಿಗೂ ಸಹ ಕೊಟ್ಟು ಕ್ರಮವಾಗಿ ವಾಂತಿ ಪ್ರವರ್ತಿಗಳನ್ನು ಮಾಡಿಸಬೇಕು.

೭. ಕ್ಷೀಣವಾದ ಶರೀರಕ್ಕೆ ವಾಂತಿ ಪ್ರವರ್ತಿಗಳಿಗೆ ಔಷಧಗಳನ್ನು ಕೊಡದೆ ಹಸುವಿನ ಹಾಲು, ತುಪ್ಪ, ಹೊಸಜೇನು, ದ್ರಾಕ್ಷಿ, ಸಕ್ಕರೆಗಳನ್ನು ಸುಖವಾಗುವ ವಷ್ಟಿಗೆ ಕೊಡಬೇಕು.

೮. ಹಿಪ್ಪಲಿ, ವುತ್ತತ್ತಿ, ದ್ರಾಕ್ಷಿ, ಈಚಲಹಂಣು, ಜೇಷ್ಠಮಧುಗಳನ್ನು ತುಪ್ಪದಲ್ಲಿ ಕಲಸಿಕೊಟ್ಟರೆ ಶ್ವಾಸ, ಕೆಮ್ಮು, ಜ್ವರಗಳು ಪರಿಹರವಾಗುತ್ತೆ.

೯. ಸಕ್ಕರೆ, ದ್ರಾಕ್ಷಿ, ಹಿಪ್ಪಲಿ, ಹಾಲು, ತುಪ್ಪಗಳನ್ನು ಹಾಕಿ ಕಾಸಿಕೊಟ್ಟರೆ ಕಾಸ, ಜ್ವರಗಳು ಪರಿಹರವಾಗುತ್ತವೆ. ಈ ಔಷಧಕ್ಕೆ ಪಂಚಸಾರವೆಂದು ಹೆಸರು.

೧೦. ಒಂದುಭಾಗ ತಾಳೀಸಪತ್ರೆ, ಎರಡುಭಾಗ ಮೆಣಸು, ಮೂರುಭಾಗ ಶುಂಠಿ, ನಾಲ್ಕುಭಾಗ ಹಿಪ್ಪಲಿ, ಅರ್ಧಭಾಗ ಲವಂಗ, ಯಾಲಕ್ಕಿಗಳ ಚೂರ್ಣಕ್ಕೆ ಮೂರರಷ್ಟು ಸಕ್ಕರೆಯನ್ನು ಹಾಕಿಕೊಟ್ಟರೆ ಕಾಸಜ್ವರ, ವಾಂತಿ, ಕ್ಷಯ, ಶೋಭೆಗಳು, ಪರಿಹರವು.

೧೧. ಕಾಗೆ, ಆನೆ, ಹದ್ದು, ಗೂಬೆ, ಮೂಗಿಲಿ, ತ್ವಾಳ, ಕತ್ತೆಗಳ ಮಾಂಸಗಳನ್ನು ರೋಗಿಗೆ ತಿಳಿಯದಂತೆ ಕೊಟ್ಟರೆ ಶೀಘ್ರವಾಗಿ ಕ್ಷಯ ಪರಿಹರವಾಗುತ್ತೆ.

೧೨. ಹಿಪ್ಪಲಿ, ಹಿರೀಮದ್ದು, ಸಕ್ಕರೆ, ತುಪ್ಪ, ಜೇನುಗಳನ್ನು ಕಲಸಿಕೊಟ್ಟರೆ ಕ್ಷಯರೋಗ ಹರವು.

೧೩. ಹಿಪ್ಪಲಿ, ದ್ರಾಕ್ಷಿ, ಸಕ್ಕರೆಗಳನ್ನು ವೊಳ್ಳೆಣ್ಣೆಯಲ್ಲಿ ಹಾಕಿ ತಿಂದರೆ ಕ್ಷಯರೋಗ ಹರವು.

೧೪. ನೆಲ್ಲಿ, ಹಿಪ್ಪಲಿ, ಶುಂಠಿ, ಬಿಲ್ವಫಲ, ಚಿತ್ರಮೂಲ, ನೆಲ್ಲರಳಪುಡಿ, ಜೇನು, ಸಕ್ಕರೆಗಳನ್ನು ಕೂಡಿಸಿ ತೆಗದುಕೊಂಡರೆ ಕ್ಷಯಹರವು.

೧೫. ಲಕ್ಕಿಯ ರಸವನ್ನು ಶೇರಿಸಿ ತುಪ್ಪವನ್ನು ಕಾಯಿಸಿಕೊಟ್ಟರೆ ಕ್ಷಯವೂ, ಸರ್ವರೋಗಗಳೂ ಹರವು.

೧೬. ಆಡಿನ ಹಾಲು, ಮೊಸರು, ತುಪ್ಪ, ಮೂತ್ರ, ಹಿಕ್ಕೆಗಳನ್ನು ಏಕೀಕರಿಸಿ ಕಾಸಿ ಆತುಪ್ಪವನ್ನು ಕೊಟ್ಟು ಆಡಿನ ಹಾಲು ಅನ್ನಗಳ ಪಥ್ಯವನ್ನು ಮಾಡಿಸಿದರೆ ಕ್ಷಯರೋಗವು ಪರಿಹರವಾಗುತ್ತೆ.

೧೭. ಆಡಿನ ಹಾಲನ್ನೂ, ಜವೆಗೋಧಿಯನ್ನೂ, ಸಹ ತಿಂದು ಆಡಿನ ಮೂತ್ರ, ಹಿಕ್ಕೆ, ತುಪ್ಪಗಳನ್ನು ಕಾಸಿ ಅಭ್ಯಂಗಸ್ನಾನವನ್ನು ಮಾಡಿ ಆಡಿನ ಸಮೂಹದಲ್ಲಿ ಮಲಗಿಕೊಂಡರೆ ಕ್ಷಯವು ಪರಿಹರವಾಗುತ್ತೆ.

೧೮. ಕೈಯಂಶಗೆ ನಾಲ್ಕು ಪಾಲು ಆಡಿನಹಾಲನ್ನು ಬೆರಸಿ ಕಾಯಿಸುವದಕ್ಕೆ ಇಟ್ಟು ಅದಕ್ಕೆ ಹತ್ತು ಭಾರಿ ಜೇಷ್ಠಮಧುಪುಡಿಯನ್ನು ಉದುರಿಸಿ ಕಾಸಿ ತೆಗದುಕೊಂಡು ಪಾನಕ್ಕೂ ನಸ್ಯಕ್ಕೂ ಸಹ ಅದನ್ನು ಕೊಟ್ಟರೆ ಪಾಂಡು ರಕ್ತಪಿತ್ತ ಕ್ಷಯಹರವು.

೧೯. ದಶಮೂಲವನ್ನು ಹಾಲಿಗೆ ಹಾಕಿ ಕಾಸಿ ಅದನ್ನು ಹೆಪ್ಪುಹಾಕಿ ಆಮೊಸರನ್ನು ಕಡದು ಆಬೆಣ್ಣೆಗೆ ಹಿಪ್ಪಲಿ, ಜೇನು ಹಾಕಿ ಕೊಟ್ಟರೆ ಸ್ವರಭೇದ, ಶೂಲೆ, ಜ್ವರ, ಕ್ಷಯಗಳು ಹರವು.

೨೦. ಆಷಾಢಿ, ನೆಲಗುಂಬಳ, ಅಶ್ವಗಂಧಿ, ಮೂರು ಅಡವಿಕಡ್ಲೆ, ಗಣಿಜಲು, ನೆಗ್ಗಿಲು, ಅಳಲೇಗಳ ಚೂರ್ಣವನ್ನು ತುಪ್ಪ ಜೇನುಗಳಲ್ಲಿ ತಿಂದರೆ ಕ್ಷಯಹರವು.

೨೧. ಅಡ್ಡಸರದ ಕಲ್ಕವನ್ನು ತುಪ್ಪಕ್ಕೆ ಹಾಕಿ ಕಾಸಿ ಜೇನುಹಾಕಿ ತೆಗದುಕೊಂಡರೆ ಕ್ಷಯ, ಪಾಂಡು, ಪಿತ್ತಗಳು ಪರಿಹರವಾಗುತ್ತೆ.

೨೦. ಮೇಹಕ್ಕೆ ಔಷಧಗಳು.

೧. ಮೇಹಕ್ಕೆ ಪಂಚಕರ್ಮಗಳನ್ನು ಮಾಡಿಸಿ ಔಷಧವನ್ನು ಯೋಚಿಸಿ ಬುದ್ಧಿಶಾಲಿಯಾದ ವೈದ್ಯನು ಸಂಶಯವನ್ನು ಬಿಟ್ಟು, ನಿರ್ಮಲ ಮನಸ್ಕನಾಗಿ ಮಾಡಬೇಕು.

೨. ಅಮೃತಬಳ್ಳಿ, ಅಳಲೆ, ಅಜಿವಾನ, ಕಮಲದಂಟುಗಳ ಕಷಾಯವನ್ನು ಕೊಟ್ಟರೆ ಶ್ಲೇಷ್ಮ ಮೇಹ ಹರವು.

೩. ನೆಲಗುಳ್ಳ, ಗುಳ್ಳ, ಶುಂಠಿ, ವಾಯುವಿಳಂಗಗಳ ಕಷಾಯವನ್ನು ಕೊಟ್ಟರೆ ಶ್ಲೇಷ್ಮ ಮೇಹ ಹರವು.

೪. ಅಗಿಲು, ಶ್ರೀಗಂಧ, ಅಳಲೆ, ಕೋಷ್ಠ, ದೇವದಾರುಗಳ ಕಷಾಯವನ್ನು ಕೊಟ್ಟರೆ ಮೇಹ ಹರವು.

೫. ಬೇವಿನಯಲೆ, ಕೈಪಡವಲ, ಅಮೃತಬಳ್ಳಿ, ನೆಲ್ಲಿ, ಮುಸ್ತೆಗಳ ಸಮಭಾಗದ ಕಷಾಯವನ್ನು ಜೇನುಹಾಕಿ ಕೊಟ್ಟರೆ ಪಿತ್ತದ ಮೇಹವು ಪರಿಹರವಾಗುತ್ತೆ.

೬. ಕನ್ನೈದಲು, ಮುಸ್ತೆ, ಲಾಮಂಚ, ನೆಲ್ಲಿ, ಅಳಲೇಗಳ ಕಷಾಯಕ್ಕೆ ಜೇನುಹಾಕಿ ಕೊಟ್ಟರೆ ಪಿತ್ತದ ಮೇಹ ಹರವು.

೭. ಮರದರಿಶಿನ, ದೇವದಾರು, ಮುಸ್ತೆ, ಅಳಲೆ, ನೆಲ್ಲಿ, ತಾರೆಗಳ ಕಷಾಯಕ್ಕೆ ಜೇನುಹಾಕಿ ಕೊಟ್ಟರೆ ಪಿತ್ತದ ಮೇಹವು ಪರಿಹರವಾಗುತ್ತೆ.

೮. ಅಮೃತಬಳ್ಳೀರಸ, ಜೇನು, ಅಥವಾ ನೆಲ್ಲೀರಸ, ಅರಿಶಿನದಪುಡಿ, ಜೇನು, ಅಥವಾ ಅಳಲೆ, ನೆಲ್ಲಿ, ತಾರೆ, ಜೇನು ಹಾಕಿ ಕೊಟ್ಟರೆ ಮೇಹ ಪರಿಹರವಾಗುತ್ತೆ.

೯. ಹೊನ್ನಾವರಿಕೆಯ ಪಂಚಾಂಗಪುಡಿಗೆ ಅರ್ಧಭಾಗ ನೆಲ್ಲಿ, ಕಾಲುಪಾಲು ಅರಿಶಿನಗಳನ್ನು ಹಾಕಿ ಮಜ್ಜಿಗೆಯಲ್ಲಿ ಕೊಟ್ಟರೆ ಮೇಹಕ್ಕೆ ಹಿತವಾಗುತ್ತೆ.

೧೦. ಕಿರನೆಲ್ಲಿಯ ಸಹಮೂಲವನ್ನು ಮಜ್ಜಿಗೆಯಲ್ಲಿ ಅರೆದಿಟ್ಟು ಮಾರನೇ ದಿವಸ ಆರಸಕ್ಕೆ ಸಕ್ಕರೆ ಜೀರಿಗೆಗಳನ್ನು ಹಾಕಿ ಸೇವಿಸಿದರೆ ಮೇಹಹರವು.

೧೧. ಕಡ್ಡಿಉಪ್ಪನ್ನು ನೀರಿನಲ್ಲಾಗಲಿ, ಮೊಸರಿನಲ್ಲಾಗಲಿ ಅರೆದು ಒಂದುವರಹಾ ತೂಕವನ್ನು ತೆಗದುಕೊಂಡರೆ ಕಠಿಣವಾದ ಮೇಹವು ಪರಿಹರವಾಗುತ್ತೆ.

೧೨. ಒಂಭತ್ತು ರೂಪಾಯಿ ತೂಕ ಕಕ್ಕೇಹಣ್ಣನ್ನು ಕಷಾಯಮಾಡಿ ಜೇನು ಹಾಕಿ ತೆಗದು ಕೊಂಡರೆ ಫೇನಾಖ್ಯಮೇಹವು ಪರಿಹರವಾಗುತ್ತೆ.

೧೩. ಅಮೃತಬಳ್ಳಿ ಚಿತ್ರಮೂಲಗಳ ಕಷಾಯದಲ್ಲಿ ಕಟುಕರೋಹಿಣಿ, ಇಂಗು, ಕೋಲಮುಕ್ಕ, ಅಗಳುಶುಂಠಿಗಳ ಚೂರ್ಣವನ್ನು ಹಾಕಿ ಕೊಟ್ಟರೆ ಸರ್ಪಿಮೇಹಹರವು.

೧೪. ತುರುಚೆ, ಅಗಳುಶುಂಠಿ, ಗರಿಕೆ, ರಸ, ಮುತ್ತುಗದ ಬೇರುಗಳ ಚೂರ್ಣವನ್ನು ಹಸೀಶುಂಠಿಯರಸಕ್ಕೆ ಹಾಕಿ ಕೊಟ್ಟರೆ ಹಸ್ತಿಮೇಹವು ಪರಿಹರವಾಗುತ್ತೆ.

೧೫. ಕೋರೆಗೆಡ್ಡೆರಿನ ತೊಗಟೆಯರಸದಲ್ಲಿ ಜೇನುಹಾಕಿ ಕೊಟ್ಟರೆ ಮೇಹರೋಗವು ಪರಿಹರವಾಗುತ್ತೆ, ಮತ್ತು ಚಿಲ್ಲದ ಬೀಜವನ್ನು ಅರೆದು ಕೊಟ್ಟರೆ ಮೂರು ದೋಷದ ಮೇಹವು ಪರಿಹರವಾಗುತ್ತೆ.

೨೧. ಮೂತ್ರಕೃಛ್ರಕ್ಕೆ ಔಷಧಗಳು.

೧. ಕಕ್ಕೇಹಣ್ಣಿನತಿಳಲು, ತುರಚೇಬೇರು, ಅಳಲೆ, ನೆಗ್ಗಿಲು, ಹಿಟ್ಟುಳಿಕಗಳ ಕಷಾಯಕ್ಕೆ ಜೇನುಹಾಕಿ ಕೊಟ್ಟರೆ ಮೂತ್ರಕೃಛ್ರರೋಗವು ಪರಿಹರವು.

೨. ಬೂದಗುಂಬಳದ ರಸದಿಂದ ಅದರ ಬೀಜವನ್ನರದು ಜೇನು ಹಾಕಿ ಸಕ್ಕರೆ ಹಾಕಿ ಕೊಟ್ಟರೆ ಮೂತ್ರಕೃಛ್ರರೋಗವು ಪರಿಹರವು.

೩. ಬಿಳೇಗಣಿಜಲ ಬೇರನ್ನು ಸುಟ್ಟು ಬೂದಿಯನ್ನು ಹಾಲಿನಲ್ಲಿ ಹಾಕಿ ಕೊಟ್ಟರೆ ಮೂತ್ರಕೃಛ್ರರೋಗವು ಪರಿಹರವು.

೪. ಕತ್ತೇಲದ್ದಿ, ಮೆಣಸಿನ ಚೂರ್ಣಗಳನ್ನು ನೀರಿನಲ್ಲಿ ಹಾಕಿ ಕೊಟ್ಟರೆ ಮೂತ್ರರೋಗಹರವು.

೫. ಮೆರದರಿಶಿನ, ಜೇಷ್ಠಮಧು, ಸವತೇಬೀಜಗಳನ್ನು ಅಕ್ಕೀಕಚ್ಚಿನಲ್ಲಿ ಅರದು ಕೊಟ್ಟರೆ ಮೂತ್ರಕೃತ್ಯಹರವು.

೬. ಅಳಲೆ, ನೆಲ್ಲಿ, ತಾರೆಗಳ ಚೂರ್ಣಕ್ಕೆ ಸೈಂಧವಲವಣವನ್ನು ಕೇರಿಸಿ ನೀರಿನಲ್ಲಿ ಹಾಕಿ ಕೊಟ್ಟರೆ ಮೂತ್ರಕೃತ್ಯವು ಪರಿಹರವು.

೭. ರಾತ್ರಿಕಾಲದಲ್ಲಿ ದ್ರಾಕ್ಷಿಯನ್ನು ನೀರಿನಿಂದರದು ಇಟ್ಟು ಉದಯಕಾಲದಲ್ಲಿ ಕೊಟ್ಟರೆ ಪೈತ್ಯದದೋಷದ ಮೂತ್ರಕೃಚ್ಛ್ರಕ್ಕೆ ಹಿತವಾಗುತ್ತೆ.

೮. ನೆಲ್ಲಿಯರಸಕ್ಕೆ ಜೇನು ಸಕ್ಕರೆಗಳನ್ನು ಹಾಕಿಯಾಗಲಿ, ಯಾಲಕ್ಕೀ ಪುಡಿಯನ್ನು ಹಾಕಿಯಾಗಲಿ ಕೊಟ್ಟರೆ ಶ್ಲೇಷ್ಮಮೂತ್ರ ಕೃಛ್ರಹರವಾಗುತ್ತೆ.

೨೨. ಅಶ್ಮರೀರೋಗಕ್ಕೆ ಔಷಧಗಳು.

೧. ಕೀಗುಳ್ಳ, ಗುಳ್ಳ, ನೆಗ್ಗಿಲು, ಕೊಳವಳಿಕೆ, ಔಡಲ, ಲಕ್ಕಿಗಳ ಬೇರುಗಳನ್ನು ಮೊಸರಿಂದ ಕೊಟ್ಟರೆ ಮೂತ್ರದಲ್ಲಿ ಕಲ್ಲುಕಟ್ಟಿರುವದು ಪರಿಹರವಾಗುತ್ತೆ.

೨. ಉತ್ತರಣೆ, ಲಾಮಂಚ, ಯಳ್ಳು, ಮುತ್ತುಗದ ಯಲೆ, ಮತ್ತು ಕಡ್ಡಿಗಳ ಬೂದಿಯನ್ನು ಕುರಿಯ ಮೂತ್ರದಲ್ಲಿ ಕೊಟ್ಟರೆ ಅಶ್ಮರೀರೋಗವು ಪರಿಹರವಹುದು.

೩. ಅಳಲೆ, ಬಾಳೇದಿಂಡು, ಗಣಜಿಲುಗಳನ್ನು ಕುಟ್ಟಿ ಹಾಲಿಗೆ ಹಾಕಿ ಕಾಸಿ ಆ ಹಾಲೂ ಅನ್ನವನ್ನು ತಿಂದರೆ ಅಶ್ಮರೀರೋಗಹರವು.

೪. ಕಲ್ಲುಹಣಬು, ದೇವದಾರು, ಕೊನ್ನಾರಿ, ಜೇಷ್ಟಮಧು, ಅಳಲೆಗಳನ್ನು ಹಾಲಿಂದಲಾಗಲಿ, ನೀರಿಂದಲಾಗಲಿ ಕಾಸಿಕೊಟ್ಟರೆ ಮೂತ್ರಘಾತವು ಪರಿಹರವಾಗುತ್ತೆ.

೫. ಅಡವಿಕಡ್ಲೆ, ನೆಗ್ಗಿಲುಗಳ ಕಷಾಯಕ್ಕೆ ಜೇನು ಹಾಕಿಕೊಟ್ಟರೆ ಕಿಕ್ಕು ಮೂತ್ರವು ಪರಿಹರಿಸುತ್ತೆ.

೬. ಅಮೃತಬಳ್ಳಿ, ಶುಂಠಿ, ನೆಲ್ಲಿ, ಅಶ್ವಗಂಧಿ, ನೆಗ್ಗಿಲುಗಳ ಕಷಾಯವನ್ನು ಕೊಟ್ಟರೆ ವಾತ ಕೃಛ್ರಹರವು.

೭. ತಾಳೇಕಷಾಯವಾಗಲಿ, ಸಕ್ಕರೆ ನೆಗ್ಗಲುಬೇರುಗಳ ಕಷಾಯವಾಗಲಿ, ಕೊಟ್ಟರೆ ಮೂತ್ರ ಕೃಛ್ರರೋಗವು ಸಮೂಲವಾಗಿ ಪರಿಹರವಾಗುತ್ತೆ.

೮. ನೆಲ್ಲೀ ಪುಡಿ ಬೆಲ್ಲಗಳನ್ನು ತಿಂದರೆ ರಕ್ತಪೈತ್ಯ ಮೂತ್ರದೋಷದ ಕ್ರಮೆಗಳನ್ನು ಪರಿಹರಿಸಿ ಪುರುಷತ್ವವನ್ನು ನಿಲ್ಲಿಸುವದು.

೯. ಯಾಲಕ್ಕಿಪುಡಿ, ಬಾಳೇಗಡ್ಡೆರಸ, ಸುರೆ, ಗೋಮೂತ್ರಗಳನ್ನು ಕೂಡಿಸಿಕೊಟ್ಟರೆ ಶ್ಲೇಷ್ಮದಿಂದಹುಟ್ಟಿದ ಕೀವುಸುರಿಯುವ ಕೃಛ್ರವನ್ನು ಪರಿಹರಿಸುತ್ತೆ.

೧೦. ಯಾಲಕ್ಕಿ ಇಂಗುಗಳ ಪುಡಿಯನ್ನು ಹಾಲು ತುಪ್ಪಗಳಲ್ಲಿ ಕೊಟ್ಟರೆ ರೇತೋಮೂತ್ರವನ್ನು ಪರಿಹರಿಸುವದು.

೧೧. ಮುತ್ತುಗದ ಚೂರ್ಣ, ಬೆಲ್ಲಗಳನ್ನಾಗಲಿ, ಅಡಿನವಮೂತ್ರ, ಜೇನು, ನೆಗ್ಗಿಲ ಚೂರ್ಣ, ಜವೆಖಾರ, ಸಕ್ಕರೆಗಳನ್ನು ಕೊಟ್ಟರೆ ಅಶ್ಮರೀರೋಗ ಹರವು.

೧೨. ಕೊತ್ತುಂಬರಿಯ ಕಲ್ಕಕ್ಕೆ ಬೆಲ್ಲವನ್ನೂ, ತೆಂಗಿನಕಾಯಿಯ ನೀರನ್ನೂ ಹಾಕಿ ಕೊಟ್ಟರೆ ರಕ್ತಬೀಳುವ ಮೂತ್ರಕೃಛ್ರಹರವು.

೧೩. ಎಳನೀರಲ್ಲಿ ಯಾಲಕ್ಕಿ, ಸವತೇಬೀಜ, ಕಬ್ಬು, ಜೇಷ್ಟಮಧುಗಳನ್ನು ಹಾಕಿ ಕಷಾಯವನ್ನು ಕೊಟ್ಟರೆ ಉರಿವಾತ, ತೃಷ್ಣೆ, ದಾಹ, ಉರಿಮೂತ್ರ, ಪೈತ್ಯಕೃಛ್ರ, ರಕ್ತಸ್ರಾವಗಳು ಪರಿಹರವಾಗುತ್ತವೆ.

೧೪. ಸವತೇಬೀಜದ ಕಲ್ಕಕ್ಕೆ ಸ್ವಲ್ಪ ಸೈಂಧವಲವಣವನ್ನು ಹಾಕಿ ನೀರಿನಲ್ಲಿ ಕದಡಿ ಕೊಟ್ಟರೆ ಮೂತ್ರಬಾಧೆ ತಪ್ಪುವದು.

೧೫. ಅಕ್ಕಿಯ ಕಚ್ಚಿನಲ್ಲಿ ಚಂದನ ಸಕ್ಕರೆಗಳನ್ನು ಹಾಕಿ ಕುಡಿದು ಹಾಲು ಅನ್ನವನ್ನು ತಿಂದರೆ ಉರಿವಾತ, ಮೂಣಿಯಲ್ಲಿ ಬೀಳುವ ರಕ್ತ, ಕರಘಾತದಿಂದಲೂ ಸ್ತ್ರೀಯರುಗಳಲ್ಲಿ ರಮಿಸುವದರಿಂದಲೂ ಬೀಳುವ ರಕ್ತವು ಪರಿಹರವಾಗುತ್ತೆ.

೨೩. ಗುಲ್ಮರೋಗಕ್ಕೆ ಔಷಧಗಳು.

೧. ಗುಲ್ಮಗಳು ಐದುಪ್ರಕಾರವಿರುತ್ತೆ. ಯಾವಗಳೆಂದರೆ—ವಾತ, ಪಿತ್ತ, ಶ್ಲೇಷ್ಮ, ಸಮುದಾಯ, ರಕ್ತಗಳೆಂದು ಐದುಗುಲ್ಮಗಳಹೆಸರು. ಇವುಗಳನ್ನು ತಿಳಿದು ವೈದ್ಯವನ್ನು ಮಾಡಿದ್ದೇಆದರೆ ಪರಿಹಾರವಾಗುತ್ತೆ.

೨. ಐದು ಹೇರಳೆಕಾಯಿಗಳನ್ನು ಮೂರುಭಾಗ ಮಾಡಿ ಪಂಚಲವಣಗಳನ್ನು ಹಾಕಿ ಕೂಡಿಸಿ ಒಂದು ಗಡಿಗೆಯಲ್ಲಿ ಇದರಪೈಕೀ ಅರ್ಧವನ್ನು ಹಾಕಿ ಅದರಮೇಲೆ ಶುಂಠಿ, ಹಿಪ್ಪಲಿ, ಮೆಣಸು, ಇಂಗು ಇವುಗಳಿಗೆ ನಾಲ್ಕರಷ್ಟು ಬೆಳ್ಳುಳ್ಳಿ ಸಹ ಹಾಕಿ ಇವುಗಳಮೇಲೆ ಬಾಕಿ ಅರ್ಧ ಕಾಯಿಯನ್ನು ಮುಚ್ಚಿ ಬೇಯಿಸಿ ಅರದು ಮುದ್ದೆಮಾಡಿ ತೈಲದಲ್ಲಿ ಕೊಟ್ಟರೆ ಗುಲ್ಮ ಶೂಲೆ ಸಹ ಪರಿಹರವಾಗುತ್ತೆ.

೩. ಕಲ್ಲುಪ್ಪು, ಶುಂಠಿಗಳ ಶೇರು ಒಂದರಜೊತೆಗೆ ಒಂದುತೊಲೇ ಇಂಗನ್ನು ಹಾಕಿ ಪುಡಿಮಾಡಿ ಒಂದು ತೆಂಗಿನಕಾಯಿಯಲ್ಲಿ ಮತ್ತಗೆ ತುಂಬಿ ಪುಟವಿಟ್ಟು ಅರದು ಒಂದುತೊಲೆಯ ಪ್ರಕಾರ ಕೊಟ್ಟರೆ ಗುಲ್ಮ ಪರಿಹರವಾಗುತ್ತೆ.

೪. ಬಾಲರಾಕ್ಷಸಗಡ್ಡೆಯನ್ನು ಬೆಂಕಿಯಿಂದ ಸುಟ್ಟು ಅರದು ಮೊಸರಿನಲ್ಲಿ ಕದಡಿ ಕೊಟ್ಟರೆ ಗುಲ್ಮ ಪರಿಹರವಾಗುತ್ತೆ.

೫. ಬಾಲರಾಕ್ಷಸಗಡ್ಡೆ ಚೂರ್ಣವನ್ನು ಮಜ್ಜಿಗೆಯಲ್ಲಿ ಹಾಕಿಕೊಟ್ಟರೆ ನೀರಬಿಲ್ಲಿಗೆ ಹಿತವಾಗುತ್ತೆ.

೬. ಬಿಳೀಗಣಜಿಲೆಬೇರು, ಸೈಂಧವಲವಣಗಳನ್ನು ಪುಡಿಮಾಡಿ ತುಪ್ಪದಲ್ಲಿಹಾಕಿ ಕೊಟ್ಟರೆ ಗುಲ್ಮ ಪರಿಹರವಾಗುತ್ತೆ.

೭. ಬಿಳೀಗಣಜಿಲೆಬೇರು, ಸೈಂಧವಲವಣಗಳ ಪುಡಿ, ತುಪ್ಪ, ಜೇನು ಕೂಡಿಸಿ ಕೊಟ್ಟರೆ ಜಲಗರಹರವು.

೮. ಒಂದು ತೊಲೆ ಹಿಪ್ಪಲಿ, ಎರಡುತೊಲೆ ತಿಗಡೆಯಪುಡಿ, ಮೂರುತೊಲೆ ಸಕ್ಕರೆಗಳನ್ನು ಬೆರಸಿ ನೀರಿನಲ್ಲಿ ಹಾಕಿ ಒಂದುತೊಲೆಯನ್ನು ಕೊಟ್ಟರೆ ಜಲಗರ, ಹೊಟ್ಟೆಯುಬ್ಬರ, ಶೂಲೆಗಳು ಪರಿಹರವಾಗುತ್ತೆ.

೯. ಒಂದುತೊಲೆ ಇಂಗು, ಎರಡುತೊಲೆ ಬಜೆ, ಮೂರುತೊಲೆ ಬಿಡಾಲವಣ, ನಾಲ್ಕು ತೊಲೆ ಶುಂಠಿ, ಐದುತೊಲೆ ಜೀರಿಗೆ, ಆರುತೊಲೆ ಅಳಲೆ, ಏಳುತೊಲೆ ಪುಷ್ಕರ, ಎಂಟುತೊಲೆ ಕೋಷ್ಟಗಳನ್ನು ಚೂರ್ಣಮಾಡಿ ಕೊಟ್ಟರೆ ಗುಲ್ಮ, ಸಾರಣೆಗಳಿಗೆ ಹಿತವು.

೧೦. ಇಂಗಿಗೆ ಮೂರುಪಾಲು ಸೈಂಧವಲವಣಗಳನ್ನು, ಹರಳು, ಕೈಯಣ್ಣೆ, ಅಮೃತಬಳ್ಳಿಸತ್ವಗಳ ಮೂರುಭಾಗವನ್ನು ಸಹ ಸೇರಿಸಿ ಮಂಗರವಳ್ಳಿ ರಸದಲ್ಲಿ ಹಾಕಿ ಒಂದು ತೊಲೆಯನ್ನು ಕೊಟ್ಟರೆ ಗುಲ್ಮ, ಶೂಲೆ, ಉದರಗಳಿಗೆ ಹಿತವಾಗುತ್ತೆ.

೧೧. ಮುಳ್ಳುಕೊಗ್ಗಿಬೇರನ್ನು ನಾಲ್ಕು ಸೇರು ನೀರು, ಒಂದು ಸೇರು ಹಾಲು ಸಹ ಸೇರಿಸಿ ಅದರಲ್ಲಿ ಹಾಕಿ ಹಾಲು ನಿಲ್ಲುವವರಿಗೂ ಕಾಸಿ ಹೆಪ್ಪುಹಾಕಿ ಅದಕ್ಕೆ ಒಂದು ಸೇರು ಬಿಸಿನೀರು ಹಾಕಿಕೊಟ್ಟರೆ ಆಮಜ್ಜಿಗೆಯು ಪ್ಲೀಹಕ್ಕೆ ಹಿತವು.

೧೨. ಒಂದು ಸೇರು ಹಿಪ್ಪಲಿಯನ್ನು ಮುತ್ತುಕದ ಭಾರದಲ್ಲಿ ಭಾವನೆಮಾಡಿ ಒಂದು ತೊಲೆಯನ್ನು ಕೊಟ್ಟರೆ ಪ್ಲೀಹ, ಜಲಗರ, ಗುಲ್ಮಗಳು ಪರಿಹರವಾಗುತ್ತೆ.

೧೩. ಪಿಳ್ಳುಳ್ಳಿ, ಶುಂಠಿ, ಜೀರಿಗೆ, ಇಂದ್ರಜವೆ, ಚಿತ್ರಮೂಲ, ಪಂಚಲವಣಗಳನ್ನು ತುಪ್ಪದಲ್ಲಿ ಹುರದು ಕೊಟ್ಟರೆ ಗುಲ್ಮಹರವಾಗುತ್ತೆ.

೧೪. ಬಿಡಾಲವಣ, ವಾದಕ್ಕಿಗಳುಗಲಿ, ಸಂವರ್ಚಕಲವಣ, ಚಿತ್ರಮೂಲ, ಇಂಗುಗಳುಗಲಿ ಪುಡಿಮಾಡಿ ಮೊಸರಿನಲ್ಲಿ ಹಾಕಿಕೊಟ್ಟರೆ ಕಾಸ ಗುಲ್ಮಹರವು.

೧೫. ಬಜೆ, ಆಗಳಶುಂಠಿ, ಚಿತ್ರಮೂಲ, ಅಜಮೋದ, ಶುಂಠಿ, ಹಿಪ್ಪಲಿ, ಇಂದ್ರನಜವೆ, ಕೋಷ್ಟ, ಸೈಂಧವಲವಣಗಳನ್ನು ಬೀಸಿನೀರಿನಿಂದರದು ಕೊಟ್ಟರೆ ಗುಲ್ಮಹರವು.

೧೬. ಗಂಟುಭರಂಗಿ, ತಪಸಿ, ದೇವದಾರು, ಶೀಘರಿ, ಬಿಲ್ವ, ಹಿಪ್ಪಲಿಗಳ ಚೂರ್ಣವನ್ನು ಉಳ್ಳಾನೀರಿನಲ್ಲಿ ಹಾಕಿಕೊಟ್ಟರೆ ಹೆಂಗಸರಿಗೆ ರಕ್ತಬೀಳುವ ಗುಲ್ಮವು ಪರಿಹರವಾಗುತ್ತೆ.

೧೭. ಕಾಡುನುಗ್ಗೆ ಕಷಾಯವಾಗಲಿ, ಈ ಕಷಾಯಕ್ಕೆ ಸೈಂಧವಲವಣ, ಹಿಪ್ಪಲಿ, ಚಿತ್ರಮೂಲಗಳ ಪುಡಿಯನ್ನು ಹಾಕಿಯಾಗಲಿ, ಮುತ್ತುಕದ ಕಷಾಯವಾಗಲಿ ಅಥವಾ ಈ ಕಷಾಯಕ್ಕೆ ಆ ಮೇಲೆಹೇಳಿದ ಪುಡಿಗಳನ್ನು ಹಾಕಿಯಾಗಲಿ ಅಥವಾ ಮುತ್ತುಕವನ್ನು ಬೂದಿಮಾಡಿ ನೀರಿನಲ್ಲಿ ಕದಡಿ ಆ ಹುಳಿ ನೀರನ್ನಾಗಲಿ ಕೊಟ್ಟರೆ ಉದರಕ್ಕೆ ಹಿತವಾಗುತ್ತೆ.

೧೮. ತುಪ್ಪ, ಅಳಲೆ, ಕಿಟ್ಟ, ಜೇನು, ಗೋಮೂತ್ರಗಳ ಸಮತೂಕವನ್ನು ಸೇವಿಸಿದರೆ ಪ್ಲೀಹವು, ಗುಲ್ಮಾರ್ಶ, ಮೇಹಕ್ರಿಮಿಗಳು ಪರಿಹರವಾಗುತ್ತೆ.

೧೯. ಮೋಡಿ, ಬೆಳ್ಳುಳ್ಳಿ, ಚಿತ್ರಮೂಲಗಳ ಕಷಾಯಕ್ಕೆ ಸೈಂಧವ, ಬಿಡಾಲವಣಗಳನ್ನು ಹಾಕಿ ಕೊಟ್ಟರೆ ಗುಲ್ಮ, ಶೂಲೆ, ವಾತಗಳು ಪರಿಹರವಾಗುತ್ತೆ.

೨೦. ಹಿಪ್ಪಲಿ, ಹುಲಗಿಲು, ಗೋರಂಟಿ, ಮೋಡಿ, ಗಂಟುಭಾರಂಗಿಗಳನ್ನು, ದೇವದಾರುವನ್ನು ಸಹ ಪುಡಿಮಾಡಿ ಉಳ್ಳಾ ಜಲದೊಳು ಹಾಕಿ ಕೊಟ್ಟರೆ ಹೆಂಗಸರಿಗೆ ರಕ್ತಹರಿಯುವ ಗುಲ್ಮಗಳು ತಪ್ಪುವದು.

೨೧. ಅಳಲೆ, ಬಜೆ, ಕೋಷ್ಟ, ಸೈಂಧವಲವಣ, ಹಿಪ್ಪಲಿ, ಇಂಗುಗಳ ಸಮತೂಕ ಚೂರ್ಣವನ್ನು ತೆಂಗಿನಕಾಯಿನಹಾಲಿನಲ್ಲಿ ಹಾಕಿಕೊಟ್ಟರೆ ರಕ್ತಪೈತ್ಯ, ಗುಲ್ಮ, ಕ್ಷಯಗಳು ಹರವಾಗುತ್ತೆ.

೨೨. ಕಲ್ಲುಸೊಂಬು, ಕಾಡುಬಸಳೆ, ಚೂರಣಗೆಡ್ಡೆ, ಚಿತ್ರಮೂಲ, ಮಂಗರವಳ್ಳಿಗಳನ್ನು ಮಜ್ಜಿಗೆಯಲ್ಲಿ ಅರದು ಕೊಟ್ಟರೆ ಗುಲ್ಮ, ಮೂಲರೋಗ, ಭಗಂಧರಗಳು ಪರಿಹರವಾಗುತ್ತೆ.

೨೩. ಮುಳ್ಳುಕೋಗ್ಗಿಚೂರ್ಣದ ತೊಲಾವನ್ನು ಹಸವಿನ ಮಜ್ಜಿಗೆಯಲ್ಲಿ ಹಾಕಿ ಕೊಟ್ಟರೆ ನೀರಬಿಲ್ಲೆಯು ಪರಿಹರವಾಗುತ್ತೆ.

೨೪. ಕೊಳವಳಿಕೆ, ಉತ್ತರಣೆ, ಬೇವುಗಳನ್ನು ಹಂಚಿನಲ್ಲಿ ಹಾಕಿ ಬೂದಿಯನ್ನು ಮಾಡಿ ಪೊಳ್ಳಿಂಜಿಗೆ ಹಾಕಿ ತೆಗದುಕೊಂಡರೆ ನೀರಬಿಲ್ಲೆಯು ಪರಿಹರವಾಗುತ್ತೆ.

೨೫. ಜೀರಿಗೆ, ಗೇರು, ಅಳಲೆಗಳ ಸಮಚೂರ್ಣಕ್ಕೆ ಸರಿಯಾಗಿ ಬೆಲ್ಲವಂ ಕೂಡಿಸಿ ಕೊಟ್ಟರೆ ಏಳುದಿವಸಗಳು ಸೇವನೆಮಾಡುವದರಿಂದ ನೀರಬಿಲ್ಲೆಯು ಪರಿಹರವಾಗುತ್ತೆ.

೨೪. ವಾತರೋಗಕ್ಕೆ ಔಷಧಗಳು.

೧. ವಾತಕ್ಕೆಪ್ರತಿಕ್ರಿಯೆಗಳು.

೧. ತುಪ್ಪವನ್ನು, ಹಂದೀ ತುಪ್ಪವನ್ನು, ತೈಲವನ್ನು ತೆಗೆದುಕೊಂಡರೆ ವಾತ ರೋಗವು ಪರಿಹರವಾಗುತ್ತೆ. ಇದು ಸ್ನೇಹಪಾನವೆನ್ನಿಸುತ್ತದೆ.

೨. ಸ್ನೇಹಪಾನವಮಾಡುವದರಿಂದ ಜಠರಾಗ್ನಿ, ಧಾತುಗಳು ವೃದ್ಧಿಯಾಗುತ್ತವೆ. ಇದು ಪ್ರಾಣಧಾರಣೆಯಾಹಾರವು, ಮತ್ತು ಉಪ್ಪು, ಹುಳಿ, ಹೆಡಸಿನ ಪದಾರ್ಥಗಳು ವಾತಹರವು.

೨. ವಾತದಲ್ಲಿ ಬೆವರು ಬರುವದಕ್ಕೆ ಔಷಧಗಳು.

೧. ಚಿತ್ತಹಾರುವ ಮಂಚದಮೇಲೆ ರೋಗಿಯನ್ನು ಕುಳ್ಳಿರಿಸಿ ಕಂಬಳಿಗಳನ್ನು ಹೊದ್ದಿಸಿ ಆಮಂಚದ ಅಡಿಯಲ್ಲಿ ಕವೀಯದ ಪಾತ್ರೆಯನ್ನು ಇರಿಸಿ ಅದಕ್ಕೆ ಕಾದ ಇಟ್ಟಿಗೆಯನ್ನು ಹಾಕಿದರೆ ಹೊಗೆ ಬರುತ್ತೆ. ಅದರ ಕಾಬಿಂದ ಬೆವರು ಸರ್ವಾಂಗದಲ್ಲಿಯೂ ಹುಟ್ಟುತ್ತೆ.

೨. ಮೂಲಿಕೆಗಳನ್ನು ಹಾಕಿ ಕಾಸಿದ ನೀರಿನಿಂದ ಅಭ್ಯಂಗನ ಮಾಡಿಕೊಂಡರೂ ಸಾವ್ಯವಾದ ನಸ್ಯವನ್ನು ಹಾಕಿಕೊಂಡರೂ ಬೆವರು ಹುಟ್ಟಿ ಶರೀರವು ಮೃದುವಾಗುತ್ತೆ.

೩. ಹರಳೆಂಣೆಗೆ ಹಾಲು ಹಾಕಿಕೊಟ್ಟು ಬಲಿಷ್ಠನಾದವನಿಗೆ ಪ್ರವರ್ತಿಯನ್ನು ಮಾಡಿಸಬೇಕು, ದುರ್ಬಲನಿಗೆ ಅಗ್ನಿವೃದ್ಧಿಯಾಗಿ ಪಾಚನೆಯಾಗುವಂತೆ ಔಷಧಗಳನ್ನು ಕೊಡಬೇಕು. ಪ್ರವರ್ತಿಮಾಡಿಸಕೂಡದು.

೪. ಅರಿನ, ಅತಿಬಜೆ, ಪರಪಾಷ್ಟಕ, ಇಂದ್ರಜವೆ, ಕಟುಕರೋಹಿಣಿ, ಚಿತ್ರಮೂಲಗಳ ಸಮಭಾಗ ಚೂರ್ಣವನ್ನು ಕೊಟ್ಟರೆ ಆಮಾಶಯದ ವಾತವು ಪರಿಹರವಾಗುತ್ತೆ. ಈ ಚೂರ್ಣಕ್ಕೆ ಷಡ್ರಣವೆಂದು ಹೆಸರುಂಟಾಗಿದೆ.

೫. ಯಕ್ಕೆ, ಮೇಕೆಗಳ ಹಾಲು ಕೂಡಿದ್ದಾಗಲಿ, ಲಕ್ಕಿ, ಹುಣಸೆಯಲೆಗಳ ರಸವನ್ನು ಹಾಕಿ ಕಾಸಿದ ತೈಲವನ್ನಾಗಲಿ ಕೊಟ್ಟರೆ ವಾತಹರವು.

೬. ಕಾಡುಕಡಲೆ ಕಷಾಯಗಳಾಗಲಿ, ತೈಲವಾಗಲಿ, ಹಸುವಿನ ಹಾಲುಹಾಕಿ ಕಾಸಿದ ತೈಲವನ್ನಾಗಲಿ ಕೊಟ್ಟರೆ ವಾತಹರವು.

೭. ಬೆಳ್ಳುಳ್ಳಿಹಿಲಕಾಗಳನ್ನು ಹಾಕಿ ಕಾಸಿದ ಪ್ರೊಳ್ಳಂಣೆಯನ್ನು ಕೊಟ್ಟರೆ ವಾತಹರವು.

೮. ಔಡಲೂಚಕ್ಕೆ, ಅಷ್ಟಮಧು, ಶುಂಠಿ, ಹಿಪ್ಪಲಿಗಳ ಕಷಾಯವನ್ನು ಒಂದು ತೊಲೆಯನ್ನು ಸೇವಿಸಿದರೆ ಸಪ್ತಧಾತುಗಳಲ್ಲಿರುವ ವಾತ ಹರವು.

೯. ಹಿಪ್ಪಲಿ, ಹಿಪ್ಪಲಿಮೂಲ, ಗೇರು, ಹರಳುಗಳನ್ನು ಅರೆದು ಜೇನುಹಾಕಿ ಕೊಟ್ಟರೆ ವಾತಹರವು.

೧೦. ಅಮೃತಬಳ್ಳಿ, ಶುಂಠಿ, ರಾಸ್ನೆ, ಹರಳುಹೂವ್ವು, ದೇವದಾರು, ಗುಗ್ಗುಳಗಳನ್ನು ತುಪ್ಪದಲ್ಲಿ ಹುರಿದುಕೊಟ್ಟರೆ ಒಂದು ತೊಲೆಮಾತ್ರ ತೆಗೆದುಕೊಳ್ಳೋಣದರಿಂದ ಗ್ರಹಣಿವಾತಗಳು ಪರಿಹರವಾಗುತ್ತೆ.

೩. ವಾತಕ್ಕೆ ಶಾಖವು.

೧. ಮೇಕೆಯ ಹಿಕ್ಕೆಯ ಕುದಿಸಿಯಾಗಲಿ, ಬೇಯಿಸಿದ ಹುರಳಿಯನ್ನಾಗಲಿ ಶಾಖವನ್ನು ಕೊಟ್ಟರೆ ವಾಯುವಿನಿಂದ ಹುಟ್ಟಿದನೋವು ಪರಿಹರವಾಗುತ್ತೆ.

೨. ದಶಮೂಲಗಳ ಕಷಾಯವಾಗಲಿ, ತೈಲವಾಗಲಿ, ವಡವಿನಬೇರನ್ನು ಚೂರ್ಣಮಾಡಿ ಹಾಲಲ್ಲಿ ಹಾಕಿಕೊಟ್ಟರೆ ವಾತಹರವು.

೩. ಹರಳುಹೂವ್ವು, ಗೋವೆ, ಗೇರು, ಮದರಂಗಿ, ತುಗ್ಗಿ, ನೆಗ್ಗಿಲು, ನರಲು, ಅಡುಸೋಗೆ, ಹಿಟುಗನ್ನಿ, ಬಿಳಿಮತ್ತಿಗಳ ಕಷಾಯವನ್ನು ಕೊಟ್ಟರೆ ವಾತಹರವು.

೪. ನೆಲಗುಂಬಳ, ಹರಳು, ಗಣಿಜಿಲು, ದೇವದಾರು, ಕಾಡುಹೆಸರು, ಉದ್ದು, ನೆಲಹಾಲೆ, ಹಂಸಪಾದಿ ಕಷಾಯವಾಗಲಿ ಹಾಲಿನಲ್ಲಿ ಹಾಕಿ ಬೇಯಿಸಿ ಆ ಹಾಲನ್ನಾಗಲಿ ಕೊಟ್ಟರೆ ವಾತಹರವು.

೫. ಜೇನಿನ ಅಳಲೆಯನ್ನು ಏಕೋತ್ತರವೃದ್ಧಿಯಿಂದ ನುಂಗಿದರೆ ಸರ್ವರೋಗಹರವು.

೬. ನುಗ್ಗಿ, ಹರಳು, ಹಂಸಪಾದಿ, ತಗ್ಗಿ, ಬ್ಯಾಲ, ಹುರಳಿಗಳನ್ನು ಆಡಿನ ಮೂತ್ರದಲ್ಲಿ ನೆನಸಿ ನಾಲ್ಕರಲ್ಲಿ ಒಂದುಪಾಲು ನಿಲ್ಲುವವರಿಗೂ ಕಾಸಿ ಜಾಗ್ರತೇಲಿ ಬಸಕೊಂಡು ಕೊಟ್ಟರೆ ವಾತಹರವು.

೭. ಕೊತ್ತುಂಬರೀಬೀಜ, ಶುಂಠಿಗಳ ಕಷಾಯವು ದೀಪನಮಾಡುತ್ತೆ. ಇವುಗಳಿಗೆ ಹರಳು, ಲಕ್ಕಿಗಳನ್ನು ಕೇರಿಸಿ ಕಷಾಯವನ್ನು ಮಾಡಿಕೊಟ್ಟರೆ ಆಮವಾತಹರವು.

೮. ಹಳೇಶುಂಠೀರಸಕ್ಕೆ ಜೇನು ಹಾಕಿಕೊಟ್ಟರೆ ಕಾಸ, ಅರುಚಿ, ವಾತ, ಕೆಮ್ಮು, ನೆಗಡಿಗಳು ಪರಿಹರವಾಗುತ್ತೆ.

೯. ಹಂಚಿನಮಳಲನ್ನು ಹುರಿದು ಅರವೆಯಲ್ಲಿ ಹಾಕಿ ಪೊಟ್ಟಣವನ್ನು ಮಾಡಿಕೊಂಡು ಉಪಾಯವಾಗಿ ಶಾಖವನ್ನು ಕೊಟ್ಟರೆ ಕಾಸ, ವಾತ, ತಲೆನೋವುಗಳು ಪರಿಹರವಾಗುತ್ತೆ.

೪. ಆಮವಾತಕ್ಕೆ ಔಷಧಗಳು.

೧. ಒಂದುಪಾವು ನೀರಿನಲ್ಲಿ ಒಂದುತೊಲೆ ಕೋಥ್ಥಿಸಿದ ಶುಂಠಿಯ ಪುಡಿಯನ್ನು ಹಾಕಿ ತೆಗದುಕೊಂಡರೆ ಆಮ, ಕಫವಾತಗಳು ನಿವಾರಣವಾಗುತ್ತೆ.

೨. ಹರಳೆಣ್ಣೆಯಲ್ಲಿ ಅಳಲೇ ಪುಡಿಯನ್ನು ಹಾಕಿಕೊಟ್ಟರೆ ಆಮವಾತಹರವು.

೩. ಶುಂಠಿ, ನೆಗ್ಗಿಲುಗಳನ್ನು ಹಾಕಿ ಇಟ್ಟ ಜಲವನ್ನು ಸೂರ್ಯೋದಯಕಾಲದಲ್ಲಿ ತೆಗದುಕೊಂಡರೆ ಟೊಂಕದನೋವು ಆಮವಾತಗಳು ಸಹ ಪರಿಹರವಾಗುತ್ತೆ.

೪. ಹಸುರಾಣಿಯ ಕಷಾಯದಲ್ಲಿ ಸೈಂಧವಲವಣವನ್ನು ಹಾಕಿಕೊಟ್ಟರೆ ವಾತಹರವು.

೫. ಹಸುರಾಣಿ, ಹಿರಿಮದ್ದುಗಳ ಕಷಾಯವನ್ನು ಕೊಟ್ಟರೆ ವಾತರೋಗಹರವು.

೨೫. ಬಾಲರೋಗಕ್ಕೆ ಔಷಧಗಳು.

೧. ನೆಲಬೇವು, ಅತಿಬಜೆ, ಅಮೃತಬಳ್ಳಿ, ನೆಲವಾಗಳಿ, ದೇವದಾರು, ಶುಂಠಿ, ಪರಪಾಪ್ಪಟಕ, ಇಂದ್ರಜವೆಗಳ ಚೂರ್ಣವನ್ನು ಕೊಟ್ಟರೆ ಮೊಲೆಹಾಲು ದೋಷವು ಪರಿಹರವಾಗುತ್ತೆ.

೨. ನೆಲಗುಳ್ಳ, ಗುಳ್ಳಗಳ ರಸಗಳನ್ನು ಹಿಪ್ಪಲಿ, ಹಿಪ್ಪಲಿಮೂಲ, ಇಂದ್ರಜವೆ ಚಿತ್ರಮೂಲ, ಶುಂಠಿಗಳನ್ನು ಬಹಳ ಜಲದಲ್ಲೂ ಜೇನು ಘೃತಗಳಲ್ಲೂ ಕೊಟ್ಟರೆ ಮಕ್ಕಳವಾಂತಿರೋಗವು ಪರಿಹರವಾಗುತ್ತೆ.

೩. ಕರಡಿ, ಉಡ, ನವಿಲುಗಳ ಚರ್ಮ, ಕೂದಲುಗಳನ್ನು ಸುಟ್ಟ ಕರಕನ್ನು ಜೇನುತುಪ್ಪಗಳಲ್ಲಿ ಕೊಟ್ಟರೆ ಮಕ್ಕಳ ಭೇದಿವಾಂತಿಗಳು ಪರಿಹರವಾಗುತ್ತೆ.

೪. ಮೂರುತೊಲೆಗಳ ಪ್ರಕಾರ ಕಟುಕರೋಹಿಣಿ, ನೆಲಬೇವು ಕೊನ್ನಾರಿಗೆಡ್ಡೆಗಳನ್ನು ತುಪ್ಪಕ್ಕೆಹಾಕಿ ಆ ತುಪ್ಪವನ್ನು ಕೊಟ್ಟರೆ ಮೊಲೆಹಾಲು ಕುಡಿದೋಣದರಿಂದ ಉಂಟಾದರೋಗಕ್ಕೆ ಒಳ್ಳೇದಾಗುತ್ತೆ.

೫. ನೆಲವಾಗಳಿ ಕಷಾಯವನ್ನು ಕೊಟ್ಟರೆ ಮೊಲೆಹಾಲನ್ನು ಕುಡಿಯುವದರಿಂದ ಉಂಟಾಗುವದೋಷಹರವಾಗುತ್ತೆ.

೬. ಕೊನ್ನಾರಿ, ಅಗಳಶುಂಠಿ, ಬಜೆ, ಎರಡುಗುಳ್ಳಗಳು, ಕಟುಕರೋಹಿಣಿ, ಅತಿಬಜೆಗಳ ಘೃತವನ್ನು ಕೊಟ್ಟರೆ ಹಲ್ಲುಬರುವ ರೋಗವನ್ನು ಪರಿಹರಿಸುವದು.

೭. ಮತ್ತಿ, ತರಿಯ, ತಾಳೀಸಪತ್ರೆ, ಶ್ರೀಗಂಧ, ಕೋಷ್ಟಗಳ ಕಷಾಯಕ್ಕೆ ತುಪ್ಪ, ಹಾಲುಗಳನ್ನು ಹಾಕಿಕೊಟ್ಟರೆ ಕಕ್ಕುವರೋಗವು ಪರಿಹರವಾಗುತ್ತೆ.

೮. ವಂದೆಲಗ, ಬಿಳೀಸಾಸುವೆ, ಬಜೆ, ಕೋಷ್ಟ, ಸೈಂಧವಲವಣ, ವಾಗಳಿ,

ಹಿಪ್ಪಲಿಗಳ ಕಲ್ಕವನ್ನು ತುಪ್ಪದ ಜೊತೆಯಲ್ಲಿ ಹಾಕಿ ಕಾಸಿ ಆ ತುಪ್ಪವನ್ನು ಕೊಟ್ಟರೆ ಬುದ್ಧಿಪ್ರದವು, ಇದು ಸಾರಸತ್ವ ಘೃತ.

೨೬. ಕುಷ್ಟರೋಗಕ್ಕೆ ಔಷಧಗಳು.

೧. ಬೇವಿನಪಂಚಾಂಗ, ಚಿತ್ರಮೂಲ, ಬಾವಂಚಿಬೀಜ, ನೆಲ್ಲಿ, ಗೇರು, ಅಳಲೆಗಳನ್ನು ಗರುಗದ ರಸದಲ್ಲಿ ಭಾವನೆಮಾಡಿ ತಾರೇಕಾಯಿಯನ್ನು ಅರದು ಹಿಂಡಿಕೊಂಡು ನೀರಿನಲ್ಲಿ ಹಾಕಿ ತೆಗದುಕೊಂಡರೆ ಕುಷ್ಠಹರವು.

೨. ವ್ರಣಕ್ಕೆ ಮಾಡುವ ಲೇಪವನ್ನು ಮಾಡಿ ಚೂರ್ಣವನ್ನು ತಿಂದರೂನೂ, ಮತ್ತು ಹೆಬ್ಬೇವು, ಬೇವುಗಳ ಕಲ್ಕವನ್ನು ತೆಗದುಕೊಂಡರೆ ಗೃಧ್ರವೇ ಮೊದಲಾದ ಯೆಂಭತ್ತು ವಿಧವಾಯುವುಗಳು ಪರಿಹರವಾಗುತ್ತವೆ.

೨೭. ವ್ರಣಕ್ಕೆ ಔಷಧಗಳು.

೧. ಬೇವಿನಯಲೆಯನ್ನರದು ವ್ರಣಕ್ಕೆ ಮೆತ್ತೋಣದರಿಂದಲೂ, ಹೊಟ್ಟೆಗೆ ತೆಗದುಕೊಳ್ಳೋಣದರಿಂದಲೂ ನೋವು ಯಿರುವ ಹುಣ್ಣುಮಾಯುತ್ತೆ. ಮತ್ತು ವಾಂತಿ, ಕುಷ್ಟಗಳ ವಾತಕ್ರಿಮಿಯೂ ಶ್ಲೇಷ್ಮದಿಂದ ಹುಟ್ಟಿದ ಕ್ರಿಮಿಗಳೂ ಪರಿಹರವಾಗುತ್ತವೆ.

೨. ಯಕ್ಕೇರಸದಲ್ಲಿ ಅರಿನವನ್ನು ಕಲಸಿ ಸಾಸುವೆ ಯಣ್ಣೆಯಲ್ಲಿ ಉಕ್ಕುವ ಹಾಗೆ ಕಾಸಿ ಖಜ್ಜಿ ಹುರಕಿಗಳಿಗೆ ಹತ್ತಿಸಿದರೆ ಗುಣವಾಗುತ್ತೆ.

೩. ದಶಮೂಲಗಳನ್ನರದು ವಾತದಿಂದ ಹುಟ್ಟಿದ ವ್ರಣಗಳಿಗೂ, ಆಲವನ್ನರದು ಪಿತ್ತವ್ರಣಗಳಿಗೂ ಕಕ್ಕೇಅರದು ಶ್ಲೇಷ್ಮ ವ್ರಣಗಳಿಗೂ ಹತ್ತಿಸಿದರೆ ಗುಣವಾಗುತ್ತೆ.

೪. ಹಾಲುಬರುವ ಮರದ ಚಿಗರನ್ನು, ಅಥವಾ ಆಲದ ಮೊಗ್ಗಾಗಲಿ, ತುಪ್ಪದೊಡನೆ ಸೇವಿಸಿದರೆ ಹುಣ್ಣುವಾಸಿಯಾಗುತ್ತೆ.

೫. ಕಕ್ಕೇಮೊಗ್ಗು, ಅಳಲೆ, ಕಲ್ಲುಪ್ಪುಗಳನ್ನು ಮೊಸರಿನಲ್ಲಿ ಅರದು ಲೇಪಿಸಿದರೆ ವಾತ, ರಕ್ತವ್ರಣ, ಶ್ಲೇಷ್ಮ ವ್ರಣಗಳು ಪರಿಹರವಾಗುತ್ತೆ.

೬. ತೊಲೆ, ರಾಳ, ತುತ್ತ, ಚಂದ್ರಗಳನ್ನು ಹಳೇ ತುಪ್ಪದಲ್ಲಿ ಕಲಸಿ ಒಂದು ಕಾಸು ಅಥವಾ ರುವ್ವಿ ತೂಕವನ್ನು ಹತ್ತಿಸಿದರೆ ಹಳೇ ಹುಣ್ಣು ಊತಿಗಳು ಪರಿಹರವಾಗುತ್ತವೆ.

೭. ತರಿಯದ ಕೆಚ್ಚು, ನೆಲ್ಲಿ, ಸೀಕು, ಬೇವು, ಚಂದನ, ಪಡುವಣಗಳ ಕಷಾಯವನ್ನು ಬೆಲ್ಲ ಹಾಕಿ ತೆಗದುಕೊಂಡರೆ ಗುಳ್ಳೆಗಳು ಪರಿಹರವಾಗುತ್ತೆ.

೮. ಮಂಜಾಡಿಮಣಿಯಬೇರನ್ನು ಮುಂಡಿಯರಸ, ಮಧುವಿನಲ್ಲಿ ಕೊಟ್ಟರೆ ಅಂಡದಲ್ಲಿರುವ ಸ್ಫೋಟಗಳು ಪರಿಹರವಾಗುತ್ತೆ.

೯. ಅರಿದಳ, ಮಣಿಶಿಲೆ, ಗಂಧಕ, ಮರದರಿಶಿನ, ಇಂಗಲೀಕ, ಸಂವರ್ಚಲ, ಉಪ್ಪು, ಅರಿನಗಳಿಗೆ ನಾಲ್ಕುಪಾಲು ಎಣ್ಣೆ, ಎಂಟುಪಾಲು ನೀರು, ಹಾಕಿ ತೈಲ ಇಳಿಸಿ ಹತ್ತಿಸಿದರೆ ದುಷ್ಟ ವ್ರಣ ಪರಿಹರವಾಗುತ್ತೆ.

೧೦. ಹಳೇತುಪ್ಪವನ್ನು ನೀರಿನಿಂದರೆದು ನೂರೊಂದು ಬಾರಿ ತೊಳದು ಹುಣ್ಣಿಗೆ ಬಳದು, ಹೊನಗೊನೆಸೊಪನ್ನರದು ಕಟ್ಟಿದರೆ ವ್ರಣವು ಮಾಯುತ್ತೆ.

೧೧. ಹಲಗಿಲು, ಲಕ್ಕಿ, ಬೇವುಗಳ ಯಲೆಗಳನ್ನರದು ಉಂಡೆಮಾಡಿ ವ್ರಣದೊಳ ಗಿಟ್ಟರೆ ಹುಳವು ಕೊಳೆತುಹೋಗುತ್ತೆ.

೧೨. ಆಲದ ಹಾಲಿನಿಂದ ಕೆಟ್ಟ ಹುಣ್ಣಿನ ಹುಳ ಪರಿಹರವಾಗುತ್ತೆ.

೧೩. ಬೊಳತರಟಕರ್ಣಿ, ಅಥವಾ ಕಕ್ಕೇ ಕುಡಿಯನ್ನಾಗಲಿ, ಹಾವುಮೆಕ್ಕೇ ರಸ ವನ್ನಾಗಲಿ, ಲೇಪಿಸಿದರೆ ಕೆಟ್ಟ ವ್ರಣಗಳು ಯೇಳೆಂಟು ದಿವಸಗಳಲ್ಲಿ ಪರಿ ಹರವಾಗುತ್ತೆ.

೧೪. ಹಳೇಬೆಲ್ಲಕ್ಕೆ ಸಮಭಾಗ ಬಿಳಿಗಾರವನ್ನು ಹಾಕಿ ಅರದು ತುಂಬಿದರೆ ನರದ ಲ್ಲಿ ಹುಟ್ಟಿದ ವ್ರಣಗಳು ಪರಿಹರವಾಗುತ್ತೆ.

೧೫. ಯಳ್ಳಿಯಲೆ, ಪಾರಿವಾಳದಹಕ್ಕಿ ಹಿಕ್ಕೆ, ಜೇಷ್ಟಮಧುಗಳನ್ನು ನೀರಿನಿಂದ ರೆದು ಲೇಪಿಸಿದರೆ ಕೆಟ್ಟ ವ್ರಣಗಳು ಗಂಟುಗಳು ಪರಿಹರವಾಗುತ್ತೆ.

೧೬. ಅರಗು, ಮಣಿಶಿಲೆ, ತಾಳಕ, ಮರದರಿಶಿನ, ಪೋಳ, ಖಡ್ಗಿಅರಿನಗಳ ಸಮಭಾಗಗಳನ್ನು ಅರದು ಜೇನು ಘೃತಗಳಲ್ಲಿ ಕಲಸಿ ಲೇಪಿಸಿದರೆ ಕೆಟ್ಟ ಹುಣ್ಣುಗಳು ಪರಿಹರವಾಗುತ್ತೆ.

೧೭. ಗೇರು, ಹರಳು, ಪ್ರೋಮು, ಬಜೆಗಳ ಸಮಭಾಗಗಳ ಕಷಾಯವನ್ನು ಕೊ ಟ್ಟರೆ ಅರೇಳು ದಿವಸಗಳಲ್ಲಿ ಹುಣ್ಣು ಕೂಲೆಗಳು ಪರಿಹರವಾಗುತ್ತೆ.

೧೮. ಪುತ್ರಜೀವಿ ಮಣಿಯ ತಿಳಲನ್ನು ನೀರಿನಲ್ಲಿ ಅರದು ಲೇಪಿಸಿದರೆ ನೋವು, ನೋತ, ಉಗ್ರವ್ರಣಗಳು, ಕೊರಳು, ಕಿವಿ, ಕಂಕುಳಗಳಲ್ಲಿ ಹುಟ್ಟಿದ ಗಂಟುಗಳು ಸಹಪರಿಹರವಾಗುತ್ತೆ.

೧೯. ಆಡಿನ ಬೆಣ್ಣೆಯಲ್ಲಿ ತೂಪರಂಜಿಯಲೆಯುನ್ನು ಹಾಕಿ ಕಾಸಿ ಆ ತುಪ್ಪವನ್ನು ಕಟ್ಟಿದರೆ ಗೇಣುಹುಣ್ಣು ಹುಲ್ಲೊತ್ತುಯಂಬ ಹುಣ್ಣು ಸಹಿತವಾಗಿ ಪರಿಹರವಾಗುತ್ತೆ.

೨೦. ರಸ, ಜಾಜಿಕಾಯಿ, ಮುಸ್ತಕಿ, ಹೊಸಸುಣ್ಣ, ತುತ್ತ, ಕಪ್ಪೆಚಿಪ್ಪುಭಸ್ಮ, ಮುರದಾರಶೃಂಗಿಗಳನ್ನು ಕಂಚಿನ ತಟ್ಟೆಯಲ್ಲಿ ಬೆಣ್ಣೇಹಾಕಿ ಮಸದು ವ್ರಣ ಕ್ಕೆ ಲೇಪಮಾಡಿದರೆ ಪರಿಹರವಾಗುತ್ತೆ.

೨೧. ಎರಡುತೊಲೆ ಬೀರಾಳು, ಒಂದು ವರಹಾತೂಕದ ಪಾದರಸಗಳನ್ನು ಸಹ ಆಡಿನ ಬೆಣ್ಣೆಯಲ್ಲಿಮರ್ದಿಸಿ, ಅರುವೆಗೆ ತೊಡದು ಹತ್ತಿಸಿದರೆ ಪುರುಷ ವ್ಯಾಧಿ ವ್ರಣವು ಪರಿಹರವಾಗುತ್ತೆ.

೨೨. ತಂಡಸೀಯೆಲೆಯು ನಿಂಬೇ ಹುಳಿಯಲ್ಲಿ ಅರದು ಕೆಟ್ಟವ್ರಣಕ್ಕೆ ಹತ್ತಿಸೆ ಗುಣ ಬರುತ್ತೆ.

೨೩. ಬ್ರಹ್ಮದಂಡೀಬೇರನ್ನು ಅಕ್ಕೀಕಚ್ಚಿನಲ್ಲರದು ಲೇಪ ಮಾಡಿದರೆ ವ್ರಣ ಪರಿಹರವಾಗುತ್ತೆ.

೨೪. ಒಂದುಪಾವು ಕೊಳಕುಕ್ಕನಬೇರಿನ ಪುಡಿ, ನಾಲ್ಕುಶೇರು ಲಕ್ಕೀರಸ, ಒಳ್ಳೆಣ್ಣೆ ಒಂದು ಸೇರು ಸಹ ಹಾಕಿ ಕಾಸಿ ತೈಲವನ್ನುಮಾಡಿ ಲೇಪಮಾಡಿದರೆ ಗಂಡಮಾಲೆಹರವು.

೨೫. ವಿಷಗುಂಬಳರಸವನ್ನು ಒಂದುಸೇರುನ್ನೂ ಸಾಸುವೆಯೆಣ್ಣೆ ಒಂದು ಪಾವನ್ನು ಸಹಹಾಕಿ ಕಾಸಿ ಆ ತೈಲವನ್ನು ಮೂಗಿನಲ್ಲಿ ಹಾಕಿದರೆ ಗಂಡಮಾಲೆ ಗಂಟುಗಳು ಕರಗುತ್ತೆ.

೨೮. ಭಗಂದರಕ್ಕೆ ಔಷಧಗಳು.

೧. ಜಿಗಳೆಯನ್ನು ಅಂಟಿಸಿ ರಕ್ತವನ್ನು ತೆಗದು ವಿಷ ಮುಷ್ಠಿ, ಕೊಳಕುಕ್ಕ, ಕರಿಮದ್ದುಗುಣಿಕೆಗಳನ್ನು ಅರದುಕೊಟ್ಟರೆ ಭಗಂದರ ಕರಗಿ ವ್ರಣದೋಷವು ಪರಿಹರವಾಗುತ್ತೆ.

೨. ಕಳ್ಳಿ ಯಕ್ಕೆಗಳ ಹಾಲುಗಳಲ್ಲಿ ಮರದರಿಶಿನವನ್ನು ತೇದು ಬತ್ತಿಗೆ ಹತ್ತಿಸಿ ಮಡಗಿದ್ದೇಆದರೆ ಭಗಂದರ, ನಾಡೀವ್ರಣ, ಲೂತಿಗಳು ಪರಿಹರವಾಗುತ್ತೆ.

೩. ಯಕ್ಕೆಯಬೇರನ್ನು ಲಕ್ಕೀರಸದಲ್ಲಿ ತೇದು ಲೇಪವನ್ನು ಮಾಡಿದರೆ ಪರಿಹರ.

೪. ಒಂದೊಂದುಪಾಲು ಹಿಪ್ಪಲಿ, ವಿಳಂಗ, ಇಂದ್ರಜವೆಗಳನ್ನು ಇವಕ್ಕೆ ಎರಡರಷ್ಟು ಗುಗ್ಗುಳ, ಯಣ್ಣೆ, ಅಳಲೆ, ನೆಲ್ಲಿ, ತಾರೆ, ಜೇನುಗಳನ್ನು ಕೂಡಿಸಿ ನೆನೆಹಾಕಿ ಒಂದು ತೊಲೆಯನ್ನು ತೆಗದುಕೊಂಡರೆ ಭಗಂದರಹರವಾಗುತ್ತೆ.

೫. ಒಂದು ತೊಲೆ ಹರಳೆಣ್ಣೆ, ಹಾಲುಗಳನ್ನು ಮೂರುತೊಲೆ ಒಳ್ಳೆಣ್ಣೆ ಹಸೀಶುಂಠೀರಸಗಳನ್ನು ಸೇವಿಸುತ್ತಾಬಂದರೆ ಒಂದು ತಿಂಗಳಲ್ಲಿ ಅಂತರ್ವೃದ್ಧಿ ರೋಗಹರವು.

೨೯. ಶಿರೋರೋಗಕ್ಕೆ ಔಷಧಗಳು.

೧. ಗರುಗ, ವಿಳಂಗ, ಕೋಷ್ಠ, ಹುರದಶುಂಠಿ, ಜೇಷ್ಠ್ಯಮಧುಗಳ ಚೂರ್ಣ ಮೂರು ತೊಲೆಯನ್ನು ಹಾಕಿ ಒಂದು ಶೇರು ತುಪ್ಪವನ್ನು ಕಾಸಿ ಮೂಗಿನಲ್ಲಿ ಹಾಕಿದರೆ ತಲೆನೋವು ಹೋಗುತ್ತೆ.

೨. ಯಳೇಜೇವಿನಸೊಪ್ಪನ್ನಾಗಲಿ, ಬ್ಯಾಲದತಿಳಲನ್ನಾಗಲಿ, ತಲೆಗೆ ಕಟ್ಟಿ ಸುಣ್ಣದ ತಿಳಿಯನ್ನು ತುಪ್ಪಕ್ಕೆ ಹಾಕಿ ಆ ತುಪ್ಪವನ್ನು ಮೂಗಿಗೆ ಹಾಕಿದರೆ ಪಿತ್ತದ ತಲೆನೋವು ಪರಿಹರವಾಗುತ್ತೆ.

೩. ಸಾಸುವೆ, ಪಂಚಪತ್ರಗಳನ್ನು ಚನ್ನಾಗಿ ಅರದು ಹಣೆಗೆ ಪಟ್ಟುಹಾಕಿ ಯಾಲಕ್ಕಿಯ ವಾಸನೆಯನ್ನು ಕೊಟ್ಟರೆ ಪಿತ್ತದ ತಲೆನೋವುಹರವು.

೪. ತಗ್ಗಿ, ನೆಲಗೋವು, ಕಾಡುನುಗ್ಗೆ, ಸಂಪಿಗೆ, ರಾಗೀರೊಟ್ಟಿಗಳಲ್ಲಿ ಯಾವದನ್ನಾದರೂ ತಲೆಯಲ್ಲಿ ಕಟ್ಟಿದರೆ ವಾತದಿಂದ ಹುಟ್ಟಿದ ತಲೆನೋವುಹರವು.

೫. ಅಕ್ಕೀಕಚ್ಚಿನಲ್ಲಿ, ಸಕ್ಕರೆ, ಶುಂಠಿ, ಹುಣಿಸೆ ಹಣ್ಣುಗಳನ್ನರದು ಆ ರಸವನ್ನು ಮೂಗಿನಲ್ಲಿ ಹಾಕಿದರೆ ಕೂಡ್ಲೇ ತಲೆನೋವು ನಿಲ್ಲುತ್ತನೆ.

೬. ಹಿಪ್ಪಲಿ, ಸೈಂಧಲವಣಗಳನ್ನು ನೀರಿನಿಂದರದು ಮೂಗಿನಲ್ಲಿ ಬಿಟ್ಟರೆ ಕಂಠ, ಮೂಗು, ಕಿವಿಗಳಲ್ಲಿರುವ ವಾಯುಪರಿಹರವು.

೭. ನೀರಿನಿಂದ ಶುಂಠಿ, ಜೀರಿಗೆಯನ್ನು ಅರದಾಗಲಿ, ಗಿಡಕರ್ನಿಕೆ ಬೀಜವನ್ನು ಬಿಸಿನೀರಿನಲ್ಲಿ ಅರದಾಗಲಿ, ಆ ರಸವನ್ನು ಮೂಗಿಗೆ ಹಾಕಿದರೆ ತಲೆನೋವು ಹರವು.

೮. ಕಳ್ಳಂಗಡ್ಲೆ, ಬಿಡಲ, ಮಯೂರಶಿಖಿ, ಕಿರಿಗುಳ್ಳ, ಬಜೆ, ಮೇಘರಿಗಳ ಕಲ್ಕವನ್ನು ಬಳ್ಳೆಣ್ಣೆಯೊಳು ಕುಡಿಸಿ ಮೂಗಿನಲ್ಲಿ ಹಾಕಿದರೆ ಕ್ರಿಮಿ, ವಾತ, ಶ್ಲೇಷ್ಮ, ತಲೆನೋವು ಹರವು.

೯. ಹುಲಗಿಲು, ಹಿಪ್ಪಲಿ ಮೂರುತೊಲೆ, ಶುಂಠಿ, ಮೆಣಸುಗಳನ್ನು ನೀರಲ್ಲಿ ಅರದು ಆ ರಸವನ್ನು ಮೂಗಿನಲ್ಲಿ ಹಾಕಿದರೆ ಶ್ಲೇಷ್ಮದ ತಲೆನೋವು ಹರವು.

೩೦. ತಲೇಕೂದಲು ಬರುವದಕ್ಕೆ ಔಷಧಗಳು.

೧. ಕರೀದಾದ ಹಸುವಿನ ಮೂತ್ರದಲ್ಲಿ ದಾಸವಾಳದ ಕುಸುಮವನ್ನು ಅರದು ಹುಳತಿಂದ ತಲೇಕೂದಲು ಸ್ಥಳವನ್ನು ಹಂಚಿನಿಂದ ತಾರ್ಕ್ಕ ಆಲೇಪವನ್ನು ಹತ್ತಿಸಿದರೆ ಕೂದಲು ಬೆಳೆಯುತ್ತೆ.

೨. ಗುಲಗಂಜೀಬೇರನ್ನಾಗಲಿ, ಕಾಯಿಯನ್ನಾಗಲಿ, ನೆಲಗುಳ್ಳದರಸದಲ್ಲಿ ಅರದು ಪಟ್ಟು ತಲೆಗೆ ಹತ್ತಿಸಿದರೆ ಕೂದಲು ಬೆಳೆಯುತ್ತೆ, ಅಂದರೆ ಹುಳ ತಿಂದು ಪಟ್ಟೆ ಬಿದ್ದ ತಲೆ ಕೂದಲು ಬೆಳೆಯುತ್ತೆ.

೩೧. ನೇತ್ರರೋಗಕ್ಕೆ ಔಷಧಗಳು.

೧. ನುಗ್ಗೇಸೊಪ್ಪಿನರಸಕ್ಕೆ ಜೇನುತುಪ್ಪವನ್ನು ಕೂಡಿಸಿ ಕಣ್ಣಿಗೆ ಹಾಕಿದರೆ ನೇತ್ರರೋಗಗಳು ಪರಿಹರವಾಗುತ್ತೆ.

೨. ಅಳಲೆ, ನೆಲ್ಲಿ, ತಾರೆಗಳ ಪೊಪ್ಪುಗಳ ಕಷಾಯದಲ್ಲಿ ಬತ್ತಿಯನ್ನು ಅದ್ದಿ ಕಣ್ಣಿಗೆ ಹತ್ತಿಸಿದರೆ ನೇತ್ರರೋಗಹರವು.

೩. ಸೈಂಧವಲವಣ, ಲೋಧ್ರಗಳನ್ನು ತುಪ್ಪದಲ್ಲಿ ಹಾಕಿ ಫೇಯಿಸಿ ನೀರಿನಿಂದರದು ಬಿಳೀಬಟ್ಟೆಗೆ ಲೇಪಿಸಿ ಕಣ್ಣಿನಮೇಲೆ ಹಾಕಿ ಕಟ್ಟಿದರೆ ತಿನಸು ನೋವುಗಳು ನಿಲ್ಲುತ್ತವೆ.

೪. ಆಡಿನಹಾಲಿನಲ್ಲಿ, ಅಳಲೆ, ಬಜೆ, ಕೋಷ್ಟ, ಹಿಪ್ಪಲಿ, ಮಣಿಶಿಲೆ, ಮೆಣಸು, ವತ್ಸನಾಭಿ, ಶಂಖ, ತಾರೇಕಾಯಿ ಪೊಪ್ಪುಗಳನ್ನರದು ಕಣ್ಣಿಗೆ ಹತ್ತಿಸಿದರೆ, ಮಾಂಸ, ಪರ, ತಿಮಿರಗಳು ಪರಿಹರವಾಗುತ್ತೆ.

೫. ಕವಳಿಯಹಣ್ಣಿನ ರಸವನ್ನು ತಾಂಬ್ರದ ಬಟ್ಟಲ್ಲಿ ಜೇನು ಬೆರಸಿ ಏಳುದಿವಸಗಳಿಟ್ಟು ಕಣ್ಣಿಗೆ ಹತ್ತಿಸಿದರೆ ನೇತ್ರಶೂಲೆಹರವು.

೬. ಎರಡು ಪಾಲು ಅರಿಸಿನ, ಶುಂಠಿ, ಹಿಪ್ಪಲಿ, ವರಸೈಂಧಲವಣ, ಮೆಣಸು, ಹುಲಗಿಲಬೀಜಗಳನ್ನು ಗರುಗದರಸದಿಂದರದು ಬತ್ತಿಯನ್ನು ಅದ್ದಿ ಕಣ್ಣಿನಲ್ಲಿ ಮಡಗಿದರೆ ತಿಮಿರಹರವು.

೭. ತುತ್ತ, ಅಳಲೆ, ಮೆಣಸುಗಳನ್ನು ನಿಂಬೇರಸದಿಂದರದು ತಾಂಬ್ರದ ಬಟ್ಟಲ್ಲಿ ಇಟ್ಟುಕೊಂಡು ರೆಪ್ಪೆಗಳಮೇಲೆ ಹತ್ತಿಸಿದರೆ ಕಣ್ಣಿಗೆ ಒಳ್ಳೇದಾಗುತ್ತೆ.

೮. ಹಳೇಹುಣಿಸೆಹಣ್ಣು, ಹಿಪ್ಪಲಿ, ಹುಲಗಿಲು, ಮೂರುರೂಪಾಯಿ ತೂಕ ಸೈಂಧಲವಣ, ಕರ್ಪೂರಗಳನ್ನು ಚೆನ್ನಾಗಿ ನಿಂಬೇರಸದಿಂದರದು ಬತ್ತೀಯಿಂದದ್ದಿ ಕಣ್ಣಿಗೆ ಹತ್ತಿಸಿದರೆ ನೇತ್ರಕ್ಕೆ ಹಿತವಾಗುತ್ತೆ.

೯. ಮರದರಿಶಿನದ ಕಷಾಯವನ್ನು ಘಟ್ಟಿಯಾಗುವ ಹಾಗೆ ಮಾಡಿ ಜೇನು ಹಾಕಿ ಮರ್ದಿಸಿ ಬೆರಳಿಗೆ ಹತ್ತುವಹಾಗೆ ಆದಮೇಲೆ ಕಣ್ಣಿಗೆ ಹತ್ತಿಸಿದರೆ ಮೂರುದೋಷದ ನೇತ್ರರೋಗಗಳು ಪರಿಹರವಾಗುತ್ತೆ.

೧೦. ಹರಳು, ಹಾಲುಗಳನ್ನು ಕಾಸಿಯೋಆಗಲಿ ಯಕ್ಕೇಬೇರನ್ನು ನೀರಿನಲ್ಲಿ ಹಾಕಿ ಕಾಸಿಯೋಆಗಲಿ, ಜೇಷ್ಟಮಧು, ಸೈಂಧಲವಣಗಳನ್ನು ಹಾಲಿನಲ್ಲಿ ಹಾಕಿ ಕಾಸಿಯೋಆಗಲಿ, ಶಾಖವನ್ನು ಕೊಟ್ಟರೆ ಕಣ್ಣುನೋವಿಗೆ ಹಿತವಾಗುತ್ತೆ.

೧೧. ಕಬ್ಬಿಣ, ತಾಂಬ್ರದ ಪಾತ್ರೆಗಳಲ್ಲಿ ಸೈಂಧಲವಣ, ಮೊಸರುಗಳನ್ನು ಹಾಕಿ ಅರೆದು ಸ್ವಲ್ಪಕಣ್ಣಿಗೆ ಹತ್ತಿಸಿದರೆ ಬಲವಾದ ಕಣ್ಣುಬೇನೆಹರವು.

೧೨. ಎರಡುಪಾಲು ಯವೆ, ಜೇಷ್ಟಮಧು, ತುತ್ತ, ನೆಲ್ಲಿ, ಹಿಪ್ಪಲಿಗಳನ್ನು ಮೂಷೆಯಲ್ಲಿಟ್ಟು ಜೇರುಮಣ್ಣು ಮಾಡಿ, ಅದನ್ನು ಸುಟ್ಟು ಭಸ್ಮವನ್ನು ಕಣ್ಣಿಗೆ ಹಾಕಿದರೆ ಕೊಲೆ ಪರಿಹರವಾಗುತ್ತೆ.

೧೩. ಎರಡೆರಡುಪಾಲು ಅರಿಸಿನ, ಮರದರಿಸಿನಗಳನ್ನು ಒಂದುಪಾಲು ಇಲ್ಲಣ, ಸಾಸುವೆ ಒಂದುಪಾಲು ಇವುಗಳನ್ನು ಬಿಸಿನೀರಿನಿಂದರದು ಶಾಖವಂ ಕೊಟ್ಟರೆ ಶ್ಲೇಷ್ಮ ಕಣ್ಣು ಬೇನೆಯುಹರವು.

೧೪. ಅಳಲೆ, ಸೈಂಧಲವಣಗಳನ್ನು ತೆಯಿದು ಹತ್ತಿಸಿದರೆ ನೇತ್ರದ ಪರೆಯು ಪರಿಹರವಾಗುತ್ತೆ.

೧೫. ಅಳಲೇಕಾಯಿಯನ್ನು ತೇಯಿದು ಹತ್ತಿಸಿದರೆ ಕಣ್ಣಿಗೆ ಹಿತವಾಗುತ್ತೆ.

೧೬. ಒಂದುಪಾಲು ಚಂದನ, ಎರಡುಪಾಲು ಮಣಿಶಿಲೆ, ಮೂರುಪಾಲು ಸೈಂಧವಲವಣ, ನಾಲ್ಕುಪಾಲು ಮುತ್ತುಗದ ವ್ರ್ಯಾಣಗಳನ್ನು ಚೂರ್ಣವನ್ನು ಮಾಡಿ ಹೂವುಗಳ ಹುಳಿಯಿಂದ ತೆಯಿದು ಹಚ್ಚಿಸಿದರೆ ಒಳ್ಳೇದಾಗುತ್ತೆ.

೧೭. ಜೇನು, ವತ್ಸನಾಭಿ, ಶಂಖಗಳಾಗಲಿ, ಜೇನು, ಚಿಲ್ಲದಬೀಜ, ಸೈಂಧವಲವಣಗಳಾಗಲಿ, ಜೇನು, ಸಕ್ಕರೆಗಳಾಗಲಿ, ಸಮುದ್ರದನೊರೆಯಾಗಲಿ, ಅಂಜನವನ್ನು ಹತ್ತಿಸಿದರೆ ಹೂವಿಗೆ ಒಳ್ಳೆದಾಗುತ್ತೆ.

೧೮. ತಾರೇಕಾಯಾಗಲಿ, ಹಿಪ್ಪೇಸಾರ, ಸೈಂಧವಲವಣಗಳಾಗಲಿ, ತಾರೆ ಸೊಪ್ಪನ್ನು ಜೇನೊಳು ಹತ್ತಿಸಿದರೆ ಕಣ್ಣು ಹೂವು ಅಡಗುವದು.

೧೯. ಕುದುರೇ ರೋಮದ ಬೂದಿಯನ್ನು ಹದಗೊಳಿಸಿ ತುಪ್ಪದಲ್ಲಿ ಕಲಸಿ ಕಣ್ಣಿಗೆ ಹಾಕಿದರೆ ಮತ್ತು ಕುದರೆ, ಆನೆ, ಒಂಟೆ, ಹಸುಗಳ ಹಲ್ಲುಗಳನ್ನು ಜೇನಿನಲ್ಲಿ ತೇಯಿದು ಹತ್ತಿಸಿದರೆ ನೇತ್ರದ ಪರೆಯು ಪರಿಹರವಾಗುತ್ತೆ.

೨೦. ತುಪ್ಪ, ಜೇನು, ಅಳಲೇಕಾಯಿಗಳನ್ನು ಅರದು ಆ ಮುದ್ದೆಯನ್ನು ನೆಲ್ಲಿಯು ಅರದು ಮೇಲೆ ಲೇಪವನ್ನು ಮಾಡಿ ಜೋರೇಕಾಷ್ಟದಿಂದ ಸುಟ್ಟು ಆ ಕಪ್ಪನ್ನು ಹತ್ತಿಸಿದರೆ ಕಣ್ಣು ತಿಮಿರಕ್ಕೆ ಹಿತವು.

೨೧. ತ್ರಿಫಲೆಪುಡಿ, ಜೇಷ್ಠ್ಯಮಧು, ಜೇನುತುಪ್ಪಗಳನ್ನು ಕೂಡಿಸಿ ದಿನದಂತ್ಯದಲ್ಲಿ ತಿಂದರೆ ವೀರ್ಯವೃದ್ಧಿಯಾಗುತ್ತೆ. ಅಂಜನವಾಗಿ ಕಣ್ಣಿಗೆ ಹತ್ತಿಸಿದರೆ ಮೊಬ್ಬು ಪರಿಹರವಾಗುತ್ತೆ.

೨೨. ಸಕ್ಕರೆ ಸೈಂಧವಲವಣ, ಲೋಧ್ರಗಳನ್ನು ಕಲುಪತ್ತಿನಲ್ಲಿ ಮರ್ದಿಸಿ ನೀರಲ್ಲಿ ಹಾಕಿ ಕಣ್ಣಿಗೆ ಹತ್ತಿಸಿದರೆ ವಾತದಿಂದ ಹುಟ್ಟಿದ ಕಣ್ಣೋವುಹರವು.

೨೩. ತುಪ್ಪದಲ್ಲಿ, ನೆಲ್ಲಿ, ಲೋಧ್ರವನ್ನು ಹುರದು ಅದರ ಜೊತೆಗೆ ಮಣಿಶಿಲೆಯನ್ನು ಸೇರಿಸಿ ಅರದು ರೆಪ್ಪೆಗೆ ಲೇಪವನ್ನು ಮಾಡಿದರೆ ಕಣ್ಣು ಬೇನೆಗಳು ಪರಿಹರವಾಗುತ್ತೆ.

೨೪. ಕಣ್ಣು ನೋವು ಅಧಿಕವಾದರೆ ಹಣೇ ಕೂದಲು ಸಂದಿನಲ್ಲಿ ಸಿರೆಯನ್ನು ಹೊಡದರೆ ತ್ರಿದೋಷಗಳ ಬೇನೆಯು ಪರಿಹರವಾಗುತ್ತೆ.

೨೫. ಲೋಳೆಸರ, ನುಗ್ಗೇಯೆಲೆಗಳನ್ನು ಅರೆದು ಪಟ್ಟು ಹಾಕಿದರೆ ನೇತ್ರರೋಗ ಹರವು.

೨೬. ಲೋಳೆಸರದತಿಳಲು, ಪಟ್ಟುಗಳನ್ನು ಹತ್ತಿಸಿದರೆ ನೇತ್ರರೋಗಹರವು.

೨೭. ಹಾವು ಮೀನನ್ನರೆದು ನೇತ್ರದಲ್ಲಿ ಹಾಕಿ ರಾತ್ರಿಕಾಲದಲ್ಲಿ ನೋಯದಹಾಗೆ ಅರುವೆಯನ್ನು ಕಟ್ಟಿದರೆ ನೋವು, ಮಾಂಸದ ನೀರು, ಸುರಿಯುವದು ಸಹ ಪರಿಹರವಾಗುತ್ತೆ.

೨೮. ಗರುಗದರಸವನ್ನು ಆಡಿನಹಾಲಿನಲ್ಲಿ ಬೆರಸಿಯೇ ಆಗಲಿ, ಸುರಭಿ ಹಾಲು, ಗೋಮೂತ್ರ ತ್ರಿಫಲೆಗಳ ಅಂದರೆ, ಅಳಲೆ, ತಾರೆ, ನೆಲ್ಲಿಗಳ ಕಷಾಯವನ್ನಾಗಲಿ, ದ್ರಾಕ್ಷೇಯಲ್ಲಿ ಭಾವನೆಮಾಡಿದ ನೀಲಾಂಜನದಕಲ್ಲಾಗಲಿ, ಹತ್ತಿಸಿದರೆ ಕಣ್ಣಿಗೆ ಹಿತವು.

೨೯. ಮೊಲೆಹಾಲು, ಅತಿಬಜೆ, ಗೋಮೂತ್ರ, ಸಗಣೀರಸವನ್ನಾಗಲಿ, ತುಪ್ಪ, ಜೇನುಗಳಲ್ಲಿ, ಮೈಲುತುತ್ತವನ್ನು ಬೇಯಿಸಿ ಮರ್ದಿಸಿ ಇವುಗಳಲ್ಲಿ ಅದ್ದಿದ ಬತ್ತಿಯನ್ನು ಹಾಕಿದರೆ ತೆರೆಗೆ ಹಿತವು.

೩೦. ಕರ್ಣರೋಗಕ್ಕೆ ಔಷಧಗಳು.

೧. ಸಾಸುವೆತೈಲವನ್ನಾಗಲಿ, ಶರಾಬು ಕಟ್ಟ್ಯಾದಲ್ಲಿ ಇಳದ ತೈಲವನ್ನಾಗಲಿ ಬಿಡುತ್ತಾ ಬಂದರೆ ಕಿವಿಯಲ್ಲಿ ಭೋರೆನ್ನೋ ಶಬ್ದ ಪರಿಹರವಾಗುತ್ತೆ.

೨. ದೇವದಾರುವಾಗಲಿ, ಬಿಲ್ವದಬೇರಾಗಲಿ, ಅರುವೆಯಲ್ಲಿ ಕಟ್ಟಿ ಎಣ್ಣೆಯಲ್ಲಿ ಅದ್ದಿ ದೀಪದ ಕೊಡಿಗೆ ತೋರಿಸಿ ಅದರಿಂದ ತೈಲವನ್ನು ಕರ್ಣಕ್ಕೆ ಹಾಕಿದರೆ ಶೂಲೆ ಪರಿಹರವಾಗುತ್ತವೆ.

೩. ಹಣ್ಣಾಗಿರುವ ಯಕ್ಕೇ ಎಲೆಯನ್ನು ರಸತೆಗೆದು ಆ ರಸಕ್ಕೆ ಎಣ್ಣೇ ಹಾ ಕಾಸಿ ಕರ್ಣಕ್ಕೆ ಹಾ ದರೆ ಶೂಲೆಹರವು.

೪. ಹಣ್ಣಾಗಿರುವ ಯಕ್ಕೇ ಎಲೆಯನ್ನು ತುಪ್ಪಸವರಿ ಬಿಸಿಮಾಡಿ ಅದರ ರಸವನ್ನು ಕಿವಿಗೆ ಹಿಂಡಿದರೆ ಶೂಲೆಹರವು.

೫. ಇಂಗು, ತೂಪರು, ಶುಂಠಿಗಳನ್ನು ಬೀಸಾಸಿವೆ ತೈಲದಲ್ಲಿ ಬೇಯಿಸಿ ಆ ತೈಲವನ್ನು ಕಿವಿಯಲ್ಲಿ ಹಾಕಿದರೆ ಕರ್ಣರೋಗ ಶೂಲೆಗಳು ಪರಿಹರವಾಗುತ್ತೆ.

೬. ಬ್ಯಾಲ, ಮಾದಳಗಳ ಹುಳಿಯನ್ನು ಹಸೀಶುಂಠಿ ರಸವನ್ನು ಸಹ ಕೂಡಿಸಿ ಸ್ವಲ್ಪ ಬಿಸಿಮಾಡಿ ಕಿವಿಯಲ್ಲಿ ಹಾಕಲು ಶೂಲೆಹರವು.

೭. ಆಡಿನ ಮೂತ್ರವನ್ನೂ ಸೈಂಧವಲವಣಗಳನ್ನು ಸಹ ಸೇರಿಸಿ ಕಿವಿಗೆಹಾಕಿದರೆ ಶೂಲೆ ಹರವು.

೮. ಹಿರಿ ಪಂಚಮೂಲವನ್ನು ಘಟ್ಟಿಯಾದ ವಸ್ತ್ರದಲ್ಲಿ ಚೆನ್ನಾಗಿಸುತ್ತಿ ಯಂಣೆಯಲ್ಲದ್ದಿ ದೀಪಕ್ಕೆ ತೋರಿಸಿದರೆ ತೈಲಬರುತ್ತೆ. ಆ ತೈಲವನ್ನು ಬಿಸಿಮಾಡಿ ಕಿವಿಗೆ ಹಾಕಿದರೆ ಶೂಲೆ ಹರವು.

೯. ಗುಳ್ಳೆಶಂಖದಲ್ಲಿರುವ ಮಾಂಸವನ್ನು ಸಾಸುವೆತೈಲದಲ್ಲಿ ಬೇಯಿಸಿ ಕಿವಿಗೆ ತುಂಬಿದರೆ ಭೋರೆಂಬ ಶಬ್ದವುಳ್ಳ ಕರ್ಣರೋಗಕ್ಕೆ ಹಿತವು.

೧೦. ಹೋತನ ಮೂತ್ರದಲ್ಲಿ ಸೈಂಧವಲವಣವನ್ನು ಹಾಕಿ ಬಿಸಿಮಾಡಿಯೋ ಆಗಲಿ, ಮುಲ್ಲಂಗೀರಸದಲ್ಲಿ ಸೈಂಧವಲವಣವನ್ನು ಹಾಕಿಯೋ ಆಗಲಿ ಕಿವಿಗೆ ಹಾಕಿದರೆ ಶೂಲೆಹರವು.

೩೩. ನಾಸಿಕಾರೋಗಕ್ಕೆ ಔಷಧಗಳು.

೧. ದಾಳಿಂಬದ ಹುವ್ವು, ಗರಿಕೆಗಳನ್ನು ಅರದು ಆರಸವನ್ನು ನಸ್ಯವನ್ನು ಹಾಕಿದರೆ ಮೂಗಿನಲ್ಲಿ ಬರುವ ರಕ್ತಪೀನಸೆಯು ಏಳು ದಿವಸಗಳಲ್ಲಿ ಶಮನವಾಗುತ್ತೆ.

೨. ಕರೀ ಜೀರಿಗೆಯನ್ನು ಅರದು ಬಟ್ಟೆಯಲ್ಲಿ ಕಟ್ಟಿ ವಾಸನೆ ತೆಗದುಕೊಂಡರೂ ಅರಿನದ ಹೊಗೆ ತೆಗದುಕೊಂಡರೂ ಶ್ಲೇಷ್ಮಪೀನಸಿ ಹರವು.

೩. ಯಕ್ಕೇಬೇರನ್ನು ಅಕ್ಕೀಕಟ್ಟಿನಲ್ಲಿ ಮರ್ದಿಸಿ ಆರಸವನ್ನು ಮೂಗಿನಲ್ಲಿ ಹಾಕಿದರೆ ಕಾಮಾಲೆ ಹಕ್ಕಿನ ಪೀನಸೆ ತಲೆನೋವುಗಳು ಪರಿಹರವಾಗುತ್ತವೆ.

೪. ಇಂಗು, ಮಣಿಶಿಲೆ, ವಾಯುವಿಳಂಗ, ಗುಗ್ಗುಳ, ಶುಂಠಿ, ಹಿಪ್ಪಲಿ, ಮೋಸು, ಬಜೆ ಇವುಗಳ ಸಮಭಾಗದ ಚೂರ್ಣವ ನಸ್ಯವನ್ನು ಹಾಕಿದರ ಕೆಟ್ಟ ಪೀನಸೆ ಹರವು.

೫. ಕೇಸರಿ, ಸಕ್ಕರೆಗಳನ್ನು ತುಪ್ಪದಲ್ಲಿ ಬೇಯಿಸಿ ನಸ್ಯವನ್ನು ಹಾಕಿದರೆ ಕಿವಿ ಕಣ್ಣುಗಳಲ್ಲಿ ಕೂಡ ವಾತಶೂಲೆ ಪೀನಸಗಳು ಪರಿಹರವಾಗುತ್ತೆ.

೬. ತುಪ್ಪ ಸಕ್ಕರೆ ಜೀರಿಗೆಗಳನ್ನರದು ಮೂಗಿನಲ್ಲಿ ಹಾಕಿದರೆ ಮೂಗಿನಲ್ಲಿ ಬರುವ ಕೀವು, ಕೊಳೆನಾತ, ಪೀನಸೆ, ನೋವುಗಳು ಪರಿಹರವಾಗುತ್ತೆ.

೭. ಚವ್ಯ, ಚಿತ್ರಮೂಲ, ಶುಂಠಿ, ಹಿಪ್ಪಲಿ, ಉತ್ತರಣೆಬೀಜಗಳ ಕಷಾಯದಲ್ಲಿ ಬಂದುಪಾವನ್ನು ತೆಗದುಕೊಂಡರೆ ಪೀನಸರೋಗವು ಪರಿಹರವಾಗುತ್ತೆ.

೮. ತುಂಬೇಗಿಡದಮೇಲೆ ಬಿಳೀಬಟ್ಟೆಯನ್ನು ಹರವಿ ಬೆಳಿಗ್ಗೆ ತೆಗದು ಹಿಂಡಿ ಆನೀರನ್ನು ಮೂಗಿಗೆ ಹಾಕಿದರೆ ಪೀನಸಿಹರವು.

೯. ನೆಲಗುಳ್ಳ, ಗುಳ್ಳ, ಹಿಪ್ಪಲಿ, ಶುಂಠಿ, ಉತ್ತರಣೆ, ಲಕ್ಕಿಗಳ ಕಷಾಯದಲ್ಲಿ ಮೂರುತೊಲೆಯನ್ನು ಸೇವಿಸಿದರೆ ಪೀನಸಿ ಹರವು.

೧೦. ಶುಂಠಿ, ಹಿಪ್ಪಲಿ, ಮೆಣಸು, ಕಿರನೆಲ್ಲಿ, ಕೋಷ್ಟ್ಯಗಳ ಚೂರ್ಣವನ್ನು ತುಪ್ಪದಲ್ಲಿ ಕಲಸಿ ತಿಂದರೆ ನೆಗಡಿ, ಯದೆ ಬದಿ ಪಕ್ಕೆ ಹೊಟ್ಟೆ ಉಗುರುಗಳ ಶೂಲೆಗಳು ಪರಿಹರವಾಗುತ್ತೆ.

೧೧. ಜಾಜಿ, ಬಜೆ, ಲಕ್ಕಿ, ತುಲಸಿ, ಗುಗ್ಗುಳ, ಬೇವು, ಕೋಷ್ಟ್ಯಗಳಿಂದ ತೆಗದ ರಸವನ್ನು ಹಸುವಿನತುಪ್ಪದಲ್ಲಿ ಶೇರಿಸಿ ಕಾಸಿ ಪೀನಸಕ್ಕೆ ಸವರಿದರೆ ಪರಿಹರವಾಗುತ್ತೆ.

೩೪. ಮುಖರೋಗಕ್ಕೆ ಔಷಧಗಳು.

೧. ಬಜೆ, ಲೋಧ್ರ, ಲಾಮಂಚ, ತೂಪರಚಕ್ಕೆ, ಹಣ್ಣಾಲದಯಲೆ, ರಾಳಗಳನ್ನು ಹಾಲಲ್ಲಿ ಅರದು ಲೇಪನಮಾಡಿದರೆ ಮುಖಪಾಕಕ್ಕೂ ಕಾಂತಿಗೂ ಒಳ್ಳೇದಾಗುತ್ತೆ.

೨. ಜೇಷ್ಠಮಧು, ಶುಂಠಿಗಳನ್ನು ಕಷಾಯಮಾಡಿ ಬಾಯಿಯಲ್ಲಿಟ್ಟು ಮುಕ್ಕಳಿಸಿ ಅನ್ನದಜೊತೆಯಲ್ಲಿ ಹೆಸರನ್ನು ಹಾಕಿ ಊಟವನ್ನುಮಾಡಿದರೆ ಮುಖಪಾಕ ಶಾಂತಿಯಾಗುತ್ತೆ.

೩. ಮೂರುತೊಲೆ ಮರದರಿಶಿನವನ್ನು ೬೦ ತೊಲೆ ನೀರಿನಲ್ಲಿ ಕಷಾಯಮಾಡಿ ಅದಕ್ಕೆ ಒಂದು ತೊಲೆ ಜಾಜೀಕಾಯೀ, ಹಿಪ್ಪಲಿ, ಜೇನುಗಳನ್ನು ಹಾಕಿ ಬಾಯಿಯಲ್ಲಿ ಹಾಕಿ ಮುಕ್ಕಳಿಸಿದರೆ ಬಾಯಿಬಸಳೆ ಹರವು.

೪. ಸೈಂಧವಲವಣವನ್ನು ನೀರಿನಲ್ಲಿ ಹಾಕಿ ಕಾಸಿ ಬಾಯಿಯಲ್ಲಿಹಾಕಿ ಮುಕ್ಕಳಿಸಿದರೂ ಮತ್ತು ದಾಳಿಂಬ, ಸಕ್ಕರೆಗಳನ್ನು ತಿಂದರೂ ಬಹುರುಚಿವುಂಟಾಗುತ್ತೆ.

೫. ಒಂದುತೊಲೆ ಜೇನು, ಗದ್ಯಾಣ ಸೈಂಧವಲವಣ, ಈ ಪ್ರಕಾರವಾಗಿ ಒಂದುಪಾವು ಮಾಡಿ ಕಮಲದಜೊತೇಲಿ ಬಾಯಿಯಲ್ಲಿಟ್ಟು ಚಪ್ಪರಿಸುತ್ತಿದ್ದರೆ ವಾಂತಿ ಪರಿಹರವಾಗುತ್ತೆ.

೬. ಕೊನ್ನಾರಿ, ಅರಳು, ಶುಂಠಿ, ನೆಲಬೇವು, ಅಮೃತಬಳ್ಳಿಗಳ ಕಷಾಯದಲ್ಲಿ ಮೂರುರೂಪಾಯಿ ತೂಕವನ್ನು ತೆಗದುಕೊಂಡರೆ ಅರುಚಿ ಪರಿಹರವು.

೭. ಲಾಮಂಚ, ಜೇಷ್ಠಮಧು, ಶುಂಠಿ, ವಿಳಂಗ, ಜಾಜಿಕಾಯಿ, ಅಡಿಕೆ, ಕೊತ್ತುಂಬರಿಬೀಜಗಳನ್ನು ನೀರಿನಿಂದರದು ಜೇನು ಹಾಕಿ ಬಾಯಿಯಿಂದ ಮುಕ್ಕಳಿಸಿದರೆ ಬಾಯಿಬಸಳೆಗೆ ಹಿತವು.

೮. ಮರದರಿಶಿನ, ಅಮೃತಬಳ್ಳಿ, ನೆಲ್ಲಿ, ತಾರೆ, ಅಳಲೆ, ದ್ರಾಕ್ಷಿ, ಜಾಯಿಪತ್ರೆ, ಇಂದ್ರಜವೆಗಳ ಕಷಾಯದಲ್ಲಿ ಜೇನುಹಾಕಿ ಗಂಡೂಷವನ್ನುಮಾಡಿದರೆ ಮುಖಪಾಕ ಶಾಂತಿಯಾಗುತ್ತೆ.

೩೫. ಗಳದರೋಗಕ್ಕೆ ಚಿಕಿತ್ಸೆ.

೧. ಅಳಲೆ, ನೆಲ್ಲಿ, ತಾರೆ, ಶುಂಠಿ, ಹಿಪ್ಪಲಿ, ಮೆಣಸು, ಚಿತ್ರಮೂಲ, ಸೈಂಧವಲವಣ, ಎರಡುಕ್ಷಾರಗಳನ್ನು ಗೋಮೂತ್ರದಲ್ಲಿ ಹಾಕಿ ಕಷಾಯಮಾಡಿ

ಗುಳಿಗೆಮಾಡಿ ಬಾಯಿಯಲ್ಲಿ ಇಟ್ಟುಕೊಂಡರೆ ಗಳಲ ರೋಹಿಣಿಗಳು ಪರಿಹರವಾಗುತ್ತೆ.

೨. ತಾಳಕ, ಮಣಿಶಿಲೆಭಸ್ಮಗಳು, ಸೈಂಧವಲವಣ, ಕ್ಷಾರ, ಮರದರಿಶಿನಗಳನ್ನು ಜೇನಿನಲ್ಲಿ ನೆನೆಸಿಟ್ಟು ಅರದು ಗುಳಿಗೆ ಮಾಡಿ ಬಾಯಿಯಲ್ಲಿಟ್ಟರೆ ಕಂಠರೋಗ ಹರವು.

೩. ವಿಷಮುಷ್ಟಿ, ಅಳಲೆ, ಶುಂಠಿಗಳನ್ನು ಜೇನಿನಲ್ಲಿ ಅರದು ಗುಳಿಗೆಮಾಡಿ ಬಾಯಿಯಲ್ಲಿಟ್ಟರೆ ಕಿರುನಾಲಿಗೆ ಇಳಿಬಿದದ್ದು ಪರಿಹರವು.

೪. ಇಲ್ಲಣ, ಜೇನು, ಸೈಂಧವಲವಣಗಳನ್ನು ನೀರಿನಲ್ಲಿ ಗುಳಿಗೆಮಾಡಿ ಬಾಯಿಯಲ್ಲಿಟ್ಟರೆ ಕಿರುನಾಲಿಗೆ ಇಳಿಬಿದ್ದಿರುವದಕ್ಕೆ ಪರಿಹರವು.

೫. ಕಿರುನಾಲಿಗೆ ಇಳೀಬಿದ್ದಿರುವದಕ್ಕೆ ಯಕ್ಕೆಯ ಹಾಲಿರಿಸಿದರೂ, ಅಥವಾ ಬೆಟ್ಟ ಕರಿನೆಂಟೆಯ ಜೊತೆಯಲ್ಲಿ ಈರುಳ್ಳೀರಸವನ್ನು ಹಾಕಿ ಹತ್ತಿಸಿದರೂ, ಊಟದಕಾಲದಲ್ಲಿ ರೊಟ್ಟಿಯನ್ನು ತಿಂದರೂ ಪರಿಹರವಾಗುತ್ತೆ.

೩೬. ಧ್ವನಿಗೆ ಔಷಧಗಳು.

೧. ಲಕ್ಕಿಯಬೇರಿನ ಚೂರ್ಣವಂ ಯಂಣೆಯಲ್ಲಿ ಹಾಕಿ ಎರಡು ವರಹಾತೂಕವನ್ನು ನೆಕ್ಕಿದರೂ, ಅಥವಾ ವಳ್ಳೀನೆಲ್ಲೀರಸ, ಯಂಣೇ, ಹಸುವಿನ ಹಾಲುಗಳನ್ನು ನೆಕ್ಕಿದರೂ ಧ್ವನಿಗೆ ಹಿತವಾಗುತ್ತೆ.

೨. ವಂದ್ಯಲಗದ ಚೂರ್ಣವನ್ನು ತುಪ್ಪದಲ್ಲಿ ಕಲಸಿ ಒಂದು ಗಡಿಗೆಯಲ್ಲಿಹಾಕಿ ಧಾನ್ಯಪುಟದಲ್ಲಿ ಒಂದು ತಿಂಗಳಿಟ್ಟು ಸೇವಿಸಿದರೆ ಬುದ್ಧಿಗೂ ಧ್ವನಿಗೂ ಹಿತವಾಗುತ್ತೆ.

೩. ನೆಲ್ಲೀರಸದಲ್ಲಿ ಬಜೆಯನ್ನು ತುಂಡುಗಳುಮಾಡಿ ಹಾಕಿ ಒಂದುದಿನ ನೆನಸಿ ಒಣಗಿಸಿ ಚೂರ್ಣಮಾಡಿ ಒಂದು ವರಹಾತೂಕವನ್ನು ತುಪ್ಪದಲ್ಲಿ ತಿಂದರೆ ಬುದ್ಧಿಪ್ರದವು.

೪. ವಂದ್ಯಲಗ, ಬಜೆ, ಶುಂಠಿ, ಹಿಪ್ಪಲಿಗಳ ಸಮಚೂರ್ಣವನ್ನು ಜೇನಿನಲ್ಲಿ ಕಲಸಿ ತಿಂದರೆ ಬುದ್ಧಿ ಅಧಿಕವಾಗುತ್ತೆ.

೩೭. ಯೋನಿರೋಗಕ್ಕೆ ಔಷಧಗಳು.

೧. ನೇರಳೆ, ಅತ್ತಿಗಳ ತೊಗಟೆ, ತೆಂಗಿನ ಹುವ್ವು, ಬಾಳೆಗೆಡ್ಡೆ, ಹಿಪ್ಪಲಿ, ಅರಗುಗಳ ಕಷಾಯಕ್ಕೆ ಜೇನೆರದು ತೆಗದುಕೊಂಡರೆ ಅತಿರಕ್ತಕ್ಕೆ ಹಿತವು.

೨. ಮೊಲೆಹಾಲಿನಲ್ಲಿ ಅತ್ತಿಹಣ್ಣು ಜೇನುಗಳನ್ನು ಹಾಕಿಕೊಟ್ಟರೂ ಮತ್ತು ಅಕ್ಕಿಕಚ್ಚಿನಲ್ಲಿ ಮುಳ್ಳುಸವುತೆ ಜೇಷ್ಠಮಧುಗಳನ್ನು ಹಾಕಿಕೊಟ್ಟರೂ ಸರ್ವರಕ್ತವು ಪರಿಹರವಾಗುತ್ತೆ.

೩. ಹೊಸತೆಂಗಿನ ಹುವ್ವಿನ ರಸದಲ್ಲಿ ಜೇನು, ಸಕ್ಕರೆಗಳನ್ನು ಹಾಕಿ ತೆಗದುಕೊಂಡು ಹೆಸರಿನ ಕಟ್ಟು, ಹಾಲು ಅನ್ನವನ್ನು ಭುಂಜಿಸೆ ಯೋನಿಯಲ್ಲಿ ಸುರಿಯುವ ರಕ್ತಹರವು.

೪. ಕಿರಿಕೀರೆಯ ಬೇರನ್ನು ಅರದು ಜೇನುಹಾಕಿ ನೀರಿನಲ್ಲಿ ಕದಡಿಕೊಟ್ಟರೆ ಹರಿಯುವ ರಕ್ತಹರವು.

೫. ಕಡಲೆಯನ್ನು ನೀರಿನಿಂದರದು ಅದರ ರಸದಲ್ಲಿ ಸಕ್ಕರೆ ಜೇನು ಹಾಕಿಕೊಟ್ಟರೂ ಮತ್ತು ಕಡಲೆ ಜೊತೇಲಿ ತುಪ್ಪ, ಜೇನು, ಸಕ್ಕರೆಗಳನ್ನು ಹಾಕಿ ಬೇಯಿಸಿದ ಹಾಲನ್ನು ಕುಡಿದರೆ ಯೋನಿಯಲ್ಲಿ ಸುರಿವ ರಕ್ತಹರವು.

೬. ನೇರಳೆರಸ, ಸ್ವರ್ಣಗೈರಿಕೆಗಳನ್ನು ಅಕ್ಕಿ ಕಚ್ಚಿನಲ್ಲರದು ಜೇನೆರದು ಕುಡಿದರೆ ಯೋನಿಯಲ್ಲಿ ಸುರಿವ ರಕ್ತಹರವು.

೭. ಬೇವು, ಹರಳುಗಳ ಬೀಜಗಳು, ಹುವ್ವುಗಳನ್ನು ಬೇವಿನೆಲೆ ರಸದಲ್ಲಿ ಅರದು ಶೂಲೆಯಿರುವ ಸ್ಥಳದಲ್ಲಿಟ್ಟರೆ ಪರಿಹರವಾಗುತ್ತೆ.

೮. ಕರಿಯಳ್ಳಿನ ಕಷಾಯದಲ್ಲಿ ಅಂದರೆ ಕರಿಯಳ್ಳು, ಬೆಲ್ಲ, ಭಾರಂಗಿಗಳ ಕಷಾಯ ಅಟ್ಟಿಸಿ ಗುಳಿಗೆಮಾಡಿ ಕೊಟ್ಟರೆ ತಡದಿರ್ದ ಮುಟ್ಟು ತಪ್ಪುತ್ತೆ. ಭಗಶೂಲೆ, ಗುಲ್ಮಗಳು ಪರಿಹರವಾಗುತ್ತೆ.

೯. ಇಲ್ಲಣ, ಬೆಳ್ಳುಳ್ಳಿ, ನೆಗ್ಗಲುಮುಳ್ಳುಗಳನ್ನು ನೀರಲ್ಲರದು ಬಳಗೆ ಲೇಪವನ್ನು ಮಾಡಿದರೆ ಏಳುದಿವಸಗಳಲ್ಲಿ ಭಗಶೂಲೆ, ಕ್ರಿಮಿಗಳು ಪರಿಹರವಾಗುತ್ತೆ.

೧೦. ಒಂದು ತೊಲೆ ಮುಳ್ಳು ಕೊಗ್ಗಿ ಬೇರನ್ನು ಅಕ್ಕಿಕಚ್ಚಿನಲ್ಲರದು ಸೇವಿಸಿದರೆ ಯೋನಿಯಲ್ಲಿ ಸುರಿಯುವ ರಕ್ತವೂ ಗುಲ್ಮವೂ ಪರಿಹರವಾಗುತ್ತೆ.

೧೧. ಅರಿಸಿನ, ಜೇಷ್ಠಮಧು, ಮರದರಿಸಿನ, ಬಾಳೆಹಿಪ್ಪೆಗಳ ಹುವ್ವುಗಳನ್ನು ಅಕ್ಕಿಕಚ್ಚಿನಲ್ಲರದು ಕೊಟ್ಟರೆ ಹೆಂಗಸರ ಸೂತಿರಕ್ತ ಪರಿಹರವಾಗುತ್ತೆ.

ಸೂಪಶಾಸ್ತ್ರವು, ತೂಕ ಮುಂತಾದ್ದರ ನಿರ್ಣಯವು, ಗುಣಪಾಠವು,
ಮತ್ತು ಸಕಲ ರೋಗಗಳಿಗೂ ತಕ್ಕ ದೇಶಭೇದ ಜಾತಿ
ಭೇದದಿಂದ ಎಲ್ಲಾಜನಕ್ಕೂ ಹಿತವಾಗುವಂತೆ ಪಾಕ
ಗಳನ್ನು ಮಾಡುವ ವಿಧಾನವನ್ನು ಸಹ
ಎರಡನೇ ಪುಸ್ತಕದಲ್ಲಿ ವಿವರಿಸುತ್ತೆ.

|| ಸಂಪೂರ್ಣ ||

ಶುದ್ಧಾಶುದ್ಧ ಸೂಚೀಪತ್ರ.

ಪುಟಸಂಖ್ಯಾ.	ಪಙ್ತಿಸಂಖ್ಯಾ.	ಅಶುದ್ಧ.	ಶುದ್ಧ.
೧	೩	ಮಹೀಷೂರ	ಮಹೀಶೂರ
,,	೧೫	ಮಹರ್ಷಿಷಿಗಳು	ಮಹರ್ಷಿಗಳು
೩	೪	ಉಪದೇಶಸಿ	ಉಪದೇಶಿಸಿ
,,	೨೫	ರಸ್ಸು	ಶಿರಸ್ಸು
೫	೨	ಕರಳು	ಕರುಳು
೬	೬	ಕರಳು	ಕರುಳು
,,	೧೮	ರಕಗಳು	ರಕ್ತಗಳು
೮	೪	ಸಪ್ತಮಲ	ಸಪ್ತಮಲ
೯	೧	ಲಕ್ಷಣ	ಲಕ್ಷಣ
,,	,,	ಇದ	ಇದು
,,	೨೨	ತಿರವಾಗಿ	ತಿರುವಾಗಿ
೧೦	೧೨	ಹಿಂಮಡ	ಹಿಂಮಡಿ
೧೧	೧೩	ಕಟ್ಟಲ್ಪಟ್ಟ	ಕಟ್ಟಲ್ಪಟ್ಟ
೧೪	೬	ಅಮಾಶಯ	ಆಮಾಶಯ
,,	೯	ಗಳಗಳಲ್ಲಿ	ಗಳಲ್ಲಿ
೧೫	೩	ಕರ್ಮಾದೆಸೆ	ಕರ್ಮಾದದೆಸೆ
,,	,,	ಪ್ರಸೂತ	ಪ್ರಸೂತಿ
೧೬	೧೧	ಮನಗಟ	ಮಣಿಕಟ್ಟು
೧೭	೭	ಶಲಘ್ನ	ಶಲ್ಯಘ್ನ
೧೮	೧೬	ಯಾಗಿದದ್ದ	ಯಾಗಿದ್ದರೆ
೧೯	೨೪	ನಡಗು	ನಡುಗು
೨೩	೭	ಸ್ತಳಗಳಲ್ಲಿ	ಸ್ಥಳಗಳಲ್ಲಿ
,,	೯	ವೆಕಲ್ಯ	ವೈಕಲ್ಯ
೨೪	೧೪	ಮಮರ್ಮ	ಮರ್ಮ
೨೫	೧	ಸುತ್ತಲ್ಲು	ಸುತ್ತಲು

ಪುಟಸಂಖ್ಯಾ.	ಪಙ್ಕ್ತಿಸಂಖ್ಯಾ.	ಅಶುದ್ಧ.	ಶುದ್ಧ.
೨೬	೨೧	ಅಘಾತ	ಆಘಾತ
೨೮	೧೩	ನಿರೋಗತ್ವ	ನೀರೋಗತ್ವ
೩೧	೨	ವೇಧೆ	ವ್ಯಥೆ
,,	೩	ಭಯಸ್ತರು	ಭಯಸ್ಥರು
೩೫	೧೯	ಅಧೊಭಾಗ	ಅಧೋಭಾಗ
,,	೨೪	ೀರಾಗಳ	ಸಿರಾಗಳ
,,	೨೮	ಬಾಹುವಧ್ಯ	ಬಾಹುಮಧ್ಯ
೩೬	೨೬	ಕೆಲರು	ಕೆಲವರು
,,	,,	ಪಾರ	ಪಾಶ
೩೭	೨೩	ವೇಧೀಸು	ವೇಧಿಸು
೩೮	೨೬	ಕ್ಕು ವರಿಲ್ಲವೆ	ೀಕ್ಕು
೪೪	೧೫	ಕಂಡಶೊಷೆ	ಕಂಠಶೋಷೆ
,,	೨೮	ಶ್ರಾವವಾಗು	ಸ್ರಾವವಾಗು
೪೫	೨೨	ಮೆಧೊವೃದ್ಧಿ	ಮೇದೋವೃದ್ಧಿ
೪೮	೨೧	ಬೆದಗಳನ್ನು	ಭೇದಗಳನ್ನು
೫೦	೨೨	ಶುಕ್ರವೃದ್ದಿ	ಶುಕ್ರವೃದ್ಧಿ
೫೨	೨೪	ಸ್ರೊತಸ್ಸಿನ	ಸ್ರೋತಸ್ಸಿನ
೫೫	೧೮	ಈದೆ	ಇದೆ
,,	೨೩	ಕ್ಷಯಾದಿಗಳನ್ನು	ಕ್ಷಯಾದಿಗಳು
೫೬	೭	ಭೆದದಿಂದಾ	ಭೇದದಿಂದ
೬೨	೧	ಅಪಿತ್ತಗತಿ	ಆಪಿತ್ತಗತಿ
೬೪	೧೨	ಸುಪ್ತಿ ವರ್ಣಭೊ	ಸುಪ್ತಿ ಮಾಂಛೊ
೬೯	೧	ರೊಪಲಕ್ಷ್ಣೇಣ	ರೂಪಲಕ್ಷಣ
,,	೨	ಕಶವಾಗಿ	ಕೃಶವಾಗಿ
೭೦	೪	ಪ್ರಭುದ್ಧ	ಪ್ರಬುದ್ಧ
,,	೧೯	ಮೊಸಭೆಧ	ಮೊಸಭೇದ
೭೭	೬	ವಕ್ಷತೆ	ವಕ್ಷ್ಯತೆ
,,	೯	ವಕ್ಷತ	ವಕ್ಷ್ಯತೆ
,,	೨೩	ರಾಹುಕೆತು	ರಾಹುಕೇತು

ಪುಟಸಂಖ್ಯಾ.	ಪಙ್ಕ್ತಿಸಂಖ್ಯಾ.	ಅಶುದ್ಧ.	ಶುದ್ಧ.
೭೦	೧೪	ಪ್ರಕೃತಿಭೆಧ	ಪ್ರಕೃತಿಭೇದ
೭೬	೧೮	ಹೇ ದಿಯಪ್ಟೆ	ಹೇಳಿದೆಯಷ್ಟೆ
೭೯	೯	ಮುವತ್ತು	ಮುವ್ವತ್ತು
,,	೧೭	ಅರೊಗವು	ಆರೋಗ್ಯವು
೯೦	೧೫	ಆನಂತರ	ಅನಂತರ
೯೯	೧೧	ಪೋರ್ಣಗರ್ಭಾ	ಪೂರ್ಣಗರ್ಭಾ
,,	೧೯	ಅನೊದಾಧಾ	ಅನೂರಾಧಾ
,,	೨೮	ಕೌ ಲ್ಯ	ಕೌಶಲ್ಯ
೧೦೦	೫	ನಡಕ	ನಡುಕ
,,	೩೦	ಭಾದಿರ್ಯ	ಭಾಧಿರ್ಯ
೧೦೨	೧	ರೊದಲ್ಲೂಹಿದೆ	ರೋಗದಲ್ಲೂಹಿಂದೆ
,,	೨೯	ಇರುಮ	ಇರುವ
೧೦೪	೪	ತೆಳುವು	ತೆಳುವು
,,	೧೪	ಮೆಧಸ್ಸು	ವೇದಸ್ಸು
೧೦೬	೩೦	ನಿಶ್ಯಾಸ	ನಿಶ್ವಾಸ
೧೦೮	೬	ಜ್ವೆರ	ಜ್ವರ
,,	೩೦	ಎಣೆಯು	ಎಣ್ಣೆಯು
೧೧೧	೨೧	ದಾವರ್ದಿ	ದಾವರ್ತಿ
೧೧೩	೧೩	ಆನಂತರ	ಅನಂತರ
೧೧೪	೧೫	ಅನ್ನವನನ್ನು	ಅನ್ನವನ್ನು
,,	೩೦	ಇಂಥಾದನ್ನು	ಇಂಥಾದ್ದನ್ನು
೧೧೫	೩	ವೆಧನೆ	ವೇದನೆ
,,	೧೦	ಹೊಟ್ಟೆಯುಲ್ಲಿ	ಹೊಟ್ಟೆಯಲ್ಲಿ
,,	೨೭	ಕಾಲುಗಳು	ಕಾಲಗಳ
೧೧೬	೩೦	ಪಿತವನ್ನು	ಪಿತ್ತವನ್ನು
೧೧೭	೧೪	ದಿದ್ರೆ	ನಿದ್ರೆ
೧೧೯	೨	ಮೆಧಸ್ಸು	ಮೇಧಸ್ಸು
೧೨೦	೨	ಇಷ್ಟ್ಯವಾದ್ದ	ಇಷ್ಟವಾದ್ದ
೧೨೪	೧೦	ಬವಿಷ್ಟ	ಬಲಿಷ್ಠ

ಪುಟಸಂಖ್ಯಾ.	ಪಙ್ಕ್ತಿಸಂಖ್ಯಾ.	ಅಶುದ್ಧ.	ಶುದ್ಧ.
೧೩೧	೧	ಹರಿಉವ	ಹರಿಯುವ
,,	೨೪	ಕೂಡಿ	ಕೊಡಿ
೧೩೨	೬	ಚ	ಶ್ಚ
,,	೧೩	ಆದಿಭೂಗವೆಂದರೆ	ಆದಿಭಾಗವಂದರೆ
೧೩೩	೨೯	ಅ೬ೀರ	ಆಶಿರ
೧೩೪	೮	ಭೋಂಜಿಸುತ್ತಾ	ಭುಂಜಿಸುತ್ತಾ
೧೩೫	೧೩	ಎಲೆಗಂಿದ	ಯಲೆಗಳಿಂದ
೧೩೬	೨೫	ಸವುಉದ್ರದಡ	ಸವುದ್ರದ ದಡ
೧೩೮	೩	ಸೊರ್ಯಾಸ್ತ	ಸೂರ್ಯಾಸ್ತ
,,	೨೦	ಇನ್ನಿಸಿ	ಯನ್ನಿಸಿ
೧೩೯	೧	ಹೊಡಿದ	ಹೊಡದ
,,	೧೯	ಸ್ತಾನ	ಸ್ನಾನ
೧೪೦	೩	ಅಹಾರಗಳನ್ನು	ಆಹಾರಗಳನ್ನು
೧೫೦	೯	ಉಗಳು	ಉಗುಳು
,,	೧೦	ಉಗಳು	ಉಗುಳು
,,	೧೨	ಸಾಂದರ್ಯ	ಸಾಂದರ್ಯ
,,	೧೯	ಕಂಟದಲ್ಲಿ	ಕಂಠದಲ್ಲಿ
೧೫೧	೪	ಉದಾವತ್ತರ್ಕ್ಕೆ	ಉದಾವರ್ತಕ್ಕೆ
,,	೧೪	ಪಕ್ಕ	ಪಕ್ವ
೧೫೨	೨೩	ಬಾ	ಬಾ
೧೫೩	೪	ಭ್ರಮೆ	ಭ್ರಮೆ
,,	,,	ವಾಪ್ತ	ವ್ಯಾಪ್ತ
,,	,,	ಆಸಾಧ್ಯ	ಅಸಾಧ್ಯ
೧೫೪	೩	ಜ್ವೆರವು	ಜ್ವರವು
,,	೪	ಮೆಲೆ	ಮೇಲೆ
೧೫೪	೨೫	ಕೊಲೆ	ಶೂಲೆ
೧೫೬	೩೦	ಇಧ್ದರು	ಇದ್ದರು
೧೫೯	೩	ಉಗಳು	ಉಗುಳು
,,	೬	ಇಧರ	ಇಧರ

ಪುಟಸಂಖ್ಯಾ.	ಪಙ್ಕ್ತಿಸಂಖ್ಯಾ.	ಅಶುದ್ಧ.	ಶುದ್ಧ.
೧೬೩	೧೪	ಲಕ್ಷೇಣ	ಲಕ್ಷಣ
,,	,,	ವೃಣಿ	ವ್ರಣ
೧೬೪	೪	ಲಕ್ಷೇಣ	ಲಕ್ಷಣ
,,	೧೦	ಲಕ್ಷೇಣ	ಲಕ್ಷಣ
,,	೧೪	ಪಂಚೆಕರ್ಮ	ಪಂಚಕರ್ಮ
೧೬೫	೫	ಲಕ್ಷೇಣ	ಲಕ್ಷಣ
೧೬೭	೧೬	ನಾಲಿಗೆಗಗಳು	ನಾಲಿಗೆಗಳು
೧೭೨	೨೮	ಮೆಲೆ	ಮೇಲೆ
,,	೩೦	ಮೆಲೆ	ಮೇಲೆ
೧೭೪	೨೪	ಶುದ್ಧಿ	ಶುದ್ಧ
೧೭೫	೫	ಧಿಂದ	ದಿಂದ
,,	೨೩	ನುಂಟು	ನ್ನುಂಟು
೧೭೬	೨	ಶೇವನೆ	ಸೇವನೆ
,,	೯	ವೈಶಮ್ಯ	ವೈಶಮ್ಯ
,,	೧೨	ಶತವಿರ್ಯ	ಶತವೀರ್ಯ
,,	೧೮	ಅರ್ಶ	ಅರ್ಶ
,,	೨೩	ಶ್ಲೇಷ್ಟ	ಶ್ಲೇಷ್ಮ
,,	೨	ಶ್ಲೇಷ್ಮಲಿ	ಶ್ಲೈಷ್ಮಲಿ
೧೭೯	೧೪	ಕಾಶ	ಕಾಸ
೧೮೦	೧೧	ಸ್ತಾನ	ಸ್ನಾನ
೧೮೧	೧೨	ಮಜೆಗೆ	ಮಜ್ಜಿಗೆ
,,	೧	ರಾಗಿ	ರಾಗೀ
,,	೪	ವಾಯವಳಂಗ	ವಾಯುವಿಳಂಗ
,,	,,	ಶುಂಠಿ	ಶುಂಠೀ
,,	೮	ವೃತ್ತರಣೆ	ವೃತ್ತರಣೇ
,,	೧೯	ಪರ್ಯಂತ್ರ	ಪರ್ಯಂತ
,,	೨೩	ಹೆರ	ಹೆರಳೆ
೧೮೨	೧೦	ತಾಳೆಲಫ	ತಾಳೇಫಲ
,,	೧೯	ಹುಣಿಶೆಹಣಿಗೆ	ಹುಣಿಶೆಹಣ್ಣಿಗೆ
,,	೩೦	ಕೊಡೆಕು	ಕೊಡಬೇಕು

ಪುಟಸಂಖ್ಯಾ.	ಪಙ್ತ್ತಿಸಂಖ್ಯಾ.	ಅಶುದ್ಧ.	ಶುದ್ಧ.
೧೮೫	೩	ತುಪ	ತುಪ್ಪ
,,	೧೯	ಇದ್ರವಾರುಣೀ	ಇಂದ್ರವಾರುಣೀ
೧೮೭	೪	ಹುಳೀ	ಹುಳಿ
,,	೨೩	ಮೊಣಲಂಗಿಗೆ	ಮೂಲಂಗಿಗೆ
೧೮೮	೩	ಕೊಡಕು	ಕೊಡಬೇಕು.
,,	೮	ಅರಿನ	ಅರಿಶಿನ
,,	೨೦	ವವನ	ವಮನ
೧೮೯	೯	ಕರಿಜೀರಿಗೆ	ಕರೀಜೀರಿಗೆ
,,	೨೧	ಮನಸ್ಸು	ಮನಸ್ಸಿಗೆ
೧೯೧	೧	ಶಕ್ತ್ಯಾನುಸಾರ	ಶಕ್ತ್ಯನುಸಾರ
೧೯೨	೮	ಅರನ	ಅರಶಿನ
೧೯೩	೨೪	ನೆಲ್ಲೀಪ್ಪೆಯನ್ನು	ನೆಲ್ಲೀಚಿಪ್ಪೆಯನ್ನು
೧೯೮	೨೪	ಲ ಕ್ಕೀಕುಡಿ	ಲಕ್ಕೀಕುಡಿ
,,	೨೬	ಕೊನ್ನಾರಿಗೆಣ್ಣೆ	ಕೊನ್ನಾರಿಗೆಡ್ಡೆ
೨೦೦	೨೩	ಪರಿಹರನಹುದು	ಪರಿಹರವಹುದು
೨೦೧	೧೩	ವಾಯುವೆಳಂಗ	ವಾಯುವಿಳಂಗ
೨೦೬	೨೮	ನೆಲ ೇವು	ನೆಲಬೇವು
೨೦೯	೨೨	ರಕ್ತತ್ಯ	ರಕ್ತಪೈತ್ಯ
೨೧೦	೨೪	ರಕ್ತತ್ಯ	ರಕ್ತಪೈತ್ಯ
೨೧೨	೧೧	ಹಾದ	ಹಾಕಿದ
೨೧೪	೧೦	ವಾಡಿಕೊಳ್ಳು	ಮಾಡಿಕೊಳುತ್ತಾ
೨೧೫	೨೦	ಪುಟವನ್ನುಹಾ.	ಪುಟವನ್ನು ಹಾಕಿ
೨೧೭	೩	ಮಣಿಲೆ	ಮಣಿಶಿಲೆ
,,	೨೯	ಚೂಣ	ಚೂರ್ಣ
೨೨೦	೬	ಪೈತ್ಯಗಳ	ಪೈತ್ಯಗಳು
,,	೧೪	ಅಗಳನ್ನ	ಅಕ್ಕಿಗಳನ್ನ
೨೨೧	೧೨	ಅರಿನ	ಅರಿಶಿನ
,,	೨೦	ಅತೊಳದ	ಅಕ್ಕಿತೊಳದ
೨೨೨	೭	ಹಾ	ಹಾಕಿ

ಪುಟಸಂಖ್ಯಾ.	ಪಙ್ಕ್ತಿಸಂಖ್ಯಾ.	ಅಶುದ್ಧ.	ಶುದ್ಧ.
,,	೯	ಇಯ	ಇಪ್ಪೆಯ
,,	೧೬	ಹಾಕೊಡಬೇಕು	ಹಾಕಿಕೊಡಬೇಕು
,,	೨೫	ಹುರಳೀಕಿಟ್ಟದಲ್ಲಿ	ಹುರಳೀಕಟ್ಟಿನಲ್ಲಿ
೨೨೩	೧೩	ಹಾ	ಹಾಕಿ
,,	೨೦	ಹಾಂ	ಹಾಕಿ
೨೨೫	೧೫	ಮರದರನ	ಮರದರಿಶಿನ
೨೨೬	೧	ಗುಲಗಂಜಿಪುಡೀ	ಗುಲಗಂಜೀಪುಡಿ
೨೩೦	೬	ಅರಿನಗಳನ್ನು	ಅರಿಶಿನಗಳನ್ನು
,,	,,	ಹಾ	ಹಾಕಿ
,,	೨೩	ಸಕ್ಕರೆಹಾ	ಸಕ್ಕರೆಹಾಕಿ
೨೩೧	೨	ಮೂತ್ರತ್ಯಹಾರ	ಮೂತ್ರಪೈತ್ಯಹರ
,,	೧೦	ಲಗಳು	ಲಕ್ಕಿಗಳು
೨೩೨	೨೩	ಯಿವುಗಳಮೇಲೆಬಾ	ಯಿವುಗಳಮೇಲೆಬಾಕಿ
೨೩೫	೧೦	ಕಷೀಯ	ಕಷಾಯ
೨೩೯	೨	ಅರಿನ	ಅರಿಶಿನ
,,	೧೬	ಮಣಿಲೆ	ಮಣಿಶಿಲೆ
,,	,,	ಅರಿನಗಳನ್ನ	ಅರಿಶಿನಗಳನ್ನ
೨೪೦	೨೦	ಲೀ ರಸ	ಲಕ್ಕೀರಸ
೨೪೧	೮	ಅ ಕಟ್ಟಿನಲ್ಲಿ	ಅಕ್ಕೀ ಕಟ್ಟಿನಲ್ಲಿ
೨೪೨	೨	ಪತ್ತಿದರೆ	ಪತ್ತಿಶಿದರೆ
,,	೩	ಹಾಬೆಯಿಗಿ	ಹಾಕಿಬೇಯಿಸಿ
,,	೧೫	ರಗಳಮೇಲೆ	ರಪ್ಪೆಗಳಮೇಲೆ
೨೪೩	೧	ಎರಡಡೆರಡು	ಎರಡೆರಡು
,,	,,	ಅರಿನ	ಅರಿಶನ
,,	೧೩	ಹಿಸಾರ	ಹಿಪ್ಪೇಸಾರ
೨೪೪	೨೧	ಹಾದರೆ	ಹಾಕಿದರೆ
೨೪೬	೩೧	ಹಿಪಲಿ	ಹಿಪ್ಪಲಿ
೨೪೭	೬	ಗುಗೆಮಾಡಿ	ಗುಳಿಗೆಮಾಡಿ
೨೪೮	೨೧	ಅರಿನ	ಅರಿಶನ